# ಸಾಧುಸಂತರು ಮತ್ತು ಮಹನೀಯರು

## (ಮಹಾಪುರುಷರ ವ್ಯಕ್ತಿಚಿತ್ರಣ)



ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಅಧ್ಯಾತ್ಮಪ್ರಕಾಶ ಕಾರ್ಯಾಲಯ

ಹೊಳೆನರಸೀಪುರ - 573 211

# ಸಂಸ್ಥಾಪಕರ ಸ್ಮರಣೆ



ವೇದಧರ್ಮದ ಪುನರುತ್ಥಾನ ಮತ್ತು ವೇದಾಂತಕ್ಕೊಂದು ನವಚೇತನ ತುಂಬಿದ ಮಹತ್ಕಾರ್ಯದಿಂದ ಶ್ರೀ ಶಂಕರ ಭಗವತ್ಪಾದರು ಸರ್ವದಾ ಸ್ಮರಣೀಯರು. ಬ್ರಹ್ಮೀಭೂತ ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು (ಪೂರ್ವಾಶ್ರಮದ ಶ್ರೀಯಲ್ಲಂಬಳಸೆ ಸುಬ್ರಹ್ಮಣ್ಯ ಶರ್ಮರು- ವೈ. ಸುಬ್ಬರಾಯರು, ಜನನ 5.1.1880) ಶ್ರೀಶಂಕರವೇದಾಂತ ಸರಣಿಯಿಂದ ಆಕರ್ಷಿತರಾಗಿ, ಆಳವಾದ ಅಧ್ಯಯನ, ಚಿಂತನ-ಮಂಥನಗಳಿಂದ, ತಮ್ಮ ವಿಶಿಷ್ಟ ಸಂಶೋಧನಾಪ್ರವೃತ್ತಿಯನ್ನು ಬಳಸಿ, ಶಂಕರರ ಅಮೋಘವಾದ ಪ್ರಸ್ಥಾನತ್ರಯಭಾಷ್ಯಗಳಿಗೆ ಹತ್ತಿದ್ದ ಕೊಳೆಯನ್ನು, ಮುತ್ತಿದ್ದಧೂಳನ್ನು ತೊಡೆದು ಶಾಂಕರ ವೇದಾಂತದ ನೈಜತಿರುಳನ್ನು ಕಂಡುಕೊಂಡರು. ಶಾಂಕರವೇದಾಂತಕ್ಕೆ 20ನೇ ಶತಮಾನದ ಅಧಿಕೃತ ವಕ್ತಾರರಾದರು, ಅಭಿನವಶಂಕರರಾದರು.

'ಬೆಳಿಗ್ಗೆ ಎದ್ದಾಗಿನಿಂದ ಮಲಗುವವರೆಗೂ ಹಾಗೂ ಹುಟ್ಟಿನಿಂದ ಬದುಕಿರುವವರೆಗೂ ವೇದಾಂತ ಚಿಂತನೆಯಿಂದಲೇ ಕಾಲವನ್ನು ಕಳೆಯಬೇಕು' ಎಂಬ ಅಭಿಯುಕ್ತರ ವಚನಕ್ಕೆ ಪ್ರತ್ಯಕ್ಷ ಉದಾಹರಣೆಯಾಗಿದ್ದ ಶ್ರೀ ಶ್ರೀಗಳವರು ತಮ್ಮ ಬಾಲ್ಯದಿಂದ 96ನೆಯ ವಯಸ್ಸಿನವರೆಗೂ ವೇದಾಂತಗ್ರಂಥ ಪಠನ, ಚಿಂತನ, ಪ್ರವಚನ, ಲೇಖನಗಳಲ್ಲಿ ತತ್ಪರರಾಗಿದ್ದು 'ಪುರುಷ ಸರಸ್ವತೀ' ಎಂಬ ಅನ್ವರ್ಥ ನಾಮವನ್ನು ಹೊಂದಿದ್ದರು. ಅವರ ಕನ್ನಡ, ಇಂಗ್ಲಿಷ್, ಸಂಸ್ಕೃತ ಭಾಷೆಗಳ ಇನ್ನೂರಕ್ಕೂ ಮೀರಿದ ಕೃತಿಗಳು ವೇದಾಂತಪ್ರಪಂಚದಲ್ಲಿ ಅವರನ್ನು ಅಮರರನ್ನಾಗಿಸಿವೆ. ಸಂಸ್ಕೃತ ಬಾರದ ಅಧ್ಯಾತ್ಮ ವಿಚಾರಕರಾದ ಜಿಜ್ಞಾಸುಗಳಿಗೆ ಒಂದು ವರಪ್ರದಾನವಾಗಿದೆ.

ಶಾಲಾ ಉಪಾಧ್ಯಾಯರಾಗಿ ಸೇವೆ ಸಲ್ಲಿಸುವಾಗಲೇ ಅಧ್ಯಾತ್ಮದ ಒಲವಿನಿಂದ ಸಂಸ್ಕೃತ ಕಲಿತು ಸಾಧಕರಾದರು. ಆ ಸಮಯದಲ್ಲಿ ಶ್ರೀ ಹೊಸಕೆರೆ ಚಿದಂಬರಯ್ಯನವರ, ಶ್ರೀ ಮಹಾಭಾಗವತರಸಂಪರ್ಕ, ಅಧ್ಯಾತ್ಮಬಾಂಧವ್ಯ, ಆತ್ಮೀಯತೆ, ಅನಂತರ ಶ್ರೀಗೋಂದಾವಳಿ ಮಹಾರಾಜರಲ್ಲಿ ಶ್ರೀರಾಮತಾರಕ ಮಂತ್ರೋಪದೇಶ, ಶೃಂಗೇರಿ ಜಗದ್ಗುರುಗಳಾದ ಶ್ರೀಸಚ್ಚಿದಾನಂದಶಿವಾಭಿನವನೃಸಿಂಹಭಾರತಿ ಮಹಾಸ್ವಾಮಿಗಳವರಿಂದ ಕಾಲಟಿಯಲ್ಲಿಯೇ ಭಾಷ್ಯಶಾಂತಿ ಪಾಠಗಳು ಅವರ ಶ್ರದ್ಧಾಕಾರ್ಯತತ್ಪರತೆಗೆ ಮೆರಗನ್ನು ನೀಡಿದವು.

1937ರಲ್ಲಿ ಹೊಳೆನರಸೀಪುರದಲ್ಲಿ ನೆಲೆಸಿದ ಮೇಲೆ ತಮ್ಮನ್ನು ಪೂರ್ಣವಾಗಿ ಶಾಂಕರವೇದಾಂತಕ್ಕೆ ಅರ್ಪಿಸಿಕೊಂಡರು. 1948ರಲ್ಲಿ ಸಂನ್ಯಾಸಸ್ವೀಕಾರ ಮಾಡಿದರು. ಶುದ್ಧತತ್ತ್ವಾನ್ವೇಷಣೆ, ನಿಖರವಾದ ಬರವಣಿಗೆ, ಆಚಾರನಿಷ್ಠೆ ಮತ್ತು ಕಠೋರನಿಯಮಪಾಲನೆಗೆ ಶ್ರೀ ಶ್ರೀಗಳವರು ಹೆಸರಾದವರು. ಅವರು ಸ್ಥಾಪಿಸಿರುವ (1920) ಅಧ್ಯಾತ್ಮಪ್ರಕಾಶ ಕಾರ್ಯಾಲಯವು ಈಗಲೂ ನಿಜವಾದ ಅಧ್ಯಾತ್ಮವಿದ್ಯಾಪ್ರಸಾರ ಕೇಂದ್ರವಾಗಿದೆ. ಪೂಜ್ಯರು 1975ನೇ ಆಗಸ್ಟ್ 5ರಂದು ಬ್ರಹ್ಮೀಭೂತರಾದರು. ಇವರ ಮಹಾಸಮಾಧಿ ಪೀಠವು ಹೊಳೆನರಸೀಪುರದಲ್ಲಿದೆ. ಇಂದಿಗೂ ಚೈತನ್ಯಸ್ವರೂಪಿಗಳಾಗಿ ಕಾರ್ಯಾಲಯದ ಮೂಲ ಶಕ್ತಿಯಾಗಿದ್ದಾರೆ. ಈಚೆಗೆ 28.07.2008ರಂದು ಪ್ರತಿಷ್ಠೆಗೊಂಡ ಶ್ರೀ ಶ್ರೀಗಳವರ ಅಮೃತಶಿಲಾವಿಗ್ರಹವು ಹೊಳೆನರಸೀಪುರದ ಸಮಾಧಿಮಂದಿರದಲ್ಲಿ ರಾರಾಜಿಸುತ್ತಿದೆ.

ಬ್ರಹ್ಮನಿಷ್ಠಾಯ ವಿದ್ಮಹೇ ಸಂಯಮೀಂದ್ರಾಯ ಧೀಮಹೀ ।
ತನ್ನಃ ಸಚ್ಚಿದಾನಂದಃ ಪ್ರಚೋದಯಾತ್ ॥
'' ಓಂ ನಮೋ ಭಗವತೇ ಸಚ್ಚಿದಾನಂದಾಯ ''

ಅಧ್ಯಾತ್ಮ ಗ್ರಂಥಾವಳಿ

# ಸಾಧುಸಂತರು ಮತ್ತು ಮಹನೀಯರು

(ಅಧ್ಯಾತ್ಮಪ್ರಕಾಶ ಪತ್ರಿಕೆಯಲ್ಲಿ ಮೂಡಿಬಂದ ವ್ಯಕ್ತಿಚಿತ್ರಣ)

ಸಂಪಾದಕರು

**ಶ್ರೀ ಶ್ರೀ ಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು**

**ಕ್ರಮಾಂಕ : 281**

Price List Catalog Sl. No : 193

**ಅಧ್ಯಾತ್ಮ ಪ್ರಕಾಶಕಾರ್ಯಾಲಯ**

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂ: 08175-273820

www.adhyatmaprakasha.org

e-mail: secretary@adhyatmaprakasha.org

coordinator_apk@yahoo.com

**ಬೆಂಗಳೂರು ಶಾಖೆ :**

ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028.

ದೂ : 080-2676 5548

e-mail: shankara.bhaskara@gmail.com

**2021**

**SADHUSANTARU MATTU MAHANIYARU :**
Edited by : **Sri Sri Satchidanandendra Saraswathi Swamiji.**
Published by: Adhyatma Prakasha Karyalaya, Holenarasipura
-573211, Hassan District, Karnataka State, INDIA.
Phone: 08175-273820

website : www.adhyatmaprakasha.org
e-mail : secretary@adhyatmaprakasha.org
coordinator_apk@yahoo.com

ಒಂದನೆಯ ಮುದ್ರಣ : 2021 ಪ್ರತಿಗಳು: 500

ಮುದ್ರಣ ಕಾಗದ : 70 **GSM NS Maplitho**

ಪುಟಗಳು : 10+ 322 = 332

**ಬೆಲೆ : ರೂ. 180/-**

**© ಅಧ್ಯಾತ್ಮಪ್ರಕಾಶಕಾರ್ಯಾಲಯದವು**

**ಪ್ರತಿಗಳು ದೊರೆಯುವ ಸ್ಥಳ:**

**ಅಧ್ಯಾತ್ಮಪ್ರಾಕಾಶಕಾರ್ಯಾಲಯ**

ಹೊಳೆನರಸೀಪುರ - 573 211, ಹಾಸನ ಜಿಲ್ಲೆ, ಕರ್ನಾಟಕ ರಾಜ್ಯ

ದೂ: 08175-273820

e-mail: secretary@adhyatmaprakasha.org

**ಬೆಂಗಳೂರು ಶಾಖೆ :**

ನಂ. 68 (ಹೊಸ ನಂ. 6), 6ನೇ ಮುಖ್ಯರಸ್ತೆ (ಎ.ಪಿ.ಕೆ. ರಸ್ತೆ), 2ನೇ ಬ್ಲಾಕ್,

ತ್ಯಾಗರಾಜನಗರ, ಬೆಂಗಳೂರು - 560 028.

ದೂ : 080-2676 5548

e-mail: shankara.bhaskara@gmail.com

**ಅಕ್ಷರಜೋಡಣೆ:**

ಡಿ.ಎನ್.ನರಹರಿ, ದೊಡ್ಡನಾರವಂಗಲ, ತುಮಕೂರು - 572 107.

Mobile : 98457 60612, 97383 52817

**ಮುದ್ರಣ ಸ್ಥಾನ :**

ಶ್ರೀರಾಮ ಪ್ರಿಂಟರ್ಸ್, ನಂ - 25, 15ನೇ ಕ್ರಾಸ್, ಶ್ರೀನಿಧಿ ಲೇಔಟ್

ಬೆಂಗಳೂರು - 560 062. ಮೊಬೈಲ್ : 98453 46197.

# ಪ್ರಕಾಶಕರ ಬಿನ್ನಹ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು ರುಧಿರೋದ್ಗಾರಿ ಸಂವತ್ಸರದ ಚೈತ್ರದಲ್ಲಿ (1923 ಏಪ್ರಿಲ್) 'ಅಧ್ಯಾತ್ಮಪ್ರಕಾಶ' ಮಾಸಪತ್ರಿಕೆಯನ್ನು ಪ್ರಪ್ರಥಮವಾಗಿ ಪ್ರಕಟಿಸಿದರು. ಪ್ರಥಮ ಸಂಪುಟದ ಪ್ರಥಮಸಂಚಿಕೆಯ ಸಂಪಾದಕರ ವಿಜ್ಞಾಪನೆಯಲ್ಲಿ ಕರ್ಮ, ಭಕ್ತಿ, ಜ್ಞಾನ, ವೈರಾಗ್ಯ, ಯೋಗ – ಮುಂತಾದ ಅಧ್ಯಾತ್ಮವಿಚಾರಗಳನ್ನೂ ಅದಕ್ಕೆ ಪೂರಕವಾದ ಲೇಖನಗಳನ್ನೂ ಪ್ರಕಟಿಸುತ್ತೇವೆಂದು ಪ್ರತಿಜ್ಞೆಮಾಡಿದ್ದರು. ಅದರಂತೆ ಅನೇಕ ಸಾಧು-ಸಂತ, ಮಹನೀಯರುಗಳ ಪರಿಚಯವನ್ನೂ ಪತ್ರಿಕೆಯಲ್ಲಿ ಮಾಡಿಸುತ್ತಾ ಬಂದರು. ಅವುಗಳನ್ನೆಲ್ಲ ಸಂಗ್ರಹಿಸಿ ಅಧ್ಯಾತ್ಮಪ್ರಕಾಶಕಾರ್ಯಾಲಯ ಸ್ಥಾಪನಾ ಶತಮಾನೋತ್ಸವದ ಸಂದರ್ಭದಲ್ಲಿ ಗ್ರಂಥರೂಪದಲ್ಲಿ ಪ್ರಕಟಿಸುತ್ತಿದ್ದೇವೆ.

ಈ ಗ್ರಂಥಪ್ರಕಟಣೆಗೆ – ಶ್ರೀ ಡಾ|| ವೈ. ಅನಂತನಾರಾಯಣ, ಶ್ರೀ ಆರ್. ಬಿ ಗೋಪಿನಾಥ್, ಬೆಂ, 5000/–; ಶ್ರೀಮತಿ ಆರ್. ಶಾಂತಾ ಬೆಂಗಳೂರು, ರೂ, 10,000/–; ಶ್ರೀ ಶ್ರೀವಿಷ್ಣುಪಾದ ಸ್ವಾಮಿಗಳ ಸ್ಮರಣಾರ್ಥ ಶ್ರೀ ಎಂ. ಶ್ರೀನಿವಾಸಯ್ಯ ಮತ್ತು ಕುಟುಂಬದವರು 50,000/– ಇವರುಗಳು ಉದಾರವಾಗಿ ಧನಸಹಾಯ ಮಾಡಿರುತ್ತಾರೆ. ಇವರಿಗೆ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಲೇಖನಗಳ ಸಂಗ್ರಹಕಾರ್ಯದಲ್ಲಿ ಶ್ರೀ ಡಾ|| ವೈ. ಅನಂತನಾರಾಯಣ ಮತ್ತು ದಿ|| ಹೆಚ್. ವೆಂಕಟನರಸಪ್ಪನವರು ಸಹಾಯನೀಡಿರುತ್ತಾರೆ. ಗ್ರಂಥದ ಕರಡನ್ನು ತಿದ್ದುವದರಲ್ಲಿ ಸಹಾಯಮಾಡಿರುವ ಶ್ರೀ ಜಿ. ಎಸ್. ವೇಂಕಟೇಶ ಶರ್ಮಾ (ಹರಿ) ಮತ್ತು ಶ್ರೀ ಲಕ್ಷ್ಮೀಶ ಭಟ್ಟ – ಇವರಿಗೂ, ಡಿ.ಟಿ.ಪಿ. ಯನ್ನು ಮಾಡಿರುವ ಶ್ರೀ ಡಿ. ಎನ್. ನರಹರಿ ಶರ್ಮಾರವರವರಿಗೂ, ಅಂದವಾಗಿ ಮುದ್ರಣವನ್ನು ಮಾಡಿರುವ ಶ್ರೀರಾಮ ಪ್ರಿಂಟರ್ಸ್ ನವರಿಗೂ ಕಾರ್ಯಾಲಯದ ಪರವಾಗಿ ಕೃತಜ್ಞತಾಪೂರ್ವಕ ಧನ್ಯವಾದಗಳು.

ಜಿಜ್ಞಾಸುಗಳು ಎಂದಿನಂತೆ ಗ್ರಂಥವನ್ನು ಆದರದಿಂದ ಬರಮಾಡಿಕೊಂಡು ಕಾರ್ಯಾಲಯದ ಅಧ್ಯಾತ್ಮಪ್ರಸಾರ ಕಾರ್ಯದಲ್ಲಿ ತನು, ಮನ, ಧನಗಳಿಂದ ಸಹಕರಿಸಿರೆಂದು ಪ್ರಾರ್ಥಿಸುತ್ತೇವೆ.

**ಪ್ಲವ ಸಂವತ್ಸರದ ಆಷಾಢ ಕೃಷ್ಣ ತ್ರಯೋದಶೀ**

**ಶ್ರೀಶ್ರೀಗಳವರ ಆರಾಧನೆ**

**06-08-2021**

ಪ್ರಕಾಶಕರು

# ಪೀಠಿಕೆ

ಭಾರತವು ಅನಾದಿಕಾಲದಿಂದಲೂ ಸಾಧುಸಂತ ಮಹಾತ್ಮರ ನಾಡು ಎಂಬುದು ಜನಜನಿತವಾಗಿದೆ. 'ಪರೋಪಕಾರವನ್ನು ಮಾಡುವವರು, ಯಾರಿಂದ ಸಮತಾನಂದವು ದೊರೆಯುತ್ತದೆಯೋ ಅವರೇ ಸಾಧುಗಳು - ಇವರನ್ನು ನಿತ್ಯವೂ ಸೇವಿಸಬೇಕು. ಸಾಧುಗಳೆಂದರೆ ಗಡ್ಡಬಿಟ್ಟವರು, ಯೋಗದಂಡಹಿಡಿದವರು, ಭಿಕ್ಷೆಬೇಡುವವರು ಎಂಬ ಸಂಕುಚಿತಾರ್ಥವನ್ನು ಮಾಡಿಕೊಂಡಿದ್ದೇವೆ. ಆದರೆ ಸಾಧು ಎಂದರೆ ಅಷ್ಟೇ ಅಲ್ಲ. ಯಾರು ತಮ್ಮ ಸೌಖ್ಯದ ಯೋಚನೆಯನ್ನೆಲ್ಲ ಕೈಬಿಟ್ಟು ಎಲ್ಲರಲ್ಲಿಯೂ ಸಮಬುದ್ಧಿಯಿಂದ ಲೋಕೋಪಕಾರವನ್ನೇ ನೋಡಿಕೊಳ್ಳುವರೋ ಅವರು ನಿಜವಾದ ಅರ್ಥದಲ್ಲಿ ಸಾಧುಗಳಾಗುತ್ತಾರೆ. ಅಂಥ ಸಾಧುಗಳ ಪ್ರಭಾವಕ್ಕೆ ಒಳಗಾಗಿರುವದೇ ನಿಜವಾಗಿ ಸಮಾಜವು. ಸಮತಾನಂದವು ಶಾಸ್ತ್ರ, ಸಾಧುಗಳು- ಇವರಿಬ್ಬರಿಂದಲೇ ಸಿಕ್ಕುವದು. ಶಾಸ್ತ್ರದಲ್ಲಿ ಏನು ಹೇಳಿದೆ ಎಂಬುದನ್ನು ತಿಳಿದು ನಿಶ್ಚಯಿಸಿಕೊಳ್ಳುವದು ಎಲ್ಲರಿಗೂ ಆಗುವಂತಿರುವದಿಲ್ಲ. ಆದರೆ ಸಾಧುಗಳ ಸಂಗದಿಂದ ನಮಗೆ ಸಮತೆಯ ಆನಂದದ ಅನುಭವವು ಅನಾಯಾಸವಾಗಿ ಸಿಕ್ಕುತ್ತದೆ.

ಸಾಧುಶಬ್ದಕ್ಕೆ ಅರ್ಥವೇನೆಂಬುದನ್ನು ಅರಿತುಕೊಂಡದ್ದರಿಂದ ಸಮಾಜಕ್ಕೆ ಸಾಧುಗಳ ಅವಶ್ಯಕತೆ ಇದೆಯೊ, ಇಲ್ಲವೊ?- ಎಂಬುದನ್ನು ನಾವು ನಿಶ್ಚಯಿಸಬಹುದಾಗಿ ದೆ. ಸಾಧುಗಳು ವಿಶ್ವಕುಟುಂಬಿಗಳಾಗಿರುತ್ತಾರೆ, ಇಡಿಯ ಜಗತ್ತಿನಲ್ಲಿಯೇ ನಾನೆಂಬ ಅಭಿಮಾನವುಳ್ಳವರು ಅವರು. ಅಂದರೆ ಇಡಿಯ ವಿಶ್ವದಲ್ಲಿ ಸಾಧುಗಳಿಗೆ ಮಾತ್ರವೇ ಅಭಿಮಾನವಿರುತ್ತದೆ. ಅವರಿಗೆ ಎಲ್ಲರಲ್ಲಿಯೂ ಆತ್ಮಸಮತಾಬುದ್ಧಿ. ಎಲ್ಲರ ಸುಖದುಃಖಗಳಲ್ಲಿಯೂ ಭಾಗವನ್ನುವಹಿಸುವವರು ಅವರು. ತಮ್ಮ ಸುತ್ತಮುತ್ತಲೂ ಇರುವವರೆಲ್ಲರೂ ಸರಿಯಾದ ಮಾರ್ಗದಲ್ಲಿರಬೇಕು, ಎಲ್ಲರಿಗೂ ಸಮತ್ವದ ಆನಂದವು ದೊರೆಯಬೇಕು - ಎಂದು ಲೋಕಕಲ್ಯಾಣಕ್ಕಾಗಿ ದುಡಿಯುವವರೇ ಸಾಧುಗಳು. ಅವರೇ ಮಹಾಪುರುಷರು.

ಸಾಧುಗಳಿಲ್ಲದಿದ್ದರೆ ಸಮಾಜವೇ ನಾಶವಾಗಿಬಿಡುತ್ತದೆ. ಆದ್ದರಿಂದ ಭಗವಂತನು ಸಾಧುಗಳು ಇಲ್ಲದ ಕಾಲವೇ ಇಲ್ಲದಂತೆ ನೋಡಿಕೊಳ್ಳುತ್ತಾನೆ. ಆದ್ದರಿಂದಲೇ **'ಸಾಧುಗಳ ಪರಿತ್ರಾಣಕ್ಕೆ ಮತ್ತೆಮತ್ತೆ ನಾನು ಆಯಾ ಯುಗದಲ್ಲಿ ಅವತರಿಸುತ್ತೇನೆ'** ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಈಗ ಕಲಿಯುಗ; ಧರ್ಮವು ಬಹಳ ಹ್ರಾಸವಾಗಿರುತ್ತದೆ. ಆದರೂ

ಸಮಾಜಸ್ಥಿತಿಗೆ ಸಾಧುಗಳು ಈಗಲೂ ಇದ್ದುಕೊಂಡೇ ಇರುತ್ತಾರೆ. ಅವರು ಇರಲೇಬೇಕು. 'ಸಮಾಜನಿರ್ಮಾಣ'ವನ್ನು ಮಾಡುವದಕ್ಕೆ ನಮ್ಮ ಜನನಾಯಕರು ತಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡುತ್ತಿರುತ್ತಾರೆ. ಆದರೆ ಸಾಧುಗಳಿಂದಾಗುವ ಸಮಾಜನಿರ್ಮಾಣಕ್ಕೆ ಈ ಯಾವ ಪ್ರಯತ್ನಗಳನ್ನೂ ಹೋಲಿಸುವದಕ್ಕಿಲ್ಲ. ಸಮಾಜವೆಂಬ ಭವನಕ್ಕೆ ಸಾಧುಗಳೇ ಆಧಾರಸ್ತಂಭಗಳು.

ಮಹಾಪುರುಷರುಗಳ ಉಪದೇಶ, ವ್ಯವಹಾರಾದಿಗಳು ಬೇರೆಬೇರೆಯಾಗಿ ರುತ್ತದೆಯಲ್ಲ? ಎಂದರೆ, ಮಹಾಪುರುಷರ ದೇಹವೂ ಮಿಕ್ಕವರ ದೇಹದಂತೆ ಒಂದು ದೇಶದಲ್ಲಿ, ಒಂದು ಕಾಲದಲ್ಲಿ, ಒಂದು ಜನಾಂಗದಲ್ಲಿ ಒಂದಾನೊಂದು ಪರಿಸ್ಥಿತಿಯಲ್ಲಿ ಜನ್ಮವನ್ನು ತಾಳುವದು, ಮತ್ತು ಅವರು ತಾವಿರುವ ದೇಶಕಾಲಸಂನಿವೇಶಗಳಿಗೆ ತಕ್ಕಂತೆ ಆಚಾರವನ್ನು ಇಟ್ಟುಕೊಂಡಿರುವದೂ ನಿರೀಕ್ಷಿಸತಕ್ಕದ್ದೇ ಆಗಿದೆ. ಈ ಕಾರಣದಿಂದ ಪರಿಚ್ಛಿನ್ನ ಬುದ್ಧಿಯ ಜನರು ಇವರು ನಮ್ಮ ಜನಾಂಗದವರು, ನಮ್ಮ ಮತದವರು, ನಮ್ಮ ದೇಶದವರು, ನಮ್ಮ ಸಮಾಜಕ್ಕೆ ಉಪಕಾರಮಾಡಿದವರು; ಇವರು ಶೂರರು, ವೀರರು, ದೇಶಾಭಿಮಾನಿಗಳು, ಮತಾಭಿಮಾನಿಗಳು, ಕಲಾಕುಶಲರು - ಎಂದು ಮುಂತಾಗಿ ತಮ್ಮ ತಮ್ಮ ಮನಸ್ಸಿನ ಅಳತೆಯ ಕೋಲನ್ನು ಉಪಯೋಗಿಸಿ ಅವರನ್ನು ಅಳೆಯುವದೂ ಸಹಜವಾಗಿದೆ. ಆದರೆ ತತ್ತ್ವದೃಷ್ಟಿಯಿಂದ ನೋಡಿದರೆ ಮಹಾಪುರುಷರಿಗೆ ಈ ಯಾವ ಪರಿಚ್ಛೇದವೂ ಅಂಟುವದಿಲ್ಲ. ಏಕೆಂದರೆ ಅವರು ಸರ್ವವ್ಯಾಪಿಯಾದ ಸರ್ವರ ಆತ್ಮನಾದ ಭಗವಂತನಲ್ಲಿಯೇ ಆತ್ಮಭಾವದಿಂದ ಇದ್ದುಕೊಂಡುಬಿಟ್ಟಿರುತ್ತಾರೆ. ಅವರು ಇದ್ದಕಾಲದಲ್ಲಿ ತೋರಿಸಿದ ನಡತೆಯ ಆದರ್ಶದಿಂದಲೇ ಅಲ್ಲದೆ, ಅವರ ಉಪದೇಶವಾಣಿಯು ಸರ್ವರ ಮನಸ್ಸನ್ನೂ ಈಗಲೂ ಸೂರೆಗೊಳ್ಳುವದೇ ಇದಕ್ಕೆ ಪ್ರಮಾಣವು. ಮಹಾಪುರುಷರನ್ನು ಎಷ್ಟು ಮಟ್ಟಿಗೆ ಅರಿತುಕೊಂಡು ಅವರನ್ನು ಆಶ್ರಯಿಸುವೆವೋ ಅಷ್ಟರಮಟ್ಟಿಗೆ ನಾವೂ ಪರಮಾತ್ಮನಿಗೆ ಹತ್ತಿರವಾಗುವೆವು.

ಇಂಥ ಸಾಧುಗಳಿರುವ ಭವನವಾಗಬೇಕು ನಮ್ಮ ಸಮಾಜ ಎಂಬ ದೃಷ್ಟಿಯಿಂದ ಶ್ರೀಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಅಧ್ಯಾತ್ಮವಿಚಾರಕ್ಕೂ ಸಾಧನಾನುಷ್ಠಾನಕ್ಕೂ ಮಾದರಿಯಾಗಿ ಇಟ್ಟುಕೊಳ್ಳಬಹುದಾದ ಸಾಧುಗಳ ಚರಿತ್ರೆಗಳ ಕುರಿತಾದ ಲೇಖನಗಳನ್ನು ಪ್ರಕಟಿಸುತ್ತಾ ಬಂದರು. ಮತ್ತೊಬ್ಬರ ಮತವನ್ನು ದೂಷಿಸದೆ ಬರೆಯುವ ಬರೆಯುವ ಎಲ್ಲಾ ಆಧ್ಯಾತ್ಮಿಕ ವಿಚಾರದ ಲೇಖನಗಳಿಗೂ ಈ ಪತ್ರಿಕೆಯಲ್ಲಿ

ಅವಕಾಶವುಂಟೆಂದು ಪ್ರಕಟಿಸಿದ್ದರು. ಅಂತೆಯೇ ಅನೇಕ ಮಹಾಪುರುಷರ, ಮತಪ್ರವರ್ತಕರ ಜೀವನಚರಿತ್ರೆಯನ್ನು ಆ ಮತಗಳನ್ನು ಅನುಸರಿಸುವ, ಅವನ್ನು ಕುರಿತು ಅಧ್ಯಯನಮಾಡಿರುವ ವಿದ್ವಾಂಸರುಗಳಿಂದಲೇ ಬರೆಯಿಸಿ ಪ್ರಕಟಿಸಿರುತ್ತಾರೆ. ಇಲ್ಲಿ ಭಾರತೀಯ ಸಾಧು-ಸಂತರ ಚರಿತ್ರೆಯಲ್ಲದೆ ಪಾಶ್ಚಾತ್ಯ ಸಂತರ ಚರಿತ್ರೆಯೂ ಸೇರಿದೆ. ಕೆಲವು ಬೇರೆಬೇರೆಯ ಪತ್ರಿಕೆಗಳಿಂದ ಆರಿಸಿ ಬರೆದ ಲೇಖನಗಳಾಗಿವೆ.

ಕೆಲವೊಂದು ಲೇಖನಗಳಲ್ಲಿ ಶಂಕರಾಚಾರ್ಯರನ್ನೂ ಅದ್ವೈತಸಿದ್ಧಾಂತವನ್ನು ದೂಷಿಸಿದಂತೆಕಂಡರೂ ಆ ಮಹಾತ್ಮರು ಬದುಕಿದ್ದ ದೇಶಕಾಲಪರಿಸ್ಥಿತಿಗನುಗುಣವಾಗಿ ಆ ಮಾತುಗಳು ಬಂದಿವೆ ಎಂದು ತಿಳಿದುಕೊಳ್ಳಬೇಕು. 'ನಿಂದೆಯು ನಿಂದಿಸುವ ಉದ್ದೇಶದಿಂದ ಬಂದಿದ್ದಲ್ಲ, ಹೊಗಳಬೇಕಾದದ್ದನ್ನು ಹೊಗಳಲು' ಎಂಬ ನ್ಯಾಯದಂತೆ ಆ ವಿಷಯಗಳನ್ನು ನಾವು ಅರಿತುಕೊಳ್ಳಬೇಕು. ಕೆಲವು ಮಹಾತ್ಮರ ವಿಷಯದಲ್ಲಿ ಈಗ ನೂರುವರ್ಷಗಳ ಹಿಂದೆ ಇದ್ದ ಅಭಿಪ್ರಾಯಕ್ಕೂ ಈಗ ನಡೆಯುತ್ತಿರುವ ಸಂಶೋಧನೆಗಳ ದೃಷ್ಟಿಗೂ ಅಭಿಪ್ರಾಯಭೇದವು ಕಂಡುಬರುತ್ತಿವೆ. ನಾವು ಅದನ್ನು ಇಲ್ಲಿ ಉಲ್ಲೇಖಿಸದೆ ಶ್ರೀ ಶ್ರೀಗಳವರು ಪತ್ರಿಕೆಯಲ್ಲಿ ಸಂಪಾದಿಸಿ ಪ್ರಕಟಿಸಿದಂತೆ ಪ್ರಕಟಿಸಿದ್ದೇವೆ. ಇದರಿಂದ ನೂರುವರ್ಷಗಳ ಹಿಂದೆ ನಮ್ಮ ಸಮಾಜದಲ್ಲಿ ಆಧ್ಯಾತ್ಮಿಕ ಚಿಂತನೆ ಮತ್ತು ಸಾಧುಸಂತರ ಬಗ್ಗೆ ಯಾವ ಬಗೆಯ ಅಭಿಪ್ರಾಯವಿತ್ತು ಎಂಬುದನ್ನು ತಿಳಿಯಲು ಸಹಾಯವಾಗುತ್ತದೆ. ಇವನ್ನು ವಿಮರ್ಶೆಯ ದೃಷ್ಟಿಯಿಂದ ಅಧ್ಯಯನಮಾಡದೆ ಕೇವಲ ಪೂಜ್ಯಬುದ್ಧಿಯಿಂದ ಅಧ್ಯಯನ ಮಾಡಿದರೇ ಹೆಚ್ಚಿನ ಪ್ರಯೋಜನವಿದೆ. ಮಹಾತ್ಮರುಗಳ ಜೀವನ, ಉಪದೇಶಗಳ ಅಧ್ಯಯನದಿಂದ ನಮ್ಮ ಆಧ್ಯಾತ್ಮಿಕ ವಿಚಾರವು ಉಜ್ವಲಗೊಂಡು, ಆ ಮಹಾತ್ಮರುಗಳಂತೆ ನಾವೂ ಪರಮಾತ್ಮನಿಗೆ ಹತ್ತಿರವಾಗಿ ಕೃತಾರ್ಥತೆಯನ್ನು ಪಡೆಯಲು ಸುಲಭಮಾರ್ಗವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

ಅಧ್ಯಾತ್ಮಪ್ರಕಾಶಕಾರ್ಯಾಲಯ ಸ್ಥಾಪನಾ ಶತಮಾನೋತ್ಸವದ ಸಂದರ್ಭದಲ್ಲಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯ ಸಂಪುಟಗಳಲ್ಲಿ ಹುದುಗಿದ್ದ ಈ ಅನರ್ಘವಾದ ಲೇಖನಗಳನ್ನು ಗ್ರಂಥರೂಪದಲ್ಲಿ ಪ್ರಕಟಿಸುತ್ತಿರುವದು ಅತ್ಯಂತ ಹರ್ಷದಾಯಕವಾಗಿದೆ. ಇಂಥ ಮೂಲ್ಯವಾದ ಲೇಖನಗಳನ್ನು ಓದಿ ನಾವೆಲ್ಲ ಕೃತಾರ್ಥತೆಯನ್ನು ಪಡೆಯೋಣ.

**(ಸಂಗ್ರಹ)**

**ಲಕ್ಷ್ಮೀಶ ಭಟ್ಟ**

# ವಿಷಯಾನುಕ್ರಮಣಿಕೆ


| ಕ್ರ.ಸಂ | ವಿಷಯ | ಪುಟ |
|---|---|---|
| 1. | ಮಹಾಪುರುಷರು | 1 |
| 2. | ಸಾಧುಸಂಗ | 2 |
| 3. | ಸಾಧುಸಂಗದ ಫಲ | 3 |
| 4. | ಸಾಧುಗಳ ರಿಜಿಸ್ಟ್ರೇಶನ್ ಮತ್ತು ಲೈಸೆನ್ಸ್ | 4 |
| 5. | ಸಾಧುಗಳೇನು ಮಾಡಬೇಕು, ಸಾಧುಗಳನ್ನೇನು ಮಾಡಬೇಕು ? | 6 |
| 6. | ವೈಶಾಖಮಾಸ | 17 |
| 7. | ಗುರುಭಕ್ತಿ | 18 |
| 8. | ವ್ಯಾಸಮಹರ್ಷಿಗಳು | 22 |
| 9. | ಯಾಜ್ಞವಲ್ಕ್ಯರು | 23 |
| 10. | ಶ್ರೀ ಶಂಕರಭಗವತ್ಪಾದರವರು | 29 |
| 11. | ಶ್ರೀಶಂಕರಭಗವತ್ಪಾದಾಚಾರ್ಯರವರು | 33 |
| 12. | ಶಂಕರಾಚಾರ್ಯರ ಮತ್ತು ರಾಮಾನುಜಾಚಾರ್ಯರ ಸ್ಮರಣೆ | 35 |
| 13. | ಶ್ರೀಯಾಮುನಾಚಾರ್ಯರು | 39 |
| 14. | ಕುಲಶೇಖರಾಳ್ವಾರ್ | 44 |
| 15. | ಶ್ರೀ ರಾಮಾನುಜಾಚಾರ್ಯರವರು | 47 |
| 16. | ಶ್ರೀ ಸದಾಶಿವೇಂದ್ರಸರಸ್ವತಿಗಳು | 52 |
| 17. | ಶ್ರೀ ಸಮರ್ಥ ರಾಮದಾಸಸ್ವಾಮಿಗಳು | 56 |
| 18. | ಸಾಧುಗಳ ಆವಶ್ಯಕತೆ | 59 |
| 19. | ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರು | 63 |
| 20. | ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರವರು | 67 |
| 21. | ನಾನು ಕಂಡಿದ್ದ ಸಾಧುವರ್ಯರು | 71 |
| 22. | ಶ್ರೀಬ್ರಹ್ಮಚೈತನ್ಯಾಷ್ಟಕ | 72 |
| 23. | ಶ್ರೀ ವಿದ್ಯಾರಣ್ಯಗುರುಗಳು | 75 |
| 24. | ಶ್ರೀ ಮಧ್ವಾಚಾರ್ಯರು | 77 |

25. ಶ್ರೀ ರಾಘವೇಂದ್ರಸ್ವಾಮಿಗಳವರು
26. ಶ್ರೀ ವ್ಯಾಸರಾಯಸ್ವಾಮಿಗಳವರು
27. ಭಕ್ತ ಪುರಂದರದಾಸರು
28. ಶ್ರೀ ವಲ್ಲಭಾಚಾರ್ಯರು
29. ಶ್ರೀ ಕೃಷ್ಣಚೈತನ್ಯ ಮಹಾಪ್ರಭು
30. ಶ್ರೀ ರಾಮಾನಂದಸಾಧು
31. ಶ್ರೀ ರಾಮಕೃಷ್ಣ ವಿವೇಕಾನಂದಸ್ವಾಮಿಗಳು
32. ಶ್ರೀ ರಾಮಕೃಷ್ಣಪರಮಹಂಸರು –1
33. ಶ್ರೀ ರಾಮಕೃಷ್ಣಪರಮಹಂಸರು – 2
34. ಶ್ರೀ ಸ್ವಾಮಿ ವಿವೇಕಾನಂದರು
35. ಶ್ರೀ ವಿವೇಕಾನಂದಸ್ವಾಮಿಗಳವರು
36. ಪವ್ಹಾರಿ ಬಾಬ –1
37. ಪವ್ಹಾರಿಬಾಬಾ –2
38. ತುಲಸೀದಾಸರು
39. ಕಬೀರವೃತ್ತಾಂತ
40. ಕಬೀರದಾಸರು
41. ಮೀರಾಬಾಯಿ
42. ಸಂತರೈದಾಸ
43. ದಾದೂ ದಯಾಲ
44. ಮಣಿದಾಸ
45. ಚಮ್ಮಾರ ರಾಮದಾಸ
46. ತುಕಾರಾಮ
47. ಬಾಬಾ ಗಂಭೀರನಾಥಜಿ
48. ಶ್ರೀ ಉತ್ತಮನಾಥಸ್ವಾಮಿಗಳವರು
49. ಭಕ್ತವರ ನಾಮದೇವ
50. ಆಚಾರ್ಯ ವಿಷ್ಣುಸ್ವಾಮಿ
51. ಸಂತವರ ಶ್ರೀಜ್ಞಾನೇಶ್ವರ

| | | |
|---|---|---|
| 52. | ಶ್ರಾದ್ಧಾನ್ನವನ್ನು ಹೊಲೆಯರಿಗೆ ಉಣಬಡಿಸಿದ ಮಹಾತ್ಮನು | 187 |
| 53. | ಶ್ರೀ ರಾಮದಾಸಸ್ವಾಮಿಗಳವರು | 190 |
| 54. | ನಾರಾಯಣಗುರುಗಳು | 192 |
| 55. | ಕಲ್ಯಾಣದ ಬಸವಣ್ಣನವರು | 195 |
| 56. | ಗುರುನಾನಕ | 197 |
| 57. | ಶ್ರೀ ರಮಣಮಹರ್ಷಿಗಳು | 200 |
| 58. | ಮಹಾವೀರ ಜಯಂತಿ | 203 |
| 59. | ಅನಂತಪ್ಪಮಹಾರಾಜರವರು | 206 |
| 60. | ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರವರು | 227 |
| 61. | ಮಹಾಪುರುಷರೊಬ್ಬರ ಅಂತರ್ಧಾನ | 234 |
| 62. | ಕೈವಲ್ಯ ವೇದಾಂತಿ ಚಿಕ್ಕಲಿಂಗಣ್ಣನವರು | 238 |
| 63. | ಹೊಸಕೆರೆ ಚಿದಂಬರಯ್ಯನವರು | 242 |
| 64. | ಶ್ರೀ ದಯಾನಂದಸ್ವಾಮಿಗಳು | 248 |
| 65. | ರಾಜಾ ರಾಮಮೋಹನ ರಾಯ | 252 |
| 66. | ಶ್ರೀ ಶ್ರೀ ಸ್ವಾಮಿ ಶಿವಾನಂದಜಿ ಮಹಾರಾಜರವರು | 255 |
| 67. | ದ್ವಾರಕಾಪೀಠದ ಶ್ರೀಜಗದ್ಗುರು ಶಂಕರಾಚಾರ್ಯರವರ ಪಟ್ಟಾಭಿಷೇಕ | 258 |
| 68. | ಅವಚನೇನೈವ ಪ್ರೋವಾಚ | 260 |
| 69. | ಶ್ರೀ ಶ್ರೀ ಅಭೇದಾನಂದಸ್ವಾಮಿಯವರು | 263 |
| 70. | ಸಾಧವೋ ಧರ್ಮಚಾರಿಣಃ | 265 |
| 71. | ಡಾ|| ಹರಿಪ್ರಸಾದ ಶಾಸ್ತ್ರಿಗಳು | 266 |
| 72. | ಆದರ್ಶಭಕ್ತ ಮಹಾವೀರ | 269 |
| 73. | ಸರ್ ಜಗದೀಶ ಚಂದ್ರ ಬೋಸ್ | 277 |
| 74. | ಆಬು ಸೈಯದ್ ಬಿ. ಆಬಿ ಅಲ್-ಖಯರ್ | 279 |
| 75. | ಎಪಿಕ್ಟೀಟಸ್ | 282 |
| 76. | ಪ್ಲೊಟೈನಸ್ | 285 |
| 77. | ಡಾ|| ಆನಿ ಬೆಸಂಟ್ | 289 |

| | | |
|---|---|---|
| 78. | ಎಚ್.ಪಿ.ಬ್ಲಾವಟ್ಸ್ಕಿ ಅಮ್ಮನವರು | 292 |
| 79. | ವಿಲಿಯಮ್ ಎಲ್ಲರಿ ಚಾನ್ನಿಂಗ್ | 294 |
| 80. | ಸೇಂಟ್ ಫ್ರಾನ್ಸಿಸ್ | 297 |
| 81. | ಜಾನ್ ಟಾಲರ್ | 303 |
| 82. | ಅಖ್ನೇಟನ್ | 308 |
| 83. | ಈನ್ಸ್ಟನ್ | 313 |
| 84. | ಭೌತಿಕವಿಜ್ಞಾನದ ಋಷಿಯೊಬ್ಬನ ಅಂತರ್ಧಾನ | 315 |
| 85. | ಜೆನೋ ಆದ ಸೇಂಟ್ ಕ್ಯಾಥರೀನ್ | 318 |

★★★★★

# ಸಾಧುಸಂತರು ಮತ್ತು ಮಹನೀಯರು

## ಮಹಾಪುರುಷರು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಮಹಾಪುರುಷರೆಂದರೆ ದೇಹೇಂದ್ರಿಯಾದಿಗಳ ಅಳತೆಗೆ ಸಿಕ್ಕದ ತಮ್ಮ ಆತ್ಮನ ಸ್ವರೂಪದಲ್ಲಿಯೇ ತಾದಾತ್ಮ್ಯಭಾವನೆಯಿಂದ ಇದ್ದುಬಿಟ್ಟಿರುವವರು. ಯಾವದಾದರೊಂದು ದೇಶ, ಯಾವದಾದರೊಂದು ಕಾಲ, ಯಾವದಾದರೊಂದು ಜನಾಂಗ, ಜಾತಿ, ಕುಲ, ವರ್ಣ - ಇವಕ್ಕೆ ಕಟ್ಟುಬೀಳದೆ ಪರಮಾತ್ಮನಲ್ಲಿ ಒಂದಾಗಿ ಬಿಟ್ಟಿರುವದರಿಂದ ಅವರು ಸರ್ವಜನರಿಗೂ ಸಂಮಾನನೀಯರಾಗಿರುತ್ತಾರೆ. ದೇಶದ ಆರ್ಥಿಕಸ್ಥಿತಿ, ಜನರ ಆಚಾರವಿಚಾರಗಳು, ವಿದ್ಯಾಭ್ಯಾಸ, ರಾಜನೀತಿ, ಮುಂತಾದವುಗಳಲ್ಲಿ ತಮ್ಮ ತಮ್ಮ ಕುಲದ, ತಮ್ಮ ತಮ್ಮ ದೇಶದ, ಜನರಿಗೆ ಸಹಾಯ ಮಾಡುವವರೂ ದೊಡ್ಡವರೇ ಸರಿ; ಅವರ ಉಪಕಾರವನ್ನೂ ಉಪಕೃತರಾದವರು ಸ್ಮರಿಸತಕ್ಕದ್ದೇ. ಆದರೆ '**ಮಹಾಪುರುಷರು**' ಎಂಬಲ್ಲಿರುವ ಮಹಚ್ಛಬ್ದಕ್ಕೆ ದೊಡ್ಡದು ಎಂಬ ಅರ್ಥವಿಲ್ಲ. ಅವರು ದೇಶಕಾಲಗಳ ಗಡಿಯನ್ನು ಮೀರಿ ಸರ್ವಕಾಲಕ್ಕೂ ಸರ್ವದೇಶಗಳಿಗೂ ಸರ್ವರಿಗೂ ಸಂಮಾನನೀಯರಾಗಿರುವರು. ಯಾವ ಪರಿಚ್ಛೇದವೂ ಇಲ್ಲದ ಪೂರ್ಣಪುರುಷನಾದ ಪರಮಾತ್ಮನು ಹೇಗೆ ಎಲ್ಲರಿಗೂ ಪೂಜ್ಯನೋ, ಹಾಗೆ ಮಹಾಪುರುಷರೂ ಎಲ್ಲರಿಗೂ ಪೂಜ್ಯರು.

ಮಹಾಪುರುಷರ ದೇಹವೂ ಮಿಕ್ಕವರ ದೇಹದಂತೆ ಒಂದು ದೇಶದಲ್ಲಿ, ಒಂದು ಕಾಲದಲ್ಲಿ, ಒಂದು ಜನಾಂಗದಲ್ಲಿ ಒಂದಾನೊಂದು ಪರಿಸ್ಥಿತಿಯಲ್ಲಿ ಜನ್ಮವನ್ನು ತಾಳುವದು, ಮತ್ತು ಅವರು ತಾವಿರುವ ದೇಶಕಾಲಸಂನಿವೇಶಗಳಿಗೆ ತಕ್ಕಂತೆ ಆಚಾರವನ್ನು ಇಟ್ಟುಕೊಂಡಿರುವದೂ ನಿರೀಕ್ಷಿಸತಕ್ಕದ್ದೇ ಆಗಿದೆ. ಈ ಕಾರಣದಿಂದ ಪರಿಚ್ಛಿನ್ನ ಬುದ್ಧಿಯ ಜನರು ಇವರು ನಮ್ಮ ಜನಾಂಗದವರು, ನಮ್ಮ ಮತದವರು, ನಮ್ಮ ದೇಶದವರು, ನಮ್ಮ ಸಮಾಜಕ್ಕೆ ಉಪಕಾರಮಾಡಿದವರು; ಇವರು ಶೂರರು, ವೀರರು, ದೇಶಾಭಿಮಾನಿಗಳು, ಮತಾಭಿಮಾನಿಗಳು, ಕಲಾಕುಶಲರು - ಎಂದು

ಮುಂತಾಗಿ ತಮ್ಮ ತಮ್ಮ ಮನಸ್ಸಿನ ಅಳತೆಯ ಕೋಲನ್ನು ಉಪಯೋಗಿಸಿ ಅವರನ್ನು ಅಳೆಯುವದೂ ಸಹಜವಾಗಿದೆ. ಆದರೆ ತತ್ತ್ವದೃಷ್ಟಿಯಿಂದ ನೋಡಿದರೆ ಮಹಾಪುರುಷರಿಗೆ ಈ ಯಾವ ಪರಿಚ್ಛೇದವೂ ಅಂಟುವದಿಲ್ಲ. ಏಕೆಂದರೆ ಅವರು ಸರ್ವವ್ಯಾಪಿಯಾದ ಸರ್ವರ ಆತ್ಮನಾದ ಭಗವಂತನಲ್ಲಿಯೇ ಆತ್ಮಭಾವದಿಂದ ಇದ್ದುಕೊಂಡುಬಿಟ್ಟಿರುತ್ತಾರೆ. ಅವರು ಇದ್ದಕಾಲದಲ್ಲಿ ತೋರಿಸಿದ ನಡತೆಯ ಆದರ್ಶದಿಂದಲೇ ಅಲ್ಲದೆ, ಅವರ ಉಪದೇಶವಾಣಿಯು ಸರ್ವರ ಮನಸ್ಸನ್ನೂ ಈಗಲೂ ಸೂರೆಗೊಳ್ಳುವದೇ ಇದಕ್ಕೆ ಪ್ರಮಾಣವು. ಮಹಾಪುರುಷರನ್ನು ಎಷ್ಟು ಮಟ್ಟಿಗೆ ಅರಿತುಕೊಂಡು ಅವರನ್ನು ಆಶ್ರಯಿಸುವೆವೋ ಅಷ್ಟರಮಟ್ಟಿಗೆ ನಾವೂ ಪರಮಾತ್ಮನಿಗೆ ಹತ್ತಿರವಾಗುವೆವು.

★★★★★

# ಸಾಧುಸಂಗ

ಯಾವ ಮಹಾತ್ಮರು, ಸಾಧುಸಂಗವೆಂಬ ಮರದಲ್ಲಿ ಬಿಟ್ಟ ವಿವೇಕ ಕುಸುಮವನ್ನು ಕಾಪಾಡಿಕೊಳ್ಳುವರೋ ಅವರೇ ಫಲಸಂಪತ್ತಿಗೆ ಪಾತ್ರರು. ವಿದ್ವಜ್ಜನರ ಸಮಾಗಮದಿಂದ ಪಾಳುಮನೆಯ ಜನಭರಿತವಾಗಿ ತೋರುವದು ಸಾವೂ ಉತ್ಸವವಾಗುವದು; ಆಪತ್ತು ಸಂಪತ್ತಾಗುವದು. ಆಪತ್ಕಮಲಕ್ಕೆ ಹಿಮವೂ ಮೋಹವೆಂಬ ಕಾವಳಕ್ಕೆ ಬಿರುಗಾಳಿಯೂ ಆಗಿ ಒಪ್ಪುತ್ತಿರುವದು ಈ ಜಗತ್ತಿನಲ್ಲಿ ಸಾಧುಸಮಾಗಮವೆಂಬುದೊಂದೇ ಸಾಧುಸಮಾಗಮವೆಂಬುದು ಬುದ್ಧಿಯನ್ನು ಬೆಳೆಯಿಸುವದು, ಅಜ್ಞಾನವೆಂಬ ಮರವನ್ನು ಕತ್ತರಿಸಿಹಾಕುವದು, ಮಾನಸವ್ಯಥೆಗಳನ್ನು ದೂರ ಸರಿಯಿಸುವದು - ಎಂದು ತಿಳಿಯಬೇಕು. ಸಾಧುಸಂಗಮದಿಂದ ವಿವೇಕವೆಂಬ ದೊಡ್ಡದೀಪವು ತೋರಿಕೊಳ್ಳುವದು, ಅದು ನೀರೆರೆದರೆ ಹೂಗೊಂಚಲು ಮನೋಹರವಾಗುವಂತೆ ಚಿತ್ರವನ್ನು ಬರಗೆಳೆಯುವದು. ಸಾಧುಸಂಗವೆಂಬ ವಿಭೂತಿಗಳು ಎಂದಿಗೂ ಅತ್ತಸರಿಯದ ಯಾವ ಬಾಧೆಯೂ ಇಲ್ಲದ ನಿತ್ಯ ಪುಷ್ಟವಾಗಿರುವ ಆನಂದವನ್ನು ಕೊಡುತ್ತಿರುವವು. ಎಷ್ಟೇ ಕಷ್ಟವು ಬಂದೊದಗಿರಲಿ, ಮಾನವರು ಸಾಧುಸಂಗತಿಯನ್ನು ಎಂದಿಗೂ ಸ್ವಲ್ಪವೂ ಬಿಡಬಾರದು.

★★★★★

# ಸಾಧುಸಂಗದ ಫಲ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸಾಧುಶಬ್ದದ ಅರ್ಥವು ಕೆಳಮಟ್ಟಕ್ಕೆ ಇಳಿಯುತ್ತಿದೆ. ನಿಜವಾಗಿ ಸಾಧುಗಳೆಂದರೆ '**ಪರೋಪಕಾರವನ್ನು ಮಾಡುವವರು, ಯಾರಿಂದ ಸಮತಾನಂದವು ದೊರೆಯುತ್ತದೆಯೋ ಅವರೇ ಸಾಧುಗಳು**' – ಎಂದು ವಾಸಿಷ್ಠರಾಮಾಯಣದಲ್ಲಿದೆ. ದುಷ್ಪಸಂಗವನ್ನು ಬಿಡಿಸಿ ಪರಮಾತ್ಮನ ಕಡೆಗೆ ತಿರುಗಿಸುವವರೇ ಸಾಧುಗಳು. ಸಾಧುಗಳು ನಮ್ಮನ್ನು ಹಗ್ಗ ಕಟ್ಟಿ ಎಳೆದುಕೊಂಡು ಸದ್ವರ್ತನೆಗೇನೂ ಬಿಡುವದಿಲ್ಲ. ಸಾಧುಗಳ ನಡತೆಯನ್ನು ಚೆನ್ನಾಗಿ ಪರೀಕ್ಷಿಸುತ್ತಿದ್ದರೆ ಕನ್ನಡಿಯಲ್ಲಿ ತನ್ನ ಮುಖದ ಕೊಳಕು ಕಾಣಿಸುವಂತೆ ಸತ್ಸಂಗವನ್ನು ಮಾಡಿದವನಿಗೂ ತನ್ನ ದೋಷವು ಎದ್ದು ಕಾಣಿಸುತ್ತದೆ. ಅವರ ಸೇವೆಯಿಂದಲೂ ಉಪದೇಶದಿಂದಲೂ ಭಗವಂತನಿಗೆ ನಾವೂ ಹತ್ತಿರವಾಗಬಹುದು. ನಾರದರು ಶೂದ್ರ ಜಾತಿಯಲ್ಲಿ ಹುಟ್ಟಿದ್ದವರು ಚಾತುರ್ಮಾಸ್ಯದಲ್ಲಿ ಕೆಲವರು ಋಷಿಗಳ ಸೇವೆಯನ್ನು ಮಾಡಲಾಗಿ, ಅದರ ಫಲವಾಗಿ ಆ ಜನ್ಮದಲ್ಲಿಯೇ ಮಹಾಭಕ್ತರಾದರು. ಮುಂದಿನದಿನ ಜನ್ಮದಲ್ಲಿ ದೇವರ್ಷಿಗಳಾಗಿ ಹುಟ್ಟಿದರು. ಮಹತೀವೀಣೆಯನ್ನು ಬಾರಿಸಿಕೊಂಡು ಭಗವಂತನ ಮಹಿಮೆಯನ್ನು ಕಥನ ಮಾಡುತ್ತಾ ಮೂರು ಲೋಕಗಳಿಗೂ ಭಕ್ತಿಮಾರ್ಗಕ್ಕೆ ಆದರ್ಶಪ್ರಾಯರಾದರು!

ಕಬ್ಬಿಣದ ತುಂಡು ನೀರಿನಲ್ಲಿ ಮುಳುಗುತ್ತದೆ; ಅದನ್ನು ತಟ್ಟಿ ತಗಡುಮಾಡಿ ಕೊಡವೇ ಮುಂತಾದದ್ದನ್ನು ಮಾಡಿದರೆ ಅದೇ ತೇಲುತ್ತದೆ. ಸಾಧುಗಳು ಪಾಪವಾಸನೆಯಿಂದ ಸಂಸಾರಸಾಗರದಲ್ಲಿ ಮುಳುಗುವಂತವರನ್ನು ಕೂಡ ತಮ್ಮ ಸಾಮೀಪ್ಯ, ಸೇವೆ, ಉಪದೇಶಶ್ರವಣ – ಮುಂತಾದವುಗಳಿಂದ ಹಗುರವಾಗಿ ಜೀವನಸಾಗರದಲ್ಲಿ ಹರ್ಷದಿಂದ ಈಜಾಡುವಂತೆ ಮಾಡುತ್ತಾರೆ. ಸತ್ಸಂಗದಿಂದ ಭಗವದ್ಭಕ್ತಿಯು ದೊರಕುತ್ತದೆ, ಸಂಸಾರದ ಭಯವು ತೊಲಗುತ್ತದೆ. ಆಮೇಲೆ ಭಗವಂತನ ಉಪಾಸನೆಯಿಂದಲೇ ಆನಂದಜೀವನವನ್ನು ಮಾಡುವ ಬುದ್ಧಿಯು ಬಂದು ಸೇರಿಕೊಳ್ಳುತ್ತದೆ.

ಶೃಂಗೇರಿಯ ಪೀಠಾಧಿಪರಾಗಿದ್ದ **ಶ್ರೀಸಚ್ಚಿದಾನಂದಶಿವಾಭಿನವನರಸಿಂಹ ಭಾರತೀಸ್ವಾಮಿಗಳು** ಒಮ್ಮೆ ಉಪದೇಶಕಾಲದಲ್ಲಿ ಹೀಗೆಂದರು – ಕಾಡುಗಳಲ್ಲೆಲ್ಲ

ಯಾವಯಾವದೋ ಗಿಡಗಳನ್ನೋ ಮೃಗಗಳನ್ನೋ ಹುಡುಕುವವರುಂಟು. ಆದರೆ ಅರ್ಥದಷ್ಟು, ಆಯಾಸದಿಂದ ಹುಡುಕಿದರೂ ಈಗಲೂ ಸತ್ಪುರುಷರು ಸಿಕ್ಕುತ್ತಾರೆ. ಸಾಧುಗಳಿಗೆ ಹಣ್ಣು, ಬಾದಾಮಿ, ಕಲ್ಲುಸಕ್ಕರೆ, ಹೂಗಳು – ಮುಂತಾದವುಗಳನ್ನು ಕಾಣಿಕೆಯಾಗಿ ಕೊಡುವವರುಂಟು, ಅವರಿಗೆ ತಮ್ಮ ಹೃದಯವನ್ನು ಸಮರ್ಪಿಸಿದವರಿಗೆ ಇಹಪರಗಳೆರಡರಲ್ಲಿಯೂ ಸದ್ಗತಿಯಾದೀತು. ಏಕೆ? ಎಲ್ಲಾ ಗತಿಯನ್ನೂ ಮೀರಿದ ಪರಮಪುರುಷಾರ್ಥವೇ ದೊರಕೀತು!

★★★★★

# ಸಾಧುಗಳ ರಿಜಿಸ್ಟ್ರೇಶನ್ ಮತ್ತು ಲೈಸೆನ್ಸ್

**(ಸ್ವಾಮಿ ಮಾಧವತೀರ್ಥರು ಭಾರತಸರ್ಕಾರಕ್ಕೆ ಬರೆದ ಪತ್ರದ ಸಾರಾಂಶ)**

ಅಹಮ್ಮದಾಬಾದ್ ಪ್ರಾಂತದಲ್ಲಿರುವ ವಲಾದ್ ವೇದಾಂತಾಶ್ರಮದ ಸ್ಥಾಪಕರೂ, ಭಾರತ ಸಾಧುಸಮಾಜದ ಮತ್ತು ಭಾರತ ಸೇವಕ ಸಮಾಜಗಳ ಸದಸ್ಯರೂ ಆದ ಶ್ರೀಸ್ವಾಮಿ ಮಾಧವತೀರ್ಥರು ಭಾರತದ ಪಾರ್ಲಿಮೆಂಟಿನ ಸದಸ್ಯರುಗಳಿಗೆ ಒಂದು ಮನವಿಯನ್ನು ಇಂಗ್ಲಿಷಿನಲ್ಲಿ ಬರೆದು ಕಳುಹಿಸಿರುತ್ತಾರೆ. ಅದರ ಒಂದು ಅಚ್ಚಾದ ಪ್ರತಿಯು ನಮ್ಮಲ್ಲಿಗೆ ಬಂದಿರುತ್ತದೆ. ಸಾಧುಗಳೂ ಸಂನ್ಯಾಸಿಗಳೂ ಆಗುವವರು ಇನ್ನು ಮುಂದೆ ತಮ್ಮ ಹೆಸರನ್ನು ಸರಕಾರದಲ್ಲಿ ರಿಜಿಸ್ಟರುಮಾಡಿಸಿ ಒಂದು ಲೈಸನ್ನು ಪಡೆಯಬೇಕು; ಇಲ್ಲದಿದ್ದರೆ ಅವರಿಗೆ 500 ರೂ. ಗಳವರೆಗಿನ ಜುಲ್ಮಾನೆ ಮತ್ತು ಎರಡು ವರ್ಷಗಳವರೆಗಿನ ಸಜ – ಇವುಗಳನ್ನು ಅನುಭವಿಸುವ ಸಂಭವವಿರುತ್ತದೆ ಎಂಬುದು 1956ನೆಯ ನಂ. 37ನೆಯ, ಬಿಲ್ಲಿನ ಸಾರವು. ಈ ಬಿಲ್ಲಿನಲ್ಲಿರುವ ದೋಷಗಳನ್ನು ಉದ್ಘಾಟಿಸಿ ಶ್ರೀಸ್ವಾಮಿಗಳವರು ಎಂಟು ಪುಟಗಳ 'ಒಂದು ಪತ್ರ, ಪತ್ರಿಕೆಯನ್ನು ಹೊರಡಿಸಿರುತ್ತಾರೆ. ಅವರು ಹೇಳಿರುವದರ ಸಾರನನ್ನ ಈ ಕೆಳಗೆ ಸಂಗ್ರಹಿಸಿ ಕೊಡಲಾಗಿದೆ.

1. ಸಾಧುಗಳು ಎಲ್ಲರನ್ನೂ ಪರಮೇಶ್ವರನ ಮಕ್ಕಳೆಂದು ಭಾವಿಸುವವರು; ತಮ್ಮ ದೇಹಯಾತ್ರೆಗೆ ಕೂಡ ಜನರನ್ನು ವ್ಯಥೆಗೊಳಿಸದೆ ಸಪ್ತಾಗಾರದ ಭಿಕ್ಷವನ್ನು

ಮಾಡುತ್ತಾ ಬ್ರಹ್ಮಚರ್ಯವ್ರತದಿಂದ ಇದ್ದುಕೊಂಡು, ಜನರ ಪೂರ್ಣಜೀವನ ಕ್ಕೊಂದು ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟು ಪ್ರಜಾಸಂಖ್ಯೆಯು ಅತಿಯಾಗಿ ಹೆಚ್ಚದಂತೆ ಮಾಡುತ್ತಾರೆ. ಜನಗಳನ್ನು 'ಜನನಮರಣಪ್ರವಾಹದಿಂದ ತಪ್ಪಿಸುವ ಉಪಾಯವನ್ನು ಬೋಧಿಸುತ್ತಿರುತ್ತಾರೆ. ಇಂಥ ಸಾಧುಗಳು ಹೆಚ್ಚದಂತೆ ಅಡ್ಡಿ ಮಾಡುವದು ಸಮಾಜಕ್ಕೆ ಹಿತಕರವಲ್ಲ; ಹಾಗೆ ಅಡ್ಡಿ ಮಾಡುವದು ಸಮಾಜದ ಸಮಸ್ಯೆಗಳು ಹೆಚ್ಚುವದಕ್ಕೆ ಕಾರಣವಾಗುತ್ತದೆ.

2. ಉತ್ತಮತರದ ಸಾಧುಗಳು ಲೈಸೆನ್ಸಿಗೆಂದು ಮ್ಯಾಜಿಸ್ಟ್ರೇಟರ ಮುಂದೆ ಬಂದು ನಿಲ್ಲಲಾರರು. ಮ್ಯಾಜಿಸ್ಟ್ರೇಟರಿಗೆಲ್ಲ ನಿಜವಾದ ಸಾಧುಗಳು ಯಾರೆಂಬುದನ್ನು ನಿರ್ಣಯಿಸುವ ಯೋಗ್ಯತೆ ಯಾವಾಗಲೂ ಇರುವದೆಂದು ಹೇಳುವದಕ್ಕೆ ಬರುವದಿಲ್ಲ.

3. ತಿರುಕರನ್ನೆಲ್ಲ ಸಾಧುಗಳೆಂದೆಣಿಸಿದರೆ ಸುಮಾರು 50 ಲಕ್ಷ ಸಾಧುಗಳಾಗುವರು. ಇವರ ಚಲನವಲನಗಳನ್ನು ವ್ಯವಸ್ಥೆಯಲ್ಲಿಡುವದಕ್ಕೆ ಪೋಲೀಸರು,ಮ್ಯಾಜಿಸ್ಟ್ರೇಟರು, ಮಂತ್ರಿಗಳು ಇವರುಗಳ ಸಂಖ್ಯೆಯನ್ನು ಹೆಚ್ಚಿಸ ಬೇಕಾಗುವದು. ಸರಕಾರದ ವೆಚ್ಚವು ಹೆಚ್ಚುವದು, ಸಾಧುಗಳಿಂದ ಯಾವ ಹಣವೂ ದೊರೆಯಲಾರದು; ಅದಕ್ಕಾಗಿ ಕಂದಾಯಗಳನ್ನು ಹೆಚ್ಚಿಸಬೇಕಾಗುವದು.

4. ಕೌಪೀನ ಮಾತ್ರಧಾರಿಗಳಾದ ಅಥವಾ ದಿಗಂಬರರಾಗಿರುವ ಸಾಧುಗಳು ಸರ್ಟಿಫಿಕೇಟನ್ನು ಇಟ್ಟು ಕೊಳ್ಳುವದಕ್ಕೆ ಆಗುವದಿಲ್ಲ. ಶಾಸ್ತ್ರವಿರುದ್ಧವಾಗಿ ತಮ್ಮ ಪೂರ್ವಾಶ್ರಮದ ಹೆಸರು, ಸ್ಥಳ, ಮುಂತಾದವುಗಳನ್ನು ತಿಳಿಸಬೇಕೆಂದು ಅವರನ್ನು ನಿರ್ಬಂಧಿಸಿದಂತೆ ಆಗುವದು.

5. ಭಾರತದ ಸಾಧುಗಳೆಂಬವರು ದೇಶಕ್ಕೊಂದು ಆಸ್ತಿಯಾಗಿರುತ್ತಾರೆ. ಅವರನ್ನು ಸಾಮಾನ್ಯ ಸಂಸ್ಕೃತಿಯ ಪೋಲೀಸರಿಂದ ಅರೆಸ್ಟ್ ಮಾಡಿಸುವದೆಂಬುದೇ ನಮಗೆ ಅಪಮಾನಕರ, ಸಾಂಸಾರಿಕ ಜೀವನಕ್ರಮವನ್ನು ವ್ಯವಸ್ಥೆಗೊಳಿಸಿದರೆ ಉತ್ತಮ ಸಾಧುಗಳು ದೊರೆತೇದೊರೆಯುವರು. ಈಗಿನ ಗೃಹಸ್ಥರ ಜೀವನಕ್ರಮವು ಆಹಾರವಿಹಾರಾದಿಗಳಲ್ಲಿ ಬಹಳ ಅವ್ಯವಸ್ಥಿತವಾಗಿದೆಯೆಂಬುದನ್ನು ಮೊದಲು ಲಕ್ಷಕ್ಕೆ ತಂದುಕೊಳ್ಳಬೇಕು; ಅದರಿಂದ ಜನಸಂಖ್ಯೆಯೂ ಹೆಚ್ಚುತ್ತಿದೆ.

6. ಸರಕಾರವು ವಿದ್ಯಾಲಯಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸವನ್ನು ತೆಗೆದು ಹಾಕಿಬಿಟ್ಟಿದೆ. ಸಾಧುಗಳೇ ಜನರಿಗೆ ಆ ವಿದ್ಯೆಯನ್ನು ಕೊಡುತ್ತಿದ್ದಾರೆ; ಅವರ ಮೇಲೂ ನಿರ್ಬಂಧಗಳನ್ನು ಹೊರಿಸಿದರೆ ದೇಶವು ಈಶಭಕ್ತಿರಹಿತವಾಗುವದು.

7. ಸಾಧುಗಳಿಗೆ ಕೂಡಿಡುವದಕ್ಕೆ ಸಂಪಾದನೆಯ ಹಣವಿರುವದಿಲ್ಲ. ಇದರಿಂದ ಅವರು ಜುಲ್ಮಾನೆಯನ್ನು ಕೊಡುವಹಾಗಿಲ್ಲ. ಅವರನ್ನು ಬಂದೀಖಾನೆಯಲ್ಲಿಟ್ಟರೆ ನೀಚಸ್ವಭಾವದವರೊಡನೆ ಅವರನ್ನಿಟ್ಟಂತೆ ಆಗುವದು. ಇದರಿಂದ ಸಾಧುಗಳನ್ನು ತಿದ್ದಿದಂತೆ ಆಗುವದಿಲ್ಲ; ಸಮಾಜಕ್ಕೆ ಉಪಕಾರವೂ ಇಲ್ಲ.

8. ಈಗಿನ ವಿದ್ಯಾರ್ಥಿಗಳು, ಕೆಲವರು ಉಪಾಧ್ಯಾಯರುಗಳು ಕೂಡ, ಪುರುಷಾರ್ಥಗಳ ಗುರಿಯಿಲ್ಲದವರಾಗಿ ಅನೀತಿಗೆ ತುತ್ತಾಗುವರಾಗಿರುತ್ತಾರೆ. ಇದಕ್ಕೇನಾದರೂ ನಿಯಮನವು ಅತ್ಯವಶ್ಯವಾಗಿದೆ. ಸಾಧುಗಳಿಗೆ ನಿಯಮನವೇನೂ ಬೇಡ, ಅವರೇ ಮಾರ್ಗದರ್ಶಕರು.

9. ಈಗ್ಗೆ ಕಾನೂನುಗಳೂ ತೆರಿಗೆಗಳೂ ಹೆಚ್ಚುತ್ತಲೇ ಇರುತ್ತವೆ. ಭಾರತದ ಆಧ್ಯಾತ್ಮಿಕ ಸಂಪತ್ತನ್ನು ಕಾದಿಟ್ಟುಕೊಳ್ಳುವದಕ್ಕೆ ಪ್ರಯತ್ನವು ನಡೆಯಬೇಕಾದದ್ದು ಅತ್ಯವಶ್ಯವಾಗಿರುತ್ತದೆ. ಆದ್ದರಿಂದ ಉತ್ತಮಸಾಧುಗಳಿಗೆ ಪ್ರೋತ್ಸಾಹವನ್ನು ಮಾಡತಕ್ಕದ್ದು ಅವಶ್ಯ.

★★★★★

# ಸಾಧುಗಳೇನು ಮಾಡಬೇಕು, ಸಾಧುಗಳನ್ನೇನು ಮಾಡಬೇಕು?

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಭಾರತವು ಅನಾದಿಕಾಲದಿಂದಲೂ ಸಾಧುಸಂತರ ನಾಡು, ವರ್ಣಾಶ್ರಮ ಪದ್ಧತಿಯ ಸಮಾಜದ ಗೂಡು, ಸುಖಶಾಂತಿಗಳ ಬೀಡು ಎಂದು ಪ್ರಸಿದ್ಧವಾಗಿದ್ದ ದೇಶ. ಯುಗಪರಿವರ್ತನೆಯ ವಶದಿಂದ ಇಲ್ಲಿ ಈಗ ಹೆಚ್ಚಿನ ಪರಿಮಾಣದಲ್ಲಿ ಮಾರ್ಪಾಡುಗಳು ಆಗಿಬಿಟ್ಟಿವೆ. ಈಗ ನಮಗೆ ಸಾಧುಗಳ ಆವಶ್ಯಕತೆಯೇನೂ

ಅಷ್ಟಾಗಿ ತೋರುತ್ತಿಲ್ಲ; ವರ್ಣಾಶ್ರಮದ ಕ್ರಮದ ಸಮಾಜಪದ್ಧತಿಯು ಚಿಕ್ಕ ಮಕ್ಕಳಿಗೆ ಅಲಂಕಾರಕ್ಕಾಗಿ ಹೊಲೆಯಿಸಿದ್ದ ಸಣ್ಣ ಅಂಗಿಯು ಅವರು ದೊಡ್ಡವರಾದ ಮೇಲೆ ನಿರುಪಯೋಗವಾಗುವಂತೆ ಅದು ಹಳೆಯ ಕಾಲಕ್ಕೆ ಸೇರಿದ್ದಾಗಿ ಜನರ ಮುನ್ನಡೆಗೆ ಅಡ್ಡಿಯಾಗುವ ಕಾಲೊಡಕಾಗಿಬಿಟ್ಟಿರುವಂತೆ ಅನೇಕರಿಗೆ ಕಾಣಿಸುತ್ತಿದೆ; ಹಿಂದಿನವರ ಆ ಸುಖಶಾಂತಿಗಳ ಧ್ಯೆಯವು ನಮಗೆ ಹಗಲುಗನವರಿಕೆಯಾಗಿ ಭಾಸವಾಗುತ್ತಿದೆ!

ಈಗ್ಗೆ ಸಾಧುಗಳಾಗಲಿ ಸಂನ್ಯಾಸಿಗಳಾಗಲಿ ಯೋಗಿಗಳಾಗಲಿ ನಮಗೆ ಬೇಕಿಲ್ಲವೆಂಬುದಿಷ್ಟೇ ಅಲ್ಲ. ಈಗ್ಗೆ ಸಾಧುಗಳ ಮತ್ತು ಸಂನ್ಯಾಸಿಗಳ ಸಂಖ್ಯೆ ದಿನದಿನಕ್ಕೂ ಹೆಚ್ಚುತ್ತಲಿದೆ. ಮಹಾತ್ಮರ ಆಶ್ರಮವಿಶೇಷಕ್ಕೆ ಸೇರಿದ ವೇಷವನ್ನು ಧರಿಸಿ ಅವರಲ್ಲನೇಕರು ದುರಾಚಾರಗಳಲ್ಲಿಯೂ ಭಿಕ್ಷಾಟನೆಯಲ್ಲಿಯೂ ಸಮಾಜವಿರುದ್ಧವಾದ ಇನ್ನೂ ಇತರ ಕೃತ್ಯಗಳಲ್ಲಿಯೂ ರತರಾಗುತ್ತಿರುತ್ತಾರೆ. ಇದು ಅನಿಷ್ಟವಾದದ್ದು, ಇದಕ್ಕೆ ತಡೆಹಾಕದಿದ್ದರೆ ಅಪರಾಧದ ಹಬ್ಬುಗೆಯು ಸ್ವಲ್ಪವೂ ಕುಗ್ಗದೆ ಹೆಚ್ಚುವದಕ್ಕೆ ಅವಕಾಶವನ್ನು ಕೊಟ್ಟಂತೆ ಆದೀತು ಎಂದು ಈಗ ಪರಿಗಣಿಸಲಾಗಿದೆ! ಈ ಕಾರಣದಿಂದ ಸಾಧುಗಳ ಕರಾರುವಾಕ ಸಂಖ್ಯೆಯನ್ನು ಗೊತ್ತುಪಡಿಸುವದಕ್ಕೆ ಅನುಕೂಲಿಸುವಂತೆ ಇಡಿಯ ಭರತಖಂಡದ ರಿಜಿಸ್ಟ ರೊಂದನ್ನು ಇಡಿಸುವದಕ್ಕೆ ಅನುಕೂಲಿಸುವಂತೆ ಒಂದು ಕಾನೂನು ಅವಶ್ಯವೆಂದು ಒಂದು ಶಾಸನದ ಮಸೂದೆಯನ್ನು (Bill) ಲೋಕಸಭೆಯ ಮುಂದೆ ಇಡಲಾಗಿದೆ. ಈ ಶಾಸನವು ಆಚರಣೆಗೆ ಬಂದರೆ ಹಿಂದುಗಳ ಯಾವ ಪಂಗಡಕ್ಕೆ ಸೇರಿದ ಸಾಧುಸಂನ್ಯಾಸಿಗಳಾಗಲಿ ತಮ್ಮ ಹೆಸರನ್ನು ಆಯಾ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಲ್ಲಿ ರಿಜಿಸ್ಟರ್ ಮಾಡಿಸಿ ಲೈಸನ್ನು ಪಡೆದ ಹೊರತು ಸಾಧುಗಳೆಂದೂ, ಸಂನ್ಯಾಸಿಗಳೆಂದೂ ಎಂದುಕೊಳ್ಳಬಾರದಾಗುವದು; ಈ ಕಾನೂನನ್ನು ಉಲ್ಲಂಘಿಸುವವರಿಗೆ ಐನೂರುರೂಪಾಯಿಗಳ ಜುಲ್ಮಾನೆ, ಎರಡು ವರ್ಷಗಳ ಕಠಿನ ಸಜ, ಅಥವಾ ಈ ಎರಡೂ ಸೇರಿದ ದಂಡವನ್ನು ವಿಧಿಸಲಾಗುವದು. ಈ ಶಾಸನದ ಕರಡಿನಲ್ಲಿರುವ ದೋಷಗಳನ್ನು ಉದ್ಘಾಟಿಸಿ ವಲಾದ್ ವೇದಾಂತಾಶ್ರಮದ ಶ್ರೀ ಸ್ವಾಮಿ ಮಾಧವ ತೀರ್ಥರು ಬರೆದಿರುವದರ ಸಾರವನ್ನು ಹಿಂದೆ ಸಂಗ್ರಹಿಸಿ ಪ್ರಕಟಿಸಲಾಗಿದೆ. ಈ ಲೇಖನದಲ್ಲಿ ನಾನು ಆ ವಿಷಯಕ್ಕೆ ಮತ್ತೊಂದು ದೃಷ್ಟಿಕೋಣವನ್ನು ಅನುಸರಿಸಿರುತ್ತೇನೆ. ಸಾಧುವೆಂದರೇನು? ಪರೋಪಕಾರವನ್ನು ಮಾಡುವವನು ಸಾಧು ಎಂದು ವ್ಯಾಕರಣದಲ್ಲಿ ವ್ಯುತ್ಪತ್ತಿಯನ್ನು ಹೇಳಿರುತ್ತಾರೆ. ಸಂನ್ಯಾಸಿಯೆಂದರೆ?

ಆಶೆಯನ್ನೆಲ್ಲ ತೊರೆದು ಪರಮಾತ್ಮನ ಅನುಸಂಧಾನದಲ್ಲಿಯೇ ಇರುವವನು. ಪರಮಾತ್ಮನು ಎಲ್ಲಾ ಪ್ರಾಣಿಗಳಿಗೂ ಆತ್ಮನಾಗಿರುವದರಿಂದ ಪರಮೇಶ್ವರನಲ್ಲಿ ಅಚಲಭಕ್ತಿಯಿರುವಸಂನ್ಯಾಸಿಗಳೂ ಒಂದು ದೃಷ್ಟಿಯಿಂದಸಾಧುಗಳೇ ಆಗಿರುತ್ತಾರೆ. ಹಿಂದಿನ ವರ್ಣಾಶ್ರಮಾಚಾರಪದ್ಧತಿಯ ಸಮಾಜದಲ್ಲಿ ಸಾಧುತ್ವವನ್ನು ಸಂಪಾದಿಸುವದೇ ಮಾನವನ ಗುರಿಯೆಂಬುದನ್ನು ಲಕ್ಷ್ಯದಲ್ಲಿಟ್ಟಿತ್ತು. ಜೀವನಕ್ಕೆ ಆದಷ್ಟು ಕಡಿಮೆಯಾಗಿ ಉಪಯೋಗಿಸಿಕೊಂಡು ಸಮಾಜಕ್ಕೆಲ್ಲ ಒಳ್ಳೆಯದನ್ನೇ ಹಾರೈಸುತ್ತಾ, ಕಾಯಿಕವಾಚಿಕಮಾನಸ ಪ್ರಯತ್ನಗಳಿಂದ ಕೂಡಿದ ಮಟ್ಟಿಗೂ ಪರೋಪಕಾರವನ್ನು ಬಯಸುವದೇ ವರ್ಣಾಶ್ರಮಪದ್ಧತಿಯ ತಿರುಳು. ಆ ಪದ್ಧತಿಯಲ್ಲಿ ಬ್ರಾಹ್ಮಣನು ವರ್ಣಗಳಲ್ಲೆಲ್ಲ ಹಿರಿಯನು; ಸಂನ್ಯಾಸಿಯು ಆಶ್ರಮಗಳಲ್ಲೆಲ್ಲ ಹಿರಿಯನು. ಹಿಂದಿನವರ ಗುರಿಯನ್ನು ಒಂದು ವಾಕ್ಯದಲ್ಲಿ ಸಂಗ್ರಹಿಸಿ ಹೇಳಬೇಕಾದರೆ ಈ ವಾಸಿಷ್ಠವಾಕ್ಯವನ್ನು ಉದಾಹರಿಸಬಹುದಾಗುವದು:

**ಅನನ್ತಂ ಸಮತಾನನ್ದಂ ಪರಮಾರ್ಥಂ ವಿದುರ್ಬುಧಾಃ ।**
**ಸ ಯೇಭ್ಯಃ ಪ್ರಾಪ್ಯತೇ ನಿತ್ಯಂ ತೇ ಸೇವ್ಯಾ ಶಾಸ್ತ್ರಸಾಧವಃ ॥**

ಅನಂತವಾದ ಏರುಪೇರುಗಳಿಲ್ಲದ ಆನಂದವೇ ಪರಮಾರ್ಥವೆಂದು ಬಲ್ಲವರು ಎಣಿಸಿರುವರು. ಆ ಆನಂದವು ಯಾರಿಂದ ಸಿಕ್ಕುವದೋ ಅಂಥ ಶಾಸ್ತ್ರಗಳನ್ನೂ ಸಾಧುಗಳನ್ನೂ ಸೇವಿಸಬೇಕು – ಎಂಬುದು ಶ್ಲೋಕದ ಅಭಿಪ್ರಾಯ. ಯಾನ ಜನಾಂಗದಲ್ಲಿ ಇಂಥ ಶಾಸ್ತ್ರಗಳಿಗೂ ಸಾಧುಗಳಿಗೂ ಪೂಜ್ಯತೆಯು ಇರುವದೋ ಅಂಥ ಜನಾಂಗವು ಎಲ್ಲಾ ಬಗೆಯಿಂದಲೂ ಮೇಲಿನ ಮಟ್ಟದಲ್ಲಿರುವದೆಂಬುದಕ್ಕೆ ಸಂಶಯವೇನು?

ಈಗ್ಗೆ ನಮ್ಮ ದೌರ್ಭಾಗ್ಯದಿಂದ ಭೂಮಂಡಲದಲ್ಲಿ 'ಅಭ್ಯುದಯ' (ಏಳಿಗೆ, ಅಭಿವೃದ್ಧಿ) ಎಂಬ ಶಬ್ದಕ್ಕೆ ಬಹಳ ಸಂಕುಚಿತವಾದ ಅರ್ಥವನ್ನು ಕೊಡಲಾಗಿದೆ. ಬಾಹ್ಯಭೋಗಸಾಮಗ್ರಿಗಳನ್ನು ಹೆಚ್ಚಿಸಿಕೊಳ್ಳುವದು, ಅದಷ್ಟು ಜನರಿಗೂ ಹೆಚ್ಚಿನ ಅಂತಸ್ತಿನ ಭೋಗಜೀವನವನ್ನು ಕಲ್ಪಿಸಿಕೊಡುವದು – ಇದೇ ಅಭ್ಯುದಯವು ಎಂಬುದು ಈಗಿನವರ ಅಭಿಪ್ರಾಯ. ಭೂಮಂಡಲದಲ್ಲಿರುವ ಜನರು ತಮ್ಮ ಧನಜನಬಲಗಳನ್ನು ದುರುಪಯೋಗಮಾಡಿಕೊಳ್ಳುವದು, ಒಂದು ಜನತೆಯವರು ಮತ್ತೊಂದು ದುರ್ಬಲವಾದ ಜನತೆಯನ್ನು ತುಳಿದಿಟ್ಟು ಅವರನ್ನು ಎಲ್ಲಾ ಬಗೆ

ಯಿಂದಲೂ ಸುಲಿಗೆ ಮಾಡಿ, ಸುಖಿಸುವದಕ್ಕೆ ಪ್ರಯತ್ನಿಸುವದು. ಈ ಕ್ರಮವು ಭೂಲೋಕದಲ್ಲಿ ಹೆಚ್ಚಾಗಿತ್ತು. ಈಗ ಎಲ್ಲಾ ಜನಾಂಗಗಳೂ ಎಚ್ಚೆತ್ತಿರುವದರಿಂದ ಮೇಲುಮಟ್ಟದ ಭೋಗಜೀವನದವರನ್ನು ಕೆಳಗಿನ ಅಂತಸ್ತಿನವರು ನಯ ಭಯಗಳಿಂದ ಹತೋಟಿಗೆ ತಂದಿಟ್ಟುಕೊಂಡಿರುತ್ತಾರೆ; ಭೂಲೋಕವೆಲ್ಲ ಪರಸ್ಪರ ಯೋಗಕ್ಷೇಮಗಳನ್ನು ತಿಳಿದುಕೊಳ್ಳುವಂತೆ ಸೌಕರ್ಯಗಳನ್ನು ಕಲ್ಪಿಸಿಕೊಂಡಿರುತ್ತಾರೆ. ಇದೇ ಹೆಚ್ಚಿನ ಅಭ್ಯುದಯ ಎಂದು ಈಗ ಅನೇಕರ ಭಾವನೆಯಾಗಿ ಬಿಟ್ಟಿರುತ್ತದೆ. ಆದರೆ ಧರ್ಮನೀತಿಗಳಿಗೆ ವಿರುದ್ಧವಲ್ಲದ ರೀತಿಯಿಂದಲೇ ಜೀವನಕ್ಕೆ ಬೇಕಾದ ಸುಖಶಾಂತಿಗಳನ್ನು ಸಂಪಾದಿಸಿಕೊಳ್ಳಬೇಕೆಂಬುದೂ ಈಶ್ವರಭಕ್ತಿಯಿಂದ ಸತ್ಯ, ಮೈತ್ರಿ, ಕರುಣಾ, ಪ್ರಕೃತಿಸೌಂದರ್ಯದ ಉಪಾಸನೆ – ಮುಂತಾದವುಗಳನ್ನು ಸಂಪಾದಿಸಿಕೊಂಡು, ಕಾಮಕ್ರೋಧಭಯಾದಿಗಳನ್ನು ಹಿಡಿತದಲ್ಲಿಟ್ಟುಕೊಂಡು, ಸಮತಾನಂದವನ್ನು ಪಡೆದುಕೊಳ್ಳುವದೇ ಜೀವನದ ಹೆಗ್ಗುರಿ – ಎಂಬ ಅರ್ಥವನ್ನು ಅಭ್ಯುದಯಕ್ಕೆ ಇಟ್ಟಿದ್ದ ಹಿಂದಿನವರ ದೃಷ್ಟಿಯಿಂದ ನೋಡಿದಾಗ ನಾವು ಸರ್ವಥಾ ಮುನ್ನಡೆದಿಲ್ಲ. ಹಿಂದಕ್ಕೆ ಬಿದ್ದಿದ್ದೇವೆ ಎಂಬುದು ಸ್ಪಷ್ಟವಾಗುತ್ತದೆ.

ಇಂಥ ಸಂದಿಗ್ಧ ಸಮಯದಲ್ಲಿ ಸಾಧುಗಳು ಏನುಮಾಡಬೇಕು? ಸಾಧುಗಳನ್ನು ಏನುಮಾಡಬೇಕು ?– ಎಂಬ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳುವದು ತುಂಬ ಪ್ರಯೋಜನಕರವಾಗಿರುತ್ತದೆ ಎಂಬುದರಲ್ಲಿ ಸಂಶಯವಿಲ್ಲ.

ಸಾಧುಗಳೂ ಸಂನ್ಯಾಸಿಗಳೂ ಸ್ವಾರ್ಥವನ್ನು ಸಂಪೂರ್ಣವಾಗಿ ತೊಲಗಿಸಿಕೊಂಡಿರುತ್ತಾರೆ. ಸಂನ್ಯಾಸಿಗಳಲ್ಲಿ ತೀರ ಮೇಲುಮಟ್ಟವನ್ನು ಏರಿರುವವರು ಪುತ್ರೈಷಣೆ, ವಿತ್ತೈಷಣೆ, ಲೋಕೈಷಣೆ – ಎಂಬ ಏಷಣಾತ್ರಯವನ್ನು ಮೀರಿರುತ್ತಾರೆ. ಅಂಥ ಮಹಾತ್ಮರು ಪ್ರಕೃತದಲ್ಲಿ ಸರಕಾರದವರು ವಿಮರ್ಶಿಸುತ್ತಿರುವಂಥ ಸಾಧುಸಂನ್ಯಾಸಿಗಳ ರಿಜಿಸ್ಟ್ರೇಶನ್ ಲೈಸನ್ಸ್ ಕಾನೂನಿನ ವಿಷಯಕ್ಕೆ ಏನುಮಾಡಬೇಕು?– ಎಂಬುದನ್ನು ಹೇಳುವದಕ್ಕೆ ಯಾರೂ ಅಧಿಕಾರಿಗಳೇ ಅಲ್ಲ. ಏಕೆಂದರೆ ನಿಜವಾಗಿಯೂ ಈ ಅಂತಸ್ತನ್ನು ಮುಟ್ಟಿರುವ ಮಹಾತ್ಮರಿಗೆ ಪರಮಾತ್ಮನೊಬ್ಬನಲ್ಲದೆ ಮತ್ತೆ ಬೇರೆ ಯಾವದೂ ಕಾಣಿಸುವದೇ ಇಲ್ಲ. ಅವರಿಗೆ ತಮ್ಮದೆಂಬ ವಿತ್ತವಿರುವದಿಲ್ಲ, ತಮ್ಮವರೆಂಬ ಪತ್ನಿಪುತ್ರಾದಿಗಳಿರುವದಿಲ್ಲ, ತಾವು ಪಡೆದುಕೊಳ್ಳಬೇಕಾಗಿರುವ ಫಲವೂ ಇರುವದಿಲ್ಲ. ಅವರು ಖ್ಯಾತಿಲಾಭಪೂಜಾದಿಗಳನ್ನು ಮೀರಿರುವ ಭಗವತ್ಸ್ವರೂಪರೇ ಆಗಿರುತ್ತಾರೆ. ಈ

ಕಾನೂನಿನಿಂದ ಅವರಿಗೆ ಅಂಜಿಕೆಯಾಗಲಾರದು. ಅವರು ಸರಕಾರಕ್ಕೆ ಅಥವಾ ಜನರಿಗೆ ಈ ವಿಷಯದಲ್ಲಿ ಯಾವ ಬುದ್ಧಿವಾದವನ್ನು ಹೇಳಿವದಕ್ಕೂ ಹೋಗಲಾರದು. ಅವಿವೇಕಿಗಳಾದವರು ಅವರ ಬಾಹ್ಯಶರೀರವನ್ನು ಈ ಕಾನೂನಿನ ನಿರ್ಬಂಧಕ್ಕೆ ಒಳಪಡಿಸಿದರೆ ಅವರಿಗೆ ಯಾವ ಅಪಾಯವೂ ಆಗುವಂತಿಲ್ಲ. ಅವರಿಗೆ **'ವ್ಯುತ್ಥಾಯಾಥ ಭಿಕ್ಷಾಚರ್ಯಂ ಚರನ್ತಿ'** (ಎಲ್ಲವನ್ನೂ ಸಂನ್ಯಾಸಮಾಡಿ ಭಿಕ್ಷಾಚರ್ಯೆಯನ್ನು ಮಾಡಬೇಕು) ಎಂಬ ವಿಧಿಯು ಕೂಡ ಏನೂ ಮಾಡಲಾರದು. ಹಸಿವುಬಾಯಾರಿಕೆ, ಮುಪ್ಪುಸಾವು, ಶೋಕಮೋಹ – ಮುಂತಾದ ಸಂಸಾರಧರ್ಮಗಳೆಲ್ಲವನ್ನೂ ಮೀರಿರುವ ಪರಮಾತ್ಮನಲ್ಲಿ ನೆಲೆನಿಂತಿರುವ ಅವರನ್ನು ಯಾವ ಶಾಸನವು ತಾನೆ ಏನುಮಾಡೀತು? ಅವರಿಗೆ ತೊಂದರೆ ಮಾಡುವವರಿಗೆ ಅದರಿಂದಾಗುವ ಅನಿಷ್ಟಫಲವುಮಾತ್ರ ತಪ್ಪಿದ್ದಲ್ಲ. ಅಷ್ಟೆ.

ಆದರೆ ಈ ಉಚ್ಚಭೂಮಿಕೆಯನ್ನು ಏರಿದ್ದರೂ ಪರಮಹಂಸಸಂನ್ಯಾಸಿಗಳಾಗಿ ಅಥವಾ ಪರಮಾತ್ಮನ ಪರಭಕ್ತಿಯಲ್ಲಿ ಮಗ್ನರಾಗಿ ಲೋಕೋಪಕಾರವನ್ನೇ ಸಾಧಿಸುತ್ತಿರುವ, ಲೋಕಕಲ್ಯಾಣಕ್ಕೆ ಉಪಾಯಗಳನ್ನೇ ಹುಡುಕಿತೋರಿಸಿ ಅನುಗ್ರಹಿಸುತ್ತಿರುವ, ಸಾಧುಗಳು ಈ ಸಂದರ್ಭದಲ್ಲಿ ಹೇಗೆನಡೆದುಕೊಳ್ಳಬೇಕು? ಜನರ ಆಚಾರವಿಚಾರಗಳನ್ನು ಮೇಲುವಿಚಾರಣೆಮಾಡುತ್ತಾ ಜನರನ್ನು ಸರಿಯಾದ ಹಾದಿಯಲ್ಲಿ ನಡೆಯಿಸುವ ಹೊಣೆಯನ್ನು ಹೊತ್ತಿರುವ ಮಠಾದಿಪತಿಗಳು, ಮಂಡಲೇಶ್ವರರು, ಆಶ್ರಮಾಧಿಅಷ್ಠಿಗಳು – ಮುಂತಾದ ಸಾಧುಗಳು ಈಗ ಏನುಮಾಡುವದು ಅವಶ್ಯವಾಗಿದೆ? ಅವರ ವಿಷಯದಲ್ಲಿ ಮಹಾಜನರೂ ಸರಕಾರದವರೂ ಏನುಮಾಡುವದು ಅವಷ್ಯವಾಗಿದೆ? ಪ್ರಕೃತಶಾಸನದಲ್ಲಿ ಒಕ್ಕಣಿಸಿರುವ ದೋಷಗಳು ನಮ್ಮ ಸಮಾಜದಲ್ಲಿ ಪರಿಹೃತವಾಗಬೇಕಾದರೆ ಸಾಧುಗಳು ಯಾವ ಪ್ರಯತ್ನವನ್ನು ಕೈಗೊಳ್ಳಬಹುದು? – ಎಂಬ ಪ್ರಶ್ನೆಯು ಅವಷ್ಯವಿಚಾರಣೀಯವಾಗಿದೆ. ಧರ್ಮಮಾರ್ಗವನ್ನು ತಾವೂ ಅನುಷ್ಠಿಸುತಾ ಜನರನ್ನು ಸರಿಯಾದ ದಾರಿಯಲ್ಲಿ ನಡೆಯುವಂತೆ ತಮ್ಮ ಪ್ರಭಾವವನ್ನು ಅವರಮೇಲೆ ಹಾಕುತ್ತಾ ನಡೆಯುವದೇ ಸಾಧುಗಳ ಸ್ವಭಾವವು. ಹೀಗಿರುವದರಿಂದ ಈಗಿನ ಸಾಧುಮಂಡಲದಲ್ಲಿ ಅವಶ್ಯವಾದ ಸುಧಾರಣೆಯನ್ನು ಮಾಡಿ ಸರಕಾರದವರಿಗೂ ಮಹಾಜನರಿಗೂ ಉಪಯುಕ್ತವಾದ ಸೂಚನೆಗಳನ್ನು ಕೊಡುವದಕ್ಕೆ ರಾಷ್ಟ್ರಕ್ಕೆ ಆದರ್ಶಪ್ರಾಯರಾಗಿರುವ ಸಾಧುಗಳು ಏನುಮಾಡಬೇಕು ಎಂಬುದನ್ನು ಮೊದಲು ವಿಚಾರಕ್ಕೆ ತೆಗೆದುಕೊಳ್ಳಬೇಕಾಗಿದೆ.

ಸಾಧುಸಂನ್ಯಾಸಿಗಳ ಸೋಗಿನಿಂದ ಅನೇಕರು 'ದುರಾಚಾರಗಳಲ್ಲಿಯೂ ಭಿಕ್ಷಾಟನೆಯಲ್ಲಿಯೂ ಸಮಾಜಜೀವನಕ್ಕೆ ವಿರುದ್ಧವಾದ ಇತರ ಕೃತ್ಯಗಳಲ್ಲಿಯೂ ರತರಾಗುತ್ತಿದ್ದಾರೆ' ಎಂದು ನಂ, 37ನೆಯ ಬಿಲ್ಲಿನಲ್ಲಿ ಹೇಳಲಾಗಿದೆ. ಅದರಲ್ಲಿರುವ ಆಪಾದನೆಗಳಿಗೆ ಆಧಾರವೇ ಇಲ್ಲವೆನ್ನುವದಕ್ಕಿಲ್ಲ. ನಾನು ಕಂಡಹಾಗೆ ನೂರಾರು ಜನರು ಸಾಧುವೇಷದವರು - ಗಡ್ಡ, ಪಾದುಕೆ ಮುಂತಾದ ವೇಷದಿಂದ ಮಾತ್ರವೇ ಸಾಧುಗಳಾಗಿರುವವರು - ದೇಶದಲ್ಲಿ ಅಲೆದಾಡುತ್ತಿದಾರೆ; ಹಲವರು 'ಬ್ರಹ್ಮಚಾರಿ'ಗಳು ಮದುವೆಯಿಲ್ಲವೆಂಬದಿಷ್ಟೇ ಕಾರಣದಿಂದ ಬ್ರಹ್ಮಚಾರಿಗಳೆಂದು ಗೌರವಿಸಬೇಕೆಂದು ನಿರೀಕ್ಷಿಸುವವರು- ಕಾಣಬರುತ್ತಿದಾರೆ; ಕೆಲವರು 'ಯೋಗಿ'ಗಳೂ ಸ್ವಲ್ಪ ಪ್ರಾಣಾಯಾಮ, ಒಂದೆರಡು ಆಸನ ಮುಂತಾದ ಕೃತಿಗಳಿಂದಲೇ ಯೋಗಿಗಳೆನಿಸಿಕೊಳ್ಳುವದಕ್ಕೆ ಹವಣಿಸುವವರ ಇರುತ್ತಾರೆ. ಇನ್ನು ಸಂನ್ಯಾಸಿಗಳು - ಕಾವಿ, ದಂಡ, ಕಮಂಡಲು, ಪಾದುಕೆ ಇಷ್ಟು ಮಾತ್ರದಿಂದಲೇ ಚತುರ್ಥಾಶ್ರಮದವರೆಂದೂ ಯತಿಗಳೆಂದೂ ವಿರಕ್ತರೆಂದೂ ಹೇಳಿಕೊಳ್ಳುವವರೂ- ಲೆಕ್ಕವಿಲ್ಲದಷ್ಟು ಕಾಣಬರುತ್ತಿದಾರೆ!

ಈ ದೃಶ್ಯವು ಬಹಳ ಶೋಚನೀಯವಾದದ್ದು; ನಿಜವಾದ ಸಾಧುಸಂನ್ಯಾಸಿಗಳಿಗೆ ಲಾಂಛನವನ್ನು ತರುವಂಥದ್ದು. ಮಠಾಧಿಪತಿಗಳೂ, ಮಂಡಲೇಶ್ವರರೂ, ಆಶ್ರಮಗಳ ಸ್ಥಾಪಕರೂ ಈ ಸಂದರ್ಭದಲ್ಲಿ ಏನುಮಾಡಬೇಕು? ಈ ವಿಷಯದಲ್ಲಿ ನನಗೆ ತೋರುವದೇನೆಂದರೆ ಧರ್ಮಪ್ರಸಾರಣೆಗೆ ಬದ್ಧಕಂಕಣರಾಗಿರುವ ಮಠಾಧಿಪತಿಗಳೇ ಮುಂತಾದವರು ಮೊದಲು ತಮ್ಮ ತಮ್ಮ ಮತಪ್ರವರ್ತಕರಾದ ಆಚಾರ್ಯರುಗಳ, ಅಥವಾ ಸಾಧುಗಳ ಮತ್ತು ಮಹಾತ್ಮರ ಜೀವನಚರಿತ್ರೆಯನ್ನು ಮೊಟ್ಟಮೊದಲು ತಮ್ಮತಮ್ಮ ನಡತೆಯಲ್ಲಿ ಜನರಿಗೆ ಆದರ್ಶಪ್ರಾಯರಾಗಿರುವಂತೆ ತೋರಿಸಿಕೊಡಬೇಕು. ವೈರಾಗ್ಯ, ಜ್ಞಾನ, ಯೋಗ, ತಪಸ್ಸು, ಪರಮಾತ್ಮಭಕ್ತಿ, ಧರ್ಮಪ್ರಿಯತೆ - ಇವುಗಳು ಬರಿಯ ಉಪದೇಶಕ್ಕೆ ಇಟ್ಟು ಕೊಂಡಿರುವ ವಿಷಯಗಳಾಗಬಾರದು ; ಆಯಾ ಧರ್ಮಪೀಠಗಳ ಅಧಿಪತಿಗಳಲ್ಲಿ ಅವು ಮೂರ್ತಿಮಂತವಾಗಿ ಕಾಣಬರ್ೇಕು.

ಎರಡನೆಯದಾಗಿ ಇಂಥ ಪ್ರತಿಯೊಂದು ಸಂಸ್ಥೆಯಲ್ಲಿ ಜನರಿಗೆ ಮೇಲುಪಂಕ್ತಿಯಾಗಿರುವ ಜಪ, ತಪ, ಪೂಜೆ, ಧ್ಯಾನ, ಪಾರಾಯಣ, ಮುಂತಾದವುಗಳನ್ನು ತಪ್ಪದೆ ಅನುಷ್ಠಾನದಲ್ಲಿ ಇಟ್ಟುಕೊಂಡಿರುವ ಸಾಧಕರಿಗೆ ಅವಕಾಶವನ್ನು

ಕಲ್ಪಿಸಿಕೊಡಬೇಕು. ಮಠಗಳಲ್ಲಿಯೂ ಆಶ್ರಮಗಳಲ್ಲಿಯೂ ಪ್ರಸಂಚದ ಪ್ರಲೋಭನಕ್ಕೆ ಒಂದಿಷ್ಟೂ ಎಡೆಗೊಡದೆ ಇರುವ ಕೆಲವು ಅನುಷ್ಠಾನಮಂಟಪಗಳು ಏರ್ಪಡಬೇಕು. ಆ ಸ್ಥಳಗಳನ್ನು ದರ್ಶನಮಾಡುವದೇ ಒಂದು ಬಗೆಯ ತೀರ್ಥಯಾತ್ರೆ ಎಂದು ಜನರು ಭಾವಿಸುವಂಥ ಏರ್ಪಾಡುಗಳನ್ನು ಮಾಡಬೇಕು. ಭಕ್ತಜನರು ಯಾವ ಒತ್ತಾಯವೂ ಇಲ್ಲದೆ ತಾವುತಾವೇ ಬಂದು ವರ್ಷದಲ್ಲಿ ಒಂದಲ್ಲದಿದ್ದರೆ ಒಂದು ಅನುಷ್ಠಾನದಲ್ಲಿ ಭಾಗವನ್ನು ತೆಗೆದುಕೊಳ್ಳುವದಕ್ಕೂ ತಮ್ಮಿಂದಾದ ಸೇವೆಯನ್ನು ಸಲ್ಲಿಸಿ ಅನುಷ್ಠಾನಗಳನ್ನು ನಡೆಯಿಸುವದಕ್ಕೂ ಈ ಏರ್ಪಾಡು ಪ್ರೋತ್ಸಾಹಕವಾಗಿರಬೇಕು.

ಮೂರನೆಯದಾಗಿ ಪ್ರತಿಯೊಂದು ಸಾಧುಸಂನ್ಯಾಸಿಗಳ ಸಂಸ್ಥೆಯೂ ತಮ್ಮ ಪ್ರಭಾವಕ್ಕೆ ಒಳಗಾಗಿರುವ ಪ್ರದೇಶಗಳಲ್ಲಿ ಉಪದೇಶಗಳು, ಪುರಾಣಶ್ರವಣಗಳು, ಕೀರ್ತನೆಗಳು, ಅಥವಾ ಜಪತಪಾದ್ಯನುಷ್ಠಾನಗಳು – ಇವನ್ನು ಏರ್ಪಡಿಸಿ ಜನರನ್ನು ಅಧ್ಯಾತ್ಮದ ಕಡೆಗೆ ತಿರುಗಿಸುವದಕ್ಕೆ ತಕ್ಕ ಪ್ರಚಾರಕರನ್ನು ಕಳುಹಿಸಬೇಕು. ಹಿಂದಿನ ಪರಮಹಂಸರುಗಳೂ ಸಾಧುಗಳೂ ದೇಶದ ಬೇರೆ ಬೇರೆಯ ಭಾಗಗಳಲ್ಲಿ ಎಡೆಬಿಡದೆ ಸಂಚರಿಸುತ್ತಾ ತಮ್ಮ ನಡೆನುಡಿಗಳಿಂದ ಜನರಲ್ಲಿ ಧರ್ಮಜಾಗೃತಿಯನ್ನು ತಪ್ಪದೆ ಮಾಡುತ್ತಿದ್ದರು. ಈಗ್ಗೆ ಈ ಬಗೆಯ ಸತ್ಕಾರ್ಯವು ಬರುಬರುತ್ತಾ ಕಡಿಮೆಯಾಗುತ್ತಿದೆ.

ನಾಲ್ಕನೆಯದಾಗಿ ವಿನೀತರಾದ ಅಧ್ಯಾತ್ಮವಿದ್ಯಾಪ್ರಚಾರಕರನ್ನು ಸಜ್ಜು ಗೊಳಿಸುವ ವಿದ್ಯಾಶಾಲೆಗಳನ್ನು ಈ ಸಂಸ್ಥೆಗಳು ಏರ್ಪಡಿಸಿಕೊಳ್ಳಬೇಕು. ಆ ವಿದ್ಯಾ ಲಯಗಳಲ್ಲಿ ಆಚಾರವಂತರೂ ವಿನಯವಂತರೂ ಆದ ವಿದ್ಯಾರ್ಥಿಗಳಿಗೆ ಯಾವ ವೇತನವೂ ಇಲ್ಲದೆ ಅಶನವಸನಾದಿಗಳಿಗೆ ಏರ್ಪಾಡು ಮಾಡಿ ಅವರಿಗೆ ಸಂಸ್ಕೃತಾದಿ ಭಾಷೆಗಳಲ್ಲಿ ಅಡಗಿರುವ ಅಧ್ಯಾತ್ಮಗ್ರಂಥಗಳ ಪರಿಚಯವನ್ನು ಮಾಡಿಕೊಟ್ಟು ಸಾಧನಗಳ ಮರ್ಮಗಳನ್ನು ಹೇಳಿಕೊಡಬೇಕು. ಅಲ್ಲಿ ವಿನಯಾಧಾನಕ್ಕೆ ಸಿಕ್ಕುವ ವಿದ್ಯಾರ್ಥಿಗಳು ಬರಿಯ ಬುದ್ಧಿ ಕುಶಲತೆಯಲ್ಲಿಯೇ ಅಲ್ಲದೆ, ಧರ್ಮಜ್ಞಾನವೈರಾಗ್ಯಾದಿಗಳಲ್ಲಿಯೂ ನಿರತರಾಗುವಂತೆ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು.

ಐದನೆಯದಾಗಿ ತಮ್ಮತಮ್ಮ ಶಿಷ್ಯವರ್ಗದವರು ಇಚ್ಛೆಸಿದರೆ ಈ ಸಂಸ್ಥೆಗಳು ಅಲ್ಲಲ್ಲಿ ಅಧ್ಯಾತ್ಮವಿದ್ಯಾಶಾಖಾಮಂದಿರಗಳನ್ನು ಏರ್ಪಡಿಸುವದಕ್ಕೆ ಸಹಾಯವನ್ನುಮಾಡಬೇಕು. ಸಂಸ್ಥೆಗೆ ಇರುವ ಪ್ರಧಾನವಾದ ಆದಾಯದ ಹೆಚ್ಚಿನ ಭಾಗವು ಸಂಸ್ಥೆಯ ಮುಖ್ಯ ಸ್ಥಾನದಲ್ಲಿಯೇ ಅಲ್ಲದೆ ಶಾಖಾಸಂಸ್ಥೆಗಳ ಪ್ರದೇಶಗಳಿಗೂ ವಿನಿಯೋಗವಾಗಬೇಕು.

ಈವರೆಗೆ ಹೊಣೆಗಾರರಾದ ಸಾಧುಸಂನ್ಯಾಸಿಗಳ ಸಂಸ್ಥೆಗಳು ಏನುಮಾಡ ಬೇಕು? ಎಂಬ ಪ್ರಶ್ನೆಗೆ ಉತ್ತರವನ್ನು ಹೇಳಿದ್ದಾಯಿತು. ಈ ಸಂಸ್ಥೆಗಳು ಏನುಮಾಡಬಾರದು? – ಎಂಬ ಪ್ರಶ್ನೆಗೆ ಉತ್ತರವನ್ನು ಹೇಳುವುದು ಇದಕ್ಕಿಂತಲೂ ಈಗ್ಗೆ ಹೆಚ್ಚು ಅವಶ್ಯವಾಗಿರುತ್ತದೆ. ಏಕೆಂದರೆ ವಿಧ್ಯುಕ್ತವಾದದ್ದನ್ನು ಮಾಡದೆ ಇದ್ದರೂ ನಿಷಿದ್ಧವಾದದ್ದನ್ನು ಬಿಡುವದು ಹೇಗೆ ಸಾಧಕರಿಗೆ ಪ್ರಥಮಕರ್ತವ್ಯವೋ ಹಾಗೆಯೇ ಸಂಸ್ಥೆಗಳಿಗೂ ಅದು ಆದ್ಯ ಕರ್ತವ್ಯವೇ ಆಗಿರುತ್ತದೆ.

ಮೊದಲನೆಯದಾಗಿ ಯಾವದೊಂದು ಪ್ರಧಾನಧಾರ್ಮಿಕಸಂಸ್ಥೆಗೂ ಅವಿದ್ಯಾವಂತರಾದ, ಅವಿನೀತರಾದ, ಅವಿರಕ್ತರಾದ, ಅಥವಾ ಕೇವಲ ಬಾಲಭಾವದ ಮನಸ್ಸುಳ್ಳವರನ್ನು ಆರಿಸಬಾರದು. ಪೀಠಕ್ಕೆ ಏರುವವರು ತಪೋನುಷ್ಠಾನ, ವಿದ್ಯಾ, ವಿನಯ, ಧರ್ಮಜ್ಞಾನಾದಿಗಳಲ್ಲಿ ಎಲ್ಲರಿಗೂ ಆದರ್ಶಪ್ರಾಯರಾಗಿರ ಬೇಕಾದದ್ದು ಅವಶ್ಯವಾದ್ದರಿಂದ ಪೀಠಾಧಿಪತ್ಯಗಳಿಗೆ ಪೂರ್ವಾಶ್ರಮದ ಸಂಬಂಧವಿದ್ದವರು ಅಥವಾ ಅವರಿಗೆ ಬೇಕಾಗಿದ್ದವರು ಎಂಬ ನಿಮಿತ್ತದಿಂದಲೇ ಎಂದಿಗೂ ಅಗ್ರಸ್ಥಾನಕ್ಕೆ ಆರಿಸಬಾರದು.

ಎರಡನೆಯದಾಗಿ ಇಂಥ ಸಂಸ್ಥೆಗಳಲ್ಲಿ, ಹೊಟ್ಟೆಯಪಾಡಿಗಾಗಿ ಕಾಯಕ್ಲೇಶ ವನ್ನು ಪಡುವದಕ್ಕೆ ಇಷ್ಟವಿಲ್ಲದೆ ಇರುವ, ಅಥವಾ ವಯೋವೃದ್ಧರಾಗಿ ಸಂಸಾರಭಾರ ವನ್ನು ಹೊರುವದಕ್ಕೆ ಆಗಲಾರದೆಂಬ ನಿಮಿತ್ತದಿಂದ ಸಾಧುಸಂನ್ಯಾಸಿವೇಷದಿಂದ ಇರುವದಕ್ಕೆ ಬಯಸುವ, ಯಾರೊಬ್ಬರನ್ನೂ ಶಿಷ್ಯರನ್ನಾಗಿ ಮಾಡಿಕೊಳ್ಳಬಾರದು. ಇಹಪರಲೋಕಗಳ ಭೋಗಗಳಲ್ಲಿ ವಿರಕ್ತರಾಗಿ ಅಧ್ಯಾತ್ಮಚಿಂತನೆಯಲ್ಲಿಯೇ ಮಗ್ನರಾಗಿರಬೇಕೆಂಬ ಉತ್ಕಟೇಚ್ಛೆಯುಳ್ಳವರೇ ನಿಜವಾಗಿ ಸಂನ್ಯಾಸಾಶ್ರಮಕ್ಕೆ ಅರ್ಹರು. ಆದ್ದರಿಂದ ಅನರ್ಹರಾದವರಿಗೆ ಸಂನ್ಯಾಸವನ್ನು ಕೊಡುವ ಪದ್ಧತಿ ಯನ್ನು ಸಂಪೂರ್ಣವಾಗಿ ನಿಲ್ಲಿಸಿಬಿಡಬೇಕು. ಸಂಸ್ಥೆಗಳ ಪ್ರೋತ್ಸಾಹದಿಂದ

ಸಂನ್ಯಾಸ ವನ್ನು ವಹಿಸುವ ಶಿಷ್ಯರಲ್ಲಿ ಯಾವನೊಬ್ಬ ಸಂನ್ಯಾಸಿಯೂ ಅನರ್ಹನಿಗೆ ಸಂನ್ಯಾಸ ಕೊಡಕೂಡದೆಂಬ ವಾಗ್ದಾನವನ್ನು ಅವಶ್ಯವಾಗಿ ತೆಗೆದುಕೊಳ್ಳಬೇಕು. ತಮ್ಮ ಶಿಷ್ಯ ಮಂಡಲಿಯಲ್ಲಿ ಅನೇಕರು ಸಂನ್ಯಾಸಿಗಳು ಅಥವಾ ಸಾಧುಗಳು ಇದ್ದಾರೆಂದು ಖ್ಯಾತಿಯನ್ನು ಹೊಂದುವದಕ್ಕಾಗಿಯೇ ಸಂನ್ಯಾಸಕ್ಕೆ ಅಸಂಖ್ಯಾತವಾಗಿ ಅನುಮತಿ ಕೊಡುವ ಪದ್ಧತಿಯು ಈಗೀಗ ಕಾಣುಬರುತ್ತಿದೆ; ಇದನ್ನು ಕೂಡಲೆ ನಿಲ್ಲಿಸಿ ಬಿಡಬೇಕು.

ಮೂರನೆಯದಾಗಿ ಕೇವಲ ಲೌಕಿಕವ್ಯವಹಾರಗಳಲ್ಲಿ ವಿರಕ್ತರಾಗಿರುವವರೇ ಸಂನ್ಯಾಸಿಗಳಾದ್ದರಿಂದ, ಸಾಮಾಜಿಕ ಅಥವಾ ರಾಜಕೀಯವಾದ ಯಾವ ಚಟುವಟಿಕೆಗಳಲ್ಲಿಯೂ ಧಾರ್ಮಿಕ ಸಂಸ್ಥೆಗಳು ಭಾಗವನ್ನು ವಹಿಸದೆ ತಟಸ್ಥರಾಗಿರ ಬೇಕಾದದ್ದು ಅತ್ಯವಶ್ಯವಾಗಿರುತ್ತದೆ. ಸಂಸ್ಥೆಗಳಿಗೆ ಸೇರದೆ ಬಿಡಿಬಿಡಿಯಾಗಿ ಸಾಧುಸಂನ್ಯಾಸಿಗಳೆನಿಸಿರುವವರಂತೂ ತಮ್ಮ ತಮ್ಮ ಆಧ್ಯಾತ್ಮಿಕ ಭೂಮಿಕೆಯನ್ನು ಕಾಪಾಡಿಕೊಂಡು ಉನ್ನತಿಗೊಳಿಸಿಕೊಳ್ಳುವದರಲ್ಲಿಯೇ ನಿರತರಾಗಿ ನಿಂತಲ್ಲಿ ನಿಲ್ಲದೆ ಯಾವ ಗೃಹಸ್ಥರಿಗಾಗಲಿ, ಯಾವ ಊರಿನವರಿಗಾಗಲಿ, ತಮ್ಮ ಜೀವನವು ಹೊರೆ ಯಾಗದಂತೆ ನೋಡಿಕೊಳ್ಳಬೇಕು. ಯಾವಜನರ ತಂಡದಲ್ಲಿಯೂ ಕಷ್ಟನೈಷ್ಠುರ್ಯ ಗಳನ್ನು ವಹಿಸದೆ ತಮ್ಮ ತಿಳಿವಳಿಕೆಯನ್ನು ಹೆಚ್ಚಿಸಿಕೊಳ್ಳುತ್ತಾ ತಮ್ಮಲ್ಲಿಗೆ ಬಂದ ನಿಜವಾದ ಜಿಜ್ಞಾಸುಗಳಿಗೆ ಹಿತೋಕ್ತಿಯನ್ನು ಹೇಳುತ್ತಾ ಸಂಚರಿಸುತ್ತಿರಬೇಕು. ವೈರಾಗ್ಯ, ಸಾಧನಾನುಷ್ಠಾನ, ಪರೋಪಕಾರ – ಇವೇ ಸಾಧುಗಳಿಗೆ ಯೋಗ್ಯತಾ ಪತ್ರಗಳಾಗಿರಬೇಕು.

ನಾಲ್ಕನೆಯದಾಗಿ ತಮ್ಮ ತಮ್ಮ ಸಂಸ್ಥೆಗಳಿಗೆ ಸೇರಿದಂತೆ ಸಂನ್ಯಾಸವನ್ನೂ ದೀಕ್ಷೆಗಳನ್ನೂ ವಹಿಸಿದ ಶಿಷ್ಯರುಗಳ ವೃತ್ತಿಯು ಸರಿಯಾಗಿಲ್ಲವೆಂದು ತಿಳಿದುಬಂದರೆ ಬುದ್ಧಿವಾದದ ಮೂಲಕ ಅವರಿಗೆ ಎಚ್ಚರಿಕೆ ಕೊಟ್ಟು, ಅದನ್ನು ಅವರು ಗಮನಿಸದೆ ಇದ್ದರೆ, ಇಂಥವನೊಬ್ಬ ವ್ಯಕ್ತಿಯು ನಮ್ಮಿಂದ ದೀಕ್ಷವಹಿಸಿ ಸ್ವೇಚ್ಛಾಚಾರವನ್ನು ಕೈಕೊಂಡಿರುವನೆಂದು ತಿಳಿದುಬಂದಿದೆ. ಇನ್ನು ಮೇಲೆ ನಾವು ಆತನನ್ನು ನಮ್ಮ ಸಂಸ್ಥೆಗೆ ಸಂಬಂಧ ಪಟ್ಟವನೆಂದು ಗಣಿಸುವದಿಲ್ಲ ಎಂದು ಸರಕಾರದವರಿಗೂ ಜನ ಸಾಮಾನ್ಯಕ್ಕೂ ಪ್ರಕಟನೆಯ ಮೂಲಕ ತಿಳಿಸಿಬಿಡ ಬೇಕು.

ಕೊನೆಯದಾಗಿ ಪ್ರತಿಯೊಂದು ಸಂಸ್ಥೆಯವರೂ ಭಾರತದಲ್ಲಿರುವ ಧಾರ್ಮಿಕ ಸಂಸ್ಥೆಗಳನ್ನೂ ಅವುಗಳ ಚಟುವಟಿಕೆಯನ್ನೂ ತಿಳಿದುಕೊಂಡು ಸಾಧ್ಯವಾದಮಟ್ಟಿಗೂ ಪರಸ್ಪರವಿಚಾರವಿನಿಮಯಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿಕೊಳ್ಳಬೇಕು. ಸಾಧುಸಂನ್ಯಾಸಿಗಳ ವರ್ತನೆಯನ್ನೂ ಜನರೂ ಸರಕಾರದವರೂ ಅವರ ವಿಷಯ ದಲ್ಲಿ ಹೇಗೆ ನಡೆದುಕೊಳ್ಳಬೇಕೆಂಬ ಬಗ್ಗೆ ಸೂಚನೆಗಳನ್ನೂ ಕ್ಷೇತ್ರಗಳು, ಪರ್ವ ಕಾಲಗಳು, ಉತ್ಸವಗಳು, ಪುಣ್ಯಕಥೆಗಳು - ಮುಂತಾದವುಗಳ ಬಗ್ಗೆ ತಿಳಿವಳಿಕೆಯನ್ನೂ ಪ್ರಚಲಿತವಾದ ಮಹಾತ್ಮರ ವಿಚಾರವನ್ನೂ ಸಂಸ್ಥೆಯ ಸುದ್ದಿಯನ್ನೂ ಒಳಗೊಂಡ ಒಂದು ನಿಯತಕಾಲಿಕಪತ್ರಿಕೆಯನ್ನು ಏರ್ಪಡಿಸಿಕೊಳ್ಳಬೇಕು. ಅವುಗಳಲ್ಲಿ ತಮಗೆ ಆಗಾಗ್ಗೆ ತಿಳಿಯಬರುವ ಸಾಧುವರ್ತನೆಗೆ ವಿರುದ್ಧವಾದ ಅಂಶಗಳನ್ನು ಉಲ್ಲೇಖಿಸಿ ಅವುಗಳ ಬಗ್ಗೆ ತಮ್ಮ ನಿಶ್ಚಿತವಾದ ಅಭಿಪ್ರಾಯವನ್ನು ಶಾಸ್ತ್ರೀಯ ಪ್ರಮಾಣಗಳಿಂದಲೂ ಲೋಕಸಂಮತವಾದ ಯುಕ್ತಿಯಿಂದಲೂ ಕೂಡಿ ಬರವಣಿಗೆ ಗಳಿಂದ ಪ್ರಕಟಿಸುತ್ತಿರಬೇಕು. ಇದರಿಂದ ಪ್ರಜೆಗಳಿಗೆ ಧಾರ್ಮಿಕ ಸಂಸ್ಥೆಗಳಲ್ಲಿ ಪೂಜ್ಯಬುದ್ಧಿಯುಂಟಾಗುವುದು; ತಮಗೆ ಬೇಕಾದ ವಿಷಯಗಳಿಗೆ ತಿಳಿವಳಿಕೆ ಯನ್ನು ತಮತಮಗೆ ಸಂಬಂಧಪಟ್ಟ ಸಂಸ್ಥೆಗಳಿಂದ ಪಡೆದುಕೊಳ್ಳುವ ಅಭಿಲಾಷೆ ಯುಂಟಾಗುವದು. ಸಂಸ್ಥೆಗಳನ್ನು ತನುಮನೋಧನಗಳಿಂದ ಸೇವಿಸಿ ಪೋಷಿಸುವ ತವಕವೂ ಉಂಟಾಗುವದು.

ಹಾಗಾದರೆ ಸಾಧುಗಳನ್ನೇನು ಮಾಡಬೇಕು? ಎಂಬ ಪ್ರಶ್ನೆಗೆ ನನ್ನ ಉತ್ತರವನ್ನು ಸಂಗ್ರಹವಾಗಿ ಕೊಡುವೆನು. '**ಕಾಷಾಯದಂಡಮಾತ್ರೇಣ ಯತಿಃ ಪೂಜ್ಯೋ ನ ಸಂಶಯಃ**' ಎಂಬ ನೀತಿಯು ಈ ಕಾಲಕ್ಕೆ ಹೊಡುವಂತಿಲ್ಲ; ಏಕೆಂದರೆ ಕಾಷಾಯ, ದಂಡ, ಗಡ್ಡ, ವಿಭೂತಿ, ರುದ್ರಾಕ್ಷಿ, ನಾಮ - ಮುಂತಾದ ಬಹಿರ್ವೇಷಗಳು ಈಗಿನ ಕಾಲಕ್ಕೆ ಯಾವಾಗಲೂ ಸಾಧುಗಳ ಚಿಹ್ನೆಯಾಗಿರುವದಿಲ್ಲ. ಯಾವನಾದರೂ ಸಾಧುವೇಷಧಾರಿಯನ್ನು ಅಥವಾ ಸಂನ್ಯಾಸವೇಷಧಾರಿಯನ್ನು ಕಂಡರೆ ಗೌರವಿಸುವದೂ ಅತಿಥಿಸತ್ಕಾರವನ್ನು ಮಾಡುವದೂ ಗೃಹಸ್ಥಧರ್ಮವೇ ಸರಿ. ಆದರೆ ಆ ವಿಷಯಕ್ಕೆ ಎಚ್ಚರಿಕೆಯಿಂದ ಇರಬೇಕು. ಯತಿಗಳು, ಸಾಧುಗಳು ಅಥವಾ ಮಹಾತ್ಮರು ನಿಜವಾಗಿಯೂ ಯತಿಗಳು, ಸಾಧುಗಳು - ಎಂದು ನಿರ್ಧಾರವಾದಮೇಲೆಯೇ ಅವರಿಗೆ ವಿಶೇಷಪೂಜಾದಿಗಳನ್ನು ಮಾಡುವದಕ್ಕೆ ಹೋಗಬೇಕು. ಅಂಥವರು ನಿಜವಾಗಿ ವಿರಕ್ತರೂ ಜನರಲ್ಲಿ ಮೈತ್ರೀಕರುಣ

– ಮುಂತಾದ ಭಾವನೆಯಿಂದ ವರ್ತಿಸುವವರೂ ಸನ್ಮಾರ್ಗದಲ್ಲಿ ತಾವೂ ಇದ್ದುಕೊಂಡು ಮುಮುಕ್ಷುಗಳನ್ನು ಅಧ್ಯಾತ್ಮಮಾರ್ಗದಲ್ಲಿ ನಡೆಯುವದಕ್ಕೆ ಬೇಕಾದ ಸೂಚನೆಗಳನ್ನು ಕೊಡತಕ್ಕವರೂ ಆಗಿದಾರೆಂದು ತಿಳಿದುಬಂದರೆ ಮಾತ್ರ ತಮ್ಮ ಮಿತ್ರಮಂಡಲಿಯಲ್ಲಿ ಅವರ ಪರಿಚಯವನ್ನು ಮಾಡಿಕೊಡಬೇಕು. ಕೇವಲ ಭಿಕ್ಷಾಮಾತ್ರದಿಂದ ತೃಪ್ತರಾಗಿರುವ ಅಥವಾ ಭಿಕ್ಷಾಪೂಜಾದಿಗಳಿಗೆಂದೇ ಆಶ್ರಮವನ್ನು ವಹಿಸುವ ಸಾಧುವೇಷಧಾರಿಗಳನ್ನು ಹೆಚ್ಚಿನ ಸ್ಥಾನಕ್ಕೆ ಏರಿಸುವದೂ ಅಪರಾಧವೇ ಆಗಿರುತ್ತದೆ. 'ಸಮಾಽಸಮಾಭ್ಯಾಂ ವಿಷಮಸಮೇ ಪೂಜಾತಃ' ಸಮಾನರಾದವರನ್ನು ವಿಷಮವಾಗಿಯೂ ವಿಷಮರಾದವರನ್ನು ಸಮಾನರಾಗಿಯೂ ಕಂಡು ಗೌರವಿಸುವದರಿಂದ – ಎಂದರೆ ದೊಡ್ಡವರನ್ನು ಕಡಿಮೆಯ ಅಂತಸ್ತಿನವರೆಂದೂ ಕಡಿಮೆಯ ಅಂತಸ್ತಿನವರನ್ನು ಹೆಚ್ಚಿನಾಂತಸ್ತಿನವರೆಂದೂ ಕಾಣುವದರಿಂದ – ಅಭೋಜ್ಯಾನ್ನರಾಗುತ್ತಾರೆ; ಅಂಥವರ ಅನ್ನವನ್ನುಂಡವರು ಪತಿತರಾಗುತ್ತಾರೆ – ಎಂದು ಧರ್ಮಶಾಸ್ತ್ರವು ಹೇಳುತ್ತಿದೆ. ಹೀಗೆ ಸಾಧುಗಳನ್ನು ಅವರವರ ಯೋಗ್ಯತೆಯನ್ನು ಅರಿತು ತಕ್ಕಂತೆ ಗೌರವಿಸಿದರೆ ಲೋಕಕ್ಕೆ ನಿಜವಾದ ಸಾಧುಗಳ ಅನುಗ್ರಹವು ದೊರೆಯುತ್ತದೆ; ವೇಷಧಾರಿಗಳಿಂದಾಗುವ ಮೋಸವೂ ತಪ್ಪುತ್ತದೆ.

ಇನ್ನು ಸರಕಾರದವರು ಸಾಧುಗಳನ್ನು ಹೇಗೆ ಕಾಣಬೇಕು? ಎಂಬುದನ್ನು ವಿಚಾರಿಸೋಣ. ಸರಕಾರವು ಈಗ ಲೌಕಿಕವಾಗಿದೆ ಎಂಬ ಕಾರಣದಿಂದ ಧರ್ಮವಿಚಾರಗಳನ್ನು ತೀರ ಅಸಡ್ಡೆಯಿಂದ ಕಾಣುತ್ತಿರುವದು ತೃಪ್ತಿಕರವಾಗಿಲ್ಲ. ಪಾಶ್ಚಾತ್ಯದೇಶಗಳಲ್ಲಿ ಕೂಡ ಧರ್ಮಸಂಬಂಧವಾದ ವಿದ್ಯಾಭ್ಯಾಸವನ್ನು ಮಕ್ಕಳಿಗೆ ಮಾಡಿಸುವ ದೇಶಗಳೇ ಹೆಚ್ಚಿನಸಂಖ್ಯೆಯಲ್ಲಿರುತ್ತವೆ. ಹೀಗಿರುವಾಗ ಧರ್ಮಭೂಮಿಯೆನಿಸಿರುವ ನಮ್ಮ ಭರತಖಂಡದಲ್ಲಿ ಪರಮೇಶ್ವರನಲ್ಲಿ ಭಕ್ತಿಶ್ರದ್ಧೆಗಳನ್ನುಂಟುಮಾಡುವ ತಿಳಿವಳಿಕೆಯನ್ನು ನಮ್ಮ ಮಕ್ಕಳಿಗೆ ಕೊಡುವ ಯಾವ ಪ್ರಯತ್ನವೂ ಇಲ್ಲದಿರುವದು ಅತ್ಯಂತ ಶೋಚನೀಯವಾಗಿದೆ. ಧಾರ್ಮಿಕಶಿಕ್ಷಣವಿಲ್ಲದೆ ಬೆಳೆಯುವ ಮಕ್ಕಳು ನಾಸ್ತಿಕರ ಮತ್ತು ಮಾಯಾವಿಗಳ ಬಲೆಗೆ ಬಿದ್ದು ಜೀವನವನ್ನು ಹಾಳುಮಾಡಿಕೊಳ್ಳೂವ ಪ್ರಜೆಗಳಾಗಿ ಬೆಳೆಯುವರು, ಇದು ರಾಷ್ಟ್ರಕ್ಕೇ ಒಂದು ದೊಡ್ಡ ಹಾನಿಯು. ಆದ್ದರಿಂದ ಮತಾಂಧರ ಪ್ರಭಾವಕ್ಕೆ ಮಕ್ಕಳು ಒಳಗಾಗದಂತೆ ನೋಡಿಕೊಳ್ಳುವದಕ್ಕೋಸ್ಕರ ಸಾಧುಸಂತರ ಬೋಧೆಗೆ

ಶಾಲಾವಿದ್ಯಾರ್ಥಿಗಳನ್ನೂ ಹಿರಿಯಪ್ರಜೆಗಳನ್ನೂ ಅಣಿಮಾಡಿಟ್ಟರೆ ಯಾವ ವೆಚ್ಚವೂ ಇಲ್ಲದೆ ಜನರು ನೀತಿವಂತರಾಗುವರು. ಅಂಥ ಪ್ರಜೆಗಳನ್ನು ಆಳುವದಕ್ಕೆ ಕಾನೂನಿನ, ಕೋರ್ಟುಗಳ, ಪೋಲೀಸರ, ಸಿಪಾಯಿಗಳ ಮತ್ತು ಬಂದೀಖಾನೆಗಳ ಖರ್ಚು ತೀರ ಕಡಿಮೆಯಾಗಿ ಬೇಕಾಗುವದು. ಆದ್ದರಿಂದ ಸರಕಾರದವರು ಸುಪ್ರಸಿದ್ಧರಾಗಿ ಧಾರ್ಮಿಕರೂ ನಿಸ್ಪೃಹರೂ ಲೋಕೋಪಕಾರಿಗಳೂ ಆದ ಸಾಧುಗಳನ್ನು ಆರಿಸಿ ಅವರಿಂದ ದೇಶದ ಹಿತಕ್ಕೆ ಬೇಕಾದ ತಿಳಿವಳಿಕೆಯನ್ನು ಸಂಪಾದಿಸುವದಕ್ಕೆ ಪ್ರಯತ್ನಿಸಬೇಕು, ಪ್ರಜೆಗಳ ಏಕೀಕರಣಕ್ಕೆ ಅದೊಂದು ದೊಡ್ಡ ಶಕ್ತಿಯಾಗುವದು.

★★★★★

# ವೈಶಾಖಮಾಸ

(ಹಾದಿಹೋಕನೊಬ್ಬನ ವಿಚಾರಗಳು)

ವೈಶಾಖಮಾಸವು ಎಲ್ಲಾ ವಿಧದಿಂದಲೂ ಮುಮುಕ್ಷುಗಳು ಲಕ್ಷ್ಯದಲ್ಲಿಟ್ಟುಕೊಳ್ಳತಕ್ಕದ್ದಾಗಿದೆ. ವಸಂತಋತುವಿನ ಪರಿಪಾಕವು ಈ ಮಾಸದಲ್ಲಿಯೇ ಆಗುವದರಿಂದ ಸಾಮಾನ್ಯಜನರು ಕಾಮಕ್ಕೆ ವಶರಾಗಿ ಕೆಟ್ಟುಹೋದಾರೆಂದು ಎಚ್ಚರಿಸುವದಕ್ಕೋ ಎಂಬಂತೆ ಬುದ್ಧ, ಶಂಕರ, ರಾಮಾನುಜ, ಬಸವ – ಮುಂತಾದ ಮಹನೀಯರು ಈ ಮಾಸದಲ್ಲಿಯೇ ಅವತರಿಸಿರುತ್ತಾರೆ. ಎಲಾ ಮನಸ್ಸೆ, ಅವರೆಲ್ಲರೂ ಮುಕ್ತಕಂಠರಾಗಿ ಕಾಮವನ್ನು ನಿಂದಿಸಿರುತ್ತಾರೆ; ತಾವೂ ಕಾಮವನ್ನು ಸಂಪೂರ್ಣವಾಗಿ ಗೆದ್ದು ಅವರು ಮಾಡಿದ ಉಪದೇಶದಲ್ಲಿ ಏನಾದರೂ ಹುರುಳಿದ್ದೀತೆಂದು ನಿನಗೆ ಅನಿಸುವದಿಲ್ಲವೆ? ನೀನು ಮಾತ್ರ ಕಾಮನ ಹಾದಿಯಲ್ಲಿಯೇ ಹೋಗುತ್ತಿರುವೆ; ಕಾಮಾರಿಯ ಹಾದಿಯು ನಿನಗೆ ಕಾಣಿಸುತ್ತಿಲ್ಲವೊ, ಕಂಡರೂ ಅದು ದುರ್ಮಾರ್ಗವೆಂದೆಣಿಸಿರುವೆಯೊ?

ಎಲಾ ಮನಸ್ಸೆ, ಬುದ್ಧನು ನಾಸ್ತಿಕನು, ಶಂಕರನು ದ್ವೈತವನ್ನು ಕಾಣದ ಕುರುಡನು, ರಾಮಾನುಜನು ಕಂಡಕಂಡವರಿಗೆ ನಾಮಹಾಕಿ ಕಲಸುಮೇಲೋಗರ ಮಾಡಿದವನು, ಬಸವಣ್ಣನು ಬ್ರಾಹ್ಮಣ್ಯವನ್ನು ಕಿತ್ತೊಗೆದವನು – ಎಂದು ಹಳಿಯುತ್ತಿರುವೆ. ಆ ಗುರುವರ್ಯರು ತೋರಿಸಿರುವ ಸಾರ್ವತ್ರಿಕ ಮೈತ್ರಿ,

ಕರುಣಾಭಾವ, ಪರಮಾತ್ಮನಿಷ್ಠೆ, ಭಗವತ್ಕೈಂಕರ್ಯದ ಪರಮಾವಧಿ, ಶಿವಭಕ್ತಿಯ ಝುರಿ – ಇವುಗಳು ನಿನಗೆ ಗೋಚರಿಸವೊ, ಗೋಚರಿಸಿದರೂ ಒಗ್ಗದೆ ಇರುವವೊ?

ವೈಶಾಖಮಾಸದಲ್ಲಿ ನೃಸಿಂಹಜಯಂತಿಯನ್ನು ಭಕ್ತರೆಲ್ಲರೂ ಆಚರಿಸುವರು. ಕಂಬದಲ್ಲಿ ಕೈಕಾಲುಗಳುಳ್ಳ ಮನುಷ್ಯನು ಮೃಗದ ತಲೆಯಿಂದೊಡಗೂಡಿ ಹುಟ್ಟುವದೆಂಬುದು ಹೊತ್ತು ಹೋಗದ ಜನರು ಹುಟ್ಟುಗಟ್ಟಿದ ಕಥೆಯೆಂದು ಹಳಿಯುವೆಯಲ್ಲ! ಸ್ಥಾವರಜಂಗಮಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿರುವಂತೆಯೇ ಆ ಪರಮಾತ್ಮನ ಚೈತನ್ಯವು ಹುದುಗಿಕೊಂಡಿರುವದೆಂಬ ಘನವಾದ ಉಪದೇಶವು ನಿನಗೆ ಕೇಳಿಸದೇನು? ಅಥವಾ ಕೇಳಿದರೂ ಅದು ನಿನಗೆ ಬಿಡಿಸುವದಕ್ಕೆ ಬಾರದ ಕಗ್ಗಂಟಾಗಿರುವದೊ? ಸರ್ವವ್ಯಾಪಕನೂ ಸರ್ವಾತ್ಮನೂ ಆದ ವಿಷ್ಣುವು ತನ್ನ ವೈರಿಯೆಂದು ಬಗೆದು ಹಿಂಸ್ರಮೃಗಗಳಿಗಿಂತಲೂ ಹೆಚ್ಚಿನ ಕಲ್ಲುಹೃದಯವನ್ನು ತೋರಿಸಿದ ಹಿರಣ್ಯಕಶಿಪುವಿನ ಹೊಟ್ಟೆಯಲ್ಲಿ ಭಕ್ತಶ್ರೇಷ್ಠನಾದ ಮೃದುಹೃದಯದ ಪ್ರಹ್ಲಾದನ ಜನನವಾಗಬಹುದಾದರೆ, ಸರ್ವಶಕ್ತನಾದ ಆ ಭಗವಂತನು ಕಲ್ಲುಕಂಬದಲ್ಲೇಕೆ ತೋರಿಕೊಳ್ಳಬಾರದು? ಎಲ್ಲಾ ಕುರುಡುಮನವೆ, ಇದನ್ನು ಸ್ವಲ್ಪ ವಿಚಾರಮಾಡು.

★★★★★

# ಗುರುಭಕ್ತಿ

– ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

**ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।**
**ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥**

ಅಧ್ಯಾತ್ಮಪ್ರೇಮಿಗಳಿರಾ, ವರ್ಷಕ್ಕೊಮ್ಮೆ ಗುರುಪೂರ್ಣಿಮೆಯು ಬರುತ್ತಲೇ ಇರುತ್ತದೆ. ಅಂದು ನೀವೇನುಮಾಡಬೇಕೆನ್ನುವಿರಿ? ಅಧ್ಯಾತ್ಮವಿದ್ಯೆಯಲ್ಲಿ ನಿಮ್ಮ ಮನಸ್ಸು ಸ್ಥಿರವಾಗಿ ನಿಲ್ಲುವಮ್ತೆಯೂ ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಯುವಮ್ತೆಯೂ ಆ ದಿನ ಯಾವ ಸಂಕಲ್ಪವನ್ನು ಮಾಡಿಕೊಳ್ಳುವಿರಿ?

'ಆಚಾರ್ಯವಾನ್ ಪುರುಷೋ ವೇದ' ಅಧ್ಯಾತ್ಮತತ್ತ್ವವನ್ನು ಸತ್ಸಂಪ್ರದಾಯಕ್ಕನುಗುಣವಾಗಿ ಬೋಧಿಸ್ಸಬಲ್ಲ ಗುರುವಿನ ಉಪದೇಶವುಳ್ಳ ಪುಣ್ಯಾತ್ಮನು ಮಾತ್ರವೇ ತತ್ತ್ವವನ್ನು ಅರಿತುಕೊಳ್ಳಬಲ್ಲನು - ಎಂದು ಶ್ರುತಿಯು ಸಾರುತ್ತಿದೆ. ಅಧ್ಯಾತ್ಮತತ್ತ್ವವನ್ನು ಅರಿತುಕೊಂಡಮಾತ್ರದಿಂದ ಪರಮಪುರುಷಾರ್ಥವು ದೊರೆಯುತ್ತದೆ. ಆದರೆ ಆ ತತ್ತ್ವವನ್ನು ಪ್ರತ್ಯಕ್ಷ, ಅನುಮಾನ - ಮುಂತಾದ ಯಾವ ಪ್ರಮಾಣದಿಂದಲೂ ಅರಿತುಕೊಳ್ಳುವದು ಆಲಗುವಂತಿಲ್ಲ. ಇಂದ್ರಿಯಗಳೂ ಇಂದ್ರಿಯಗಳನ್ನವಲಂಬಿಸಿದ ತರ್ಕವೂ ನಮ್ಮ ಹೊರಗಿನ ವಸ್ತುಗಳನ್ನು ಮಾತ್ರ ತಿಳಿಸಬಲ್ಲವು. ಆದರೆ ಪರಮಾತ್ಮತತ್ತ್ವವು ಹೊರಗಿನ ವಸ್ತುಗಳಂತೆ ಪ್ರಮೇಯವಲ್ಲ, ಯಾವ ಪ್ರಮಾಣದಿಂದಲೂ ಅರಿಯುವದಕ್ಕೆ ಆಗುವಂಥ ಸ್ವರೂಪದ್ದಲ್ಲ. ಅಧ್ಯಾತ್ಮಗ್ರಂಥಗಳನ್ನು ಓದುವದರಿಂದ ಸ್ವಲ್ಪಮಟ್ಟಿಗೆ ಸಹಾಯವಾದೀತು; ಆದರೆ ಆಗ್ರಂಥಗಳ ಅಭಿಪ್ರಾಯವನ್ನು ಹೇಗೆ ಅಳವಡಿಸಿಕೊಳ್ಳಬೇಕೆಂಬುದನ್ನು ನಾವುನಾವೇ ತರ್ಕಿಸಿ ನಿಶ್ಚಯಿಸುವದಕ್ಕೆ ಆಗುವದಿಲ್ಲ, ಅಧ್ಯಾತ್ಮವಿಚಾರದಲ್ಲಿ ನಮ್ಮ ಅಂತಃಕರಣದಲ್ಲಿ ಒಂದು ಸಂಸ್ಕಾರವುಂಟಾಗಿರಬೇಕು; ಅದಕ್ಕೆ ಒಂದು ದೃಷ್ಟಿವಿಶೇಷವು ದೊರಕಬೇಕು. ಆ ಸಂಸ್ಕಾರವನ್ನಾಗಲಿ ದೃಷ್ಟಿಯನ್ನಾಗಲಿ ಹೊರಗಿನ ಯಾವ ಸಾಧನವೂ ನಮಗೆ ದೊರಕಿಸಿಕೊಡಲಾರದು.

ಭಗವಂತನ ಅನುಗ್ರಹವಿಲ್ಲದೆ ಯಾರೊಬ್ಬರಿಗೂ ಅಧ್ಯಾತ್ಮಜ್ಞಾನವಾಗಲಾರದು. ಜಗತ್ತನ್ನು ಸೃಷ್ಟಿಸುವ ಬ್ರಹ್ಮನಿಗೆಕೂಡ ಆ ಭಗವಂತನ ಅನುಗ್ರಹದಿಂದಲೇ ವೇದಾರ್ಥಗಳು ಹೊಳೆಯುತ್ತವೆಯೆಂದು ಶಾಸ್ತ್ರದಲ್ಲಿ ಹೇಳಿದೆ. ಬ್ರಹ್ಮನಿಗೆ ಮಿಗಿಲಿಲ್ಲದ ಧರ್ಮ, ಜ್ಞಾನಶಕ್ತಿ, ವೈರಾಗ್ಯ, ಸಾಮರ್ಥ್ಯ - ಇವುಗಳು ಹಿಂದಿನ ಕಲ್ಪದ ಸಂಸ್ಕಾರದಿಂದ ಉಂಟಾಗಿರುವವೆಂದು ಸ್ಮೃತಿಗಳಲ್ಲಿ ಹೇಳಿದೆ. ಅಂಥವನಿಗೆ ಕೂಡ ತತ್ತ್ವಜ್ಞಾನಕ್ಕೆ ಭಗವಂತನ ಆಂತರಿಕವಾದ ಉಪದೇಶವು ಬೇಕಾಗಿರುತ್ತದೆ; ಮಿಕ್ಕವರ ಪಾಡೇನು? ವೇದಪರಿಚಯವಾಗಲಿ ವೇದಾರ್ಥದ ತಿಳಿವಳಿಕೆಯಾಗಲಿ ಇಲ್ಲದೆ, ಕರ್ಮಾನುಷ್ಠಾನದಿಂದ ಚಿತ್ತಶುದ್ಧಿಯನ್ನು ಪಡೆದುಕೊಳ್ಳದೆ ಇರುವವರಿಗಾಗಿ ಇಂದ್ರಿಯಾರ್ಥಗಳ ಕಾಮದಿಂದ ಸಂಕಟಪಡುತ್ತಿರುವ ಅಲ್ಪವೀರ್ಯರಾದ ಜನರಿಗೆ ಪರಮಾರ್ಥದ ಅರಿವು ಹೇಗೆತಾನೆ ಲಭಿಸಬೇಕು?

ಕ್ರತುಯುಗದಿಂದ ಕಲಿಯುಗದವರೆಗೆ ಜನರಲ್ಲಿ ಧರ್ಮಸಂಸ್ಕಾರವು ಕಡಿಮೆಯಾಗುತ್ತಲೇ ಬಂದಿರುತ್ತದೆ. ಕಲಿದ್ವಾಪರಸಂಧಿಕಾಲದಲ್ಲಿ ಜನರಿಗೆ ಅನುಗ್ರಹವನ್ನು ಮಾಡುವದಕ್ಕೆಂದೇ ವಿಷ್ಣ್ವಂಶದಿಂದ ಅವತರಿಸಿದ ಶ್ರೀ ವೇದವ್ಯಾಸರು ವೇದವು ಕಿವಿಗೆಬೀಳದ ಜನರಿಗೂ ಉಪಕಾರವಾಗಲೆಂದು ಕರುಣೆಯಿಂದ ಮಹಾಭಾರತವನ್ನು ನಿರ್ಮಿಸಿದರು. ಮಹಾಭಾರತದಲ್ಲಿ ನಾಲ್ಕು ಬಗೆಯ ಪುರುಷಾರ್ಥಗಳಿಗೂ ಸಾಧನವನ್ನು ವಿವರಿಸಿರುತ್ತದೆ. ಪ್ರತಿವರ್ಷವೂ ಬರುವ **ಗುರುಪೂರ್ಣಿಮೆಯ** ದಿನ ಆ ಮಹಾಮಹಿಮರನ್ನು ಆರಾಧನೆಮಾಡಿ ಅವರ ಅನುಗ್ರಹವನ್ನು ಪ್ರಾರ್ಥಿಸುವದು ಶ್ರೀಮನ್ನಾರಾಯಣನ ಅನುಗ್ರಹಕ್ಕೇ ಕಾರಣವಾಗಿರುತ್ತದೆ. ವ್ಯಾಸರು ಬ್ರಹ್ಮನಿಧಿಗಳು; ವೇದ ಮತ್ತು ವೇದಾರ್ಥದ ನಿಧಿಯೇ ಅವರ ಪ್ರಸನ್ನತೆಯಿಂದ ನಮಗೆ ದೊರಕೀತು.

ಕಲಿಯುಗದಲ್ಲಿ ದಕ್ಷಿಣಭಾರತದಲ್ಲಿ ದೇಹಧಾರಣೆಮಾಡಿ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೇ ಪರಮಹಂಸಪಾರಿವ್ರಾಜ್ಯವನ್ನು ಸ್ವೀಕರಿಸಿ ಕಾಲುನಡಿಗೆಯಿಂದ ಭರತಖಂಡವನ್ನೆಲ್ಲ ಸುತ್ತಿ ವೇದಾಂತದ ತಿರುಳಾಗಿರುವ ಜ್ಞಾನವೈರಾಗ್ಯರೂಪವಾದ ನಿವೃತ್ತಿಧರ್ಮವನ್ನು ಪ್ರಚಾರಮಾಡಿ ನಾಲ್ಕು ದಿಕ್ಕುಗಳಲ್ಲಿಯೂ ತಮ್ಮ ಯಶಃಪತಾಕೆಯನ್ನು ಹಾರಿಸಿದ ಶ್ರೀಮಚ್ಛಂಕರಭಗವತ್ಪಾದರ ಚರಣಾರವಿಂದಗಳನ್ನು ಸ್ಮರಿಸಿ, ಶ್ರೀಬಾದರಾಯಣವ್ಯಾಸರ ವೇದಾಂತ ಸೂತ್ರಗಳನ್ನೂ ಅವಕ್ಕೆ ಆ ಆಚಾರ್ಯರು ಬರೆದಿಟ್ಟಿರುವ ಭಾಷ್ಯವನ್ನೂ ಪೂಜಿಸುವದು ಒಂದು ಹೆಚ್ಚಿನ ಪುಣ್ಯವು. ಆ ದಿನ ಭಗವಂತರಾದ ಶಂಕರಬಾದರಾಯಣರಿಗೆ ಮಾಡಿದ ನಮಸ್ಕಾರವು ಅನಂತಪುಣ್ಯದ ಫಲವನ್ನು ಕೊಡುವದು; ಮುಮುಕ್ಷುಗಳಿಗೆ ಹೆಚ್ಚಿನ ಚಿತ್ತಶುದ್ಧಿಯನ್ನುಂಟುಮಾಡುವದು. ಆ ಇಬ್ಬರು ವೇದಾಂತಾಚಾರ್ಯರ ಅನುಗ್ರಹವು ನಮಗೆ ಆಗಲಿ! – ಎಂದು ವಿಶೇಷಭಕ್ತಿಯಿಂದ ಪ್ರಾರ್ಥಿಸಬೇಕು. ಹೀಗೆಯೇ ಬೇರೆಬೇರೆಯ ಸಿದ್ಧಾಂತಗಳಲ್ಲಿ ಪ್ರತಿಪಾದಿತವಾಗಿರುವ ಕರ್ಮಭಕ್ತಿಯೋಗಗಳ ರಹಸ್ಯವನ್ನು ಮನಗಾಣಬೇಕೆನ್ನುವವರು ತಮ್ಮತಮ್ಮ ಮತಪ್ರವರ್ತಕರನ್ನು ಶ್ರದ್ಧಾಭಕ್ತಿಪೂರ್ವಕವಾಗಿ ಪೂಜಿಸುವದಕ್ಕೆ ಗುರುಪೂರ್ಣಿಮೆಯು ಒಂದು ಪವಿತ್ರದಿನವಾಗಿರುತ್ತದೆ.

ಇವೆಲ್ಲಕ್ಕಿಂತವೂ ಮುಖ್ಯವಾಗಿ ಈ ಹುಣ್ಣಿಮೆಯ ದಿನ ಪರಮೇಶ್ವರನ ಮತ್ತು ಪೂರ್ವಾಚಾರ್ಯರುಗಳೆಲ್ಲರ ಪ್ರತೀಕವಾಗಿರುವ ಸದ್ಗುರುವಿನ

ಅನುಗ್ರಹವನ್ನು ಕೋರಿ ಆತನ ಚರಣಾರಾಧನೆಯನ್ನು ಮಾಡಬೇಕು. ಯಾವ ಮಹಾತ್ಮನು ತನ್ನ ನಿತ್ಯಜೀವನವನ್ನು ಜ್ಞಾನಭಕ್ತಿವೈರಾಗ್ಯಗಳ ಭಾಂಡಾಗಾರವಾಗಿ ಮಾಡಿಕೊಂದಿರುವನೋ, ಯಾವ ಮಹಾತ್ಮನನ್ನು ಕಂಡರೆ ಸಂಸಾರದ ಕೋಟಲೆಗಳೆಲ್ಲವೂ ತಮಗೆತಾವೇ ಮರೆಯಾಗುವವೋ, ಯಾವ ಮಹಾತ್ಮನ ದರ್ಶನಸ್ಪರ್ಶನಸಂಭಾಷಣೆಗಳಿಂದ ನಮ್ಮ ಅಂತಃಕರಣವು ಸಂಪೂರ್ಣವಾಗಿ ಮಾರ್ಪಟ್ಟು ಪರಮೇಶ್ವರನ ಸೇವೆಗೇ ಜೀವನವನ್ನು ಅಣಿಮಾಡುವದೋ ಅಂಥವನೇ ಸದ್ಗುರುವು. ಪೂರ್ವಪುಣ್ಯವಿಶೇಷದಿಂದ ಇಂಥ ಮಹಾಮಹಿಮನೋರ್ವನು ನಿಮ್ಮ ಕಣ್ಣಿಗೆ ಬಿದ್ದಿದ್ದರೆ ಅವನ ದರ್ಶನದ ಸದುಪಯೋಗವನ್ನು ತಪ್ಪದೆ ಮಾಡಿಕೊಳ್ಳಿರಿ. ಆತನೇ ಬ್ರಹ್ಮವಿಷ್ಣುಮಹೇಶ್ವರರ ವಿಭೂತಿವಿಶೇಷವೆಂದು ನಂಬಿರಿ. ಆತನು ಎಲ್ಲಿದ್ದರೂ ಅಲ್ಲಿಗೆ ಎಷ್ಟು ಕಷ್ಟವಾದರೂ ಲೆಕ್ಕಿಸದೆ ಹೋಗಿ ಮಹಾಕಾಶೀಯಾತ್ರೆಯ ಫಲವನ್ನು ಪಡೆದುಕೊಳ್ಳಿರಿ; ಆತನ ಚರಣಕ್ಕೆ ಪ್ರಣಾಮವನ್ನು ಮಾಡಿ ಗಂಗಾದಿಸಕಲತೀರ್ಥಸ್ನಾನಗಳ ಫಲವನ್ನು ಪಡೆದುಕೊಳ್ಳಿರಿ; ಆತನ ಸದುಪದೇಶವನ್ನು ಶ್ರವಣಮಾಡಿ ಶ್ರುತಿಸ್ಮೃತಿಪುರಾಣಗಳ ಸಾರವಾದ ಅಧ್ಯಾತ್ಮವಿದ್ಯೆಯ ಬೀಜವನ್ನು ಹೃದಯದಲ್ಲಿ ಬಿತ್ತಿಕೊಳ್ಳಿರಿ!

ಯಾರಿಗೆಭಗವನ್ಮಯವಾದ ಸದ್ಗುರುವಿನ ಸಂನಿಧಿಯ ವಾಸವೇ ದೊರಕಿರುವದೋ ಅವರ ಪುಣ್ಯವನ್ನು ಅಳೆಯುವದಾಗಲಿ ತೂಗುವದಾಗಲಿ ಸಾಮಾನ್ಯರಿಂದ ಆಗಲಾರದು. ಸದ್ಗುರುವಿನ ಸೇವೆಯರೂಪವಾದ ಕರ್ಮಯೋಗವೂ ಆತನ ಉಪದೇಶವನ್ನು ಏಕಾಗ್ರತೆಯಿಂದ ಚಿಂತಿಸುವ ಧ್ಯಾನಯೋಗವೂ ಆತನು ತಮ್ಮ ಆತ್ಮನೇ ಎಂದು ಬಗೆದು ನಿತ್ಯಪ್ರೇಮದಿಂದ ನಡೆಯುವ ಭಕ್ತಿಯೋಗವೂ ಯಾವ ಸಾಧಕರಿಗೆ ದೊರೆತಿರುವದೋ ಅವರಿಗೆ ಅಧ್ಯಾತ್ಮಸಾಧನಮಾರ್ಗದಲ್ಲಿ ಯಾವ ಕಷ್ಟವೂ ಇರುವದಿಲ್ಲ. ಆ ಸದ್ಗುರುವಿನ ಅನುಗ್ರಹದ ಪ್ರವಾಹವು ಅವರಿಗೆ ಅವಶ್ಯವಾಗಿ ಭಗವಂತನ ದಯಾಸಾಗರದ ಪ್ರಾಪ್ತಿಯನ್ನು ದೊರಕಿಸುವದು. ಸದ್ಗುರುವಿನಲ್ಲಿ ಈಶ್ವರಭಾವನೆಯನ್ನು ಮಾಡುವದನ್ನು ಅಳವಡಿಸಿಕೊಂಡ ಸಾಧಕರು ಧನ್ಯರು.

★★★★★

# ಶ್ರೀ ವ್ಯಾಸಮಹರ್ಷಿಗಳು

- ಶ್ರೀ ನಂಜುಡಯ್ಯನವರು

ಪ್ರತಿಸಂವತ್ಸರದ ಆಷಾಢಶುದ್ಧ ಪೌರ್ಣಿಮೆಯು ವ್ಯಾಸಪೂರ್ಣಿಮೆಯೆನಿಸಿಕೊಳ್ಳುವದು. ಆದಿನ ಎಲ್ಲಾ ಗುರುಮಠಗಳಲ್ಲಿಯೂ ಶ್ರೀವೇದವ್ಯಾಸರ ಪೂಜೆಯೂ ತಮ್ಮ ತಮ್ಮ ಗುರುಗಳ ಆರಾಧನೆಯೂ ನಡೆಯುವದು, ಉತ್ತರದೇಶದಲ್ಲಿ ಗುರುಪೂಜೆಯನ್ನು ವಿಶೇಷವಾಗಿ ನಡೆಸುವ ಈ ಪುಣ್ಯದಿನವನ್ನು ಗುರುಪೂರ್ಣಿಮೆಯಂದೇ ಕರೆಯುವರು.

ಶ್ರೀ ವೇದವ್ಯಾಸರು ಲೋಕಕ್ಕೆ ಮಾಡಿರುವ ಉಪಕಾರವು ಚಿರಸ್ಮರಣೀಯವಾಗಿರುವದು. ಅವರು ನಮಗೆ ಉಪಕಾರಮಾಡಿರುವರೆಂದು ಹೇಳುವವರು ಕೂಡ ಅವರ ಗೌರವಕ್ಕೂ ಯೋಗ್ಯತೆಗೂ ಕಡಿಮೆಯ ತರಗತಿಯನ್ನು ಕೊಟ್ಟಂತೆಯೇ ಹೊರತು ಉಚ್ಚಸ್ಥಾನವನ್ನು ಕೊಟ್ಟಂತಾಗುವದಿಲ್ಲ. ಭಗವಂತನು ನಮಗೆ ಬಹಳ ಉಪಕಾರಮಾಡಿರುತ್ತಾನೆಂದು ಹೇಳಬಹುದೆ? ಭಗವಂತನ ದಯೆಯಿಲ್ಲದೆ ನಮಗೆ ಸ್ವತಂತ್ರಪ್ರಯತ್ನದಿಂದ ಏನಾದರೂ ದೊರಕುತಿದ್ದರೆ ಹಾಗೆ ಹೇಳಬಹುದಾಗಿತ್ತು. ಆದರೆ ನಿಜವಾಗಿ ಹಾಗಿಲ್ಲ; ಆತನು ನಮಗೆ ಕೈಕಾಲು ಮುಂತಾದ ಅವಯವಗಳನ್ನು ಒದಗಿಸಿದ್ದಲ್ಲದೆ ಅವುಗಳಿಗೆ ಭೋಗ್ಯವಾದ ವಿಷಯಗಳನ್ನು ಸೃಷ್ಟಿಮಾಡಿರುವನು. ಇಂಥ ವಿಷಯಗಳನ್ನು ಅನುಭವಿಸುವದಕ್ಕೆ ಶಕ್ತಿಯನ್ನೂ ಅವುಗಳನ್ನುಪಯೋಗಿಸುವ ಬುದ್ಧಿಯನ್ನೂ ಕೊಟ್ಟಿರುವನು. ಪ್ರಪಂಚದಲ್ಲಿ ನಮಗೆ ಬೇಸರ ಹುಟ್ಟಿದರೆ ನಮ್ಮನಮ್ಮಲ್ಲಿಯೇ ನಿರತಿಶಯವಾದ ಸುಖವು ದೊರೆಯುವಂತೆ ಅಮೃತನಿಧಿಯಾದ ತಾನೇ ನಮ್ಮಲ್ಲಿ ಸನ್ನಿಹಿತನಾಗಿರುವನು. ಅಂಥ ಉತ್ತಮವಾದ ವೈರಾಗ್ಯಾದಿ ಸಮಸ್ತ ವಿಚಾರಗಳನ್ನೂ ಸ್ಪಷ್ಟವಾಗಿ ಒಡೆದು ಹೇಳುವಂತೆ ಹದಿನೆಂಟು ಪರ್ವಗಳಿಂದ ಕೂಡಿದ ಮಹಾಭಾರತವನ್ನು ರಚಿಸಿದ್ದಲ್ಲದೆ, ಹದಿನೆಂಟು ಪುರಾಣಗಳನ್ನು ಸಿದ್ಧಮಾಡಿದ್ದು ಕೊನೆಯ ಮಹೋಪಕಾರವು. ಅಂತು ವೇದವೇದಾರ್ಥವನ್ನು ನಿರ್ಣಯ ಮಾಡುವ ಸೂತ್ರ, ಅದನ್ನೆ ವಿಸ್ತಾರವಾಗಿ ನಿದರ್ಶನಗಳಿಂದ ಮೂಢರಿಗೂ ಸುಲಭವಾಗಿ ತಿಳಿಯ ಹೇಳುವ ಇತಿಹಾಸಪುರಾಣಗಳು ಇಷ್ಟು ಗ್ರಂಥಗಳಿಂದ ಜನರಿಗೆ ಬೇಕಾದ ಧರ್ಮ, ಅರ್ಥ, ಕಾಮ, ಮೋಕ್ಷ - ಎಂಬ ನಾಲ್ಕು

ಪುರುಷಾರ್ಥಗಳನ್ನೂ ವಿಸ್ತಾರವಾಗಿ ನಿರೂಪಿಸುವ ಗ್ರಂಥಾಂಬುಧಿಯನ್ನು ನಿರ್ಮಾಣಮಾಡಿ ಇವರು ''**ವ್ಯಾಸೋಚ್ಛಿಷ್ಟಂ ಜಗತ್ಸರ್ವಮ್**'' - (ಶ್ರೀ ವೇದವ್ಯಾಸರು ಹೇಳಿರುವದನ್ನೇ ಮಿಕ್ಕ ಗ್ರಂಥಕಾರರು ಅನುವರ್ತಿಸುವರು) ಎಂಬ ಲೋಕೋಕ್ತಿಗೆ ಅವಕಾಶವಿತ್ತರು.

ಪರಮಾತ್ಮನ ಅನುಗ್ರಹವಾಗಬೇಕೆಂದು ಹಂಬಲಿಸುವರೆಲ್ಲರೂ ಅಗತ್ಯವಾಗಿ ವ್ಯಾಸಪೂರ್ಣಿಮೆಯದಿನ ಹಬ್ಬವನ್ನು ಮಾಡಿ ತಮ್ಮ ಗುರುವಿನಲ್ಲಿ ವ್ಯಾಸಬುದ್ಧಿಯನ್ನಿಟ್ಟು ಆರಾಧನೆಮಾಡಬೇಕು. ಆಗ ಈ ಶ್ಲೋಕಾರ್ಥವನ್ನೂ ಅವಶ್ಯವಾಗಿ ಅನುಸಂಧಾನಮಾಡಬೇಕು.

**ವ್ಯಾಸಾಯ ವಿಷ್ಣುರೂಪಾಯ ವ್ಯಾಸರೂಪಾಯ ವಿಷ್ಣವೇ ।**
**ನಮೋ ವೈ ಬ್ರಹ್ಮನಿಧಯೇ ವಾಸಿಷ್ಠಾಯ ನಮೋ ನಮಃ ॥**

ಸಾಕ್ಷಾದ್ವಿಷ್ಣುರೂಪವಾಗಿರುವ ವ್ಯಾಸಮಹರ್ಷಿಗಳಾಗಿ ಅಥವಾ ವ್ಯಾಸರೂಪದಿಂದವತರಿಸಿದ ಶ್ರೀಮಹಾವಿಷ್ಣುವೇ ಆಗಿ ವೇದನಿಧಿಗಳೇ ಆಗಿರುವ ವಸಿಷ್ಠ ವಂಶೋದ್ಭವರಾದ ಮಹರ್ಷಿಗಳಿಗೆ ನಮಸ್ಕಾರವು.

★★★★★

# ಯಾಜ್ಞವಲ್ಕ್ಯರು

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ವೈದಿಕವಾಙ್ಮಯದಲ್ಲಿ ಯಾಜ್ಞವಲ್ಕ್ಯರಿಗೆ ಒಂದು ಅಸಾಧಾರಣಸ್ಥಾನವಿರುತ್ತದೆ. ಶುಕ್ಲಯಜುರ್ವೇದವೆಂದು ಪ್ರಸಿದ್ಧವಾಗಿರುವ ವೇದವು ಆ ಮಹನೀಯರಿಂದ ಬಂದದ್ದು ಅದರ ಭಾಗವಾದ ಸಂಹಿತೆಯೂ ಬ್ರಾಹ್ಮಣವೂ ಭರತಖಂಡದಲ್ಲೆಲ್ಲ ಪ್ರಸಿದ್ಧವಾಗಿರುತ್ತವೆ. ಸಂಹಿತೆಯಲ್ಲಿ ಅಡಗಿರುವ ಈಶಾವಾಸ್ಯೋಪನಿಷತ್ತು ಮತ್ತು ಬ್ರಾಹ್ಮಣದ ಕೊನೆಯಲ್ಲಿರುವ 'ಬೃಹದಾರಣ್ಯಕೋಪನಿಷತ್ತು' - ಇವು ಜಗನ್ಮಾನ್ಯವಾದ ವೇದಾಂತಮೂಲಗ್ರಂಥಗಳಾಗಿರುತ್ತವೆ.

ಯಜುರ್ವೇದವು **ಕೃಷ್ಣಯಜುರ್ವೇದವೆಂದೂ ಶುಕ್ಲಯಜರ್ವೇದವೆಂದೂ** ಎರಡು ದೊಡ್ಡ ಭಾಗಗಳಾಗಿ ಒಡೆದುಕೊಂಡಿರುತ್ತದೆ. ಕೃಷ್ಣಯಜರ್ವೇದ ದಲ್ಲಿರುವಂತೆ ಮಂತ್ರಗಳೂ ಕರ್ಮವಿವರಣೆಯನ್ನು ತಿಳಿಸುವ ಬ್ರಾಹ್ಮಣಗಳೂ ಮಿಶ್ರವಾಗಿರದೆ ಮಂತ್ರಗಳು ಸಂಹಿತೆಯಲ್ಲಿಯೂ ವಿವರಣೆಗಳು ಬ್ರಾಹ್ಮಣದಲ್ಲಿಯೂ ವಿಂಗಡವಾಗಿ ಬರುವದರಿಂದಲೇ ಈ ವೇದಕ್ಕೆ ಶುಕ್ಲ ಎಂದರೆ ಶುದ್ಧವಾದದ್ದು - ಎಂಬ ಹೆಸರು ಬಂದಿದೆಯೆಂದು ಪುರಾತತ್ತ್ವಶೋಧಕರು ಅಭಿಪ್ರಾಯ ಪಡುತ್ತಾರೆ.

**ಶತಪಥವೆಂ**ದು ಪ್ರಸಿದ್ಧವಾಗಿರುವ ಈ ವೇದದ ಬ್ರಾಹ್ಮಣವು ಹೆಸರಿಗೆ ತಕ್ಕಂತೆ ನೂರು ಅಧ್ಯಾಯಗಳುಳ್ಳದ್ದಾಗಿದೆ. ಅಷ್ಟು ದೊಡ್ಡ ಬ್ರಾಹ್ಮಣವು ಮತ್ತೆ ಯಾವ ವೇದಕ್ಕೂ ಇರುವದಿಲ್ಲ. ಅದರಲ್ಲಿ ಕರ್ಮಭಾಗವನ್ನು ವಿಸ್ತರಿಸಿರುವದಲ್ಲದೆ ಪುರಾಣಗಳಲ್ಲಿ ಕಂಡುಬರುವ ಅನೇಕ ಕಥೆಗಳು ಅಲ್ಲಿ ಬೀಜರೂಪದಿಂದ ಕಂಡುಬರುತ್ತವೆ. ವೈದಿಕಕಾಲದ ಜನರ ಸ್ಥಿತಿಯನ್ನು ನಿರ್ಣಯಿಸುವದಕ್ಕೂ ವೈದಿಕವಾಙ್ಮಯದ ಇತಿಹಾಸವನ್ನು ಶೋಧಿಸುವದಕ್ಕೂ ಸಹಾಯಕವಾದ ಅನೇಕ ವಿಚಾರಗಳು ಅಲ್ಲಿ ದೊರೆಯುವವೆಂಬ ಕಾರಣದಿಂದ ಪಾಶ್ಚಾತ್ಯವಿದ್ವಾಂಸರು ಈ ಬ್ರಾಹ್ಮಣವನ್ನು ಆದರದಿಂದ ಶೋಧಿಸುತ್ತಿದಾರೆ. ಮತತ್ರಯದ ಆಚಾರ್ಯರೂ ಈ ಬ್ರಾಹ್ಮಣದ ವಾಕ್ಯಗಳನ್ನು ತಮ್ಮ ತಮ್ಮ ಭಾಷ್ಯಗಳಲ್ಲಿ ಪ್ರಮಾಣವಾಗಿ ಉದಾಹರಿಸಿರುತ್ತಾರೆ.

**ಶುಕ್ಲಯಜರ್ವೇದದ ಆವಿರ್ಭಾವಾದ ಬಗ್ಗೆ** ಒಂದು ಕಥೆಯು ಪುರಾಣಗಳಲ್ಲಿ ಕಂಡುಬರುತ್ತದೆ. ಬ್ರಹ್ಮರಾತನ ಮಗನಾದ ಯಾಜ್ಞವಲ್ಕ್ಯನು ತಮ್ಮ ಸೋದರಮಾವಂದಿರಾದ ವೈಶಂಪಾಯನರಲ್ಲಿ ಯಜುರ್ವೇದವನ್ನು ಅಧ್ಯಯನ ಮಾಡುತ್ತಿರಲು ಒಂದಾನೊಂದು ದಿನ ಮಹಾಮೇರುಪರ್ವತ ಪ್ರದೇಶದಲ್ಲಿ ನಡೆಯ ಬೇಕಾಗಿದ್ದ ಒಂದು ಸಭೆಗೆ ಯಾವ ಋಷಿಯು ಬರುವದಿಲ್ಲವೋ ಅವನಿಗೆ ಏಳು ದಿನದೊಳಗೆ ಬ್ರಹ್ಮಹತ್ಯಾದೋಷವು ಬರಲಿ! - ಎಂದು ಋಷಿಗಳೆಲ್ಲರೂ ಒಂದು ಕಟ್ಟನ್ನು ಮಾಡಿಕೊಂಡಿದ್ದರು. ಕಾರಣಾಂತರದಿಂದ ವೈಶಂಪಾಯನರಿಗೆ ಆ ಸಮಾಜಕ್ಕೆ ಹೋಗುವದು ಆಗಲಿಲ್ಲ; ಅದರ ಫಲವಾಗಿ ಅವರಿಗೆ ಬ್ರಹ್ಮಹತ್ಯೆಯು ಗಂಟುಬಿದ್ದಿತು. ಒಂದು ದಿನ ಅವರು ತಮ್ಮ ಸೋದರಳಿಯನೊಬ್ಬನನ್ನು ಕಾಲಿಂದ ಮುಟ್ಟಿದಮಾತ್ರದಿಂದಲೇ ಅವನು ಕಾಲವಾದನು. ಅವರು ತಮ್ಮ ಶಿಷ್ಯರನ್ನು

ಕರೆದು ನೀವು 'ನನಗೆ ಒದಗಿರುವ ಬ್ರಹ್ಮಹತ್ಯಾದೋಷದ ಪರಿಹಾರಕ್ಕಾಗಿ ತಪಸ್ಸು ಮಾಡಬೇಕು' ಎಂದು ಹೇಳಲು ಅಷ್ಟರಲ್ಲಿಯೇ ಯಾಜ್ಞವಲ್ಕ್ಯನು ''ಸ್ವಾಮಿ. ಅಲ್ಪತೇಜಸ್ಕರಾದ ಈ ಶಿಷ್ಯರನ್ನು ಏತಕ್ಕೆ ಆಯಾಸಗೊಳಿಸುತ್ತಿರಿ? ನಾನೊಬ್ಬನೇ ಈ ವ್ರತವನ್ನು ಮಾಡಿಬಿಡುತ್ತೇನೆ'' ಎಂದನು. ಅದನ್ನು ಕೇಳಿ ಕುಪಿತರಾದ ಗುರುಗಳು ''ಬ್ರಾಹ್ಮಣಶ್ರೇಷ್ಠರನ್ನು ನಿಂದಿಸುವ ನಿನ್ನ ಶಿಷ್ಯತ್ವವು ನಮಗೆ ಬೇಕಾಗಿರುವದಿಲ್ಲ, ಕೂಡಲೆ ನಾವು ಹೇಳಿಕೊಟ್ಟಿರುವ ಯಜುಸ್ಸುಗಳನ್ನು ನಮಗೆ ಕೊಟ್ಟುಬಿಡು'' ಎಂದರು. ಆಗ ಯಾಜ್ಞವಲ್ಕ್ಯನು ''ಸ್ವಾಮಿ, ಇದು ನಾನು ಗುರುಭಕ್ತಿಯಿಂದ ಆಡಿದಮಾತೇ ಹೊರತು ಮತ್ತೊಬ್ಬರ ಅಪಮಾನಕ್ಕೆಂದಲ್ಲ; ಆದರೆ ತಾವು ಹಿಂದಕ್ಕೆ ಕೊಡೆಂದು ಹೇಳಿದ ಯಜುಸ್ಸುಗಳು ನನಗೂ ಬೇಡ, ಇಗೋ ತೆಗೆದುಕೊಳ್ಳಿ'' ಎಂದು ರಕ್ತ ಬಳಿದ ಯಜಸ್ಸುಗಳನ್ನು ಸಾಕಾರವಾಗಿಯೇ ಕಕ್ಕಿಬಿಟ್ಟನು. ಆ ಯಜುಸ್ಸುಗಳನ್ನು ಕೆಲವು ಋಷಿಗಳು ತಿತ್ತಿರಿ ಎಂಬ ಪಕ್ಷಿಯ ರೂಪದಿಂದ ಸ್ವೀಕರಿಸಿದ್ದರಿಂದ ಅವರು **ತೈತ್ತಿರೀಯರೆಂದು** ಪ್ರಸಿದ್ಧರಾದರು. ಗುರುಗಳಿಗಾಗಿ ತಪಸ್ಸನ್ನಾಚರಿಸಿದ ಶಿಷ್ಯರಿಗೆ **ಚರಕಾಧ್ವರ್ಯು**ಗಳೆಂದು ಹೆಸರು ಬಂತು. ಮುಂದೆ ಯಾಜ್ಞವಲ್ಕ್ಯನು ಸೂರ್ಯಭಗವಂತನನ್ನು ಕುರಿತು ತಪಸ್ಸು ಮಾಡಿ ತನ್ನ ಗುರುವಿನಬಳಿಯಲ್ಲಿ ಕೂಡ ಇಲ್ಲದಂಥ 'ಅಯಾತಯಾಮ' (ಹೊಸವು)ಗಳೆಂಬ ಯಜುಸ್ಸುಗಳನ್ನು ಪಡೆದುಕೊಂಡನು. ಸೂರ್ಯನು ವಾಜಿ(ಕುದುರೆ)ಯ ರೂಪದಿಂದ ಉಪದೇಶಮಾಡಿದ್ದರಿಂದ ಆ ವೇದವನ್ನು ಅಧ್ಯಯನಮಾಡುವವರಿಗೂ ವಾಜಿ ಗಳೆಂದು ಹೆಸರಾಯಿತು. ಆ ವೇದವನ್ನು ಯಾಜ್ಞವ್ಕ್ಯನು ಕಣ್ವನೇ ಮುಂತಾದ ಶಿಷ್ಯರಿಗೆ ಅಧ್ಯಯನಮಾಡಿಸಿದನು.

ಮೇಲೆ ಹೇಳಿದ ಕಥೆಯು **ವಿಷ್ಣುಪುರಾಣ (3-5), ಭಾಗವತ (12-6)** ಮುಂತಾದ ಪುರಾಣಗಳಲ್ಲಿರುತ್ತದೆ. ಸೂರ್ಯನ ಅನುಗ್ರಹದಿಂದ ಹೊಸ ಯಜುರ್ವೇದವು ತಮಗೆ ದೊರೆತದ್ದು, ಆ ಕಾಲದಲ್ಲಿ ಸರಸ್ವತಿಯು ತಮ್ಮ ಬಾಯಿಯಲ್ಲಿ ಪ್ರವೇಶಿಸಿದ್ದು, ಮುಂದೆ ತಾವು ಶತಪಥಬ್ರಾಹ್ಮಣಕ್ಕೆ ಸಂಪ್ರದಾಯಕರ್ತರಾದದ್ದು - ಇದೆಲ್ಲವನ್ನೂ ಯಾಜ್ಞವಲ್ಕ್ಯರೇ ಹೇಳಿದಂತೆ **ಮಹಾಭಾರತ** (ಶಾಂ.1317-3ರಿಂದ ಮುಂದಕ್ಕೆ) ವರ್ಣಿತವಾಗಿರುತ್ತದೆ. ಶತಪಥಬ್ರಾಹ್ಮಣದಲ್ಲಿ ಚರಕಾಧ್ವರ್ಯುಗಳ ಕರ್ಮಾಚರಣೆಯ ಕೆಲಕೆಲವು ಕ್ರಮಗಳನ್ನು ಬರೆದು ''ಹೀಗೆ ಮಾಡಲಾರದು, ಹೀಗೆಯೇ ಮಾಡಬೇಕು''

ಎಂದು ಹೊಸ ಕ್ರಮಗಳನ್ನು ಉಪದೇಶಿಸಿರುವದು ಕಂಡುಬರುತ್ತದೆ. ಅದನ್ನು ವಿವರಿಸುವದಕ್ಕಾಗಿಯೂ ತೈತ್ತಿರೀಯ ಎಂಬ ಹೆಸರಿನ ವ್ಯತ್ಪತ್ತಿಯನ್ನು ತಿಳಿಸುವದಕ್ಕಾಗಿಯೂ ಮೇಲೆ ಕಂಡ ಕಥೆಯು ಹುಟ್ಟಿತೋ ಹೇಗೋ ತಿಳಿಯದು. ಅದು ಹೇಗಾದರೂ ಇರಲಿ, ಯಾಜ್ಞವಲ್ಕ್ಯರು ಮಹಾತೇಜಸ್ವಿಗಳಾಗಿದ್ದು ಗುರುಗಳ ಬಳಿಯಲ್ಲಿ ಅಧ್ಯಯನ ಮಾಡಿದರೆಂಬುದೂ ಕಾರಣಾಂತರದಿಂದ ಆ ವೇದವನ್ನೂ ಬಿಡಬೇಕಾಗಿಬಂದಾಗ ಎಲ್ಲಾ ಬಗೆಯಿಂದಲೂ ಅದಕ್ಕಿಂತ ಉತ್ಕೃಷ್ಟವಾದ ವೇದವೊಂದಕ್ಕೆ ಸಂಪ್ರದಾಯ ಕರ್ತರಾಗುವಷ್ಟು ಪರಮಾತ್ಮನ ಅನುಗ್ರಹಕ್ಕೆ ಪಾತ್ರರಾದರೆಂಬುದೂ ಈ ಕಥೆಯಿಂದ ವ್ಯಕ್ತವಾಗುತ್ತದೆ. ಅವರ ಶತಪಥ ಬ್ರಾಹ್ಮಣವನ್ನು ಆಪಸ್ತಂಬರೇ ಮುಂತಾದ ಶಾಖಾಂತರದ ಸೂತ್ರಕಾರರು ಕೂಡ ಪ್ರಮಾಣವಾಗಿ ಗೌರವಿಸಿರುತ್ತಾರೆಂಬುದೊಂದು ಅವರ ಮಾಹಾತ್ಮ್ಯೆಯನ್ನು ಗುರುತಿಸಬೇಕು.

**ಯಾಜ್ಞವಲ್ಕ್ಯರ ವಿದ್ವತ್ತು** ಎಷ್ಟು ಮೇಲೆಂಬುದಕ್ಕೆ ಅನೇಕ ನಿದರ್ಶನಗಳಿವೆ ಒಂದಾನೊಂದು ಸಮಯದಲ್ಲಿ ಜನಕನೂ ಯಾಜ್ಞವಲ್ಕ್ಯರೂ ಸೇರಿರಲು ಅವರು ಆತನಿಗೆ ಕಾಮಪ್ರಶ್ನೆಯ – ಎಂದರೆ ಯಾವ ಪ್ರಶ್ನೆಯನ್ನಾದರೂ ಕೇಳಬಹುದೆಂಬ ವರವನ್ನು ಕೊಟ್ಟರು – ಎಂದು ವೇದದಲ್ಲಿರುತ್ತದೆ. ಅವರ ಬಾಯಿಯಲ್ಲಿ ಸರಸ್ವತಿಯು ನಲಿದಾಡುತ್ತಿದ್ದಳೆಂಬುದಕ್ಕೆ ಈ ಕೆಚ್ಚೆದೆಯ ನುಡಿಗಿಂತಲೂ ಬೇರೊಂದು ಸಾಕ್ಷ್ಯವು ಬೇಕೆ? ಅದು ಬರಿಯ ಜಂಬದ ಮಾತಲ್ಲವೆಂಬುದು ಬೃಹದಾರಣ್ಯಕೋಪನಿಷತ್ತಿನಲ್ಲಿ ಸ್ಪಷ್ಟವಾಗಿರುತ್ತದೆ. ಜನಕನ ಸಭೆಯಲ್ಲಿ ಬ್ರಹ್ಮವಿದ್ಯೆಯಲ್ಲಿ ನಿಪುಣರಾದವರಿಗೆಂದು ಮೊದಲನೆಯ ಸಂಭಾವನೆಯಾಗಿ ಇಟ್ಟಿದ್ದ ಚಿನ್ನದ ಕೋಡಣಸಿನ ಸಾವಿರ ಗೋವುಗಳನ್ನು ಈ ಬ್ರಹ್ಮರ್ಷಿಗಳು ಸಾಮಶ್ರವನೆಂಬ ತಮ್ಮ ಶಿಷ್ಯನಿಂದ ಧೈರ್ಯವಾಗಿ ಮನೆಗೆ ಕಳುಹಿಸಿಕೊಟ್ಟು ವಾದಕ್ಕೆ ಬಂದ ಎದುರಾಳಿಗಳನ್ನೆಲ್ಲ ಒಬ್ಬೊಬ್ಬರನ್ನಾಗಿ ಜಯಿಸಿದ್ದಲ್ಲದೆ ''ಅಯ್ಯ, ಬ್ರಾಹ್ಮಣರಿರ, ನಿಮ್ಮಲ್ಲಿ ಯಾರು ಬೇಕಾದರೂ ಅಥವಾ ನೀವೆಲ್ಲರೂ ಸೇರಿಯಾದರೂ ನನ್ನನ್ನು ಪ್ರಶ್ನೆಮಾಡಿರಿ, ಉತ್ತರಕೊಡುತ್ತೇನೆ. ನಿಮ್ಮಲ್ಲಿ ಯಾರನ್ನು ಬೇಕಾದರೂ ನಾನು ಕೇಳುತ್ತೇನೆ ಅಥವಾ ನಿಮ್ಮೆಲ್ಲರನ್ನೂ ಕೇಳೆಂದರೂ ಕೇಳುತ್ತೇನೆ ಎಲ್ಲರೂ ಸೇರಿಯಾದರೂ ನನ್ನ ಪ್ರಶ್ನೆಗೆ ಉತ್ತರ ಕೊಡಿ ನೋಡೋಣ!'' ಎಂದು ಸೆಣಸಿಗೆ ಕರಿದಾಗ ಒಬ್ಬರೂ ಉಸಿರೆತ್ತದೆ ಇರುತ್ತಿದ್ದರೆಂದು ಆ ಉಪನಿಷತ್ತಿನಲ್ಲಿ (ಬೃ. 3-9) ಹೇಳಿರುತ್ತದೆ. ಇದಲ್ಲವೆ ವಿದ್ಯೆಯ ಮೇರುಶಿಖರವನ್ನೇರಿದ ಗುರುತು!

ಯಾಜ್ಞವಲ್ಕ್ಯರು ಬ್ರಹ್ಮವಿದ್ಯೆಯಲ್ಲಿ ನಿಪುಣರು, ವಾದದಲ್ಲಿ ಶೂರರು - ಎಂಬುದಿಷ್ಟೇ ಅಲ್ಲ. ಅವರು ಜನಕರಾಜನನ್ನು ತಮ್ಮ ವಿದ್ಯಾಮಹಿಮೆಯಿಂದ ಒಲಿಸಿಕೊಂಡು ಅವನಿಗೂ ಕೀರ್ತಿಯನ್ನು ತಂದುಕೊಟ್ಟು ಅವನಿಂದ ವಿದ್ವತ್ಸಂಭಾವನೆಯನ್ನು ಹೊಂದುತ್ತಿದ್ದರು. ಅವರ ಬೋಧನಾಶಕ್ತಿಯ ಹೆಚ್ಚಳವನ್ನು ಒಂದಾನೊಂದು ನಿದರ್ಶನದಿಂದ ನಾವು ತಿಳಿಯಬಹುದು. ಒಮ್ಮೆ ಅವರು ಜನಕನಿಗೆ ಉಪದೇಶಮಾಡುತ್ತಿದ್ದಾಗ ಅವರ ತತ್ತ್ವರತ್ನಗಳಲ್ಲಿ ಒಂದೊಂದಕ್ಕೂ ಮೆಚ್ಚಿ ತಲೆದೂಗಿ ಆ ಸಮ್ರಾಟನು ''ಸಾವಿರ ಮದ್ದಾನೆಗಳನ್ನು ತಮಗೆ ಕಾಣಿಕೆಯಾಗಿ ಸಮರ್ಪಿಸಿರುವೆನು'' ಎಂದರೂ ಅವರು ''ಸಂಪೂರ್ಣವಾಗಿ ವಿದ್ಯೋಪದೇಶವನ್ನು ಮಾಡದೆ ಗುರುದಕ್ಷಿಣೆಯನ್ನು ತೆಗೆದುಕೊಳ್ಳಬಾರದೆಂದು ನಮ್ಮ ತಂದೆಯವರು ನನಗೆ ತಿಳಿಸಿರುತ್ತಾರೆ'' ಎನ್ನುತ್ತಾ ಕೊನೆಗೆ ಉಪನಿಷತ್ತಿನಲ್ಲೆಲ್ಲ ಪ್ರಸಿದ್ಧವಾದ ನೇತಿನೇತಿವಾಕ್ಯಗಮ್ಯವಾದ ಪರಮವಸ್ತುವಿನ ಸ್ವರೂಪವನ್ನು ತಿಳಿಸಿಕೊಡಲು ಆ ಪ್ರಭುವರ್ಯನು ''ಅಭಯಸ್ಥಾನವನ್ನು ಉಪದೇಶಿಸಿದ ಯಾಜ್ಞವಲ್ಕ್ಯರೆ, ತಮಗೆ ನಮಸ್ಕಾರ! ಇಗೊ, ಇಡಿಯ ವಿದೇಹರಾಜ್ಯವೇ ಇನ್ನು ಮೇಲೆ ತಮ್ಮದಾಗಿರುತ್ತದೆ, ನಾನೂ ತಮ್ಮ ಅಡಿಯಾಳಾಗಿರುವೆನು'' ಎಂದನಂತೆ! (ಬೃ.4-2)

ಹೀಗೆ ಈ ಬ್ರಹ್ಮರ್ಷಿಗಳು ವಿದ್ಯಾವಂತರಾದ ಬ್ರಾಹ್ಮಣರಲ್ಲಿ ಅಗ್ರಸ್ಥಾನವನ್ನು ಹೊಂದಿ ಕೀರ್ತಿಶಾಲಿಗಳಾಗಿ ರಾಜಸನ್ಮಾನದಿಂದ ಗೌರವವನ್ನೂ ಧನವನ್ನೂ ಸಂಪಾದಿಸಿ ಸುಖದಿಂದ ಜೀವನವನ್ನು ಸಾಗಿಸುತ್ತಾ ಆದರ್ಶಕುಟುಂಬಿಗಳಾಗಿದ್ದರೂ ಅವರೂ ಅಷ್ಟರಿಂದಲೇ ಉಬ್ಬಿ ಪರಮಾರ್ಥವನ್ನು ಮರೆಯುವವರಾಗಲಿಲ್ಲ. ತಮಗೆ ಬ್ರಹ್ಮವಾದಿನಿಯಾದ ಮೈತ್ರೇಯಿ, ಕುಟುಂಬಧರ್ಮವನ್ನು ಮಿಕ್ಕವರಿಗೆ ಮೇಲುಪಙ್ಕ್ತಿಯಾಗಿ ಆಚರಿಸಿಕೊಂಡಿದ್ದ ಕಾತ್ಯಾಯನಿ - ಎಂಬ ಇಬ್ಬರು ಧರ್ಮಪತ್ನಿಯರು ಏಕನಿಷ್ಠೆಯಿಂದ ಸೇವೆಯನ್ನು ಸಲ್ಲಿಸುತ್ತಿದ್ದರೂ ಇಹಲೋಕದ ವಿಲಾಸದಲ್ಲಿ ಸಿಕ್ಕಿಕೊಳ್ಳಲಿಲ್ಲ. ಸಕಲಸಂಪತ್ತುಗಳ ನಡುವೆ ಇರುವಾಗಲೇ ಅವರು ಧೀರರಾಗಿ ವೈರಾಗ್ಯದಿಂದ ಎಲ್ಲವನ್ನೂ ತೊರೆದು ತಮ್ಮ ಸಂಪತ್ತೆಲ್ಲವನ್ನೂ ಕಾತ್ಯಾಯನಿಗೆ ಕೊಟ್ಟು ಮೈತ್ರೇಯಿಗೆ ಬೇಕಾಗಿದ್ದ ಮೋಕ್ಷಸಾಧನವಾದ ಪರಮಾತ್ಮವಿದ್ಯೆಯನ್ನು ಹೃದಯಂಗಮವಾಗಿ ಉಪದೇಶಿಸಿ ಪತ್ನಿಯರ ಅನುಜ್ಞೆಯಿಂದ ವಿದ್ವತ್ಸಂನ್ಯಾಸವನ್ನು ಸ್ವೀಕರಿಸಿ ಶಾಂತಶಿವಾದ್ವೈತವಾದ ಪರಬ್ರಹ್ಮದಲ್ಲಿ ವಿಶ್ರಾಂತಿಯನ್ನು ಪಡೆದರು!

ಹೀಗೆ ಬ್ರಹ್ಮಚರ್ಯ, ಗಾರ್ಹಸ್ಥ್ಯ, ಸಂನ್ಯಾಸ – ಈ ಎಲ್ಲಾ ಧರ್ಮಗಳನ್ನೂ ತಮ್ಮ ದಿವ್ಯಚರಿತೆಯಿಂದಲೇ ಸಾರಿರುವ ಈ ಮಹಾನುಭಾವರ ಮುಖದಿಂದ ಬಂದಿರುವ ಶುಕ್ಲಯಜುರ್ವೇದವು ಎಂಥ ಪವಿತ್ರವಾಗಿರಬೇಕು! ಅವರ ದಿವ್ಯವಾಣಿಯ ಚರಮಸಂದೇಶದಂತಿರುವ ಮೈತ್ರೇಯಿ ಯಾಜ್ಞವಲ್ಕ್ಯರ ಸಂವಾದವು ಎಂಥ ಮಂಗಲಕರವಾದದ್ದಾಗಿರಬೇಕು! ಆ ವೇದವನ್ನು ಅಧ್ಯಯನಮಾಡಿ, ಅದರಲ್ಲಿ ಹೇಳಿರುವ ಕರ್ಮಗಳನ್ನು ಯಥಾಶಕ್ತಿಯಾಗಿ ಆಚರಿಸಿ ಈಶಬೃಹದಾರಣ್ಯಕೋಪನಿಷತ್ತುಗಳ ಅಧ್ಯಾತ್ಮವಿದ್ಯೆಯ ಅಮೃತಸಾಗರದಲ್ಲಿ ಈಜಾಡುವವರೇ ಧನ್ಯರು.

ನಮ್ಮ ದೇಶದಲ್ಲಿ ಶುಕ್ಲಯಜುರ್ವೇದಿಗಳ ಸಂಖ್ಯೆಯು ಇತರ ಶಾಖಾಧ್ಯೇತೃಗಳಿಗಿಂತ ಕಡಿಮೆಯಾಗಿರುವದರಿಂದಲೋ ಅಥವಾ ಮತ್ತೆ ಯಾವ ಕಾರಣದಿಂದಲೋ ಕೆಲವರು ಮೂಢರು 'ಯಾಜ್ಞವಲ್ಕ್ಯರು ಶಾಪಗ್ರಸ್ತರು, ಅವರ ವೇದವನ್ನು ಅಧ್ಯಯನಮಾಡುವ ಕಾಣ್ವಮಾಧ್ಯಂದಿನರು ಸವ್ಯವಹಾರಕ್ಕೆ ಅರ್ಹರಲ್ಲ' ಎಂದು ಮುಂತಾಗಿ ಇಲ್ಲದಸಲ್ಲದ ಆರೋಪವನ್ನು ಹುಟ್ಟಿಹಾಕಿಕೊಂಡು ಬ್ರಹ್ಮರ್ಷಿಗಳನ್ನು ನಿಂದೆಮಾಡಿದ ಪಾಪಕ್ಕೂ ಬ್ರಾಹ್ಮಣರನ್ನು ನಿಷ್ಕಾರಣವಾಗಿ ತಿರಸ್ಕರಿಸಿದ ಪಾಪಕ್ಕೂ ಗುರಿಯಾಗುತ್ತಿರುವರು. ಮೇಲೆ ಹೇಳಿದ ಜನಕ ಸಭೆಯಲ್ಲಿ ವಾದಕ್ಕೆ ಬಂದ ಎದುರಾಳಿಗಳಲ್ಲಿ ಒಬ್ಬನಾದ 'ವಿದಗ್ಧಶಾಕಲ್ಯ'ನೆಂಬ ಬ್ರಾಹ್ಮಣನಿಗೆ ಬ್ರಹ್ಮನಿಷ್ಠರಾದ ಯಾಜ್ಞವಲ್ಕ್ಯರ ತಿರಸ್ಕಾರದಿಂದ ತಲೆಯು ಹೋಳಾಗಿ ಬಿದ್ದುಹೋಯಿತೆಂದೂ ಅವನ ಅಸ್ಥಿಗಳನ್ನು ಕಳ್ಳರು ಯಾವದೋ ಪದಾರ್ಥವೆಂಬ ಭ್ರಾಂತಿಯಿಂದ ಕದ್ದೊಯ್ಯಲಾಗಿ ಅವನ ಉತ್ತರಸಂಸ್ಕಾರಕ್ಕೆ ಕೂಡ ತೊಂದರೆಯಾಯಿತೆಂದೂ ಉಪನಿಷತ್ತಿನಲ್ಲಿದೆ. ಶುಕ್ಲಯಜುರ್ವೇದಿಗಳನ್ನೂ ಯಾಜ್ಞವಲ್ಕ್ಯರನ್ನೂ ನಿಂದಿಸುವ ಅವಿವೇಕಿಗಳು ಇದನ್ನು ನೆನಪಿನಲ್ಲಿಡುವದು ಒಳ್ಳೆಯದು. ಮತತ್ರಯದಲ್ಲಿಯೂ ಅನೇಕ ಪ್ರಖ್ಯಾತಪುರುಷರು ಶಕ್ಲಯಜುರ್ವೇದಿಗಳಾಗಿದ್ದರೆಂದು ತಿಳಿದು ಬರುತ್ತದೆಯಾದ್ದರಿಂದ ಮಹಾತ್ಮರ ಅನಾದರವೂ ಗುರುನಿಂದೆಯೂ ಸರ್ವಥಾ ಶ್ರೇಯಸ್ಕರವಲ್ಲವೆಂಬುದನ್ನು ಮಠಾಧಿಪತಿಗಳೂ ಶಿಷ್ಟಾಚಾರವನ್ನು ಬಲ್ಲ ವಿದ್ವಾಂಸರುಗಳೂ ಆಗಿಂದಾಗ್ಗೆ ತಿಳಿಸುತ್ತಲೇ ಬಂದಿರುತ್ತಾರೆ. ಆದ್ದರಿಂದ ಈ ಅಂಧಪರಂಪರೆಯು ಇನ್ನು ಮೇಲಾದರೂ ಸಂಪೂರ್ಣವಾಗಿ ತೊಲಗುವಂತೆ ಪ್ರಯತ್ನ ಮಾಡುವದು ತಿಳಿದವರೆಲ್ಲರ ಕರ್ತವ್ಯವಾಗಿರುತ್ತದೆ.

ಇದು ಹಾಗಿರಲಿ, ನಾಯಿ ಬೊಗಳಿದರೆ ಹೇಗೆ ದೇವಲೋಕವು ಹಾಳಾಗದೋ ಹಾಗೆ ಮೂಢರಾದವರು ಮಾಡುವ ನಿಂದೆಯಿಂದ ಮಹನೀಯರೂ ಪ್ರಾತಃಸ್ಮರಣೀಯರೂ ಆದ ಯಾಜ್ಞವಲ್ಕ್ಯರಿಗೆ ಯಾವ ಕೊರತೆಯೂ ಉಂಟಾಗುವ ಸಂಭವವೇ ಇಲ್ಲ. ಸದ್ಯಕ್ಕೆ ನಾವುಗಳು ಕೃತಾರ್ಥರಾಗಬೇಕಾದರೆ ಆ ಮಹಾಮಹಿಮರ ಪೂರ್ಣಚರಿತ್ರೆಯನ್ನು ಸಂಶೋಧನಪೂರ್ವಕವಾಗಿ ವಿದ್ವಾಂಸರಿಂದ ಬರೆಯಿಸಬೇಕು. ಅವರ ದಿವ್ಯಕೃತಿಗಳೆಂದು ಪ್ರಸಿದ್ಧವಾಗಿರುವ ಗ್ರಂಥಗಳನ್ನು ಶುಕ್ಲಯಜುರ್ವೇದಸಂಹಿತಾಬ್ರಾಹ್ಮಣಗಳೊಂದಿಗೆ ಸಭಾಷ್ಯವಾಗಿ ಕನ್ನಡಿಸಿ ನಮ್ಮ ದೇಶದಲ್ಲೆಲ್ಲ ಪ್ರಚುರಪಡಿಸಬೇಕು. ಶುಕ್ಲಯಜುರ್ವೇದಿಗಳಾಗಿ ರುವದೇ ಒಂದು ಪುಣ್ಯವಿಶೇಷವೆಂಬ ಭಾವನೆಯು ಆ ಶಾಖೆಯ ಬ್ರಾಹ್ಮಣಬಾಲಕರಲ್ಲೆಲ್ಲ ತುಂಬುವಂತೆ ನಾವುಗಳೆಲ್ಲರೂ ಪ್ರಯತ್ನಿಸಬೇಕು ಹಾಗೆ ಪರಮಾತ್ಮನ ಅನುಗ್ರಹವಾಗಲೆಂದು ಹಾರೈಸುತ್ತೇನೆ.

★★★★★

# ಶ್ರೀ ಶಂಕರಭಗವತ್ಪಾದರವರು

- ಶ್ರೀ ಕೆ.ಎ.ಕೃಷ್ಣಸ್ವಾಮಿ ಅಯ್ಯರವರು

ಇಂದ್ರಿಯಗೋಚರವಾಗಿ ನಮ್ಮೆಲ್ಲರ ಅನುಭವದಲ್ಲಿಯೂ ಇರುತ್ತಿರುವ ಈ ಪ್ರಪಂಚವು ಈಶ್ವರಾಧಿಷ್ಠಿತವಾಗಿರುವದೋ ಸ್ವತಂತ್ರವಾಗಿರತಕ್ಕದ್ದೊ? ಇದಕ್ಕೂ ಇದನ್ನು ನೋಡುತಲಿರುವ ಜೀವನಿಗೂ ಇರುವ ಸಂಬಂಧವೇನು? ಜೀವೇಶ್ವರರಿಗಿರುವ ಸಂಬಂಧವು ಯಾವದು? ಎಂಬ ಈ ವಿಷಯದಲ್ಲಿ ತತ್ತ್ವವನ್ನು ಕಂಡುಹಿಡಿಯುವದಕ್ಕೆ ಅಸಂಖ್ಯಾತವಾದ ಸಿದ್ಧಾಂತಗಳು ಪಾಶ್ಚಾತ್ಯದೇಶಗಳಲ್ಲಿಯೂ ನಮ್ಮ ದೇಶಗಳಲ್ಲಿಯೂ ಹೊರಟಿವೆ. ಹೀಗಿರುವಲ್ಲಿ ಶ್ರೀ ಭಗವತ್ಪಾದರು ಇದೇ ವಿಚಾರದಲ್ಲಿ ಯಾವ ಸಿದ್ಧಾಂತವನ್ನು ಮಾಡಿದರೆಂಬುದನ್ನು ತಿಳಿಯುವದಕ್ಕೆ ವಾಚಕಮಹಾಶಯರಲ್ಲಿ ಕುತೂಹಲವಿರುವದು ಸಹಜವಾಗಿದೆ.

ಇತರ ಸಿದ್ಧಾಂತಗಳಲ್ಲಿ ಈ ಜೀವಿಕೆಯಲ್ಲಿ ಜೀವರು ಅನುಭವಿಸುತ್ತಿರುವ ದುಃಖ, ವ್ಯಾಧಿ, ಮೋಹ, ಮರಣ ಮುಂತಾದವುಗಳು ಅನಿವಾರ್ಯವೆಂತಲೂ

ಅಥವಾ ನಿಯತವಾದ ಕರ್ಮಫಲಗಳೆಂತಲೂ ಆದ್ದರಿಂದ ಅವುಗಳನ್ನು ತಪ್ಪಿಸಿಕೊಳ್ಳುವದು ಯಾವ ಜ್ಞಾನದಿಂದಲಾಗಲಿ ಆಚರಣೆಯಿಂದಲಾಗಲಿ ಸಾಧ್ಯವಾಗಲಾರದೆಂತಲೂ ವರ್ಣಿತವಾಗಿದೆ. ಆ ಸಿದ್ಧಾಂತಗಳಂತೆ ಜೀವನು ಕರ್ಮದಿಂದ ಅಥವಾ ಜ್ಞಾನದಿಂದ, ಇಲ್ಲದಿದ್ದರೆ ಇವೆರಡನ್ನೂ ಕೂಡಿಸಿ ಅನುಷ್ಠಾನ ಮಾಡುವದರಿಂದ ತನ್ನ ಮರಣವಾದ ಮೇಲೆ ಈಶ್ವರಸಾನ್ನಿಧ್ಯವೇ ಮೊದಲಾದ ಸುಖಗಳನ್ನು ಪಡೆದುಕೊಳ್ಳಬಹುದಾಗಿರುತ್ತದೆ. ಆದರೆ ವೇದಾಂತಶಾಸ್ತ್ರವನ್ನು ಉದ್ಧಾರಮಾಡಿ ನಿತ್ಯವಾಗಿ ನೆಲೆಗೊಳ್ಳುವಂತೆ ಮಾಡಿದ ಭಗತ್ಪಾದರ ತಾತ್ಪರ್ಯವೇ ಬೇರೆಯಾಗಿದ್ದು ಉಳಿದ ಎಲ್ಲಾ ಸಿದ್ಧಾಂತಗಳಿಗೂ ವಿಲಕ್ಷಣವಾಗಿರುವದು. ಹೇಗೆಂದರೆ, ಜೀವನು ವೈರಾಗ್ಯವೇ ಮೊದಲಾದ ನಾಲ್ಕು ಸಾಧನಗಳನ್ನು ಅಳವಡಿಸಿಕೊಂಡು ಗುರುವಿನ ಉಪದೇಶದಿಂದ ಬ್ರಹ್ಮಜ್ಞಾನವನ್ನು ಪಡೆಯುವ ಕ್ಷಣದಲ್ಲಿಯೇ **''ಬ್ರಹ್ಮವಿದ್ ಬ್ರಹ್ಮೈವ ಭವತಿ''** ಎಂಬ ನ್ಯಾಯದಿಂದ ಬ್ರಹ್ಮಾನುಭವವನ್ನು ಹೊಂದಿ ಶೋಕ, ಮೋಹ, ಆಧಿ, ವ್ಯಾಧಿ, ಮರಣ ಮುಂತಾದ ಶರೀರವನ್ನು ಆಶ್ರಯಿಸಿರುವ ಎಲ್ಲಾ ವ್ಯವಹಾರಗಳನ್ನೂ ಕೂಡಲೆ ದಾಟುವನಾಗುವನು; ಅವನಿಗೆ ಬಿಡಬೇಕಾದ ಶರೀರವಾಗಲಿ, ವ್ಯವಹಾರಮಾಡಬೇಕಾದ ಪ್ರಪಂಚವಾಗಲಿ ವಿಧಿನಿಷೇಧರೂಪವಾದ ಕರ್ಮಗಳಾಗಲಿ ಇನ್ನು ಮೇಲೆ ಇರುವದಿಲ್ಲ. ಇವುಗಳನ್ನೆಲ್ಲವನ್ನೂ ಮೀರುವದರಿಂದ ಅವನು ನಿತ್ಯವಾದ ಬ್ರಹ್ಮಾನಂದದಲ್ಲಿ ಮುಳುಗಿ ವ್ಯವಹಾರದೃಷ್ಟಿಯಿಂದ **''ಜೀವನ್ಮುಕ್ತ''**ನೆನಸಿಕೊಳ್ಳುವನು.

ಈಗ ಭಗವತ್ಪಾದರವರ ಸಿದ್ಧಾನ್ತಕ್ಕೂ ಉಳಿದ ಎಲ್ಲಾ ಮತಗಳಿಗೂ ಇರುವ ಭೇದವು ಅಜಗಜಾಂತರವೆಂಬುದು ವಾಚಕರಿಗೆ ಮನಗಾಣುವದು. ಮುಖ್ಯವಾಗಿ ಈ ಜೀವಿಕೆಯು ತಾಪಕರೂಪವಾಗಿರುವದು. ಇಲ್ಲಿರುವ ಸಕಲತಾಪಗಳನ್ನೂ ಜ್ಞಾನದಿಂದಲೇ ನಿವೃತ್ತಿಮಾಡಿಕೊಳ್ಳಬಹುದಾಗಿದ್ದರೆ ಅಂಥ ಜ್ಞಾನವನ್ನು ಪಡೆದರೇ ನಮ್ಮ ಜನ್ಮವನ್ನು ಸಾರ್ಥಕಗೊಳಿಸಿಕೊಂಡಂತಾಗುವದು. ಹಾಗಿಲ್ಲದೆ ''ನಂದೋ ರಾಜಾ ಭವಿಷ್ಯತಿ'' ಎಂಬಂತೆ ಮುಂದೆ ಯಾವ ಜನ್ಮದಲ್ಲಿಯೊ ಕರ್ಮಪರಿಪಾಕದಿಂದ ಜ್ಞಾನವನ್ನು ಪಡೆದು, ಆಗಲೂ ಮರಣಹೊಂದಿದ ತರುವಾಯವೇ ಪರಮಪುರುಷಾರ್ಥವನ್ನು ಸಂಪಾದಿಸಬೇಕಾಗಿರುವದೆಂಬುದು ದವಾನಲದಲ್ಲಿ ಸದ್ಯಕ್ಕೆ ಬೆಂದುಬೆಂಡಾಗುತ್ತಿರುವ ಜೀವರಿಗೆ ಯಾವ ವಿಧವಾದ ಸಮಾಧಾನವನ್ನೂ ಕೊಡಲಾರದು. ಇದಲ್ಲದೆ ಮರಣಾನಂತರ ನಮಗೆ

ಉಂಟಾಗಬಹುದಾದ ಫಲಪುರುಷಾರ್ಥಗಳನ್ನು ನಾಸ್ತಿಕರು ಹೇಳುತ್ತಿರುವ ಹಾಗೆ ಬರಿಯ ವಾಕ್ಯಪ್ರಾಮಾಣ್ಯದಿಂದಲೇ ನಂಬಬೇಕಾಗಿರುವದೇ ಹೊರತು ಯುಕ್ತಿ, ಅನುಭವ- ಇವರೆಡಕ್ಕೂ ಆ ಮತದಲ್ಲಿ ಅವಕಾಶವೇ ಇಲ್ಲದೆ ಹೋಗುವದು. ಶ್ರೀಭಗವತ್ಪಾದರಾದರೋ ಸಕಲ ಯುಕ್ತ್ಯನುಭವಗಳನ್ನೂ ಅನುಸರಿಸಿ ''ಜ್ಞಾನದಿಂದ ಸದ್ಯೋಮುಕ್ತಿ'' ಎಂಬುದೇ ವೇದಾದಿಶಾಸ್ತ್ರಗಳಿಗೆಲ್ಲ ತಾತ್ಪರ್ಯವೆಂದು ಯಾವ ವಿಕಲ್ಪಗಳಾಗಲಿ ಸಂಶಯಗಳಾಗಲಿ ವಿಪರೀತಭಾವನೆಗಳಾಗಲಿ ಉಂಟಾಗದ ಹಾಗೆ ಸಮರ್ಥಿಸಿರುವದರಿಂದ ಇವರ ಸಿದ್ಧಾಂತವನ್ನು ಸರ್ವಪ್ರಮಾಣಗಳೂ ಸೇವಿಸುವವು ಎಂದು ಸಿದ್ಧವಾಗುತ್ತದೆ.

ಆದರೆ ನಾವು ಇಲ್ಲಿ ಅತಿಸಂಕ್ಷೇಪವಾಗಿ ಅವರು ಮಾಡಿದ ಲೋಕೋಪಕಾರದ ಮಾಹಾತ್ಮ್ಯವನ್ನು ತಿಳಿಸಿರುವೆವೇ ಹೊರತು ಅವರು ಸ್ಥಾಪಿಸಿರುವ ವೇದಾಂತದ ಅಸಾಧಾರಣವಾದ ಪ್ರಕ್ರಿಯೆಯನ್ನಾಗಲಿ ಅದರ ಒಳಭೇದಗಳನ್ನಾಗಲಿ ಕುರಿತು ಪ್ರಸ್ತಾವ ಮಾಡಲಿಲ್ಲ. ಈ ಮಹಾಸಿದ್ಧಾಂತದ ಸಂಪೂರ್ಣವಾದ ಜ್ಞಾನವನ್ನು ಪಡೆಯಲು ಅವರು ಅನುಗ್ರಹಿಸಿರುವ ಭಾಷ್ಯಾದಿ ದಿವ್ಯಪ್ರಬಂಧಗಳ ಪರಿಶೀಲನೆಯು ಅತ್ಯಗತ್ಯವಾಗಿರುತ್ತದೆ. ಅಂಥ ಪರಿಶೀಲನೆಯಿಂದ ಪರಮಪುರುಷಾರ್ಥವಾದ ಮೋಕ್ಷವೇ ಕೈಸೇರುತ್ತಿರುವಾಗ ಮುಮುಕ್ಷುವಾದ ಜೀವನಿಗೆ ಈ ಜನ್ಮವನ್ನು ಸಫಲಮಾಡಿಕೊಳ್ಳುವದಕ್ಕೆ ಬೇರೆ ಯಾವ ಮಾರ್ಗವಿರುವದೆಂದು ಹೇಳಬಹುದು?

ಭಗವತ್ಪಾದರವರು ಶ್ರೀ ಶಂಕರಾವತಾರವೆಂದು ಗ್ರಂಥಮೂಲಕವಾದ ಸಾರ್ವಜನೀನ ಪ್ರತೀತಿಯುಂಟು. ಆದರೆ ಅವರು **''ಸರ್ವಂ ಖಲ್ವಿದಂ ಬ್ರಹ್ಮ''** ಎಂಬ ವಾಕ್ಯದ ತಾತ್ಪರ್ಯವನ್ನು ಯಾವ ಸಂಕೋಚವೂ ಇಲ್ಲದೆ ಮುಖ್ಯಾರ್ಥದಲ್ಲಿಯೆ ನಿರ್ಧರಿಸಿರುವರು. ಇದನ್ನು ನೋಡಿದರೆ ಬ್ರಹ್ಮವಲ್ಲದೆ ಬೇರೆಯಾದ ವಸ್ತುವೂ ಇಂಥ ಅಖಂಡಬ್ರಹ್ಮದೃಷ್ಟಿಯನ್ನು ಹೊಂದಲಾರದಾದ್ದರಿಂದ ಅವರ ಬೋಧಾನುಸಾರವಾಗಿಯೇ ಭಗವತ್ಪಾದರವರು ಬ್ರಹ್ಮವಸ್ತುವೇ ಹೊರತು ಬೇರಲ್ಲವೆಂದು ನಾವು ತಿಳಿಯಬೇಕಾಗಿದೆ. ಇದಕ್ಕೆ ಮತ್ತೆ ಯಾವ ಪ್ರಮಾಣವೂ ಅವಶ್ಯಕವಿಲ್ಲ.

ಈ ಮಹನೀಯರು ಸುಮಾರು 1280 ವರ್ಷಗಳಿಗೆ ಹಿಂದೆ ಮಲೆಯಾಳ ದೇಶದ ಕಾಲಟಿಯೆಂಬ ಅಗ್ರಹಾರದಲ್ಲಿ ಪರಮಶುದ್ಧವಾದ ಬ್ರಾಹ್ಮಣಕುಲದಲ್ಲಿ ಶಿವಗುರುಪುತ್ರನಾಗಿ ವೈಶಾಖ ಶುದ್ಧ ಪಂಚಮಿಯ ದಿನ ಜನಿಸಿದರು. ಉತ್ತರ ಯೋಗಿ, ದಕ್ಷಿಣ ಭೋಗಿ, ಪೂರ್ವ ರೋಗಿ, ಪಶ್ಚಿಮತ್ಯಾಗಿ, ಎಂಬ ಲೋಕವಾರ್ತೆಗೆ ಅನುಸಾರವಾಗಿ ಮಿಕ್ಕ ದಿಕ್ಕುಗಳನ್ನು ಬಿಟ್ಟು ಪಶ್ಚಿಮ ದೇಶವಾದ ಮಲೆಯಾಳದಲ್ಲಿ ಇವರು ಅವತರಿಸಿದ್ದು ಇವರ ನಿಜವಾದ ಸರ್ವಪರಿತ್ಯಾಗಕ್ಕೆ ಅನುಗುಣವಾಗಿ ತ್ತು. ಐದನೆಯ ವರ್ಷವೇ ಉಪನೀತರಾಗಿ, ಎಂಟನೇ ವಯಸ್ಸಿನೊಳಗೆ ಸರ್ವಶಾಸ್ತ್ರ ವಿಶಾರದರಾಗಿ ತಾಯಿಯ ಅಪ್ಪಣೆ ಪಡೆದು ಸಂನ್ಯಸ್ತರಾಗಿ ಶ್ರೀ ಗೋವಿಂದಭಗವತ್ಪಾದರಲ್ಲಿ ಕ್ರಮಸನ್ಯಾಸವನ್ನು ಹೊಂದಿ ಅವರಲ್ಲಿ ಕೆಲವುಕಾಲ ಶಾಸ್ತ್ರವಿಚಾರದಲ್ಲಿ ಕಾಲಕ್ಷೇಪಮಾಡಿ, ಅವರ ಅಪ್ಪಣೆಯೆಂತೆ ಕಾಶಿಗೆ ದಯಮಾಡಿಸಿ ಭಾಷ್ಯಾದಿಗಳನ್ನು ರಚಿಸಿದರು. ಮುಂದೆ ಭಟ್ಟಪಾದರನ್ನು ನೋಡಿ ಮಂಡನಮಿಶ್ರರನ್ನು ವಾದದಲ್ಲಿ ಜಯಿಸಿ ಜ್ಞಾನೋಪದೇಶವನ್ನು ಕೊಟ್ಟು ಸನ್ಯಾಸದೀಕ್ಷೆಯಿತ್ತು ಅವರನ್ನು ಶೃಂಗಗಿರಿಯಲ್ಲಿ ಮಠಕ್ಕೆ ಪ್ರಥಮಾಚಾರ್ಯರನ್ನಾಗಿ ನಿಯಮಿಸಿದರು. ಬಳಿಕ ಭರತಖಂಡದ ಸಕಲ ದಿಗ್ಭಾಗಗಳಲ್ಲಿಯೂ ಶಿಷ್ಯರೊಡನೆ ಸಂಚರಿಸಿ ದುರ್ಮತಗಳನ್ನು ಖಂಡಿಸಿ ವೇದಾನುಸಾರವಾದ ಮತಗಳನ್ನು ಸ್ಥಾಪಿಸಿದರು. ಈ ರೀತಿಯಾಗಿ ಲೋಕೋದ್ಧಾರಕ್ಕಾಗಿ ತಾವು ಮಾಡಬೇಕಾಗಿದ್ದ ಮಂಗಲಕಾರ್ಯಗಳನ್ನೇ ಮುಗಿಸಿ ಮೂವತ್ತೆರಡನೆಯ ವಯಸ್ಸಿನಲ್ಲಿ ಬದರಿಕಾಶ್ರಮದಲ್ಲಿ ವೃಷಭಾರೂಢರಾಗಿ ಕೈಲಾಸವನ್ನು ಕುರಿತು ತೆರಳುವರಾದರು. ಈ ದಿವ್ಯಚರಿತ್ರೆಯು ಮಾಧವಾಚಾರ್ಯರೇ ಮುಂತಾದ ಮಹಾಕವಿಗಳು ಬರೆದಿರುವ ಮಹಾಕಾವ್ಯಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿರುವದು.

ಮುಖ್ಯವಾಗಿ ಕಲಿಪ್ರಾಬಲ್ಯದಿಂದ ಅವೈದಿಕಮತಗಳು ತಲೆ ಎತ್ತಿ ಭರತಖಂಡದ ಅಧ್ಯಾತ್ಮವಿದ್ಯೆಯು ಪರಮ ಸಂಕುಚಿತಾವಸ್ಥೆಯಲ್ಲಿದ್ದ ಕಾಲದಲ್ಲಿ ಅವುಗಳನ್ನು ಖಂಡಿಸಿ ಆರ್ಷವಾದ ಉಪನಿಷತ್ಸಿದ್ಧಾಂತವನ್ನು ಮೇಲಕ್ಕೆತ್ತಿದ ಧೀರರುಗಳಲ್ಲಿ ನಾಶರಹಿತವಾದ ಕೀರ್ತಿಗೆ ಪಾತ್ರರಾದವರು ಶ್ರೀಮದ್ಗೌಡಪಾದರು ಮತ್ತು ಶ್ರೀಭಗವತ್ಪಾದರು – ಇವರಿಬ್ಬರೇ ಎಂದು ಥೀಬೋ ಎಂದು ಯೂರೋಪಿಯನ್ ವಿದ್ವಾಂಸನು ಅಭಿಪ್ರಾಯಪಟ್ಟಿರುತ್ತಾನೆ.

ಈ ನಮ್ಮ ಭರತಖಂಡಕ್ಕೆ ಶಾಶ್ವತವಾದ ಕೀರ್ತಿಬೇಕಾದರೆ ಧನಕನಕವಸ್ತ್ರ ವಾಹನಾದಿಗಳಿಂದಾಗಲಿ, ವ್ಯವಹಾರಶಕ್ತಿಯಿಂದಲಾಗಲಿ, ಭೌತಿಕವಿದ್ಯಾ ವಿಶಾರದರಾಗುವದರಿಂದಾಗಲಿ, ಹೊಸನಾಗರಿಕತೆಯಿಂದಲಾಗಲಿ ಇದು ಎಂದಿಗೂ ಉಂಟಾಗಲಾರದು. ಆದರೆ ಮನುಷ್ಯಬುದ್ಧಿಗೆ ನಿಲುಕದೆ ''**ಯತೋ ವಾಚೋ ನಿವರ್ತನ್ತೇ । ಅಪ್ರಾಪ್ಯ ಮನಸಾ ಸಹ**'' ಎಂಬ ಶ್ರುತಿಗೆ ವಿಷಯವಾದ ಯಾವ ಬ್ರಹ್ಮಜ್ಞಾನವುಂಟೋ ಅದು ವೇದಶಾಸ್ತ್ರಪ್ರಮಾಣಗಳಿಂದ ಸಿದ್ಧವಾಗಿ ಯುಕ್ತ್ಯಾನುಭವಗಳಿಂದ ಪೋಷಿತವಾಗಿ ಎಂದಿಗೂ ಬಾಡದೆಯೂ, ಯಾರಿಂದಲೂ ಅಪಹರಿಸಲಿಕ್ಕಾಗದೆಯೂ, ಯಾರಿಂದಲೂ ತಿರಸ್ಕರಿಸಲಶಕ್ಯವಾಗಿಯೂ ಇರುವ ತೇಜೋವಿರಾಜಮಾನವಾದ ಕೀರ್ತಿಯನ್ನು ನೆಲೆಗೊಳಿಸುವದು. ಇದೇ ನಮ್ಮ ಭಗವತ್ಪಾದರವರ ಅನುಗ್ರಹವು.

★★★★★

# ಶ್ರೀಶಂಕರಭಗವತ್ಪಾದಾಚಾರ್ಯರವರು

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು**

ಪ್ರತಿ ವೈಶಾಖಮಾಸದಲ್ಲಿಯೂ ನಮಗೆ ಪೂರ್ವಾಚಾರ್ಯರನೇಕರ ಸ್ಮರಣೆಯನ್ನು ಮಾಡಿಕೊಳ್ಳುವ ಸಂದರ್ಭವು ಒದಗಿರುತ್ತದೆ. ದಕ್ಷಿಣಭಾರತದಲ್ಲಿಯೇ ಅನೇಕರು ಆಚಾರ್ಯರು ಲೋಕೋಪಕಾರಕವಾದ ಮಹಾಕಾರ್ಯಗಳನ್ನು ಮಾಡಿ ನಮ್ಮನ್ನು ಋಣಿಗಳಾಗಿ ಮಾಡಿರುತ್ತಾರೆ. ಅಂಥವರಲ್ಲಿ ಶ್ರೀಶಂಕರಭಗವತ್ಪಾದಾಚಾರ್ಯರಿಗೆ ಒಂದು ಅನಿತರಸಾಧಾರಣವಾದ ಸ್ಥಾನವಿದೆ. ''**ಶಾಸ್ತ್ರವನ್ನು ವ್ಯಾಖ್ಯಾನ ಮಾಡಿ ಅದರರ್ಥವನ್ನು ಸ್ಪಷ್ಟಪಡಿಸುವದು, ಜನರನ್ನು ಆಚಾರದಲ್ಲಿ ನಿಲ್ಲಿಸುವದು, ತಾನೂ ಅದರಂತೆ ಆಚರಿಸಿ ಮಾದರಿಯಾಗಿರುವದು. ಹೀಗೆ ಮಾಡುವನನ್ನು ಆಚಾರ್ಯನೆಂದು ತಿಳಿಯಬೇಕು**'' – ಎಂದು ಬಲ್ಲವರ ನುಡಿಯಿದೆ. ಈ ಅರ್ಥದಲ್ಲಿ ಶ್ರೀಶಂಕರಾಚಾರ್ಯರವರು ನಿರುಪಮಾಚಾರ್ಯರಾಗಿರುತ್ತಾರೆ.

ದಕ್ಷಿಣದೇಶದಲ್ಲಿ ತೀರ ದಕ್ಷಿಣದ ಕೇರಳದಲ್ಲಿ ಜನಿಸಿ, ಮಧ್ಯಭಾರತದ ನರ್ಮದಾತೀರದಲ್ಲಿದ್ದ ಗೋವಿಂದಯೋಗೀಂದ್ರರ ಬಳಿಗೆ ತಮ್ಮ ಎಂಟನೆಯ

ವರ್ಷದಲ್ಲಿಯೇ ಪಾರಿವ್ರಾಜ್ಯವನ್ನು ವಹಿಸಿ ಪರಮವೈರಾಗ್ಯದಿಂದ ಹೋಗಿ ಉಪದೇಶವನ್ನು ಪಡೆದ ಮಹಾನುಭಾವರವರು; ಕಾಶಿಯಲ್ಲಿದ್ದುಕೊಂಡು ತಾವು ರಚಿಸಿದ ಭಾಷ್ಯವನ್ನು ವ್ಯಾಸರಿಗೂ ವಿಶ್ವೇಶ್ವರನಿಗೂ ತಲೆದೂಗುವಂತೆ ಒಪ್ಪಿಸಿ ತೋರಿಸಿದ ಅದ್ಭುತ ಪ್ರತಿಭಾವಂತರವರು. ಭರತಖಂಡದಲ್ಲೆಲ್ಲ ಪಾದಚಾರಿಗಳಾಗಿ ಸಂಚರಿಸಿ ವೇದಾಂತಸಿದ್ಧಾಂತದ ಪರಿಶುದ್ಧಪ್ರಕ್ರಿಯೆಯನ್ನು ಆಗಿನ ವಿದ್ವಾಂಸರುಗಳಿಗೆ ಮನದಟ್ಟು ಮಾಡಿಕೊಟ್ಟು ಪ್ರವೃತ್ತಿಧರ್ಮನಿವೃತ್ತಿಧರ್ಮಗಳ ಸ್ವರೂಪವನ್ನೂ ಪರಸ್ಪರ ಸಂಬಂಧವನ್ನೂ ಜಿಜ್ಞಾಸುಗಳಿಗೆ ಮನದಟ್ಟು ಮಾಡಿಕೊಡುವ ರೀತಿಯಲ್ಲಿ ಸತ್ಸಂಪ್ರದಾಯವನ್ನು ನೆಲೆಗೊಳಿಸಿದ ಲೋಕಾನುಗ್ರಹರಸಿಕರವರು. ತಾವು ಭೂತಲದಲ್ಲಿದ್ದ ಅತ್ಯಲ್ಪಕಾಲದಲ್ಲಿ ವೈದಿಕಧರ್ಮದ ಪತಾಕೆಯು ಎಲ್ಲೆಲ್ಲಿಯೂ ಹಾರಾಡುವಂತೆ ಮಾಡಿ, ತಮ್ಮ ಹೆಸರಿನಲ್ಲಿ ಇಂದಿಗೂ ನಾಲ್ಕು ದಿಕ್ಕುಗಳಲ್ಲಿ ಮಠಗಳು ಸ್ಥಾಪಿತವಾಗಿ ಧರ್ಮಜ್ಞಾನಗಳ ಬೋಧೆಯು ಸತತವಾಗಿ ನಡೆಯುವ ಯೋಜನೆಗೆ ಮೂಲಭೂತರಾಗಿ, ಜ್ಯೋತಿರ್ಮಯ ಶಾಶ್ವತಮೂರ್ತಿಶರೀರದ ಪ್ರಭೆಯು ಭಾರತದೇಶದಲ್ಲೆಲ್ಲ ಹರಡುವಂತೆ ಮಾಡಿದ ಆಚಾರ್ಯವರ್ಯರವರು.

ವೇದಾಧ್ಯಯನ, ಧರ್ಮಾನುಷ್ಠಾನ, ಗುರುಶಿಷ್ಯ ಸಂಪ್ರದಾಯ ಮುಂತಾದವುಗಳ ಸನಾತನರೂಪವನ್ನು ಅಚ್ಚಳಿಯದ ಶುದ್ಧರೂಪದಲ್ಲಿ ಜನರಿಗೆ ತೋರಿಸಿ ಕೊಟ್ಟರೂ ಜಾತಿ, ಮತ, ಕುಲ, ಧನ, ವಿದ್ಯಾತಪೋಯೋಗಾದಿಗಳ ಹಂಗಿಲ್ಲದ, ಇಡಿಯ ಭೂಮಂಡಲನಿವಾಸಿಗಳಿಗೆ ಅನ್ವಯಿಸುವ, ಬ್ರಹ್ಮಾತ್ಮಜ್ಞಾನವನ್ನು ತಮ್ಮ ಭಾಷ್ಯಗಳಿಂದ ಹೊರಪಡಿಸಿರುವ ಅನ್ವರ್ಥಶಂಕರರವರು!

★★★★★

# ಶಂಕರಾಚಾರ್ಯರ ಮತ್ತು ರಾಮಾನುಜಾಚಾರ್ಯರ ಸ್ಮರಣೆ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು**

ವೈಶಾಖಮಾಸವು ಮತಸ್ಥಾಪಕರ ಅಥವಾ ಮತಪ್ರಚಾರಕರ ಮಾಸ. ಸಂಸಾರದಲ್ಲುಂಟಾಗುವ ದುಃಖಕ್ಕೆಲ್ಲ ತೃಷ್ಣೆಯೇ ಕಾರಣ, ಅದನ್ನು ಗೆದ್ದುಕೊಂಡರೆ ನಿರ್ವಾಣ ಪ್ರಾಪ್ತಿ – ಎಂಬುದನ್ನು ಬೋಧಿಸಿದ **ಗೌತಮಬುದ್ಧ**, ಕಾಯಕವೇ ಕೈಲಾಸವೆಂಬುದನ್ನು ಜನರ ಹೃದಯದಲ್ಲಿ ನೆಟ್ಟ **ಬಸವೇಶ್ವರ** – ಈ ಅವೈದಿಕಮತಪ್ರತಿಷ್ಠಾಪಕರು ವೈಶಾಖಮಾಸದಲ್ಲಿ ಜನಿಸಿದವರು. **ಶ್ರೀಶಂಕರಾಚಾರ್ಯ, ಶ್ರೀರಾಮಾನುಜಾಚಾರ್ಯ** – ಈ ವೇದಾಂತಾಚಾರ್ಯರುಗಳೂ ಇದೇ ಮಾಸದಲ್ಲಿ ಪ್ರಾದುರ್ಭೂತರಾದವರು.

ಮತಸ್ಥಾಪಕರ ಅಥವಾ ಮತಾಚಾರ್ಯರ ಸ್ಮರಣೆಯನ್ನು ಎರಡು ಬಗೆಯಲ್ಲಿ ಮಾಡಿಕೊಳ್ಳುವದಕ್ಕೆ ಅವಕಾಶವಿದೆ. ಇಂಥವರು ನಮ್ಮ ಮತವನ್ನು ಸ್ಥಾಪನೆ ಮಾಡಿದವರು, ಇವರಿಗೆ ಮಿಕ್ಕ ಯಾವ ಆಚಾರ್ಯರೂ ಸಮಾನರಲ್ಲ – ಎಂದು ಹೆಮ್ಮೆಪಡುವದು, ಮಿಕ್ಕ ಮತಗಳ ದೋಷಗಳನ್ನು ಎತ್ತಿ ಜನರಲ್ಲಿ ಸ್ವಭಾವದಿಂದಲೇ ನೆಲಸಿರುವ ರಾಗದ್ವೇಷಗಳನ್ನು ಕೆದಕಿ ಎಬ್ಬಿಸುವದು – ಇದು ಒಂದುಬಗೆ. ಲೋಕದಲ್ಲಿ ಜನರಿಗೆ ಇಂಥಿಂಥ ಉಪಕಾರವನ್ನು ಮಾಡಿದ ಆಚಾರ್ಯರುಗಳಿವರು, ಇವರ ಉಪದೇಶಗಳಲ್ಲಿ ಇಂಥ ಸಾಮ್ಯಗಳಿವೆ ಎಂಬುದನ್ನು ಕೃತಜ್ಞತೆಯಿಂದ ಸ್ಮರಿಸಿ ಕೊಂಡು ಮತಾನುಯಾಯಿಗಳಲ್ಲಿ ಒಬ್ಬರಿಗೊಬ್ಬರಲ್ಲಿ ಸಹಾನುಭೂತಿಯನ್ನು ಹೆಚ್ಚಿಸುವದಕ್ಕೆ ಯತ್ನಿಸುವದು ಇನ್ನೊಂದು ಬಗೆ. ಶಂಕರರಾಮಾನುಜಾಚಾರ್ಯರು ಗಳ ಸ್ಮರಣೆಯನ್ನು ಎರಡನೆಯ ಬಗೆಯಲ್ಲಿ ಮಾಡುವದಕ್ಕೆ ಎಷ್ಟರಮಟ್ಟಿನ ಅವಕಾಶ ವಿದೆ? ಎಂಬುದನ್ನು ಕುರಿತು ಇಲ್ಲಿ ಒಂದೆರಡು ವಾಕ್ಯಗಳನ್ನು ಬರೆಯುವೆನು.

ಈ ಇಬ್ಬರು ಆಚಾರ್ಯರುಗಳು ಇದ್ದ ಕಾಲದಲ್ಲಿ ಆಚಾರ್ಯರೆಂದೆನಿಸಿಕೊಳ್ಳ ಬೇಕೆನ್ನುವವರಿಗೆ ಉಪನಿಷತ್ತುಗಳು, ಭಗವದ್ಗೀತೆ, ಮತ್ತು ಬ್ರಹ್ಮಸೂತ್ರ – ಎಂಬ

ಪ್ರಸ್ಥಾನತ್ರಯಕ್ಕೆ ತಮ್ಮತಮ್ಮ ಸಿದ್ಧಾಂತಕ್ಕೆ ಅನುಗುಣವಾಗಿ ಭಾಷ್ಯವನ್ನು ಬರೆಯುವದು; ಈ ಅಧ್ಯಾತ್ಮವಿಚಾರದ ಗ್ರಂಥಗಳಲ್ಲಡಗಿರುವ ಉಪದೇಶಕ್ಕನುಗುಣವಾಗಿ ನಡೆದುಕೊಂಡವರಿಗೆ ಇಹಪರಗಳಲ್ಲಿ ದುಃಖನಿವೃತ್ತಿಯೂ ಸುಖಪ್ರಾಪ್ತಿಯೂ ತಪ್ಪದೆ ಆಗುವವೆಂಬುದನ್ನು ತೋರಿಸುವದು ಇವೆರಡೂ ಅವಶ್ಯವಾಗಿದ್ದವು. ಮಿಕ್ಕ ಸಿದ್ಧಾಂತಗಳಲ್ಲಿರುವ ಗುಣವನ್ನು ಸ್ವೀಕರಿಸುವದು, ದೋಷಗಳನ್ನು ಎತ್ತಿ ತೋರಿಸುವದು ಇವೂ ಆಚಾರ್ಯರ ಕರ್ತವ್ಯವಾಗಿತ್ತು. ಭರತಖಂಡದಲ್ಲಿ ಆದಷ್ಟು ಕಡೆಗಳಲ್ಲಿ ಸಂಚರಿಸಿ ವಿದ್ವಾಂಸರುಗಳೊಡನೆ ವಿಚಾರವಿನಿಮಯ ಮಾಡಿಕೊಂಡು ತಮ್ಮ ಆದರ್ಶವಾದ ಆಚಾರಾದಿಗಳ ಉದಾಹರಣೆಯಿಂದ ಜನರನ್ನು ತಮ್ಮ ತಮ್ಮ ಮನಕ್ಕೆ ಒಲಿಸಿಕೊಳ್ಳುವದೂ ಅವರ ಕಾರ್ಯಕ್ರಮದಲ್ಲಿ ಸೇರಿತ್ತು.

ಈ ಕೆಲಸವನ್ನು ಇಬ್ಬರು ಆಚಾರ್ಯರೂ ತಮಗೆ ಉಚಿತವೆಂದು ತೋರಿದರೀತಿಯಲ್ಲಿ ನೆರವೇರಿಸಿರುತ್ತಾರೆ. ಇಂದಿಗೂ ಅವರ ಮತದ ಅನುಯಾಯಿಗಳೆಂದು ಹೇಳಿಕೊಳ್ಳುವ ಜನರು ಸಾವಿರಗಟ್ಟಲೆಯಲ್ಲಿರುತ್ತಾರೆ. ಬರಿಯ ಸಂಖ್ಯಾಬಲವನ್ನಿಟ್ಟುಕೊಂಡು ನೋಡಿದರೆ ರಾಮಾನುಜಾನುಯಾಯಿಗಳಿಗಿಂತ ಶಂಕರಾನುಯಾಯಿಗಳೇ ಹೆಚ್ಚಾಗಿರುತ್ತಾರೆ.

ಆದರೆ ಒಂದು ವಿಶೇಷ: ಈಗಿನ ಕಾಲಕ್ಕೆ ಈ ಆಚಾರ್ಯರುಗಳ ಸ್ಮರಣೆಯನ್ನು ಭಾವನಾಪೂರ್ವಕವಾಗಿ ಮಾಡುತ್ತಾ ಅವರ ಸದುಪದೇಶಗಳನ್ನು ಆಚರಣೆಗೆ ತಂದುಕೊಳ್ಳಬೇಕೆಂದು ಪ್ರಯತ್ನಿಸುವದಕ್ಕೆ ತನ್ನ ಜೀವನವನ್ನೇ ಮೀಸಲಾಗಿಟ್ಟುಕೊಂಡಿರುವ ಮಹನೀಯರು ಬಹುವಿರಳರಾಗಿರುತ್ತಾರೆ. ಶಂಕರಾಚಾರ್ಯರ ಜೀವನಚರಿತ್ರೆಯನ್ನು ನಿರ್ಧರಿಸುವದು ಈಗಿನ ಕಾಲಕ್ಕೆ ಬಹಳ ಕಷ್ಟವಾಗಿದೆ; ಅವರ ಪೂರ್ವಾಶ್ರಮದ ಹೆಸರು, ಹುಟ್ಟಿದ ಕಾಲ, ಸ್ಥಲ, ತಂದೆತಾಯಿಗಳ ವೃತ್ತಾಂತ ಮುಂತಾದ ಸಾಮಾನ್ಯ ಜೀವನಚರಿತ್ರಾಂಶಗಳು ಕೂಡ ವಾದಗ್ರಸ್ತವಾಗಿವೆ. ಅವರ ಹೆಸರಿನಲ್ಲಿ ಬರೆದಿರುವ ಗ್ರಂಥಗಳಲ್ಲಿ ಯಾವವು ನಿಜವಾಗಿ ಅವರೇ ಬರೆದವುಗಳು? - ಎಂಬುದೂ ಸುನಿಶ್ಚಿತವಿಲ್ಲ. ರಾಮಾನುಜಾಚಾರ್ಯರ ಜೀವನ ಚರಿತ್ರೆಯಲ್ಲಿ ಇಷ್ಟು ವಿವಾದಗಳು ಕಾಣಿಸುತ್ತಿಲ್ಲ. ಆದರೂ ಶಂಕರಾಚಾರ್ಯರ ಅಭಿಪ್ರಾಯವನ್ನು ವಿವರಣಭಾವತೀಪ್ರಸ್ಥಾನಗಳೆಂದು ಎರಡು ಬಗೆಯಲ್ಲಿ ಶಿಷ್ಯರು ವ್ಯಾಖ್ಯಾನಮಾಡುತ್ತಿರುವಂತೆಯೇ ರಾಮಾನುಜಾಚಾರ್ಯರ ಶಿಷ್ಯರುಗಳಲ್ಲಿಯೂ ತೆಂಗಲೆ, ವಡಗಲೆ ಎಂಬ ಎರಡು ಪಂಗಡಗಳೂ ಮತಭೇದಗಳೂ ಆಚಾರಭೇದಗಳೂ

ಇವೆ. ಈ ವಿವಿಧಮತ ಭೇದಗಳಂತಿರಲಿ, ಈ ಆಚಾರ್ಯರುಗಳ ಗ್ರಂಥಗಳೆಂದು ನಿರ್ವಿವಾದವಾಗಿ ಸಿದ್ಧವಾಗಿರುವ ಗ್ರಂಥಗಳನ್ನು ಶ್ರದ್ಧೆಯಿಂದ ಪಠಿಸುವದು, ಅವುಗಳಿಂದ ಸರ್ವಸಂಮತವಾಗಿ ಸಿದ್ಧವಾಗುವ ಉಪದೇಶಗಳನ್ನು ಹೃದಯಕ್ಕೆ ಹತ್ತಿಸಿಕೊಳ್ಳುವದು ಈ ಪ್ರಯತ್ನದಲ್ಲಿರುವವರ ಸಂಖ್ಯೆಯೂ ಅತ್ಯಲ್ಪವೆನ್ನಬೇಕಾಗಿದೆ; ಸದ್ಯಕ್ಕೆ ಭಾರತದೇಶಾಭಿಮಾನಿಗಳಂತೆಯೇ ಈ ಆಚಾರ್ಯರುಗಳ ಅನುಯಾಯಿಗಳ ಮತಾಭಿಮಾನವೂ ಶ್ರದ್ಧೆಯೂ ಕೆಲಕೆಲವು ನಿರ್ದಿಷ್ಟದಿನಗಳಲ್ಲಿ ಉಪನ್ಯಾಸಾದಿಗಳು, ಆರಾಧನಾದಿಸತ್ಕಾರಗಳು, ಊಟಉಪಚಾರಗಳ ಪ್ರದರ್ಶನ ಇಷ್ಟರಲ್ಲಿಯೇ ಮುಗಿಯುವಂತೆ ತೋರುತ್ತಿದೆ.

**ಶಂಕರಭಗವತ್ಪಾದಾಚಾರ್ಯರವರು** ತಮ್ಮ ಅದ್ವೈತಸಿದ್ಧಾಂತವು ಈ ಜನ್ಮದಲ್ಲಿಯೇ ಅನುಭವಕ್ಕೆ ಬರುವಂಥದ್ದು, ಶ್ರುತ್ಯಾದಿಶಬ್ದಪ್ರಮಾಣಗಳಲ್ಲದೆ ಸರ್ವಸಂಮತವಾದ ತರ್ಕಾನುಭವಗಳಿಗೆ ಅನುಗುಣವಾಗಿಯೇ ವಿಚಾರ ಮಾಡಿದರೂ ಈ ಸಿದ್ಧಾಂತವನ್ನು ಮನಗಾಣಬಹುದು ಎಂದು ಸಾರಿರುತ್ತಾರೆ. ಇದು ಹೇಗೆಂಬುದನ್ನು ಮನದಟ್ಟುಮಾಡಿಕೊಳ್ಳುವದಕ್ಕೆ **ಶಂಕರಾನುಯಾಯಿಗಳೆಂದು ಹೇಳಿಕೊಳ್ಳುತ್ತಿರುವವರು** ಪ್ರಯತ್ನಮಾಡಬೇಡವೆ? ಶಂಕರರ ಉಪದೇಶಗಳನ್ನು ಜನರಿಗೆ ಬೋಧಿಸುವದಕ್ಕೆಂದೇ ಸ್ಥಾಪಿತವಾಗಿರುವ **ಮಠಗಳ ಪೀಠಾಧಿಪತಿಗಳು** ಇದಕ್ಕಾಗಿ ಆದರ್ಶಬೋಧಕರನ್ನು ಸಜ್ಜುಗೊಳಿಸಬೇಕಾದದ್ದಿಲ್ಲವೆ? ಶಂಕರಾಚಾರ್ಯರು ಒಪ್ಪಿರುವ ಪ್ರವೃತ್ತಿನಿವೃತ್ತಿಧರ್ಮಗಳನ್ನು ಆಚರಿಸುವವರ ಆದರ್ಶ ಕೇಂದ್ರಗಳನ್ನು ಅಲ್ಲಲ್ಲಿ ಸ್ಥಾಪಿಸುವ ಆವಶ್ಯಕತೆಯಿಲ್ಲವೆ ?

ಇನ್ನು **ರಾಮಾನುಜಾಚಾರ್ಯರು** ಶಂಕರಾಚಾರ್ಯರಂತೆ ಜೀವನ್ಮುಕ್ತಿಯನ್ನು ಉಪದೇಶಿಸಿಲ್ಲವಾದರೂ ಸಗುಣಸಾಕಾರನಾದ ಭಗವಂತನ ಕೈಂಕರ್ಯವನ್ನು ಶ್ರದ್ಧಾಭಕ್ತಿಗಳಿಂದ ಆಚರಿಸಿದವರಿಗೆ ಈ ಲೋಕದಲ್ಲಿ ಸುಖವೂ ಪರದಲ್ಲಿ ಗತಿಯೂ ಆಗುವದೆಂಬುದನ್ನು ಘಂಟಾಘೋಷವಾಗಿ ಸಾರಿರುತ್ತಾರೆ. ಶಂಕರಾಚಾರ್ಯರು, ವ್ಯವಹಾರದೃಷ್ಟಿಯಿಂದ ಭಗವದಾರಾಧನೆಯು ಅತ್ಯವಶ್ಯವೆಂದೂ ತಾವು ಸಾರಿರುವ ಅದ್ವೈತಾನುಭವಕ್ಕೆ ಭಗವದ್ಭಕ್ತಿಯು ಇದ್ದೇತೀರಬೇಕೆಂದೂ ನಿಸ್ಸಂಶಯವಾಗಿ ಬೋಧಿಸಿರುತ್ತಾರೆ. ಸರ್ವಜ್ಞನೂ ಸರ್ವಶಕ್ತನೂ ಕರುಣಾನಿಧಿಯೂ ಆದ ಭಗವಂತನ ಅನುಗ್ರಹದಿಂದಲೇ ಜೀವರುಗಳಿಗೆ ಪುರುಷಾರ್ಥಸಿದ್ಧಿ ಎಂಬುದೂ ಶಾಸ್ತ್ರೋಕ್ತ ಕರ್ಮಗಳನ್ನು

ಆಚರಿಸಬೇಕೆಂಬುದನ್ನೂ ಭಗವಂತನ ಸೇವೆಗಾಗಿಯೂ ತತ್ತ್ವಚಿಂತನೆಗಾಗಿಯೂ ಸಂನ್ಯಾಸಿಗಳಾಗಿ ತತ್ಪರರಾಗುವದೂ ಪರಗತಿಗೆ ಸಾಧನವೆಂಬುದನ್ನೂ ಇಬ್ಬರೂ ಹೇಳಿರುತ್ತಾರೆ. ಶ್ರುತಿಸ್ಮೃತಿಪುರಾಣಗಳಲ್ಲಿ ಶ್ರದ್ಧೆ, ಜನ್ಮಾಂತರಲೋಕಾಂತರಗಳಲ್ಲಿ ನಂಬಿಕೆ, ಧ್ಯಾನಮೌನಾದಿಗಳ ಫಲಕಾರಿತ್ವ ಇವುಗಳು ಇಬ್ಬರು ಆಚಾರ್ಯರಿಗೂ ಸಂಮತವಾಗಿವೆ. ಈ ವಿಷಯದಲ್ಲಿ ಈ ಇಬ್ಬರು ಆಚಾರ್ಯರ ಶಿಷ್ಯರೂ ಒಗ್ಗಟ್ಟಾಗಿ ಜನರ ಸದ್ಬುದ್ಧಿಯನ್ನು ಎಚ್ಚರಗೊಳಿಸುವದಕ್ಕೆ ಪ್ರಯತ್ನಿಸುವದು ಅವಶ್ಯವಲ್ಲವೆ? ಇದನ್ನು ನಾವೆಲ್ಲರೂ ಮನಸ್ಸಿನಲ್ಲಿ ಮೆಲುಕುಹಾಕಬೇಕು.

**ಇಬ್ಬರೂ ಆಚಾರ್ಯರ ಅನುಯಾಯಿಗಳಿರ**, ನಿಮ್ಮ ಮೇಲೆ ಒಂದು ಹೊಣೆಗಾರಿಕೆಯ ಹೊರೆ ಬಿದ್ದಿದೆ. ಶಂಕರಾಚಾರ್ಯ, ರಾಮಾನುಜಾಚಾರ್ಯ ಇಬ್ಬರೂ ಉಪದೇಶಿಸುವದಕ್ಕೆ ಬಳಸಿದ ಸಂಸ್ಕೃತಭಾಷೆಯ ಪರಿಚಯವನ್ನು ಮಾಡಿ ಕೊಳ್ಳಿರಿ; ಅವರು ಬರೆದಿರುವ ಭಾಷ್ಯಗ್ರಂಥಗಳ ಅಭಿಪ್ರಾಯವನ್ನು ಭಾಷಾಂತರದಮೂಲಕವಾಗಿಯಾದರೂ ತಿಳಿದುಕೊಳ್ಳಿರಿ. ಭೌತಿಕವಿಜ್ಞಾನದ ಸುಂಟರುಗಾಳಿಗೆ ಸಿಕ್ಕಿ ಹಲುಬದಿರಿ. ಎಲ್ಲರಿಗೂ ಅಂತರ್ಯಾಮಿಯಾಗಿ ಆತ್ಮನಾಗಿರುವ ಭಗವಂತನೊಬ್ಬನಿರುವನೆಂದು ನಂಬಿರಿ, ಸರ್ವರಲ್ಲಿಯೂ ಸಹಾನುಭೂತಿಯಿಂದ ನಡೆಯುವದೇ ಆಚಾರ್ಯರ ಸ್ಮರಣೆ ಎಂಬುದನ್ನು ನೆನಪಿನಲ್ಲಿಡಿರಿ.

ಶಂಕರರಾಮಾನುಜರ ಪ್ರತಿನಿಧಿಗಳಾದ **ಪೀಠಾಧಿಪತಿಗಳಿರ**, ಈಗಿನ ರಾಜನೀತಿಜ್ಞರಾದ ನಾಯಕರ ಆಡಂಬರದ ರೀತಿನೀತಿಗಳನ್ನು ಅನುಸರಿಸಿ ಬರಿಯ ಭಾಷಣಗಳ ಪ್ರದರ್ಶನದಿಂದಲೇ ತೃಪ್ತರಾಗದಿರಿ. ಜನರಿಂದ ಮಠಕ್ಕೆ ಬರುವ ಆದಾಯದಿಂದ ಜನರಿಗೆ ಸಂಸ್ಕೃತಭಾಷಾಭ್ಯಾಸ, ಸದಾಚಾರ, ದೈವಭಕ್ತ - ಇವುಗಳಲ್ಲಿ ವಿಶ್ವಾಸವುಂಟಾಗುವ ಹಾಗೆ ಮಾಡುವ ಆದರ್ಶವಿದ್ಯಾಶಾಲೆಗಳನ್ನು ಏರ್ಪಡಿಸಿರಿ. ನಿಮ್ಮ ನಿಮ್ಮ ಮಠಗಳಲ್ಲಿ ಜಪ, ತಪಸ್ಸು, ಧ್ಯಾನ, ಪಾರಾಯಣ, ಅಭ್ಯರ್ಚನ, ಭಗವದ್ಭಕ್ತಿ ವಿಚಾರದ ಬೋಧನ - ಇವುಗಳು ಸಂತತವಾಗಿ ನಡೆಯುವ ಏರ್ಪಾಡನ್ನು ಕೂಡಲೆ ಮಾಡಿರಿ. ಶ್ರೀಶಂಕರಾಚಾರ್ಯರ ಮತ್ತು ಶ್ರೀರಾಮಾನುಜಾಚಾರ್ಯರ ಸಂಪ್ರದಾಯದಂತೆ ತುರೀಯಾಶ್ರಮವನ್ನು ಅವಲಂಬಿಸಿರುವ **ಸಂನ್ಯಾಸಿಗಳಿರ**, ನೀವು ನಿಜವಾದ ಸಂನ್ಯಾಸಿಗಳಾಗಿರಿ.

'ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ' - ಎಂಬ ಉಕ್ತಿಯಂತೆ ಪರಮಾತ್ಮನನ್ನೇ ಶರಣುಹೊಂದಿ, ಭಕ್ತಿಜ್ಞಾನವೈರಾಗ್ಯಗಳ ತವರುಮನೆಯಾಗಿರಿ. ನಿಮ್ಮನ್ನು ಸೇರಿರುವ ಗೃಹರಿಗೆ ಭಗವದ್ಭಕ್ತಿಯ ಮರ್ಮವು ದಕ್ಕುವಂತೆ ನಡೆದುಕೊಳ್ಳಿರಿ.

**ಶಂಕರರಾಮಾನುಜಾಚಾರ್ಯರುಗಳ ವಿಚಾರವನ್ನು ಮಾಡುತಿರುವ ಲೌಕಿಕಮಹಾನುಭಾವರುಗಳಿರ,** ಬರಿಯ ವಾದದ ಗಡಿಬಿಡಿಯಲ್ಲಿ ಕಾಲವನ್ನು ಕಳೆಯದಿರಿ. ಆಚಾರ್ಯರಿಬ್ಬರೂ ಭಗವತ್ತತ್ತ್ವದ ಚಿಂತನೆಯಿಂದಲೂ ಸದುಪದೇಶದಿಂದಲೂ ಲೋಕಕ್ಕೆ ಮಾಡಿರುವ ಉಪಕಾರವನ್ನು ಜನರಲ್ಲಿ ಪ್ರಸಾರ ಮಾಡುವ ದೀಕ್ಷೆಯನ್ನು ವಹಿಸಿರಿ. ಆಚಾರ್ಯರುಗಳಿಬ್ಬರ ಸದುಪದೇಶಗಳನ್ನು ಸಂಗ್ರಹಿಸಿ ಅಧಿಕಾರಿಗಳಾದವರಿಗೆ ಉಚಿತವಾಗಿ ಅಥವಾ ತೀರ ಕಡಿಮೆಯ ಬೆಲೆಗೆ ದೊರಕುವಂತೆ ಪ್ರಯತ್ನಿಸಿರಿ. ಬಾಹ್ಯಾಡಂಬರದ ಉತ್ಸವಗಳಿಗಿಂತಲೂ ಜನರು ಆಡುವ ಭಾಷೆಯಿಂದ ಅವರವರಿಗೆ ಆಚಾರ್ಯರುಗಳ ಉಪದೇಶಗಳು ದೊರಕುವಂತೆ ಮಾಡುವದೇ ನಿಜವಾದ ಉತ್ಸವವೆಂಬುದನ್ನು ನಂಬಿರಿ. ನಿಜವಾದ ಆಚಾರ್ಯಭಕ್ತರಾಗಿ ಸದ್ಗತಿಯನ್ನು ಪಡೆಯಿರಿ.

★★★★★

# ಶ್ರೀಯಾಮುನಾಚಾರ್ಯರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀವೈಷ್ಣವಸಂಪ್ರದಾಯದ ಒಬ್ಬ ಪ್ರಧಾನಾಚಾರ್ಯರು ನಾಥಮುನಿಗಳು ಐತಿಹಾಸಿಕದೃಷ್ಟಿಯಿಂದ ಈಗಿನ ವ್ಯವಸ್ಥಿತ ಶ್ರೀವೈಷ್ಣವಮತಕ್ಕೆ ಅವರೇ ಸಂಪ್ರದಾಯಕರ್ತರೆಂದರೂ ಸಲ್ಲುವದು. ಅವರ ಮೊಮ್ಮಕ್ಕಳಾದ ಶ್ರೀಯಾಮುನಾಚಾರ್ಯರು ಶ್ರೀರಾಮಾನುಜಾಚಾರ್ಯರ ಪರಮಗುರುಗಳು. ಇವರು ಹತ್ತನೆಯ ಶತಮಾನದ ಆದಿಭಾಗದಲ್ಲಿ ಶಿಶುನಾರಾಯಣಪುರದಲ್ಲಿ - ಈಗಿನ ಮನ್ನಾರು ಗುಡಿಯಲ್ಲಿ - ಜನಿಸಿದರು.

ನಾಥಮುನಿಗಳು ಉತ್ತರದೇಶಕ್ಕೆ ಯಾತ್ರಾರ್ಥವಾಗಿ ಹೋಗಿ ಬಂದ ಮೇಲೆ ಯಮುನಾತೀರದ ಸ್ಮಾರಕವಾಗಿ ಅವರ ಅಭಿಪ್ರಾಯದಂತೆ ಮಗುವಿಗೆ (ಯಮುನ್ನೈತ್ತುರ್ರೈಮರ್) ಯಾಮುನಾಚಾರ್ಯರೆಂಬ[1] ಹೆಸರನ್ನಿಟ್ಟರು. ತಂದೆಯಾದ ಈಶ್ವರಭಟ್ಟರು ಮಗನ ಹತ್ತನೆಯ ವಯಸ್ಸಿನಲ್ಲಿಯೇ ತೀರಿಕೊಂಡದ್ದರಿಂದ ದಾದಿಯ ಮತ್ತು ತಾಯಿಯ ಲಾಲನೆಯಿಂದ ಹುಡುಗನು ಬೆಳೆದನೆಂದು ಒಂದು ಕಥೆ; ನಾಥಮುನಿಗಳ ಶಿಷ್ಯರಾದ ಪುಂಡರೀಕಾಕ್ಷರ ಶಿಷ್ಯರಾದ ರಾಮಮಿಶ್ರರೆಂಬುವರ ಸಹಕಾರದಿಂದ ತಂದೆಯು ಮಗನಿಗೆ ಉಪನಯನವನ್ನು ಮಾಡಿ ಚಿಕ್ಕವಯಸ್ಸಿನಲ್ಲಿಯೇ ವೇದಾಧ್ಯಯನವನ್ನು ಮಾಡಿದಿದನೆಂದು ಮತ್ತೆ ಕೆಲವರೆನ್ನುತ್ತಾರೆ. ಇದು ಹೇಗಾದರೂ ಇರಲಿ. ಚಿಕ್ಕಂದಿನಲ್ಲಿಯೇ ಯಾಮುನಾಚಾರ್ಯರ ಬುದ್ಧಿಕುಶಲತೆಯು ಎಲ್ಲರಿಗೂ ತೋರಿಬರುತ್ತಿತ್ತೆಂಬುದಕ್ಕೆ ಸಂಶಯವಿಲ್ಲ. ಅವರು ತರ್ಕವ್ಯಾಕರಣಾದಿಗಳಲ್ಲಿ ಬಹುಸ್ವಲ್ಪ ಕಾಲದಲ್ಲಿಯೇ ಪಂಡಿತರಾದರು.

ಅವರ ಪಾಂಡಿತ್ಯವನ್ನು ಪ್ರದರ್ಶನಮಾಡುವ ಸಮಯವೂ ಅವರಿಗೆ ಬಲುಬೇಗನೆ ಒದಗಿತು. ಯಾಮುನರ ಗುರುವಿಗೆ ಮಹಾಭಾಷ್ಯಭಟ್ಟನೆಂದು ಹೆಸರು. ಹೆಸರಿಗೆ ಮಹಾಭಾಷ್ಯಭಟ್ಟನಾದರೂ ಅವನು ಆ ಕಾಲದ ಚೋಳರಾಜನ ಆಸ್ಥಾನ ವಿದ್ವಾಂಸನಾದ 'ಅಕ್ಕಿ ಆಳ್ವನ್ – ಅಥವಾ ವಿದ್ವಜ್ಜನಕೋಲಾಹಲ'– ಎಂಬಾತನಿಂದ ಜಿತನಾಗಿ ಆಗಿನ ಪದ್ಧತಿಯಂತೆ ತನ್ನ ವರ್ಷಾದಾಯದ ಹತ್ತನೆಯಂತವನ್ನು ಕಪ್ಪವಾಗಿ ಕೊಡಲು ಒಪ್ಪಿದ್ದನು. ಕೋಲಾಹಲನು ತಾನು ಅರಮನೆಯ ಪಂಡಿತನೆಂಬ ಸೊಕ್ಕಿನಿಂದ ಸುತ್ತುಮುತ್ತಲಿನ ವಿದ್ವಾಂಸರೆಲ್ಲರನೂ ಅಪಮಾನಗೊಳಿಸಿ ಬಲಾತ್ಕಾರದಿಂದ ಈ 'ದಶಬಂಧ'ದ ಕಾಣಿಕೆಯನ್ನು

---

1. ಈ ಸಂದರ್ಭದಲ್ಲಿ ರಾಣಿಯು ಹುಡುಗನಿಗೆ ಜಯವಾಗುವದೆಂದು ಭವಿಷ್ಯಹೇಳಿದಳೆಂದೂ ರಾಜನು ತನ್ನ ಪಂಡಿತನಿಗೆ ಗೆಲವಾಗದೆ ಇದ್ದರೆ ಹುಡುಗನಿಗೆ ತನ್ನ ಅರ್ಧರಾಜ್ಯವನ್ನು ಕೊಡುವೆನು' ಎಂದು ಪಣತೊಟ್ಟನೆಂದೂ ಒಂದು ಕಥೆ. ಆಸ್ಥಾನವಿದ್ವಾಂಸನು ''ಎಲಾ ಪೋರ! ನಿನ್ನೊಡನೆ ಹೆಚ್ಚು ವಾದವೇಕೆ? ನೀನು ಅಲ್ಲದೆಂದದ್ದನ್ನು ಹೌದುಮಾಡುವೆನು, ನೋಡು ನನ್ನ ವಿದ್ಯಾಮಹಿಮೆಯನ್ನು! ಎಲ್ಲಿ ಯಾವದಾದರೊಂದು ವಿಷಯವನ್ನುಪ್ರತಿಜ್ಞೆಮಾಡು, ನೋಡೋಣ? ಎನ್ನಲು ಬಾಲಕನು ''ಹಾಗೇ ಆಗಲಿ. ಈ ಮೂರು ವಿಷಯಗಳನ್ನು ಖಂಡಿಸು, ನೋಡೋಣ!'' (1) ನಿನ್ನ ತಾಯಿ ಬಂಜೆಯಲ್ಲ; (2) ಈ ರಾಜನು ಧರ್ಮಶೀಲನು, (3) ರಾಣಿಯು ಪತಿವ್ರತೆಯು – ಇವು ಮೂರನ್ನು ನೀನು ಖಂಡಿಸಿದರೆ ನಾನು ಜಿತನಾದೆನು'' ಎಂದನಂತೆ. ಅಕ್ಕಿ ಆಳ್ವನು ತೆಪ್ಪಗಾಗಬೇಕಾಯಿತೆಂಬುದನ್ನು ಹೇಳಬೇಕಾದ್ದೇ ಇಲ್ಲ. ಕಥೆಗೆ ಸವಿಹತ್ತಿಸುವದಕ್ಕಾಗಿ ಇದೊಂದು ಘಟನೆಯನ್ನು ಯಾರೋ ಇತ್ತೀಚೆಗೆ ಸೇರಿಸಿರಬೇಕೆಂದು ಕೆಲವರು.

ತೆಗೆದುಕೊಳ್ಳುತ್ತಿದ್ದನು. ಒಮ್ಮೆ ಮಹಾಭಾಷ್ಯಭಟ್ಟನಿಂದಲೂ ಈ ಕಪ್ಪವನ್ನು ವಸೂಲುಮಾಡುವದಕ್ಕೆಂದು ಅಕ್ಕಿ ಆಳ್ವನ ಶಿಷ್ಯ ವಂಜೆ ಎಂಬುವನು ಬಂದನು. ಆದರೆ ಯಾಮುನಾಚಾರ್ಯನು ''ಕಪ್ಪಗಿಪ್ಪವೇನೂ ಇಲ್ಲಿ ಸಿಕ್ಕಲಾರದು'' ಎಂದು ಗದರಿಸಿ ಕಳುಹಿಸಿದನು. 'ಈ ಬಾಲಕನನು ವಾದಕ್ಕೆ ಬರಬೇಕು, ಇಲ್ಲದಿದ್ದರೆ ಕೂಡಲೆ ಕಪ್ಪವನ್ನು ಸಲ್ಲಿಸಬೇಕು' ಎಂದು ರಾಯಸವನ್ನು ಬರೆದು ಕಳುಹಿಸಿದನು. ಯಾಮುನಾಚಾರ್ಯರು ಹನ್ನೆರಡು ವರ್ಷ ವಯಸ್ಸಿನವನಾದರೂ ವಾದಕ್ಕೆ ಸಜ್ಜಾಗಿರುವದನ್ನು ಕೇಳಿ ಅರಸನು ಪಂಡಿತರಿಗೆ ತಕ್ಕ ಮರ್ಯಾದೆಯಿಂದ ಅವರನ್ನು ಬರಮಾಡಿಕೊಂಡನು. ಕೋಲಾಹಲನ ಅಂಜಿಕೆಯಿಂದ ಅಳುಕುತ್ತಿದ್ದ ಮಹಾಭಾಷ್ಯಭಟ್ಟನನ್ನು ಸಮಾಧಾನಗೊಳಿಸಿ ಯಾಮುನಾಚಾರ್ಯರು ಆಸ್ಥಾನಕ್ಕೆ ಬಂದರು. ಮುಂದೆ ನಡೆದ ವಾದದಲ್ಲಿ ತಾನು ಪರಾಜಿತನಾದನೆಂದು ಅಕ್ಕಿ ಆಳ್ವನು ಬಹಿರಂಗವಾಗಿ ಒಪ್ಪಿಕೊಂಡುಬಿಟ್ಟನು![1]

ಯಾಮುನಾಚಾರ್ಯರ ವಿದ್ವತ್ತಿಗೆ ಮೆಚ್ಚಿ ರಾಜನು ಅವರಿಗೆ ಬೇಕಾದಷ್ಟು ವೃತ್ತಿಗಳನ್ನು ಕೊಟ್ಟು ಸನ್ಮಾನಿಸಿದನು. ರಾಣಿಯು ಇವರಿಗೆ 'ಆಳವಂದಾರ್' (ಆಳುವದಕ್ಕೆ ಬಂದವರು) ಎಂದು ಹೆಸರನ್ನಿಟ್ಟಳು. ಮುಂದೆ ಕೆಲವು ವರ್ಷಗಳವರೆಗೆ ಯಾಮುನಾಚಾರ್ಯರು ರಾಜಭೋಗದಲ್ಲಿ ಆಸಕ್ತರಾದರು. ಅವರಿಗೆ ಮದುವೆಯಾಗಿ ನಾಲ್ವರು ಮಕ್ಕಳಾದರು ಜೀವನದ ಉದ್ದೇಶವು ಈ ಕಾಲದಲ್ಲಿ ಅವರಿಗೆ ಪೂರ ಕಣ್ಮರೆಯಾಗಿತ್ತೆನ್ನಬಹುದು.

ಆದರೆ ಪರಮೇಶ್ವರನ ಸಂಕಲ್ಪವು ಬೇರೆಯಾಗಿತ್ತು. ನಾಥಮುನಿಗಳ ಇಚ್ಛೆಯಂತೆ ಇವರಿಗೆ ಶ್ರೀವೈಷ್ಣವಮತದ ರಹಸ್ಯವನ್ನೆಲ್ಲ ತಿಳಿಸಬೇಕೆಂದು ರಾಮಮಿಶ್ರರು ಹವಣಿಸುತ್ತಿದ್ದು ಹೇಗೋ ಕಷ್ಟಪಟ್ಟು ಇವರ ಭವನದೊಳಕ್ಕೆ ಪ್ರವೇಶವನ್ನು ದೊರಕಿಸಿಕೊಂಡು ''ಮಹಾಸ್ವಾಮಿ, ತಮ್ಮ ಪಿತಾಮಹರು; ತಮಗಾಗಿ ಮಾಡಿಟ್ಟಿರುವ ಧನವು ನನ್ನ ಬೆಳವಣಿಗೆಯಲ್ಲಿದೆ, ನನ್ನೊಡನೆ ಬರುವದಾದರೆ

1. ದಯಾನಂದಸರಸ್ವತಿಗಳ ಸತ್ಯಾರ್ಥಪ್ರಕಾಶದಲ್ಲಿ, 'ಯವನಕುಲೋತ್ಪನ್ನರಾದ್ದರಿಂದ ಇವರಿಗೆ ಯಾವನಾಚಾರ್ಯರೆಂಬ ಹೆಸರು ಬಂತು; ಆ ಹೆಸರನ್ನು ಬದಲಾಯಿಸಿ ಯಾಮುನಾಚಾರ್ಯರೆಂದು ಕೆಲವರು ಕರೆಯುತ್ತಾರೆ' ಎಂಬ ನಿರಾಧಾರವಾದ ಅಸತ್ಯಾರ್ಥವು ಪ್ರಕಾಶವಾಗಿದೆ. ಅದನ್ನೇನೂ ನಾವು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾದ್ದಿಲ್ಲವೆಂಬುದು ಸುವ್ಯಕ್ತವು.

ಅದನ್ನು ತಮಗೆ ತೋರಿಸುತ್ತೇವೆ ಎಂದರು. ಯಾಮುನಾಚಾರ್ಯರವರು ಅದಕ್ಕೊಪ್ಪಿ ಅವರ ಹಿಂದೆ ಹೊರಟರು. ದಾರಿಯಲ್ಲಿ ರಾಮಮಿಶ್ರರೊಡನೆ ನಡೆದ ದಿವ್ಯ ಸಂಭಾಷಣೆಯಿಂದ ಆಚಾರ್ಯರ ಕಣ್ಣು ತೆರೆಯಿತು; 'ಶ್ರೀರಂಗನಾಥನೇ ತಮ್ಮ ಅಜ್ಜಂದಿರು ತಮಗಾಗಿ ಕೂಡಹಾಕಿರುವ ಧನವು' ಎಂದು ಅವರು ಹೇಳಲು ಹೃದಯದಲ್ಲಿ ಭಕ್ತಿವೈರಾಗ್ಯಗಳು ಉಕ್ಕಿದವುಗಳು ಕಳೆದ ವ್ಯರ್ಥಜೀವನಕ್ಕಾಗಿ ಅವರಿಗಾಗಿ ಪಶ್ಚಾತ್ತಾಪವನ್ನುಹೊಂದಿ ಕೂಡಲೆ ಸಂನ್ಯಾಸವನ್ನು ಸ್ವೀಕರಿಸಿ ಅಲ್ಲಿಂದ ಮುಂದಕ್ಕೆ ಶ್ರೀರಂಗನಾಥನ ಕೈಂಕರ್ಯಕ್ಕೆ ಸೊಂಟವನ್ನು ಕಟ್ಟಿದರು.

ಇನ್ನು ಶ್ರೀರಂಗವು ಶ್ರೀವೈಷ್ಣವರ ಪವಿತ್ರದುರ್ಗವಾಯಿತು. ಯಾಮುನಾಚಾರ್ಯರ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿ ಅನೇಕ ಜನರು ಅವರ ಸೇವೆಗೆ ಬಂದು ನಿಂತರು. ಅಂಥ ಶಿಷ್ಯರಲ್ಲಿ ಇಪ್ಪತ್ತು ಜನರು ವೈಷ್ಣವಮತಪ್ರಸಾರಣೆಗೆ ಸಾಧಕರಾದರು.

ಜನರಿಗೆ ಮಾಡುತ್ತಿದ್ದ ದಿವ್ಯೋಪದೇಶದ ಜೊತೆಗೆ ಆಚಾರ್ಯರು ಅನೇಕ ಗ್ರಂಥರತ್ನಗಳನ್ನೂ ಅನುಗ್ರಹಿಸಿದರು. ಅವುಗಳಲ್ಲಿ **ಆಗಮಪ್ರಾಮಾಣ್ಯ ಸಿದ್ಧತ್ರಯ, ಗೀತಾರ್ಥಸಂಗ್ರಹ, ಸ್ತೋತ್ರರತ್ನ** – ಇವು ಈಗಲೂ ದೊರೆಯುತ್ತವೆ. ಆಗಮಪ್ರಾಮಾಣ್ಯವು ಪಾಂಚರಾತ್ರದ ಆಗಮಗಳ ಪ್ರಾಮಾಣ್ಯವನ್ನು ಸ್ಥಾಪಿಸುವದಕ್ಕಾಗಿ ಹೊರಟಿದ್ದು, ಪಾಂಚರಾತ್ರಾಗಮವು ಈಗ ಸಂಪೂರ್ಣವಾಗಿ ದೊರೆಯುವದಿಲ್ಲ; ಸ್ವಲ್ಪಭಾಗವು ಮಾತ್ರ ತೆಲುಗಿನಲ್ಲಿ ಅಚ್ಚಾಗಿ ಈಗೀಗ ದೇವನಾಗರಿಯಲ್ಲಿ ಇಣಕಿ ನೋಡುತ್ತಿದ. ಅದರಲ್ಲಿ ಮುಖ್ಯವಾಗಿ ದೇವಾಲಯಗಳಲ್ಲಿ ನಡೆಯಬೇಕಾಗಿರುವ ಅರ್ಚನವಿಧಾನವೂ, ಭಾಗವತ ಧರ್ಮವೂ ಪ್ರಪತ್ತಿ ಮುಕ್ತಿಸಾಧನದ ರೀತಿಯೂ ಉಕ್ತವಾಗಿದೆ. ತಾಂತ್ರಿಕ ವಾಙ್ಮಯವನ್ನು ತುಲನಾತ್ಮಕದೃಷ್ಟಿಯಿಂದ ಪರಿಶೀಲಿಸಬೇಕೆನ್ನುವವರಿಗೂ ಶ್ರೀಭಾಷ್ಯದಲ್ಲಿ ಕೂಡ ಸಿಕ್ಕದಿರುವ ಪ್ರಪತ್ತಿಯ ರಹಸ್ಯವನ್ನು ಅರಿಯಬೇಕೆನ್ನುವವರಿಗೂ ಇದು ಬಹಳ ಉಪಯುಕ್ತವಾಗುತ್ತದೆ. ಸಿದ್ಧತ್ರಯವೆಂಬ ಗ್ರಂಥದಲ್ಲಿ ಆತ್ಮಸಿದ್ಧಿ, ಈಶ್ವರಸಿದ್ಧಿ, ಸಂಪಿತ್ಸಿದ್ಧಿ – ಎಂಬ ಮೂರು ಭಾಗಗಳಿವೆ; ಇದರಲ್ಲಿ ಮಾಯಾವಾದವನ್ನು ಖಂಡಿಸಿ ಜೀವಾತ್ಮಪರಮಾತ್ಮರ ಸಿದ್ಧಿಯನ್ನು ಮಾಡುವದಕ್ಕೆ ಪ್ರಯತ್ನಪಟ್ಟಿರುತ್ತದೆ. ಶ್ರೀ ಭಾಷ್ಯಕ್ಕೂ ಬೀಜರೂಪವಾಗಿದ್ದ ಎಷ್ಟೋ ವಿಚಾರಗಳು ಇದರಲ್ಲಿ ಕಂಡುಬರುತ್ತದೆ. ಗೀತಾರ್ಥಸಂಗ್ರಹದಲ್ಲಿ

ಸುಮಾರು ಮೂವತ್ತು ಶ್ಲೋಕಗಳಲ್ಲಿ ಒಟ್ಟು ಗೀತಾರ್ಥವಿಭಾಗವನ್ನು ಸಂಗ್ರಹವಾಗಿ ಕೊಟ್ಟಿರುತ್ತದೆ. ಇದೇ ಅನುಕ್ರಮವನ್ನನುಸರಿಸಿ ಶ್ರೀರಾಮಾನುಜಾಚಾರ್ಯರವರು ತಮ್ಮ ಗೀತಾಭಾಷ್ಯವನ್ನು ಬರೆದಿರುತ್ತಾರೆ. ಸ್ತೋತ್ರರತ್ನವೆಂಬುದು ಸುಮಾರು 75 ಶ್ಲೋಕಗಳ ವಿಷ್ಣುಸ್ತೋತ್ರವು. ಆಚಾರ್ಯರ ಪ್ರೌಢಿಮೆಯನ್ನು ಶಾಸ್ತ್ರವಿಜ್ಞಾನವನ್ನು ಇಲ್ಲಿ ಕಾಣಬಹುದು. ಕೊನೆಯ ಎರಡು ಗ್ರಂಥಗಳಿಗೂ ಶ್ರೀವೇದಾಂತದೇಶಿಕರು ಬರೆದಿರುವ ವ್ಯಾಖ್ಯಾನವಿದೆ. ಶ್ರೀವೈಷ್ಣವಸಿದ್ಧಾಂತದ ವಿಚಾರಗಳ ಬೆಳವಣಿಗೆಯನ್ನೂ ಇತಿಹಾಸವನ್ನೂ ವಿಮರ್ಶೆಮಾಡಬೇಕನ್ನುವವರು ಈ ಗ್ರಂಥಗಳನ್ನೆಲ್ಲ ಅವಶ್ಯವಾಗಿ ಓದಬೇಕು.

ಯಾಮುನಾಚಾರ್ಯರು ಒಂದು ಸಲ ಅನಂತಶಯನಕ್ಕೆ ಹೋಗಿ ಶ್ರೀಪದ್ಮನಾಭನ ದರ್ಶನವನ್ನು ಮಾಡಿಕೊಂಡು ಬಂದರು; ಮತ್ತೊಂದು ಸಲ ತಮ್ಮ ವಾರ್ಧಕದಲ್ಲಿ ಕಂಚಿಗೆ ಹೋಗಿ ಬಂದರು, ಆಗ ಯಾದವಪ್ರಕಾಶರ ಬಳಿಯಲ್ಲಿ ಅದ್ವೈತಗ್ರಂಥವನ್ನು ಓದುತ್ತಿದ್ದ ರಾಮಾನುಜರನ್ನು ನೋಡುವ ಸಂದರ್ಭವು ಒದಗಿತು. ಮೊದಲನೆಯ ಯಾತ್ರೆಗೆ ಹೋಗಿ ಬರುವದರೊಳಗೆ ನಾಥಮುನಿ ಶಿಷ್ಯರಾದ ಕುರು ಹೈ ಕಾವಲಪ್ಪನೆಂಬವರು ಪರಲೋಕಕ್ಕೆ ತೆರಳಿದ್ದರು. ಅವರಲ್ಲಿ ವೈದಿಕಯೋಗದ ರಹಸ್ಯವಿತ್ತೆಂದೂ ಅದನ್ನು ಯಾಮುನಾಚಾರ್ಯರಿಗೆ ಉಪದೇಶಮಾಡುವದಕ್ಕಾಗಿ ಒಂದು ದಿನ ಮುಹೂರ್ತವನ್ನಿಟ್ಟುಕೊಂಡಿದ್ದರೆಂದೂ ಆದರೆ ಕಾಲಕ್ಕೆ ಸರಿಯಾಗಿ ಆಚಾರ್ಯರು ಬಾರದಿದ್ದರಿಂದ ಒಂದು ಸಾಧನರತ್ನವೇ ಮುಳುಗಿಹೋಗಿ ಪ್ರಪಂಚಕ್ಕೆ ಅಸಾಧಾರಣವಾದ ನಷ್ಟವಾಯಿತೆಂದು ಶ್ರೀವೈಷ್ಣವರು ಹೇಳುತ್ತಾರೆ. ಕಂಚಿಯ ಯಾತ್ರೆಯಿಂದ ಮಾತ್ರ ಲೋಕಕ್ಕೆ ಒಂದು ಪರಮಲಾಭವಾಯಿತು, ಏಕೆಂದರೆ ಯಾಮುನಾಚಾರ್ಯರು ಕ್ರಿ.ಶ. 1040ರಲ್ಲಿ ದೇಹವನ್ನು ಬಿಡುವಾಗ ರಾಮಾನುಜರ ಸ್ಮರಣೆಯನ್ನು ಮಾಡುತ್ತಲೇ ಇದ್ದರು; ಅವರನ್ನು ಕರೆಯಿಸಿ ಮತಪ್ರಚಾರಕ್ಕೆ ತಕ್ಕ ಏರ್ಪಾಡನ್ನು ಮಾಡಬೇಕೆಂದದ್ದ ಅವರ ಪರಮೇಚ್ಛೆಯು ಮುಂದೆ ಸಂಪೂರ್ಣವಾಗಿ ಫಲಿಸಿತು ಶ್ರೀರಾಮಾನುಜಾಚಾರ್ಯರು ಶ್ರೀರಂಗಕ್ಕೆ ಬಂದು ಶ್ರೀಭಾಷವೇ ಮುಂತಾದ ತಮ್ಮ ಸುಪ್ರಸಿದ್ಧ ಗ್ರಂಥಗಳನ್ನು ಬರೆದದ್ದಲ್ಲದೆ, ಶ್ರೀವೈಷ್ಣವಸಂಪ್ರದಾಯ ಪ್ರವರ್ತನೆಗೆ ಸುಪ್ರಸಿದ್ಧ ಪ್ರಮುಖಾಚಾರ್ಯರೂ ಆದರು.

★★★★★

# ಕುಲಶೇಖರಾಳ್ವಾರ್

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಶ್ರೀ ಕುಲಶೇಖರಾಳ್ವಾರ್ ಎಂಬ ಮಹಾತ್ಮರು ಶ್ರೀವೈಷ್ಣವರಿಗೇ ಅಲ್ಲದೆ ಭಕ್ತರೆಲ್ಲರಿಗೂ ಅತ್ಯಂತಪ್ರಿಯವಾದ ಅನನ್ಯಭಕ್ತಿಯ ಸ್ವರೂಪವನ್ನು ಉಪದೇಶದಿಂದಲೂ ಉದಾಹರಣೆಯಿಂದಲೂ ಪ್ರಕಟಿಸಿದವರಾಗಿರುತ್ತಾರೆ. ಶ್ರೀ ಕುಲಶೇಖರಾಳ್ವಾರ್ ಅವರ ದಿವ್ಯಚರಿತ್ರೆಯ ಅಂಶವನ್ನಾದರೂ ಅವರ ತಿರುನಕ್ಷತ್ರದ ದಿನ ಸ್ಮರಿಸಿಕೊಳ್ಳುವದು ಭಗವದ್ಭಕ್ತಿಗೆ ಕಾರಣವಾಗುವದು.

**'ಆಳ್ವಾರ್'** ಎಂಬ ಮಾತಿಗೆ ಅಧ್ಯಾತ್ಮಜ್ಞಾನರೂಪವಾದ ಸಮುದ್ರದಲ್ಲಿ ಚೆನ್ನಾಗಿ ಮುಳುಗಿದವರೆಂದು ಅರ್ಥವಾಗುವದು. ಭಗವಂತನಾದ ಮಹಾವಿಷ್ಣುವು ಲೋಕೋದ್ಧಾರಕ್ಕಾಗಿ ಅನಂತಗರುಡವಿಷ್ವಕ್ಸೇನಾದಿಯಾದ ತನ್ನ ಪರಿಷದ್ವರ್ಗದವರನ್ನು ಅವತಾರಮಾಡುವಂತೆ ಅಪ್ಪಣೆಮಾಡಿ ಕಳುಹಿಸಿಕೊಟ್ಟನೆಂತಲೂ ಆತನಿಂದ ಅನುಗ್ರಹವನ್ನು ಪಡೆದ ಆ ನಿತ್ಯಸೂರಿಗಳು ಬೇರೆಬೇರೆಯ ಜಾತಿಯವರಲ್ಲಿ ಹುಟ್ಟಿ ಜನರಿಗೆ ಸನ್ಮಾರ್ಗವನ್ನು ಉಪದೇಶಿಸಿದರೆಂದೂ ಶ್ರೀವೈಷ್ಣವರ ಶಾಸ್ತ್ರಗಳಲ್ಲಿ ಹೇಳಿರುತ್ತದೆ. ಆಳ್ವಾರುಗಳು ಬರೆದಿರುವ ದಿವ್ಯಪ್ರಬಂಧವೆಂಬ ನಾಲ್ಕುಸಾವಿರ ಪದ್ಯಗಳನ್ನು ಅಧ್ಯಾತ್ಮ ಜ್ಞಾನದ ಅಮೂಲ್ಯಭಂಡಾರವೆಂದೂ ವೇದತುಲ್ಯವೆಂದೂ ಆ ವೈಷ್ಣವರು ಭಾವಿಸುತ್ತಾರೆ. ಇಂಥ ಆಳ್ವಾರುಗಳು ಹನ್ನೆರಡು ಜನರು. ಅವರಲ್ಲಿ ಒಬ್ಬರು ನಮ್ಮ ಕುಲಶೇಖರಾಳ್ವಾರ್ ರವರು.

ಆಳ್ವಾರುಗಳ ಕಾಲವು ಕ್ರಿಸ್ತಶಕ ಏಳನೆಯ ಶತಮಾನದಿಂದ ಒಂಬತ್ತನೆಯ ಶತಮಾನದ ಪರ್ಯಂತವೆಂದು ಶೋಧಕರು ಹೇಳುತ್ತಾರೆ; ಆದರೆ ಭಾವುಕರಾದ ವೈಷ್ಣವರು ಕುಲಶೇಖರರ ಕಾಲವು ಕಲಿಯುಗಾದಿಯಲ್ಲಿ ಎಂದರೆ ಸುಮಾರು ಕ್ರಿ.ಶ.3100ರಲ್ಲಿ ಎಂದು ಎಣಿಸುತ್ತಾರೆ. ಈ ವಿಷಯದ ನಿರ್ಧಾರವನ್ನು ಪುರಾತತ್ತ್ವಶೋಧಕರಾದ ಪಂಡಿತರಿಗೆ ಬಿಟ್ಟುಬಿಡಬಹುದು. ಅಂತು ಬಹುಕಾಲದ ಹಿಂದೆ ಕೇರಳದಲ್ಲಿ ಕೊಲ್ಲಿನಗರದ ರಾಜನಿಗೆ ಶ್ರೀಮನ್ನಾರಾಯಣನ ದಯೆಯಿಂದ ಕುಲಶೇಖರನೆಂಬ ಒಬ್ಬ ಮಗನು ಹುಟ್ಟಿದನು. ಅವನು ತಮಿಳಿನಲ್ಲಿಯೂ ಸಂಸ್ಕೃತದಲ್ಲಿಯೂ ಧಾರ್ಮಿಕ ಗ್ರಂಥಗಳನ್ನು ಚೆನ್ನಾಗಿ ಅಭ್ಯಾಸಮಾಡಿದ್ದಲ್ಲದೆ

ರಾಜನಿಗೆ ಬೇಕಾದ ದಂಡನೀತಿಯೇ ಮುಂತಾದವುಗಳಲ್ಲಿಯೂ ಪ್ರವೀಣನಾದನು. ತಂದೆಯು ಸರ್ವವಿಧದಿಂದಲೂ ರಾಜ್ಯಭಾರವನ್ನು ವಹಿಸುವದಕ್ಕೆ ಶಕ್ತನಾಗಿದ್ದ ಮಗನಿಗೆ ಪಟ್ಟವನ್ನು ಕಟ್ಟಿ ಹಿಂದಿನ ರಾಜರಮಾರ್ಗವನ್ನನುಸರಿಸಿ ತಾನು ಮೋಕ್ಷಪಥದಲ್ಲಿ ಕಾಲನ್ನಿಟ್ಟನು.

ಇತ್ತ ಕುಲಶೇಖರನು ಧರ್ಮದಿಂದ ರಾಜ್ಯವನ್ನಾಳುತ್ತಾ ಶ್ರಿಯಃಪತಿಯ ಚರಣಾರವಿಂದವನ್ನೇ ತನ್ನ ಹೃದಯಸಿಂಹಾಸನದಲ್ಲಿ ಕೂರಿಸಿ ತನ್ನ ರಾಜ್ಯವೆಲ್ಲವೂ ಆತನದೇ ಎಂಬ ಭಾವನೆಯಿಂದ ಸೇವೆಯನ್ನೇ ಅನವರತವೂ ಮಾಡಿಕೊಂಡಿದ್ದನು. ಅವನ ಶ್ರದ್ಧಾಭಕ್ತಿಗಳಿಗೆ ಪ್ರಸನ್ನನಾದ ಭಗವಂತನು ಒಂದು ದಿವಸ ರಾತ್ರಿಯಲ್ಲಿ ಅವನಿಗೆ ತನ್ನ ದಿವ್ಯಮಂಗಲವಿಗ್ರಹದ ದರ್ಶನವನ್ನು ಕೊಟ್ಟನು. ಅಂದಿನಿಂದ ರಾಜನು ಭಗವದ್ಭಾವದಲ್ಲಿಯೇ ಲೀನನಾಗಿರುತ್ತಾ ಮಾಯಾಪ್ರಪಂಚದ ಸಂಬಂಧವನ್ನು ಸಂಪೂರ್ಣವಾಗಿ ತೊರೆದು ಸತ್ಸಂಗ, ಹರಿಕಥಾಶ್ರವಣ, ಕೀರ್ತನ, ಭಜನ, ಧ್ಯಾನಾದಿಗಳಲ್ಲಿಯೇ ಕಾಲವನ್ನು ಕಳೆಯುವದಕ್ಕೆ ಮೊದಲುಮಾಡಿದನು.

ಒಂದು ದಿನ ಒಬ್ಬ ಪಂಡಿತನು ರಾಮಾಯಣಪುರಾಣವನ್ನು ಹೇಳುತ್ತಾ – ''ಶ್ರೀರಾಮನು ಸೀತಾದೇವಿಯನ್ನು ನೋಡಿಕೊಂಡಿರೆಂದು ಲಕ್ಷ್ಮಣನಿಗೆ ಆಜ್ಞೆಮಾಡಿ ತಾನೊಬ್ಬನೇ ಖರದೂಷಣರ ದೊಡ್ಡ ಸೈನ್ಯದೊಡನೆ ಯುದ್ಧಮಾಡುವದಕ್ಕೆ ಹೊರಟನು'' ಎಂದು ಹೇಳಿ –

**ಚತುರ್ದಶಸಹಸ್ರಾಣಿ ರಕ್ಷಸಾಂ ಭೀಮಕರ್ಮಣಾಮ್ ।**
**ಏಕಶ್ಚ ರಾಮೋ ಧರ್ಮಾತ್ಮಾ ಕಥಂ ಯುದ್ಧಂ ಭವಿಷ್ಯತಿ ॥**

ಹದಿನಾಲ್ಕುಸಾವಿರ ಭಯಂಕರರಾದ ರಾಕ್ಷಸರೊಡನೆ ರಾಮನು ತಾನೊಬ್ಬನೇ ಹೇಗೆ ಯುದ್ಧವನ್ನು ಮಾಡುವನೋ! – ಎಂದು ಹೇಳುತ್ತಿರಲು ಕಥಾಶ್ರವಣದಲ್ಲಿಯೇ ತತ್ಪರನಾಗಿದ್ದ ಕುಲಶೇಖರನು ಕೂಡಲೆ ಉತ್ಸಾಹದಿಂದ ಶಂಖನಾದವನ್ನು ಮಾಡಿ ತನ್ನ ಸೇನಾ ನಾಯಕನ ಕಡೆಗೆ ತಿರುಗಿ ''ಕೂಡಲೆ ನಮ್ಮ ಸೇನೆಯವರೆಲ್ಲರೂ ಶ್ರೀರಾಮಚಂದ್ರನ ಸಹಾಯಕ್ಕೆ ತೆರಳುವಂತೆ ಏರ್ಪಾಡುಮಾಡು!''ಎಂದು ಅಪ್ಪಣೆಮಾಡಿದನಂತೆ! ಶ್ರೀರಾಮಚಂದ್ರನು ಖರದೂಷಣಸೇನೆಯನ್ನೆಲ್ಲ ನುಗ್ಗುನುಚ್ಚುಮಾಡಿಟ್ಟನೆಂದು ಪಂಡಿತನು ಹೇಳಿದ್ದನ್ನು ಕೇಳಿದಮೇಲೆಯೇ ಇದು ಕಥೆಯೆಂಬ ಭಾವನೆಯು ರಾಜನಿಗೆ ಬಂದಿತಂತೆ!

ಮತ್ತೊಂದು ಸಲ ರಾಜ್ಯದ ಭಂಡಾರದಲ್ಲಿ ಒಂದು ಅಮೂಲ್ಯವಾದ ರತ್ನವು ಕಳವಾಗಲು ದರಬಾರಿನವರು "ಏನಾದರೂ ಹೇಳಿರಿ, ಈ ಕೆಲಸವನ್ನು ಆ ಭಕ್ತರೆಂಬ ಧೂರ್ತರೇ ಮಾಡಿರಬೇಕು" ಎಂದು ಅರಸನ ಬಳಿಯಲ್ಲಿ ಬಿನ್ನವಿಸಿಕೊಂಡರು. ದೊರೆಯು ಹಗಲ್ಲೆಲ್ಲ ಭಕ್ತರ ಸಂಗದಲ್ಲಿಯೇ ಕಾಲಹಾಕುತ್ತಿರುವದನ್ನು ಕಂಡು ಸಹಿಸಲಾರದೆ ಅವರ ಬುದ್ಧಿಗೆ ಹೀಗೆ ತೋಚಿದ್ದೇನೂ ಆಶ್ಚರ್ಯವಲ್ಲ. ಆದರೆ ರಾಜನು ಸತ್ಪುರುಷರಲ್ಲಿ ಇಟ್ಟಿದ್ದ ವಿಶ್ವಾಸವು ಇದರಿಂದ ಒಂದಿಷ್ಟೂ ಕದಲಲಿಲ್ಲ. ಅವನು ಒಂದು ಕೊಡದಲ್ಲಿ ಒಂದು ವಿಷದ ಹಾವನ್ನು ತುಂಬಿಸಿ ಬಾಯಿಕಟ್ಟಿ ನಿಮ್ಮಲ್ಲಿ ಯಾರಿಗಾದರೂ "ವೈಷ್ಣವಭಕ್ತರಲ್ಲಿ ನಿಜವಾದ ಸಂದೇಹವಿದ್ದರೆ ಹಾಗೆಂದು ಪ್ರತಿಜ್ಞೆಮಾಡಿ ಈ ಕೊಡದಲ್ಲಿ ಕೈಯಿಡಿರಿ; ಅವರು ನಿರ್ದೋಷಿಗಳೆಂದೇ ನನ್ನ ಅಭಿಪ್ರಾಯವಿದೆ, ಇದು ಸುಳ್ಳಾದರೆ ಸರ್ಪವು ನನ್ನನ್ನು ಕಚ್ಚಲಿ!" ಎಂದು ಕೊಡದೊಳಕ್ಕೆ ಕೈಚಾಚಿದನು. ಆದರೆ ಆ ಹಾವು ಮಂತ್ರಮುಗ್ಧವಾಗಿದ್ದಂತೆ ಇದ್ದಲ್ಲಿಯೇ ಇದ್ದುಬಿಟ್ಟಿತಂತೆ!

ಕುಲಶೇಖರನಿಗೆ ತೀರ್ಥಯಾತ್ರೆಯಲ್ಲಿ ತುಂಬಾ ಅಭಿಲಾಷೆಯಿದ್ದಿತು. ಆತನ 'ಮುಕುಂದಮಾಲಾ' ಗ್ರಂಥದ ಆದಿಭಾಗದಲ್ಲಿ ಯಾರೋ ಈಚೆಗೆ ಸೇರಿಸಿರುವ ಒಂದು ಶ್ಲೋಕದಲ್ಲಿ ಹೀಗಿದೆ:

**ಘುಷ್ಯತೇ ಯಸ್ಯ ನಗರೇ ರಂಗಯಾತ್ರಾದಿನೇ ದಿನೇ ।**
**ತಮಹಂ ಶಿರಸಾ ವನ್ದೇ ರಾಜಾನಂ ಕುಲಶೇಖರಮ್ ॥**

'ಯಾವಾತನ ರಾಜಧಾನಿಯಲ್ಲಿ ದಿನದಿನವೂ ಶ್ರೀರಂಗಯಾತ್ರೆಯ ಡಂಗುರವು ಸಾರುತ್ತಲೇ ಇರುವದೋ ಆ ಕುಲಶೇಖರ ರಾಜನಿಗೆ ತಲೆಬಾಗಿ ನಮಸ್ಕರಿಸುತ್ತೇನೆ.' **ಮುಕುಂದಮಾಲೆಯನ್ನು**[1] ಈತನು ಶ್ರೀರಂಗದಲ್ಲಿಯೇ ಇದ್ದು ರಚಿಸಿದನೆಂದು ಹೇಳುತ್ತಾರೆ. ಇದರಂತೆ ತಿರುಪತಿ, ಮಥುರೆ, ವೃಂದಾವನ, ಅಯೋಧ್ಯೆ – ಮುಂತಾದ ತೀರ್ಥಕ್ಷೇತ್ರಗಳಲ್ಲಿದ್ದುಕೊಂಡು ತನ್ನ ಇಷ್ಟದೇವತೆಯಾದ ಶ್ರೀರಾಮನ ಮತ್ತು ಶ್ರೀಕೃಷ್ಣನ ಲೀಲೆಯ ಪರವಾದ ಅನೇಕ ಪದಗಳನ್ನೂ ಆತನು ರಚಿಸಿರುತ್ತಾನೆ.

1. ಈ ಗ್ರಂಥವನ್ನು ಭಾವಾರ್ಥಸಮೇತವಾಗಿ ಕಾರ್ಯಾಲಯದಲ್ಲಿ ಪ್ರಕಟಿಸಿರುತ್ತದೆ.

ತಿರುಪತಿಯಲ್ಲಿ ಆತನು ರಚಿಸಿದ ಒಂದು ಪದದಲ್ಲಿ ಆತನು ಹೀಗೆಂದಿರುತ್ತಾನೆ:-

**''ನನಗೆ ಹಣ ಬೇಡ, ದೇಹಸುಖ ಬೇಡ, ರಾಜ್ಯವೂ ಬೇಕಿರುವದಿಲ್ಲ, ಇಂದ್ರನ ಪದವಿಯು ಕೂಡ ಬೇಡ. ನನ್ನ ಅಭಿಲಾಷೆಯೆಲ್ಲ ಇಷ್ಟೆ: ನಿನ್ನ ಮಂದಿರಕ್ಕೆ ಮೆಟ್ಟಿಲಾಗಿ ನಾನಿರಬೇಕು, ನನ್ನ ತಲೆಯ ಮೇಲೆ ನಿನ್ನ ಭಕ್ತರ ಚರಣವು ಮತ್ತೆ ಮತ್ತೆ ಬೀಳುತ್ತಿರಬೇಕು. ನಿನ್ನ ಶ್ರೀವಿಗ್ರಹವನ್ನು ನೋಡುವದಕ್ಕೆಂದು ಭಕ್ತರು ಹೋಗುವ ದಾರಿಯಲ್ಲಿ ನಾನು ಒಂದು ಧೂಳಿಯಕಣವಾಗಿದ್ದರೂ ಸಾಕು. ಅಥವಾ ನನ್ನನ್ನು ನಿನ್ನ ಉದ್ಯಾನವೃಕ್ಷಗಳಿಗೆ ನೀರುಹಾಕುವ ಕಾಲುವೆಯ ನೀರನ್ನಾದರೂ ಮಾಡು; ಇಲ್ಲದಿದ್ದರೆ ನನ್ನನ್ನು ನಿನ್ನ ಉದ್ಯಾನದ ಒಂದು ಸಂಪಿಗೆಯಗಿಡವಾಗಿ ಮಾರಿಬಿಡು, ನಿನ್ನನ್ನು ಹೂಗಳಿಂದ ಪೂಜೆಮಾಡಿ ನಲಿಯುತ್ತೇನೆ. ಆದೂ ಇಲ್ಲದಿದ್ದರೆ ಇಲ್ಲಿರುವ ಸರೋವರದಲ್ಲಿ ಒಂದು ಜಲಚರವಾಗಿಯಾದರೂ ಮಾಡುಬಿಡು''**

ಆತನು ಮತ್ತೊಂದೆಡೆಯಲ್ಲಿ ಹೇಳಿರುವದು ಹೀಗೆ:-

**''ತಾಯಿಯು ನನ್ನ ತೊಡೆಯ ಮೇಲಿಂದ ಮಗುವನ್ನು ಆಚೆಗೆ ತಳ್ಳಿದರೂ ಅದು ಅಳುತ್ತಾ ಆಕೆಗೇ ಅಂಟಿಕೊಳ್ಳುವಂತೆ ಎಲೈ ನಾಥನೆ, ನೀನು ನನ್ನನ್ನು ಎಷ್ಟೇ ಉಪೇಕ್ಷಿಸಿದರೂ ನನ್ನ ದುಃಖವನ್ನು ಅಲಕ್ಷ್ಯಮಾಡಿದರೂ ನಾನು ನಿನ್ನ ಚರಣವನ್ನು ಬಿಟ್ಟು ಮತ್ತೆಲ್ಲಿಯೂ ಹೋಗಲಾರೆನು; ನನಗೆ ನಿನ್ನ ಚರಣವನ್ನು ಬಿಟ್ಟರೆ ಬೇರೆ ಗತಿಯೆ ಇಲ್ಲ.''**

ಕುಲಶೇಖರಾಳ್ವಾರರು ರಚಿಸಿದ ''ಪೆರುಮಾಳ್ ತಿರುಮೊಷಿ'' ಎಂಬ 105 ಪದ್ಯಗಳ ಭಾಗವು ಆಳ್ವಾರುಗಳು ರಚಿಸಿರುವ ನಾಲ್ಕುಸಾವಿರದ ''ದಿವ್ಯಪ್ರಬಂಧ''ಗಳಲ್ಲಿ ಸೇರಿರುತ್ತದೆ. ಅವರು ಮಹಾವಿಷ್ಣುವಿನ ಕೌಸ್ತಭಾಂಶಸಂಭೂತರೆಂದು ಶ್ರೀವೈಷ್ಣವರು ಭಾವಿಸಿರುತ್ತಾರೆ.

★★★★★

# ಶ್ರೀ ರಾಮಾನುಜಾಚಾರ್ಯರವರು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ದಕ್ಷಿಣ ಇಂಡಿಯವು ವೇದಾಂತಮತವನ್ನು ಉಜ್ವಲಗೊಳಿಸಿದ ಪ್ರಖ್ಯಾತರಾದ ಮೂರು ಜನ ಆಚಾರ್ಯರುಗಳಿಗೆ ಆವಾಸಸ್ಥಾನವಾಯಿತು. ಅವರಲ್ಲಿ ಪ್ರಸಿದ್ಧವಾದ ವಿಶಿಷ್ಟಾದ್ವೈತಮತವನ್ನು ಉದ್ಧಾರ ಮಾಡಿದ ಶ್ರೀ ರಾಮಾನುಜಾಚಾರ್ಯರವರ ಜೀವನ ಚರಿತ್ರೆಯು ಅನಿತರಸಾಧಾರಣವಾದ

ಮಹಾಕಾರ್ಯಗಳಿಂದ ಕೂಡಿರುವದು. ಚಿರಸ್ಮರಣೀಯರಾದ ಇವರ ದಿವ್ಯ ಚರಿತ್ರೆಯನ್ನು ಅತಿ ಸಂಕ್ಷೇಪವಾಗಿ ತಿಳಿಸಿ ಇವರ ಸಿದ್ಧಾಂತದ ಸಾರವನ್ನೂ ವಾಚಕರ ಅವಗಾಹನೆಗೆ ತರುತ್ತೇವೆ.

ಈ ಮಹನೀಯರು ಈಗಿನ ಚಂಗಲ್ಪಟ್ಟು ಜಿಲ್ಲೆಗೆ ಸೇರಿದ ಶ್ರೀ ಪೆರಂಬುದೂರೆಂಬಲ್ಲಿ ಕೇಶವಸೋಮಯಾಜಿ ಮತ್ತು ಇವರ ಪತ್ನಿ ಭೂದೇವಿ ಈ ದಂಪತಿಗಳಿಗೆ ಪುತ್ರನಾಗಿ ಸುಮಾರು ಕ್ರಿಸ್ತಾಬ್ಧ 1017ರಲ್ಲಿ ಚೈತ್ರ ಶುಕ್ಲ ಪಂಚಮಿಯ ದಿನ ಜನಿಸಿದರು. ಲಕ್ಷ್ಮಣನೆಂಬ ಹೆಸರಿನಿಂದ ಬೆಳೆದು ಇವರು ಆಗ್ಗೆ ಕಾಂಚಿಯಲ್ಲಿ ಅದ್ವೈತಸಿದ್ಧಾಂತವನ್ನು ಬೋಧಿಸುತ್ತಿದ್ದ ಯಾದವಪ್ರಕಾಶನೆಂಬಾತನಲ್ಲಿ ಉಪನಿಷತ್ತುಗಳನ್ನು ಕಲಿಯುತ್ತಿದ್ದರು. ಆತನು ಹೇಳಿದ ಕೆಲವು ಶ್ರುತ್ಯರ್ಥಗಳು ತಮಗೆ ಸರಿಬೀಳದೆ, ತಮಗೆ ತೋರಿದ ಉತ್ತಮವಾದ ಅರ್ಥಗಳನ್ನು ಹೇಳುತ್ತಾ ತಮ್ಮ ಪ್ರತಿಭೆಯನ್ನು ಪ್ರಕಟಿಸಲು, ಆ ಯಾದವಪ್ರಕಾಶನು ಇವರನ್ನು ಕೊಲ್ಲಿಸುವುದಕ್ಕೆ ಮಾಡಿದ ಹಂಚಿಕೆಯನ್ನು ಹೇಗೋ ಊಹಿಸಿ ತಿಳಿದುಕೊಂಡು ಅದರಿಂದ ಪಾರಾಗಿ ಬಂದು ಮತ್ತೆ ಕಾಂಚಿಯಲ್ಲಿ ಸೇರಿ ತಮ್ಮ ಭಗವತ್ಪ್ರೇಮಾತಿಶಯ, ತತ್ತ್ವಾರ್ಥ ನಿರೂಪಣ ಕೌಶಲ್ಯ, ವಿಷಯವೈರಾಗ್ಯ ಇವುಗಳಿಂದ ಪ್ರಸಿದ್ಧರಾಗುತ್ತಾ ಬಂದರು. ಹೀಗಿರಲು ಶ್ರೀರಂಗದಲ್ಲಿದ್ದ ಯಾಮುನಾಚಾರ್ಯರು ತಮ್ಮ ಅವಸಾನಕಾಲದಲ್ಲಿ ಇವರನ್ನು ನೋಡಬೇಕೆಂದು ಹೇಳಿಕಳುಹಿಸಿದಂತೆ ಅಲ್ಲಿಗೆ ಹೋಗಿ, ಅಷ್ಟರಲ್ಲಿಯೆ ಅವರು ದೇಹವನ್ನು ಬಿಟ್ಟದ್ದರಿಂದ, ಅವರು ಪರಿಪೂರ್ತಿಯಾಗದೆ ನಿಂತಿದ್ದ ಮೂರು ಸಂಕಲ್ಪಗಳನ್ನು ಈ ಲಕ್ಷ್ಮಣಾಚಾರ್ಯರಿಂದ ನೆರವೇರಿಸಿಕೊಳ್ಳುವ ಕುತೂಹಲವುಳ್ಳವರಾಗಿದ್ದರೆಂಬದನ್ನು ಅವರ ಶಿಷ್ಯರಿಂದ ತಿಳಿದು, ಅವು ಮೂರನ್ನೂ ನಡೆಸುವುದಾಗಿ ವಾಗ್ದಾನ ಮಾಡಿ ಕಂಚಿಯ ವರದರಾಜಸ್ವಾಮಿಯ ಅಪ್ಪಣೆಯಂತೆ ಮಹಾಪೂರ್ಣರಿಂದಲೂ ಉಳಿದ ಯಾಮುನಾರ್ಯರ ಶಿಷ್ಯರಿಂದಲೂ ಶ್ರೀ ವೈಷ್ಣವ ಮತದ ತತ್ತ್ವಗಳನ್ನು ತಿಳಿದು ಆ ಆಚಾರ್ಯರ ಮನೋಭಾವಕ್ಕೆ ಸರಿಯಾಗಿ ಗದ್ಯತ್ರಯವನ್ನು ರಚಿಸಿದರು. ಇಷ್ಟು ಹೊತ್ತಿಗೆ ಇವರು ಯಾಮುನಾರ್ಯರ ಪೀಠದಲ್ಲಿ ಪಟ್ಟವಾಗಿದ್ದರಲ್ಲದೆ, ತಮ್ಮ ಪತ್ನಿಯ ಕೆಲವು ಕೃತ್ಯಗಳಿಗೆ ಬೇಸತ್ತು ಸನ್ನ್ಯಾಸಾಶ್ರಮವನ್ನು ತೆಗೆದುಕೊಂಡಿದ್ದರು. ಆಮೇಲೆ ಅನೇಕ ಶಿಷ್ಯರಿಂದ ಕೂಡಿದವರಾಗಿ ವೇದಾಂತಸೂತ್ರಕ್ಕೆ ಬೋಧಾಯನವೃತ್ತಿಗೆ ಅನುಸಾರವಾದ ಭಾಷ್ಯವನ್ನು ರಚಿಸಿ ಯಾಮುನಾರ್ಯರ ಮೊದಲನೆಯ

ಕೋರಿಕೆಯನ್ನು ನೆರವೇರಿಸಿದರು. ಆ ಮೇಲೆ ಆಸೇತು ಹಿಮಾಚಲದವರೆಗೆ ಸಂಚರಿಸಿ ಮತಪ್ರಚಾರವನ್ನು ಮಾಡಿ ಶ್ರೀರಂಗಕ್ಕೆ ಬಂದು ತಮ್ಮ ಶಿಷ್ಯರಾದ ಶ್ರೀವತ್ಸಾಂಕರೆಂಬ ಹೆಸರುಳ್ಳ ಕೂರೇಶರಿಗೆ ಇಬ್ಬರು ಮಕ್ಕಳಾಗಲು ಅವರಲ್ಲಿ ಒಬ್ಬರಿಗೆ ಪರಾಶರರೆಂದೂ ಇನ್ನೊಬ್ಬರಿಗೆ ವ್ಯಾಸರೆಂದೂ ಹೆಸರಿಟ್ಟುದಲ್ಲದೆ ತಮ್ಮ ಶಿಷ್ಯರಾದ ಗೋವಿಂದಪ್ಪೆರುಮಾಳರ ತಮ್ಮ ಕಿರಿಯ ಗೋವಿಂದಪ್ಪೆರುಮಾಳರಿಗೆ ಗಂಡು ಸಂತಾನವಾಗಲಾಗಿ ಆ ಕೂಸಿಗೆ ನಮ್ಮಾಳ್ವಾರವರು ಎಂಬ ಹೆಸರನ್ನಿಟ್ಟರು. ಸಿದ್ಧಾಂತಕ್ಕೆ ಪ್ರವರ್ತಕರಾದ ವ್ಯಾಸಪರಾಶರರ ಹೆಸರನ್ನು ಪ್ರಕಟಿಸುವುದೂ, ನಮ್ಮಾಳ್ವರವರ ಹೆಸರನ್ನು ಊರ್ಜಿತಗೊಳಿಸುವುದೂ, ಈ ಕಾರ್ಯದಿಂದ ನೆರವೇರಿತು ಹೀಗೆ ಯಾಮುನಾರ್ಯರ ಎಲ್ಲಾ ಸಂಕಲ್ಪಗಳನ್ನೂ ಈಡೇರಿಸಿ, ಇಷ್ಟರಲ್ಲಿ ಸತ್ಯೇಂದ್ರಚೋಳನೆಂದು ಶೈವರಲ್ಲಿಯೂ ಕ್ರಿಮಿಕಂಠಚೋಳನೆಂದು ವೈಷ್ಣವರಲ್ಲಿಯೂ ಹೆಸರುಗೊಂಡಿದ್ದ ಚೋಳರಾಜನು ಪಡಿಸಿದ ತೊಂದರೆಯಿಂದ ಆ ದೇಶವನ್ನು ಬಿಟ್ಟು ಮೈಸೂರುಸೀಮೆಗೆ ಬಂದು ಆಗ ರಾಜನಾಗಿದ್ದ ಬಿಟ್ಟಿದೇವನನ್ನು ಜೈನಧರ್ಮದಿಂದ ತಿರುಗಿಸಿ ವಿಷ್ಣುವರ್ಧನನೆಂದು ಹೆಸರಿಟ್ಟು ಆತನ ಸಹಾಯದಿಂದ ಮೇಲುಕೋಟೆಯ ದೇವಾಲಯವನ್ನು ಜೀರ್ಣೋದ್ಧಾರಮಾಡಿ ನಿತ್ಯಪೂಜಾದಿಗಳಿಗೆ ಏರ್ಪಡಿಸಿದರು. ಹೀಗೆ ಹನ್ನೆರಡು ವರ್ಷಗಳು ಕಳೆದು ಚೋಳನು ತೀರಿಕೊಂಡನೆಂದು ತಿಳಿದು ಆ ದೇಶಕ್ಕೆ ಹಿಂತಿರುಗಿದರು. ಆಮೇಲೆ ಚಿದಂಬರದಿಂದ ವಿಷ್ಣುವಿಗ್ರಹವನ್ನು ತಂದು ಗೋವಿಂದರಾಜಪುರದಲ್ಲಿ ಪ್ರತಿಷ್ಠೆಮಾಡಿ, ಆಳ್ವಾರುಗಳೆಂಬ ದಿವ್ಯಸೂರಿಗಳಿರುತ್ತಿದ್ದ ದಿವ್ಯದೇಶಗಳನ್ನೆಲ್ಲ ಸೇವಿಸಿಕೊಂಡು ಬಂದರು. ಹೀಗೆ ತಾವು ಉಜ್ಜೀವನಗೊಳಿಸಿದ ಶ್ರೀವೈಷ್ಣವಮತವು ಉಚ್ಛ್ರಾಯಸ್ಥಿತಿಯಲ್ಲಿರಲು, ಶ್ರೀವತ್ಸಾಂಕರ ಕುಮಾರರಾದ ಪರಾಶರಭಟ್ಟರನ್ನು ತಮ್ಮ ಪೀಠಕ್ಕೆ ನಿಯಮಿಸಿ, ತಮ್ಮ ವಿಗ್ರಹವೊಂದನ್ನು ಶ್ರೀಪೆರುಂಬುದೂರಲ್ಲಿ ಪ್ರತಿಷ್ಠೆಮಾಡಿ ಅದರಲ್ಲಿ ತಮ್ಮ ಶಕ್ತಿಯನ್ನು ಇಟ್ಟು, ಶಿಷ್ಯರಿಗೆ ಕೊನೆಯ ಉಪದೇಶಗಳನ್ನು ಮಾಡಿ, ತಮ್ಮ 120ನೆಯ ವರ್ಷದಲ್ಲಿ ಕೀರ್ತಿಶೇಷರಾದರು. ಈ ದಿವ್ಯ ಚರಿತ್ರವು ಪ್ರಪನ್ನಾಮೃತವೇ ಮುಂತಾದ ಗ್ರಂಥಗಳಲ್ಲಿ ವಿಸ್ತಾರವಾಗಿ ವರ್ಣಿತವಾಗಿರುವದು.

ಇವರ ಜೀವಿಕೆಯಲ್ಲಿ ಕಂಡುಬರುವ ವಿಶೇಷಗಳೇನೆಂದರೆ, ಯುಗಾಂತರದಲ್ಲಿ ಪ್ರಸಿದ್ಧವಾಗಿದ್ದು ಕಲಿಯುಗದಲ್ಲಿ ಖಿಲವಾಗಿ

ದ್ರಾವಿಡಭಾಷೆಯಲ್ಲಿ ಮಟ್ಟಿಗೆ ಉಳಿದುಕೊಂಡಿದ್ದ ಶ್ರೀವೈಷ್ಣವ ಮತ್ತು ನಾಥಯಾಮುನಾದಿ ಮುನಿಗಳ ಗ್ರಂಥದ ಆಧಾರದಿಂದ ಉಜ್ಜೀವನಗೊಳಿಸಿದ ಶಕ್ತಿ ಮತ್ತು ಸೌಗತಮತದ ತತ್ತ್ವಗಳಿಂದ ಮಿಶ್ರಿತವಾಗಿರುವ ಅದ್ವೈತ ಬೋಧನೆಯಿಂದ ಜನರು ಮೋಸಹೋಗುತ್ತಿರುವರೆಂಬುದನ್ನು ಅರಿತಕೂಡಲೆ ತಮಗೆ ಆಗಬಹುದಾದ ಅಪಾಯವನ್ನೂ ಲೆಕ್ಕಿಸದೆ ಸಿದ್ಧಾಂತವನ್ನು ಪ್ರತಿಪಾದಿಸಿದ ಧೈರ್ಯ, ತಮ್ಮ ಗುರುವಿನಿಂದ ಉಪದಿಷ್ಟವಾದ ಮಂತ್ರರಹಸ್ಯವನ್ನು ಎಲ್ಲರಿಗೂ ಸಿಕ್ಕುವಂತೆ – ಗುರ್ವಾಜ್ಞೆಯನ್ನು ಮೀರಿದ ಪಾಪವು ತಮಗೆ ಬಂದರೂ ಬರಲಿ, ಮಿಕ್ಕವರಿಗೆ ಸದ್ಗತಿ ದೊರೆತರೆ ಸಾಕೆಂದು – ಎತ್ತರವಾದೆಡೆಯಲ್ಲಿ ನಿಂತು ಗಟ್ಟಿಯಾಗಿ ಕೂಗಿ ಉಪದೇಶಿಸಿದ ಅಸಾಧಾರಣವಾದ ಔದಾರ್ಯ, ಮತ್ತು ಮೇಲುಕೋಟೆಯ ಜೀರ್ಣೋದ್ಧಾರದಲ್ಲಿ ತಮ್ಮಗೆ ಸಹಾಯ ಮಾಡಿದ ಹೊಲೆಯರಿಗೆ ಶ್ರೀರಂಗ, ಬೇಲೂರು ಮತ್ತು ಮೇಲುಕೋಟೆ – ಈ ದೇವಾಲಯಗಳಲ್ಲಿ ಧ್ವಜಸ್ತಂಭದವರೆಗೂ ಒಳಕ್ಕೆ ಸೇರಿಸಲು ಅವಕಾಶ ಕೊಟ್ಟ ಕೃತಜ್ಞತಾಯುಕ್ತವಾದ ಸಂಘಸಂಸ್ಕರಣ ಚಾತುರ್ಯ, ಶ್ರೀಭಾಷ್ಯ, ದ್ರಮಿಡೋಪನಿಷತ್ತು – ಇವುಗಳ ಪಠನಪಾಠನ, ಮಂತ್ರಾನುಸಂಧಾನ, ಕ್ಷೇತ್ರವಾಸ, ದೊಡ್ಡವರ ಊಳಿಗ, ಇಷ್ಟರಲ್ಲಿ ತನ್ನ ಕೈಯಲ್ಲಾದುದನ್ನು ಮಾಡಬಹುದೆಂದು ಅಧಿಕಾರ ಭೇದವನ್ನು ಇಟ್ಟುಕೊಂಡು ತತ್ತ್ವಪ್ರಸಾರ ಮಾಡಿದ ಕ್ರಮ.

ಹಿಂದೆ ಹೇಳಿದಂತೆ ಈ ಮಹಾತ್ಮರು ಮಹಾಪೂರ್ಣರೇ ಮೊದಲಾದ ಐದು ಜನರನ್ನು ತಮಗೆ ತತ್ತ್ವೋಪದೇಶ ಮಾಡಿದ ಆಚಾರ್ಯರನ್ನಾಗಿ ಅಂಗೀಕರಿಸಿದ್ದಲ್ಲದೆ, ಶ್ರೀಕಾಂಚೀಪೂರ್ಣರನ್ನು ಶ್ರೀ ವರದರಾಜಸ್ವಾಮೀಜಿಯ ವಾರ್ತಾಷಟ್ಕವನ್ನು ತಮಗೆ ತಿಳಿಸಿದ ಉಪಕಾರಕರೆಂದು ಸ್ವೀಕರಿಸಿದ್ದರು. ವಾರ್ತಾಷಟ್ಕವೆಂದರೆ –

**ವೃ॥ ಪರಂ ತತ್ತ್ವಂ ಸೋಽಹಂ ಪ್ರಪದನಮುಪಾಯೋಽನ್ತಿಮ**
**ದಶಾಸ್ಮೃತೇರ್ನೈವಾಪೇಕ್ಷಾ ವಪುರಪಗಮೇ ಮೋಕ್ಷಗಮನಮ್ ।**
**ವಿಶಿಷ್ಟಾದ್ವೈತಂ ಸ್ವಂ ಮತಮಪಿ ಮಹಾಪೂರ್ಣಭಜನಂ**
**ಷಡಪ್ಯರ್ಥಾನೇತಾನುಪನಿಷದಿವಾಹೌಪನಿಷದಃ ॥**

'ನಾನೇ ಪರಮತತ್ತ್ವವು, ಪ್ರಪತ್ತಿಯೇ ಸಾಧನವು, ಕೊನೆಗಾಲದಲ್ಲಿ ಸ್ಮರಣೆ ಇರಬೇಕೆಂಬ ನಿಯಮವಿಲ್ಲ, ಶರೀರವು ಬಿದ್ದುಹೋದಮೇಲೆ ಮೋಕ್ಷ, ವಿಶಿಷ್ಟಾದ್ವೈತವೇ ನನ್ನ ಅಭಿಪ್ರಾಯವು, ಮಹಾಪೂರ್ಣರನ್ನು ಭಜಿಸಬೇಕು' ಎಂಬ ಆರು ವಿಷಯಗಳು. ಮುಂದೆ ರಾಮಾನುಜಾಚಾರ್ಯರು ಮಾಡಿದ ನಡವಳಿಕೆಗಳಿಗೂ ಬರೆದ ಸಿದ್ಧಾಂತಕ್ಕೂ ಇದೇ ಮೂಲಾಧಾರವಾಗಿತ್ತು. **ವೇದಾಂತಸಾರ, ವೇದಾಂತದೀಪ, ವೇದಾರ್ಥಸಂಗ್ರಹ, ಶ್ರೀಭಾಷ್ಯ, ಶ್ರೀರಂಗಗದ್ಯ, ಶ್ರೀವೈಕುಂಠಗದ್ಯ, ಶರಣಾಗತಿಗದ್ಯ, ಗೀತಾಭಾಷ್ಯ**- ಈ ಒಂಭತ್ತು ಗ್ರಂಥಗಳಲ್ಲಿ ಇವರ ಬೋಧೆಯು ಅಡಕವಾಗಿದೆ. ಚೇತನಾ ಚೇತನಗಳೆಲ್ಲವುಗಳಿಂದಲೂ ವಿಶಿಷ್ಟವಾಗಿರುವ ಬ್ರಹ್ಮವೊಂದೇ ತತ್ತ್ವವು ಎಂದು ಪ್ರತಿಪಾದಿಸುವದರಿಂದಲೂ ''ಸೂಕ್ಷ್ಮಚಿದಚಿತ್ತುಗಳಿಂದ ವಿಶಿಷ್ಟವೂ ಸ್ಥೂಲಚಿದ ವಿಶಿಷ್ಟವೂ ಆದ ಬ್ರಹ್ಮಗಳೆರಡೂ ಒಂದೇ ಎಂದು ಬೋಧಿಸುವದರಿಂದಲೂ ಇವರ ಸಿದ್ಧಾಂತಕ್ಕೆ ವಿಶಿಷ್ಟಾದ್ವೈತವೆಂದು'' ಹೆಸರು. ಬ್ರಹ್ಮ, ಜೀವರು, ಜಡವಸ್ತುಗಳು- ಈ ಮೂರರಲ್ಲಿ ಬ್ರಹ್ಮಕ್ಕೂ, ಮಿಕ್ಕವುಗಳಿಗೂ ಇರುವ ಭೇದವನ್ನು ಹೇಳುವ ವಾಕ್ಯಗಳು ಅಭೇದವನ್ನು ಹೇಳುವ ವಾಕ್ಯಗಳು, ಸಂಬಂಧವನ್ನು ಹೇಳುವ ವಾಕ್ಯಗಳು - ಎಂಬ ಮೂರು ಬಗೆಯ ವಾಕ್ಯಗಳಿಗೂ ಶರೀರಶರೀರಿನ್ಯಾಯದಿಂದ ಮುಖ್ಯಾರ್ಥವನ್ನೇ ಒಪ್ಪಿಕೊಂಡಿರುವದು ಇದೊಂದೇ ಸಿದ್ಧಾಂತದಲ್ಲಿ ದ್ವೈತದಲ್ಲಿಯೂ ಅದ್ವೈತದಲ್ಲಿಯೂ ತಮ್ಮ ತಮ್ಮ ಸಿದ್ಧಾಂತಕ್ಕೆ ಅನುಗುಣವಾದಷ್ಟು ವಾಕ್ಯಗಳಿಗೆ ಮಟ್ಟಿಗೆ ಮುಖ್ಯಾರ್ಥವನ್ನು ಹೇಳಿರುತ್ತದೆ. ಶ್ರುತ್ಯರ್ಥವನ್ನು ನಿರ್ಣಯಿಸುವ ಬ್ರಹ್ಮಸೂತ್ರಗಳಿಗೂ ಆರ್ಷವಾದ ಬೋಧಾಯನವೃತ್ತಿಯನ್ನನುಸರಿಸಿ ಶ್ರೀಭಾಷ್ಯವು ಏರ್ಪಟ್ಟಿರುವದು ಅದಕ್ಕೊಂದು ಭೂಷಣವಾಗಿರುವದು. ಆದ್ದರಿಂದಲೇ ಈಗಿನ ಪಾಶ್ಚಾತ್ಯ ವಿದ್ವಾಂಸರೂ ರಾಮಾನುಜೀಯಭಾಷ್ಯವೇ ಸೂತ್ರಾನುಸಾರಿಯೆಂದಭಿಪ್ರಾಯ ಪಟ್ಟಿರುವರು. ಈ ರೀತಿಯಲ್ಲಿ ಮಹಾಕಾರ್ಯಗಳಿಂದ ಕೂಡಿದ ಜೀವನಚರಿತ್ರದಿಂದಲೂ ಜ್ಞಾನಕರ್ಮಗಳು ಭಕ್ತಿಗೆ ಮೂಲವು, ಅದರಿಂದಲೇ ಮುಕ್ತಿಯು ಎಂಬ ಆರ್ಷಮತವನ್ನು ಹೊರಪಡಿಸುವ ಸಿದ್ಧಾಂತಪ್ರಕಟನದಿಂದಲೂ ಈ ಆಚಾರ್ಯರವರು ಅನಿತರಸಾಧಾರಣವಾದ ಪೂಜ್ಯತೆಯನ್ನು ಹೊಂದಿ ಅನುಯಾಯಿಗಳಿಂದ ಪಂಚಾಯುಧಾವತಾರವೆಂದೂ ವಿಷ್ವಕ್ಸೇನಾವತಾರವೆಂದೂ ಶೇಷಾವತಾರವೆಂದೂ ಸಂಭಾವಿಸಲ್ಪಟ್ಟಿರುವದು ಏನಾಶ್ಚರ್ಯ?

★★★★★

# ಶ್ರೀ ಸದಾಶಿವೇಂದ್ರಸರಸ್ವತಿಗಳು

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಕಾವೇರೀತೀರದ ಚೋಲಮಂಡಲದಲ್ಲಿ ಕರೂರೆಂಬ ಗ್ರಾಮದಲ್ಲಿ ಅವತರಿಸಿದ ಶ್ರೀಸದಾಶಿವೇಂದ್ರ ಸರಸ್ವತಿಗಳು ದಕ್ಷಿಣದೇಶದಲ್ಲೆಲ್ಲ ತಮ್ಮ ಕೀರ್ತಿಶರೀರವನ್ನಿಟ್ಟಿದ್ದರು. ಶ್ರೀಶೃಂಗೇರಿಯ ಹಿಂದಿನ ಜಗದ್ಗುರುಗಳಾಗಿದ್ದು ಬ್ರಹ್ಮೀಭೂತರಾಗಿರುವ ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀಸ್ವಾಮಿಗಳವರು ಬರೆದಿರುವ '**ಸದಾಶಿವೇಂದ್ರಸ್ತುತಿ**', '**ಸದಾಶಿವಪಂಚರತ್ನ**' – ಇವುಗಳಿಂದ ಕರ್ಣಾಟಕದಲ್ಲಿಯೂ ಆ ಕೀರ್ತಿಯ ಪ್ರಭೆಯು ಹರಡಿರುತ್ತದೆ.

ಸದಾಶಿವೇಂದ್ರಸ್ತುತಿಯಲ್ಲಿ ಶ್ರೀಸ್ವಾಮಿಗಳವರು ಬರೆದಿರುವ ಒಂದು ಶ್ಲೋಕವು ಈ ಮಹಾತ್ಮರ ಜೀವನದ ವಿಶೇಷವನ್ನು ತಿಳಿಸಿಕೊಡುವಂತಿದೆ:

**ಶಬ್ದಾರ್ಥವಿಜ್ಞಾನಯುತಾ ಹಿ ಲೋಕೇ ಲೋಕಾ ಬಹವಃ ಪ್ರಕಾಮಮ್ ।**
**ನಿಷ್ಠಾಯುತಾ ನ ಶ್ರುತದೃಷ್ಟಪೂರ್ವಾ ವಿನಾ ಭವನ್ತಂ ಯತಿರಾಜ ನೂನಮ್ ॥**

ಶ್ರೀಸದಾಶಿವೇಂದ್ರರು ಬರಿಯ ಮಾತಿಗೆ ಮರುಳಾಗುವವರಲ್ಲ; ಅವರಿಗೆ ಯಾವ ಯೋಚನೆಯು ಹೊಳೆದರೂ ಅದರ ಅನುಷ್ಠಾನಕ್ಕೆ ನಿಶ್ಚಯಮಾಡಿಬಿಡುತ್ತಿದ್ದರು.

ಇವರಿಗೆ ಚಿಕ್ಕಂದಿನಲ್ಲಿಯೇ ಮದುವೆಯಾಗಿತ್ತು. ತಿರುವಿತನಲ್ಲೂರಿನಲ್ಲಿ ವಿದ್ಯಾಭ್ಯಾಸಮಾಡುತ್ತಿದ್ದ ಇವರನ್ನು ಮನೆಯವರು ನಿರ್ಬಂಧದಿಂದ ಮನೆಗೆ ಕರೆದುಕೊಂಡು ಬಂದು ಗೃಹಸ್ಥಧರ್ಮವನ್ನು ಪ್ರಾರಂಭಿಸುವಂತೆ ಮಾಡಿದರು. ಆದರೆ ನಿಷೇಕಪ್ರಸ್ತಕ್ಕೆಂದು ದೊಡ್ಡವರು ಗೊತ್ತುಮಾಡಿದ್ದ ದಿನವೇ ಇವರಿಗೆ ಸಂನ್ಯಾಸದ ಚಿಂತೆಯನ್ನು ಮನಸ್ಸಿಗೆ ಹತ್ತಿಸಿಕೊಳ್ಳುವ ಸುಮುಹೂರ್ತವಾಯಿತು '**ಯದಹರೇವ ವಿರಜೇತ್ ತದಹರೇವ ಪ್ರವ್ರಜೇತ್**' (ಯಾವ ದಿನದಲ್ಲಿ ವಿರಕ್ತಿಯಾಗುವದೋ ಅಂದೇ ಮನೆಯಿಂದ ಹೊರಟು ಸಂನ್ಯಾಸವನ್ನು ಸ್ವೀಕರಿಸಬೇಕು) – ಎಂಬ ಶ್ರುತಿವಚನವನ್ನು ಈ ಮಹಾತ್ಮರು ಅಕ್ಷರಶಃ ಪಾಲಿಸಿದರು.

ಇವರು ಗುರುಕುಲದಲ್ಲಿ ಯೋಗಶಾಸ್ತ್ರವನ್ನು ಓದಿರಬಹುದು; ಆದರೆ ಓದಿದ ಯೋಗಶಾಸ್ತ್ರವನ್ನು ಅನುಷ್ಠಾನಕ್ಕೂ ತಂದುಕೊಳ್ಳಬೇಕೆಂಬ ಹಂಬಲು ಎಷ್ಟು ಜನರಿಗೆ ಬಂದೀತು? ತಮಗೆ ಆ ವಿದ್ಯೆಯನ್ನು ಪದೇಶಿಸಬಲ್ಲ ಗುರುವೊಬ್ಬನು ದೊರೆಯುವವರೆಗೂ ನಿಂತಲ್ಲಿ ನಿಲ್ಲದೆ ಇವರು ಸಂಚರಿಸಿದರು. ಕೊನೆಗೆ ಯೋಗಿ ರಾಜ ಪರಮಶಿವೇಂದ್ರರ ಪಾದಕಮಲವನ್ನು ಸೇರಿ ಕೆಲವು ವರ್ಷಗಳಲ್ಲಿ ಯೋಗ ನಿಷ್ಣಾತರಾದರು.

ಪರಮಶಿವೇಂದ್ರರ ದರ್ಶನಕ್ಕೆಂದು ಬರುತ್ತಿದ್ದ ದೊಡ್ಡದೊಡ್ಡ ವಿದ್ವಾಂಸರೊಡನೆ ಇವರು ಶಾಸ್ತ್ರಾರ್ಥವಿಚಾರವನ್ನು ಮಾಡುತ್ತಾ ಎಲ್ಲರ ಚಿತ್ತವನ್ನೂ ಆಕರ್ಷಣೆಮಾಡುತ್ತಿದ್ದರು. ಆದರೆ ಇವರ ಪ್ರತಿಭೆಯನ್ನು ನೋಡಿ ಸಹಿಸಲಾರದ ಯಾರೋ ಕೆಲವರು ಪಂಡಿತರು ''ಈತನು ಬಂದಬಂದವರನ್ನೆಲ್ಲ ಕಾಲುಕೆರೆದು ವ್ಯಾಖ್ಯಾರ್ಥಕ್ಕೆ ಕರೆಯುತ್ತಾನೆ'' ಎಂದು ಗುರುಗಳಲ್ಲಿ ದೂರುಹೇಳಿಕೊಂಡರು. ಅವರು ತಮ್ಮ ಪ್ರಿಯಶಿಷ್ಯನಲ್ಲಿ ಶಾಸ್ತ್ರಗರ್ವವು ಇರುವದು ಸರಿಯಲ್ಲವೆಂದು ಯೋಚಿಸಿ ಸದಾಶಿವೇಂದ್ರರನ್ನು ಹತ್ತಿರಕ್ಕೆ ಕರೆದು ''ಅಪ್ಪ ಯೋಗವನ್ನು ಕಲಿಯುವದು ಜೀವನದಲ್ಲಿ ಅದನ್ನುಪಯೋಗಿಸುವದಕ್ಕಲ್ಲವೆ? ನೀನು ನಿರಂಕುಶವಾದ ನಾಲಗೆಯನ್ನು ಹಿಡಿತದಲ್ಲಿಟ್ಟುಕೊಳ್ಳುವದು ಯಾವಾಗ?'' ಎಂದು ಕೇಳಲು ಈ ಸಂಯಮಿಶ್ರೇಷ್ಠರು ''ಗುರುವೆ, ಇಗೋ ಇಂದಿನಿಂದಲೇ ಪ್ರಾರಂಭಿಸುವೆನು; ತಮ್ಮ ಚರಣದಾಣೆಯಾಗಿಯೂ ನಾನು ಮರಣಾಂತವೂ ಮೌನದಲ್ಲಿರುವೆನೆಂದು ಸಂಕಲ್ಪಿಸಿರುತ್ತೇನೆ'' ಎಂದು ನಮಸ್ಕರಿಸಿದರು. ಎಂಥ ಭೀಷ್ಮಪ್ರತಿಜ್ಞೆಯಿದು!

ಗುರುಗಳ ಅಪ್ಪಣೆಯನ್ನು ಪಡೆದು ಅಲ್ಲಲ್ಲಿ ಮೌನದಿಂದ ಸಂಚರಿಸುತ್ತಿದ್ದ ಶ್ರೀಸದಾಶಿವೇಂದ್ರರ ನಿಜವಾದ ಯೋಗ್ಯತೆಯನ್ನು ಜನರು ತಿಳಿಯದಾದರು. ಹುಡುಗರು ಅವರ ಹಿಂದೆ ಓಡಿಬರುವದು, ಮೈಮೇಲಿನ ಬಟ್ಟೆಯನ್ನು ಎಳೆಯುವದು, ಅವರನ್ನು ಅಣಕಿಸುವದು – ಹೀಗೆಲ್ಲ ಪೀಡಿಸುತ್ತಿದ್ದರು. ಆದರೆ ಇದೊಂದೂ ಇವರ ಮೌನಕ್ಕಾಗಲಿ ಶಾಂತಿಗಾಗಲಿ ಭಂಗವನ್ನು ತರಲಿಲ್ಲ. ಆಗಿನ ಇವರ ಸ್ಥಿತಿಯನ್ನು '**ಸದಾಶಿವಪಂಚರತ್ನ**'ದಲ್ಲಿ ಹೀಗೆಂದು ವರ್ಣಿಸಿದೆ:

**ಉನ಼್ತ್ತವತ್ಸಞ್ಚರತೀಹ ಶಿಷ್ಯಸ್ತವೇತಿ ಲೋಕಸ್ಯ ವಚಾಂಸಿ ಶೃಣ್ವನ್ ।**
**ಖಿದ್ಯನ್ನುವಾಚಾಸ್ಯ ಗುರುಃ ಪುರಾಹೋ ಹ್ಯುನ್ಮತ್ತತಾ ಮೇ ನ ಹಿ ತಾದೃಶೀತಿ ॥**

'ತಮ್ಮ ಶಿಷ್ಯನು ಹುಚ್ಚನಂತೆ ತಿರುಗುತ್ತಿದಾನೆ' ಎಂದು ಜನರು ಹೇಳಿದ ಮಾತನ್ನು ಕೇಳಿದ ಇವರ ಗುರುಗಳು 'ಅಯ್ಯೋ! ನನಗೆ ಅಂಥ ಹುಚ್ಚು ಹಿಡಿಯಲಿಲ್ಲವಲ್ಲ!' ಎಂದು ನಿಟ್ಟುಸಿರುಬಿಟ್ಟರು.

ಈ ಯೋಗಿವರ್ಯರ ಜೀವನಚರಿತ್ರೆಯಲ್ಲಿ ಅನೇಕ ಅದ್ಭುತಘಟನೆಗಳು ನಡೆದವೆಂದು ಕಥೆಗಳಿವೆ. ಒಮ್ಮೆ ಇವರು ಕೋಡಿಮಡಿಯೆಂಬಲ್ಲಿ ಒಂದು ದಿಣ್ಣೆಯ ಮೇಲೆ ಮಲಗಿರಲು ಕಾವೇರಿಯ ಪ್ರವಾಹವು ನುಗ್ಗಿ ಇವರ ಮೇಲೆ ಮಣ್ಣುಮುಚ್ಚಿಕೊಂಡುಬಿಟ್ಟಿತಂತೆ; ಮೂರು ತಿಂಗಳ ಮೇಲೆ ಹೊಳೆಯಿಳಿಯಲು ಗದ್ದೆಯವರು ನೆಲವನ್ನು ಸಮಮಾಡುತ್ತಿದ್ದಾಗ ಗುದ್ದಲಿಗೆ ಇವರ ಶರೀರವು ಸಿಕ್ಕು ಆಮೇಲೆ ಅವರು ಅದನ್ನು ಹೊರಕ್ಕೆ ತೆಗೆಯಲು ನಿದ್ರೆಯಿಂದೆಚ್ಚೆತ್ತವರಂತೆ ತಟ್ಟನೆ ಎದ್ದು ಹೊರಟುಹೋದರಂತೆ! ಒಂದು ದಿನ ರಾತ್ರಿ ಕರೂರಿನ ಒಂದು ಹೊಲದ ಕಣದಲ್ಲಿ ರಾಶಿಹಾಕಿದ್ದ ಧಾನ್ಯದ ಹತ್ತಿರ ಇವರು ಬಂದು ಮಲಗಿಕೊಂಡಿರಲು ಕಾವಲುಗಾರರು ಇವನು ಯಾವನೋ ಕಳ್ಳನೆಂದು ತಿಳಿದು ಇವರನ್ನು ಹೊಡೆದೆಬ್ಬಿಸುವದಕ್ಕೆ ದೊಣ್ಣೆಯನ್ನೆತ್ತಲು ಅವರು ಕೈಕಾಲುಗಳನ್ನು ಅಲುಗಾಡಿಸುವದಕ್ಕೆ ಕೂಡ ಆಗದೆ ಬೆಳಕು ಹರಿಯುವವರೆಗೂ ಚಿತ್ರಪ್ರತಿಮೆಗಳಂತೆ ನಿಂತಿರಬೇಕಾಯಿತಂತೆ! ಮತ್ತೊಂದು ಸಲ ಕರೂರಿನ ಇಬ್ಬರುಮೂವರು ಹುಡುಗರನ್ನು ತಮ್ಮ ಯೋಗಮಹಿಮೆಯಿಂದ ಒಂದು ರಾತ್ರಿಯಲ್ಲಿಯೇ ಮಧುರೆಗೊಯ್ದು ಅಲ್ಲಿ ನಡೆಯುತ್ತಿದ್ದ ವೃಷಭವಾಹನದ ಉತ್ಸವವನ್ನು ತೋರಿಸಿ ಅವರೆಲ್ಲರಿಗೂ ಪ್ರಸಾದವನ್ನು ಕೊಡಿಸಿ ಬೆಳಗಾಗುವದರೊಳಗಾಗಿ ಊರಿಗೆ ತಲುಪಿಸಿದರಂತೆ!

ಒಂದು ಸಲ ಒಬ್ಬ ಮುಸಲ್ಮಾನ ಜಮೀನುದಾರನ ಅಂತಃಪುರದ ಸಮೀಪದಲ್ಲಿ ಅಪ್ಪಣೆಯಿಲ್ಲದೆ ಬಂದರೆಂಬ ಕ್ರೋಧದಿಂದ ಅವನು ಕತ್ತಿಯನ್ನು ಬೀಸಲು ಇವರ ಕೈಬೆರಳು ಕತ್ತರಿಸಿಹೋಯಿತು. ಆದರೆ ಈ ಯೋಗೀಂದ್ರರು ಮಾತ್ರ ಯಾವ ವಿಕಾರವೂ ಇಲ್ಲದೆ ಅಲ್ಲಿಂದ ಹೊರಟುಹೋದರು. ಆಗ ಇವರು ಯಾರೋ ಮಹಾತ್ಮರಾಗಿರಬೇಕೆಂದು ಆ ಮುಸಲ್ಮಾನನು ಇವರ ಹಿಂದೆಯೇ ಓಡಿಬಂದು ಅಡ್ಡಬಿದ್ದು ತನ್ನ ಅಪರಾಧವನ್ನು ಮನ್ನಿಸಬೇಕೆಂದು ಬೇಡಿಕೊಂಡನಂತೆ

ಆಗಲೂ ಮನಸ್ಸಿನಲ್ಲಿ ಯಾವ ಏರುಪೇರೂ ಇಲ್ಲದೆ ಇವರು ಅವನಿಗೂ ಅನುಗ್ರಹವನ್ನು ಮಾಡಿದರಂತೆ! ಇಂಥ ತಿತಿಕ್ಷಾಮೂರ್ತಿಗಳು ಇವರು!

ಇವರ ಮೌನಸಂಚಾರದಲ್ಲಿ ಒಮ್ಮೆ ನವಸಾಲದ ಅಧೀಶ್ವರನಾದ ಮಹಾರಾಜವಿಜಯ ರಘುನಾಥಕೊಂಡಮಾನನು ಅತ್ಯಂತಶ್ರದ್ಧೆಯಿಂದ ಇವರನ್ನು ಸೇವೆಮಾಡಿದ್ದರಿಂದ ಪ್ರಸನ್ನರಾಗಿ ಇವರು ಮಳಲಲ್ಲಿ ಕೆಲವು ಉಪದೇಶಾಕ್ಷರಗಳನ್ನು ಬರೆದುಕೊಟ್ಟಂತೆಯೂ ತಮ್ಮ ಸಹಪಾಠಿಗಳಾದ್ದ ಗೋಪಾಲಶಾಸ್ತ್ರಿಗಳಿಂದ ಹೆಚ್ಚಿನ ವಿಷಯಗಳನ್ನು ಅರಿತುಕೊಳ್ಳಬೇಕೆಂದು ಸೂಚಿಸಿದಂತೆಯೂ ಹೇಳುತ್ತಾರೆ. ಆ ಶಾಸ್ತ್ರಿಗಳ ವಂಶದವರೇ ಈಗಲೂ ಅಲ್ಲಿ ರಾಜಗುರುಗಳಾಗಿರುತ್ತಾರೆ; ಆ ರಾಜ್ಯದಲ್ಲಿ ಈಗಲೂ ಇವರ ಉಪದೇಶದಂತೆಯೇ ಶಾರದಾನವರಾತ್ರಿ, ಮಹೋತ್ಸವವೂ ದಕ್ಷಿಣಾಮೂರ್ತಿಪೂಜೆಯೂ ವಿಜೃಂಭಣೆಯಿಂದ ನಡೆಯುತ್ತಿರುವದು. ಇವರು ಉಪದೇಶವನ್ನು ಬರೆದ ಮಳಲನ್ನು ಕೂಡ ಅಲ್ಲಿ ಅತ್ಯಂತ ಭಕ್ತಿಯಿಂದ ಪೂಜಿಸುತ್ತಾರೆ. ಕರೂರಿನಲ್ಲಿರುವ ಇವರ ಸಮಾಧಿಯ ಬಳಿಯಲ್ಲಿಯೂ ಆ ರಾಜರ ಕಡೆಯಿಂದ ಪೂಜೋತ್ಸವಾದಿಗಳು ನಡೆಯುತ್ತಿರುತ್ತವೆ.

ಶ್ರೀಸದಾಶಿವೇಂದ್ರಸರಸ್ವತಿಗಳ ಮನಃಸ್ಥಿತಿಯ ಆಳವನ್ನು ಮನವರಿಕೆ ಮಾಡಿಕೊಳ್ಳಬೇಕೆನ್ನುವವರು ಇವರ **'ಆತ್ಮವಿದ್ಯಾವಿಲಾಸ'**ವೆಂಬ[1] ಪುಟ್ಟ ಪ್ರಕರಣವನ್ನು ಓದಬೇಕು, ಇವರು ಬರೆದಿರುವ ಕೀರ್ತನೆಗಳನ್ನು ಅನುಸಂಧಾನ ಮಾಡಿಕೊಂಡು ಹಾಡಿ ಸುಖಪಡಬೇಕು. ಇವರು ಬ್ರಹ್ಮಸೂತ್ರದ ಮೇಲೆ ಬರೆದಿರುವ 'ಬ್ರಹ್ಮತತ್ತ್ವಪ್ರಕಾಶಿಕಾ', ಯೋಗಸೂತ್ರದ ಮೇಲೆ ಬರೆದಿರುವ 'ಯೋಗಸುಧಾಕರ' ಇವುಗಳಿಂದ ಇವರ ದಾರ್ಶನಿಕವಿದ್ವತ್ತೆಯೂ ವ್ಯಕ್ತವಾಗುತ್ತದೆ. ಇವರು 'ಉಪನಿಷದ್ದೀಪಿಕಾ', 'ಅದ್ವೈತರಸಮಂಜರೀ' 'ಸಿದ್ಧಾಂತಕಲ್ಪವಲ್ಲೀ'- ಮುಂತಾದ ಗ್ರಂಥಗಳನ್ನೂ ರಚಿಸಿರುತ್ತಾರೆ.

★★★★★

---

1. **'ಆತ್ಮವಿದ್ಯಾವಿಲಾಸ'**ವನ್ನು ಮತ್ತು ಶ್ರೀಸಚ್ಚಿದಾನಂದ ಶಿವಾಭಿನವನೃಸಿಂಹಭಾರತೀ ಸ್ವಾಮಿಗಳವರ **ಸದಾಶಿವೇಂದ್ರಸುತ್ತಿ**ಯೊಡನೆ ಕನ್ನಡಿಸಿ ಅಧ್ಯಾತ್ಮಪ್ರಕಾಶಕಾರ್ಯಾಲಯದಲ್ಲಿ ಪ್ರಕಟಿಸಿರುತ್ತದೆ.

# ಶ್ರೀ ಸಮರ್ಥ ರಾಮದಾಸಸ್ವಾಮಿಗಳು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀರಾಮನಿಗೆ ಈ ಜಗತ್ತಿನಲ್ಲಿ ಅನೇಕ ದಾಸರು ಆಗಿಹೋಗಿರುತ್ತಾರೆ. ಆದರೆ ಸಮರ್ಥ ರಾಮದಾಸರೆಂದರೆ ಒಬ್ಬರೇ ಒಬ್ಬರು. ಅವರು ಔರಂಗಾಬಾದ ಜಿಲ್ಲೆಯ ಆಂಬಡ ತಾಲ್ಲೂಕಿನಲ್ಲಿ ಜಾಂಬ ಎಂಬ ಊರಿನಲ್ಲಿ ಶಕೆ 1530ನೆಯ ಚೈತ್ರ ನವಮಿಯ ದಿನ ಉಪಾಸ್ಯದೇವತೆಯಾದ ಶ್ರೀರಾಮಚಂದ್ರನು ಅವತರಿಸಿದ ಮುಹೂರ್ತಕ್ಕೆ ಸರಿಯಾಗಿ ಜನಿಸಿದರು. ಈಗ ಆ ಸ್ಥಳದಲ್ಲಿ ಅವರ ಜನ್ಮದ ಸ್ಮಾರಕವಾಗಿ ಬೃಹನ್ಮಹಾರಾಷ್ಟ್ರವು ಅವರ ಒಂದು ಸುಂದರವಿಗ್ರಹವನ್ನು ಸ್ಥಾಪಿಸಿರುತ್ತದೆ. ಇಡಿಯ ಮಹಾರಾಷ್ಟ್ರಕ್ಕೇ ಶ್ರೀರಾಮಸ್ಮರಣೆಯನ್ನು ತಂದುಕೊಟ್ಟು ಇಹಪರಸೌಖ್ಯಕ್ಕೆ ದಾರಿಯನ್ನು ತೋರಿಸಿಕೊಟ್ಟ ಆ ಮಹಾತ್ಮರನ್ನು ಇಂದಿಗೂ 'ಸಮರ್ಥ'ರೆಂದೇ ಆ ದೇಶದವರು ಕರೆಯುತ್ತಿದಾರೆ.

ಬಾಲ್ಯದಲ್ಲಿ ಸಮರ್ಥರಿಗೆ ನಾರಾಯಣನೆಂಬ ಹೆಸರಿತ್ತು. ಅವರಿಗೆ ಇನ್ನೂ ಹನ್ನೊಂದು ವರ್ಷವಾಗಿರುವಾಗಲೇ ಅವರ ತಂದೆಯಾದ ಸೂರ್ಯಾಜಿಪಂತರು ದೈವಾಧೀನರಾಗಿದ್ದರು. ಒಂದು ದಿನ ತಾಯಿ ರಾಣುಬಾಯಿಯು ''ಅಪ್ಪ''ನಾರಾಯಣ. ನಿಮ್ಮ ಅಣ್ಣ ಗಂಗಾಧರನ ಮೇಲೆ ಹನ್ನೆರಡು ಗ್ರಾಮಗಳ ಕುಲಕರ್ಣಿಯ ಕೆಲಸದ ಭಾರವು ಬಿದ್ದಿದೆ. ನೀನು ಪ್ರಪಂಚದ ಯೋಚನೆಯೇ ಇಲ್ಲದೆ ಇದ್ದೀಯಲ್ಲ!'' ಎಂದಳಂತೆ. ದುಃಖಿತೆಯಾದ ತಾಯಿಯು ಲೋಕ ಸಾಧಾರಣವಾಗಿ ಆಡಿಕೊಂಡ ಈ ಮಾತುಗಳು ಚಿಕ್ಕಹುಡುಗನ ಮನಸ್ಸಿನಲ್ಲಿ ಪ್ರತಿಬಿಂಬಿಸಿದವು. ಅವನು ಕೂಡಲೆ ಯಾರಿಗೂ ತಿಳಿಯದಂತೆ ಒಂದು ಕೋಣೆಯಲ್ಲಿ ಹೋಗಿ ಕುಳಿತುಕೊಂಡನು. ಆ ದಿನ ಸಂಜೆಯಾದರೂ ನಾರಾಯಣನ ಸುಳಿವನ್ನೇ ಕಾಣದೆ ಚಿಂತಿಸುತ್ತಿದ್ದ ತಾಯಿಯು ಮನೆಗೆಲಸದ ನಿಮಿತ್ತ ಕೋಣೆಯೊಳಕ್ಕೆ ಹೋಗಲು ಧ್ಯಾನಮಗ್ನನಾಗಿದ್ದ ಹುಡುಗನನ್ನು ಕಂಡು ''ಎಲಾ ನಾರಾಯಣ, ಇಲ್ಲಿ ಏನು ಮಾಡುತ್ತೀಯೆ?'' ಎಂದು ಕೇಳಿದಳು. ನಾರಾಯಣನು ''ಅಮ್ಮಾ, ನೀನು ಹೇಳಿದ್ದೆಯಲ್ಲ! ಅದರಂತೆ ಪ್ರಪಂಚಕ್ಕೆ ಹೇಗೆ ಕಲ್ಯಾಣವಾದೀತೆಂದು ಚಿಂತಿಸುತ್ತಿದ್ದೇನೆ'' ಎಂದನಂತೆ!

''ಬೆಳೆಯುವ ಪೈರು ಮೊಳಕೆಯಲ್ಲಿಯೇ ಕಾಣುತ್ತಿದೆ' ಎಂಬ ಗಾದೆಯು ಸಮರ್ಥರಲ್ಲಿ ಅನ್ವರ್ಥವಾಯಿತು. ಇಂಥ ಮತ್ತೊಂದು ದೃಷ್ಟಾಂತವೆಂದರೆ ಇವರ ಹನ್ನೆರಡನೆಯ ವಯಸ್ಸಿನಲ್ಲಿ ನಡೆದದ್ದು. ತಾಯಿಯು ಮೋಹದಿಂದ ಈ ಚಿಕ್ಕವಯಸ್ಸಿನಲ್ಲಿಯೇ ನಡೆಯಿಸಿದ ಮದುವೆಯ ಸಮಾರಂಭದಲ್ಲಿ ''ಸುಮುಹೂರ್ತ, ಸಾವಧಾನ!'' ಎಂಬ ಪುರೋಹಿತನ ಮಾತು ಕಿವಿಗೆ ಬಿದ್ದೊಡನೆ ಇವರು 'ಇನ್ನು ಸಾವಧಾನವಾಗಿರಬೇಕು' ಎಂದು ಯೋಚಿಸಿಕೊಂಡು ಕೂಡಲೆ ಅಲ್ಲಿಂದ ಎದ್ದು ಹೊರಟೇಹೋದರು! ಎಂಥ ವೈರಾಗ್ಯ!

ಬಳಿಕ ಪಂಚವಟಿಯ ಹತ್ತಿರ ಟಾಂಕಳಿಯೆಂಬ ಗ್ರಾಮದಲ್ಲಿ ನಿಂತು ಅವರು ಹನ್ನೆರಡು ವರ್ಷಗಳ ಕಾಲ ತೀವ್ರತಪಸ್ಸನ್ನು ಮಾಡಿದರು. ಗೋದಾವರಿಗೆ ಒಂದು ಹಳ್ಳವು ಬಂದು ಸೇರುವ ಸಂಗಮ ಸ್ಥಳದಲ್ಲಿ ಕುಳಿತು ಗಾಯಿತ್ರೀಪುರಶ್ಚರಣ ಮಾಡುವದು, ಪಂಚವಟಿಗೆ ಹೋಗಿ ಭಿಕ್ಷಾನ್ನವನ್ನು ತಂದು ಶ್ರೀರಾಮನಿಗೆ ಅರ್ಪಿಸಿ ಪ್ರಸಾದವನ್ನು ಸ್ವೀಕರಿಸುವದು, ಮಿಕ್ಕ ಕಾಲವನ್ನು ಲೇಖನ, ವಾಚನ, ಚಿಂತನ, ಪುರಾಣಶ್ರವಣ - ಇವುಗಳಲ್ಲಿ ಕಳೆಯುವದು, ಇದೇ ಅವರ ನಿತ್ಯನಿಯಮವಾಗಿತ್ತು. ಅವರು ಅಲ್ಲಿ ಮಾಡಿದ ಅಖಂಡಧ್ಯಾನವು ಶ್ರೀರಘುವೀರನ ಕೃಪೆಯನ್ನು ಅವರಿಗೆ ತಂದುಕೊಟ್ಟಿತು.

ಬಳಿಕ ಅವರು ಹನ್ನೆರಡು ವರ್ಷಗಳ ಕಾಲ ತೀರ್ಥಾಟನೆಯನ್ನು ಮಾಡಿ ಪರಮಾರ್ಥವನ್ನು ಪಕ್ವಮಾಡಿಕೊಂಡರು, ಲೌಕಿಕದೃಷ್ಟಿಯಿಂದ ದೇಶದ ಸ್ಥಿತಿಯನ್ನು ಕಂಡುಕೊಂಡರು, ಇಪ್ಪತ್ತು ನಾಲ್ಕು ವರ್ಷದ ಬಳಿಕ ತಮ್ಮ ಮನೆಗೆ ಬಂದು ಬಾಗಿಲಲ್ಲಿ, ನಿಂತು ''ಜಯಜಯ ರಘುವೀರ ಸಮರ್ಥ!'' ಎಂದು ಉಚ್ಚಸ್ವರದಿಂದ ನಾಮಕೀರ್ತನೆಮಾಡಿದರು. ರಾಣುಬಾಯಿಯು ಮಗನನ್ನು ಅಲ್ಲಲ್ಲಿ ಹುಡುಕಿಸಿ ಇನ್ನು ಅವನ ಆಶೆಯಿಲ್ಲವೆಂದು ತಿಳಿದು ಸುಮ್ಮನಾಗಿದ್ದಳು. ಈಗ ಆಕೆಯು ವಯಸ್ಸಿನಿಂದ ಸೊರಗಿದ್ದಳು, ಆಕೆಗೆ ಕಣ್ಣೂ ಕಾಣಿಸದಾಗಿತ್ತು. ಯಾವನೋ ಗೋಸಾಯಿಯಿರಬೇಕೆಂದು ಯೋಚಿಸಿ ಭಿಕ್ಷಹಾಕುವಂತೆ ಸೊಸೆಗೆ ಹೇಳಿದಳು. ಆದರೆ ಸಮರ್ಥರು ''ಭಿಕ್ಷೆಗೆ ತೃಪ್ತನಾಗುವ ಗೋಸಾಯಿಯಲ್ಲ, ಇವನು'' ಎಂದರಂತೆ. ಆ ಧ್ವನಿಯನ್ನು ಕೇಳಿ ಹೆತ್ತತಾಯಿಯ ಹೃದಯವು ಕಲಕಿತು, ಹನ್ನೆರಡನೆಯ ವಯಸ್ಸಿನಲ್ಲಿ ಕಣ್ಮರೆಯಾದ ನಾರಾಯಣನು ಈಗ ಜಟಾಧಾರಿ ರಾಮದಾಸನಾಗಿ ತನ್ನ ಮೂವತ್ತಾರನೆಯ ವರ್ಷದಲ್ಲಿ ತನ್ನ ಕಾಲಿಗೆ ನಮಸ್ಕರಿಸುತ್ತಿದ್ದಾನೆ! 'ಇವನ

ರೂಪವನ್ನು ನೋಡಲು ನನಗೆ ಕಣ್ಣಿಲ್ಲವಲ್ಲ!' ಎಂದು ಹಂಬಲಿಸುತ್ತಿದ್ದ ಆಕೆಯ ಮುಖದ ಮೇಲೆ ಸಮರ್ಥರು ಪ್ರೇಮಮಯರಾಗಿ ಕೈಯಾಡಿಸಿದರು. ಕೂಡಲೆ ಆಕೆಗೆ ಶ್ರೀರಾಮನ ಅನುಗ್ರಹದಿಂದ ದೃಷ್ಟಿಯು ವಶವಾಯಿತು, ಶ್ರೀರಾಮದಾಸರ ಸಂಪೂರ್ಣರೂಪವು ಎದುರಿಗೆ ಕಂಗೊಳಿಸಿತು!

ಸಮರ್ಥರು ತಾಯಿಗೆ ಕಣ್ಣನ್ನು ಕೊಟ್ಟು ಸಂತೋಷಗೊಳಿಸಿದ ಲೀಲೆಯು ಹಾಗಿರಲಿ, ತಮ್ಮ ಭಾರತಜನನಿಗೂ ಕಣ್ಣುಪರೆಯನ್ನು ತೆರೆದು ಆನಂದದಲ್ಲಿ ತೇಲಾಡಿಸಿದ ಸಂಗತಿಯು ಇನ್ನೂ ಅದ್ಭುತವಾದದ್ದು. ಕೆಲವು ದಿನಗಳಾದ ಮೇಲೆ ಅವರು ಕೃಷ್ಣಾತೀರಕ್ಕೆ ಬಂದು ವಿಶೇಷವಾಗಿ ಏಕಾಂತವಾಸವನ್ನೇ ಅವಲಂಬಿಸಿ ಲೋಕದ ಕಲ್ಯಾಣವು ಹೇಗಾದೀತೆಂಬುದನ್ನೇ ಚಿಂತಿಸುತ್ತಿದ್ದರು. ರಾವಣನ ಸೆರೆಯಲ್ಲಿ ಬಿದ್ದಿದ್ದ ಮೂವತ್ತುಮೂರು ಕೋಟಿ ದೇವತೆಗಳನ್ನು ಬಿಡುಗಡೆಮಾಡಿದ ರಘುವೀರನ ಚರಿತ್ರೆಯ ಕಡೆಗೆ ಜನತೆಯ ಮನಸ್ಸನ್ನು ಸೆಳೆಯುವದೇ ಅವರಲ್ಲಿ ನವಚೈತನ್ಯವನ್ನುಂಟುಮಾಡುವ ಬಗೆಯೆಂದು ಅವರು ನಿಶ್ಚಯಿಸಿದರು. ರಾಮೋತ್ಸವಕ್ಕೆ ಆರಂಭವಾಯಿತು, ರಾಮಸ್ಥಾಪನೆಯಾಯಿತು, ಮಠಗಳು ಸ್ಥಾಪಿತವಾದವು ಹೀಗೆ ಅಗಣಿತವಾಗಿ ಶಿಷ್ಯಪ್ರಶಿಷ್ಯಸಂಪತ್ತು ಒದಗಿಸಿಕೊಂಡರು. ಈ ಶಿಷ್ಯರ ಗುಂಪಿನಲ್ಲಿ ಛತ್ರಪತಿ ಶಿವಾಜಿಯೂ ಸೇರಿದನು. ಸಮರ್ಥರ ಅನುಗ್ರಹದಿಂದ ಆ ಮಹಾರಾಜನು ನಡೆಯಿಸಿದ ರಾಜಕಾರ್ಯಗಳು ವಿಶ್ವವಿದಿತವಾಗಿವೆ. ಸಮರ್ಥರ ಮತ್ತು ಶಿವಾಜಿಯ ಸಂಬಂಧವು ನಿಕಟವಾಗಿತ್ತೆಂಬ ಬಗ್ಗೆ ಇತ್ತೀಚೆಗೆ ವಿವಾದವಾಗುತ್ತಿರುವದಾದರೂ ಪ್ರಸಿದ್ಧವಾಗಿರುವ ಸಮರ್ಥರ ಪ್ರಭಾವವನ್ನು ನಿಸ್ಸಂದೇಹವಾಗಿ ಅಲ್ಲಗಳೆಯುವಂಥ ಸರ್ವಸಮ್ಮತ ಪ್ರಬಲ ಪ್ರಮಾಣಗಳು ಇನ್ನೂ ದೊರಕಿಲ್ಲವೆಂದು ಧಾರಾಳವಾಗಿ ಹೇಳಬಹುದಾಗಿರುತ್ತದೆ.

ಗೋದಾವರಿಯಲ್ಲಿ ಶ್ರೀಸಮರ್ಥರು ಗಾಯತ್ರಿಯ ಮಂತ್ರದ ಜೊತೆಗೆ ಪುರಶ್ಚರಣೆಮಾಡಿದ ಮಾಹಾಮಂತ್ರವೆಂದರೆ ಶ್ರೀರಾಮತ್ರಯೋದಶಾಕ್ಷರಿಯು. ಅದನ್ನು ಅವರು ಕೋಟಿಗಟ್ಟಲೆಯ ಶಿಷ್ಯರಿಗೂ ಶಿಷ್ಯರ ಮೂಲಕ ಪ್ರಶಿಷ್ಯರಿಗೂ ಉಪದೇಶವಿತ್ತರು. ಪರಮಾರ್ಥ, ಪ್ರಪಂಚ - ಎರಡಕ್ಕೂ ಮೂಲಸ್ತಂಭವಾಗಿ ಅವರು ಉಪಯೋಗಿಸಿದ ಈ ಮಂತ್ರದಲ್ಲಿ ಶ್ರದ್ಧೆಯಿರುವ ಭಕ್ತರಿಗೆ

**ಭೋಗಮೋಕ್ಷಗಳೆರಡನ್ನೂ ಕೊಡುವ ಲಕ್ಷ್ಮೀಪ್ರಸಾದವು ದೊರಕುವದು, ಹಿಡಿದ ಕಾರ್ಯದಲ್ಲಿ ಎಂದೆಂದಿಗೂ ಜಯವಾಗುವದು** – ಎಂಬುದನ್ನು ಅವರು ತಮ್ಮ ಅನುಷ್ಠಾನದಿಂದಲೂ ಭಕ್ತರ ಮೇಲೆ ಮಾಡಿದ ಅನುಗ್ರಹದಿಂದಲೂ ತೋರಿಸಿಕೊಟ್ಟಿರುತ್ತಾರೆ.

ಶ್ರೀಸಮರ್ಥರ ಪುಣ್ಯದಿನವು ಮಾಘ ಬಹುಳ ನವಮಿಯ ದಿನ ಬರುತ್ತದೆ. ಆ ದಿನ ಭಕ್ತಿಯಿಂದ ತ್ರಯೋದಶಾಕ್ಷರಿಯನ್ನು ಕೈಯಲ್ಲಾದ ಮಟ್ಟಿಗೆ ಹೆಚ್ಚಿನ ಪ್ರಮಾಣದಿಂದ ಜಪಿಸಬೇಕು; ಆ ಮಹಾತ್ಮರು ಬರೆದಿರುವ **'ದಾಸಬೋಧ' 'ಮನಾಚೇ ಶ್ಲೋಕ್'**– ಮುಂತಾದ ಸದ್ಗ್ರಂಥಗಳನ್ನು ಮರಾಠಿಯಲ್ಲಾಗಲಿ ಆ ಭಾಷೆಯು ಬಾರದಿದ್ದರೆ ಭಾಷಾಂತರದಿಂದಲಾಗಲಿ ಅವಶ್ಯವಾಗಿ ಪಠನಮಾಡಬೇಕು. ದೇವಭಕ್ತರೂ ದೇಶಭಕ್ತರೂ ಆದ ಸಮರ್ಥರಂಥ ಮಹಾತ್ಮರ ಪುಣ್ಯದಿನಗಳನ್ನು ಹೀಗೆ ಶ್ರದ್ಧೆಯಿಂದ ಆಚರಿಸುವ ಭಕ್ತರ ಸಂಖ್ಯೆಯು ಎಷ್ಟರ ಮಟ್ಟಿಗೆ ನಮ್ಮ ದೇಶದಲ್ಲಿ ಹೆಚ್ಚುವದೋ ಅಷ್ಟರಮಟ್ಟಿಗೆ ನಮಗೆ ರಾಮರಾಜ್ಯವು ಹತ್ತಿರವಾಗುವದು.

★★★★★

# ಸಾಧುಗಳ ಆವಶ್ಯಕತೆ

**–ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಸಮಾಜಕ್ಕೆ ಸಾಧುಗಳ ಆವಶ್ಯಕತೆ ಇದೆಯೆ? ಈ ಪ್ರಶ್ನೆಗೆ ಉತ್ತರವನ್ನು ಹೇಳುವಮುಂಚೆ ಸಾಧುಶಬ್ದಕ್ಕೆ ಅರ್ಥವೇನು? ಎಂಬುದನ್ನು ಮನದಂದು ಕೊಳ್ಳಬೇಕು. ಏಕೆಂದರೆ ಈಗ ಸಾಧು, ಯೋಗಿ, ಶ್ರವಣ, ಸಂನ್ಯಾಸಿ, ಸಿದ್ಧ – ಇಂಥ ಉತ್ಕೃಷ್ಟಾರ್ಥವನ್ನು ಹೇಳುವ ಶಬ್ದಗಳು ವೇಷಧಾರಿಗಳ ಹೆಸರಾಗೊ ಅರ್ಥ ನ್ಯೂನತೆಯನ್ನು ಪಡೆದುಕೊಂಡಿರುತ್ತವೆ. ಜೋಗಿ, ಬೈರಾಗಿ, ಸುಡುಗಾಡಸಿದ್ದರು, ಮುಂತಾದ ಶಬ್ದಗಳು ನಮಗೆ ಈಗ ತಿಳಿಸುವ ಅರ್ಥಗಳೇ ಬೇರೆ; ಯೋಗಿ, ವಿರಾಗಿ, ಸಿದ್ಧ – ಮುಂತಾದ ಶಬ್ದಗಳಿಂದ ಅವು ಅಪಭ್ರಂಶವಾಗಿರುವಂತೆ ಆ

ಹೆಸರುಳ್ಳವರಲ್ಲಿಯೂ ನಮಗೆ ನೈಚ್ಯಾನುಸಂಧಾನವಾಗಿಬಿಟ್ಟಿರುತ್ತದೆ. ಇದರಂತೆ ಸಾಧುಶಬ್ದವೂ ಸಂಶಯಾಸ್ಪದವಾದ ಚರಿತೆಯುಳ್ಳವರು - ಎಂಬರ್ಥವನ್ನು ಕೊಡುವ ಕಾಲವು ಬರುತ್ತಾ ಇದೆ. ಸಾಧುಗಳು ಲೈಸನ್ಸು ತೆಗೆದುಕೊಳ್ಳಬೇಕು- ಎಂಬ ಸೂಚನೆಯೊಂದೂ ಸರಕಾರದವರ ಆಲೋಚನೆಗೆ ಬಂದಿತ್ತು. ಆದರೆ ಹೇಗೋ ದೈವಗತಿಯಿಂದ ಅದು ಅಲ್ಲಿಗೇ ನಿಂತಿತು!

ಮೂಲದಲ್ಲಿ ಸಾಧುಶಬ್ದವು ಯಾವ ಅರ್ಥವನ್ನು ಕೊಡುತ್ತದೆ ಎಂಬುದನ್ನು ಯೋಗವಾಸಿಷ್ಠದ ಒಂದು ಶ್ಲೋಕದಿಂದ ಮನಸ್ಸಿಗೆ ತಂದುಕೊಳ್ಳಬಹುದು-

**ಅನನ್ತಂ ಸಮತಾನನ್ದಂ ಪರಮಾರ್ಥಂ ವಿದುರ್ಬುಧಾಃ ।**
**ಸ ಯೇಭ್ಯಃ ಪ್ರಾಪ್ಯತೇ ನಿತ್ಯಂ ತೇ ಸೇವ್ಯಾಃ ಶಾಸ್ತ್ರಸಾಧವಃ ॥**

'ಅನಂತವಾದ ಸಮತೆಯ ಆನಂದವೇ ಪರಮಾರ್ಥವು; ಅದು ಯಾರಿಂದ ದೊರಕುವದೋ ಆ ಶಾಸ್ತ್ರ, ಸಾಧುಗಳು - ಇವರನ್ನು ನಿತ್ಯವೂ ಸೇವಿಸತಕ್ಕದ್ದು.' ಸಾಧುಗಳಿಗೆ ನಾವೇನೂ ಕೊಡುವಂತಿಲ್ಲ, 'ನೀವು ಸಾಧುಗಳು' ಎಂದು ಕೊಡುವ ಪದವಿಯಲ್ಲ ಅದು. ಸಾಧುವೆಂದರೂ ಸಮತೆಯೆಂದರೂ ಒಂದೇ; ಸಾಮವೇದದಲ್ಲಿ ಸಾಮಗಳನ್ನು ಸಾಧುಗುಣವುಳ್ಳವೆಂದು ಉಪಾಸನೆಮಾಡತಕ್ಕದ್ದು ಎಂದು ವಿಧಿಸಿದೆ; ಶತ್ರುವನ್ನು ದಾನ, ಭೇದ, ದಂಡ- ಇವುಗಳಿಂದ ಒಲಿಸುವದಕ್ಕಿಂತ ಸಾಮದಿಂದ ಒಲಿಸುವದು ಸಾಧುಮಾರ್ಗ ಎಂದು ರಾಜನೀತಿಶಾಸ್ತ್ರದಲ್ಲಿರುತ್ತದೆ. ಅಂತೂ ಸಾಮ, ಸಾಧು - ಈ ಎರಡು ಶಬ್ದಗಳೂ ಸಮತ್ವವನ್ನು ಬೋಧಿಸುವವಾಗಿರುತ್ತವೆ.

ಸಮಾಜಕ್ಕೆ ಸಾಧುಗಳು ಅವಶ್ಯವೆ? - ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳುವದಕ್ಕೆ ಈಗ ಪ್ರಯತ್ನಿಸೋಣ. ಸಮಾಜವೆಂದರೇನು? ಐತಿಹಾಸಿಕದೃಷ್ಟಿಯಿಂದ ಮಾತನಾಡುವವರು ಹೀಗೆನ್ನುತ್ತಾರೆ; ಮನುಷ್ಯರು ಒಬ್ಬೊಬ್ಬರೇ ಬಾಳುವದು ಕಷ್ಟಸಾಧ್ಯವಾದ್ದರಿಂದ ಪರಸ್ಪರರಕ್ಷಣೆಗೆಂದು ಗುಂಪು ಸೇರಿ, ಕ್ರಮಕ್ರಮವಾಗಿ ಊರುಕೇರಿಗಳನ್ನೂ ಗೌಡರು, ಶ್ಯಾನುಭೋಗರು, ಪುರಾಣಿಕರು, ಶೆಟ್ಟಿ, ಯಜಮಾನ, ಶಾಸ್ತ್ರಜ್ಞರು - ಎಂದು ಮುಂತಾಗಿ ತಮಗೆ ಒಳ್ಳೆಯದನ್ನು ಮಾಡುವವರನ್ನೂ ತಮ್ಮವರಲ್ಲಿ ಹಿರಿಯರನ್ನಾಗಿ ಎಣಿಸಿಕೊಂಡರು; ಅದೇ ಸಮಾಜ - ಎನ್ನುತ್ತಾರೆ, ಒಂದು ದೃಷ್ಟಿಯಿಂದ ಇದು ಸರಿಯೇ. ತಮ್ಮ ಯೋಗಕ್ಷೇಮವನ್ನು ನೋಡಿಕೊಂಡು ಮಿಕ್ಕವರ ಯೋಗಕ್ಷೇಮವನ್ನೂ ನೋಡಿ

ಕೊಳ್ಳುವದಕ್ಕೆ ಹೋದವರು ಅಷ್ಟುಮಟ್ಟಿಗೆ ಸಾಧುಗಳೇ, ಲೋಕೋಪಕಾರಿಗಳೇ, ಸರಿ. ಆದರೆ ಯಾರು ತಮ್ಮ ಸೌಖ್ಯದ ಯೋಚನೆಯನ್ನೇ ಕೈಬಿಟ್ಟು ಎಲ್ಲರಲ್ಲಿಯೂ ಸಮಬುದ್ಧಿಯಿಂದ ಲೋಕೋಪಕಾರವನ್ನೇ ನೋಡಿಕೊಳ್ಳುವರೋ ಅವರು ಇನ್ನೂ ಹೆಚ್ಚಿನ ಅರ್ಥದಲ್ಲಿ ಸಾಧುಗಳಾಗುತ್ತಾರೆ. **'ಸಾಧ್ನೋತಿ ಪರಾರ್ಥಮಿತಿ ಸಾಧುಃ'** ಸಾಧುಗಳಿರುವ ಜನರ ಗುಂಪು ಈ ಅರ್ಥದಲ್ಲಿ ನಿಜವಾಗಿ 'ಸಮಾಜ'ವೆನಿಸುತ್ತದೆ. ಸಮಾಜವೆಂದರೆ ಜೊತೆಯಲ್ಲಿರುವವರು ಎಂದು ಶಬ್ದಾರ್ಥ; ಆದರೆ ಯಾವ ಜನರ ತಂಡದಲ್ಲಿ ಸಮತೆಯು ಎದ್ದುಕಾಣುತ್ತಿರುವದೋ ಅವರ ಗುಂಪು ಅನ್ವರ್ಥವಾಗಿಯೂ ಸಮಾಜವು. ಸಾಧುಗಳ ಪ್ರಭಾವಕ್ಕೆ ಒಳಗಾಗಿರುವದೇ ನಿಜವಾಗಿ ಸಮಾಜವು. ಏಕೆಂದರೆ ಆಗಲೆ ಉದಾಹರಿಸಿರುವ ಯೋಗವಾಸಿಷ್ಠದ ವಾಕ್ಯದಲ್ಲಿ ಹೇಳಿರುವಂತೆ ಸಮತಾನಂದವು ಶಾಸ್ತ್ರ, ಸಾಧುಗಳು– ಇವರಿಬ್ಬರಿಂದಲೇ ಸಿಕ್ಕುವದು. ಶಾಸ್ತ್ರದಲ್ಲಿ ಏನು ಹೇಳಿದೆ ಎಂಬುದನ್ನು ತಿಳಿದು ನಿಶ್ಚಯಿಸಿಕೊಳ್ಳುವದು ಎಲ್ಲರಿಗೂ ಆಗುವಂತಿರುವದಿಲ್ಲ. ಆದರೆ ಸಾಧುಗಳ ಸಂಗದಿಂದ ನಮಗೆ ಸಮತೆಯ ಆನಂದದ ಅನುಭವವು ಅನಾಯಾಸವಾಗಿ ಸಿಕ್ಕುತ್ತದೆ.

ಸಾಧುಶಬ್ದಕ್ಕೆ ಅರ್ಥವೇನೆಂಬುದನ್ನು ಅರಿತುಕೊಂಡದ್ದರಿಂದ ಸಮಾಜಕ್ಕೆ ಸಾಧುಗಳ ಅವಶ್ಯಕತೆ ಇದೆಯೊ, ಇಲ್ಲವೊ?– ಎಂಬುದನ್ನು ನಾವು ನಿಶ್ಚಯಿಸಬಹುದಾಗಿದೆ. ಎಲ್ಲರಿಗೂ ನಿಜವಾದ ಸಾಧುಗಳಾಗಿರುವದು ಶಕ್ಯವಿಲ್ಲ. ಏಕೆಂದರೆ ಸಾಧುಗಳು ವಿಶ್ವಕುಟುಂಬಿಗಳಾಗಿರುತ್ತಾರೆ, ಇಡಿಯ ಜಗತ್ತಿನಲ್ಲಿಯೇ ನಾನೆಂಬ ಅಭಿಮಾನವುಳ್ಳವರು ಅವರು. ನಮ್ಮ ಶರೀರದಲ್ಲಿ ಅನೇಕ ಕ್ರಿಮಿಗಳಿರುತ್ತವೆಯೆಂದು ವಿಜ್ಞಾನಶಾಸ್ತ್ರಜ್ಞರು ಹೇಳುತ್ತಾರೆ. ಆ ಹುಳುಗಳಿಗೆ ತಮ್ಮ ತಮ್ಮ ಶರೀರದ ಅಭಿಮಾನ; ಅವೆಲ್ಲವೂ ನಮ್ಮ ಶರೀರದಲ್ಲಿಯೇ ಇರುತ್ತಿದ್ದರೂ ಆ ಶರೀರದಲ್ಲೆಲ್ಲ ನನ್ನದೆಂಬ ಅಭಿಮಾನವಿರುವದಿಲ್ಲ. ನಮಗೆ ಆ ಹುಳುಗಳಿಂದೊಡಗೂಡಿದ ಒಟ್ಟುಶರೀರದ ಅಭಿಮಾನ. ಹೀಗೆಯೇ ರೈತ, ಗೌಡ, ಶೇಕದಾರ, ಅಮಲ್ದಾರ, ಮಂತ್ರಿ, ಪಾಳ್ಯಗಾರ – ಮುಂತಾದವರಿಗೆ ತಮತಮಗೆ ಸೇರಿದಷ್ಟು ಕ್ಷೇತ್ರದಲ್ಲಿ ಮಾತ್ರ ನಾನು, ನನ್ನದು ಎಂಬ ಅಭಿಮಾನವು ಇರುತ್ತದೆ. ಆದರೆ ಇಡಿಯ ವಿಶ್ವದಲ್ಲಿ ಸಾಧುಗಳಿಗೆ ಮಾತ್ರವೇ ಅಭಿಮಾನವಿರುತ್ತದೆ. ಅವರಿಗೆ ಎಲ್ಲರಲ್ಲಿಯೂ ಆತ್ಮಸಮತಾಬುದ್ಧಿ. ಎಲ್ಲರ ಸುಖದುಃಖಗಳಲ್ಲಿಯೂ ಭಾಗವನ್ನುವಹಿಸುವವರು ಅವರು. ತಮ್ಮ ಸುತ್ತಮುತ್ತಲೂ ಇರುವವರೆಲ್ಲರೂ ಸರಿಯಾದ ಮಾರ್ಗದಲ್ಲಿರಬೇಕು, ಎಲ್ಲರಿಗೂ ಸಮತ್ವದ ಆನಂದವು ದೊರೆಯಬೇಕು

– ಎಂದು ಲೋಕಕಲ್ಯಾಣಕ್ಕಾಗಿ ದುಡಿಯುವವರೇ ಸಾಧುಗಳು.

ಸಾಧು ಎಂದರೆ ಗಡ್ಡವನ್ನು ಬಿಟ್ಟವರು, ಯೋಗದಂಡವನ್ನು ಹಿಡಿದವರು, ಮಧುಕರಿಯನ್ನು ಬೇಡುವವರು – ಎಂದು ಸಂಕುಚಿತಾರ್ಥವನ್ನು ನಾವು ಮಾಡಿ ಕೊಂಡುಬಿಟ್ಟಿರುತ್ತೇವೆ. ಈ ಸಂಕುಚಿತಾರ್ಥದಲ್ಲಿ ಸಾಧುವೇಷವನ್ನು ಹಾಕಿಕೊಂಡು ಮೆರೆಯುವದು ಸುಲಭ. ಆದರೆ ಸಾಧುಗಳೇ ಆಗಿರುವದೇನೂ ಅಷ್ಟು ಸುಲಭವಾದದ್ದಲ್ಲ. ಗೋಂದಾವಳಿಯಲ್ಲಿ ಶ್ರೀ ಬ್ರಹ್ಮಚೈತನ್ಯರೆಂಬ ಸದ್ಗುರುಮಹಾರಾಜರೊಬ್ಬರು ಇರುತ್ತಿದ್ದರು; ಅವರು ಸಾಧುಗಳೊ ಅಲ್ಲವೊ?– ಎಂಬ ಪ್ರಶ್ನೆಗೆ ಉತ್ತರವಾಗಿ ಅವರ ಶಿಷ್ಯರೊಬ್ಬರು 'ತಿಳಿಯುವದು ಇವರ ಆಗಾಧ ಚರಿತ್ರ, ಗೋಂದಾವಳಿ ಕ್ಷೇತ್ರ ಕಂಡಮೇಲೆ' ಎಂದು ಒಂದು ಭಜನೆಯ ಪದದಲ್ಲಿ ಹಾಡಿರುತ್ತಾರೆ. ಗೋಂದಾವಳಿಗೆ ಹೋಗಿದ್ದವರನೇಕರು ಆ ಗುರುಮಹಾರಾಜರ ಪುಣ್ಯಚರಿತವನ್ನು ಕಂಡವರು ಇನ್ನೂ ಜೀವಿಸಿರುತ್ತಾರೆ. ಅದೇ ಸದ್ಗುರುಗಳಲ್ಲಿ ಅವರ ಶಿಷ್ಯವೃತ್ತಿಯಲ್ಲಿ ಇದ್ದ ಒಬ್ಬರನ್ನು ಆ ಮಹಾತ್ಮರು 'ಊರಿಗೆ ಹೋಗಿ ಲೋಕ ಸೇವೆಯನ್ನು ಮಾಡಿಕೊಂಡು ಇರು' ಎಂದು ಬೋಧಿಸಿದರಂತೆ. ಆದರೆ ಆ ಶಿಷ್ಯರು 'ಪ್ರಪಂಚಕ್ಕೆ ನಾನು ಹಿಂದಿರುಗಬೇಕೆಂದು ಹೇಳಿರುತ್ತಾರಲ್ಲ!' ಎಂದು ಮನನೊಂದುಕೊಂಡರು. ಗುರುಮಹಾರಾಜರು ಆಗ ''ಸಾಧುವೆನಿಸಿಕೊಳ್ಳಬೇಕೆಂಬ ಇಚ್ಛೆ ನಿನಗಿದೆಯೊ, ನಿಜವಾಗಿಯೂ ಸಾಧುವಾಗಿ ವರ್ತಿಸಬೇಕೆಂಬ ಇಚ್ಛೆಯಿದೆಯೊ?'' ಎಂದು ಕೇಳಿದರಂತೆ. ಆ ಪ್ರಶ್ನೆಯಲ್ಲಿ ಸಾಧುಶಬ್ದದ ಅರ್ಥಗೌರವವು ಗರ್ಭಿತವಾಗಿರುತ್ತದೆ.

ಸಮಾಜಕ್ಕೆ ಸಾಧುಗಳ ಅವಶ್ಯಕತೆಯಿದೆಯೆ?– ಎಂಬ ಪ್ರಶ್ನೆಗೆ ಉತ್ತರವನ್ನು ಈಗ ನೀವೇ ಸುಲಭವಾಗಿ ಕಂಡುಕೊಳ್ಳಬಹುದು. ಸಾಧುಗಳಿಲ್ಲದಿದ್ದರೆ ಸಮಾಜವೇ ನಾಶವಾಗಿಬಿಡುತ್ತದೆ. ಆದ್ದರಿಂದ ಭಗವಂತನು ಸಾಧುಗಳು ಇಲ್ಲದ ಕಾಲವೇ ಇಲ್ಲದಂತೆ ನೋಡಿಕೊಳ್ಳುತ್ತಾನೆ. ಆದ್ದರಿಂದಲೇ 'ಸಾಧುಗಳ ಪರಿತ್ರಾಣಕ್ಕೆ ಮತ್ತೆಮತ್ತೆ ನಾನು ಆಯಾ ಯುಗದಲ್ಲಿ ಅವತರಿಸುತ್ತೇನೆ' ಎಂದು ಭಗವಂತನು ಅಪ್ಪಣೆಕೊಡಿಸಿರುತ್ತಾನೆ. ಈಗ ಕಲಿಯುಗ; ಧರ್ಮವು ಬಹಳ ಹ್ರಾಸವಾಗಿರುತ್ತದೆ. ಆದರೂ ಸಮಾಜಸ್ಥಿತಿಗೆ ಸಾಧುಗಳು ಈಗಲೂ ಇದ್ದುಕೊಂಡೇ ಇರುತ್ತಾರೆ. ಅವರು

ಇರಲೇಬೇಕು. 'ಸಮಾಜನಿರ್ಮಾಣ'ವನ್ನು ಮಾಡುವದಕ್ಕೆ ನಮ್ಮ ಜನನಾಯಕರು ತಮ್ಮ ಕೈಯಲ್ಲಾದ ಪ್ರಯತ್ನವನ್ನೆಲ್ಲ ಮಾಡುತ್ತಿರುತ್ತಾರೆ. ಆದರೆ ಸಾಧುಗಳಿಂದಾಗುವ ಸಮಾಜನಿರ್ಮಾಣಕ್ಕೆ ಈ ಯಾವ ಪ್ರಯತ್ನಗಳನ್ನೂ ಹೋಲಿಸುವದಕ್ಕಿಲ್ಲ. ಸಮಾಜವೆಂಬ ಭವನಕ್ಕೆ ಸಾಧುಗಳೇ ಆಧಾರಸ್ತಂಭಗಳು.

★★★★★

# ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರು

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಮಾರ್ಗಶೀರ್ಷ ಬಹುಳ ದಶಮಿಯ ದಿನ ನಮ್ಮ ಕರ್ಣಾಟಕದಲ್ಲಿಯ ಎಷ್ಟೋ ಜನ ಭಾವಿಕರು ಗೋಂದಾವಲಿಯ ಸದ್ಗುರು ಮಹಾಜರಾದ ಶ್ರೀಬ್ರಹ್ಮಚೈತನ್ಯರ ಆರಾಧನೆಯನ್ನೆಸುಗುವರು. ಸದ್ಗುರುಮಹಾರಾಜರಾದ ಇವರನ್ನು ಶಿಷ್ಯಮಂಡಲಿಯವರು ''ಮಹಾರಾಜ''ರೆಂದೇ ಪರೋಕ್ಷ ನಾಮದಿಂದ ಕರೆಯುವ ರೂಢಿಯಿದ್ದದ್ದರಿಂದ ಆ ಹೆಸರಿನಿಂದಲೇ ಇಲ್ಲಿ ಅವರ ಗುಣಕೀರ್ತನವನ್ನು ಮಾಡುತ್ತೇವೆ.

ಮಹಾರಾಜರವರು 1766ನೆಯ ಶಕೆಯ ಮಾಘ ಶುದ್ಧ ದಶಮಿಯ ದಿನ ಜನ್ಮವನ್ನೆತ್ತಿ ಪ್ರಮಾದೀಚ ಸಂವತ್ಸರದ ಮಾರ್ಗಶೀರ್ಷ ಬಹುಳ ದಶಮಿಯ ದಿನ ತಮ್ಮ ಅವತಾರವನ್ನು ಗುಪ್ತಿಮಾಡಿದರು ಈ ನಡುವಣ ಕಾಲದಲ್ಲಿ ಅವರು ತಮ್ಮ ನಡೆನುಡಿಗಳಿಂದ ಪ್ರಕಟಮಾಡಿದ ದೈವಪ್ರಭಾವವು ಇವರನ್ನು ಅವತಾರಪುರುಷರೆಂದು ಅಸಂಖ್ಯಾಕಜನರಲ್ಲಿ ನಂಬಿಕೆಯನ್ನುಂಟುಮಾಡಿತು. ಇವರು ಮಹಾರಾಷ್ಟ್ರದೇಶದಲ್ಲಿ ಸಾತಾರಾ ಜಿಲ್ಲೆಗೆ ಸೇರಿದ ಗೋಂದಾವಲಿ ಎಂಬ ಊರಿನಲ್ಲಿ ಕುಲಕರ್ಣಿಗಳ ವಂಶದಲ್ಲಿ ಉತ್ಪನ್ನರಾದರೂ ಸತ್ಪುರುಷರಿಗೆ ದೇಶ, ವೇಷ, ಭಾಷೆ, ಜಾತಿ, ಕುಲ, ಧನ, ರೂಪ, ಮುಂತಾದ ಪರಿಚ್ಛೇದಗಳಿಲ್ಲವೆಂದು ನಾರದಭಕ್ತಿಸೂತ್ರವೇ ಮೊದಲಾದ ಗ್ರಂಥಗಳು ವರ್ಣಿಸಿರುವಂತೆ ಇವರ ಮಹಿಮಾವಿಶೇಷವು ಭರತಖಂಡದ ಎಲ್ಲಾ ಕಡೆಗೂ ವ್ಯಾಪಿಸಿ ಬೇರೆ ಬೇರೆ ಜಾತಿಯ

ಬೇರೆ ಬೇರೆ ವಯಸ್ಸಿನ ಬಹುಮಂದಿ ಶಿಷ್ಯರಿಗೆ ತೋರಿಕೊಂಡದ್ದಲ್ಲದೆ ಇವರು ದೇಹತ್ಯಾಗವನ್ನು ಮಾಡಿದ ಮೇಲೂ ಇವರ ಆಜ್ಞೆಯನ್ನು ವೇದವಾಕ್ಕಿಗೆ ಸಮನೆಂದು ಕಾಣುವ ಹಿಂದುಗಳೂ ಖುರಾನು ಮುಂತಾದ ತಮ್ಮ ತಮ್ಮ ಮತಗ್ರಂಥಗಳ ಬೋಧೆಗೆ ಸಮವೆಂದು ಕಾಣುವ ಮುಸಲ್ಮಾನ್ ಮುಂತಾದ ಮತದವರೂ ಇವರು ತೋರಿಸಿಕೊಟ್ಟ ನಡತೆಯನ್ನೇ ಮೇಲು ಪಂಙ್ಕ್ತಿಯಾಗಿಟ್ಟುಕೊಳ್ಳುವಂತೆ ಮಾಡಿರುವದು.

**ಅವ್ಯಕ್ತಂ ವ್ಯಕ್ತಿಮಾಪನ್ನಂ ಮನ್ಯಂತೇ ಮಾಮಬುದ್ಧಯಃ ।**
**ಪರಂ ಭಾವಮಜಾನಂತೋ ಮಮಾವ್ಯಯ ಮನುತ್ತಮಂ॥''**

ಎಂದು ಮೊದಲು ಅವ್ಯಕ್ತನಾಗಿದ್ದು ಆಮೇಲೆ ನಾನು ವ್ಯಕ್ತನಾದನೆಂದು ಮೂಢರು ತಿಳಿಯುವರು. ನನ್ನ ಸ್ವರೂಪವು ನಾಶರಹಿತವಾದದ್ದೆಂದೂ ಸರ್ವೋತ್ತಮವಾದದ್ದೆಂದೂ ಅವರು ಅರಿಯರು – ಎಂದು ಭಗವಂತನು ಹೇಳಿದ್ದು ಭಗವದ್ಭಕ್ತರಿಗೂ ಅನ್ವಯಿಸುವದು. ಏತಕ್ಕೆಂದರೆ ಇವರ ಸ್ವರೂಪವು ಇವರ ವ್ಯಕ್ತವಾದ ದೇಶಕ್ಕೆ ಸೇರಿದ್ದಲ್ಲ; ಇವರ ಸ್ವರೂಪಕ್ಕೆ ಸೇರಿದ್ದು.

ಗೀತಾಬಾಯಿಯೆಂಬ ತಾಯಿಯುದರದಲ್ಲಿ ಜನಿಸಿದ ಶ್ರೀಬ್ರಹ್ಮಚೈತನ್ಯ ಮಹಾರಾಜರು, ಗೀತೆಯು ಬ್ರಹ್ಮವಿದ್ಯಾಪ್ರತಿಪಾದಕವೆಂಬುದನ್ನು ನೆನಪುಕೊಟ್ಟರು. ತಮ್ಮ ಬಾಲ್ಯದಿಂದ ಮೊದಲುಗೊಂಡು ದೇಹತ್ಯಾಗದವರೆಗೂ ಯೋಗಸಿದ್ಧಿಗಳನ್ನು ಆಗಾಗ್ಗೆ ಪ್ರಕಟಮಾಡುತ್ತಾ ಕರ್ಮಯೋಗ, ಭಕ್ತಿಯೋಗಗಳ ರಹಸ್ಯಗಳನ್ನು ಜನರಿಗೆ ಸ್ವಲ್ಪಮಟ್ಟಿಗೆ ನುಡಿಯಿಂದಲೂ ಬಹಳ ಮಟ್ಟಿಗೆ ನಡೆಯಿಂದಲೂ ಬಿಚ್ಚಿ ತೋರಿಸಿಕೊಟ್ಟ ಈ ಮಹಾತ್ಮರು ಗೀತೆಯು ಬ್ರಹ್ಮವಿದ್ಯೆಯಲ್ಲದೆ ಮುಖ್ಯವಾಗಿ ಯೋಗಶಾಸ್ತ್ರವೆಂಬುದನ್ನೂ ನೆನಪುಕೊಡುವಂತಿದ್ದರು. ನಮರುವ ಸ್ಥಲಸಂಕೋಚದಲ್ಲಿ ಅವರು ತೋರಿಸಿದರೆಂದು ಜನರು ಆಡಿಕೊಳ್ಳುವ ಲೀಲಾವಿಶೇಷಗಳನ್ನು ಬರೆಯುವದೂ ಸಾಧ್ಯವಿಲ್ಲ; ಅಧ್ಯಾತ್ಮವಿಚಾರಕ್ಕೂ ಸಾಧನೆಗೂ ಬೇಕಾದ ವಿಷಯಗಳನ್ನು ಸಂಗ್ರಹಮಾಡುವವರಿಗೆ ಅಂಥ ಲೀಲೆಗಳನ್ನು ತಿಳಿಯುವದು ಅತ್ಯವಶ್ಯಕವೆಂದು ನಾವು ಭಾವಿಸಿಯೂ ಇಲ್ಲ. ಆದ್ದರಿಂದ ಮಹಾರಾಜರವರ ಯಾವ ಗುಣಾನುವಾದದಿಂದ ವಾಚಕರಿಗೆ ಅಧ್ಯಾತ್ಮವಿದ್ಯೆಯಲ್ಲಿ ರುಚಿಹತ್ತುವದೋ ಸಾಧಕರಿಗೆ ಸರಿಯಾದ ದಾರಿ ಹೊಳೆಯುವದೋ ಸಿದ್ಧರಾದ

ಜ್ಞಾನಿಗಳಿಗೆ ತಮ್ಮಲ್ಲಿರುವ ತತ್ತ್ವರಸದ ಆಸ್ವಾದನೆಯ ಆನಂದವು ಮಗುಳೇಳುವದೋ ಅಂಥ ಗುಣಾನುವಾದವನ್ನು ಬಹು ಸಂಕ್ಷೇಪವಾಗಿ ಇಲ್ಲಿ ಮಾಡುತ್ತೇವೆ.

ಮಹಾರಾಜರು ಕರ್ಮದಲ್ಲಿಯೂ ತೀರ್ಥಯಾತ್ರೆ ಮುಂತಾದ ಸದನುಷ್ಠಾನಗಳಲ್ಲಿಯೂ ಶ್ರದ್ಧಾಳುಗಳು. ಇವರಲ್ಲಿರುವ ಶಿಷ್ಯಸಂಖ್ಯೆಯು ಬಹು ಹೆಚ್ಚಾಗಿ ಅವರ ಯೋಗಕ್ಷೇಮಾದಿಗಳನ್ನು ವಿಚಾರಿಸಿಕೊಳ್ಳುವದಕ್ಕೇ ಇವರ ಬಹುಭಾಗದ ಕಾಲವು ವಿನಿಯೋಗವಾಗುತ್ತಿದ್ದರೂ ಇವರು ಅರ್ಘ್ಯಪ್ರಧಾನ, ಜಪ, ಉಪಸ್ಥಾನ - ಎಂಬ ಮೂರು ಮುಖ್ಯವಾದ ಸಂಧ್ಯಾಂಗಗಳನ್ನು ಸಂಕುಚಿತರೀತಿಯಿಂದಲಾದರೂ ಆಚರಿಸದೆ ಇರುತ್ತಿರಲಿಲ್ಲ. ತೀರ್ಥಯಾತ್ರೆಯೆಂಬುದಂತೂ ಇವರಿಗೆ ನೀರು ಕುಡಿದಂತೆ. ಇವರು ಮೇಲಿಂದ ಮೇಲೆ ಕಾಶಿ ಮೊದಲಾದ ಮುಖ್ಯತೀರ್ಥಗಳಿಗೆ ತಾವು ಹೋಗುವುದಲ್ಲದೇ ನೂರಾರು ಜನಗಳನ್ನು ಕರೆದುಕೊಂಡು ಹೋಗಿ ಅವರಿಂದ ತೀರ್ಥಶ್ರಾದ್ಧಾದಿಗಳನ್ನು ತಮ್ಮ ಖರ್ಚಿನಿಂದಲೇ ಮಾಡಿಸಿದರು. ಆದರೆ ಕರ್ಮದ ಬಹಿರಾಚರಣೆಗಿಂತಲೂ ಒಳಗಿನ ತಿರುಳಿನ ಕಡೆಗೇ ಇವರ ಲಕ್ಷ್ಯ ಹೆಚ್ಚು. ತಾನು ಸಂಧ್ಯಾಕರ್ಮಪರನೆಂದು ಹೆಮ್ಮೆ ಪಡುತ್ತಿದ್ದ ಒಬ್ಬಾನೊಬ್ಬ ಶಾಸ್ತ್ರಿಯ ಮನೋಭಾವವನ್ನು ಪರೋಕ್ಷಜ್ಞರಾದ ಇವರು ಅರಿತುಕೊಂಡು ಜನಸಾಮಾನ್ಯವನ್ನುದ್ದೇಶಿಸಿ ಸಂಧ್ಯಾತತ್ತ್ವವನ್ನು ಅಧ್ಯಾತ್ಮಕರೀತಿಯಿಂದ ಬೋಧಿಸಿದರು. ಯೋಗಶಕ್ತಿಯು ಈ ಮಹಾರಾಜರಲ್ಲಿ ಸ್ಫುಟವಾಗಿ ತೋರುತ್ತಿತ್ತು; ಆದರೆ ಕೇವಲ ಪ್ರಾಣಾಯಾಮ ಮುಂತಾದ ಬಾಹ್ಯಸಾಧನಗಳನ್ನು ಮಾಡಿ ಷಟ್ಚಕ್ರಜಯವನ್ನು ಸಂಪಾದಿಸುವದಕ್ಕಿಂತ ನಾಮಸ್ಮರಣೆ ಮುಂತಾದ ಸುಲಭವಾದ ಸಾಧನೆಗಳನ್ನು ಮಾಡಿ ಪರಮಾತ್ಮನ ಪ್ರೇಮವನ್ನು ಸಂಪಾದಿಸುವದು ಹೆಚ್ಚಿನ ಯೋಗವೆಂಬುದನ್ನು ಇವರು ಜನರ ಲಕ್ಷ್ಯಕ್ಕೆ ಬಹಳವಾಗಿ ತರುತ್ತಿದ್ದರು. ಇವರ ಜ್ಞಾನವು ಅಸಾಧಾರಣವಾಗಿತ್ತು. ಆದರೆ ಅಕ್ಕಿಯಿಲ್ಲದ ಹೊಟ್ಟನ್ನು ಕುಟ್ಟಿದಂತೆ ಭಕ್ತಿಯೂ ಶಾಂತಿದಾಂತ್ಯಾದಿಗಳೂ ಇಲ್ಲದೆ ಶುಷ್ಕತರ್ಕವನ್ನು ಮುಂದುಮಾಡಿಕೊಂಡು ವಿಚಾರಮಾಡುತ್ತೇವೆಂದು ಹೆಮ್ಮೆ ಪಡುವವರನ್ನು ಇವರು ಒಪ್ಪುತ್ತಿರಲಿಲ್ಲ. ಎಷ್ಟೋಜನ ಬಾಯಿವೇದಾಂತಿಗಳು ಇವರಲ್ಲಿಗೆ ಬಂದಮೇಲೆ ತಮ್ಮ ತಪ್ಪನ್ನು ತಿಳಿದುಕೊಂಡು ವಿಚಾರಕರೆಂಬ ದುರಭಿಮಾನವನ್ನು ಬಿಟ್ಟು ಸಾಧನಗಳನ್ನು ಕೈಕೊಂಡು ಸದ್ವಿಚಾರದ ಸರಣಿಯನ್ನೂ ತಿಳಿದುಕೊಂಡರು. ನಾಮಸ್ಮರಣೆ,

ಭಗವದ್ಧ್ಯಾನ - ಮುಂತಾದ ಭಕ್ತಿಮಾರ್ಗವೆಂದರಂತೂ ಇವರ ಪ್ರಾಣಸ್ವರೂಪವಾಗಿತ್ತು; ಆದರೆ ತಾವು ಭಕ್ತರೆಂದೂ ಸಾಧುಗಳೆಂದೂ ತೋರಿಸಿಕೊಳ್ಳುವವರು ಇವರಿಗೆ ಸೇರುತ್ತಿರಲಿಲ್ಲ. ವೇಷದ ಸಾಧುಗಳಿಗಿಂತಲೂ ಸಾಧಕರಾಗಿದ್ದು ಪರೋಪಕಾರವನ್ನು ಮಾಡುವವರೇ ನಿಜವಾದ ಸಾಧುಗಳೆಂದು ಇವರು ಆಗಾಗ್ಗೆ ಉಪದೇಶ ಮಾಡುತ್ತಲೇ ಇದ್ದರು. ವೈರಾಗ್ಯವೆಂಬ ಬೆಟ್ಟದ ಶಿಖರವನ್ನೇ ಇವರು ಏರಿದ್ದರು. ತಮ್ಮ ಸರ್ವಸ್ವವನ್ನೂ ಜನರ ಉಪಕಾರಕ್ಕೆ ವಿನಿಯೋಗಿಸುತ್ತಾ ಪ್ರತಿದಿನವೂ ನೂರಾರು ಮಂದಿಯ ಭೋಜನಮಾಡಿಸುತ್ತಿದ್ದರು. ಮನೆಯನ್ನೇ ರಾಮ ಮಂದಿರವಾಗಿ ಮಾರ್ಪಡಿಸಿದ್ದರು. ಇವರಿಗಿರುವ ನಿರಭಿಮಾನದಿಂದ ಇವರನ್ನು ಸುಲಿಗೆಮಾಡಲು ಬಂದ ವಿಠೋರಾಮೋಶಿ ಎಂಬ ದರೋಡೆಗಾರನು ಕೂಡ ತನ್ನ ದುರ್ವೃತ್ತಿಯನ್ನು ಬಿಟ್ಟು ಸದ್ಗೃಹಸ್ಥನಾದನು. ಮಹಾರಾಜರಿಗೆ ವೈರಾಗ್ಯವೆಂಬ ನೆವದಿಂದ ಮೂಲೆಹಿಡಿದು ಕೂಡುವ ಸೋಮಾರಿಗಳನ್ನು ಕಂಡರೆ ಮಾತ್ರ ಆಗುತ್ತಿರಲಿಲ್ಲ. ತಾವೂ ಒಂದು ಗಳಿಗೆ ಸುಮ್ಮನಿರುತ್ತಿರಲಿಲ್ಲ; ತಮ್ಮಲ್ಲಿರುವ ಶಿಷ್ಯರಿಗೂ ಯಾವದಾದರೊಂದು ವ್ಯವಹಾರದ ಅಥವಾ ಪರಮಾರ್ಥ ಸಂಬಂಧವಾದ ಕೆಲಸವನ್ನು ಹಚ್ಚುತ್ತಿದ್ದರು. ಶ್ರೀಕೃಷ್ಣಪರಮಾತ್ಮನು ಕರ್ಮಯೋಗವನ್ನು ಉಪದೇಶಿಸಿದ್ದಲ್ಲದೆ ತನ್ನ ಉದಾಹರಣೆಯಿಂದ ನಿಷ್ಕಾಮಕರ್ಮವನ್ನು ಜನರಿಗೆ ತೋರಿಸಿದಂತೆಯೇ ಇವರು ಬೆಳಗಿನ ಝಾವದಿಂದ ರಾತ್ರೆ ಒಂದೆರಡು ಝಾವಗಳು ಕಳೆಯುವವರೆಗೂ ಜನರ ಅನುತನು ನೋಡುವದು ಅಲ್ಲಲ್ಲಿ ಪ್ರಾಸಂಗಿಕವಾಗಿ ಉಪದೇಶದ ಮಾತುಗಳಾಡುವದು, ತ್ರಿಕಾಲದಲ್ಲಿ ರಾಮಪೂಜೆಗೆ ಏರ್ಪಡಿಸಿ ಜನರನ್ನು ಸದ್ವರ್ತನೆಗೆ ಹೆಚ್ಚುವದು, ಭಜನೆ, ಜಪ, ಪುರಾಣ, ಪಾರಾಯಣ ಇವುಗಳನ್ನು ಸಂತತವಾಗಿ ನಡೆಸುತ್ತಿರುವದು, ಇವೇ ಮುಂತಾದ ರೀತಿಯಿಂದ ಮೂರ್ತಿಮಂತ ನಿಷ್ಕಾಮಕರ್ಮವಾಗಿರುತ್ತಿದ್ದರು. ದೂರದೇಶದಿಂದ ಬಂದು ಬುದ್ಧಿವಾದವನ್ನು ಕೇಳುವವರಿಗೆ ಬೆಳಗ್ಗೆ ಎದ್ದು ಸಾಯಂಕಾಲ ಮಲಗುವವರೆಗೆ ನಡೆಸಬೇಕಾದ ದಿನಚರ್ಯೆಯನ್ನು ಅವರವರ ಲೌಕಿಕಸ್ಥಿತಿಯನ್ನನುಸರಿಸಿ ಬರಸಿಕೊಡುತ್ತಿದ್ದರು. ಪಂಡಿತರು ಪಾಮರರು, ಬ್ರಾಹ್ಮಣರು ಅಬ್ರಾಹ್ಮಣರು, ಹಿಂದುಗಳು, ಉಳಿದವರು - ಎಂಬ ಭೇದವನ್ನು ಎಣಿಸದೆ ಇವರು ಸರ್ವಸಮತೆಯಿಂದ ಗುಣಪಕ್ಷಪಾತಿಗಳಾಗಿ

ದ್ದರು. ತಮ್ಮ ತಮ್ಮ ಕರ್ಮದಿಂದ ಭಗವದರ್ಚನೆ ಮಾಡಬೇಕೆಂದೂ ಭಗವನ್ನಾಮಸ್ಮರಣೆಯಿಂದಲೇ ಈ ಸಂಸಾರದಿಂದ ದಾಟಲಾಗುವದೆಂದೂ ಎಲ್ಲರಿಗೂ ಬೋಧಿಸುತ್ತಿದ್ದರು.

ಮಹಾರಾಜರು ಯಾವ ಭಾಷ್ಯವನ್ನಾಗಲಿ ಉದ್ಗ್ರಂಥವನ್ನಾಗಲಿ ಬರೆಯಲಿಲ್ಲ. ಆದರೂ ಅವರ ನಡೆಯಿಂದ ಸರ್ವಶಾಸ್ತ್ರಗಳಲ್ಲಿಯೂ ಕಂಡುಬರುವ ಜ್ಞಾನಿಗಳ ಲಕ್ಷಣಕ್ಕೆ ಇವರು ಉದಾಹರಣೆಯೆಂದು ಭಾವಿಸಿದವರು ಈಗಲೂ ಅನೇಕರು ಇರುತ್ತಾರೆ. ಇವರು ಆಡಿದ ಉತ್ತಮವಾದ ಉಪದೇಶಗಳನ್ನು ಕೇಳಿದವರು ಆ ಮಾತುಗಳನ್ನು ಮೂಲಮಂತ್ರವಾಗಿ ಭಾವಿಸಿರುತ್ತಾರೆ. ಇವರು ಅಲ್ಲಲ್ಲಿ ಬರೆದಿರುವ ಪತ್ರಗಳಲ್ಲಿಯೂ ಆಗಾಗ್ಗೆ ಹಾಡಿರುವ ಮಹಾರಾಷ್ಟ್ರದ ಅಭಂಗಗಳಲ್ಲಿಯೂ ವೇದವಾಕ್ಕೆಂಬ ಭಾವನೆಯನ್ನು ಎಷ್ಟೋ ಜನರು ಇಟ್ಟಿರುವರು. ಇಂಥ ಉಪದೇಶಗಳು, ಪತ್ರಗಳು, ಅಭಂಗಗಳು – ಇವುಗಳನ್ನೆಲ್ಲ ಸಂಗ್ರಹಿಸಿ ಇವರ ಯಥಾಸ್ಥಿತ ಚರಿತ್ರೆಯನ್ನು ನಿಷ್ಪಕ್ಷಪಾತದೃಷ್ಟಿಯಿಂದ ಅಧಿಕಪ್ರಸಂಗವಿಲ್ಲದೆ ಶಿಷ್ಯರಲ್ಲದ ಭಾವಿಕ ಜನರಿಗೂ ಒಪ್ಪಾಗುವಂತೆ ಬರೆಯುವದು ಅತ್ಯವಶ್ಯವಾದ ಕಾರ್ಯವಾಗಿರುವದು.

★★★★★

# ಶ್ರೀ ಬ್ರಹ್ಮಚೈತನ್ಯ ಸದ್ಗುರು ಮಹಾರಾಜರವರು

–ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಮಾರ್ಗಶೀರ್ಷಬಹುಳ ದಶಮಿಯ ದಿನವು ಶ್ರೀಗೋಂದಾವಲಿಯ ಬ್ರಹ್ಮ ಚೈತನ್ಯಸದ್ಗುರುಮಹಾರಾಜರವರ ಪುಣ್ಯದಿನವು. ಶ್ರೀಗುರು ಮಹಾರಾಜರವರು ಸಮಾಜಸಂಸ್ಕಾರ, ಸ್ವದೇಶೀಯಪ್ರಚಾರ, ರಾಜಕೀಯಕ್ರಾಂತಿ – ಮುಂತಾದ ಯಾವದೊಂದು ಆಧುನಿಕಪದ್ಧತಿಯ ಪ್ರಖ್ಯಾತಿಕಾರ್ಯವನ್ನು ಕೈಕೊಳ್ಳದಿದ್ದರೂ, ಅವರ ಯಶಸ್ಸನ್ನು ಹರಡುವದಕ್ಕೆಂದು ಯಾವದೊಂದು ಮಾಸಪತ್ರಿಕೆಯೇ ಮುಂತಾದ ಸಾಧನವೂ ಏರ್ಪಡಲಿಲ್ಲವಾದರೂ, ಅವರ ಹೆಸರು ಮಾತ್ರ ಉತ್ತರದೇಶದಲ್ಲಿಯೂ ದಕ್ಷಿಣದೇಶದಲ್ಲಿಯೂ ಮೂಲೆಮೂಲೆಯಲ್ಲಿರುವ

ಹಳ್ಳಿಗಳಲ್ಲಿ ಕೂಡ ಹಬ್ಬಿರುತ್ತದೆ. ಅವರ ಪವಿತ್ರಮೂರ್ತಿಯ ಚಿತ್ರವೂ ಲೆಕ್ಕವಿಲ್ಲದಷ್ಟು ಮನೆಗಳನ್ನು ಅಲಂಕರಿಸುತ್ತಿದೆ. ಅವರ ಪುಣ್ಯದಿನವನ್ನು ಸಾವಿರಗಟ್ಟಲೆಯಾಗಿ ಜನರು ಆಚರಿಸುವರು; ಅವರ ಜನ್ಮಸ್ಥಳವಾದ ಗೋಂದಾವಲಿಯು ಪರಮಪವಿತ್ರವಾದ ಕ್ಷೇತ್ರವೆಂದು ಯಾತ್ರಿಕರು ಭಾವಿಸುತ್ತಿರುವರು. ಅಲ್ಲಿ ಅವರ ಕೀರ್ತಿಶರೀರದ ಪ್ರಭೆಯಿಂದಲೇ ಇನ್ನೂ ಭಜನೆಯೂ ಉತ್ಸವಾದಿಗಳೂ ಎಂದಿನಂತೆ ನಡೆಯುತ್ತಲಿವೆ. ಇದೆಲ್ಲ ಹೇಗಾಯಿತು? ಜನರು ಅವರಲ್ಲಿದ್ದ ಯಾವ ಶಕ್ತಿಗೆ ಮರುಳಾಗಿ ಹೀಗೆ ಪರವಶರಾಗಿರುವರು? ಇದನ್ನು ಮನಸ್ಸಿಗೆ ತಂದುಕೊಳ್ಳುವದಕ್ಕೆ ಇದೊಂದು ಒಳ್ಳೆಯ ಸಮಯವು.

ಭರತಖಂಡವು ಪಾಶ್ಚಾತ್ಯದ ನಡೆನುಡಿಗಳನ್ನು ಎಷ್ಟೇ ಅನುಕರಿಸಲಿ, ಇನ್ನೂ ಈ ದೇಶದವರ ಹೃದಯದಲ್ಲಿ ಧರ್ಮದ ಬಿಸಿರಕ್ತವೇ ಉಕ್ಕೇರುತ್ತಿರುವದು. ಸಮಾಜಸುಧಾರಣೆಯಾಗಲಿ, ರಾಜಕೀಯನೀತಿಯಾಗಲಿ, ದೇಶಭಕ್ತಿಯಾಗಲಿ, ವಿದ್ಯಾಭ್ಯಾಸಪ್ರಸಾರಣೆಯಾಗಲಿ ಧರ್ಮದ ಮೂಲಕ ಮುಟ್ಟುವದೇ ಅವರಿಗೆ ಮನಮೆಚ್ಚಾಗುವದು. ಬಡವರು ಭಾಗ್ಯವಂತರು, ಹುಡುಗರು ಮುದುಕರು, ಪಂಡಿತರು ಪಾಮರರು – ಯಾರೇ ಆಗಲಿ ಧರ್ಮಮೂರ್ತಿಗಳಾದ ಸಾಧುಗಳನ್ನು ಕಂಡರೆ ಅವರನ್ನು ಪರಮಾತ್ಮನೇ ಎಂದು ಭಾವಿಸದೆ ಇರುವದಕ್ಕೆ ಅವರಿಗೆ ಆಗುವದೇ ಇಲ್ಲ. ನಮ್ಮ ಮಹಾರಾಜರವರು ಭರತಖಂಡದ ಜೀವನವಾದ ಧರ್ಮವನ್ನು ಉದ್ಧಾರಮಾಡುವದರಲ್ಲಿಯೇ ತಮ್ಮ ಜೀವಮಾನವನ್ನೆಲ್ಲ ತೇದಿರುತ್ತಾರೆ. ಇದೇ ಅವರ ಹೆಸರುವಾಸಿಗೆ ಮೂಲಕಾರಣವು.

ಧರ್ಮಪ್ರಸಾರಕರು ಎರಡು ಬಗೆ: ಭಕ್ತಿಧ್ಯಾನವೈರಾಗ್ಯವೇ ಮುಂತಾದ ಸಾಧನಗಳ ಬೆಲೆಯನ್ನು ತಮ್ಮ ನಡೆನುಡಿಗಳಿಂದ ಜನರಿಗೆ ಮನಗಾಣಿಸಿ ಆ ಸಾಧನಗಳ ಅನುಷ್ಠಾನಕ್ಕೆ ತಕ್ಕ ಉಪಾಯವನ್ನು ಕೈಕೊಳ್ಳುವವರು ಒಂದು ಪಂಗಡ; ಈ ಸಾಧನಗಳಿಗೆ ಆಧಾರವಾದ ತತ್ತ್ವವನ್ನು ಸಿದ್ಧಾಂತಗೊಳಿಸಿ ಭಾಷ್ಯಾದಿಗ್ರಂಥಗಳನ್ನು ನಿರ್ಮಾಣಮಾಡಿ ಧರ್ಮಪ್ರಸಾರಣೆಗೆ ಮೂಲಸ್ತಂಭದಂತೆ ಇರುವ ಮಹಾಶಿಷ್ಯರನ್ನು ಸಜ್ಜುಗೊಳಿಸುವವರು ಇನ್ನೊಂದು ಪಂಗಡ. ಎರಡನೆಯ ಪಂಗಡದವರ ಮಹಿಮೆಯು ಪಂಡಿತರಿಗೆ

ಮಾತ್ರ ಮನದಟ್ಟಾಗುವದು. ಮಿಕ್ಕವರು ಆ ಪಂಡಿತರ ಮೂಲಕ ಆ ಮಹಾಶಯರ ಹೆಚ್ಚುಗಾರಿಕೆಯನ್ನು ತಿಳಿದುಕೊಳ್ಳಬೇಕಾಗಿರುವದು. ಆದರೆ ಮೊದಲನೆಯ ಪಂಗಡದವರು ಹಾಗಲ್ಲ, ನೇರಾಗಿ ಜನ ಸಾಮಾನ್ಯಕ್ಕೇ ಅವರು ಬೋಧನೆಮಾಡುವದರಿಂದ ಅವರ ಮಹಿಮೆಯು ಪಂಡಿತರಿಗೂ ಪಾಮರರಿಗೂ ಸಮವಾಗಿಯೇ ಮೆಚ್ಚಾಗುವದು. ನಮ್ಮ ಮಹಾರಾಜರವರು ಈ ಪಂಗಡಕ್ಕೆ ಸೇರಿದವರು. ಅವರು ಭರತಖಂಡದ ಅನೇಕ ಪ್ರದೇಶಗಳಲ್ಲಿ ಸ್ಥಾಪಿಸಿರುವ ರಾಮಮಂದಿರಗಳು; ಅಲ್ಲಿ ರಾಮನಾಮಕೀರ್ತನೆ, ಜಪ, ಭಜನೆ, ಪಾರಾಯಣ, ಪುರಾಣಶ್ರವಣ - ಮುಂತಾದ ಸಾಧನಗಳು ಸತತವಾಗಿ ನಡೆಯುವಂತೆ ಏರ್ಪಡಿಸಿದ ಅವರ ಅಗಾಧಪ್ರೇಮ; ಜಾತಿಮತಗಳ ಬಿಕ್ಕಟ್ಟನ್ನು ಮುಂದಕ್ಕೆ ಚಾಚುವ ಕರ್ಮಾನುಷ್ಠಾನಕ್ಕಿಂತಲೂ ಕಲಿಯುಗಕ್ಕೆ ಮುಖ್ಯಸಾಧನವಾದ ಭಗವನ್ನಾಮಸ್ಮರಣೆಯನ್ನೇ ಹೆಚ್ಚಾಗಿ ಉಪದೇಶಮಾಡಿದ ಮರ್ಮಜ್ಞತೆ - ಇವೆಲ್ಲ ಅವರ ಕೀರ್ತನೆಯು ಎಲ್ಲೆಲ್ಲಿಯೂ ಹಬ್ಬುವದಕ್ಕೆ ಕಾರಣವಾದವು.

ಅವರ ಬಾಯಿಂದ ಬಂದ ಭಗವನ್ನಾಮವು ಹತ್ತಿರವಿರುವವರನ್ನು ಹುರುಪುಗೊಳಿಸಿ ನಾಮಭಜನೆಗೆ ಕೂಡಲೆ ಅವರನ್ನು ಹಚ್ಚುತ್ತಿತ್ತು; ವಿಷಯಗಳಲ್ಲಿ ವಿರಕ್ತಿಯನ್ನುಂಟುಮಾಡುತ್ತಿತ್ತು; ಮೈಮೇಲಿನ ನೆನಪು ಹಾರಿ ಹೋಗುವ ಒಂದು ಬಗೆಯ ಆನಂದವನ್ನುಂಟುಮಾಡುತ್ತಿತ್ತು; ಒಣತರ್ಕವಾದಗಳ ಗೋಜಿಗೆ ಎಂದೆಂದಿಗೂ ಹೋಗದೆ ಇಂಥ ನಾಮಾಮೃತಪಾನದಲ್ಲಿಯೇ ಕಾಲವನ್ನು ಕಳೆಯುವದೇ ಮನುಷ್ಯಜನ್ಮಕ್ಕೆ ಸಾರ್ಥಕ್ಯವೆಂಬ ಭಾವವನ್ನು ಬೇರೂರಿಸುತ್ತಿತ್ತು. ಈ ಭಾವದ ಹುಚ್ಚು ತಲೆಗೇರಿದ ಮಹನೀಯರಾದ ಅವರ ಮುಖ್ಯಶಿಷ್ಯರು ತಾವು ತಾವು ಇರುವ ಕಡೆಯಲ್ಲಿ ಮಂದಿರಗಳನ್ನು ಸ್ಥಾಪಿಸುವದು, ಭಕ್ತಿಮಾರ್ಗವನ್ನು ಬೆಳೆಯಿಸುವದು - ಮುಂತಾದ ಸತ್ಕಾರ್ಯಗಳನ್ನು ಸಂಬಳಕ್ಕೆ ದುಡಿಯುವ ಭಂಟರಿಗಿಂತಲೂ ಹೆಚ್ಚಿನ ಆದರದಿಂದಲೇ ಮಾಡುತ್ತಿದ್ದರು. ಈ ಕಾರ್ಯದ ಮೂಲಕಜನರ ಬುದ್ಧಿಯಲ್ಲಿ ಸಂಸ್ಕಾರ, ತತ್ತ್ವವಿಚಾರದಲ್ಲಿ ಆದರ, ಸ್ವದೇಶದಲ್ಲಿಯೂ ಸ್ವಧರ್ಮದಲ್ಲಿಯೂ ಮಿಗಿಲಿಲ್ಲದ ಪ್ರೇಮ - ಇವೆಲ್ಲ ಬೇಡವೆಂದರೂ ತಾವೇ ಉಂಟಾಗಿಬಿಡುತ್ತಿದ್ದವು.

ಗುರುಮಹಾರಾಜರವರ ಇಂಥ ಹೆಸರುಗೊಂಡ ಅನೇಕ ಶಿಷ್ಯರಲ್ಲಿ ಕುರ್ತಕೋಟಿಯ ಶ್ರೀಮಹಾಭಾಗವತರೊಬ್ಬರು. ಅವರು ಇಂಗ್ಲಿಷು, ಸಂಸ್ಕೃತಗಳಲ್ಲಿ ಉದ್ದಾಮಪಂಡಿತರಾಗಿ ಡಾಕ್ಟರ್ ಕುರ್ತಕೋಟಿ, ಪಿ.ಎಚ್.ಡಿ - ಎಂಬ ಹೆಸರಿನಿಂದ ಪ್ರಸಿದ್ಧರಾಗಿದ್ದು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಗೋದಾವರೀತೀರದ ನಾಸಿಕಪಟ್ಟಣದಲ್ಲಿ ವಾಸ್ತವ್ಯವನ್ನು ಮಾಡಿರುತ್ತಾರೆ. ಅವರಿಂದ ರಚಿತವಾದ ಅಷ್ಟೋತ್ತರಶತಶ್ಲೋಕಿಯೆಂಬ ಗ್ರಂಥದಿಂದ ಆರಿಸಿದ ನಮ್ಮ ಮಹಾರಜರವರ ಸ್ತೋತ್ರವನ್ನೊಳಕೊಂಡ ಎಂಟು ಶ್ಲೋಕಗಳನ್ನು ವಾಚಕರಿಗಾಗಿ ಸಮರ್ಪಿಸಿರುತ್ತೇನೆ.

★★★★★

# ನಾನು ಕಂಡಿದ್ದ ಸಾಧುವರ್ಯರು

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಶ್ರೀ ಪ್ರಮಾದೀಚಸಂಚತ್ಸರದ ಮಾರ್ಗಶೀರ್ಷ ಬಹುಳ ದಶಮಿಯ ದಿನ ಒಬ್ಬ ಮಹಾಸಾಧುಗಳು ಮಹಾರಾಷ್ಟ್ರದೇಶದಲ್ಲಿ ತಮ್ಮ ಲೀಲಾವತಾರವನ್ನು ಸಮಾಪ್ತಿಗೊಳಿಸಿ ಭಕ್ತರ ಹೃದಯದಲ್ಲಿ ನೆಲಸಿದರು. ಪ್ರತಿವರ್ಷದ ಮಾರ್ಗಶೀರ್ಷದಲ್ಲಿಯೂ ಅವರ ಪುಣ್ಯದಿನವನ್ನು ಲಕ್ಷಗಟ್ಟಲೆಯ ಶಿಷ್ಯರು ಭರತಖಂಡದಲ್ಲೆಲ್ಲ ಆಚರಿಸುತ್ತಿರುವರು. ಅವರೇ **ಶ್ರೀಗೋಂದಾವಲಿಯ ಬ್ರಹ್ಮಚೈತನ್ಯ ಸದ್ಗುರುಮಹಾರಾಜರವರು.** ಭಕ್ತಮಂಡಲಿಯು ಅವರನ್ನು ಪರೋಕ್ಷನಾಮದಿಂದ ''**ಮಹಾರಾಜ**''ರೆಂದೇ ಸಂಬೋಧಿಸುತ್ತಿದೆ.

ನಾನು ಆ ಸಾಧುವರೇಣ್ಯರನ್ನು ನೋಡಿದ್ದು ಹದಿನೈದು ದಿನಗಳು ಮಾತ್ರ; ಅದೂ ಆಷಾಢಮಾಸದ ಗುರುಪೂರ್ಣಿಮೆಯ ಉತ್ಸವದ ಗಡಿಬಿಡಿಯಲ್ಲಿ. ಆದರೂ ಅವರ ಭವ್ಯಮೂರ್ತಿಯೂ ಅವರ ವರ್ತನೆಯ ಮತ್ತು ಉಪದೇಶಗಳ ಮಹಿಮೆಯೂ ನನ್ನ ಮನಸ್ಸಿನಲ್ಲಿ ಶಾಶ್ವತವಾಗಿ ಚಿತ್ರಿತವಾಗಿಬಿಟ್ಟಿವೆ!

ಮಹಾರಾಜರು ಬಹಳವಾಗಿ ಉಪದೇಶಮಾಡುತ್ತಿರಲಿಲ್ಲ. ಶ್ರೀರಾಮಮಂದಿವಾಗಿ ಮಾರ್ಪಟ್ಟಿದ್ದ ಅವರ ಮನೆಯ ಬಾಗಿಲು ಇಪ್ಪತ್ತು ನಾಲ್ಕು ಘಂಟೆಗಳೂ ಅತಿಥಿಗಳಿಗೆ ತರೆದೇ ಇರುತ್ತಿತ್ತು; ಅಲ್ಲಿ ಕಾಲಕಾಲಕ್ಕೆ ಪೂಜೆ, ಭಜನೆ, ಜಪ-ಮುಂತಾದವುಗಳು ನಡೆಯುತ್ತಿದ್ದವು; ಅವರು ಜನರ ಯೋಗಕ್ಷೇಮವನ್ನು ವಿಚಾರಿಸುವದು, ಕಾಲೋಚಿತವಾದ ಉಪದೇಶವಾಕ್ಯಗಳನ್ನಾಡುವದು-ಇದರಲ್ಲಿಯೇ ಹಗಲಿರುಳೂ ನಿರತರಾಗಿದ್ದರು. ದೇಹಾಭಿಮಾನವನ್ನು ಬಿಟ್ಟು ಸರ್ವಭಾವದಿಂದಲೂ ಭಗವಂತನನ್ನೇ ಸ್ಮರಿಸುತ್ತಾ ಪರೋಪಕಾರದಿಂದಲೇ ಜೀವಿತಕಾಲವನ್ನು ಕಳಿಯುವದೇ ಆನಂದದ ರಹಸ್ಯವೆಂಬ ಗುಟ್ಟು ಇಷ್ಟರಿಂದಲೇ ಜನರಿಗೆ ಸ್ಫುಟವಾಗುವಂತಿತ್ತು.

ಮಹಾರಾಜರ ಅವತಾರದ ಸಂಕ್ಷೇಪವೆಂದರೆ ಶ್ರೀರಾಮನಾಮಪ್ರಸಾರ. ರಘುಪತಿಯಾಗಿ ರಾಘುವನೆನಿಸಿದ್ದ ರಾಜಾರಾಮನು ಪತಿಪಾವನನಾದ ಸೀತಾ ರಾಮನೂ ಆಗಿದ್ದನೆಂಬುದನ್ನು ಎಂದಿಗೂ ಮರೆಯದಂತೆ ಅವರು ಭಜನೆಗೂ ಜಪಕ್ಕೂ ಆತನ ನಾಮಮಂತ್ರವನ್ನೇ ಜನರಿಗೆ ಉಪದೇಶಮಾಡಿದ್ದರು. ಶ್ರೀರಾಮನಾಮವು ಆಯುರಾರೋಗ್ಯೈಶ್ವರ್ಯಗಳಿಗೂ ಶಾಂತಿಸುಖಗಳಿಗೂ ಭಕ್ತಿಜ್ಞಾನವೈರಾಗ್ಯಗಳ ಸಿದ್ಧಿಗೂ ಸಿದ್ಧೌಷಧವಾದ ಏಕಮೂಲಿಕೆಯೆಂಬುದನ್ನು ತಮ್ಮ ಆಚರಣೆಯಿಂದಲೂ ತಮ್ಮ ಅನುಗ್ರಹದಿಂದ ಭರತಖಂಡದಲ್ಲಿ ಅಲ್ಲಲ್ಲಿ ಮಹಾವಿಭೂತಿಪುರುಷರೆನಿಸಿದ ಅನೇಕ ಸಚ್ಛಿಷ್ಯರ ಆಚರಣೆಯಿಂದಲೂ ಅತ್ಯಂತ ಅಜ್ಞರಿಗೂ ಮನದಟ್ಟಾಗುವಂತೆ ಮಾಡಿದ್ದರು. ಅವರ ಶಿಷ್ಯರಲ್ಲಿಯೂ ಭಕ್ತರಲ್ಲಿಯೂ ಈಗಲೂ ಅನೇಕರು ಆ ಭಾವನೆಯಿಂದಲೇ ತಮ್ಮ ಜೀವನವನ್ನು ಆನಂದಮಯವಾಗಿ ಮಾಡಿಕೊಂಡು ತಮ್ಮ ಸುತ್ತಮುತ್ತಲಿರುವವರನ್ನೂ ಸನ್ಮಾರ್ಗಕ್ಕೆ ಬಿಡುತ್ತಿದಾರೆ.

★★★★★

# ಶ್ರೀಬ್ರಹ್ಮಚೈತನ್ಯಾಷ್ಟಕ

- ಡಾ|| ಕುರ್ತಕೋಟಿ ಶ್ರೀಮಹಾಭಾಗವತರವರು

**ಜನ್ಮಾದ್ಯಸ್ಯ ಯತಸ್ತಥಾಪಿ ಯ ಇಹ ಗ್ರಾಮೇ ತು ಗೋನ್ದಾವಲೌ**
**ಸಂಭೂತಃ ಖಲು ಭೂಸುರೀಯಸುಕುಲೇ ಲೋಕೋದ್ಧಿಧೀರ್ಷಾವಶಾತ್।**
**ಯಶ್ಚಾನನ್ದಮಯೋಽಪಿ ಮೂರ್ತಕೃಪಯಾ ದೇಹೀವ ಮೂರ್ತ್ಯಾನಯಾ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ || 1 ||**

1. ಈ ಪ್ರಪಂಚದ ಜನ್ಮಸ್ಥಿತಿಲಯಗಳು ಯಾವಾತನಿಂದಲೇ ಆಗುವವೋ, ಆದರೂ ಯಾವಾತನು ಲೋಕವನ್ನು ಉದ್ಧಾರಮಾಡಬೇಕೆಂಬ ಇಚ್ಛೆಯಿಂದ ಗೋಂದಾವಲಿಯೆಂಬ ಗ್ರಾಮದಲ್ಲಿ ಬ್ರಾಹ್ಮಣಕುಲದಲ್ಲಿ ಹುಟ್ಟಿದನೋ, ಯಾವಾತನು ಆನಂದಸ್ವರೂಪವೇ ಆದರೂ ದೇಹಿಗಳ ಮೇಲಿನ ಕೃಪೆಯಿಂದ ಈ ಶರೀರವನ್ನು ತೆಗೆದು ಕೊಂಡು ದೇಹಿಯಂತೆ ತೋರಿಕೊಳ್ಳುತ್ತಿರುವನೋ ಆ ಸದ್ಗುರುಮಹಾರಾಜನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಭಜಿಸುತ್ತೇನೆ.

**ಗತ್ವಾ ನಿರ್ವಚನೀಯಮೇಕಮಪಿ ಯಂ ಶ್ರೀಬ್ರಹ್ಮಚೈತನ್ಯಸ-**
**ನ್ನಾಮಾಪಾಮರಪಣ್ಡಿತಾನ್ತಮಮಿತೈಃ ಸಪ್ರೇಮ ಸಂಗೀಯತೇ ।**
**ಯಶ್ಚ ಶ್ರೀಪುರುಷೋತ್ತಮೋಽಪಿ ವಿದಿತಃ ಸತ್ಪೂರುಷಃ ಸಾಂಪ್ರತಂ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ || 2 ||**

2. ಇಂಥ ಸ್ವರೂಪದವನೆಂದು ಹೇಳಲಿಕ್ಕೆ ಬಾರದಿರುವ ಯಾವ ಒಬ್ಬ ನಮ್ಮ ಪಾಮರರಿಂದ ಹಿಡಿದು ಪಂಡಿತರವರೆಗೂ ಲೆಕ್ಕವಿಲ್ಲದಷ್ಟು ಜನರು ಸೇರಿ, ಶ್ರೀಬ್ರಹ್ಮಚೈತನ್ಯನೆಂಬ ಒಂದು ನಾಮವನ್ನೇ ಪ್ರೇಮದಿಂದೊಡಗೂಡಿ ಗಾನಮಾಡುತ್ತಿರುವರೋ, ಯಾವಾತನು ಶ್ರೀಪುರುಷೋತ್ತಮನಾದ ಶ್ರೀಮಹಾವಿಷ್ಣುವೇ ಆದರೂ ಈಗ ಸತ್ಪುರುಷನೆಂಬ ಹೆಸರಿಂದ ಪ್ರಖ್ಯಾತಿಯನ್ನು ಹೊಂದಿರುವನೋ, ಆ ಸದ್ಗುರುಮಹಾರಾಜನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಭಜಿಸುವೆನು.

**ಯೋಽಧೀನೇನ ಸಮಾಶ್ರಿತಃ ಕಿಲ ಗುಣಾತೀತೋಽಪಿ ಸತ್ತ್ವೇನ ಸಂ -**
**ಶುದ್ಧೇನೈವ ಗುಣೇನ ತತ್ಸಗುಣತಾ ಯಸ್ಯ ಪ್ರಸಿದ್ಧೇದೃಶೀ ।**
**ನಿಷ್ಕರ್ಮಾಪಿ ಚ ಕರ್ಮಣೀವ ನಿರತೋ ಲೋಕೋಪಕಾರಾಯ ಯಃ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ ॥ 3 ॥**

3. ಯಾವಾತನು ನಿಜವಾಗಿ ಮೂರು ಗುಣಗಳನ್ನೂ ಮೀರಿದವನಾದರೂ ತನ್ನ ವಶದಲ್ಲಿರುವ ವಿಶುದ್ಧ ಸತ್ತ್ವಗುಣದಿಂದ ಕೂಡಿ ಪ್ರಸಿದ್ಧನಾಗಿರುವನೋ, ಯಾವಾತನು ನಿಜವಾಗಿ ಯಾವ ಕರ್ಮವನ್ನೂ ಮಾಡದವನಾದರೂ ಲೋಕೋಪಕಾರಣಕ್ಕಾಗಿ ಕರ್ಮದಲ್ಲಿ ನಿರತನಾದಂತೆ ಇರುವನೋ ಆ ಸದ್ಗುರುಮಹಾರಾಜಾನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ, ಆತನನ್ನೇ ಭಜಿಸುತ್ತೇನೆ.

**ಜ್ಞಾನಕ್ಷೀರಸಮುದ್ರಮನ್ತರಹಿತಂ ದಿವ್ಯಂ ಚ ಯಃ ಶೈಶವೇ**
**ನಿಶ್ಶೇಷಂ ಚುಲಕೀಚಕಾರ ಸಹಜಂ ಜ್ಞಾನಾತ್ಮಕೋಽಪಿ ಸ್ವಯಮ್**
**ಮುಕ್ತಿಂ ಚ ಸ್ವವಶೀಚಕಾರ ಸುಭಗಾಂ ಯೋ ನಿತ್ಯಮುಕ್ತೋಽಪಿ ಸನ್**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ ॥ 4 ॥**

4. ಯಾವಾತನು ಸ್ವಭಾವದಿಂದ ಜ್ಞಾನಸ್ವರೂಪವೇ ಆಗಿದ್ದರೂ ಬಾಲ್ಯದಲ್ಲಿಯೇ ಜ್ಞಾನದ ಹಾಲ್ಗಡಲನ್ನೆಲ್ಲ ಒಂದೇ ಗುಟುಕಿಗೆ ಕುಡಿದುಬಿಟ್ಟನೋ. ಯಾವಾತನು ನಿತ್ಯಮುಕ್ತನೇ ಆಗಿದ್ದರೂ, ಆ ಜ್ಞಾನದಿಂದ ಮುಕ್ತಿಯನ್ನು ತನ್ನ ವಶಪಡಿಸಿಕೊಂಡನೋ ಆ ಸದ್ಗುರುಮಹಾರಾಜನಿಗೆ ಸಾಷ್ಟಾಂಗನಮಸ್ಕಾರಮಾಡಿ, ಆತನನ್ನೇ ಭಜಿಸುತ್ತೇವೆ.

**ಶ್ರೀರಾಮೇತಿ ಜಪಃ ಶ್ರುತಃ ಕ್ವಚಿದಹೋ ಯಸ್ಯ ತ್ರಿಮಾಸಾತ್ಮನಃ**
**ಕಸ್ಮಿಂಶ್ಚಿತ್ಸಮಯೇ ಚ ಯೇನ ವಿಹಿತಂ ಕಾಶ್ಯಾಂ ಶವೋಜ್ಜೀವನಮ್ ।**
**ಯಸ್ಯೇದೃಗ್ಭಿರಮಾನುಷತ್ವಮಸಕೃತ್ಕೃತ್ಯೈರಭಿದ್ಯೋತಿತಂ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ ॥ 5 ॥**

5. ಯಾವಾತನು ಇನ್ನೂ ಮೂರು ತಿಂಗಳ ಕೂಸಾಗಿರುವಾಗಲೇ 'ಶ್ರೀರಾಮ' 'ಶ್ರೀರಾಮ' ಎಂಬ - ಜಪವನ್ನು ಮಾಡುತ್ತಿದ್ದದ್ದು ಕೇಳಬಂದಿತೋ, ಒಂದಾನೊಂದು ಕಾಲದಲ್ಲಿ ಯಾವಾತನು ಕಾಶಿಯಲ್ಲಿ ಶವಕ್ಕೆಕೂಡ ಜೀವವನ್ನು

ಕೊಟ್ಟನೋ ಯಾವಾತನು ಇಂಥ ಲೀಲೆಗಳಿಂದ ತನ್ನ ಅಮಾನುಷತ್ವವನ್ನು ಬಾರಿಬಾರಿಗೂ ತೋರ್ಪಡಿಸಿದನೋ, ಆ ಗುರುಮಹಾರಾಜನಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಆತನನ್ನೇ ಭಜಿಸುತ್ತೇನೆ.

**ಶ್ರೀಸೀತಾರಮಣಾಲಯಾ ಅಭಿನವಾ ಗ್ರಾಮೇ ಪುರೇ ಪತ್ತನೇ**
**ಸತ್‌ಕ್ಷೇತ್ರೇSಪಿ ಚ ತತ್ರ ತತ್ರ ಕತಿ ವಾ ಯೇನ ಪ್ರತಿಷ್ಠಾಪಿತಾಃ ।**
**ಏವಂ ಯೇನ ಚ ರಾಮದಾಸ್ಯಮಯನಂ ಮುಕ್ತೇರ್ವಿಶಾಲೀಕೃತಂ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ॥**

6. ಯಾವಾತನು ಹಳ್ಳಿಗಳಲ್ಲಿಯೂ ಪಟ್ಟಣಗಳಲ್ಲಿಯೂ ನಗರಿಗಳಲ್ಲಿಯೂ ಎಷ್ಟೋ ಹೊಸ ರಾಮಮಂದಿರಗಳನ್ನು ಸ್ಥಾಪನೆಮಾಡಿದನೋ ಮತ್ತು ಯಾವಾತನು ಈ ಮೂಲಕ ಮುಕ್ತಿಗೆ ಮಾರ್ಗವಾದ ರಾಮಭಕ್ತಿಯನ್ನು ವಿಸ್ತರಿಸಿದನೋ ಆ ಸದ್ಗುರುಮಹಾರಾಜನಿಗೆ ನಮಸ್ಕಾರಮಾಡಿ ಆತನನ್ನೇ ಭಜಿಸುವೆನು.

**ವೇದಾವೇದ್ಯಮಪಿ ಪ್ರಬೋಧಯತಿ ನನ್ವರ್ಥಂ ತು ಯದ್ಬೋಧನಂ**
**ಬ್ರಹ್ಮತ್ವೇSಪಿ ಚ ಯಃ ಪ್ರಮಾಣಮಚಲಂ ಸಾಕ್ಷಾತ್ಪರಬ್ರಹ್ಮಣಃ**
**ಯಚ್ಛಬ್ದಾಬ್ಧಿಜಮೇವ ನೇತರದತಸ್ತ್ವನ್ವರ್ಥನಾಮಾಮೃತಂ**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ ॥ 7 ॥**

7. ಯಾವಾತನು ಬೋಧನೆಯು ವೇದಕ್ಕೂ ನಿಲುಕದ ವಿಷಯವನ್ನು ಕೂಡ ಚೆನ್ನಾಗಿ ತಿಳಿಸಿಕೊಡುವನೋ, ಸಾಕ್ಷಾತ್ ಪರಬ್ರಹ್ಮವು ಬ್ರಹ್ಮವೆಂಬುದಕ್ಕೂ ಯಾವಾತನೇ ನಿಶ್ಚಲವಾದ ಪ್ರಮಾಣವಾಗಿರುವನೋ, ಯಾವಾತನ ವಚನಸಾಗರದಿಂದ ಹುಟ್ಟಿದ್ದೇ ಅನ್ವರ್ಥವಾಗಿಯೂ ನಾಮಾಮೃತವಾಗಿ ರುವದಲ್ಲದೆ ಬೇರೊಂದಲ್ಲವೋ, ಆ ಸದ್ಗುರುಮಹಾರಾಜನಿಗೆ ನಮಸ್ಕರಿಸಿ ಆತನನ್ನೇ ಭಜಿಸುತ್ತೇನೆ.

**ರೂಪಂ ಕರ್ಮ ಚ ಭಾಷಣಾದಿ ಸಕಲಂ ನೂನಂ ಯದೀಯಂ ಮಹೋ**
**ದಾರಂ ಸನ್ತತನಿಃಸ್ರವತ್ಸುಮಧುರದ್ರಾಕ್ಷಾದಿಧಿಕ್ಕೃದ್ರಸಮ್ ।**
**ಯಸ್ಯ ಶ್ರೀಚರಣಾಬ್ಜಸಾರಕಣಿಕಾ ಪೃಥ್ವೀಂ ಚ ನಿಃಸಾರಯೇತ್**
**ಸಾಷ್ಟಾಂಗಂ ಪ್ರಣಿಪತ್ಯ ಸದ್ಗುರುಮಹಾರಾಜಂ ತಮೇನಂ ಭಜೇ ॥**

8. ಯಾವಾತನ ರೂಪವೂ ಕರ್ಮವೂ ನಡೆನುಡಿಗಳೂ ಎಲ್ಲವೂ ಪರಮೌದಾರ್ಯದಿಂದ ಕೂಡಿರುವದೋ, ದ್ರಾಕ್ಷಿಯೇ ಮುಂತಾದ ಬಲು ಸಿಹಿಯಾದ ವಸ್ತುಗಳ ರಸವನ್ನು ಕಡೆಗಣಿಸುವ ಪ್ರೇಮರಸವನ್ನು ಸೂಸುತ್ತಲಿರುವದೋ, ಯಾವಾತನ ಶ್ರೀಚರಣಕಮಲದ ಒಂದು ತೊಟ್ಟು ಕೂಡ ಇಡಿಯ ಪೃಥ್ವಿಯನ್ನೇ ನಿಸ್ಸಾರವೆನಿಸುವದೋ ಆ ಶ್ರೀಗುರುಮಹಾರಾಜನಿಗೆ ಸಾಷ್ಟಾಂಗನಮಸ್ಕಾರವನ್ನು ಮಾಡಿ ಆತನನ್ನೇ ಭಜಿಸುತ್ತೇನೆ.

★★★★★

# ಶ್ರೀ ವಿದ್ಯಾರಣ್ಯಗುರುಗಳು

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಈ ಜ್ಯೇಷ್ಠ ಶುದ್ಧ ತ್ರಯೋದಶೀ ದಿನ ಶ್ರೀವಿದ್ಯಾರಣ್ಯಗುರುಗಳವರ ಆರಾಧನೆಯು ನಡೆಯುವದು. ''ವಿದ್ಯಾರಣ್ಯ'' ಎಂಬ ಹೆಸರು ಅನ್ವರ್ಥವಾಗಿರುವ ಈ ಮಹನೀಯರ ಕೀರ್ತಿಯು ಕೇವಲ ಅವರ ಶಿಷ್ಯಪರಂಪರೆಯಲ್ಲಿ ಮಾತ್ರವಲ್ಲದೆ ವಿದ್ಯಾಪಕ್ಷಪಾತಿಗಳಾದ ಈ ದೇಶದ ಮತ್ತು ಪಾಶ್ಚಾತ್ಯ ದೇಶಗಳ ವಿದ್ವಾಂಸರ ಪ್ರಯತ್ನದಿಂದ ನಾಗರಿಕಪ್ರಪಂಚದಲ್ಲೆಲ್ಲಾ ಹರಡಿರುವದು. ಇವರು ಕರ್ಣಾಟಕದಲ್ಲಿ ತಮ್ಮ ಕಾರ್ಯಕ್ಷೇತ್ರದ ಕೇಂದ್ರವನ್ನಿಟ್ಟಿದ್ದವರಾದ್ದರಿಂದಲೂ ಅಧ್ಯಾತ್ಮವಿಚಾರಗಳನ್ನು ಪ್ರಚಾರಪಡಿಸುವದರಲ್ಲಿ ತಮ್ಮ ಜೀವಿಕೆಯನ್ನೆಲ್ಲ ಕಳೆದವರಾದ್ದರಿಂದಲೂ ಅವರ ಉಪಕಾರಸ್ಮರಣೆಯನ್ನು ಆರಾಧನೆಯದಿನ ಮಾಡಿಕೊಳ್ಳುವದಕ್ಕೆ ಅನುಕೂಲವಾಗುವಂತೆ ಇಲ್ಲಿ ಕೆಲವು ವಿಷಯಗಳನ್ನು ಸೂಚಿಸುತ್ತೇವೆ.

ಶ್ರೀವಿದ್ಯಾರಣ್ಯರ ಪೂರ್ವಾಶ್ರಮದ ಹೆಸರು ಮಾಧವಾಚಾರ್ಯರು. ಮಾಧವಾಚಾರ್ಯರು ಬುಕ್ಕ ಮತ್ತು ಹರಿಹರರೆಂಬ ವಿಜಯನಗರದ ರಾಜರುಗಳಲ್ಲಿ ಮಂತ್ರಿಗಳಾಗಿದ್ದು ಆಗಲೆ ತಮ್ಮ ಪಾಂಡಿತ್ಯಬಲದಿಂದ ಅನೇಕ ಗ್ರಂಥಗಳನ್ನು ರಚಿಸಿದರೆಂದೂ ತಮ್ಮ ಸಹೋದರರಾದ ಸಾಯಣ, ಭೋಗನಾಥ ಇವರುಗಳ ಸಹಾಯದಿಂದ ಅಸಾಧಾರಣವಾದ ವಿದ್ಯಾಪ್ರಸಾರವನ್ನು ಮಾಡಿದರೆಂದೂ

ಮತಪ್ರವರ್ತನೆಯಲ್ಲಿಯೂ ತುಂಬ ಪ್ರಯತ್ನಮಾಡಿದರೆಂದೂ ಗ್ರಂಥಗಳಲ್ಲಿ ಅಲ್ಲಲ್ಲಿ ಹೇಳಿರುವದು ಕಂಡುಬರುವದಲ್ಲದೆ. ಇವರು ಬಾಹುಬಲದಲ್ಲಿಯೂ ದ್ರೋಣಾಚಾರ್ಯರಂತೆ ವೀರಶ್ರೇಷ್ಠರಾಗಿದ್ದು ಗೋವಾ ಮೊದಲಾದ ಸ್ಥಳಗಳಲ್ಲಿ ಯುದ್ಧವನ್ನು ಕೂಡ ಮಾಡಿದಂತೆ ಜನರು ನಂಬುತ್ತಾರೆ. ಆದರೆ ಈಚೆಗೆ ಕೆಲವರು ಇತಿಹಾಸ ವಿಮರ್ಶಕರು ಮಾಧವಾಚಾರ್ಯರು ಇಬ್ಬರಿದ್ದರೆಂದೂ ಇಬ್ಬರೂ ಸುಮಾರು ನಾಲ್ಕನೆಯ ಶತಮಾನದಲ್ಲಿ ವಿಜಯನಗರದಲ್ಲಿ ಅಮಾತ್ಯರಾದ್ದರೆಂದೂ ಈ ಇಬ್ಬರಲ್ಲಿ ಒಬ್ಬರಾದ ಭರದ್ವಾಜ ಗೋತ್ರೋದ್ಧವರಾದ ಮಾಧವಾಚಾರ್ಯರೇ ಶ್ರೀವಿದ್ಯಾರಣ್ಯರೆಂದೂ ಯುದ್ಧಪ್ರಿಯರಾದ ಮಾಧವಾಚಾರ್ಯರು ಮತ್ತೊಬ್ಬರೆಂದೂ ಊಹಿಸಿರುತ್ತಾರೆ. ಇದು ಹೇಗಾದರೂ ಇರಲಿ, ವಿದ್ಯಾರಣ್ಯರು ತಮ್ಮ ಪೂರ್ವಾಶ್ರಮದಲ್ಲಿ ಮಂತ್ರಿಪದವಿಯನ್ನು ವಹಿಸುವಷ್ಟು ಲೌಕಿಕಕಾರ್ಯ ದಲ್ಲಿ ವ್ಯಗ್ರರಾಗಿದ್ದು ವಿದ್ಯಾಕಾರ್ಯಕ್ಕೂ ತುಂಬ ಒತ್ತಾಸೆಕೊಟ್ಟರೆಂಬುದು ಸರ್ವಸಮ್ಮತವಾದ ಮಾತಾಗಿದೆ. ಇವರು ಮಂತ್ರಿಗಳಾಗಿದ್ದಾಗಲೇ ಇವರ ಹಸ್ತದಿಂದಲೋ ಪ್ರೋತ್ಸಾಹದಿಂದಲೋ **ವೇದಭಾಷ್ಯ, ಮೀಮಾಂಸ, ಜ್ಯೋತಿಷ, ವ್ಯಾಕರಣ, ವೈದ್ಯ** - ಮುಂತಾದ ಶಾಸ್ತ್ರಗಳಲ್ಲಿ ಮುಖ್ಯಮುಖ್ಯ ಗ್ರಂಥಗಳು ಪ್ರಸಿದ್ಧವಾದವು. ವೇದಭಾಷ್ಯವನ್ನು ಈಗ ನೋಡದವರಿಲ್ಲ. ನಮ್ಮವರು ವೇದಾರ್ಥವನ್ನು ಪರಿಶೀಲಿಸುವದಕ್ಕೆ ನೋಡುತ್ತಾರೆ; ಪಾಶ್ಚಾತ್ಯರನೇಕರು ಐತಿಹಾಸಿಕ ದೃಷ್ಟಿಯಿಂದ ಅದಕ್ಕೆ ತುಂಬ ಪೂಜ್ಯತೆಯನ್ನು ಕೊಡುತ್ತಾರೆ. **ಜೈಮಿನೀಯನ್ಯಾಯಮಾಲಾವಿಸ್ತರ, ಕಾಲಮಾಧವೀಯ, ಧಾತುವೃತ್ತಿ, ಯೋಗಪ್ರದೀಪಿಕೆ** - ಮುಂತಾದ ಗ್ರಂಥಗಳು ಈ ಮಹನೀಯರ ಅನುಗ್ರಹಫಲವಾಗಿ ಇಂದಿನವರೆಗೆ ಆಯಾಶಾಸ್ತ್ರದಲ್ಲಿ ವಿಷಯಪರಿಶೀಲನೆ ಮಾಡುವದಕ್ಕೆ ಜಿಜ್ಞಾಸುಗಳಿಗೆ ಬಹಳ ಸಹಾಯಮಾಡಿದೆ.

ಇನ್ನು ಇವರು ಲೌಕಿಕಕಾರ್ಯಗಳಿಂದ ವಿಶ್ರಾಂತರಾದ ಬಳಿಕ, **ನೂರೆಂಟು ಉಪನಿಷತ್ತುಗಳಿಗೆ ದೀಪಿಕೆ, ಪಂಚದಶಿ, ಅನುಭೂತಿಪ್ರಕಾಶ** ಮೊದಲಾದ ವೇದಾಂತ ಗ್ರಂಥಗಳನ್ನು ರಚಿಸಿದವರಾದರು. **ವಿವರಣಪ್ರಮೇಯ ಸಂಗ್ರಹ, ಸೂತಸಂಹಿತೆಯ ತಾತ್ಪರ್ಯದೀಪಿಕೆ, ಜೀವನ್ಮುಕ್ತಿವಿವೇಕ** ಮೊದಲಾದ ಗ್ರಂಥಗಳೂ ಇವರೇ ನಿರ್ಮಾಣಮಾಡಿದವುಗಳೆಂದು ಅನೇಕರು ಭಾವಿಸುತ್ತಾರೆ. ಈ ಎಲ್ಲಾ ಗ್ರಂಥಗಳೂ ಉದಾತ್ತವಿಚಾರಗಳಿಂದ ಕೂಡಿ ಮುಮುಕ್ಷುಗಳಿಗೆ ಪ್ರಮೋದವನ್ನುಂಟುಮಾಡುವ ಪ್ರಬಂಧಗಳಾಗಿವೆ.

ಇವರು ಲೌಕಿಕಕಾರ್ಯದಲ್ಲಿ ದಕ್ಷರು; ವಿದ್ಯೆಯಲ್ಲಿ ''ಸರ್ವಜ್ಞ''ರೆಂದೆನಿಸಿಕೊಂಡವರು, ವಿದ್ಯಾಪಕ್ಷಪಾತಿಗಳಾಗಿ ಬ್ರಾಹ್ಮಣರಿಗೆ ಗ್ರಾಮಾದಿಗಳನ್ನು ದಾನಮಾಡಿದ ಉದಾರರು; ಧರ್ಮಪ್ರಸಾರದಲ್ಲಿ ಬದ್ಧಾದರರು; ಸಂನ್ಯಾಸವನ್ನು ತೆಗೆದುಕೊಂಡು ವೇದಾಂತವಿಚಾರದಲ್ಲಿ ಮಗ್ನರಾಗಿ ಪ್ರಪಂಚವನ್ನು ಕಸಕ್ಕೆ ಕಡೆಯಾಗಿ ಕಂಡ ವಿರಕ್ತಶಿಖಾಮಣಿಗಳು. ಅದ್ವೈತ ಭಾಷ್ಯಕಾರರ ಸಂಪ್ರದಾಯವನ್ನು ಶೃಂಗೇರಿಯಲ್ಲಿ ಮಠಾಧಿಪತಿಗಳಾಗಿ ನಿಂತು ನಡೆಸಿದ ಜ್ಞಾನನಿಷ್ಠರು. ಇಂಥ ಮಹನೀಯರು ನಮ್ಮ ಕರ್ಣಾಟಕದಲ್ಲಿ ಜನಿಸಿ ನಮ್ಮಗಳಿಗೊಂದು ಉಚ್ಚವಾದ ಧ್ಯೇಯವಾಗಿ ಪರಿಣಮಿಸದ್ದೇ ನಮ್ಮ ಭಾಗ್ಯವು.

★★★★★

# ಶ್ರೀ ಮಧ್ವಾಚಾರ್ಯರು

**-ಶ್ರೀನಿವಾಸಮೂರ್ತಿ, ವೇದಾಂತಶಿರೋಮಣಿ**

ವೇದಾಂತದರ್ಥವನ್ನು ತಿಳಿಸುವ ಸುಪ್ರಸಿದ್ಧರಾದ ಭಾಷ್ಯಕಾರರುಗಳಲ್ಲಿ ಶ್ರೀಮಧ್ವಾಚಾರ್ಯರವರು ಒಬ್ಬರಾಗಿರುತ್ತಾರೆ. ಇವರ ಅನುಯಾಯಿಗಳೂ ಇವರ ಸಿದ್ಧಾಂತದಲ್ಲಿ ಆದರವಿರುವವರೂ ನಮ್ಮ ಕರ್ಣಾಟಕದಲ್ಲಿ ಅನೇಕರಿರುವರು. ಇಂಥವರ ಸಲುವಾಗಿ ಇವರ ಚರಿತ್ರೆಯನ್ನು ಅತಿ ಸಂಕ್ಷೇಪವಾಗಿ ಶ್ರೀಮಧ್ವವಿಜಯವೇ ಮುಂತಾದ ಗ್ರಂಥಗಳ ಆಧಾರದಮೇಲೆ ಇಲ್ಲಿ ಬರೆಯುತ್ತೇನೆ.

ಶ್ರೀಪಾಜಕಕ್ಷೇತ್ರದಲ್ಲಿಮಧ್ಯಗೇಹಭಟ್ಟನೆಂಬಬ್ರಾಹ್ಮಣನುವಾಸಿಸುತ್ತಿದ್ದನು. ಅವನು ಆಸ್ತಿಕನಾದ್ದರಿಂದ ವೇದೋಕ್ತವಾದ ಕರ್ಮಗಳನ್ನು ಆಚರಿಸುತ್ತಾ ಸದಾಚಾರಸಂಪನ್ನನಾಗಿಯೂ ಶ್ರೀಮಹಾವಿಷ್ಣುವಿನಲ್ಲಿ ಭಕ್ತಿ ವಿಶ್ವಾಸಗಳಿಂದ ಕೂಡಿದವನಾಗಿಯೂ ಇರುತ್ತಿದ್ದನು. ಇವನು ಕೇವಲ ಆಚಾರಸಂಪನ್ನನು ಮಾತ್ರವೇ ಅಲ್ಲದೆ ''**ವಿಜ್ಞಾನಭಾರತಪುರಾಣಮಹಾರಹಸ್ಯಂ ಯಂ ಭಟ್ಟ ಇತ್ಯಭಿವದನ್ತಿ ಜನಾ ವಿನೀತಮ್**'' ಎಂದಂತೆ ಭಾರತ ಪುರಾಣಗಳ ಮಹಾರಹಸ್ಯವನ್ನೆಲ್ಲಾ ಅರಿತವನಾಗಿದ್ದದ್ದರಿಂದ ಈತನನ್ನು ಜನರು ಭಟ್ಟನೆಂದೇ ಕರೆಯುತ್ತಿದ್ದರು.

ಈತನು ಬಹುಕಾಲ ಉಡುಪಿಯ ಅನಂತೇಶ್ವರನನ್ನು ಸೇವೆಮಾಡಲು ಇವನ ತಪಸ್ಸಿನಿಂದ ತುಷ್ಟನಾದ ಶ್ರೀಹರಿಯ ಕೃಪಾಕಟಾಕ್ಷವು ಇವನ ಮೇಲೆ ಬಿದ್ದು ವೇದವತಿಯೆಂಬ ಈತನ ಪತ್ನಿಯು ಗರ್ಭವತಿಯಾಗಿ 1089ನೆಯ ಶಕೆಯ ವಿಜಯದಶಮಿಯದಿನ ಶುಭಮುಹೂರ್ತದಲ್ಲಿ ಒಂದು ಪುತ್ರ ರತ್ನವನ್ನು ಹಡೆದಳು. ಈ ಪುತ್ರರತ್ನವು ಸಾಕ್ಷಾದ್ವಾಯುದೇವರಲ್ಲದೆ ಬೇರೆಯಲ್ಲದ್ದರಿಂದ ತಂದೆ ತಾಯಿಗಳಿಗೆ ಮಾತ್ರವಲ್ಲದೆ ಸಮಸ್ತ ಜನರಿಗೂ ಅನಿರ್ವಾಚ್ಯವಾದ ಆನಂದವನ್ನುಂಟುಮಾಡುತ್ತಿತ್ತು. ಮಗುವಿಗೆ ಜಾತಕರ್ಮ ಮೊದಲಾದ ಕ್ರಿಯೆಗಳೆಲ್ಲವೂ ಮುಗಿದವು. ವಾಸುದೇವನೆಂದು ನಾಮಕರಣಮಾಡಿದರು. ವಾಸುದೇವನಲ್ಲಿ ಅತ್ಯಂತ ಭಕ್ತಿಯುಳ್ಳವರಾದ್ದರಿಂದಲೂ ಅಸುಗಳಿಗೆ ಎಂದರೆ ಪ್ರಾಣಗಳಿಗೆ ಯಜಮಾನರಾದ್ದರಿಂದಲೂ ಇವರಿಗೆ ವಾಸುದೇವನೆಂಬ ಹೆಸರು ಅನ್ವರ್ಥವಾಗಿರುತ್ತಿತ್ತು. ಈ ಮಗುವೇ ನಮ್ಮ ಶ್ರೀಮಧ್ವಾಚಾರ್ಯರು.

ಇವರು ಬಾಲ್ಯದಲ್ಲಿ ಅಗಾಧವಾದ ಲೀಲೆಗಳನ್ನು ತೋರಿ ತಂದೆ ತಾಯಿಗಳಿಗೂ ಮಿಕ್ಕವರಿಗೂ ಸಂತೋಷವನ್ನುಂಟು ಮಾಡುತ್ತಿದ್ದರು. ಮಗುವಾಗಿ ದ್ದಾಗಲೇ ಒಂದು ಸಲ ಇವರು ಬೇಯಿಸಿದ್ದ ಹುರುಳಿಯನ್ನು ತಿಂದು ಅರಗಿ ಸಿಕೊಂಡರಂತೆ! ಇನ್ನೊಂದು ಸಲ ಒಂದು ದಿನವೆಲ್ಲ ಒಂದು ಎತ್ತಿನ ಮೇಲೆ ಹತ್ತಿಕೊಂಡು ಸವಾರಿ ಮಾಡುತ್ತಿದ್ದು ಅದರೊಡನೆ ಸಾಯಂಕಾಲಕ್ಕೆ ಯಾವ ಅಪಾಯವೂ ಇಲ್ಲದ ಹಿಂತಿರುಗಿ ಬಂದರಂತೆ!! ಮತ್ತೂ ಒಂದು ಸಲ ತಮ್ಮ ತಂದೆಯು ತೆರಬೇಕಾಗಿದ್ದ ಸಾಲಕ್ಕಾಗಿ ಇವರು ಕೊಟ್ಟ ಹುಣಿಸೇಬೀಜಗಳಿಂದಲೇ ತೃಪ್ತನಾಗಿ ಯಾವ ಸಾಲವನ್ನೂ ಕೇಳದೆಯೇ ಸಾಹುಕಾರನು ಹಿಂತಿರುಗಿ ಹೋಗಿ ಬಿಟ್ಟನಂತೆ!!! ಇಂಥಾ ಲೀಲೆಗಳನ್ನೆಲ್ಲಾ ವರ್ಣಿಸುತ್ತಾ ಕೂತರೆ ಇನ್ನೊಂದು ರಾಮಾಯಣವೇ ಆಗುವದು. ಸ್ವಲ್ಪದರಲ್ಲಿ ಹೇಳಬೇಕೆಂದರೆ ಇವರ ಲೀಲೆಗಳಿಂದ ಮುಖ್ಯವಾಗಿ ಇವರ ಕಾಯಪುಷ್ಟಿ, ಬುದ್ಧಿಬಲ, ಶ್ರೀಹರಿಯಲ್ಲಿದ್ದ ಅನನ್ಯಭಕ್ತಿ ಇವು ಹೊರಬೀಳುತ್ತಿದ್ದವು. ಒಂದೊಂದು ಸಲ ಹುಡುಗನು ಮನೆಯಿಂದ ಹೊರಟು ಹೋಗಿ ಎಲ್ಲಿಯೋ ಕಾಡಿನಲ್ಲಿದ್ದುಕೊಂಡು ಭಜನೆಮಾಡುತ್ತಾ ಪ್ರಹ್ಲಾದನಂತೆ ಜತೆಗಾರರನ್ನೂ ಭಜನೆ ಮಾಡಿಸುತ್ತಾ ಇದ್ದುಬಿಡುತ್ತಿದ್ದನು. ಅಂಥ ವೇಳೆಗಳಲ್ಲಿ ಮನೆಯಲ್ಲಿ ತಂದೆತಾಯಿಗಳು ಮಗನನ್ನು ಕಾಣದೆ

**ವಿರಹಿತಸ್ವಜನಂ ಚರಣಪ್ರಿಯಂ ವಿವಿಧಭೂತಭಯಂಕರವರ್ತ್ಮನಿ ।
ಅಯಿ ಕೃಪಾಲಯ ಪಾಲಯ ಬಾಲಕಂ ಲಘು ಶುಭಸ್ಯ
ಮಮೇತ್ಯನಮದ್ದ್ವಿಜಃ ॥'' (ಮ. ವಿ. 3-15)**

ಎಂದಂತೆ ''ಕೃಪಾಳುವಾದ ಪರಮಾತ್ಮನೇ, ನನಗೆ ಮಂಗಳಕರನಾಗಿರುವ ನಿನ್ನಚರಣದಲ್ಲಿ ಪ್ರೀತಿಯಿಟ್ಟಿರುವ ಈ ಬಾಲಕನನ್ನು ಕಾಪಾಡು. ಅವನು ಭಯಂಕರವಾದ ವನಪ್ರದೇಶದಲ್ಲಿ ಒಬ್ಬನೇ ಇರುವನು'' ಎಂದು ಪ್ರಾರ್ಥಿಸಿಕೊಳ್ಳಬೇಕಾಗುತ್ತಿತ್ತು.

ಹುಡುಗನಿಗೆ ಸಕಾಲದಲ್ಲಿ ಅಕ್ಷರಾಭ್ಯಾಸವಾಯಿತು. ತಂದೆಯು ತಾನೇ ಕಲಿಸಲಿಕ್ಕೆ ಮೊದಲುಮಾಡಿದನು ಶ್ರೀಮಧ್ವಾಚಾರ್ಯರು ಸಾಕ್ಷಾದ್ವಾಯುವಿನ ಅವತಾರವಾದ್ದರಿಂದ ಎಲ್ಲವನ್ನೂ ವಾಯುವೇಗದಿಂದಲೇ ಕಲಿತರು. ಇವರಿಗೆ ಪುರಾಣಗಳ ಅರ್ಥವನ್ನು ಹೇಳಿಕೊಡುವದಕ್ಕೆ ತಂದೆಗೂ ತಡಿಬಿಡಿಯಾಗಹತ್ತಿತು. ಮುಂದೆ ಇವರಿಗೆ ಎಂಟನೆಯ ವಯಸ್ಸಿನಲ್ಲಿ ಉಪನಯನವಾಯಿತು. ಆಗಿನ ಪದ್ಧತಿಯಂತೆ ಗುರುಶುಶ್ರೂಷೆಯಲ್ಲಿ ಆಸಕ್ತರಾದರು. ಇವರಿಗೆ ಬೇಕಾದಷ್ಟು ಐಶ್ವರ್ಯವಿದ್ದರೂ ಬಡವರಂತೆಯೇ ಸಾಧಾರಣವಾದ ಬಟ್ಟೆಬರೆಗಳನ್ನೇ ಹಾಕಿಕೊಂಡು ಯಾವ ಒಡವೆ ವಸ್ತುಗಳನ್ನೂ ಧರಿಸದೆ ಸಾಧಾರಣ ಜನರಂತೆಯೇ ವರ್ತಿಸುತ್ತಿದ್ದದ್ದರಿಂದ ಇವರ ವೈರಾಗ್ಯಸಂಪತ್ತಿಯೂ ಆಗಲೇ ಪ್ರಕಟವಾಗಹತ್ತಿತು. ಈ ರೀತಿಯಲ್ಲಿ ವೈರಾಗ್ಯದಿಂದಲೂ ಭಕ್ತಿವಿಶ್ವಾಸಗಳಿಂದಲೂ ಗುರುಶುಶ್ರೂಷೆ ಮಾಡುತ್ತಾ ಅಧ್ಯಯನಕಾಲವನ್ನು ಕಳೆಯುತ್ತಿದ್ದ ಆಚಾರ್ಯರಿಗೆ ವೇದಗಳೂ ಶಾಸ್ತ್ರಗಳೂ ಹಳೆಯ ಪಾಠಗಳಾದವು, ಶ್ರವಣಮಾತ್ರದಿಂದಲೇ ಎಲ್ಲವನ್ನೂ ಕಲಿತುಬಿಡುತ್ತಿದ್ದರು. ಒಮ್ಮೆ ಗುರುಗಳ ಮುಂದೆ ಐತರೇಯ ಶ್ರುತಿಯನ್ನು ಧಾರಾಕಾರವಾಗಿ ಒಪ್ಪಿಸಿಬಿಟ್ಟು ಅರ್ಥವನ್ನು ಕೂಡ ವಿವರಿಸಿಬಿಟ್ಟರು. ಹೀಗೆ ವಿದ್ಯಾಭ್ಯಾಸವನ್ನು ಪರಿಪೂರ್ತಿಗೊಳಿಸಿ ಇವರು ಕೊನೆಯಲ್ಲಿ ಗುರುಗಳಿಗೆ ಕೊಟ್ಟ ಗುರುದಕ್ಷಿಣೆಯು ವಿಚಿತ್ರತರವಾದದ್ದು. ಕೇವಲ ನಶ್ವರವಾದ ಹಣ, ಗೋವು, ಭೂಮಿ, ಮೊದಲಾದನ್ನು ಕೊಡುವದು ಯೋಗ್ಯವಲ್ಲವೆಂದು ''**ಅಧ್ಯಾಪಕಾಯ ವಿತತಾರ ವಿಮೋಕ್ಷಬೀಜಂ ಗೋವಿಂದಭಕ್ತಿಮುಚಿತಾಂ ಗುರುದಕ್ಷಿಣಾಂ ಸಃ**'' **(3-15)** ಎಂಬಂತೆ ಗೋವಿಂದಭಕ್ತಿಯನ್ನೇ ಅವರಿಗೆ ಕೊಟ್ಟರು.

ವಿದ್ಯಾಭ್ಯಾಸವಾಗುತ್ತಲೇ ಇವರಿಗೆ ಸಂನ್ಯಾಸಾಶ್ರಮಸ್ವೀಕಾರಮಾಡಬೇಕೆಂಬ ಅಭಿಲಾಷೆ ಹುಟ್ಟಿತು. ''**ಯದಾ ವಿರಕ್ತಃ ಪುರುಷಃ ಪ್ರಜಾಯತೇ ತದೈವ ಸನ್ಯಾಸವಿಧಿಃ ಶ್ರುತೌ ಶ್ರುತಃ**'' (ಎಂದು ವಿರಕ್ತಿಯುಂಟಾಗುವದೋ ಆದಿನವೇ ಸಂನ್ಯಾಸವನ್ನು ಗ್ರಹಿಸಬೇಕೆಂದು ಶ್ರುತಿಯಿರುವದು). ಆದ್ದರಿಂದ ತಮಗೆ ತಮ್ಮನೊಬ್ಬನು ಜನಿಸುತ್ತಲೂ ಇವರು ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡಿದರು. ಆಗ ಪೂರ್ಣಬೋಧರೆಂದು ಇವರಿಗೆ ಹೆಸರಾಯಿತು. ''**ದಶಪ್ರಮತಿಂ ಜನಯನ್ತ ಯೋಷಣಃ**'' ಎಂಬ ಋಗ್ವೇದದ ಉಕ್ತಿಯು ಇವರಿಂದ ಸಾರ್ಥಕವಾಯಿತು. ಇವರಿಗೆ ಬೇರೆಬೇರೆ ಕಾರಣಗಳಿಂದ ಬೇರೆಬೇರೆ ಹೆಸರುಗಳು ಬಂದವು. ದಶಪ್ರಮತಿ, ಪೂರ್ಣಬೋಧ – ಎಂಬಿವೇ ಮೊದಲಾದವು ಇವರ ಪ್ರತಿಭೆಯನ್ನು ಸೂಚಿಸುವವು. ಇವರ ಗುರುಗಳಾದ ಅಚ್ಯುತಪ್ರೇಕ್ಷಕರು ಹಸನ್ಮುಖಿಗಳಾದ ಇವರಿಗೆ ಆನಂದತೀರ್ಥರೆಂದು ಹೆಸರಿಟ್ಟರು. ಶ್ರೀಮಧ್ವಾಚಾರ್ಯರು ವಾದದಲ್ಲಿ ಅನೇಕ ದಿಗ್ದಂತಿಗಳಾದ ಪಂಡಿತರನ್ನು ಕೂಡ ಲೀಲಾಜಾಲವಾಗಿ ನಗುತ್ತಲೇ ಸೋಲಿಸಿ ಮಾತಾಡದಂತೆ ಮಾಡಿಬಿಡುತ್ತಿದ್ದರು. ಇವರಿಗೆ ಇದರಿಂದ ''ಅನುಮಾನ ತೀರ್ಥ''ರೆಂಬ ಹೆಸರಾಯಿತು.

ಆಚಾರ್ಯರು ಬೇರೆಬೇರೆ ಸಂದರ್ಭಗಳಲ್ಲಿ ಬ್ರಹ್ಮಸೂತ್ರಭಾಷ್ಯವೇ ಮುಂತಾದ ಮೂವತ್ತೇಳು ಗ್ರಂಥಗಳನ್ನು ಬರೆದರು. ಮುಖ್ಯವಾಗಿ ಶ್ರೀಮದಾಚಾರ್ಯರು ಬೋಧಿಸಿದ ತತ್ತ್ವಗಳನ್ನು ಒಂದು ಶ್ಲೋಕದಲ್ಲಿ ಸಂಗ್ರಹಮಾಡಿ ಹೇಳುವದುಂಟು.

**ಶ್ರೀಮನ್ಮಧ್ವಮತೇ ಹರಿಃ ಪರತರಃ ಸತ್ಯಂ ಜಗತ್ತತ್ತ್ವತೋ ಭೇದೋ**
**ಜೀವಗಣಾ ಹರೇರನುಚರಾ ನೀಚೋಚ್ಚಭಾವಂ ಗತಾಃ ।**
**ಮುಕ್ತಿರ್ನೈಜಸುಖಾನುಭೂತಿರಮಲಾ ಭಕ್ತಿಶ್ಚ ತತ್ಸಾಧನಂ**
**ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕವೇದ್ಯೋ ಹರಿಃ ॥**

ಶ್ರೀಮಧ್ವಾಚಾರ್ಯರವರ ಮತದಲ್ಲಿ ಶ್ರೀಹರಿಯೇ ಸರ್ವೋತ್ತಮನು, ಜಗತ್ತು ಪರಮಾರ್ಥಸತ್ಯವು. ಜೀವರು ಹೆಚ್ಚು ಕಡಿಮೆಯ ಸ್ಥಿತಿಯಲ್ಲಿದ್ದು ಶ್ರೀಹರಿಗೆ ದಾಸನಾಗಿರುವರು, ಮುಕ್ತಿಯೆಂದರೆ ತನ್ನ ನಿಜವಾದ ಸುಖವನ್ನು ಅನುಭವಿಸುವದು, ನಿರ್ಮಲವಾದ ಭಕ್ತಿಯೇ ಅದಕ್ಕೆ ಸಾಧನವು. ಪ್ರತ್ಯಕ್ಷವೇ

ಮೊದಲಾದ ಮೂರು ಪ್ರಮಾಣಗಳೂ ಸಮ್ಮತವು. ಸಕಲಶಾಸ್ತ್ರಗಳಲ್ಲಿಯೂ ಶ್ರೀ ಹರಿಯನ್ನೇ ಪ್ರತಿಪಾದಿಸಿರುತ್ತದೆ. ಈ ರೀತಿಯಲ್ಲಿ ಹರಿಸರ್ವೋತ್ತಮತ್ವ, ವಾಯುಜೀವೋತ್ತಮತ್ವ, ಜಗತ್ಸತ್ಯತ್ವ, ಪಂಚಭೇದತಾರತಮ್ಯಗಳನ್ನು ಉಪದೇಶ ಮಾಡಿದ್ದಲ್ಲದೆ ವಿಷ್ಣುಲೋಕದಲ್ಲಿ ಜನರು ಹೇಗೆ ನಿತ್ಯಸುಖಿಗಳಾಗಿರುವರೆಂಬುದನ್ನು ವಿಸ್ತಾರವಾಗಿ ವರ್ಣಿಸಿ ತೋರಿಸಿಕೊಟ್ಟಿರುತ್ತಾರೆ. ಈ ಮೋಕ್ಷಸ್ವರೂಪವು ಮಧ್ವವಿಜಯದ ಹನ್ನೊಂದನೆಯ ಸರ್ಗದಲ್ಲಿ ವಿಶೇಷವಾಗಿ ವರ್ಣಿತವಾಗಿರುವದು.

ಮಣಿಮಂತನೆಂಬ ದೈತ್ಯನು ಭೀಮಸೇನದೇವರಿಂದ ಹತನಾಗಲು ಉಳಿದ ದೈತ್ಯರುಗಳಿಂದ ಪ್ರೇರಿತನಾಗಿ ಆತನು ಕಲಿಯುಗದಲ್ಲಿ ನಾಸ್ತಿಕ ಮತವನ್ನು ಜನರಿಗೆ ಉಪದೇಶಮಾಡಿದನೆಂತಲೂ ಶ್ರೀವಿಷ್ಣುವಿನ ಆಜ್ಞೆಯಿಂದ ವಾಯುದೇವರು ಮತ್ತೆ ಶ್ರೀಮಧ್ವಾಚಾರ್ಯರ ರೂಪದಿಂದ ಅವತರಿಸಿ ದುರ್ಮತಗಳನ್ನು ಖಂಡಿಸಿದರೆಂತಲೂ ಮಾಧ್ವರು ಅಂಗೀಕರಿಸಿರುವರು. ಶ್ರೀಮಧ್ವಾಚಾರ್ಯರು ಬುದ್ಧಿಬಲದಲ್ಲಿ ಎಷ್ಟರಮಟ್ಟಿಗೆ ಅದ್ವಿತೀಯರಾಗಿದ್ದರೋ ಅಷ್ಟೇಮಟ್ಟಿಗೆ ಕಾಯಶಕ್ತಿಯಲ್ಲಿಯೂ ಪ್ರಬಲರಾಗಿದ್ದರೆಂದು ತಿಳಿಯಬರುತ್ತದೆ. ಒಂದು ಸಲ ಪ್ರಯಾಣಮಾಡುವಾಗ ಇವರಮೇಲೆ 15-20 ಜನ ಕಳ್ಳರ ಬೀಳಲು ಅವರೆಲ್ಲರನ್ನೂ ಒಬ್ಬರೇ ಹೊಡೆದಟ್ಟಿದರು; ಮತ್ತೊಂದು ಸಲ ಹದಿನೈದು ಗಡಿಗೆಯ ಹಾಲನ್ನು ಕುಡಿದು ನಾಲ್ಕು ಸಾವಿರ ಬಾಳೆಯ ಹಣ್ಣುಗಳನ್ನು ತಿಂದು ಅಡಗಿಸಿಕೊಂಡರು. ಇನ್ನೊಂದು ಸಲ ಒಬ್ಬ ಜಟ್ಟಿಯು ಇವರ ಕತ್ತು ಹಿಸುಕಿದರೂ ಇವರಿಗೆ ಯಾವ ಬಾಧೆಯೂ ಆಗಲಿಲ್ಲ. ಇವೇ ಮುಂತಾದ ಲೀಲೆಗಳಿಂದ ಆಚಾರ್ಯರು ಹನುಮದ್ಭೀಮರಂತೆ ಕಲಿಯುಗದಲ್ಲವತರಿಸಿದ ವಾಯುದೇವರೇ ಎಂಬ ನಂಬಿಕೆಗೆ ದಾರ್ಢ್ಯವನ್ನುಂಟುಮಾಡಿ ಕೊಟ್ಟಿರುವರು.

ಶ್ರೀಮಧ್ವಾಚಾರ್ಯರು ದಿಗ್ವಿಜಯಮಾಡಿದ ಕಡೆಗಳಲ್ಲಿ ಅನೇಕ ವಿದ್ವಾಂಸರನ್ನು ಗೆದ್ದು ಶ್ರೀಶಂಕರಭಾಷ್ಯವು ಸೂತ್ರಕಾರಾಭಿಮತವಲ್ಲವೆಂಬುದನ್ನು ಮನಗಾಣಿಸಿ ಬಾದರಾಯಣ ಸಮ್ಮತವಾದ ಭಾಷ್ಯವನ್ನು ತಾವು ಬರೆದು ಲೋಕೋಪಕಾರವನ್ನು ಮಾಡಿದ್ದಲ್ಲದೆ ಮುಂದೆ ತಮ್ಮ ಸಂಪ್ರದಾಯವು ನಡೆಯುವದಕ್ಕೂ ಏರ್ಪಾಡು ಮಾಡಿದರು. ಒಂದು ದಿನ ಇವರು ಸಮುದ್ರ ತೀರದಲ್ಲಿ ಅನುಷ್ಠಾನಮಾಡುತ್ತಾ ಕುಳಿತಿದ್ದಾಗ ಒಂದು ಹಡಗು ಸಮುದ್ರದಲ್ಲಿ ಮುಳುಗುವಂತಿತ್ತು. ಅದರ ಯಜಮಾನನು ದೂರದಿಂದ

ಅದನ್ನು ತಿಳಿದು ಇವರ ಬಳಿಗೆ ಬಂದು ಏನಾದರೂ ಮಾಡಿ ಅದನ್ನು ಉಳಿಸಬೇಕೆಂದು ಪ್ರಾರ್ಥಿಸಿಕೊಂಡನು. ದೀನವತ್ಸಲರಾದ ಇವರು ಕೂಡಲೇ ಹಸ್ತಸಂಜ್ಞೆಯಿಂದ ಆ ಹಡಗು ರೇವಿಗೆ ಬರುವಂತೆ ಮಾಡಿದರು. ಮಾಲಿಕನು ಸಂತೋಷಪಟ್ಟು ಆ ಹಡಗನ್ನೇ ಇವರ ಕೊಡುವದಕ್ಕೆ ಹೋದನು. ಆದರೆ ಕೇವಲ ವೈರಾಗ್ಯಮೂರ್ತಿಗಳಾದ ಆಚಾರ್ಯರಿಗೆ ಹಡಗಿನಿಂದೇನು? ಆದರೂ ಇವರು ಸರ್ವಜ್ಞರಾದ್ದರಿಂದ ಅದರಲ್ಲಿ ಮೂರು ಗೋಪಿಚಂದನದ ಕೊರಡುಗಳನ್ನು ತರಿಸಿದರು. ಅದರಲ್ಲಿ ಒಂದರಲ್ಲಿ ಶ್ರೀಕೃಷ್ಣಮೂರ್ತಿಯೂ ಇನ್ನೊಂದರಲ್ಲಿ ಬಲರಾಮಮೂರ್ತಿಯೂ ಮತ್ತೊಂದರಲ್ಲಿ ಜನಾರ್ದನಮೂರ್ತಿಯೂ ಇದ್ದದ್ದನ್ನು ಬಲ್ಲವರಾದ್ದರಿಂದ ಅವುಗಳನ್ನು ತೆಗೆದುಕೊಂಡು ಉಡುಪಿಗೆ ಬಂದರು. ಅಲ್ಲಿ ಒಂದು ಗೋಪೀಚಂದನಕೆ ಕ್ಷೀರಾಭಿಷೇಕಮಾಡಿಸಲು ಅದರಲ್ಲಿ ಶ್ರೀಕೃಷ್ಣನು ಪ್ರಕಟನಾದನು. ಆ ಮೂರ್ತಿಯನ್ನು ಅಲ್ಲೇ ಸ್ಥಾಪನೆಮಾಡಿ ಅವ್ಯಾಹತವಾಗಿ ಅದರ ಪೂಜೆ ನಡೆಯುವಂತೆ ಎಂಟುಜನ ಸನ್ಯಾಸಿಗಳನ್ನು ನಿಯಮಿಸಿದರು. ಬಲರಾಮಮೂರ್ತಿಯನ್ನು ವಡಭಾಂಡೇಶ್ವರದಲ್ಲಿಯೂ ಜನಾರ್ದನಮೂರ್ತಿಯನ್ನು ಮಧ್ಯಕಾಲಕ್ಷೇತ್ರದಲ್ಲಿಯೂ ಸ್ಥಾಪನೆಮಾಡಿದರು.

ಶ್ರೀಮಧ್ವಾಚಾರ್ಯರವರ ದ್ವೈತಸಿದ್ಧಾಂತವನ್ನು ಕೇವಲ ಅವರ ಶಿಷ್ಯರೇ ಅನುಸರಿಸುತ್ತಾರೆಂದು ಹೇಳುವದಕ್ಕಿಲ್ಲ, ಪ್ರಪಂಚದಲ್ಲಿ ಬಹುಭಾಗ ಜನರು ದ್ವೈತವನ್ನೇ ಅನುಸರಿಸತಕ್ಕದ್ದೆನ್ನುವರು. ಅದ್ವೈತಿಗಳು ಕೂಡ ವ್ಯವಹಾರದಲ್ಲಿ ದ್ವೈತವೇ ಅನುಸರಿಸತಕ್ಕದ್ದೆನ್ನುವರು. ವೇದದ ಆಧಾರದಮೇಲೆ ಪುರಾಣಾದಿಗಳ ಸಮ್ಮತಿಯಿಂದಲೂ ತರ್ಕಬಲದಿಂದಲೂ ಈ ಸಿದ್ಧಾಂತವನ್ನು ಬಲಗೊಳಿಸಿ ದುರ್ವಾದಗಳಿಗೆ ಅವಕಾಶವಿಲ್ಲದಂತೆ ಮಾಡಿದ ಈ ಆಚಾರ್ಯರವರ ಗ್ರಂಥಾವಳಿಯು ಮಾಧ್ವರಿಗೆ ಮಾತ್ರವೇ ಅಲ್ಲದೆ ಉಳಿದವರಿಗೂ ಮನನಮಾಡಲಿಕ್ಕೆ ಅವಶ್ಯಕವಾಗಿರುವದು. ಅವರು ಉಪದೇಶಿಸಿದ ಭಗವದ್ಭಕ್ತಿಯಂತೂ ಸರ್ವರಿಗೂ ಮಾನ್ಯವಾಗಿರುವದು.

★★★★★

# ಶ್ರೀ ರಾಘವೇಂದ್ರಸ್ವಾಮಿಗಳವರು

ಶ್ರೀ ಎಚ್. ಕೃಷ್ಣಾಚಾರ್ಯರು , ಬೆಂಗಳೂರು

**ಆಪಾದಮೌಲಿಪರ್ಯಂತಂ ಗುರೂಣಾಮಾಕೃತಿಂ ಸ್ಮರೇತ್ ।**
**ತೇನ ವಿಘ್ನಾಃ ಪ್ರಣಶ್ಯಂತಿ ಸಿಧ್ಯಂತಿ ಚ ಮನೋರಥಾಃ ॥**

ನಮ್ಮೀ ಭರತಖಂಡವು ಪುಣ್ಯಭೂಮಿಯೆಂದು ಪರಿಗಣಿಸಲ್ಪಟ್ಟು ಸರ್ವರಿಂದಲೂ ಮಾನನೀಯವಾಗಿರುವದಷ್ಟೆ? ಲೋಕೋದ್ಧಾರಕ್ಕಾಗಿ ಭಗವಂತನು ಅನಂತ ಅವತಾರಗಳನ್ನೆತ್ತಿ ತನ್ನ ಅಗಾಧವಾದ ಮಹಿಮೆಯನ್ನು ಈ ಪವಿತ್ರವಾದ ದೇಶದಲ್ಲಿ ತೋರಿಸಿರುವನೆಂದು ಪುರಾಣೇತಿಹಾಸಗಳು ಸಾರುತ್ತಿರುವವು. ಭಗವಂತನ ಮೇಲ್ಪಙ್ಕ್ತಿಯನ್ನನುಸರಿಸುವರೋ ಎಂಬಂತೆ ಭಗವದ್ಭಕ್ತಶಿರೋಮಣಿಗಳೂ ಪಾಮರಜನೋದ್ಧರಣಕ್ಕಾಗಿ ಆಗಾಗ್ಗೆ ಈ ಭೂಮಿಯಲ್ಲಿ ಅವತಾರಗಳನ್ನೆತ್ತಿರುವರು. ಧ್ರುವ, ಪ್ರಹ್ಲಾದ, ನಾರದ, ಹನುಮಂತ - ಮುಂತಾದ ಭಕ್ತಶ್ರೇಷ್ಠರು ಇಂತಹ ಅವತಾರಗಳನ್ನೆತ್ತಿ ಅದ್ಭುತಮಹಿಮೆಯನ್ನು ಪ್ರದರ್ಶಿಸಿರುವದಲ್ಲದೆ, ಲೋಕಕ್ಕೆ ಸನ್ಮಾರ್ಗದರ್ಶಿಗಳೂ ಆಗಿರುವರು.

ಶ್ರೇಷ್ಠವಾದ ತುಂಗಭದ್ರಾತೀರವಾಸಿಗಳಾಗಿ ಹೈದರಾಬಾದ್ ಸಂಸ್ಥಾನದಲ್ಲಿರುವ 'ಮಂತ್ರಾಲಯ'ವೆಂಬ ಪುಣ್ಯಕ್ಷೇತ್ರದಲ್ಲಿ ವೃಂದಾವನಸ್ಥರಾಗಿ ತಪೋನಿಧಿಗಳೆನಿಸಿರುವ ಶ್ರೀರಾಘವೇಂದ್ರಯತಿವರ್ಯರು ಅಂತಹ ಭಕ್ತವೃಂದಕ್ಕೆ ಸೇರಿದವರು. ಇವರು ಕೃತಯುಗದಲ್ಲಿ ದೇವಶತ್ರುವಾದ ಹಿರಣ್ಯಕಶಿಪುವೆಂಬ ರಾಕ್ಷಸನ ಉದರದಲ್ಲಿ ಜನಿಸಿ, ತಮ್ಮ ಅನನ್ಯಸಾಧಾರಣವಾದ ಭಗವದ್ಭಕ್ತಿಯನ್ನು ಲೋಕಕ್ಕೆಲ್ಲಾ ತಿಳಿಯಪಡಿಸಿದರು. ಪ್ರಹ್ಲಾದರಾಯರು ಮೇಲೆ ಹೇಳಿದಂತೆ ಲೋಕಾನುಗ್ರಹಕಾಂಕ್ಷೆಯಿಂದ ಈ ಕಲಿಯುಗದಲ್ಲಿ ವ್ಯಾಸರಾಜನಾಗಿಯೂ ರಾಘವೇಂದ್ರರಾಯರಾಗಿಯೂ ಸತ್ಯಸಂಧರಾಗಿಯೂ ಅವತರಿಸಿರುವರೆಂದು ಮಧ್ವಮತದವರಲ್ಲಿ ಪ್ರತೀತಿಯಿರುವದು. ಶ್ರೀರಾಘವೇಂದ್ರಸ್ವಾಮಿಗಳ ಪುಣ್ಯದಿನದಂದು ಶ್ರೀಶ್ರೀಗಳ ಮತಾನುಯಾಯಿಗಳೂ ಉಳಿದ ಶ್ರೀಶ್ರೀಗಳ ಭಕ್ತರೂ ಆ ಮಹಾತ್ಮರ ದಿವ್ಯನಾಮಸ್ಮರಣೆಯನ್ನು ಮಾಡಲು ಅನುಕೂಲಿಸುವಂತೆ ಅವರ ಸಂಕ್ಷೇಪಚರಿತ್ರೆಯನ್ನು ಇಲ್ಲಿ ಬರೆಯುತ್ತೇನೆ.

**ಜನ್ಮ ಮತ್ತು ಬಾಲ್ಯ** – ಕರ್ಣಾಟಕಗತವೈಭವದ ಕೇಂದ್ರವಾದ್ದ ವಿಜಯನಗರದಲ್ಲಿ ಕ್ರಿ.ಶ. 16ನೆಯ ಶತಮಾನದ ಆದಿಯಲ್ಲಿ ಕೃಷ್ಣದೇವರಾಯನೆಂಬ ಅರಸು ಆಳುತ್ತಿದ್ದನು. ಆ ರಾಯನ ಆಸ್ಥಾನದಲ್ಲಿ ಸಕಲವೇದಶಾಸ್ತ್ರ ಪಾರಂಗತರಾಗಿದ್ದ ವೀಣಾಕೃಷ್ಣಾಚಾರ್ಯರೆಂಬ ವಿಬುಧವರ್ಯರೊಬ್ಬರು ತಮ್ಮ ಅದ್ಭುತವಾದ ಗಾನಪಾಂಡಿತ್ಯದಿಂದ ಧೊರೆಯನ್ನು ಸಂತೋಷಪಡಿಸುತ್ತಿದ್ದರು. ವಿದ್ವತ್ತಿಗೆ ಕೃಷ್ಣದೇವರಾಯನ ಆಸ್ಥಾನದಲ್ಲಿ ಶ್ರೇಷ್ಠವಾದ ಮರ್ಯಾದೆಯು ದೊರಕುತ್ತಿತ್ತು. ಕೃಷ್ಣಾಚಾರ್ಯರು ತಕ್ಕಮಟ್ಟಿಗೆ ಐಶ್ವರ್ಯವನ್ನೂ ಗಳಿಸಿದ್ದರು. ಇವರು ಗೌತಮಗೋತ್ರದವರೂ ಆಪಸ್ತಂಬಸೂತ್ರದವರೂ ಆಗಿದ್ದರು. ಇವರ ಮೊಮ್ಮಕ್ಕಳು ವೀಣಾತಿಮ್ಮಣ್ಣಾಚಾರ್ಯರೆಂಬವರ ಕಾಲದಲ್ಲಿ ವಿಜಯನಗರದ ವೈಭವದ ಪರಿಸಮಾಪ್ತಿಯ ಕಾಲವು ತೋರಿಬಂದು, ಇವರು ತಮ್ಮ ಸ್ಥಳವನ್ನು ಬಿಡಬೇಕಾಗಿ ಬಂದಿತು. ಜೀವನಕ್ಕೆ ಕೊರತೆಯುಂಟಾಗಿ ಇವರ ತಾತನು ಶೇಖರಿಸಿಟ್ಟಿದ್ದ ಧನಕನಕಾದಿಗಳು ಮಾಯವಾಗುತ್ತಾ ಬಂದವು. ಲಕ್ಷ್ಮೀದೇವಿಯ ಹಿರಿಯಕ್ಕನು ಇವರ ಮನೆಯಲ್ಲಿ ನೆಲೆಯಾಗಿ ನಿಂತಳು. ತಿಮ್ಮಣ್ಣಾಚಾರ್ಯರು ಕಾಂಚೀಪುರದ ಸಮೀಪದಲ್ಲಿರುವ ಭುವನಗಿರಿಯಲ್ಲಿ ಬಂದು ನೆಲಸಿದರು. ಕುಲದೇವತೆಯಾದ ಶ್ರೀಶ್ರೀನಿವಾಸನ ದಯದಿಂದ ಒಬ್ಬ ಮಗನೂ ಇವರಿಗಿದ್ದರು, ಮಗಳನ್ನು ಮಧುರೆಯ ಲಕ್ಷ್ಮೀನರಸಿಂಹಾಚಾರ್ಯರೆಂಬ ವೇದಸಂಪನ್ನನಾದ ಬ್ರಾಹ್ಮಣನಿಗೆ ಕೊಟ್ಟು ವಿವಾಹ ಮಾಡಿದ್ದರು. ಆದರೂ ದ್ವಿತೀಯಪುತ್ರಾಪೇಕ್ಷೆಯಿಂದ ತಿಮ್ಮಣ್ಣಾಚಾರ್ಯರು ತಮ್ಮ ಪತ್ನೀಸಮೇತರಾಗಿ ತಿರುಪತಿಯ ದೇವರನ್ನು ಭಕ್ತಿಯಿಂದ ಕೆಲಕಾಲ ಸೇವಿಸಿದರು. ಭಕ್ತಪರಾಧೀನನಾದ ಸ್ವಾಮಿಯು ಇವರಿಗೆ ಒಂದು ದಿವಸ ಪುತ್ರರತ್ನವನ್ನು ಕರುಣಿಸಿದನು (ಕ್ರಿ. ಶ. 1596). ಈ ಮಗುವೇ ನಮ್ಮ ಕಥಾನಾಯಕನು, ಪುತ್ರಜನನದಿಂದ ಅಧಿಕವಾದ ಆನಂದವನ್ನು ಹೊಂದಿದ ಆಚಾರ್ಯರು ಮಗುವಿಗೆ ವೆಂಕಟನೆಂದು ಹೆಸರಿಟ್ಟರು. ಮಗುವಿನ ಮೈಬಣ್ಣವು ಶ್ರೀಕೃಷ್ಣಪರಮಾತ್ಮನ ಬಣ್ಣವನ್ನು ಹೋಲುತ್ತಿದ್ದರೂ ತುಂಬಿದ ಮೈಕಟ್ಟಿನಿಂದ ಕೂಡಿದ್ದಿತು. ವೆಂಕಣ್ಣನು – ವೆಂಕಟನನ್ನು ಮುದ್ದಿಗೆ ಈ ಹೆಸರಿನಿಂದ ಕೂಗುವುದು ವಾಡಿಕೆಯಾಗಿತ್ತು – ಆಟಪಾಟಗಳಲ್ಲಿ ತನ್ನ ಜತೆಗಾರರನ್ನು ಸೋಲಿಸುತ್ತಿದ್ದನು, ವೆಂಕಣ್ಣನಲ್ಲಿ ಧೈರ್ಯ, ಸಾಹಸ, ದಯೆ– ಮುಂತಾದ ಗುಣಗಳು ತುಂಬಿದ್ದವು, ವೆಂಕಟನು ತಮ್ಮ ಭಾವನಾದ ಲಕ್ಷ್ಮೀನರಸಿಂಹಾಚಾರ್ಯರಲ್ಲಿ

ವಿದ್ಯಾಭ್ಯಾಸಮಾಡುತ್ತಿದ್ದು ಪ್ರೌಢವಿದ್ಯಾಭ್ಯಾಸಕ್ಕೆ ಕುಂಭಕೋಣವನ್ನು ಸೇರಿದನು. ಅಲ್ಲಿ ತಮ್ಮ ಗುರುಗಳಾದ ಶ್ರೀಸುಧೀಂದ್ರತೀರ್ಥಸ್ವಾಮಿಗಳು ಇರುವದನ್ನು ತಿಳಿದು ಶ್ರೀಗಳಲ್ಲಿ ವೇದಾಂತಪಾಠಗಳನ್ನು ಅಭ್ಯಾಸಮಾಡತೊಡಗಿದನು. ಸೂಕ್ಷ್ಮಮತಿಯಾದ ವೆಂಕಣ್ಣನು ಅಲ್ಪಕಾಲದಲ್ಲಿಯೇ ಅದ್ವಿತೀಯಪಾಂಡಿತ್ಯವನ್ನು ಸಂಪಾದಿಸಿದನು. ಶ್ರೀಶ್ರೀಗಳಲ್ಲಿ ತಾನು ಓದಿದ '**ಸುಧಾ**' ಗ್ರಂಥಕ್ಕೆ '**ಪರಿಮಳಾ**'[1] ಎಂಬ ಹೆಸರಿನಿಂದ ಒಂದು ವ್ಯಾಖ್ಯಾನವನ್ನೂ ರಚಿಸಿದನು.

ಶ್ರೀಗಳು ಸುಧಾಪಾಠದಲ್ಲಿ ಒಂದು ದಿನ ಒದಗಿದ ಸಂದಿಗ್ಧವಿಷಯವನ್ನು ಶಿಷ್ಯರಿಗೆ ಸರಿಯಾಗಿ ತಿಳಿಸಲಾಗದೆ ಇರಲು ಆ ವಿಷಯವನ್ನು ಮಾರನೆಯ ದಿನ ಶಿಷ್ಯರೆಲ್ಲರೂ ಮತ್ತೆ ನೋಡಿಕೊಂಡು ಬರಬೇಕೆಂದು ಆಜ್ಞೆಯನ್ನಿತ್ತರು. ಆ ರಾತ್ರೆ ಶಿಷ್ಯರೆಲ್ಲರೂ ಏನು ಮಾಡುತ್ತಿರುವರೆಂದು ನೋಡಬೇಕೆಂದು ಕುತೂಹಲದಿಂದ ಶ್ರೀಶ್ರೀಗಳು ಹೊರಟು, ವೆಂಕಣ್ಣಾಚಾರ್ಯನು ಮುರುಕುಮಂಟಪದಲ್ಲಿ ಚಿಂದಿಯ ಬಟ್ಟೆಯನ್ನುಟ್ಟು ನೆಲದ ಮೇಲೆ ನಿದ್ರಿಸುತ್ತಿರುವುದನ್ನು ನೋಡಿದರು. ಶಿಷ್ಯನ ತಲೆಯ ದಶೆಯಲ್ಲಿ ಛಿದ್ರಛಿದ್ರವಾದ ಕಾಗದಗಳು ಬಿದ್ದಿದ್ದವು. ಸ್ವಾಮಿಗಳು ಅವುಗಳನ್ನು ತೆಗೆದು ನೋಡಲಾಗಿ ''ಪರಿಮಳಾ'' ಗ್ರಂಥದ ಓಲೆಗಳಾಗಿದ್ದವು. ಅದರಲ್ಲಿ ಅಂದಿನ ಪಾಠದ ಸಂದಿಗ್ಧವಿಷಯವೂ ಸಮರ್ಪಕವಾಗಿ ವ್ಯಾಖ್ಯಾನ ಮಾಡಲ್ಪಟ್ಟಿದ್ದಿತು. ಸ್ವಾಮಿಗಳಿಗೆ ಆನಂದಬಾಷ್ಪಗಳು ಉಕ್ಕಿ ಬಂದವು. ಶಿಷ್ಯನ ರಿಕ್ತದಶೆಯಿಂದ ಮನಮರುಗಿದವರಾಗಿ ತಮ್ಮ ಶಹಲನ್ನು ಅವನಿಗೆ ಹೊದಿಸಿ ತಮ್ಮ ಸ್ಥಾನವನ್ನು ಸೇರಿದರು. ಮರುದಿನ ವಿದ್ವತ್ಸಭೆಯನ್ನು ಕೂಡಿಸಿ ವೆಂಕಣ್ಣಾಚಾರ್ಯನಿಗೆ 'ಪರಿಮಳಾಚಾರ್ಯ'ನೆಂಬ ಬಿರುದನ್ನು ಕೊಟ್ಟರು. ಕೆಲ ಕಾಲಾನಂತರ ಈತನಿಗೆ ಈತನಿಗೆ 'ಮಹಾಭಾಷ್ಯಾಚಾರ್ಯ'ನೆಂಬ ಬಿರುದೂ ಬಂದಿತು.

**ವಿವಾಹ ಮತ್ತು ಸಂಸಾರ :-** ವೆಂಕಣ್ಣಾಚಾರ್ಯರು ಪ್ರಾಪ್ತವಯಸ್ಕರಾದ ಮೇಲೆ ಸರಸ್ವತಿ ಎಂಬ ಕನ್ಯೆಯನ್ನು ವಿವಾಹವಾದರು. ಇವರಿಗೆ ಒಬ್ಬ ಮಗನೂ ಒಬ್ಬ ಮಗಳೂ ಜನಿಸಿದರು. ಆದರೆ ಆಚಾರ್ಯರಿಗೆ ಸಂಸಾರದಲ್ಲಿ ಸುಖವಿಲ್ಲ. ಸರಸ್ವತಮ್ಮನು ಚಂಡಿತನದ ಹೆಂಗಸು, ಆಚಾರ್ಯರಲ್ಲಿ ಪಾಠಕ್ಕೆಂದು ಬಂದು ಸೇರುತ್ತಿದ್ದ ಶಿಷ್ಯರ ಅನ್ನಪಾನಾದಿಗಳಿಗೆ ಬಹಳ ತೊಂದರೆಯನ್ನುಂಟುಮಾಡು ತ್ತಿದ್ದಳು. ಆದರೂ ಯತ್ನವಿಲ್ಲದೆ ಆಚಾರ್ಯರು ಸಂಸಾರ ಧರ್ಮವನ್ನು

---

1. ಇದು ಶ್ರೀಮಧ್ವಾಚಾರ್ಯರವರು ಅನುಗ್ರಹಿಸಿರುವ ಅನುವ್ಯಾಖ್ಯಾನವೆಂಬ ಬ್ರಹ್ಮಸೂತ್ರವಿವರಣೆಯ ಮೇಲಿನ ಪ್ರಸಿದ್ಧವಾದ ಟೀಕೆಯು; ಜಯತೀರ್ಥಭಿಕ್ಷುಗಳು ಬರೆದದ್ದು.

ನಡೆಸಿಕೊಂಡು ಬರುತ್ತಿದ್ದರು. ಸಂಸಾರದಲ್ಲಿ ದಿನದಿನಕ್ಕೂ ಜುಗುಪ್ಸೆಯು ಹೆಚ್ಚುತ್ತಿದ್ದಿತು. ಮಗನಿಗೆ ಉಪನಯುವನ್ನು ನೆರವೇರಿಸಿದರು.

**ಆಶ್ರಮಸ್ವೀಕಾರ, ದೇಶಾಟನೆ, ಗ್ರಂಥರಚನೆ** - ಶ್ರೀಸುಧೀಂದ್ರರಿಗೆ ವಾರ್ಧಕ್ಯವು ಸಮೀಪಿಸುತ್ತಿರಲು ತಮ್ಮ ತರುವಾಯ ಪರಿಮಳಾಚಾರ್ಯರಿಗೆ ಆಶ್ರಮವನ್ನು ಕೊಡಬೇಕೆಂದು ಶ್ರೀಮೂಲರಾಮದೇವರು ಆಜ್ಞೆಮಾಡಿದಂತೆ ಒಂದು ದಿನ ಸ್ವಪ್ನವನ್ನು ಕಂಡರು. ಶ್ರೀಶ್ರೀಗಳು ಪರಮಾನಂದಭರಿತರಾಗಿ ತಮ್ಮ ಉದ್ದೇಶವನ್ನು ವೆಂಕಣ್ಣಾಚಾರ್ಯರಿಗೆ ಸೂಚಿಸಿದರು. ಆದರೆ ವೆಂಕಣ್ಣಾಚಾರ್ಯರಿಗೆ ತಮ್ಮ ಗುರುಗಳ ಮನೋಭಾವನೆಯು ಏಕೋ ಸರಿಬೀಳದೆ ಹೋಯಿತು. ಅವರಿಗೆ ಇನ್ನೂ ಸಂಸಾರದಲ್ಲಿ ಅಪೇಕ್ಷೆ ತಪ್ಪಿದಂತೆ ತೋರಲಿಲ್ಲ. ಆಗ ಅವರಿಗೆ ಇಪ್ಪತ್ತೇಳು ವರ್ಷ ಮಾತ್ರ ವಯಸ್ಸಾಗಿದ್ದಿತು. ಆದರೆ ಸ್ವಪ್ನದಲ್ಲಿ ಶ್ರೀಸರಸ್ವತಿಯು ಕಾಣಿಸಿಕೊಂಡು ಆಚಾರ್ಯರಿಗೆ ಅವರ ಜನ್ಮಗ್ರಹಣದ ಉದ್ದೇಶವನ್ನು ಜ್ಞಾಪಿಸಿ, ಆಶ್ರಮಸ್ವೀಕಾರವನ್ನು ಮಾಡುವಂತೆ ಹೇಳಿದ ಹಾಗಾಯಿತು.

ಸರಸ್ವತಿಯ ಆಜ್ಞಾನುಸಾರ ಕ್ರಿ.ಶ. 1623ರಲ್ಲಿ ಆಚಾರ್ಯರು **ಶ್ರೀರಾಘವೇಂದ್ರತೀರ್ಥ**ರೆಂಬ ಅಭಿಧಾನದಿಂದ ತಮ್ಮ ಗುರುಗಳಾದ ಶ್ರೀಸುಧೀಂದ್ರತೀರ್ಥರಿಂದ ಸಂನ್ಯಾಸವನ್ನು ಸ್ವೀಕಾರಮಾಡಿ ಅಖಂಡ ನಲವತ್ತೆಂಟು ವರ್ಷಗಳ ಕಾಲ ಆಸೇತುಹಿಮಾಚಲದವರೆಗೂ ಅನೇಕಾವರ್ತಿ ದೇಶಸಂಚಾರಮಾಡಿ ಪ್ರತಿವಾದಿಗಳನ್ನು ವಾದದಲ್ಲಿ ಗೆಲ್ಲುತ್ತಾ ದ್ವೈತಸಿದ್ಧಾಂತದ ಕೀರ್ತಿಧ್ವಜವನ್ನುನೆಟ್ಟರು. ಇವರು ಅನೇಕ ಗ್ರಂಥಗಳಿಗೆ ಟೀಕಾರೂಪವಾದ ನಲವತ್ತೆಂಟು ಗ್ರಂಥಗಳನ್ನು ಬರೆದಿರುವರು. ಅವುಗಳಲ್ಲೆಲ್ಲಾ 'ಪರಿಮಳಾ'ಗ್ರಂಥವು ಪ್ರಖ್ಯಾತವಾಗಿರುವದು.

ಶ್ರೀರಾಘವೇಂದ್ರರು ತಮ್ಮ ವಾದಬಲದಿಂದ ಜನಗಳನ್ನು ಆಕರ್ಷಣೆ ಮಾಡಿದುದಲ್ಲದೆ, ಅದ್ಭುತಮಹಿಮಾಪ್ರದರ್ಶನದಿಂದಲೂ ಜನಗಳನ್ನು ಸ್ತಂಭೀಭೂತರನ್ನಾಗಿ ಮಾಡುತ್ತಿದ್ದರು. ಸತ್ತವರನ್ನು ಬದುಕಿಸಿದುದು, ದಂಡಕಾಷ್ಠದಿಂದ ಭೂಮಿಯನ್ನು ಸ್ವಲ್ಪ ಅಗೆದು ಜಲಸಮೃದ್ಧಿಯನ್ನು ಉಂಟುಮಾಡಿದುದು, ವೀರಕ್ಷಾಮವನ್ನು ನಿವಾರಣೆ ಮಾಡಿದುದು - ಮುಂತಾದ ಅನೇಕ ವಿಚಿತ್ರಮಹಿಮೆಯನ್ನು ತೋರಿಸಿರುವರು. ಆ ಮಹಾನುಭಾವರ ಮಹಿಮೆಗಳ ವಿವರಣೆಗೇ ಒಂದು ಬೇರೆ ಗ್ರಂಥವನ್ನು ಬರೆಯಬೇಕಾಗುವದು.

ಶ್ರೀಗಳು ಬೃಂದಾವನವನ್ನು ಪ್ರವೇಶಮಾಡಿದ 140 ವರ್ಷಗಳ ಮೇಲೆ 'ಸರ್ ಥಾಮಸ್ ಮನ್ರೋ' ಎಂಬ ಆಂಗ್ಲೇಯಸರದಾರನಿಗೆ ಪ್ರತ್ಯಕ್ಷದರ್ಶನವಿತ್ತರೆಂದ ಮೇಲೆ ಇವರ ಮಹಿಮೆಯು ಎಂತಹುದೆಂದು ವಾಚಕರೇ ಊಹಿಸಬಹುದು.

ಹೀಗೆ ಮಹಾನುಭಾವರೆನಿಸಿದ ಶ್ರೀರಾಘವೇಂದ್ರತೀರ್ಥರು ತಮ್ಮ ಎಪ್ಪತ್ತೈದನೆಯ ವಯಸ್ಸಿನಲ್ಲಿ (ಕ್ರಿ.ಶ.1671ರಲ್ಲಿ) ಒಂದಾನೊಂದು ದಿನ ನಾರಾಯಣಸ್ಮರಣ ಪೂರ್ವಕವಾಗಿ ಸಶರೀರರಾಗಿ ವೃಂದಾವನಪ್ರವೇಶವನ್ನು ಮಾಡಿ, ಈಗಲೂ ದೀನಜನರ ಅಲ್ಪಸೇವೆಯಿಂದ ತೃಪ್ತರಾಗಿ ತಮ್ಮ ಮಹಿಮೆಯಿಂದ ಪಾಮರಜನೋದ್ಧಾರಕಾರ್ಯವನ್ನು ನೆರವೇರಿಸುತ್ತಲಿರುವರು.

★★★★★

# ಶ್ರೀ ವ್ಯಾಸರಾಯಸ್ವಾಮಿಗಳವರು

-ಶ್ರೀ ನಂಜುಂಡಯ್ಯನವರು

ಶ್ರೀವ್ಯಾಸರಾಯಸ್ವಾಮಿಗಳವರ ದಿವ್ಯಚರಿತ್ರೆಯನ್ನು ಸ್ಮರಿಸಿಕೊಳ್ಳುವದು ನಮಗೆಲ್ಲರಿಗೂ ಶ್ರೇಯಸ್ಕರವಾಗಿರುವದರಲ್ಲಿ ಸಂದೇಹವಿಲ್ಲ.

ಸ್ವಾಮಿಗಳವರ ಜನ್ಮ ವೃತ್ತಾಂತವು ಒಂದೊಂದು ಗ್ರಂಥದಲ್ಲಿ ಒಂದೊಂದು ಬಗೆಯಾಗಿದ್ದರೂ ಅವರು ಬೆಂಗಳೂರು ಜಿಲ್ಲೆಗೆ ಸೇರಿದ ಚನ್ನಪಟ್ಟಣದ ಸಮೀಪದಲ್ಲಿ ತಪಸ್ಸುಮಾಡಿಕೊಂಡಿದ್ದ ಬ್ರಹ್ಮಣ್ಯತೀರ್ಥರ ಅನುಗ್ರಹದಿಂದ ಜನಿಸಿ, ಹುಟ್ಟಿದಂದಿನಿಂದಲೂ ಆ ಮಹನೀಯರ ಪೋಷಣೆಯಲ್ಲಿಯೇ ಬೆಳೆದು, ಅವರಲ್ಲಿಯೇ ಸಂನ್ಯಾಸಾಶ್ರಮವನ್ನು ಸ್ವೀಕಾರಮಾಡಿದರೆಂಬುದು ಸರ್ವಸಮ್ಮತವಾಗಿರುವದು. ಮುಳುಬಾಗಲಲ್ಲಿದ್ದ ಶ್ರೀಪಾದರಾಯರಲ್ಲಿ ವಿದ್ಯಾಭ್ಯಾಸಮಾಡಿ ಲೋಕವಿಖ್ಯಾತವಾದ ಅಮೋಘಪಾಂಡಿತ್ಯವನ್ನು ಸಂಪಾದಿಸಿದ್ದರ ಫಲವಂತೂ ಈಗಲೂ ಪರಿಣಾಮಕಾರಿಯಾಗಿ ನಿಂತಿದೆ. ಅವರು ರಚಿಸಿರುವ ನ್ಯಾಯಾಮೃತ, ತರ್ಕತಾಂಡವ, ತಾತ್ಪರ್ಯಚಂದ್ರಿಕೆ – ಎಂಬ **ವ್ಯಾಸತ್ರಯ**; ಉಪಾಧಿಖಂಡನ, ಮಾಯಾವಾದಖಂಡನ,

ಮಿಥ್ಯಾತ್ವಾನುಮಾನಖಂಡನ, ತತ್ತ್ವವಿವೇಕ, ಕಥಾಲಕ್ಷಣ – ಇವುಗಳಿಗೆ ಬರೆದಿರುವ ಟಿಪ್ಪಣಿಯ ರೂಪವಾದ **ಮಂದಾರಮಂಜರಿ** – ಇವೆರಡೂ ಶ್ರೀಮಧ್ವಾಚಾರ್ಯರ ಸಿದ್ಧಾಂತವನ್ನು ತಿಳಿದುಕೊಳ್ಳಬೇಕೆಂಬವರೆಗೆಲ್ಲ ಪೂರ್ಣಸಹಾಯವಾದ್ದಲ್ಲದೆ, ಮಾಧ್ವರಿಗೂ ಶಂಕರಾನುಯಾಯಿಗಳಿಗೂ ಉಂಟಾದ ಸಿದ್ಧಾಂತವಿಷಯಕವಾದ ಚರ್ಚೆಗಳಲ್ಲಿ ಅದ್ವೈತಸಿದ್ಧಿ, ನ್ಯಾಯಾಮೃತ ತರಂಗಿಣಿ, ಲಘುಚಂದ್ರಿಕಾ, ವನಮಾಲಾ – ಮುಂತಾದ ಗ್ರಂಥರತ್ನಗಳ ಪ್ರಕಾಶಕ್ಕೂ ಉದ್ಬೋಧಕಗಳಾಗಿ ಪರಿಣಮಿಸಿರುತ್ತವೆ.

ಸ್ವಾಮಿಗಳವರು ವೇದವ್ಯಾಸರ ವೇದಾಂತಸಿದ್ಧಾಂತವನ್ನು ಕುರಿತು ಅನೇಕ ಗ್ರಂಥಗಳನ್ನು ಬರೆದದ್ದಲ್ಲದೆ, ಲೌಕಿಕವ್ಯವಹಾರದಲ್ಲಿಯೂ ದಕ್ಷರಾಗಿದ್ದರೆಂಬುದನ್ನು ಅವರ ಅನ್ವರ್ಥವಾದ ವ್ಯಾಸರಾಯರೆಂಬ ಹೆಸರು ಸೂಚಿಸುತ್ತದೆಯೆನ್ನಬಹುದು. ವಿದ್ಯಾಗುರುಗಳಾದ ಶ್ರೀಪಾದರಾಯರ ಅಪ್ಪಣೆಯಂತೆ ವಿಜಯನಗರದ ರಾಜಗುರುಗಳಾಗಿ ನರಸರಾಜ, ವೀರನರಸಿಂಹರಾಜ, ಶ್ರೀಕೃಷ್ಣದೇವರಾಯ, ಅಚ್ಯುತರಾಯ – ಎಂಬ ನಾಲ್ಕು ಜನರ ಆಳ್ವಿಕೆಯಲ್ಲಿಯೂ ಆ ಪದವಿಯನ್ನಲಂಕರಿಸುತ್ತಾ ಎಷ್ಟೋ ಜನ ವಿದ್ವಾಂಸರಿಗೆ ಉದಾರಾಶ್ರಯವನ್ನಿತ್ತರು. ಶ್ರೀಕೃಷ್ಣದೇವರಾಯನಿಗೆ ಬದಗಿದ್ದ ಒಂದಾನೊಂದು ದುರ್ಯೋಗದಿಂದ ಅವನನ್ನು ಪಾರುಮಾಡಲೋಸುಗ ಆತನ ಸಿಂಹಾಸನದ ಮೇಲೆ ಮೂರೂಮುಕ್ಕಾಲು ಘಳಿಗೆಯ ಕಾಲ ಕುಳಿತು ರಾಜಗೌರವವನ್ನು ಹೊಂದಿ ಅನೇಕದಾನಧರ್ಮಗಳನ್ನು ನಡೆಯಿಸಿದ ಮಹನೀಯರಿವರು.

ಶ್ರೀಗಳವರ ಕೀರ್ತಿಯು ವಿದ್ಯಾಪ್ರೌಢಿಮೆ, ಲೌಕಿಕವ್ಯವಹಾರದ ಚತುರತೆ– ಇವುಗಳಿಂದ ಹರಡಿದ್ದುದಲ್ಲದೆ ಅವರಿಗಿದ್ದ ಅತಿಶಯವಾದ ಶ್ರೀಹರಿಭಕ್ತಿಯ ಪರಿಮಳವಾಸನೆಯಿಂದಲೂ ದಿಕ್ಕುಗಳನ್ನು ವ್ಯಾಪಿಸಿತ್ತು. ಉತ್ತರದೇಶದಲ್ಲಿಯೂ ದಕ್ಷಿಣದೇಶದಲ್ಲಿಯೂ ತೀರ್ಥಯಾತ್ರೆಯನ್ನು ಮಾಡಿ ಅಲ್ಲಲ್ಲಿ ದೇವತಾಪ್ರತಿಷ್ಠೆಯನ್ನು ಮಾಡಿಸಿ ಭಕ್ತರಿಗೆ ಭಗವತ್ಸೇವೆಯ ಅನುಕೂಲ್ಯವನ್ನು ಕಲ್ಪಿಸಿಕೊಟ್ಟದ್ದಲ್ಲದೆ, ತಮ್ಮ ಶಿಷ್ಯಕೋಟಿಯಲ್ಲಿ ಸೇರಿದ್ದ ಪುರಂದರದಾಸರು, ಕನಕದಾಸರು – ಎಂಬ ಇಬ್ಬರು ಮಹನೀಯರಿಗೆ ಕೊಟ್ಟ ಪ್ರೋತ್ಸಾಹದ ಫಲವಾಗಿ ಆ ಇಬ್ಬರ ಭಕ್ತಿಪೂರ್ವಕವಾದ ದಾಸರ ಪದಗಳನ್ನು ಕೇಳಿ, ಹಾಡಿ, ನಲಿಯುವ ಸೌಭಾಗ್ಯಕ್ಕೆ ಇಡಿಯ ಕನ್ನಡನಾಡೇ ಅವರಿಗೆ ಚಿರಋಣಿಯಾಗುವಂತೆ ಮಾಡಿರುತ್ತಾರೆ.

ಎಲ್ಲಾ ಪ್ರಾಚೀನಮಹಾತ್ಮರ ಚರಿತ್ರೆಯಲ್ಲಿರುವಂತೆ ವ್ಯಾಸರಾಯ ಸ್ವಾಮಿಗಳವರ ಚರಿತ್ರೆಯಲ್ಲಿಯೂ ಎಷ್ಟೋ ಅದ್ಭುತಲೀಲೆಗಳು ನಡೆದವೆಂದು ಭಕ್ತರು ಹೇಳಿಕೊಳ್ಳುತ್ತಾರೆ. ಆದರೆ ಅವುಗಳನ್ನೆಲ್ಲ ನಂಬದೆ ಸಾಮಾನ್ಯ ಮನುಷ್ಯದೃಷ್ಟಿಯಿಂದ ನೋಡಿದರೂ ಸ್ವಾಮಿಗಳ ಇತಿಹಾಸವೆಂಬುದೇ ಒಂದು ಅದ್ಭುತಲೀಲೆಯಾಗಿ ತೋರುವದರಲ್ಲಿ ಸಂದೇಹವಿಲ್ಲ.

★★★★★

# ಭಕ್ತ ಪುರಂದರದಾಸರು

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಭಕ್ತವರ್ಯರಾದ ಶ್ರೀಪುರಂದರದಾಸರ ಹೆಸರು ಹೆಚ್ಚುಹೆಚ್ಚಾಗಿ ಕನ್ನಡಿಗರ ಮನಸ್ಸನ್ನು ಸೆಳೆಯುತ್ತಿದೆ. ಪ್ರತಿವರ್ಷವೂ ಪುಷ್ಯ ಬಹುಳ ಅಮಾವಾಸ್ಯೆಯದಿನ ಈಗ ಎಲ್ಲೆಲ್ಲಿಯೂ ಆ ಪುಣ್ಯಶ್ಲೋಕರ ಪುಣ್ಯದಿನವನ್ನು ಜನರು ಆಚರಿಸುತ್ತಿರುತ್ತಾರೆ. ಕನ್ನಡದಲ್ಲಿ ಅವರು ರಚಿಸಿರುವ 'ದಾಸರಪದಗಳು' ಅಥವಾ 'ದೇವರನಾಮಗಳು' ಮುಂತಾದವುಗಳನ್ನು ಸಾಹಿತ್ಯದೃಷ್ಟಿಯಿಂದಲೂ ಸಂಗ್ರಹಿಸಬೇಕೆಂಬ ಲವಲವಿಕೆಯು ನಮ್ಮ ನಾಡಿನವರಲ್ಲಿ ಉಂಟಾಗುತ್ತಿದೆ. ಇದೊಂದು ಶುಭಚಿಹ್ನೆಯೇ ಸರಿ.

ಶ್ರೀ ಪುರಂದರದಾಸರು ಕನ್ನಡದಲ್ಲಿ ಪದಗಳನ್ನು ರಚಿಸಿದಾರೆ, ಅವರ ಪದಗಳು ಸಂಗೀತಗಾರರನ್ನು ವಶಪಡಿಸಿಕೊಂಡಿದೆ, ಕೀರ್ತನಸಂಪ್ರದಾಯಕ್ಕೆ ಅವರೊಬ್ಬರನ್ನು ಬಲುಮುಖ್ಯರಾದ ಆಚಾರ್ಯಪುರುಷರೆಂದು ಭಾವಿಸಬಹುದು. ಇವೆಲ್ಲವೂ ನಮ್ಮ ನಾಡಿನವರಿಗೆ ಹೆಮ್ಮೆಗೆ ತಕ್ಕ ವಿಷಯಗಳೇ ಸರಿ. ಅವರು ಮಾಡಿರುವ ಮಹೋಪಕೃತಿಯನ್ನು ಅವಶ್ಯವಾಗಿ ನಾವು ಸ್ಮರಿಸತಕ್ಕದ್ದು ಯುಕ್ತವಾಗಿದೆ.

ಆದರೆ ದಾಸವರ್ಯರ ಜೀವನವೂ ಉಪಕೃತಿಯೂ ಮೇಲೆ ಹೇಳಿದ ಕ್ಷೇತ್ರಕ್ಕಿಂತಲೂ ಹೆಚ್ಚಿನ ಕ್ಷೇತ್ರವನ್ನು ವ್ಯಾಪಿಸುವಷ್ಟು ವಿಶಾಲವಾಗಿರುತ್ತವೆಯೆಂಬುದನ್ನು ನಾವುಗಳು ಮನದಂದುಕೊಳ್ಳುವದು ಒಳ್ಳೆಯದು. ಅವರು ಮಾಧ್ವವೃದಂದಲ್ಲಿ ಹುಟ್ಟಿ ಹೆಸರುವಾಸಿಗೆ ಬಂದರಾದರೂ ಈಗ ಅವರು

ಮಾಧ್ವರೆಂದೇನೂ ಜನರ ಮನಸ್ಸಿನಲ್ಲಿ ಹೆಚ್ಚಿನ ಸ್ಥಾನವನ್ನು ಆಕ್ರಮಿಸಿರುವದಿಲ್ಲ; ವ್ಯಾಪಕವಾದ ಅವರ ಉಪದೇಶಗಳನ್ನೊಳಗೊಂಡ ಪದಗಳು ಈಗ ಮತತ್ರಯದ ಬ್ರಾಹ್ಮಣರನ್ನೂ ಅಬ್ರಾಹ್ಮಣರನ್ನೂ ಸಮನಾಗಿಯೇ ಮನಮೆಚ್ಚಿಸಿರುತ್ತಿವೆ. ಅವರು ದೇಶಕಾಲದ ಎಲ್ಲೆಕಟ್ಟನ್ನು ಮೀರಿ ನಾಡಿನ ಮಹಾಪುರುಷರ ಸಾಲಿನಲ್ಲಿ ಸೇರಿಬಿಟ್ಟಿರುತ್ತಾರೆ.

ಪುರಂದರದಾಸರವರು ತಮ್ಮ ಗಾರ್ಹಸ್ಥ್ಯಧರ್ಮವನ್ನು ಕಾಪಾಡಿಕೊಂಡು ಬರುತ್ತಿದ್ದಾಗ ಕಾಸಿಗೆಕಾಸನ್ನು ಕೂಡಿಹಾಕಿ ಬಲು ಜಿಪುಣತನದಿಂದ ಕಾಲವನ್ನು ಕಳೆಯುತ್ತಿದ್ದರೆಂತಲೂ ಅವರನ್ನು ಪರೀಕ್ಷೆಮಾಡಲೋಸುಗವಾಗಿ ಭಗವಂತನೇ ಬ್ರಾಹ್ಮಣವೇಷಧಾರಿಯಾಗಿ ಅವರಲ್ಲಿ ಯಾಚನೆಮಾಡಿದನೆಂತಲೂ ಆಗಲೂ ಅವರೂ ದಾನದ ಕೈಯನ್ನು ಮುಂದಕ್ಕೆ ಚಾಚುವ ಸಂದರ್ಭವು ಕಾಣಿಸಲಿಲ್ಲವಾಗಿ ಅವರ ಪತ್ನಿಯಮೂಲಕ ಒಂದು ಮೂಗುತಿಯ ದಾನವನ್ನು ಪಡೆದು ಆ ಮೂಲಕ ಅವರ ಸತ್ತ್ವಪರೀಕ್ಷೆಯನ್ನು ಆ ಭಗವಂತನು ಮಾಡಿದನೆಂತಲೂ ಒಂದು ಕಥೆ ಎಲ್ಲೆಲ್ಲಿಯೂ ಹರಡಿದೆಯಷ್ಟೆ. ಈ ಭಗವಲ್ಲೀಲೆಯಲ್ಲಿಯೂ ನಮಗೊಂದು ನೀತಿಯು ಕಂಡುಬರುತ್ತಿದೆ. ಲೌಕಿಕಸಂಪತ್ತನ್ನು ಇಷ್ಟೊಂದು ಮಮತೆಯಿಂದ ಕೂಡಿಹಾಕುವವನು ಪಾರಾಮಾರ್ಥಿಕಸಂಪತ್ತನ್ನು ಇನ್ನೆಷ್ಟು ಬಲವಾದ ಆಶೆಯಿಂದ ಕೂಡಿಹಾಕಲಾರನು! ಇವನನ್ನೇ ಆ ಸಂಪತ್ತಿನ ಹಂಚುವಿಕೆಗೆ ನಿಮಿತ್ತವಾಗಿ ಮಾಡಿಕೊಂಡರೆ ನನ್ನ ಕಾರ್ಯವು ಸಲೀಸಾಗಿ ನೆರವೇರುವದು – ಎಂದು ಭಗವಂತನೇ ಎಣಿಸಿಕೊಂಡಂತೆ ತೋರುತ್ತದೆ. ವಿದ್ಯೆಯನ್ನೂ ಹಣವನ್ನೂ ಸಂಪಾದಿಸುವವರು ತಮಗೆ ಮುಪ್ಪು ಸಾವುಗಳೇ ಇಲ್ಲವೆಂಬಷ್ಟು ಗಟ್ಟಿಮನಸ್ಸಿನಿಂದ ಆ ಕೆಲಸಕ್ಕೆ ಕೈಹಾಕಬೇಕೆಂದೂ ಧರ್ಮವನ್ನು ಮಾಡುವದಕ್ಕೆ ಹೊರಟಾಗ ಎದುರುಗಡೆಯಲ್ಲಿ ಮೃತ್ಯುವು ನಿಂತಿರುವಂತೆ ತಿಳಿದುಕೊಳ್ಳಬೇಕೆಂತಲೂ ಹಿರಿಯರ ಒಂದು ಒಳ್ನುಡಿ ಯುಂಟು. ಅದು ನಮ್ಮ ದಾಸರವರ ವಿಷಯಕ್ಕೆ ಅಕ್ಷರಶಃ ಹೊಂದುತ್ತದೆ. ಹಣವನ್ನು ಕೂಡಿಹಾಕುವಾಗ ಅವರು ಎಷ್ಟು ಆದರವನ್ನು ತೋರಿಸಿದರೋ ವೈರಾಗ್ಯದಿಂದ ಮನೆಯನ್ನು ಬಿಟ್ಟು ಹೊರಡುವಾಗ ಇಹಸಂಪತ್ತನ್ನೆಲ್ಲ ಅಷ್ಟೇ ಅಸಡ್ಡೆಯಿಂದ ಕಂಡು ಭಗವಂತನಲ್ಲಿಯೇ ತಮ್ಮ ವಿಶ್ವಾಸವನ್ನೆಲ್ಲ ಹಾಕಿ ಮುಂದಕ್ಕೆ ಹೊರಟ ಧೀರರವರು.

ಈ ಮಹಾಪುರುಷರು ಬರೆದಿರುವ ದೇವರನಾಮಗಳನ್ನೂ ಉಗಾಭೋಗಗಳನ್ನೂ ಸುಳಾದಿಗಳನ್ನೂ ಹಾಡಿ ನಲಿಯುತ್ತಿರುವವರ ಸಂಖ್ಯೆಯು

ಈ ದೇಶದಲ್ಲಿ ಅಪರಿಮಿತವಾಗಿದೆ. ಅವರು ಮಾಡಿರುವ ನಿತ್ಯೋಪದೇಶಗಳನ್ನು ಜನರು ಸಂಭಾಷಣೆಯಲ್ಲಿ ಗಾದೆಯಾಗಿ ಉಪಯೋಗಿಸುತ್ತಿದಾರೆ; ಭಕ್ತಿಯ ಸೂಕ್ತಿಗಳನ್ನು ಕೀರ್ತನಕಾರರು ಹರಿಕಥಾಪ್ರಸಂಗದಲ್ಲಿ ಉಪಯೋಗಿಸಿ ಸಭಿಕರನ್ನು ಆನಂದಪಡಿಸುತ್ತಿದಾರೆ; ತತ್ತ್ವವಿಚಾರಪರರು ಕೆಲಕೆಲವು ಪದಗಳಲ್ಲಿರುವ ಆಳವಾದ ವೇದಾಂತಾರ್ಥವನ್ನು ಮನಗಂಡು ತಮ್ಮ ಹೃದಯಕ್ಕೆ ಅಪ್ಪಿಕೊಳ್ಳುತ್ತಿದ್ದಾರೆ.

ಇಂಥ ಮಹನೀಯರಲ್ಲಿ ನಮ್ಮ ಕೃತಜ್ಞತೆಯನ್ನು ಹೇಗೆ ಸಮರ್ಪಿಸಬೇಕು? ಅವರ ಉಪಕಾರವನ್ನು ನಮ್ಮ ದೇಶದ ಯುವಕರು ಅರಿಯುವಂತೆ ಹೇಗೆ ಮಾಡಬೇಕು? ಜಗತ್ತಿನ ಅವರ ಉಚ್ಚಸ್ಥಾನವನ್ನು ಕನ್ನಡನಾಡಿನಿಂದಾಚೆಯಿರುವವರ ಮನಸ್ಸಿಗೂ ಹಿಡಿಯುವಂತೆ ತಿಳಿಸುವದಕ್ಕೇನು ಮಾಡಬೇಕು?- ಎಂಬ ಯೋಚನೆಯು ನಮ್ಮಗಳಿಗೆ ಹತ್ತಿಕೊಳ್ಳುವದು ಸ್ವಾಭಾವಿಕವಾಗಿದೆ. ಮೊಟ್ಟಮೊದಲು ಅವರ ಜೀವನಚರಿತ್ರೆಯನ್ನೂ ಗ್ರಂಥಗಳನ್ನೂ ಒಳ್ಳೆಯ ತಿಳಿಗನ್ನಡದಲ್ಲಿ ಬರೆಯಿಸಿ ಪ್ರಕಟಿಸಬೇಕೆಂದು ಹೊಳೆಯುವದೂ ಸ್ವಾಭಾವಿಕವಾಗಿದೆ. ಈ ಕೆಲಸಕ್ಕೆ ಕೆಲವರು ಮಹನೀಯರು ಆಗಲೇ ಕೈಹಾಕಿರುವರೆಂದು ತಿಳಿದು ನನಗೆ ಆನಂದವಾಗಿರುತ್ತದೆ. ಇಂಥ ಪ್ರಕಟನೆಯಲ್ಲಿ ಯಾವ ಕ್ರಮವನ್ನು ಅನುಸರಿಸುವದು ಉತ್ತಮವೆಂಬ ಬಗ್ಗೆ ಎಲ್ಲರೂ ತಮತಮಗೆ ತೋರುವ ಸೂಚನೆಗಳನ್ನು ಕೊಡುವದು ಒಳ್ಳೆಯದು. ನನ್ನ ಅಭಿಪ್ರಾಯದಲ್ಲಿ ಗ್ರಂಥವನ್ನು ಉತ್ತಮವಾದ ಕಾಗದ, ಅಂದವಾದ ಅಚ್ಚಿನ ಅಕ್ಷರ, ಬಲವಾದ ಮೈಗಟ್ಟು- ಮುಂತಾದ ಸೌಂದರ್ಯದ ಸಾಮಗ್ರಿಗಳೆಲ್ಲವನ್ನೂ ಕೂಡಿರುವ ಉತ್ಕೃಷ್ಟಪ್ರಕಟನೆಯೊಂದು, ಜನಸಾಮಾನ್ಯಕ್ಕೂ ತೀರ ಕಡಿಮೆಯ ಬೆಲೆಯಲ್ಲಿ ಸಿಕ್ಕುವ ಸಾಧಾರಣ ಪ್ರಕಟನೆಯೊಂದು ಹೀಗೆರಡು ರೂಪಗಳಲ್ಲಿಯೂ ಹೊರಡಿಸಬೇಕೆಂದು ತೋರುತ್ತದೆ. ಕನ್ನಡನಾಡಿನಲ್ಲೆಲ್ಲ ತಿರುಗಿ ಪುರಂದರದಾಸರ ಪದಗಳೆಂದು ಜನರು ಹಾಡಿಕೊಳ್ಳುತ್ತಿರುವ ಅಥವಾ ಬರೆದಿಟ್ಟುಕೊಂಡಿರುವ ಕೃತಿಗಳನ್ನೆಲ್ಲ ಒಂದು ಕಡೆಗೆ ಸಂಗ್ರಹಿಸಿ ಅವುಗಳಲ್ಲಿ ಯಾವವು ನಿಜವಾಗಿ ಶ್ರೀದಾಸರಮಯಾವವು 'ಪುರಂದರವಿಠಲ' ಎಂಬ ನಾಮಅಂಕಿತದಿಂದ ಯಾರೋ ಸೇರಿಸಿರಬಹುದಾದವು ಎಂಬುದನು ಸಾಧ್ಯವಾದಮಟ್ಟಿಗೆ ನಿರ್ಣಯಿಸಿದಮೇಲೆಯೇ ಗ್ರಂಥಪ್ರಕಾಶಕ್ಕೆ ಪ್ರಾರಂಭಿಸಬೇಕು. ಒಳಗಿನ ವಿಷಯಗಳನ್ನು ಮಾಧ್ವಮತಪ್ರಕ್ರಿಯೆ, ನೀತ್ಯುಪದೇಶಗಳು. ಸಾಮಾಜಿಕವಿಚಾರ ಸರ್ವಸಮ್ಮತತತ್ತ್ವವಿಚಾರ - ಹೀಗೆ ಭಾಗಭಾಗವಾಗಿ ವಿಂಗಡಿಸಬೇಕು;

ಆಯಾ ಭಾಗಕ್ಕೊಬ್ಬ ಉಪಸಂಪಾದಕರನ್ನು ನಿಯಮಿಸಿ ವಿಷಯವನ್ನು ಗ್ರಹಿಸುವದಕ್ಕೆ ಬೇಕಾದ ಸಲಕರಣೆಗಳನ್ನೆಲ್ಲ ಬೋಧಿಸುವ ಏರ್ಪಾಡುಮಾಡಬೇಕು. ಭಾಷೆಯಲ್ಲಿರುವ ಅಸಾಧಾರಣಧರ್ಮಗಳು ವ್ಯಾಕರಣ. ಅಲಂಕಾರ-ಮುಂತಾದವುಗಳನ್ನು ಸೂಚಿಸಬೇಕು; ಪದಗಳ ರಾಗತಾಳಗಳನ್ನು ಸಂಪ್ರದಾಯಗತವಾಗಿ ಹಾಡಿಕೊಂಡುಬಂದಿರುವ ದಾಸರುಗಳ ಸಹಾಯದಿಂದ ಗೊತ್ತುಪಡಿಸಿ ಒಂದೊಂದು ಪಲ್ಲವಿಗೂ ಚರಣಕ್ಕೂ ಸಂಗೀತಸ್ವರವನ್ನು ಸೂಚಿಸಬೇಕು; ನೀತಿಯೇ ಮುಂತಾವುಗಳನ್ನು ಕುರಿತ ವಿಷಯದಲ್ಲಿ ಪ್ರಚಾರದಲ್ಲಿರುವವವನ್ನು ಅಲ್ಲಲ್ಲಿ ಸಂಕ್ಷೇಪವಾಗಿ ಕೊಡಬೇಕು. ತತ್ತ್ವ ವಿಚಾರದಲ್ಲಿ ಅಲ್ಲಲ್ಲಿಗೆ ತಕ್ಕ ಉಪನಿಷದ್ವಾಕ್ಯಗಳು ಅಥವಾ ಆಚಾರ್ಯವಚನಗಳು – ಇವುಗಳನ್ನು ಸೇರಿಸಬೇಕು. ಕೊನೆಯಲ್ಲಿ ಪ್ರತಿಯೊಂದು ಪದಕ್ಕೂ ಅಕಾರಾದಿ ಚರಣಸೂಚಿಕೆಯನ್ನು ಏರ್ಪಡಿಸಬೇಕು.

ಶ್ರೀಪುರಂದರದಾಸರವರು ಹಾಡಿರುವ ಪದಗಳಲ್ಲಿ ಕೆಲವು ದೇಶಕಾಲಗಳ ಕೆಟ್ಟಿಲ್ಲದೆ ಸಾರ್ವತ್ರಿಕವ್ಯಾಪನೆಯುಳ್ಳವುಗಳಾಗಿವೆ ಎಂದು ಮೊದಲೇ ಬಿನ್ನಹಿಸುತ್ತೇನಷ್ಟೇ ಅಂಥ ಪದಗಳನ್ನು ಆರಿಸಿ ಅವುಗಳನ್ನು ಇಂಗ್ಲಿಷು ಮತ್ತು ಹಿಂದಿ ಪರಿವರ್ತನೆಯೊಡನೆ ಪ್ರಕಟಿಸಿದರೆ ಕನ್ನಡನಾಡಿನಲ್ಲಿ ಅವತಿರಿಸಿದ ಈ ಮಹಾತ್ಮರು ಎಂಥ ಜಗನ್ಮಾನ್ಯರೆಂಬುದು ಕನ್ನಡಿಗರಲ್ಲದವರಲ್ಲಿಯೂ ಹರಡೀತು, ಇಡಿಯ ಜಗತ್ತಿನ ಸಂಸ್ಕೃತಿಯನ್ನು ಉತ್ತಮಗೊಳಿಸುವದರಲ್ಲಿ ಕನ್ನಡನಾಡಿನ ಸ್ಥಾನಮಾನಗಳು ಯಾವುದೆಂಬುದರ ಭಾವನೆಯೂ ದೊರೆತಂತಾದೀತು. ಈ ಘನವಾದ ಕಾರ್ಯವನ್ನು ಕೈಗೆತ್ತುಕೊಳ್ಳುವಂತೆ ಶ್ರೀ ಪುರಂದರವಿಠಲನು ಕೆಲವರಾದರೂ ದಾಸರ ಭಕ್ತರನ್ನು ಪ್ರೇರಿಸಲಿ!

★★★★★

# ಶ್ರೀ ವಲ್ಲಭಾಚಾರ್ಯರು

**- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಗುಜರಾತ್, ಮಾರ್ವಾಡ. ಈ ಪ್ರಾಂತ್ಯಗಳಲ್ಲಿ ಪ್ರಚಾರದಲ್ಲಿರುವ ವೈಷ್ಣವಪಂಥದ ಮೂಲಪ್ರವರ್ತಕರಾದ ಶ್ರೀವಲ್ಲಭಾಚಾರ್ಯರು ಶ್ರೀಕೃಷ್ಣಚೈತನ್ಯ ಮಹಾಪ್ರಭುವಿನ ಸಮಕಾಲೀನರು. ಇವರು ತಮ್ಮ ಕಾರ್ಯಕ್ಷೇತ್ರದಿಂದ ಉತ್ತರದೇಶದವರೆನಿಸಿಕೊಂಡಿದ್ದರೂ ವಂಶಕ್ರಮದಲ್ಲಿ ದಕ್ಷಿಣ ದೇಶದವರೆ. ಇವರ ತಂದೆಯಾದ ಲಕ್ಷ್ಮಣಭಟ್ಟನೆಂಬಾತನು ತೆಲುಗು ದೇಶದ ಕಂಕರವಾಡವೆಂಬ ಗ್ರಾಮದವನು. ಆತನು ಕಾಶಿಯಾತ್ರೆಗಾಗಿ ಹೋಗಿ ಅಲ್ಲಿಯೇ ಕೆಲವು ಕಾಲವಿದ್ದು ಕಾರಣಾಂತರದಿಂದ ಆ ನಗರಿಯನ್ನು ಬಿಟ್ಟು ಹೊರಟನು. ದಾರಿಯಲ್ಲಿ ಆತನ ಹೆಂಡತಿಯು ಚಂಪಾರಣ್ಯವೆಂಬಲ್ಲಿ ತನ್ನ ಎರಡನೆಯ ಮಗನನ್ನು ಹಡೆದಳು; ಈ ಮಗನೇ ಮುಂದೆ ವಲ್ಲಭಾಚಾರ್ಯನಾಮದಿಂದ ಪ್ರಸಿದ್ಧನಾದನು. (ವಲ್ಲಭಾಚಾರ್ಯರ ಜನ್ಮಕಾಲವು ಕ್ರಿ.ಶ.1476 ಎಂದು ಹೇಳುತ್ತಾರೆ; ಆದರೆ ಈ ವಿಷಯದಲ್ಲಿ ಸ್ವಲ್ಪ ವಿವಾದವುಂಟು.) ಕೆಲವು ಕಾಲದ ಮೇಲೆ ಲಕ್ಷ್ಮಣಭಟ್ಟನು ಕಾಶಿಗೇ ಹೋಗಿ ನೆಲೆಸಿದ್ದರಿಂದ ವಲ್ಲಭನ ವಿದ್ಯಾಭ್ಯಾಸವೆಲ್ಲ ಅಲ್ಲಿಯೇ ನಡೆಯಿತು.

ವಲ್ಲಭನ ಮೂರನೆಯ ವಯಸ್ಸಿನಲ್ಲಿ ತಾಯಿಯೂ ಹನ್ನೊಂದನೆಯ ವಯಸ್ಸಿನಲ್ಲಿ ತಂದೆಯೂ ಪರಲೋಕವನ್ನೈದಿದರು. ಈ ಸಣ್ಣ ವಯಸ್ಸಿನಲ್ಲಿಯೇ ವಲ್ಲಭನು ದಕ್ಷಿಣಕ್ಕೆ ಹೊರಟು ವೈಷ್ಣವಮತವನ್ನು ಬೋಧಿಸುವದು, ಜನರಿಗೆ ವೈಷ್ಣವದೀಕ್ಷೆಯನ್ನು ಕೊಡುವದು, ಪಂಡಿತರನ್ನು ವಾಕ್ಯಾರ್ಥದಲ್ಲಿ ಸೋಲಿಸುವದು - ಮುಂತಾದ ಕಾರ್ಯಗಳಿಂದ ತನ್ನ ಆಚಾರ್ಯತ್ವವನ್ನು ಪ್ರಕಟಿಸಿದನು. ದಾಮೋದರದಾಸನು ಈತನ ಶಿಷ್ಯರಲ್ಲಿ ಮೊಟ್ಟಮೊದಲನೆಯ ಪಂಗಡಕ್ಕೆ ಸೇರಿದವನು; ಅವನೊಡನೆ ವಲ್ಲಭನು ವಿಜಯನಗರಕ್ಕೆ ಹೋಗಿ ಕೃಷ್ಣದೇವರಾಯನ ಸಭೆಯಲ್ಲಿ ಅದ್ವೈತಿಪಂಡಿತರೊಡನೆ ಮಾಡಿದ ವಾಕ್ಯಾರ್ಥದಲ್ಲಿ ಜಯಶೀಲನಾಗಲು ರಾಜನು ಬಹಳ ಸಂತೋಷಪಟ್ಟು ತುಂಬ ಬೆಲೆಬಾಳುವ ಚಿನ್ನಬೆಳ್ಳಿಯ ಪಾರಿತೋಷಕಗಳನ್ನು ಇತ್ತನು. ಇದನ್ನು ಕಂಡು ಅಲ್ಲಿಯ ವೈಷ್ಣವಜನರೆಲ್ಲರೂ ವಲ್ಲಭನನ್ನು ವೈಷ್ಣವಾಚಾರ್ಯನೆಂದು ಸನ್ಮಾನಿಸಿ ಆತನನ್ನು ತಮ್ಮ ಗುರುವಾಗಿ ಮಾಡಿಕೊಂಡರು.

ಅಲ್ಲಿಂದ ವಲ್ಲಭಾಚಾರ್ಯರು ಉಜ್ಜನಿಯ ಕಡೆಗೆ ವಿಜಯಮಾಡಿ ಅಲ್ಲಿ ಒಂದು ಅರಳಿಯ ಮರದ ಕೆಳಗೆ ಕೆಲವು ಕಾಲ ವಾಸಮಾಡಿಕೊಂಡಿದ್ದರು; ಆ ಸ್ಥಳವು ಈಗಲೂ ಮಹಾಪ್ರಭುವಿನ '**ಬೈಠಕ್**' ಎಂಬ ಹೆಸರಿನಿಂದ ಪ್ರಸಿದ್ಧವಾಗಿ ರುತ್ತದೆ. ಮಧುರಾಪುರಿಯೇ ಮುಂತಾದ ಬೇರೆ ಕೆಲವು ಕಡೆಗಳಲ್ಲಿಯೂ ಇಂಥ 'ಬೈಠಕ್ಕು'ಗಳುಂಟು. ಚುನಾರುಕೋಟೆಗೆ ಸುಮಾರು ಎರಡು ಮೈಲಿಯ ದೂರದಲ್ಲಿ ಇವರ ಸ್ನಾನದಿಂದ ಪವಿತ್ರವಾದ **ಆಚಾರ್ಯಕುಂಡ**ವೆಂಬ ಕೊಳವೊಂದು ಇದೆ; ಅಲ್ಲಿ ಒಂದು ದೇವಾಲಯವೂ ಒಂದು ಮಠವೂ ಇವೆ. ವಲ್ಲಭಾಚಾರ್ಯರು ಮಹಾರಾಷ್ಟ್ರ ರಾಜಪುತ್ರಸ್ಥಾನಗಳ ಮಾರ್ಗವಾಗಿ ವೈಷ್ಣವಮಾರ್ಗವನ್ನು ಹಬ್ಬಿಸುತ್ತಾ ಶ್ರೀಕೃಷ್ಣಚೈತನ್ಯರಂತೆಯೇ ಎಷ್ಟೋ ಜನರನ್ನು ತಮ್ಮ ಶಿಷ್ಯಮಂಡಲಿಗೆ ಸೇರಿಸಿಕೊಳ್ಳುತ್ತಾ ಅಲಹಾಬಾದಿನ ಮಾರ್ಗವಾಗಿ ಕಾಶಿಗೆ ತೆರಳಿದರು. ಕೆಲವು ದಿನದ ಮೇಲೆ ಅವರು ಇನ್ನೊಂದು ಬಾರಿ ದಿಗ್ವಿಜಯಮಾಡಿ ಹರಿದ್ವಾರ, ಬದರಿ – ಮುಂತಾದ ಯಾತ್ರಾಸ್ಥಳಗಳನ್ನು ನೋಡಿಕೊಂಡು ಬೃಂದಾವನಕ್ಕೆ ಬಂದರು; ಅಲ್ಲಿ ಶ್ರೀಕೃಷ್ಣನು ಅವರಿಗೆ ದರ್ಶನವನ್ನಿತ್ತು ಬಾಲಗೋಪಾಲನ ಉಪಾಸನೆಮಾಡುವ ರೀತಿಯನ್ನು ತೋರಿಸಿಕೊಟ್ಟನೆಂದು ಆ ಪಂಥದವರು ನಂಬುತ್ತಾರೆ. ವಲ್ಲಭಾಚಾರ್ಯರು ಬೋಧಿಸಿರುವ **ಪುಷ್ಟಿಮಾರ್ಗ**ವನ್ನು ಶ್ರೀಕೃಷ್ಣಭಗವಂತನೇ ಆಚಾರ್ಯರಿಗೆ ಇಲ್ಲಿ ತಿಳಿಯಪಡಿಸಿದನಂತೆ. ಗೋವರ್ಧನಗಿರಿಯಲ್ಲಿ '**ಶ್ರೀನಾಥಜಿ**'ಎಂಬ ಹೆಸರಿನ ಶ್ರೀಕೃಷ್ಣದೇವಾಲಯವೊಂದನ್ನು ಆಚಾರ್ಯರು ಪ್ರತಿಷ್ಠೆಮಾಡಿಸಿದ್ದಾರೆ.

ಇದಾದ ಕೆಲವು ದಿನಗಳ ಮೇಲೆ ಆಚಾರ್ಯರು ಕಾಶಿಯ '**ಮಹಾಲಕ್ಷ್ಮಿ**'ಯೆಂಬ ಬ್ರಾಹ್ಮಣಕನ್ಯೆಯನ್ನು ಮದುವೆಯಾಗಿ ಆಕೆಯಲ್ಲಿ '**ಗೋಪಿನಾಥ**', '**ವಿಠ್ಠಲನಾಥ**' – ಎಂಬ ಇಬ್ಬರು ಮಕ್ಕಳನ್ನು ಪಡೆದರು. ಮದುವೆಯಿಂದ ಧರ್ಮವೃದ್ಧಿಗೆ ತೊಂದರೆಯಾಗುವದರಿಂದ ಬದಲು ಅನುಕೂಲವೇ ಆಗಬಹುದೆಂಬುದನ್ನು ತಮ್ಮ ಉದಾಹರಣೆಯಿಂದಲೇ ಆಚಾರ್ಯರು ತೋರ್ಪಡಿಸಿಕೊಟ್ಟರು. ಅವರು ಆಹಿತಾಗ್ನಿಗಳಾಗಿ ಜ್ಯೋತಿಷ್ಟೋಮಾದಿಯಜ್ಞಗಳನ್ನು ಮಾಡಿದರು; ತಮ್ಮಿಬ್ಬರು ಮಕ್ಕಳೂ ಪುಷ್ಟಿಮಾರ್ಗವನ್ನು ಮುಂದುವರಿಸುವ ಗುರುಪೀಠವನ್ನಲಂಕರಿಸುವಷ್ಟು ವಿದ್ಯೆಯನ್ನು ತಾವೇ ಹೇಳಿಕೊಟ್ಟರು. '**ಅಣುಭಾಷ್ಯ**', '**ತತ್ತ್ವದೀಪನಿಬಂಧ**'. '**ಭಾಗವತಸುಬೋಧಿನೀಟಿಕಾ**', **ಪುಷ್ಟಿಪ್ರವಾಹಮರ್ಯಾದಾ**', '**ಸಿದ್ಧಾಂತರಹಸ್ಯ**'–

ಮುಂತಾದ ಸಂಸ್ಕೃತಗ್ರಂಥಗಳನ್ನೂ, **'ಅಂತಃಕರಣಪ್ರಬೋಧ'**, **'ನವರತ್ನ'**, **'ಕೃಷ್ಣಾಶ್ರಯ'**, **'ಭಕ್ತಿವರ್ಧಿನೀ'**- ಮುಂತಾದ ವ್ರಜಭಾಷಾಗ್ರಂಥಗಳನ್ನೂ ರಚಿಸಿ ಕೊನೆಗೆ ತಮ್ಮ ಐವತ್ತೆರಡನೆಯ ವಯಸ್ಸಿನಲ್ಲಿ ಕಾಶಿಯ ಹನುಮಾನಘಾಟಿನಲ್ಲಿ ಸ್ನಾನಮಾಡುವದಕ್ಕೆ ಪ್ರವೇಶಮಾಡಿ ಹಾಗೆಯೇ ಅದೃಶ್ಯರಾದರು. ಅಲ್ಲಿ ಒಂದು ಉಜ್ಜ್ವಲವಾದ ಉರಿಯು ಎದ್ದಂತೆಯೂ ಅದರೊಳಗೆ ಆಚಾರ್ಯರು ದಿವ್ಯದೇಹವನ್ನು ಧರಿಸಿ ಆಕಾಶಮಾರ್ಗವಾಗಿ ತೆರಳುತ್ತಿರುವ ಹಾಗೆ ಶಿಷ್ಯರಿಗೆ ತೋರ್ಪಡಿಸಿ ಕೊಂಡಂತೆಯೂ ಹೇಳುತ್ತಾರೆ.

ಆಚಾರ್ಯರು ಶಿಷ್ಯಪರಂಪರೆಯವರು ಗುಜರಾತಿನಲ್ಲಿಯೂ ಮಾರವಾಡದಲ್ಲಿಯೂ ಈಗಲೂ ಬೇರೆಬೇರೆ ಗುರುಪೀಠವನ್ನಲಂಕರಿಸುತ್ತಿದ್ದಾರೆ. ಅವರ ದ್ವಿತೀಯಪುತ್ರರಾದ ವಿಠ್ಠಲನಾಥಜಿಯವರ ವಂಶದವರೇ ಪುಷ್ಟಿ ಮಾರ್ಗವನ್ನು ಚೆನ್ನಾಗಿ ಬೆಳಿಯಿಸಿ ಅನೇಕ ಗ್ರಂಥಗಳನ್ನು ರಚಿಸಿದರು. ಆಚಾರ್ಯರು ಬೋಧಿಸಿರುವ ಸಿದ್ಧಾಂತಕ್ಕೆ **'ಶುದ್ಧಾದ್ವೈತ'**ವೆಂದು ಹೆಸರು. ಅದ್ವೈತ, ದ್ವೈತ ವಿಶಿಷ್ಟಾದ್ವೈತಗಳಿಗೂ ಶುದ್ಧಾದ್ವೈತಕ್ಕೂ ಇರುವ ಸಾಮ್ಯವೈಷಮ್ಯಗಳನ್ನೂ, ಪುಷ್ಟಿಮಾರ್ಗವೆಂಬ ಹೆಸರಿನಿಂದ ಆಚಾರ್ಯರು ಪ್ರಸಿದ್ಧಗೊಳಿಸಿ ಭಕ್ತಿಮಾರ್ಗದ ವಿವೇಚನೆಯನ್ನು ತಿಳಿಯಪಡಿಸಿದ್ದಾರೆ.

★★★★★

# ಶ್ರೀ ಕೃಷ್ಣಚೈತನ್ಯ ಮಹಾಪ್ರಭು

**-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಉತ್ತರದೇಶದಲ್ಲಿ ಮುಖ್ಯವಾಗಿ ಮೂರು ಬಗೆಯ ವೈಷ್ಣವಪಂಥಗಳಿವೆ. ಆಚಾರೀವೈಷ್ಣವರೆಂಬುವರು ನಾರಾಯಣೋಪಾಸಕರು; ಅಯೋಧ್ಯೆಯಲ್ಲಿರುವವರು ಶ್ರೀರಾಮೋಪಾಸಕರು; ಗುಜರಾತ್, ಕಾಥೆವಾಡ್, ರಾಜಪುಟಾನ, ಬಂಗಾಳ ಈ ಪ್ರಾಂತ್ಯಗಳಲ್ಲಿರುವವರು ಕೃಷ್ಣೋಪಾಸಕರು, ಅದರಲ್ಲಿಯೂ ಬಂಗಾಳದಲ್ಲಿ ಮುಖ್ಯವಾಗಿ ರಾಧಾಕೃಷ್ಣಭಕ್ತಿಯೇ ಬೆಳೆದಿರುವದು; ಈ ಸಂಥರ್ಭವನ್ನು ಆಚರಣೆಗೆ ತಂದ ಮಹನೀಯನೇ ಶ್ರೀ ಕೃಷ್ಣಚೈತನ್ಯನು.

ಚೈತನ್ಯನು ಶಂಕರರಾಮಾನುಜಮಧ್ವರಂತೆಯೇ ಸಂನ್ಯಾಸಿಯಾದರೂ ಅವರಂತೆಯೇ ಮತವನ್ನು ಹರಡುವದಕ್ಕೆ ತನ್ನ ಬಾಳುವೆಯನ್ನೆಲ್ಲ ಸವೆಸಿದ್ದರೂ ಆತನನ್ನು ಅವನ ಭಕ್ತರು ಬರಿಯ ಮತಾಚಾರ್ಯನೆಂಬಂತೆ ಗೌರವಿಸುವದಿಲ್ಲ, ಸಾಕ್ಷಾತ್ ಶ್ರೀಕೃಷ್ಣನೆಂದೇ ಲೆಕ್ಕಕ್ಕೆ ತೆಗೆದುಕೊಂಡಿರುತ್ತಾರೆ. ಚೈತನ್ಯನು ನಮ್ಮ ಆಚಾರ್ಯರುಗಳಂತೆ ಭಾಷ್ಯಗಳನ್ನೇನೂ ಬರೆದಿಟ್ಟಿಲ್ಲ. ಆದರೆ ಆತನ ಶಿಷ್ಯ ರನೇಕರು ಎಷ್ಟೋ ಗ್ರಂಥಗಳನ್ನು ರಚಿಸಿರುವರು, ಎಲ್ಲವೂ ಶ್ರೀಹರಿಯ ಭೇದಾ ಭೇದಪ್ರಕಾಶವೆಂಬುದೂ ಶ್ರೀಹರಿಯ ಭಕ್ತಿಯಿಂದಲೇ ಮನುಷ್ಯನು ಸಂಸಾರದಿಂದ ಪಾರಾಗುವನೆಂಬುದು ಚೈತನ್ಯಭಕ್ತರು ನಂಬಿರುವ ಸಿದ್ಧಾಂತದ ತಿರುಳಾಗಿದೆ.

ಚೈತನ್ಯನು ತರ್ಕವ್ಯಾಕರಣಗಳಲ್ಲಿ ದಿಗ್ದಂತಿಯಾಗಿದ್ದನು, ಆಗಿನ ಕಾಲದ ನವದ್ವೀಪದ ತಾರ್ಕಿಕರನ್ನೆಲ್ಲ ವಾದದಲ್ಲಿ ಗೆದ್ದು ಹೆಸರುವಾಸಿಯಾಗಿದ್ದನು, ಆತನು ಬಯಸಿದ್ದರೆ, ಆಗಿನ ವಾಡಿಕೆಯಂತೆ ತಾನೊಂದು ವಿದ್ಯಾಪೀಠವನ್ನೇ ಸ್ಥಾಪಿಸಿ, ಬೇಕಾದಷ್ಟು ಹಣವನ್ನು ಗಳಿಸಬಹುದಾಗಿತ್ತು; ಅಥವಾ ಯಾವನಾದರೊಬ್ಬ ಅರಸನಿಗೆ ಧರ್ಮಶಾಸ್ತ್ರದ ಪಂಡಿತನಾಗಿ ಆಸ್ಥಾನವಿದ್ವಾಂಸನೆನಿಸಿಕೊಳ್ಳಲೂ ಬಹುದಾಗಿತ್ತು. ಆದರೆ ಆತನ ಮನಸ್ಸಿನ ಒಲವೇ ಬೇರೆ ಕಡೆಯಾಯಿತು. ಅವನು ಈಶ್ವರಪೂರಿ ಎಂಬ ಮಾಧ್ವಸಂನ್ಯಾಸಿಯ ಸದುಪದೇಶವನ್ನು ಪಡೆದು ಮಿಗಿ ಲಿಲ್ಲದ ಕೃಷ್ಣಪ್ರೇಮದ ಅಮೃತಸವಿಯನ್ನು ಬೇಗ ಸಂಪಾದಿಸಿಕೊಂಡನು. ಕೆಲವು ದಿನಗಳಲ್ಲಿಯೇ ತಾನೂ ಸಂನ್ಯಾಸಿಯಾಗಿ ವೈಷ್ಣವಮಾರ್ಗದಲ್ಲಿ ಸಾಮಾನ್ಯ ಜನರಿಗೂ ಆದರವಾಗುವಂತೆ ಮಾಡಿ ನವದ್ವೀಪದ ತಾರ್ಕಿಕರನ್ನೂ ತರ್ಕಪ್ರಧಾನರಾದ ವೇದಾಂತಿಗಳನ್ನೂ ತಾಂತ್ರಿಕರನ್ನೂ ತನ್ನ ಪ್ರೇಮಪಾಶದಿಂದ ಕಟ್ಟಿ ವಶಗೊಳಿಸಿ. ಕೊಂಡುಬಿಟ್ಟನು.

ಶ್ರೀಕೃಷ್ಣಚೈತನ್ಯನ ಮನಸ್ಸು ಶುದ್ಧವಾದದ್ದು; ಅವನ ಹೃದಯವು ಭಗವ ವ್ಯಕ್ತಿಯಿಂದ ತುಂಬಿ ತುಳುಕುವದು, ಸಂಸಾರಿದೇವರಲ್ಲಿರುವ ಅಪಾರ ಕರುಣೆಯ ನೆಲವೀಡಾಗಿರುವದು. ಆದ್ದರಿಂದಲೆ ಅವನು ತನ್ನ ದೇಶದಲ್ಲಷ್ಟೇ ಅಲ್ಲದೆ, ಒರಿಸ್ಸ, ಆಂಧ್ರ, ಕರ್ಣಾಟಕ, ಮಲೆಯಾಳದ ಪಕ್ಕ, ಮಹಾರಾಷ್ಟ್ರ - ಮುಂತಾದ ಪ್ರಾಂತ ಗಳಲ್ಲಿಯ ಯಾತ್ರೆಯ ನೆಪದಿಂದ ಓಡಾಡಿ ಪೀಡಿತರನ್ನೂ ಪಾಮರರನ್ನೂ ತನ್ನ ನಗೆಮೊಗದಿಂದ ಹೊರಸೂಸುವ ಅಮೃತವಾಣಿಯಿಂದ ಭಕ್ತಿಮಾರ್ಗಕ್ಕೆಳೆದು ಕೊಂಡನು. ಭಜನೆ, ಭಕ್ತಿನಿರೂಪಣ, ಸಂಕೀರ್ತನೆ, ಅರ್ಪಣ ಇವುಗಳೇ ಆತನ ದಿನಚರ್ಯೆಯಾಗಿದ್ದವು.

ಚೈತನ್ಯನು ಏರ್ಪಡಿಸಿದ ನಗರಕೀರ್ತನಸಮಾರಂಭಗಳೂ ಜಗನ್ನಾಥರಥೋತ್ಸವಕಾಲದ ಜಾತ್ರೆಯ ಮಹೋತ್ಸವವೂ ಪಂಡಿತರು ಪಾಮರರು, ಬಡವರು ಭಾಗ್ಯವಂತರು, ರಾಜರು, ಪ್ರಜೆಗಳು, ಗೃಹಸ್ಥರು, ಸಂನ್ಯಾಸಿಗಳು, ಮೇಲುಜಾತಿಯವರು, ಕೀಳುಜಾತಿಯವರು– ಎಂಬ ಯಾವ ಭೇದಭಾವನೆಯೂ ಇಲ್ಲದಂತೆ ಎಲ್ಲರೂ ಒಗ್ಗಟ್ಟಿನಿಂದ ಭಗವತ್ಸೇವೆಗೆ ಸೇರುವದಕ್ಕೆ ಸಹಕಾರಿಯಾಗಿದ್ದವು. ಆತನು ವಿಷ್ಣುಭಕ್ತಿಗೆ ಜಾತಿಯ ಕಟ್ಟಳೆಯಿಲ್ಲವೆಂದು ಮುಸಲಮಾನರಿಗೂ ಚಂಡಾಲರಿಗೂ ಈ ಪಂಥದಲ್ಲಿ ಸ್ಥಳವನ್ನು ಕಲ್ಪಿಸಿಕೊಟ್ಟನು. ಮುಸಲಮಾನರ ಹಾವಳಿಯಿಂದ ಪಾಳುಬಿದ್ದಿದ್ದ ವೃಂದಾವನವು ಈತನ ಕಾಲದಲ್ಲಿ ಜೀವಿತವಾಯಿತು, ಸಂಸ್ಕೃತದಲ್ಲಿಯೂ ಬಂಗಾಲದಲ್ಲಿಯೂ ಭಕ್ತಿಯ ವಾಙ್ಮಯವು ಈ ಮಹಾತ್ಮನ ಅನುಗ್ರಹದಿಂದಲೇ ಬೆಳೆಯಿತು. **'ಜೀವೇ ದಯಾ, ನಾಮೇ ರುಚಿಃ'** ಜೀವನಲ್ಲಿ ದಯೆ, ಹರಿನಾಮದಲ್ಲಿ ಅಭಿರುಚಿ – ಈ ಎರಡೇ ವೈಷ್ಣವಸಾಧನವು ಎಂಬ ಪಲ್ಲವಿಯನ್ನು ಹಾಡಿದ ಈ ಮಹಾತ್ಮನ ಜಯಂತಿಯ ದಿನವಾದ ಫಾಲ್ಗುಣ ಶುದ್ಧ ಪೂರ್ಣಿಮೆಯನ್ನು ಸಾವಿರಗಟ್ಟಲೆಯ ಜನರು ಪವಿತ್ರ ದಿನವಾಗಿ ಎಣಿಸುವದೇನೂ ಆಶ್ಚರ್ಯವಲ್ಲ.

★★★★★

# ಶ್ರೀ ರಾಮಾನಂದಸಾಧು

**–ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಭರತಖಂಡದ ಉತ್ತರಭಾಗದಲ್ಲಿ ಭಕ್ತಿಯೋಗವನ್ನು ಉಜ್ಜೀವನಗೊಳಿಸಿದ ಸಾಧುಗಳಲ್ಲೆಲ್ಲ ರಾಮಾನಂದನೇ ಮೊಟ್ಟ ಮೊದಲನೆಯವನೆನ್ನಬಹುದು. ಈಗ ಉತ್ತರದೇಶದಲ್ಲಿರುವ ವೈಷ್ಣವಪಂಥಗಳಲ್ಲೆಲ್ಲ ರಾಮಾನಂದನು ಮೊದಲು ನೆಟ್ಟ ಭಕ್ತಿವೃಕ್ಷದ ಯಾವದಾದರೊಂದು ಕವಲುಗಳೇ ಆಗಿರುವವು.

ಈ ಮಹಾತ್ಮನು ಕ್ರಿಸ್ತಶಕ 1299ರಲ್ಲಿ ಪ್ರಯಾಗದಲ್ಲಿ ಹುಟ್ಟಿದನು. ಪುಣ್ಯಸದನ, ಸುಶೀಲಾ – ಎಂಬ ಇವನ ತಂದೆತಾಯಿಗಳು ಅವನನ್ನು ಮುದ್ದಿನಿಂದ ಸಾಕಿ ಆಗಿನ ಕಾಲದಲ್ಲಿ ಬ್ರಾಹ್ಮಣರಿಗೆ ಬೇಕಾಗಿದ್ದ ವಿದ್ಯಾಭ್ಯಾಸವನ್ನು

ಮಾಡಿಸಿದ್ದರು. ಮುಂದೆ ಇವನು ಸಕಲ ವಿದ್ಯಾಪೀಠವಾದ ಕಾಶಿಗೆ ಹೋಗಿ ವೇದಶಾಸ್ತ್ರಪಾರಂಗತನಾದನು. ಇಲ್ಲಿಯೇ ಇವನು ರಾಮಾನುಜಸಂಪ್ರದಾಯದ **ರಾಘವಾನಂದ**ನೆಂಬ ಆಚಾರ್ಯನಿಂದ ವೈಷ್ಣವದೀಕ್ಷೆಯನ್ನು ಪಡೆದದ್ದು; ಇಲ್ಲಿಯೇ ಇವನ ಭಕ್ತಿಪಂಥವು ಹುಟ್ಟಿ ಬೆಳದದ್ದು.

ರಾಮಾನಂದನು ಕೆಲವು ಕಾಲ ಗುರುಶುಶ್ರೂಷೆಯನ್ನು ಮಾಡಿಕೊಂಡಿದ್ದು ಆಮೇಲೆ ತೀರ್ಥಯಾತ್ರೆಗೆ ಹೊರಟನು. ಅವನು ಎಷ್ಟೋ ದಿನಗಳಾದ ಮೇಲೆ ಹಿಂದಿರುಗಿ ರಾಘವಾನಂದನ ಬಳಿಗೆ ಬರಲು ಆತನಾಗಲಿ ಅವನ ಕಡೆಯವರಾಗಲಿ ಇವನನ್ನು ಸಹಪಙ್ಕ್ತಿಗೆ ಸೇರಿಸಿಕೊಳ್ಳಲು ಒಪ್ಪಲಿಲ್ಲ. ಶ್ರೀವೈಷ್ಣವರಲ್ಲಿ ಆಹಾರವನ್ನು ಸಿದ್ಧಮಾಡುವ ಬಗೆ, ಊಟಮಾಡುವಾಗ ಅನುಸರಿಸಬೇಕಾದ ನಿಯಮಗಳು-ಇವುಗಳಲ್ಲಿ ಬಿಕ್ಕಟ್ಟು ಹೆಚ್ಚು; ಈ ನಿಯಮಗಳನ್ನೆಲ್ಲ ರಾಮಾನಂದನು ತನ್ನ ದೀರ್ಘಪ್ರವಾಸದಲ್ಲಿ ಇಟ್ಟುಕೊಂಡಿರಲಾರನೆಂಬ ಶಂಕೆಯು ರಾಘವಾನಂದನಿಗೆ ಹತ್ತಿಕೊಂಡಿತು. ರಾಮಾನಂದನು ಕಾನ್ಯಕುಬ್ಜಬ್ರಾಹ್ಮಣನಾದರಿಂದ ಅವನೇನೂ ಆಚಾರದಲ್ಲಿ ಕಡಿಮೆಯಾಗಿರಲಿಲ್ಲ; ಆದರೂ ತಮ್ಮ ನಿಯಮವನ್ನು ಸಡಿಲಮಾಡುವದು ರಾಘವಾನಂದನಿಗೆ ಒಗ್ಗಲಿಲ್ಲ.

ಈ ನಿಷ್ಕಾರಣವಾದ ಬಹಿಷ್ಕಾರವು ರಾಮಾನಂದನ ಕಣ್ಣನ್ನು ಪೂರ ತೆರೆಯಿಸಿತು. ದೇಶದೇಶವನ್ನು ತಿರುಗಿದ ಅವನ ಹೃದಯವು ಮೊದಲೇ ವಿಶಾಲತೆಯನ್ನು ಹೊಂದಿತ್ತು; ಜಾತಿಕಟ್ಟಲೆಯ ಕಟ್ಟೂ ತಾನು ಮಿಕ್ಕವರಿಗಿಂತ ಹೆಚ್ಚು ಮಡಿಯೆಂಬ ದುರಭಿಮಾನವೂ ವಿಷ್ಣುಭಕ್ತಿಗೆ ದೊಡ್ಡ ಅಡ್ಡಿಗಳೆಂಬುದು ಈಗ ಅವನಿಗೆ ಸ್ಪಷ್ಟವಾಗಿ ತೋರಿತು. ಎಲ್ಲ ಜೀವರೂ ಪರಮಾತ್ಮನ ಅಂಶವೇ ಆಗಿರುವಲ್ಲಿ ಎಲ್ಲರಿಗೂ ಹಂಚಬೇಕಾದ ವಿಷ್ಣುಭಕ್ತಿಯನ್ನು ಒಂದು ಗೊತ್ತಾದ ಪಂಗಡದವರಿಗೆ ಮೀಸಲಾಗಿಡುವದು ಎಂದಿಗೂ ಸರಿಯಲ್ಲವೆಂಬುದು ಅವನಿಗೆ ಈಗ ಮನದಟ್ಟಾಯಿತು.

ಅಂದಿನಿಂದ ರಾಮಾನಂದನು ತನ್ನ ಮನಮೆಚ್ಚಿದಂತೆಯೇ ಜಾತಿಕುಲಗೋತ್ರಗಳ ಎಣಿಕೆಯಿಲ್ಲದೆ ಭಕ್ತಿಯ ಭಂಡಾರವನ್ನು ಎಲ್ಲರಿಗೂ ಸೂರೆಗೊಡಲಾರಂಭಿಸಿದನು.

**ಜಾತಿ ಪಂತಿ ಪೂಛೈ ನ ಹಿ ಕೋಈ ।**
**ಹರಿಕೋ ಭಜೇ ಸೋ ಹರಿಕಾ ಹೋಈ ॥**

''ಯಾವ ಜಾತಿಯವನು, ಯಾರ ಪಙ್ಕ್ತಿಯಲ್ಲಿ ಊಟಮಾಡಿದವನು – ಎಂಬುದನ್ನು ಯಾರೂ ಕೇಳಬಾರದು; ಹರಿಯನ್ನು ಭಜಿಸಿದಾತನು ಹರಿಯ ಕಡೆಯವನೇ ಆಗುವನು'' – ಎಂಬುದೇ ಆತನ ಪಂಥದ ಮೂಲಸೂತ್ರವಾಯಿತು.

ರಾಮಾನುಜರ ಸಿದ್ಧಾಂತದಿಂದಲೇ ಒಡೆದ ಕವಲಾಗಿದ್ದರೂ ರಾಮಾನಂದನ ಬೋಧೆಯು ಕೆಲವು ಮುಖ್ಯಸುಧಾರಣೆಗಳನ್ನೊಳಗೊಂಡಿದೆ. ಬ್ರಹ್ಮಜ್ಞಾನದಲ್ಲಿ ಶೂದ್ರಾದಿಗಳಿಗೆ ಅಧಿಕಾರವೇ ಇಲ್ಲವೆಂದು ರಾಮಾನುಜಾಚಾರ್ಯರವರು ಸ್ಪಷ್ಟವಾಗಿ ಬರೆದಿರುತ್ತಾರೆ; ಆದರೆ ಯಾವ ಜಾತಿಯವನೇ ಆಗಲಿ ವಿಷ್ಣುಭಕ್ತಿಯಿಂದ ಪರಮ ಪುರುಷಾರ್ಥವನ್ನು ಪಡೆಯಬಹುದೆಂಬುದು ರಾಮಾನಂದನ ಮೊದಲನೆಯ ಉಪದೇಶವು. ಎಡೆಬಿಡದೆ ಪರಮಾತ್ಮನನ್ನು ಧ್ಯಾನಿಸುವದೇ ಭಕ್ತಿಯೆಂಬುದು ರಾಮಾನುಜರ ಮತವು; ಪರಮಾತ್ಮನ ಪ್ರೇಮವೇ ಭಕ್ತಿಯೆಂಬುದು ರಾಮಾನಂದನ ಮತವು. ರಾಮಾನುಜರು ನಾರಾಯಣನೆಂಬ ಹೆಸರಿನಿಂದ ವಿಷ್ಣುವನ್ನು ಉಪಾಸನೆಮಾಡುವದನ್ನೇ ಬಹಳವಾಗಿ ಹೇಳಿದ್ದಾರೆ, ಭಗವದ್ಗೀತೆಗೆ ಭಾಷ್ಯವನ್ನು ಬರೆದು ಕೃಷ್ಣಾವತಾರವನ್ನೂ ಹಿಂದಿನ ಆಚಾರ್ಯರಂತೆಯೇ ವಿಷ್ಣುಭಕ್ತಿಗೆ ಉಪಯೋಗಿಸಿಕೊಂಡಿರುತ್ತಾರೆ; ಆದರೆ ಧರ್ಮಾತ್ಮನೂ ಸತ್ಯಸಂಧನೂ ಆದ ಶ್ರೀರಾಮನು ಭಗವನ್ನಾರಾಯಣನ ಅವತಾರವೆಂದು ರಾಮಭಕ್ತಿಯನ್ನು ಮೇಲಕ್ಕೆತ್ತಿ ಹಿಡಿದ ಕೀರ್ತಿಯು ರಾಮಾನಂದನಿಗೇ ಸಲ್ಲತಕ್ಕದ್ದಾಗಿರುವದು. ರಾಮಾನುಜಾಚಾರ್ಯರು ಬರೆದಿರುವ ಗ್ರಂಥಗಳೆಲ್ಲ ಸಂಸ್ಕೃತದಲ್ಲಿ; ಆದರೆ ರಾಮಾನಂದನ ಬೋಧೆಯೆಲ್ಲ ಹಿಂದಿಯಲ್ಲಿ. ಆತನ ಉಪದೇಶದ ಸಂಬಂಧದಿಂದ ಹಿಂದೀಭಾಷೆಗೆ ಕಳೆಬಂದು ಅಂದಿನಿಂದ ಹಿಂದೀವಾಙ್ಮಯವು ಬೆಳೆಯುತ್ತಾ ಬರುವದಕ್ಕೆ ಕಾರಣವಾಯಿತು.

ಗೌತಮಬುದ್ಧನನ್ನು ಬಿಟ್ಟರೆ ರಾಮಾನಂದನಿಗೆ ದೊರೆತಷ್ಟು ಶಿಷ್ಯರು ಮತ್ತೆ ಯಾವ ಸಾಧುವಿಗೂ ನಮ್ಮ ದೇಶದಲ್ಲಿ ದೊರೆತಿಲ್ಲವೆನ್ನಬಹುದು. ಇವನ ಮುಖ್ಯಶಿಷ್ಯರಾದ ಹನ್ನೆರಡು ಮಂದಿಯಲ್ಲಿ ಕೆಲವರು ಬ್ರಾಹ್ಮಣರು, ಒಬ್ಬನು ರಜಪೂತನು, ಒಬ್ಬನು ನಾಯಿಂದನು, ಒಬ್ಬನು ಜಾಟನು, ಮತ್ತೊಬ್ಬನು

ಚಮ್ಮಾರನು, ಇನ್ನೊಬ್ಬನು ಮುಸಲ್ಮಾನನು, ಇಬ್ಬರು ಹೆಂಗಸರು. ಇವರಲ್ಲಿ ಮುಸಲ್ಮಾನರ ಕಬೀರ ನಾಯಿಂದರ ಸೇನಾ, ಚಮ್ಮಾರರ (ಮೋಚಿ) ರೈದಾಸ - ಇವರು ಒಬ್ಬೊಬ್ಬರೂ ತಮ್ಮ ತಮ್ಮ ಒಂದು ಹೊಸ ಪಂಥವನ್ನು ಹೊರಡಿಸಿದರು. ಉತ್ತರದಲ್ಲಿ ಲಕ್ಷಗಟ್ಟಲೆಯ ಜನರಿಗೆ ವೇದವಾಕ್ಯವೆನಿಸಿರುವ ತುಲಸೀದಾಸರಾಮಾಯಣದಲ್ಲಿಯೂ ರಾಮಾನಂದನ ಕೈವಾಡದ ಫಲವು ಕಾಣುತ್ತಿರುವದು. ತನ್ನ ಶ್ರಮವು ಚೆನ್ನಾಗಿ ಫಲಿಸಿದ್ದನ್ನು ನೋಡುವಷ್ಟು ದೀರ್ಘ ಕಾಲದವರೆಗೆ ಬದುಕಿದ್ದ ಈ ಮಹಾತ್ಮನು ಕ್ರಿ.ಶ.1410ರಲ್ಲಿ ದೇಹವನ್ನು ಬಿಟ್ಟನು.

ಈತನು ಬರೆದಿಟ್ಟ ಗ್ರಂಥಗಳು ಯಾವವೂ ಇರುವದಿಲ್ಲ. ಸಿಕ್ಕರ 'ಗ್ರಂಥಸಾಹೇಬ'ದಲ್ಲಿ ಈ ಕೆಳಗಿನರ್ಥದ ಒಂದೇ ಒಂದು ಕೀರ್ತನೆಯನ್ನು ಇವನ ಕೃತಿಯೆಂದು ಬರೆದಿರುತ್ತದೆ. ವಿಷ್ಣುಪೂಜೆಗೆಂದು ದೇವಾಲಯಕ್ಕೆ ಯಾರೋ ಕರೆಯುವದಕ್ಕೆ ಬಂದ ಸಂದರ್ಭದಲ್ಲಿ ಆತನು ಹೇಳಿದ ಮಾತಿದು:-

ಎಲ್ಲಿಗೈತಹುದಯ್ಯ, ಇಲ್ಲಿಯೇ ಸುಖವಿರಲು?
ಒಲ್ಲದೆನ್ನೊಡನೈದಲೀ ಕುಂಟು ಹೃದಯ ।।ಪ।।

1. ಒಂದು ದಿನ ಗುಡಿಗೆಂದು ಚಂದನನ ತೇದು ನಾ
ಬಂಧುರದ ಧೂಪದೀಪಗಳ ಕೂಡಿ ।
ನಿಂದಿರಲು ಗುರುನಾಥ ಬಂದು ಎನ್ನಯ ಹೃದಯ
ಮಂದಿರದೆ ನಿಂದ ದೇವರ ತೋರಿದ ।।

2. ಎಲ್ಲಿ ಹೋದರು ನಾನು ಕಲ್ಲುನೀರಿಹವು ಮೇ
ಣೆಲ್ಲೆಲ್ಲಿಯುಂ ದೇವ, ನೀನಿರುವೆಯ್ಯೆಸೆ? ।
ಬಲ್ಲ ವೇದಪುರಾಣವೆಲ್ಲ ತಡಕಲದೇಕೆ?
ಇಲ್ಲಿಲ್ಲವೇ ದೇವನಲ್ಲಿಗೈದುವರೆ? ।।

3. ಸಂದೆಯವನೆಲ್ಲ ಕತ್ತರಿಸಿದಾ ಸದ್ಗುರುವೆ,
ಇಂದಿನಿಂ ನಾ ನಿನ್ನ ದಾಸವಾಗಿರುವೆ ।
ಕುಂದದೆಲ್ಲೆಡೆಯಿರುವ ರಾಮಾನಂದನ ದೇವ
ಕುಂದುಕೋಟಿಗಳ ಕತ್ತರಿಯುವನು ಗುರುದೇವ।।

★★★★★

# ಶ್ರೀ ರಾಮಕೃಷ್ಣ ವಿವೇಕಾನಂದಸ್ವಾಮಿಗಳು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಪ್ರತಿವರ್ಷದ ಜನವರಿ, ಫೆಬ್ರುವರಿ ತಿಂಗಳುಗಳು ಬರುತ್ತಲೂ ಭಾರತದೇಶದ ಜನರೆಲ್ಲರೂ ಶ್ರೀರಾಮಕೃಷ್ಣ ಪರಮಹಂಸರನ್ನೂ ಅವರ ಬೆಂಬಳಿಯಶಿಷ್ಯರಾದ ವಿವೇಕಾನಂದಸ್ವಾಮಿಗಳನ್ನೂ ಒಂದು ಸಲ ನೆನಪಿಗೆ ತಂದುಕೊಳ್ಳುವದು ಒಳ್ಳೆಯದು. ಫಾಲ್ಗುಣಶುದ್ಧ ಬಿದಿಗೆಯು ಶ್ರೀರಾಮಕೃಷ್ಣಪರಮಹಂಸರವರು ಹುಟ್ಟಿದ ಪವಿತ್ರ ದಿನ. ಪುಷ್ಯ ಕೃಷ್ಣ ಸಪ್ತಮಿಯಂದು ಅವರ ಪ್ರಮುಖಶಿಷ್ಯರಾದ ವಿವೇಕಾನಂದಸ್ವಾಮಿಯವರ ಜನ್ಮದಿನ, ಶ್ರೀರಾಮಕೃಷ್ಣಪರಮಹಂಸರು ಪುರಾತನಭರತಖಂಡದ ಸಂಸ್ಕೃತಿಯ ಹೆಗ್ಗುರುತಾದ ಅಧ್ಯಾತ್ಮವಿದ್ಯೆಯನ್ನು ದೇವಿಯ ಉಪಾಸನೆಯ ಮೂಲಕ ಕಂಡುಕೊಂಡು ತಮ್ಮ ಅನುಭವವನ್ನು ಜಗತ್ತಿಗೆಲ್ಲ ಬೀರಿದ ಮಹಾತ್ಮರು; ಸೂರ್ಯನು ತಾನು ಇದ್ದಲ್ಲಿಯೇ ಇದ್ದು ಸುತ್ತಲೂ ತನ್ನ ಬೆಳಕನ್ನೂ ಪ್ರಾಣಿಗಳಿಗೆ ತಿಂಡಿ, ತೀರ್ಥ, ಬುದ್ಧಿ, ಶಕ್ತಿ ಒದಗಿಸುವ ಕಲಕತ್ತೆಯ ದಕ್ಷಿಣೇಶ್ವರದ ಕಾಳಿಯ ಗುಡಿಯಲ್ಲಿದ್ದುಕೊಂಡು ಲೋಕವನ್ನೆಲ್ಲಾ ಉದ್ಧಾರಮಾಡಿದ ಮಹಾಮಹಿಮರು. ಶ್ರೀವಿವೇಕಾನಂದಸ್ವಾಮಿಗಳವರು ಪರಮಹಂಸರ ಪ್ರಭಾವವನ್ನು ಊರಿಂದೂರಿಗೆ, ದೇಶದಿಂದ ದೇಶಕ್ಕೆ, ಖಂಡದಿಂದ ಖಂಡಕ್ಕೆ ಒಯ್ದು, ಈಗಿನ ಕಾಲದ ನವನಾಗರಿಕರಿಗೆ ತಿಳಿಯುವಂತೆ ಅವರ ಭಾಷೆಯಲ್ಲಿ, ಅವರಿಗೆ ಮೆಚ್ಚುಗೆಯಾಗುವ ಶೈಲಿಯಲ್ಲಿ, ಎಲ್ಲರಿಗೂ ಹಂಚಿ ಜನರೆಲ್ಲ ನವಚೈತನ್ಯವನ್ನು ಎಬ್ಬಿಸಿದ ಧೀರರೂ ಅನಾದಿಕಾಲದಿಂದ ಬಂದ ಮಹರ್ಷಿಗಳು ತಮ್ಮ ಹೃದಯದಲ್ಲಿ ಬಚ್ಚಿಟ್ಟಿದ್ದ ಧರ್ಮಾನುಷ್ಠಾನವೆಂಬ ಬೆಲೆಯುಳ್ಳ ಚಿನ್ನವನ್ನು ತಕ್ಕಂತೆ ಕಾಸಿ ಪುಟವಿಟ್ಟ ಈಗಿನ ನಾಗರಿಕತೆಯ ಪಡಿಯಚ್ಚಿನಲ್ಲಿ ಹೊಯ್ದು ಮಾನವ ಲೋಕಕ್ಕೆ ಒಟ್ಟಾದ ಒಡವೆಗಳನ್ನು ಮಾಡಿಕೊಟ ಕುಶಲವಿದ್ಯೆಯ ಚತುರರು.

ಶ್ರೀರಾಮಕೃಷ್ಣ, ವಿವೇಕಾನಂದ – ಹೀಗೆ ಇಬ್ಬರು ಬೇರೆಬೇರೆ ವ್ಯಕ್ತಿಗಳಲ್ಲ, ಒಬ್ಬನೇ ದೇವರಿಗೆ ಒಂದು ಮೂಲಮೂರ್ತಿಯೂ ಒಂದು ಉತ್ಸವಮೂರ್ತಿಯೂ ಇರುವಂತೆ ಎರಡು ಆಕಾರವನ್ನು ಪಡೆದುಕೊಂಡ ಒಂದೇ ವಸ್ತು. ಈ ಮಹಾಮಹಿಮರಿಂದ ನಮಗೆ ಆದ ಉಪಕಾರಗಳೇನೇನು, ಅವುಗಳಲ್ಲಿ ಮುಖ್ಯ ವಾದಗಳನ್ನು ಮಾತ್ರ ಇಲ್ಲಿ ತಿಳಿಸುವೆವು.

1. ನಾನು ನನ್ನದು ಎಂಬ ಅಭಿಮಾನವನ್ನು ಪೂರ್ಣವಾಗಿ ಕಿತ್ತೊಗೆಯುವ ಸಂನ್ಯಾಸವು ಲೋಕಕುಟುಂಬಿಯಾಗುವದಕ್ಕೆ ಮೊದಲೆಂಬುದನ್ನು ನಡತೆಯಲ್ಲಿ ತೋರಿಸಿಕೊಟ್ಟಿದ್ದು (ಹೊಸ ನಾಗರಿಕತೆಯ ಭರದಲ್ಲಿ ಜನರು ಇದನ್ನು ಮರೆಯುವದಕ್ಕೆ ಬಂದಿದ್ದರು; ಅಂಥ ಸಮಯದಲ್ಲಿ ಗುರು ಶಿಷ್ಯರಿಬ್ಬರೂ ಇದನ್ನು ಮತ್ತೆ ಎತ್ತಿಹಿಡಿದರು)

2. ಧರ್ಮವೆಂದರೆ ಸಾಕ್ಷಾತ್ಕಾರವೇ ಹೊರತು ಹೊರಗಿನ ಆಚಾರವಲ್ಲ ಗ್ರಂಥದ ಗಡಿಬಿಡಿಯೂ ಅಲ್ಲ ಎಂಬುದನ್ನು ಜ್ಞಾಪಿಸಿದ್ದು.

3. ಎಲ್ಲಾ ಮತಗಳೂ ಒಬ್ಬ ಪರಮಾತ್ಮನನ್ನೇ ಸೇರುವದಕ್ಕೆ ಹೊರಟಿರುವ ಬೇರೆಬೇರೆ ದಾರಿಗಳೆಂಬುದನ್ನು ತಿಳಿಸಿ, ಮತಗಳ ಬಡಿದಾಟದ ಒಲವನ್ನು ಮುರಿದದ್ದು.

ಶ್ರೀವಿವೇಕಾನಂದಸ್ವಾಮಿಗಳು ಧರ್ಮವನ್ನೇ ಮುಖ್ಯವಾಗಿ ಬೋಧಿಸುತ್ತಿದ್ದರು; ವೇದಾಂತದ ತತ್ತ್ವಗಳನ್ನು ಯುಕ್ತಿಗೂ ಅನುಭವಕ್ಕೂ ಹೊಂದುವಂತೆ ಜನರ ಮುಂದಿಟ್ಟು ಅವರ ಉತ್ಸಾಹವನ್ನು ಮೇಲಕ್ಕೆಬ್ಬಿಸುತ್ತಿದ್ದರು. ಆತ್ಮ ಸ್ವರೂಪವನ್ನು ಎಲ್ಲರಿಗೂ ಬೋಧಿಸುವದೆಂಬುದರಲ್ಲಿ ಧೈರ್ಯವೂ ಶಕ್ತಿಯೂ ಒಗ್ಗಟ್ಟೂ ತಮಗೆ ತಾನೇ ಕೈವಶವಾಗುವದೆಂದು ಹೇಳುತ್ತಿದ್ದರು. ಅಧ್ಯಾತ್ಮ ವಿದ್ಯೆಯೇ ಭರತಖಂಡದ ಜೀವಾಳವೆಂದೂ ಅದರ ಮೂಲಕವಾಗಿಯೇ ಸಮಾಜ, ಸಂಸ್ಕಾರ, ರಾಜಕೀಯ, ಸುಧಾರಣೆ - ಇವೇ ಮುಂತಾದವುಗಳೆಲ್ಲವನ್ನೂ ಇಂಡಿಯದವರು ಪಡೆಯಬಹುದೆಂದೂ ಅದು ಲೋಕದ ಕಲ್ಯಾಣಕ್ಕೂ ಕಾರಣವೆಂದೂ ಬೋಧಿಸುತ್ತಿದ್ದರು. ಇಂಡಿಯಾಯಲ್ಲಿ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವ ಈ ಕಾಲದಲ್ಲಿ ಒಣತರ್ಕದ ಮಾತುಗಳಿಂದ ಏನೇನೂ ಪ್ರಯೋಜನವಿಲ್ಲವೆಂತಲೂ ದರಿದ್ರನಾರಾಯಣನ ಸೇವೆಗೆ ತನುಮನಧನಗಳನ್ನು ಧಾರೆಯೆರೆಯುವದೇ ವೇದಾಂತದ ಸಾರವೆಂತಲೂ ಉಪದೇಶಿಸುತ್ತಿದ್ದರು; ಅದು ಅವರ ಜೀವಮಾನದ ಗುರಿಯಾಗಿತ್ತೆಂದೂ ಹೇಳಬಹುದು.

★★★★★

# ಶ್ರೀ ರಾಮಕೃಷ್ಣಪರಮಹಂಸರು -1

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರು**

ಫಾಲ್ಗುಣ ಸಮಾಸದಲ್ಲಿ ಶ್ರೀರಾಮಕೃಷ್ಣಪರಮಹಂಸರವರ ಜಯಂತಿ ಆ ಮಹಾಪುರುಷರು ಶ್ರೀವಿವೇಕಾನಂದಸ್ವಾಮಿಗಳಂಥ ಗುರುಪುತ್ರರನ್ನು ಲೋಕಕ್ಕೆ ಕೊಟ್ಟವರೆಂಬ ಕಾರಣದಿಂದ ನಮ್ಮಲ್ಲಿ ಅನೇಕರು ಅವರನ್ನು ಗೌರವಿಸುತ್ತಾರೆ. ಆದರೆ ಲೋಕದಲ್ಲಿ ಅಧರ್ಮವು ಹೆಚ್ಚಿ ಲೌಕಿಕಸುಖದಲ್ಲಿ ಲೋಲುಪತೆಯೂ ಹೆಚ್ಚಾಗುತ್ತಿರುವ ಕಾಲದಲ್ಲಿ ಜನ್ಮವೆತ್ತು ತಮ್ಮ ಪವಿತ್ರಜೀವನದಿಂದಲೂ ಉಪದೇಶದಿಂದಲೂ ಇಡಿಯ ಭೂಲೋಕಕ್ಕೇ ಹೊಸದೊಂದು ದಿವ್ಯದೃಷ್ಟಿಯನ್ನು ಅನುಗ್ರಹಿಸಿದ ಪ್ರಖ್ಯಾತವಿಭೂತಿಪುರುಷರು ಅವರೆಂಬುದನ್ನು ಮನಗಂಡು ಅವರನ್ನು ಪೂಜಿಸುವವರೇ ನಿಜವಾಗಿ ಆ ಪರಮಹಂಸರ ಬೆಲೆಯನ್ನು ಅರಿತವರೆಂದು ನನಗೆ ಅನಿಸುತ್ತದೆ.

ವೈದಿಕಕಾಲದ ಸನಾತನಧರ್ಮವನ್ನು ಪುರಾಣೇತಿಹಾಸಗಳಿಂದ ವಿವರಿಸಿ ತಿಳಿಸಿಕೊಟ್ಟ ಬಹುಕಾಲದ ಮೇಲೆ ಜನರಿಗೆ ಮೂಲಧರ್ಮದ ಮರ್ಮವು ಅನೇಕ ಕಾರಣಗಳಿಂದ ಕಣ್ಮರೆಯಾಗಿ ಶಿವ, ವಿಷ್ಣು, ಶಕ್ತಿ- ಮುಂತಾದ ಹೆಸರುಗಳಿಂದ ಬೇರೆಬೇರೆಯ ದೇವರುಗಳನ್ನು ಕರೆದಿದೆ ಎಂಬ ಭ್ರಾಂತಿಯು ಜನರನ್ನು ವಶಗೊಳಿಸಿಕೊಂಡಿತು. ಅಷ್ಟರಲ್ಲಿ ಮುಸಲ್ಮಾನರ ಆಳ್ವಿಕೆಗೆ ದೇಶವು ಸಿಕ್ಕಿಕೊಂಡು ನರಳಿದ ಆರು ಶತಮಾನಗಳಲ್ಲಿ ಎಷ್ಟೋ ಜನರನ್ನು ಪರಮತಕ್ಕೆ ಬಲಿಕೊಟ್ಟು ಹೇಗೋ ತನ್ನ ಪೂರ್ವದ ಧರ್ಮವನ್ನು ಸ್ವಲ್ಪಮಟ್ಟಿಗೆ ಉಳಿಸಿಕೊಂಡಿತು. ಮುಂದೆ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಸುಮಾರು ಎರಡು ಶತಮಾನಗಳಲ್ಲಿ ಇಲ್ಲಿಯ ಜನರು ಪರದೇಶದ ಸಂಬಂಧವನ್ನು ಹೊಂದಿ ನವನಾಗರಿಕತೆಯನ್ನು ಪರಿಚಯಮಾಡಿಕೊಂಡು ಮುಂದುವರಿಯುವೆನೆನ್ನುವದರೊಳಗೆ ಕ್ರಿಸ್ತಿಯನ್ ಪಾದ್ರಿಗಳ ಮತಾಂತರೀಕರಣದ ಹಾವಳಿಗೆ ತುತ್ತಾದರು. ಈಚೆಗೆ ದೇಶವು ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದರೂ ಸರಕಾರವು ಧರ್ಮದ ವಿಷಯಕ್ಕೆ ಉದಾಸೀನತೆಯನ್ನು ವಹಿಸಿರುತ್ತದೆ. ಈ ಔದಾಸೀನ್ಯಕ್ಕೆ ದೇಶದ ಪರಿಸ್ಥಿತಿಯು ಮಾತ್ರವೇ ಅಲ್ಲದೆ ಜನನಾಯಕರಿಗೆ ಧರ್ಮದ ವಿಷಯದಲ್ಲಿ ಹೆಚ್ಚಿನ ಔತ್ಸುಕ್ಯವಿಲ್ಲದಿರುವದೂ ಒಂದು

ಕಾರಣವಾಗಿರುತ್ತದೆ ಎನ್ನಬಹುದು. ಇವೆಲ್ಲದರ ಜೊತೆಗೆ ಧರ್ಮವನ್ನು ಜನರಿಗೆ ಉಪದೇಶಿಸುವ ಸಾಧುಸಂತರ ಸಂನ್ಯಾಸಿಗಳ ಮತ್ತು ಗುರುಕುಲಗಳ ಸಂಖ್ಯೆಯು ಬರುಬರುತ್ತಾ ತೀರಕಡಿಮೆಯಾಗಿ, ವರ್ಣಾಶ್ರಮಧರ್ಮದ ಕಟ್ಟುಗಳು ಸಡಿಲವಾಗಿ, ಧರ್ಮಜ್ಞಾನವೈರಾಗ್ಯಾದಿಗಳನ್ನು ಜನರಿಗೆ ಬೋಧಿಸುವವರು ಇಲ್ಲವೇ ಇಲ್ಲವೊ ಎನ್ನುವಷ್ಟು ಕಡಿಮೆಯ ಸಂಖ್ಯೆಯಲ್ಲಿ ಕಣ್ಣಿಗೆ ಬೀಳುತ್ತಿದಾರೆ. ಇಂಥ ಗಲಿಬಿಲಿಯಲ್ಲಿ ಶ್ರೀರಾಮಕೃಷ್ಣಪರಮಹಂಸರಂಥ ಮಹಾಪುರುಷರೊಬ್ಬರು ಈ ನಡುವೆ ಅವತರಿಸದೆ ಇದ್ದಿದ್ದರೆ ಅವರ ಶಿಷ್ಯಮಂಡಲಿಯ ಪ್ರಖ್ಯಾತ ಸಂನ್ಯಾಸಿಗಳೂ ವೈದಿಕಮತದ ತತ್ತ್ವಗಳ ಪ್ರಚಾರವನ್ನು ಕಾಲೋಚಿತವಾಗಿ; ಪ್ರಚಾರಮಾಡದೆ ಇದ್ದಿದ್ದರೆ ಈ ದೇಶಕ್ಕೆ ಮಾತ್ರವೇ ಅಲ್ಲದೆ ಇಡಿಯ ಭೂಮಂಡಲಕ್ಕೇ ದೊಡ್ಡ ನಷ್ಟವಾಗುತ್ತಿತ್ತೆಂದು ಹೇಳಬಹುದಾಗಿದೆ.

ಶ್ರೀರಾಮಕೃಷ್ಣ ಪರಮಹಂಸರ ಜೀವನಚರಿತ್ರೆಯಿಂದ ಹೊಸ ನಾಗರಿಕತೆಯ ಆರಾಧಕರಾದ ನಾವು ತಿಳಿದುಕೊಳ್ಳಬೇಕಾದ ಪ್ರಮುಖ ವಿಷಯಗಳು ಅನೇಕವಿವೆ. ಇಲ್ಲಿ ಕೆಲವನ್ನು ಮಾತ್ರ ಓದುಗರ ಮುಂದೆ ಇಡುವೆನು.

1. **ಮೊದಲನೆಯದಾಗಿ ಓದು ಬರಹಗಳ ಪರಿಚಯವಿದ್ದವನ ತಿಳಿವಳಿಕೆಯೇ ಲೋಕದಮೇಲೆ ತನ್ನ ಪ್ರಭಾವವನ್ನು ಬೀರಬಲ್ಲದು** - ಎಂಬ ಭ್ರಾಂತಿಯನ್ನು ಕಳೆದುಕೊಳ್ಳುವದಕ್ಕೆ ಮಹಾತ್ಮರ ಜೀವನವು ಸಹಾಯಕವಾಗುತ್ತಿದೆ. ಕಲಕತ್ತೆಯ ವಿಶ್ವವಿದ್ಯಾಲಯದ ಪದವೀಧರರನ್ನು ಕೂಡ ತಮ್ಮ ಕಡೆಗೆ ಆಕರ್ಷಿಸುವಷ್ಟು ಪ್ರಭಾವವುಳ್ಳ ಆ ಪರಮಹಂಸರು ಈಗಿನವರ ದೃಷ್ಟಿಯಲ್ಲಿ ನಿರಕ್ಷರಕುಕ್ಷಿಗಳೆಂದು ಕರೆಯಿಸಿಕೊಳ್ಳವಂತಿದ್ದರು.

2. ಎರಡನೆಯದಾಗಿ "**ನ ಕರ್ಮಣಾ ನ ಪ್ರಜಯಾ ಧನೇನ ತ್ಯಾಗೇನೈಕೇ ಅಮೃತತ್ವಮಾನಶುಃ**" ಕರ್ಮ, ಪ್ರಜೆ, ಧನ - ಇವುಗಳು ಯಾವದೊಂದರಿಂದಲೂ ಅಲ್ಲ ತ್ಯಾಗದಿಂದಲೇ ಹಿಂದಿನವರು ಅಮೃತತ್ವವನ್ನು ಹೊಂದಿದರು - ಎಂಬ ವೇದಾಂತೋಕ್ತಿಯ ನಿಜವನ್ನು ತಮ್ಮ ಉದಾಹರಣೆಯಿಂದ ವಿಲಾಸಜೀವನಪ್ರಿಯರಾದ ಈಗಿನ ಜನರಿಗೆ ಮನಗಾಣಿಸಿಕೊಟ್ಟಕೀರ್ತಿಯು ಆ ಮಹನೀಯರದು.

3. ಮೂರನೆಯದಾಗಿ 'ಏಕಂ ಸದ್ವಿಪ್ರಾಬಹುಧಾವದನ್ತಿ' ಇರುವದೊಂದೇ ಒಂದು ತತ್ತ್ವವು; ಅದನ್ನೇ ತಿಳಿದವರು ಬೇರೆಬೇರೆಯ ಹೆಸರುಗಳಿಂದ ಕರೆಯುತ್ತಾರೆ – ಎಂಬ ಧರ್ಮದ ಉದಾತ್ತತತ್ತ್ವವನ್ನು ಮರೆಯಿಸುವಂತೆ ಧರ್ಮದ ಹೆಸರಿನಿಂದ ಕಚ್ಚಾಡುತ್ತಿರುವ ನಾಮಧಾರಿಗಳಾದ ಮತನಾಯಕರಿಗೆ ಬುದ್ಧಿಕಲಿಸಿರವರು ಆ ಸಮದರ್ಶಿಗಳೇ.

4. ನಾಲ್ಕನೆಯದಾಗಿ **ಕರ್ಮ, ಧ್ಯಾನ ಭಕ್ತಿ, ಜ್ಞಾನ** – ಇವುಗಳ ಸಾಮರಸ್ಯವನ್ನು ತಮ್ಮ ಜೀವನಕ್ರಮದಿಂದಲೇ ತೋರಿಸಿಕೊಟ್ಟವರೂ ಆ ತತ್ತ್ವದರ್ಶಿಗಳೇ.

ಸದ್ಯಃಸ್ಥಿತಿಯಲ್ಲಿ ಅಧ್ಯಾತ್ಮವಿದ್ಯೆಯ ವಿಷಯಕ್ಕೆ ಅನೇಕ ತಪ್ಪುತಿಳಿವಳಿಕೆಗಳು ಉಂಟಾಗಿರುತ್ತವೆ. ಹಿಂದೂ ಬೌದ್ಧ, ಜೈನ, ಕಿಸ್ತಿಯನ್, ಇಸ್ಲಾಮ್- ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿರುವ ಮತಗಳ ಸಂಸ್ಥಾಪಕರಾದ ಮಹನೀಯರೆಲ್ಲರಿಗೂ ತಮ್ಮತಮ್ಮ ಕಾಲದ ಮತ್ತು ದೇಶದ ಜನರಿಗೆ ಹೇಗಾದರೂ ಪರಮಾತ್ಮನ ಸಂಬಂಧವಾಗಬೇಕು, ಅವರು ಹೇಗಾದರೂ ಆನಂದಮಯವಾದ ಜೀವನಕ್ರಮವನ್ನು ತಂದುಕೊಂಡು ಪರಸ್ಪರಪ್ರೇಮದಿಂದ ಬಾಳಬೇಕು – ಎಂಬ ಸಾರ್ವತ್ರಿಕವಾದ ಕರುಣೆಯೂ ವಿಶ್ವಮೈತ್ರಿಯೂ ಇತ್ತು. ಆದರೆ ಇಂದಿಗೆ ಅದೇ ಹೆಸರಿನ ಮತಗಳು ತಮ್ಮತಮ್ಮೊಳಗೆ ಹಲವು ಒಳಪಂಗಡಗಳನ್ನು ಮಾಡಿಕೊಂಡು ಒಂದರೊಡನೊಂದು ಕಚ್ಚಾಡುತ್ತಿವೆ, ರಾಜಕಾರಣಗಳೊಳಗೆ ನುಗ್ಗಿ ಅನರ್ಥವನ್ನುಂಟುಮಾಡುತ್ತಿವೆ! ಆದ್ದರಿಂದ ಈಗ್ಗೆ ಜನರು ಹೊಟ್ಟೆಬಟ್ಟೆಗಳಿಗೆ ನೇರವಾಗಿರಬೇಕಾದರೆ ಆದಷ್ಟುಮಟ್ಟಿಗೂ ಮತವಿಚಾರದಿಂದ ದೂರವಾಗಿರಬೇಕೆಂಬ ತಪ್ಪುತಿಳಿವಳಿಕೆಯು ಅಲ್ಲೆಲ್ಲಿಯೂ ಹರಡಿಕೊಳ್ಳುತ್ತಿದೆ. ಕೆಲವು ಸರಕಾರಗಳು ಧರ್ಮವಿಚಾರದಲ್ಲಿ ಆಸಕ್ತಿಯುಳ್ಳವುಗಳಂತೆ ಮಿಥ್ಯಾಸ್ತುತಿಯಿಂದ ತೋರಿಸಿಕೊಡು ಆಚರಣೆಯಲ್ಲಿ ಔದಾಸೀನ್ಯವನ್ನು ವಹಿಸಿರುತ್ತವೆ; ಇನ್ನು ಕೆಲವು ಸರಕಾರಗಳು ಮತವಿಚಾರದಲ್ಲಿ ತಾವು ತಾಟಸ್ಥ್ಯವುಳ್ಳವೆಂದು ಹೇಳಿಕೊಳ್ಳುತ್ತಾ ಕಾರ್ಯಾಚರಣೆಯಲ್ಲಿ ಮತಗಳನ್ನು ಉಸಿರಾಡುತ್ತಿರುವ ಹೆಣಗಳಾಗಿ ಮಾಡುತ್ತಿವೆ; ಇನ್ನು ಕೆಲವು ಸರಕಾರಗಳು ಮತವಿಚಾರಗಳನ್ನೇ ತಮ್ಮ ದೇಶದಲ್ಲಿಲ್ಲದಂತೆ ಮಾಡುವದಕ್ಕೆ ಪ್ರಯತ್ನಿಸುತ್ತಿವೆ. ಆದರೆ ನಿಜವೇನು? ಆರ್ಥಿಕಾಭಿವೃದ್ಧಿಗೂ ನಿಜವಾದ ಆಧ್ಯಾತ್ಮಿಕ ವರ್ತನೆಗೂ ಯಾವ ಸಂಬಂಧವೂ

ಇಲ್ಲ. ಮನುಷ್ಯನಿಗೆ ಹೊಟ್ಟೆಬಟ್ಟೆಗೆ ಬೇಕೆಂಬುದು ನಿಜ; ಆದರೆ ಅಷ್ಟೇ ಆದರೆ ಅವನು ಪಶುಮಾತ್ರನಾದಾನು. ಮನುಷ್ಯನಿಗೆ ಅನ್ನಮಯಪ್ರಾಣಮಯಕೋಶಗಳಂತೆ ಮನೋಮಯವಿಜ್ಞಾನಮಯಾನಂದಮಯಕೋಶಗಳೂ ಇವೆ; ಅವನಿಗೆ ಅನ್ನಪಾನಾದಗಳು ಬುದ್ಧಿನೀತಿಶ್ರದ್ಧಾಭಕ್ತಿಜ್ಞಾನಗಳೂ ಅವಶ್ಯವಾಗಿ ಬೇಕು. ಈ ಭಕ್ತಿಜ್ಞಾನಾದಿಗಳಿಂದಾಗುವ ಪ್ರಯೋಜನವನ್ನು ಶ್ರೀರಾಮಕೃಷ್ಣಪರಮಹಂಸರ ನಡೆನುಡಿಗಳಿಂದ ನಾವು ತಿಳಿದುಕೊಳ್ಳುವದು ಅವಶ್ಯವಾಗಿರುತ್ತದೆ.

ಮತವೆಂದರೆ ಹೊರೆಗಿನ ವೇಷಭಾಷೆಗಳೆಂಬ ಮತ್ತೊಂದು ತಪ್ಪುತಿಳಿವಕೆಯು ಅನೇಕರಲ್ಲಿರುತ್ತದೆ; ಆಚಾರಗಳಿಂದಲೂ ಅಧ್ಯಾತ್ಮಸಾಧನಕ್ಕೆ ಪ್ರಯೋಜನವುಂಟೆಂಬ ವಿಷಯಕ್ಕೆ ಎರಡಿಲ್ಲ. ಆದರೆ ಒಬ್ಬ ಮನುಷ್ಯನ ವೇಷವನ್ನು ಸ್ವಲ್ಪಬದಲಾಯಿಸಿ ಅವನನ್ನು ಒಂದು ಗುಡಿಯೊಳಕ್ಕೊ ಮಸಿದಿಯೊಳಕ್ಕೊ ಚರ್ಚಿನೊಳಕ್ಕೊ ದೊಬ್ಬಿ ಒಂದೆರಡು ಮಂತ್ರಗಳನ್ನು ಅಥವಾ ಪ್ರಾರ್ಥನೆಗಳನ್ನು ಗಿಣಿಪಾಠಮಾಡಿಸುವದರಿಂದ ಜನರ ಅಂತಃಕಲಹಗಳು ಎದ್ದುಕೊಂಡಾವೇ ಹೊರತು ಅವನಿಗೆ ಅಧ್ಯಾತ್ಮಿಕಪ್ರಯೋಜನವು ಯಾವದೂ ಅಗಲಾರದು. ಶ್ರೀರಾಮಕೃಷ್ಣಪರಮಹಂಸರು ತೋರಿಸಿಕೊಟ್ಟಿರುವಂತೆ ಮತವೆಂಬುದು ಮನುಷ್ಯನ ಹೃದಯಕ್ಕೆ ಸೇರಿದ್ದು; ತಾನಿರುವ ವೇಷಭಾಷೆಗಳನ್ನು ಬದಲಾಯಿಸದೆಯೇ ಮನುಷ್ಯನು ಅತ್ಯಂತ ಧಾರ್ಮಿಕನಾಗಿರಲೂ ಸಾಧ್ಯವಾಗಿ ರುತ್ತದೆ – ಎಂಬ ಶ್ರೀರಾಮಕೃಷ್ಣಪರಮಹಂಸರ ಘನಬೋಧೆಯನ್ನು ಶ್ರೀಸ್ವಾಮಿವಿವೇಕಾನಂದರವರು ಮತ್ತೆ ಮತ್ತೆ ಒತ್ತಿ ಜನರಿಗೆ ಬೋಧಿಸಿರುತ್ತಾರೆ. ಇದನ್ನು ನಾವು ನೆನಪಿಗೆ ತಂದುಕೊಳ್ಳುವದು ಈಗ ಅತ್ಯವಶ್ಯವಾಗಿರುತ್ತದೆ.

ಪರಮಾತ್ಮನು ನಮ್ಮೆಲ್ಲರ ಹೃದಯದಲ್ಲಿಯೂ ಇರುತ್ತಾನೆ. ಭಕ್ತಿಜ್ಞಾನ ವೈರಾಗ್ಯಗಳಿಂದ ಆತನನ್ನು ನಾವು ಎಲ್ಲಿದ್ದರೂ ಕಂಡುಕೊಳ್ಳಬಹುದು ಅತ್ಯಂತ ಪುರಾತನಕಾಲದಂತೆ ಈಗಲೂ ಶ್ರದ್ಧಾಭಕ್ತಿಗಳಿಂದ ಪ್ರಯತ್ನಿಸುವವರಿಗೆ ಆಧ್ಯಾತ್ಮಿಕಸಾಧನೆಯ ಫಲವು ಅವಶ್ಯವಾಗಿ ಅನುಭವಕ್ಕೆ ಬರುತ್ತದೆ ಎಂಬುದನ್ನು ಶ್ರೀರಾಮಕೃಷ್ಣ ಪರಮಹಂಸರು ಜಯಂತಿಯ ದಿನ ನಾವೆಲ್ಲರೂ ಮನದಂದು ಕೊಳ್ಳೋಣ.

★★★★★

# ಶ್ರೀ ರಾಮಕೃಷ್ಣಪರಮಹಂಸರು - 2

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀರಾಮಕೃಷ್ಣಪರಮಹಂಸರವರು ಇಂದು ಪ್ರಪಂಚದ ಪೂಜ್ಯತಮ ವಿಭೂತಿಗಳ ಸಂಘದಲ್ಲಿ ಸರ್ವಾನುಮತದಿಂದ ಸೇರಿಹೋಗಿರುತ್ತಾರೆ. ಅವರ ಪ್ರಿಯಶಿಷ್ಯರಾದ ಜಗತ್ಪ್ರಸಿದ್ಧ ಶ್ರೀವಿವೇಕಾನಂದಸ್ವಾಮಿಗಳವರು ಪ್ರಾರಂಭಿಸಿದ ಶ್ರೀರಾಮಕೃಷ್ಣ ಸಂದೇಶಸಂಘವು ಅತ್ಯದ್ಭುತವಾದ ಒಂದು ಆಲದ ಮರದಂತೆ ಬಲವಾಗಿ ಬೇರುಬಿಟ್ಟು ಭೂಮಂಡಲದ ಮುಖ್ಯಭಾಗಗಳಲ್ಲೆಲ್ಲ ಬಿಳಿಲು ಬಿಟ್ಟುಕೊಂಡು ಆ ಮಹಾತ್ಮರ ಅಮೂಲ್ಯವಾದ ಉಪದೇಶವನ್ನು ಹರಡುತ್ತಿದೆ. ಈ ಮಹಾಮಹಿಮರ ಶತಮಾನೋತ್ಸವಕ್ಕೆಂದು ಅವರ ಭಕ್ತಮಂಡಲಿಯವರು ಈ ವರ್ಷವನ್ನೇ ಮೀಸಲಾಗಿರಿಸಿಕೊಂಡಿರುತ್ತಾರೆ. ಆದ್ದರಿಂದ ಈ ಶುಭ ಕಾಲದಲ್ಲಿ ಅವರ ಜೀವನಚರಿತ್ರೆಯ ವಿಶೇಷಗಳನ್ನು ಮನದಂದುಕೊಳ್ಳುವದು ಕಲ್ಯಾಣಾಪೇಕ್ಷಿಗಳಿಗೆಲ್ಲ ಲಾಭದಾಯಕವಾಗಿರುವದೆನ್ನುವದರಲ್ಲಿ ಸಂಶಯವಿಲ್ಲ.

ಶ್ರೀರಾಮಕೃಷ್ಣಪರಮಹಂಸರವರು ನವನಾಗರಿಕತೆಯ ಅನುಕೂಲಗಳೆಲ್ಲ ಸಿಕ್ಕುವ ಯಾವದೊಂದು ನಗರದಲ್ಲಿ ಹುಟ್ಟಿದವರಲ್ಲ. ಯಾವ ಭಾಷೆಯನ್ನೂ ಚೆನ್ನಾಗಿ ಕಲಿತವರಲ್ಲ. ಯಾವ ಶಾಸ್ತ್ರವನ್ನೂ ಓದಿದವರಲ್ಲ. ಆದರೂ ಕಲಕತ್ತೆಯಂಥ ನಗರಿಯ ಸಕಲವಿದ್ಯಾನಿಲಯದ ಪದವೀಧರರು ಕೂಡ ಅವರ ಜ್ಞಾನಕ್ಕೆ ಬೆರಗಾಗಿ ಅವರ ಸಾಹಚರ್ಯವನ್ನು ಉತ್ಕಂಠತೆಯಿಂದ ಬಯಸುತ್ತಿದ್ದರು; ಮಹಾ ಮಹಾವಿದ್ವಾಂಸರೂ ಶಾಸ್ತ್ರಿಗಳೂ ಕೂಡ ಅವರ ತಿಳಿನುಡಿಯ ತಂಪಿನಲ್ಲಿ ಸಿಕ್ಕುವ ಸುಖವನ್ನು ಪಡೆದು ಹಾಯಾಗಿರುವದಕ್ಕೆ ಹಾತುವರಿಯುತ್ತಿದ್ದರು. ಇದರ ರಹಸ್ಯವೇನಿರಬಹುದು? ನನಗೆ ತೋರುವದೇನೆಂದರೆ ಜೀವನದ ಹೆಗ್ಗುರಿಯ ವಿಷಯದಲ್ಲಿ ಅವರಿಗಿದ್ದ ದೃಷ್ಟಿಯೇ ಈ ಮಹತ್ತಿನ ಗುಟ್ಟು, ಆದಷ್ಟು ಭೋಗ ಸಾಮಗ್ರಿಗಳನ್ನು ಕೂಡಿಹಾಕಿಕೊಂಡು ವಿಷಯಸುಖದಲ್ಲಿ ಓಲಾಡುವದು ಅವರ ಜೀವನದ ಉದ್ದೇಶವಾಗಿರಲಿಲ್ಲ, ಈಶ್ವರಭಕ್ತಿಯನ್ನು ಸಂಪಾದಿಸಿಕೊಂಡು ಆನಂದದಿಂದ ಇರುವದೇ ಮಾನವಜನ್ಮದ ಸಾರ್ಥಕ್ಯವು - ಎಂಬುದು ಅವರ ಭಾವನೆಯಾಗಿತ್ತು. ಮನುಷ್ಯನು ಉತ್ತಮಜೀವನವನ್ನು ಕಂಡುಕೊಳ್ಳುವದಕ್ಕೆ

ಬೆಳೆಯಿಸಿಕೊಳ್ಳಬೇಕಾಗಿರುವದು ಮೆದುಳಿನ ಶಕ್ತಿಯಲ್ಲ, ಹೃದಯದ ಶಕ್ತಿ- ಎಂಬುದು ಅವರ ಜೀವನದ ಸೂತ್ರವಾಗಿತ್ತು. ಸಂಗ್ರಹವಾಗಿ ಹೇಳಿದರೆ ಈಗಿನ ನಾಗರಿಕತೆಯನ್ನು ಮೆಚ್ಚುವ ನಮ್ಮಗಳ ದೃಷ್ಟಿಯು ಭೋಗದೃಷ್ಟಿ ಅವರದು ಯೋಗದೃಷ್ಟಿ ನಮ್ಮದು ಭೋಗಸಾಮಗ್ರಿಗಳನ್ನು ಒದಗಿಸಿಕೊಡುವ ತಿಳಿವನ್ನು ಹೆಚ್ಚಿಸುವ ಭೌತಿಕವಿದ್ಯೆ ಅವರದು ಯೋಗಾನಂದವನ್ನು ಒದಗಿಸಿಕೊಡುವ ತಿಳಿವನ್ನು ಹೆಚ್ಚಿಸುವ ಅಧ್ಯಾತ್ಮವಿದ್ಯೆ.

ಅಧ್ಯಾತ್ಮವಿದ್ಯೆಯೆಂದ ಕೂಡಲೆ ಸಂಸ್ಕೃತಭಾಷೆ, ವೇದಶಾಸ್ತ್ರಪುರಾಣಗಳು, ತರ್ಕವ್ಯಾಕರಣನಿಘಂಟು ಮುಂತಾದವುಗಳು- ಇವುಗಳಲ್ಲಿರುವ ಪಾಂಡಿತ್ಯವೇ ನಮಗೆ ನೆನಪಿಗೆ ಬರುತ್ತದೆ. ಆದರೆ ಪರಮಹಂಸರ ವಿದ್ಯೆಯು ಈ ಬಗೆಯದಲ್ಲ ಸಕಲ ವೇದಶಾಸ್ತ್ರಪುರಾಣಗಳ ಸಾರವನ್ನೂ ಹಿಂಡಿ ಜೀವನದಲ್ಲಿ ಮೂಡಿಸಿಕೊಳ್ಳುವದೇ ಅವರ ಹೆಗ್ಗುರಿಯಾಗಿತ್ತೇ ಹೊರತು ಪುಸ್ತಕಗಳ ಹೊರೆಯನ್ನು ಹೊರುವ ಪಾಂಡಿತ್ಯವೇನೂ ಅವರಿಗೆ ಬೇಕಿರಲಿಲ್ಲ. ಅವರು ಸಾರಗ್ರಹಣವನ್ನು ಮಾಡುತ್ತಿದ್ದ ಬಗೆಯನ್ನು ಅವರ ಅಮೋಘವಾದ ಒಂದೆರಡು ವಾಣಿಗಳಿಂದ ತಿಳಿದುಕೊಳ್ಳಬಹುದು:

1. ವೇದದಲ್ಲಿಯೂಪುರಾಣಗಳಲ್ಲಿಯೂತಂತ್ರದಲ್ಲಿಯೂಪ್ರತಿಪಾದಿತನಾಗಿರುವ ಸಚ್ಚಿದಾನಂದನು ಒಬ್ಬನೇ. ವೇದದಲ್ಲಿ ಅವನನ್ನು ಬ್ರಹ್ಮವೆಂದು ಕರೆದಿದೆ; ಪುರಾಣಗಳಲ್ಲಿ ಅವನನ್ನು ರಾಮಕೃಷ್ಣಾದಿನಾಮಗಳಿಂದ ತಿಳಿಸಿದೆ; ತಂತ್ರದಲ್ಲಿ ಆ ಸಚ್ಚಿದಾನಂದನಿಗೇ ಶಿವನೆಂಬ ಹೆಸರನ್ನು ಕೊಟ್ಟಿದೆ. ಸಚಿದಾನಂದ ಬ್ರಹ್ಮ, ಸಚ್ಚಿದಾನಂದ ಕೃಷ್ಣ, ಸಚ್ಚಿದಾನಂದ ಶಿವ.

2. ಹತ್ತು ಸಾರಿ 'ಗೀತಾ, ಗೀತಾ' ಎಂದರೆ 'ತ್ಯಾಗೀ, ತ್ಯಾಗೀ' ಎಂದಾಗುತ್ತದೆ.

3. ಅಯ್ಯ ಜೀವನೇ, ಎಲ್ಲವನ್ನೂ ತ್ಯಜಿಸಿ ಭಗವಂತನನ್ನು ಪಡೆಯುವದಕ್ಕೆ ಪ್ರಯತ್ನಮಾಡು ಎನ್ನುವದೇ ಗೀತೆಯ ಉಪದೇಶ.

ಪರಮಹಂಸರವರು ನುಡಿಯಿಂದ ಬೋಧಿಸಿದ್ದಕ್ಕಿಂತಲೂ ನಡೆಯಿಂದ ಬೋಧಿಸಿದ್ದೇ ಹೆಚ್ಚು, ಅವರು ಸಕಲ ವೇದಶಾಸ್ತ್ರಗಳ ಸಾರವಾದ ಸಚ್ಚಿದಾನಂದ ಪರಮಾತ್ಮನನ್ನು 'ಕಾಳಿ' ಎಂಬ ನಾಮರೂಪಗಳಿಂದ ತಮ್ಮ ಜನ್ಮಾವಧಿ ಭಜಿಸುತ್ತಿದ್ದರು.

ಆ ಮಹಾಮಾತೆಯ ಪ್ರೇಮಕ್ಕೆ ಅಡ್ಡಿಯಾಗುವದನ್ನೆಲ್ಲ ತ್ರಿಕರಣಗಳಿಂದಲೂ ಸಂಪೂರ್ಣವಾಗಿ ತೊರೆದುಬಿಟ್ಟಿದ್ದರು. ದಕ್ಷಿಣೇಶ್ವರದ ಪಂಚವಟಿಯಲ್ಲಿ ಅವರು ಮಾಡಿದ ಸಾಧನಕ್ರಮವನ್ನು ಕೇಳಿದವರಿಗೆ ದೇಹಾಭಿಮಾನವನ್ನು ಎಲ್ಲಿಯವರೆಗೆ ಬಿಡಬಹುದೆಂಬುದರ ಅರಿವು ಸ್ವಲ್ಪಮಟ್ಟಿಗೆ ಆಗಬಹುದು. ಹೊನ್ನು, ಮಣ್ಣು-ಎರಡನ್ನೂ ಕಲೆಬೆರಸಿ ಎರಡೂ ಒಂದೇ ಎಂಬ ತುಚ್ಛಭಾವನೆಯಿಂದ ನದಿಯಲ್ಲಿ ಹಾಕಿದ ಅವರ ವೀರ ವಿರಕ್ತಿಯು ಧನಪಿಶಾಚಿಯಿಂದ ಗ್ರಸ್ತರಾಗಿರುವ ಈಗಿನವರಿಗೆ ಹುಚ್ಚೆಂದೇ ತೋರುವದು. ನಿದ್ರೆಮಾಡುತ್ತಿರುವಾಗ ಮೈಗೆ ನಾಣ್ಯದ ಲೋಹವು ಸೋಕಿದರೂ ಸಾಕು, ಅವರ ಚರ್ಮವು ಸುಕ್ಕಿಕೊಂಡು ಹಿಂಜರಿಯುತ್ತಿತ್ತೆಂಬುದನ್ನು ಕೇಳಿದರೆ ಎಂಥ ನಿರಭಿಮಾನಿಗಳೂ ಬೆಪ್ಪಾಗುವಂತಿದೆ. ಜಗತ್ತಿನ ಸ್ತ್ರೀಯರನ್ನೆಲ್ಲ ಭಗವತೀಕಾಳಿಯ ವಿಭೂತಿಗಳೆಂದೇ ಬಗೆಯುತ್ತಿದ್ದ ಆ ಮಹಾತ್ಮರು ಚಿಕ್ಕಂದಿನಲ್ಲಿ ನಾಮಮಾತ್ರಕ್ಕೆ ವಿವಾಹವಾಗಿದ್ದ ತಮ್ಮ ಧರ್ಮಪತ್ನಿಯನ್ನು ''ತಾಯೆ!'' ಎಂದು ಸಂಬೋಧಿಸುತ್ತಿದ್ದರೆಂದರೆ ಆ ಮನೋಭಾವನೆಯ ಅಂತಸ್ತನ್ನು ಕಾಮಲೋಲುಪರಾದ ನಾವುಗಳು ಹೇಗೆ ತಾನೆ ಅಳೆಯಲಾಪೆವು? ಒಂದೇ ಮಾತಿನಲ್ಲಿ ಹೇಳಿದರೆ ಭಗವತೀ ಜಗಜ್ಜನನಿಯಾದ ಕಾಳಿಯ ಭಕ್ತಿಯಲ್ಲಿ ಓಲಾಡುವದೇ ಅವರ ಸಂಸಾರವಾಗಿತ್ತು!

ತಾವು ಏರಿದ್ದ ವೈರಾಗ್ಯಶಿಖರದ ತುಟ್ಟತುದಿಯನ್ನು ಲೋಕದಲ್ಲಿರುವ ಮಾನವರೆಲ್ಲರೂ ಮುಟ್ಟಲಾರರೆಂಬುದು ಪರಮಹಂಸರಿಗೆ ಚೆನ್ನಾಗಿ ಗೊತ್ತು ಯಾವದಾದರೊಂದು ಭಗವಂತನ ನಾಮವನ್ನು ಕೇಳಿದರೆ ಏನಾದರೊಂದು ಸುಂದರವಾದ ಭಾವವನ್ನು ಕಂಡರೆ, ಯಾವದಾದರೊಂದು ಉದಾತ್ತವಾದ ವಿಚಾರವು ಮನಸ್ಸಿಗೆ ಹೊಳೆದರೆ, ಅಷ್ಟುಮಾತ್ರದಿಂದಲೇ ಭಾವಾವಿಷ್ಟರಾಗಿ ಮೈಮರೆತು ನಿರ್ವಿಕಲ್ಪಸಮಾಧಿಯಲ್ಲಿ ಮುಳುಗಿಬಿಡುತ್ತಿದ್ದ ಉಚ್ಚಕೋಟಿಯ ತಮ್ಮ ಮನಃಪರಿಪಾಕವು ಎಲ್ಲರಿಗೂ ಸುಲಭಸಾಧ್ಯವಲ್ಲವೆನ್ನುವದೂ ಅವರಿಗೆ ಚೆನ್ನಾಗಿ ತಿಳಿದಿತ್ತು. ಆದರೆ ಇಂಥ ಬ್ರಹ್ಮಾನಂದವು ದೊರೆಯುವದು ಪ್ರಯತ್ನ ಸಾಧ್ಯವೆಂದು ತಿಳಿದ ಮೇಲೆ ಕೈಯಲ್ಲಾದ ಮಟ್ಟಿಗಾದರೂ ನಾವೆಲ್ಲರೂ ಪ್ರಯತ್ನಮಾಡಬಾರದೇಕೆ?- ಎಂಬುದೇ ಅವರ ಪ್ರಶ್ನೆಯಾಗಿತ್ತು. ಆದ್ದರಿಂದಲೇ ''ಆಗಾಗ ಏಕಾಂತವಾಸವನ್ನು ಮಾಡಬೇಕು, ಧ್ಯಾನಮಾಡಬೇಕು, 'ದೇವ, ನನಗೆ ಭಕ್ತಿಯನ್ನೂ ಶ್ರದ್ಧೆಯನ್ನೂ ಅನುಗ್ರಹಿಸು' ಎಂದು ಮೊರೆಯಿಡುತ್ತಿರಬೇಕು''

ಎಂದು ಅಡಿಗಡಿಗೆ ಅವರು ಬೋಧಿಸುತ್ತಿದ್ದರು. ಆದರೆ ಕಾಮಿನೀಕಾಂಚನಗಳಿಗೆ ದಾಸರಾಗಿರುವದೇ ಜೀವನದ ತಿರುಳೆಂದು ಎಣಿಸುವವರೊಡನೆ ಮಾತ್ರ ಅವರ ಸಹಾನುಭೂತಿಯು ಎಳ್ಳಷ್ಟೂ ಇರಲಿಲ್ಲ.

ಶ್ರೀಪರಮಹಂಸರವರು ಕಡೆಯವರೆಗೂ ಭಕ್ತಿಭಾವವನ್ನೇ ಮುಖ್ಯವಾಗಿ ಇಟ್ಟುಕೊಂಡಿರುತ್ತಿದ್ದರಾದರೂ ಜ್ಞಾನ, ಭಕ್ತಿ, ಯೋಗ- ಇವುಗಳೆಲ್ಲವನ್ನೂ ಸಾಧಿಸಿಕೊಂಡಿದ್ದರು; ದ್ವೈತ, ವಿಶಿಷ್ಟಾದ್ವೈತ, ಅದ್ವೈತ-ಎಂಬ ಸಿದ್ಧಾಂತಗಳನ್ನೂ ಸಮರಸಮಾಡಿಕೊಂಡಿದ್ದರು; ಶೈವ, ವೈಷ್ಣವ, ಶಾಕ್ತೇಯ- ಮುಂತಾದ ಪಂಥಗಳನ್ನೂ ಹೊಂದುಗಡೆಮಾಡಿಕೊಂಡಿದ್ದರು; ಇಷ್ಟೇ ಅಲ್ಲ, ಮುಸಲಮಾನ, ಕ್ರಿಸ್ತಿಯನ್-ಮುಂತಾದ ಅವೈದಿಕಮತಗಳಲ್ಲಿಯೂ ಭಗವತ್ಪ್ರಾರ್ಥನೆಯ ಮಾರ್ಗವನ್ನೇ ಹೇಳಿದೆಯೆಂಬುದನ್ನು ಮನಗಂಡಿದ್ದರು. ಪರಮಾರ್ಥತತ್ತ್ವವು ಪ್ರತಿಯೊಬ್ಬನೂ ತನ್ನತನ್ನೊಳಗೇ ಅನುಭವದಿಂದ ಕಂಡುಕೊಳ್ಳತಕ್ಕದ್ದಾಗಿರುವದರಿಂದ ಅದು ಮಾತಿಗೂ ಮನಸ್ಸಿಗೂ ನಿಲುಕದೆ ಇರುತ್ತದೆ. ಆ ತತ್ತ್ವವನ್ನು ಅನುಭವಿಸಿದ ಬೇರೆಬೇರೆ ಆಚಾರ್ಯರು ಆಯಾಯಾ ಕಾಲದೇಶಗಳಿಗೆ ತಕ್ಕಂತೆ ಬೇರೆಬೇರೆ ಮಾತುಗಳಿಂದ ತಿಳಿಸಿರುತ್ತಾರೆಂಬುದನ್ನರಿಯದೆ ಜನರು ಸುಮ್ಮನೆ ಬಡಿದಾಡುತ್ತಿದಾರೆ - ಎಂಬುದನ್ನು ಎಲ್ಲರಿಗೂ ಮನದಟ್ಟುವಂತೆ ಅಧಿಕಾರವಾಣಿಯಿಂದ ಬೋಧಿಸಿರುವದು ಈ ಮಹಾತ್ಮರ ಜೀವನಚರಿತ್ರೆಯಲ್ಲಿ ಒಂದು ಅಮೋಘವಾದ ಭಾಗವಾಗಿರುತ್ತದೆ.

ಒಂದು ಉದ್ಯಾನವನದಲ್ಲಿ ಹುಟ್ಟಿ, ಮೊಗ್ಗಾಗಿ, ಅರಳಿ ಹೂವಾಗುವ ಗುಲಾಬಿಯು ಪರಮೇಶ್ವರನು ತನಗೆ ಗೊತ್ತುಮಾಡಿರುವ ಸ್ವಭಾವ ನಿಯಮಗಳಿಗನುಸಾರವಾಗಿಯೇ ಆಯಾ ಸ್ಥಿತಿಯನ್ನು ಅನುಭವಿಸುತ್ತಿರುವದು. ಆದರೆ ಅದರ ಕೋಮಲತ್ವವೂ ಸೌಂದರ್ಯವೂ ಸುವಾಸನೆಯೂ ಆ ಉದ್ಯಾನಕ್ಕೆ ಬರುವವರಿಗೆಲ್ಲ ಆನಂದವನ್ನುಂಟುಮಾಡುವವು, ಅಲ್ಲವೆ? ಇದರಂತೆಯೇ ಶ್ರೀರಾಮಕೃಷ್ಣ ಪರಮಹಂಸರವರ ಜೀವನವು- ಎಂದರೆ ಅಧ್ಯಾತ್ಮಸಾಧನ, ಭಗವತ್ಸಾಕ್ಷಾತ್ಕಾರ, ಉಪದೇಶ - ಇವುಗಳು ಪರಮೇಶ್ವರನ ಉದ್ಯಾನದಂತಿರುವ ಈ ಭೂಮಂಡಲದಲ್ಲಿರುವ ಇಡಿಯ ಮಾನವವರ್ಗಕ್ಕೇ ಆನಂದದಾಯಕವಾಗಿರುತ್ತದೆ. ಪ್ರತಿಯೊಬ್ಬ ಮಾನವನೂ ತಾನು ಎಲ್ಲಿ ಎಷ್ಟು ಕೆಳಗಿನ ಸ್ಥಿತಿಯಲ್ಲಿದ್ದರೂ ಶರೀರಸೌಷ್ಟವ, ವಿದ್ಯೆ, ಧನ, ಅಧಿಕಾರ ಮುಂತಾದ ಯಾವ ಸೌಕರ್ಯಗಳನ್ನೂ

ಅಪೇಕ್ಷಿಸದೆಯೇ- ಸರಿಯಾದ ಪ್ರಯತ್ನದಿಂದ ಈ ಬ್ರಹ್ಮಾನಂದವನ್ನು ಅನುಭವಿಸಬಹುದು. ತನ್ನ ನೆರೆಯವರಿಗೂ ಅದರಲ್ಲಿ ಪಾಲುಕೊಡಬಹುದು ಎಂಬುದಕ್ಕೆ ಅವರ ದಿವ್ಯಜೀವನವು ಒಂದು ಉತ್ತಮನಿದರ್ಶನವಾಗಿರುತ್ತದೆ.

ಶ್ರೀರಾಮಕೃಷ್ಣಪರಮಹಂಸರವರ ಮಂಗಳಕರವಾದ ಅವತಾರದಿಂದ ನಮಗೆ ನಿಜವಾದ ಪ್ರಯೋಜನವುಂಟಾಗಬೇಕಾದರೆ ಅವರ ಜೀವನಚರಿತ್ರೆಯನ್ನು ಓದುವದು, ಅವರ ಸೂಕ್ತಿಗಳನ್ನು ಹೇಳಿಕೇಳಿ ನಲಿದಾಡುವದು, ಅವರ ಹೆಸರಿನಲ್ಲಿ ಸಂಸ್ಥೆಗಳನ್ನು ಏರ್ಪಡಿಸುವದು- ಇಷ್ಟೇ ಸಾಲದು ಅಥವಾ ಮನೆಮಾರುಗಳನ್ನು ಬಿಟ್ಟು ಕಾವಿಯ ಶಾಠಿಯನ್ನು ಹೊದ್ದುಕೊಂಡು ಯಾವದಾದರೊಂದು 'ಆನಂದ'ನೆಂಬಹೆಸರನ್ನುತಾಳಿಅಲ್ಲಲ್ಲಿಉಪನ್ಯಾಸಗಳನ್ನುಕೊಡುವದು.ವರ್ತಮಾನ ಪತ್ರಿಕೆಗಳನ್ನೂ ಗ್ರಂಥಗಳನ್ನೂ ಪ್ರಕಟಿಸುವದು. ಸ್ಕೂಲುಗಳನ್ನೇರ್ಪಡಿಸುವದು, ಬಡವರಿಗೆ ಅನ್ನವಸ್ತ್ರಗಳನ್ನೂ ರೋಗಿಗಳಿಗೆ ಔಷಧ್ಯುಪಚಾರಗಳನ್ನೂ ಏರ್ಪಡಿಸುವದು - ಇವೇ ಮುಂತಾದ ಕಾರ್ಯಕಲಾಪಗಳಿಂದ ಈ ಗುರುವರ್ಯರ ಹೆಸರು ಹಬ್ಬುವಂತೆ ಪ್ರಯತ್ನಮಾಡಿದರೂ ಸಾಲದು. ಇವೆಲ್ಲ ಅವಶ್ಯವಾಗಿ ಮಾಡಬೇಕಾದ ಅಭಿನಂದನೀಯವಾದ ಕಾರ್ಯಗಳೇ ಸರಿ; ಏನೂ ಮಾಡದೆ ಉದಾಸೀನರಾಗಿರುವದಕ್ಕಿಂತ ಈ ಕೆಲಸಗಳನ್ನು ಮಾಡಿದರೆ ಅಲ್ಪ ಸಲ್ಪವಾದರೂ ಆ ಪೂಜ್ಯರ ಸೇವೆಯಾದಂತೆ ಆಗುವದೆಂಬುದರಲ್ಲಿ ಸಂದೇಹವೂ ಇಲ್ಲ. ಆದರೆ ಇವುಗಳಿಂದಲೇ ಈ ಪರಮಹಂಸಶ್ರೇಷ್ಠರ ಅವತಾರದ ಪ್ರಯೋಜನವು ನಮಗೆ ಪೂರ್ಣವಾಗಿ ಲಭಿಸಿದಂತಾಯಿತೆಂದು ತಿಳಿಯುವದು ಮಾತ್ರ ತಪ್ಪು. ಆ ಪ್ರಯೋಜನವು ನಮಗೆ ದೊರೆಯಬೇಕಾದರೆ, ನಮ್ಮ ಈ ಅಲ್ಪಪ್ರಯತ್ನಗಳಿಂದ ಆ ಮಹಾಮಹಿಮರ ಕೀರ್ತಿಯು ಹಬ್ಬಿ ಅವರಿಗೆ ಅದರಿಂದ ಯಾವದಾದರೊಂದು ಪ್ರಯೋಜನವು ಆಗಬೇಕಾಗಿದೆಯೆಂಬ ಹೆಮ್ಮೆಯ ಭಾವನೆಯನ್ನು ಮೊಟ್ಟಮೊದಲು ತೊಲಗಿಸಿಕೊಳ್ಳಬೇಕು. ಅವರು ತಮ್ಮ ನಿತ್ಯಜೀವನದಲ್ಲಿ ನಡೆಯಿಂದಲೂ ನುಡಿಯಿಂದಲೂ ಸಾರಿಸಾರಿ ಬೋಧಿಸಿರುವಂತೆ ನಮ್ಮ ಕೈಯಲ್ಲಾದ ಮಟ್ಟಿಗೂ ಬ್ರಹ್ಮಚರ್ಯವನ್ನು ಅನುಷ್ಠಾನಮಾಡಬೇಕು, ವಿಷಯವೈರಾಗ್ಯವನ್ನು ಸಂಪಾದಿಸಿಕೊಳ್ಳಬೇಕು, ಭಗವನ್ನಾಮಕೀರ್ತನೆಯನ್ನು ಮಾಡಬೇಕು, ಅಂತರ್ಮುಖಿಗಳಾಗಿ ಭಗವಚ್ಚಿಂತನೆಯನ್ನು ಮಾಡಬೇಕು, ಅನನ್ಯಭಕ್ತಿಯಿಂದ ನಮ್ಮ ಇಷ್ಟದೇವತೆಯಲ್ಲಿ ನಿಷ್ಠೆಯನ್ನು ಸಂಪಾದಿಸಿಕೊಳ್ಳಬೇಕು,

ದುರಭಿಮಾನವನ್ನು ಬಿಟ್ಟು ಸಾಧನಗಳ ಸಾಮರಸ್ಯವನ್ನು ಮಾಡಿಕೊಳ್ಳುವದಕ್ಕೆ ಯತ್ನಿಸಬೇಕು, ಸಕಲ ಮತಗಳಲ್ಲಿಯೂ ಸಹಾನುಭೂತಿಯಿಂದಿರಬೇಕು. ಸತ್ಸಂಗದಿಂದ ಸಾಧನಗಳಿಗೆಲ್ಲ ವೀರ್ಯವನ್ನು ತಂದುಕೊಳ್ಳಬೇಕು. ಈ ಬಗೆಯ ಸತ್ಸಾಧನಗಳಿಂದ ಮತ್ತೊಬ್ಬರಿಗೆ ಉಪಕಾರವಾಗುವದೆಂಬ ಭಾವವನ್ನು ಬಿಟ್ಟು ಮೊದಲು ನಾವು ಉದ್ಧಾರವಾಗಬೇಕೆಂಬ ಶುಭವಾಸನೆಯನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ದಯಾಮಯರಾದ ಆ ಮಹನೀಯರ ಉಪದೇಶದ ಒಳಸವಿಯು ನಮಗೆ ಗೋಚರವಾಗುವದು, ಆಗಲೇ ನಾವು ಅವರ ಪೂರ್ಣಾನುಗ್ರಹಕ್ಕೆ ಪಾತ್ರರಾಗುವೆವು. ಇಂಥ ಚಿತ್ತವೃತ್ತಿಗೆ ಮನಸ್ಸನ್ನು ಒಲಿಸೆಂದು ಭಕ್ತಿಭರದಿಂದ ಭಗವಂತನನ್ನು ಪ್ರಾರ್ಥಿಸೋಣ.

★★★★★

# ಶ್ರೀ ಸ್ವಾಮಿ ವಿವೇಕಾನಂದರು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳವರು

ಜನವರಿ ತಿಂಗಳಲ್ಲಿ ಶ್ರೀರಾಮಕೃಷ್ಣಪರಮಹಂಸರವರ ಪ್ರಖ್ಯಾತ ಗುರುಪುತ್ರರಾದ ಶ್ರೀವಿವೇಕಾನಂದಸ್ವಾಮಿಗಳವರ ಜನ್ಮದಿನವು ಬರುತ್ತದೆ. ಭಾರತಭೂಮಿಯಲ್ಲಿ ಅಭಿಮಾನವಿರುವವರೆಲ್ಲ ಅವರ ಸ್ಮರಣೆಯನ್ನು ಮಾಡಿ ಆ ದಿನ ತಮ್ಮ ಹೃದಯದಲ್ಲಿ ವಿವೇಕಾನಂದದ - ವಿವೇಕಪೂರ್ವಕವಾದ ಆನಂದರೂಪವಾದ ತತ್ತ್ವದ - ವಿಚಾರದ ಜಯಂತಿಯನ್ನು ಪ್ರಯತ್ನಪೂರ್ವಕವಾಗಿ ಕಂಡುಕೊಳ್ಳಬಹುದಾಗಿದೆ. ವಿಶೇಷವಾಗಿ ವೇದಾಂತದಲ್ಲಿ ಪ್ರೇಮವಿರುವವರೆಲ್ಲ ಸ್ವಾಮಿಗಳು ನಮ್ಮ ದೇಶದವರು ಮತ್ತೆ ವೇದಾಂತದಕಡೆಗೆ ತಿರುಗುವಂತೆ ಮಾಡಿದ ಉಪಕಾರವನ್ನು ಸ್ಮರಣೆಮಾಡತಕ್ಕದ್ದಾಗಿದೆ. ''**ನನಗೆ ಸ್ವಾಮಿಗಳನ್ನು ನೇರಾಗಿ ನೋಡುವ ಭಾಗ್ಯವು ದೊರಕಲಿಲ್ಲ; ಆದರೆ ನನಗೆ ಇನ್ನೂ ಇಪ್ಪತ್ತೈದನೆಯ ವರ್ಷವು ಕಾಲಿಡುವದರೊಳಗೇ ಶಾಂಕರವೇದಾಂತದಲ್ಲಿ ಶ್ರದ್ಧಾಭಕ್ತಿಗಳುಂಟಾಗುವಂತೆ ಮಾಡಿದ್ದು ಆ ಮಹನೀಯರ ಹೆಸರೇ**'' - ಎಂಬುದನ್ನು ಇಲ್ಲಿ ಹೇಳದೆ ಇದ್ದರೆ ನಾನು ಕೃತಘ್ನನಾದೇನು.

ವಿವೇಕಾನಂದಸ್ವಾಮಿಗಳಿಗೆ ಚಿಕ್ಕಂದಿನಲ್ಲಿಯೇ ಎರಡು ಬಗೆಯ ಕನಸುಗಳು ಮತ್ತೆಮತ್ತೆ ಅನುಭವಕ್ಕೆ ಬರುತ್ತಿದ್ದವಂತೆ ಧನಸಂಪತ್ತು ಬಿರುದುಬಾವಲಿಗಳು, ಅಧಿಕಾರ, ಕೀರ್ತಿ- ಇವುಗಳನ್ನನುಭವಿಸುತ್ತಿರುವ ಜೀವನದ ಕನಸು ಒಂದು; ಐಹಿಕಭೋಗಗಳನ್ನೆಲ್ಲ ತರುತಲದಲ್ಲಿ ನಿದ್ರಿಸುತ್ತಿರುವ ಜೀವನದ ಕನಸು ಮತ್ತೊಂದು ಭರತಖಂಡದ ತರುಣರಿಗೆ ಇಂಥ ವಿರುದ್ಧವಾದ ಎರಡು ಮನೋರಥಗಳು ಎದುರಿಗೆ ಕಾಣಿಸುವದೆಂಬುದೇ ಒಂದು ಸೌಭಾಗ್ಯ. ಆದರೆ ಶ್ರೇಯಸ್ಸು, ಪ್ರೇಯಸ್ಸು- ಇವೆರಡೂ ಎದುರಿಗೆ ಬಂದು ನಿಂತಿರುವಾಗ ಶ್ರೇಯಸ್ಸನ್ನೇ ಆರಿಸಿಕೊಳ್ಳುವ ಧೀರನ ಜೀವನವೇ ಶ್ರೇಯಸ್ಕರವೆಂದು ನಿಶ್ಚಯಿಸಿದ ನಚಿಕೇತನ ಮನೋದಾರ್ಢ್ಯವು ಬಂದೊದಗುವದು ಅದಕ್ಕಿಂತಲೂ ಹೆಚ್ಚಿನ ಸೌಭಾಗ್ಯ. ಆ ಸೌಭಾಗ್ಯವು ಸ್ವಾಮಿ ವಿವೇಕಾನಂದರದಾಯಿತು; ಅದಕ್ಕಾಗಿಯೇ ಇಂದು ಅವರ ಜನ್ಮದಿನವನ್ನು ಭಾರತದ ಆದ್ಯಂತದಲ್ಲಿಯೂ ಜನರು ಆಚರಿಸುತ್ತಿರುವದು.

ಸ್ವಾಮಿಗಳ ಕಾಲಕ್ಕೆ ಭರತಖಂಡವು ಇನ್ನೂ ಪರದೇಶದವರ ದಾಸ್ಯದಲ್ಲಿತ್ತು. ಅವರು ದೇಶಭಕ್ತಿಯಲ್ಲಿ ಯಾರಿಗಿಂತಲೂ ಕಡಿಮೆಯಾಗಿರಲಿಲ್ಲ; ಅವರ ದೇಶಾಭಿಮಾನದ ಮನೋವೃತ್ತಿಯನ್ನರಿತಿದ್ದ ಸರಕಾರದವರು ಅವರ ಹಿಂದೆ ಗುಪ್ತಪೋಲಿಸಿನವರನ್ನು ಇಟ್ಟಿದ್ದರೆಂದು ಕೂಡ ಹೇಳುತ್ತಾರೆ! ಆದರೆ ಅವರ ದೇಶಭಕ್ತಿಯ ಮೂಲವು ಈಶಭಕ್ತಿಯಲ್ಲಿತ್ತು. ಈಶ್ವರನೆಂದರೆ ಅವರ ದೃಷ್ಟಿಯಲ್ಲಿ ನಮ್ಮೆಲ್ಲರಿಗೂ ಆತ್ಮನಾಗಿರುವ ಪರಬ್ರಹ್ಮವೆಂದು ವೇದಾಂತದಲ್ಲಿ ಹೇಳಿರುವ ಪರಮಾರ್ಥತತ್ತ್ವ. ವೇದಾಂತಜ್ಞಾನದಿಂದ ವ್ಯವಹಾರಕ್ಕೆ ಯಾವ ಅಡ್ಡಿಯೂ ಆಗುವದಿಲ್ಲವೆಂಬುದಷ್ಟೇ ಅಲ್ಲ; ಪ್ರಪಂಚದ ಸ್ವಭಾವವನ್ನು ತಿಳಿದುಕೊಂಡು ಅದರಿಂದ ಯಾವ ವ್ಯಥೆಯನ್ನೂ ಅನುಭವಿಸದೆ ಆನಂದದಿಂದ ವ್ಯವಹರಿಸುವ ಉಪಾಯವು ವೇದಾಂತಜ್ಞಾನದಿಂದಲೇ ಬರುತ್ತದೆ ಎಂಬುದು ಅವರ ನಂಬಿಕೆಯಾಗಿತ್ತು. ವೇದಾಂತದಲ್ಲಿ ಹೇಳಿರುವ ಪರಮೇಶ್ವರನು ನಿರ್ಗುಣನೂ ಅಹುದು, ಸಗುಣನೂ ಅಹುದು. ನಿರ್ಗುಣಸ್ವರೂಪವು ಪರಮಾರ್ಥವಾಗಿ ರುವದರಿಂದಲೇ ಆತನ ಸಗುಣರೂಪನೂ ಯಥಾರ್ಥವಾಗಿರುತ್ತದೆ; ನಿರ್ಗುಣಪರಮಾತ್ಮನೇ ಭಕ್ತರಿಗೆ ಅನುಗ್ರಹವನ್ನು ಮಾಡುವದಕ್ಕಾಗಿ ಸಕಲ ಕಲ್ಯಾಣಗುಣಗಳಿಂದೊಡಗೂಡಿದ ಭಗವಂತನಾಗಿ ದರ್ಶನವನ್ನು ಕೊಡುವಾತನು – ಎಂದು ಅವರು ಉಪನಿಷತ್ತುಗಳ ಆಧಾರದಿಂದ ಉಪದೇಶಿಸುತ್ತಿದ್ದರು.

ಪಶ್ಚಿಮದೇಶದವರ ನಾಗರಿಕತೆಯನ್ನು ನಮ್ಮವರು ಆರಾಧ್ಯದೇವತೆಯಾಗಿ ಮಾಡಿಕೊಂಡಿವ್ದ ಕಾಲವದು. ಆದ್ದರಿಂದ ವಿವೇಕಾನಂದರು ಅಮೆರಿಕದಲ್ಲಿ ನಡೆದ ಸರ್ವಮತಸಮ್ಮೇಲನದಲ್ಲಿ ಮಾಡಿದ ಭಾಷಣಗಳಿಂದ ಪಾಶ್ಚಾತ್ಯರೆಲ್ಲರೂ ಬೆರಗಾದರೆಂಬ ಸುದ್ದಿಯು ಮುಂದೆ ಇಂಗ್ಲೆಂಡು ಮುಂತಾದ ದೇಶಗಳಲ್ಲಿಯೂ ಅವರ ಭಾಷಣಗಳ ಮಂತ್ರಶಕ್ತಿಯು ಮಹಾಮಹಾಮೇಧಾವಿಗಳನ್ನೂ ಮುಗ್ಧರನ್ನಾಗಿ ಮಾಡಿತೆಂಬ ಸುದ್ದಿಯೂ ನಮ್ಮ ದೇಶಕ್ಕೆ ಬಂದು ಮುಟ್ಟಿದಾಗ 'ಆಹಾ! ಹಾಗಾದರೆ ನಮ್ಮ ದೇಶದ ನಡೆನುಡಿಗಳೇನೂ ಕಡಿಮೆಯವಲ್ಲ, ನಮ್ಮ ವೇದಾಂತವು ಸಾರ್ವತ್ರಿಕ ಧರ್ಮವನ್ನು ಬೋಧಿಸುವದಕ್ಕೆ ಆಧಾರವಾದ ತತ್ತ್ವ ಶಾಸ್ತ್ರವಾಗಿರುತ್ತದೆ. ನಮ್ಮ ನಾಗರಿಕತೆಯಲ್ಲಿಯೂ ನಮ್ಮ ಸಮಾಜರಚನೆಯಲ್ಲಿಯೂ ಇನ್ನೂ ಬಲವಿದೆ' ಎಂದು ನಮ್ಮ ಯುವಕರ ಹೃದಯದಲ್ಲಿ ಅರಿವಿನ ಅರುಣೋದಯವಾಯಿತು. ಸ್ವಾಮಿಗಳು ಭರತಖಂಡಕ್ಕೆ ಹಿಂತಿರುಗಿದಾಗ ಅವರಿಗೆ ಎಲ್ಲೆಲ್ಲಿಯೂ ಅಭೂತಪೂರ್ವವಾದ ಸ್ವಾಗತವು ಸಿಕ್ಕಿತು. ಆಗ್ಗೆ ಅವರು ನಮ್ಮ ದೇಶದ ಭಾಗ್ಯವಿಧಾತನು ಧರ್ಮದಿಂದಲೇ ನಾವು ಬಾಳಬೇಕೆಂದು ನಿರ್ಣಯಿಸಿರುವನೆಂತಲೂ ಅವುಗಳನ್ನೆಲ್ಲ ಪರಿಹರಿಸಿಕೊಂಡು ನಾವು ಪರಿಶುದ್ಧರಾದರೆ ನಾವೂ ಉದ್ಧಾರವಾಗುವದಲ್ಲದೆ ಪರದೇಶದವರಿಗೂ ಒಂದು ದಿವ್ಯಸಂದೇಶವನ್ನು ಕೊಡುವ ಶಕ್ತಿಯುಳ್ಳವರಾಗುವೆವೆಂತಲೂ ಬೋಧಿಸಿದರು. ನಿಜಸ್ಥಿತಿಯ ಹೃತ್ಪೂರ್ವಕವಾದ ಭಾವನೆ, ಪರೋಪಕಾರಬುದ್ಧಿ, ಎಂಥ ಅಡ್ಡಿ ಗಳನ್ನಾದರೂ ದಾಟಿ ಕಾರ್ಯರಂಗಕ್ಕೆ ಇಳಿಯುವ ದೃಢ ಸಂಕಲ್ಪ- ಇವುಗಳಿಂದ ಎಲ್ಲಾ ಸದುದ್ದೇಶಗಳೂ ನೆರವೇರುವವೆಂಬ ಬುದ್ಧಿವಾದವನ್ನು ಅವರು ನಮ್ಮ ತರುಣರ ಮುಂದೆ ಇಟ್ಟರು.

ಈಗ್ಗೆ ನಾವು ಪರದಾಸ್ಯದಿಂದ ವಿಮುಕ್ತರಾಗಿರುತ್ತೇವೆ. ಆದರೆ ನಮಗೆ ಸಂಪೂರ್ಣವಾಗಿ ದಾಸ್ಯದಿಂದ ವಿಮುಕ್ತಿಯಾಗಿರುವುದಿಲ್ಲ. ಈ ಭೂಮಂಡಲವೆಲ್ಲ ಉದ್ಯೋಗಗಳಲ್ಲಿ ನಿರಂತವಾಗಿರುವದರಿಂದಲೂ ದೇಶದೇಶಗಳಿಗೆ ಸ್ಪರ್ಧೆಯೂ ರಾಗದ್ವೇಷಗಳೂ ಹೆಚ್ಚುತ್ತಿರುವದರಿಂದಲೂ ಕೆಲವು ಆರ್ಥಿಕಸಮಸ್ಯೆಗಳು ನಮ್ಮ ತಲೆಯನ್ನು ತಿನ್ನುತ್ತಿವೆ. ದೇಶರಕ್ಷಣೆಗೆ ಸೈನ್ಯವು ಬೇಕು; ಅದಕ್ಕಾಗಿ ಉಕ್ಕು ಮುಂತಾದ ಲೋಹಗಳು ಬೇಕು; ಜನಸಂಖ್ಯೆ ಹೆಚ್ಚಾಗಿರುವದರಿಂದ ಆಹಾರವು ಹೆಚ್ಚಾಗಿ ಸಿದ್ಧವಾಗಬೇಕು; ನಮ್ಮ ಆಯುರ್ಮಾನವು ಕಡಿಮೆಯಾಗಿರುವದರಿಂದ ಆರೋಗ್ಯ

ಬಲಗಳು ಹೆಚ್ಚಾಗುವದಕ್ಕೆ ತಕ್ಕ ಉಪಾಯಗಳು ಬೇಕು- ಇತ್ಯಾದಿ, ಇತ್ಯಾದಿ. ಈ ಸಮಸ್ಯೆಗಳ ಗಡಿಬಿಡಿಯಲ್ಲಿ ಜನರು ಸಿಕ್ಕಿರುವದರಿಂದ ಈಗ್ಗೆ ಧರ್ಮ, ನೀತಿ, ತತ್ತ್ವ- ಎಂಬ ಮಾತುಗಳು ಅರಣ್ಯರೋದನವಾಗುವ ಸಂಭವವಿದೆ. ಆದ್ದರಿಂದ ಈಗ್ಗೆ ಕೆಲವು ಧಾರ್ಮಿಕ ಸಂಸ್ಥೆಗಳು, ವರ್ತಮಾನಪತ್ರಿಕೆಗಳು- ಇವುಗಳಿಂದ ಮಾತ್ರ ಎಲ್ಲಿಯೋ ಒಂದೊಂದು ಸಲ ವೇದಾಂತದ ಮಾತುಗಳನ್ನು ಕೇಳಬಹುದಾಗಿರುತ್ತದೆ.

ಆದ್ದರಿಂದ ವೇದಾಂತಪ್ರೇಮಿಗಳಾದವರು ಈಗ ಎಚ್ಚತ್ತು ನಿಲ್ಲಬೇಕು; ವೇದಾಂತದ ಮೂಲತತ್ತ್ವಗಳ ಬೆಲೆಯನ್ನು ತಮ್ಮ ನಡೆನುಡಿಗಳ ಉದಾಹರಣೆಗಳಿಂದ ಜನರಿಗೆ ಮನಗಾಣಿಸುವದಕ್ಕೆ ಸೊಂಟಕಟ್ಟಬೇಕು. ಸ್ವಾಮಿ ವಿವೇಕಾನಂದರು ಉಪದೇಶಿಸಿದ್ದ ವೇದಾಂತಬೋಧೆಗೆ ಈಗ್ಗೆ ಎಂದಿಗಿಂತಲೂ ಹೆಚ್ಚಿನ ಗಿರಾಕಿಯಿರುತ್ತದೆ. ವೇದಾಂತೋಪದೇಶವನ್ನು ಮಾಡುವದಕ್ಕೆ ಆ ಸ್ವಾಮಿಗಳಂತೆ ಎಲ್ಲರೂ ಕಾವಿಯುಡೆಯನ್ನೇ ಧರಿಸಬೇಕಾದ ಅವಶ್ಯಕತೆಯೇನೂ ಇಲ್ಲ; ಅಥವಾ ಕಾವಿಯುಡೆಗಿಂತಲೂ ಗಾರ್ಹಸ್ಥ್ಯಧರ್ಮವನ್ನನುಸರಿಸುವ ವೇದಾಂತಿಗಳೇ ಈಗ ಹೆಚ್ಚಾಗಿ ಬೇಕಾಗಿರುತ್ತಾರೆಂದೂ ಹೇಳಬಹುದು. ಆದರೆ ವೇದಾಂತದ ಮೂಲಧ್ಯೇಯವನ್ನು ಮಾತ್ರ ಕೆಳಕ್ಕೆ ಇಳಿಸಬಾರದು. ಈಗಿನವರ ಮನೋವೃತ್ತಿಗೆ ಹೊಂದುಗೆಯಾಗುವದಕ್ಕೆಂದು ಪ್ರಪಂಚವೇ ಪರಮಾರ್ಥವೆಂದೂ ಸುಖಜೀವನವೇ ಮಾನವನ ಧ್ಯೇಯವೆಂದೂ ಬೋಧಿಸುವವರ ಜಾಲಕ್ಕೆ ಎಂದಿಗೂ ಬೀಳಬಾರದು. ವೈರಾಗ್ಯ, ಶಮದಮಾದಿಗಳು- ಇವುಗಳಿಗೆ ಆದರ್ಶಪ್ರಾಯರಾಗಿರುವವರೂ ಕರ್ಮ ಯೋಗದ ಆದರ್ಶವನ್ನು ಜನತೆಯ ಮುಂದೆ ಇಡುವವರೂ ಆಗಿರುವ ಸದ್ಗೃಹಸ್ಥರು ವೇದಾಂತಬೋಧೆಗೆ ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಮುಂದುಬಂದರೆ ಅಷ್ಟು ಒಳ್ಳೆಯದು. ಆದರೆ ಸರಳಜೀವನವೂ ಉದಾತ್ತವಿಚಾರವೂ ವೇದಾಂತದ ಜೀವಾಳವಾಗಿರುವದರಿಂದ ತತ್ತ್ವಚಿಂತನೆಯಲ್ಲಿಯೇ ನಿರತರಾಗಿದ್ದು ಸಮಯ ಸಮಯಕ್ಕೆ ನಿರ್ಭೀತಿಯಿಂದ ವೇದಾಂತತತ್ತ್ವಗಳನ್ನೂ ಧರ್ಮಾಚರಣೆಯ ಮರ್ಮವನ್ನೂ ಉಪದೇಶಿಸುವ ಸಾಧುಸಂನ್ಯಾಸಿಗಳ ಆತ್ಯವಶ್ಯವಾಗಿರುತ್ತವೆ. ಶ್ರೀ ಸ್ವಾಮಿ ವಿವೇಕಾನಂದರಂಥ ಮಹಾತ್ಮರ ಮಹಿಮೆಯಿಂದಲೇ ನಮ್ಮ ದೇಶವು ಅಭ್ಯುದಯನಿಃಶ್ರೇಯಸಗಳನ್ನು ಕಂಡುಕೊಳ್ಳಬೇಕಾಗಿರುತ್ತದೆ.

★★★★★

# ಶ್ರೀ ವಿವೇಕಾನಂದಸ್ವಾಮಿಗಳವರು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ವಿವೇಕಚೂಡಾಮಣಿಯಲ್ಲಿ ಒಂದು ಸ್ಫೂರ್ತಿಪ್ರದವಾದ ವಾಕ್ಯವಿದೆ; ''ಮನುಷ್ಯನಾಗಿ ಹುಟ್ಟುವದು, ಮುಮುಕ್ಷುವಾಗುವದು, ಮಹಾಪುರುಷರನ್ನು ಆಶ್ರಯಿಸುವದು- ಈ ಮೂರೂ ಒಬ್ಬನಿಗೆ ದೊರಕುವದು ಬಲುಕಷ್ಟ; ಇವು ದೈವಾನುಗ್ರಹದಿಂದಲೇ ಸಿಕ್ಕತಕ್ಕವುಗಳಾಗಿವೆ.'' ಈ ವಾಕ್ಯದ ಅರ್ಥವು ಶ್ರೀ ವಿವೇಕಾನಂದಸ್ವಾಮಿಗಳವರ ಜಯಂತಿಯ ದಿನ ಮನನಮಾಡಿಕೊಳ್ಳುವದಕ್ಕೆ ಯೋಗ್ಯವಾಗಿರುತ್ತದೆ. ಏಕೆಂದರೆ ಸ್ವಾಮಿಗಳಿಗೆ ನರಜನ್ಮವು ದೊರಕಿದ್ದಲ್ಲದೆ ನರೇಂದ್ರನಾಥನೆಂಬ ತಮ್ಮ ಪೂರ್ವಾಶ್ರಮದ ಹೆಸರು ಅನ್ವರ್ಥವಾಗುವಂಥ ವಿದ್ಯೆಯೂ ವಿವೇಕವೂ ದೊರಕಿದ್ದವು; ಯೌವನವು ತಲೆದೋರುವ ಹೊತ್ತಿಗೆ ಸರಿಯಾಗಿ ಪ್ರಬಲವಾದ ಮುಮುಕ್ಷುತ್ವವು ಒಡೆದು ಮೂಡಿತ್ತು; ಆ ಮುಮುಕ್ಷುತೆಯ ನೀರಡಿಕೆಯನ್ನು ಸಂಪೂರ್ಣವಾಗಿ ನೀಗಬಲ್ಲ ಮಹಾಪುರುಷರ ಬೋಧಾಮೃತವೂ ಹತ್ತಿರದಲ್ಲಿಯೇ ದೊರಕಿತ್ತು.

ನರೇಂದ್ರನಾಥನಿಗೆ ದೊರೆತ ವಿದ್ಯಾಭ್ಯಾಸದಿಂದ ದೇಶಭಕ್ತಿ, ತತ್ತ್ವವಿಚಾರದಲ್ಲಿ ಆಸಕ್ತಿ- ಇವೆರಡೂ ದೊರೆತಿದ್ದರೂ ತರ್ಕಪ್ರಧಾನವಾದ ಆ ವಿದ್ಯೆಯಲ್ಲಿಯೇ ಅವನು ಮುಳುಗಿದ್ದರೆ ಅವನು ಎಂದಿಗೂ ವಿವೇಕಾನಂದನಾಗುತ್ತಿರಲಿಲ್ಲ. ಉತ್ಕಟವಾದ ವೈರಾಗ್ಯವೂ ತೀವ್ರವಾದ ಮುಮುಕ್ಷುತ್ವವೂ ದೈವಾನುಗ್ರಹದಿಂದ ಅವನಲ್ಲಿ ನೆಲೆಗೊಂಡಿದ್ದದ್ದರಿಂದ ಅವನು ಮದುವೆಯಾದದ್ದನ್ನು ನೋಡಬೇಕೆಂಬ ತಂದೆತಾಯಿಗಳ ಇಚ್ಛೆಯು ನೆರವೇರುವದು ತಪ್ಪಿಹೋಯಿತು. ಅವನು ವಕೀಲನಾಗುವದೂ ಬಿಟ್ಟುಹೋಯಿತು. ತನ್ನೊಡನೆ ಸಕಲವಿದ್ಯಾನಿಲಯದಲ್ಲಿ ಓದಿದ್ದ ಮಿಕ್ಕ ವಿದ್ಯಾರ್ಥಿಗಳಂತೆ ಅವನು ಪಾಶ್ಚಾತ್ಯರ ಅನುಕರಣವೆಂಬ ಅಂಧಕೂಪದಲ್ಲಿ ಬೀಳಲಿಲ್ಲ. ಬರಿಯ ಸಂಶಯಗಳ ಸುಂಟರಗಾಳಿಯಲ್ಲಿಯೇ ಸಿಕ್ಕಿ ನರಳುತ್ತಲೂ ಕೂರಲಿಲ್ಲ. ಅವನು ನಿಜವಾದ ಬ್ರಹ್ಮಜಿಜ್ಞಾಸುವಾಗಿ ಮೊದಲು ಬ್ರಹ್ಮಸಮಾಜವನ್ನು ಸೇರಿದನು; ಆಮೇಲೆ ಶಬ್ದಬ್ರಹ್ಮವನ್ನು ಮೀರಿ ಪರಬ್ರಹ್ಮವನ್ನೇ ತೋರಿಸಿಕೊಡಬಲ್ಲ ಸದ್ಗುರುವನ್ನೂ ಕಂಡುಕೊಂಡನು.

ಮಹಾಪುರುಷರಲ್ಲಿ ಅಗ್ರಗಣ್ಯರೆಂದೆನಿಸಿಕೊಂಡಿದ್ದ ಶ್ರೀರಾಮಕೃಷ್ಣ ಪರಮಹಂಸರವರಿಂದ ನರೇಂದ್ರನಿಗೆ ಆದ ಮಹೋಪಕಾರವನ್ನು ಕೆಲವರು ಅಲ್ಪವಾಗಿ ಎಣಿಸಬಹುದು. ಆದರೆ ನಿಜವಾಗಿ ಅದು ಅಪಾರವಾಗಿರುತ್ತದೆ. ಮೊದಲು ಅವರು ಅವನನ್ನು ತಮ್ಮಲ್ಲಿಗೆ ಮತ್ತೆ ಮತ್ತೆ ಬರುವಂತೆ ಆಕರ್ಷಣ ಮಾಡಿಕೊಂಡರು; ಆಮೇಲೆ ಅವನ ತಲೆಯಲ್ಲಿ ಮೊಳೆಯುತ್ತಿದ್ದ ಸಂಶಯಪರಂಪರೆಯ ಹುಟ್ಟನ್ನಡಗಿಸಿದರು; ಬಳಿಕ ಸಾಕಾರಸಗುಣಪರಮೇಶ್ವರನಲ್ಲಿ ಶ್ರದ್ಧೆಯನ್ನೂ ಭಕ್ತಿಯನ್ನೂ ತಂದುಕೊಟ್ಟರು; ಕಾಲಕ್ರಮದಲ್ಲಿ ಅವನನ್ನು ನಿರ್ಗುಣನಿರಾಕಾರ ಸಚ್ಚಿದಾನಂದಸಾಗರದಲ್ಲಿ ಮುಳುಗಿಸಿ ನಿರ್ವಿಕಲ್ಪಸಮಾಧಿಯ ಸೌಖ್ಯವನ್ನು ಸೂರೆಗೊಟ್ಟರು; ಇಷ್ಟಾದರೂ ತೃಪ್ತರಾಗದೆ ಲೋಕದಲ್ಲಿ ಸಾವಿರಾರು ಜನಗಳಿಗೆ ಪರಮಾಚಾರ್ಯನಾಗುವದೇ ನಿನ್ನಜೀವನದ ಪರಮೋದ್ದೇಶವೆಂಬ ಸತ್ಸೂಚನೆಯನ್ನೂ ಅವನ ಮುಂದಿಟ್ಟು ಕೊನೆಗೆ ತಮ್ಮ ಆಧ್ಯಾತ್ಮಿಕಸಂಪತ್ತೆಲ್ಲವನ್ನೂ ಅವನಿಗೆ ಬಿಟ್ಟುಕೊಟ್ಟುಬಿಟ್ಟರು!

ಸತ್ಕ್ಷೇತ್ರದಲ್ಲಿ ಬಿತ್ತಿದ ಬೀಜವು ಹುಲುಸಾದ ಬೆಳೆಯನ್ನು ಕೊಡುವಂತೆ ಪರಮಹಂಸರ ಶಕ್ತಿಪಾತದಿಂದ ಗ್ರಂಥಿಭೇದವನ್ನು ಪಡೆದ ನರೇಂದ್ರನು ಅಕ್ಷರಶಃ ವಿವೇಕಾನಂದನಾದನು. ಆಲದ ಬೀಜವು ನೋಡುವದಕ್ಕೆ ಅಷ್ಟು ಸಣ್ಣದಾಗಿ ದ್ದರೂ ನೂರಾರು ಜನರಿಗೆ ಆಸರೆಕೊಡುವ ಮಹಾವಟವೃಕ್ಷವಾಗಿ ಬೆಳೆಯುವ ಶಕ್ತಿಯು ಅದರಲ್ಲಿ ಅವ್ಯಕ್ತವಾಗಿರುವದಲ್ಲವೆ? ಶ್ರೀವಿವೇಕಾನಂದಸ್ವಾಮಿಗಳು ಕ್ರಮಕ್ರಮವಾಗಿ ಅಂಥ ಮಹಾವಟವೃಕ್ಷವಾಗಿ ಬೆಳೆದರು, ಪರಮಹಂಸ ಪರಿವ್ರಾಜ ಕರಾಗಿ ಕಾಲುನಡಗೆಯಿಂದ ಇಡೀಯ ಭರತಖಂಡದ ಯಾತ್ರೆಯನ್ನು ಮಾಡಿ ಸಾಧುಸಜ್ಜನರ ಸಂದರ್ಶನದಿಂದಲೂ ತಮ್ಮ ಪ್ರತಿಭೆಯಿಂದಲೂ ಈ ಖಂಡದಲ್ಲಿ ಗುಪ್ತವಾಗಿದ್ದ ಅಧ್ಯಾತ್ಮಶಕ್ತಿಯನ್ನು ಸಾಕ್ಷಾತ್ಕಾರಮಾಡಿಕೊಂಡರು. ಆ ಶಕ್ತಿಯು ಈ ದೇಶದಲ್ಲಿ ವಿಕಾಸವಾಗಬೇಕಾದರೆ ಕಡಲಿನಾಚೆಗೂ ಅಡಿಯಿಡುವದು ಅತ್ಯವಶ್ಯವೆಂಬುದನ್ನು ಕಂಡುಕೊಂಡರು. ಸಿಂಹಗರ್ಜನೆಯಂಥ ತಮ್ಮ ವೀರವಾಣಿಯಿಂದ ಅಮೆರಿಕದ ವಿಶ್ವಧರ್ಮಸಮ್ಮೇಳನದಲ್ಲಿ ಆಧುನಿಕನಾಗರಿಕತೆಗೆ ಅರ್ಥವಾಗುವಂಥ ವಾಕ್ಸರಣಿಯಲ್ಲಿ ಚಿರಂತನವಾಗಿರುವ ವೇದಾಂತದರ್ಥವನ್ನು ಸಾರಿದರು. ಎಲ್ಲೆಲ್ಲಿಯೂ ಆ ವೀರನಾದವು ಮೊಳಗಿತು, ಮತ್ತೆ ಭರತಖಂಡದ ಗುಹೆಗಳಲ್ಲೂ ಮಾರುದನಿಕೊಟ್ಟಿತು. ಈ ದೇಶದ ಜನಗಳೆಲ್ಲ ಪಾಶ್ಚಾತ್ಯಮಂತ್ರ

ಶಕ್ತಿಯಿಂದ ಬಿಗಿದುಕೊಂಡಿದ್ದ ಕಟ್ಟನ್ನು ಕೊಡವಿಕೊಂಡು ಕಂದೆರೆದೆದ್ದು ತಮ್ಮ ಅನಾದಿಸಂಸ್ಕೃತಿಯ ಸ್ವರೂಪವನ್ನು ಕಂಡುಕೊಂಡರು.

ಶ್ರೀರಾಮಕೃಷ್ಣ ಪರಮಹಂಸರಲ್ಲಿ ಸಂನ್ಯಾಸಸ್ವೀಕಾರವನ್ನು ಮಾಡಿದ್ದ ಹತ್ತು ಹನ್ನೆರಡು ಜನ ಸಂನ್ಯಾಸಿಗಳ ಗುಂಪು ಶ್ರೀವಿವೇಕಾನಂದಸ್ವಾಮಿಗಳ ನಾಯಕತ್ವದ ಫಲವಾಗಿ ಈಗ ನೂರಾರು ಜನ ಸಂನ್ಯಾಸಿಗಳ ತಂಡವಾಗಿದೆ; ಭರತಖಂಡದಲ್ಲಿಯೂ ವಿದೇಶಗಳಲ್ಲಿಯೂ ಕೇಂದ್ರಗಳನ್ನು ಸ್ಥಾಪಿಸಿ ಶ್ರೀರಾಮ ಕೃಷ್ಣಮಹಾಸಂಘವೆನಿಸಿಕೊಂಡಿದೆ; ಈ ವರ್ಷ ಆ ಪರಮಹಂಸರ ಶತಮಾನೋತ್ಸವವನ್ನು ಲಕ್ಷಗಟ್ಟಲೆಯ ಜನರು ಆಚರಿಸುವಂತೆ ಉತ್ತೇಜನೆಯನ್ನು ಕೊಟ್ಟಿರುತ್ತದೆ.

ಈ ಕೋಲಾಹಲದಲ್ಲಿ ಭರತಖಂಡದವರಾದ ನಾವು ಸ್ವಾಮಿಗಳ ದಿವ್ಯ ಸಂದೇಶವನ್ನು ಮರೆಯಬಾರದು. ಭರತಖಂಡದ ಸಿರಿಸಂಪತ್ತೆಲ್ಲವೂ ಆಧ್ಯಾತ್ಮಿಕ ಸಂಸ್ಕೃತಿಯೆಂದೂ ಅದರ ಮೂಲಕವಾಗಿಯೇ ನಮ್ಮ ಸಕಲ ಇಹಪರಪುರುಷಾರ್ಥಗಳೂ ಈಡೇರಬೇಕಾಗಿದೆಯೆಂದೂ ಅವರು ಏರುದನಿಯಿಂದ ಮತ್ತೆಮತ್ತೆ ಸಾರಿರುತ್ತಾರೆ. ಇಂದಿನ ನಾಗರಿಕತೆಯಲ್ಲಿ ನಮ್ಮಗಳಿಗೆ ಒಂದು ವಿಶಿಷ್ಟಸ್ಥಾನವು ಬರಬೇಕಾದರೆ, ಮತ್ತೊಬ್ಬರನ್ನನುಕರಣಮಾಡುವ ಕೆಟ್ಟಚಾಳಿಯನ್ನು ಬಿಡಬೇಕೆಂದೂ ನಮ್ಮ ಏಳಿಗೆಗೆ ಮತ್ತೊಬ್ಬರಲ್ಲಿ ಭಿಕ್ಷೆಬೇಡುವ ಕೆಟ್ಟಪದ್ಧತಿಯನ್ನು ಅತ್ತಿಟ್ಟು ನಮ್ಮ ನೈಜಸಂಪತ್ತಾದ ಅಧ್ಯಾತ್ಮವಿದ್ಯೆಯನ್ನು ಬೆಳೆಯಿಸಿಕೊಂಡು ಲೋಕಕ್ಕೆಲ್ಲ ದಾನಮಾಡಬೇಕೆಂದೂ ಇದರಿಂದಲೇ ಲೋಕಕಲ್ಯಾಣವೂ ನಮ್ಮ ಉದ್ಧಾರವೂ ನೆರವೇರುವವೆಂದೂ ಶಪಥಮಾಡಿ ಹೇಳಿರುತ್ತಾರೆ. ಆ ಉತ್ತಮ ಸಂದೇಶಕ್ಕೆ ಕಿವಿಗೊಡುವಂತೆ ನಮಗೆ ಪರಮಾತ್ಮನು ಅನುಗ್ರಹಮಾಡಲಿ!

★★★★★

# ಪವ್ಹಾರಿ ಬಾಬ -1

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಈ ಮಹಾತ್ಮನು ಕಾಶಿಯ ಬಳಿಯ ಒಂದು ಹಳ್ಳಿಯಲ್ಲಿ ಹುಟ್ಟಿದ ಬ್ರಾಹ್ಮಣನು. ಈತನು ಚಿಕ್ಕಂದಿನಲ್ಲಿ ಗಾಸಿಪುರದಲ್ಲಿದ್ದ ತಮ್ಮ ಸೋದರ ಮಾವನ ಮನೆಗೆ ಹೋಗಿ ತರ್ಕ, ವ್ಯಾಕರಣ, ರಾಮಾನುಜಸಿದ್ಧಾಂತ- ಇವುಗಳಲ್ಲಿ ಪಾರಂಗತನಾದನು. ಮಾವನು ಪರಲೋಕವನ್ನೈದಿದ ಮೇಲೆ ಇವನು ಪರಮಾತ್ಮನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕೆಂಬ ಸಂಕಲ್ಪದಿಂದ ದೇಶಾಟನೆಗೆ ಹೊರಟನು. ದಾರಿಯಲ್ಲಿ ದ್ರಾವಿಡಭಾಷೆಗಳನ್ನೂ ಹಳೆಯ ಬಂಗಾಳಿಭಾಷೆಯನ್ನೂ ಕಲಿತುಕೊಂಡನು. ಹಿಂದುಗಳಿಗೂ ಬೌದ್ಧರಿಗೂ ಪವಿತ್ರವೆನಿಸಿರುವ ಗಿರ್ನಾರು ಬೆಟ್ಟದ ಮೇಲೆ ಈತನಿಗೆ ಯೋಗ ರಹಸ್ಯದ ಉಪದೇಶವಾಯಿತು. ಇಲ್ಲಿಂದ ಕಾಶಿಗೆ ಹೋಗಿ ಒಬ್ಬ ಸಂನ್ಯಾಸಿಯಿಂದ ಅದ್ವೈತವೇದಾಂತವನ್ನೆಲ್ಲ ತಿಳಿದುಕೊಂಡನು. ಈ ಸಂನ್ಯಾಸಿಯು ಗಂಗೆಯ ದಡದಲ್ಲಿ ಒಂದು ಗುಂಡಿಯನ್ನು ಮಾಡಿಕೊಂಡು ಅದರಲ್ಲಿರುತ್ತಿದ್ದನಂತೆ. ಅವನ ಬಳಿಯಲ್ಲಿ ಕೆಲವು ಕಾಲವಿದ್ದ ಬಳಿಕ ಪವ್ಹಾರಿಬಾಬನು ಎಷ್ಟೋ ವರ್ಷಗಳವರೆಗೆ ಸಾಧನಮಾಡುತ್ತಾ ಊರಿಂದೂರಿಗೆ ಪ್ರಯಾಣ ಮಾಡುತ್ತಿದ್ದನು.

ಕೊನೆಗೆ ತಮ್ಮ ಊರಾದ ಗಾಸಿಪುರಕ್ಕೆ ಬಂದು ತಾನೂ ತಮ್ಮ ಗುರುವಿನಂತೆ ನದಿಯ ದಂಡೆಯಲ್ಲಿ ಒಂದು ಗುಂಡಿಯನ್ನು ತೋಡಿ ಅದಲ್ಲಿಯೇ ಬಹುಕಾಲದವರೆಗೂ ಇರುತ್ತಾ ರಾತ್ರಿಯ ವೇಳೆಯಲ್ಲಿ ನದಿಯ ದಡದ ಮೇಲೆ ದೇಹದಂಡನೆಯ ಉಗ್ರತಪಸ್ಸನ್ನು ಮಾಡುತ್ತಾ ಕಾಲವನ್ನು ಕಳೆಯುತ್ತಿದ್ದನು. ಆತನು ಪ್ರತಿದಿನವೂ ಬೇವಿನ ಸೊಪ್ಪನ್ನೋ ಇಲ್ಲದಿದ್ದರೆ ಸ್ವಲ್ಪ ಮೆಣಸಿನಕಾಳನ್ನೋ ಆಹಾರಕ್ಕೆ ತೆಗೆದುಕೊಳ್ಳುತ್ತಿದ್ದನು. ಕೆಲಸವೆಂಬುದೆಲ್ಲ ಮತ್ತೊಬ್ಬರ ಪೂಜೆಯೇ- ಎಂಬುದು ಆತನ ಮತವಾಗಿದ್ದಿತು. ಎಷ್ಟೋ ವೇಳೆಯಲ್ಲಿ ತಾನು ಮಾಡಿಕೊಂಡಿದ್ದ ಅನ್ನವನ್ನು ಇಷ್ಟದೇವತೆಗೆ ಅರ್ಪಿಸಿದ ಬಳಿಕ ಅದನ್ನು ಬಡವರಿಗೋ ಪರಿವ್ರಾಜಕರಿಗೋ ಕೊಟ್ಟುಬಿಡುತ್ತಿದ್ದನು; ತಾನು ಮಾತ್ರ ಏನನ್ನೂ ತಿನ್ನುತ್ತಲೇ ಇರಲಿಲ್ಲ. ಆತನ ಆಹಾರವು ಬರುಬರುತ್ತಾ ತೀರ ಅಲ್ಪವಾಗಿಬಿಟ್ಟದ್ದರಿಂದ ಜನರು ಅವನಿಗೆ

ಪವ್ಹಾರಿ ಬಾಬ- ಎಂಬ ಹೆಸರನ್ನಿಟ್ಟರು. ಪವ್ಹಾರಿ ಬಾಬನೆಂದರೆ 'ವಾಯುವನ್ನು ಭಕ್ಷಿಸುವ ತಂದೆ' ಎಂದು ಅರ್ಥ.

ಕಾಲಕ್ರಮದಲ್ಲಿ ಆತನು ಎಷ್ಟೋ ದಿನಗಳವರೆಗೆ, ಕೆಲವು ವೇಳೆ ಎಷ್ಟೋ ತಿಂಗಳವರೆಗೆ, ಗುಹೆಯಲ್ಲಿಯೇ ಬಹುವಾಗಿ ಇದ್ದುಬಿಡುವದಕ್ಕೆ ಆರಂಭಿಸಿದನು; ಜನರು 'ಈತನು ಊಟಕ್ಕೆ ಏನು ಮಾಡುವನು? ಬಹುಶಃ ಇವನು ಇಷ್ಟರಲ್ಲಿ ಪ್ರಾಣವನ್ನು ಬಿಟ್ಟಿರಬೇಕು' ಎಂದುಕೊಳ್ಳುತ್ತಿದ್ದರು. ಆದರೆ ಬಾಬನು ಬಹುಕಾಲ ಗುಹೆಯಲ್ಲಿದ್ದ ಬಳಿಕ ಮತ್ತೆ ಹೊರಕ್ಕೆ ಬಂದು ಬಿಡುತ್ತಿದ್ದನು. ಧ್ಯಾನಾರೂಢನಾಗಿಲ್ಲದ ಸಮಯದಲ್ಲಿ ಮೇಲುಗಡೆಗೆ ಬಂದು ಗುಹೆಯ ಮೇಲುಗಡೆಯಿದ್ದ ಒಂದು ಕೊಟ್ಟಡಿಯಲ್ಲಿದ್ದುಕೊಂಡು ಜನರಿಗೆ ದರ್ಶನವನ್ನು ಕೊಡುತ್ತಿದ್ದನು. ಕೊನೆಕೊನೆಗೆ ಯಾರನ್ನಾದರೂ ನೋಡುವದನ್ನು ಕೂಡ ಬಿಟ್ಟುಬಿಟ್ಟನು. ಕಟ್ಟಕಡೆಗೆ ಒಂದು ದಿನ ಮಾಂಸ ಸುಟ್ಟ ನಾತವು ಊರ ಕಡೆಗೆ ಬಂತು; ಗುಂಡಿಯಿಂದ ಮೇಲಕ್ಕೆ ಹೊಗೆಯು ದಟ್ಟವಾಗಿ ಏಳುವದಕ್ಕೆ ಮೊದಲಾಯಿತು. ಇದನ್ನು ಕಂಡು ಆತನ ಭಕ್ತರು 'ಈಗ ಆತನು ಸಮಾಧಿಮಗ್ನನಾಗಿ ತನ್ನನ್ನೇ ಪರಮೇಶ್ವರನಿಗೆ ಪೂರ್ಣಾಹುತಿಯಾಗಿ ಒಪ್ಪಿಸಿರಬೇಕು' ಎಂದು ನಿಶ್ಚಯಿಸಿಕೊಂಡರು.

ಒಂದಾನೊಂದು ಕಾಲದಲ್ಲಿ ಒಬ್ಬ ಕಳ್ಳನು ಪವ್ಹಾರಿ ಬಾಬನ ಗವಿಗೆ ಬಂದು ಅಲ್ಲಿ ಕೆಲವು ಪದಾರ್ಥಗಳನ್ನು ಕದ್ದುಕೊಂಡು ಹೋಗಬೇಕೆಂದಿರುವಲ್ಲಿ ಬಾಬನು ಬಂದದ್ದನ್ನು ಕಂಡು ಭಯದಿಂದ ವಸ್ತುಗಳನ್ನು ಅಲ್ಲಿಯೇ ಬಿಟ್ಟು ಪಲಾಯನವಾದನು. ಆಗ ಪವ್ಹಾರಿಬಾಬನು ಆ ಗಂಟನ್ನು ಎತ್ತಿಕೊಂಡು ಓಡಿಹೋಗಿ ಕಳ್ಳನ ಕಾಲಿಗೆ ಬಿದ್ದು ''ಅಯ್ಯ, ನಿನಗೆ ತೊಂದರೆ ಮಾಡಿದ ನನ್ನನ್ನು ಕ್ಷಮಿಸು. ಇವೆಲ್ಲ ನಿನ್ನವು ! ನನಗಿಂತಲೂ ನಿನಗೆ ಇವುಗಳ ಅವಶ್ಯಕತೆಯು ಹೆಚ್ಚಾಗಿರುವದು!'' ಎಂದು ಗಂಟನ್ನು ಒಪ್ಪಿಸಿದನಂತೆ! ಮತ್ತೊಂದು ಸಲ ಒಂದು ನಾಗರಹಾವು ತನ್ನನ್ನು ಕಚ್ಚಲು ಮೂರ್ಛೆಯಿಂದೆದ್ದ ಕೂಡಲೆ ಆತನು ''ನನ್ನ ಪ್ರಿಯನು ಕಳುಹಿಸಿದ ದೂತನಿವನು!'' ಎಂದನಂತೆ ಶರೀರಕ್ಕೆ ಯಾವದೊಂದು ತೊಂದರೆಯಾದರೂ ಅದನ್ನೆಲ್ಲ ತನ್ನ ''ಪ್ರಿಯನು ಕಳುಹಿಸಿಕೊಟ್ಟಿರುವ ದೂತನೆಂದೇ ಈತನು ಭಾವಿಸುತ್ತಿದ್ದನಂತೆ!

ಶ್ರೀವಿವೇಕಾನಂದಸ್ವಾಮಿಗಳಿಗೆ ಪವ್ಹಾರಿ ಬಾಬನೆಂದರೆ ತಮ್ಮ ಗುರುಗಳಾದ ಶ್ರೀರಾಮಕೃಷ್ಣಪರಮಹಂಸರಲ್ಲಿಯೇ ಇರುವಷ್ಟು ಪೂಜ್ಯಬುದ್ಧಿ. ಈ

ಸಾಧುವರೇಣ್ಯನ ಬೋಧೆಗಳನ್ನು ಸ್ವಾಮಿಗಳು ಆಗಾಗ್ಗೆ ತಮ್ಮ ಉಪನ್ಯಾಸಗಳಲ್ಲಿ ಬಹು ಗೌರವದಿಂದ ಉದಾಹರಿಸಿರುತ್ತಾರೆ. ತಾನು ಕೈಕೊಂಡ ಕೆಲಸವು ಎಷ್ಟೇ ಅಲ್ಪವಾಗಿರಲಿ, ಅದರಲ್ಲಿಯೇ ಮಗ್ನನಾಗಿಬಿಡುವದು ಈತನಲ್ಲಿ ಒಂದು ವಿಶೇಷಣಗುಣವಾಗಿದ್ದಿತು. ಶ್ರೀರಘುನಾಥನನ್ನು ಪೂಜೆ ಮಾಡುವದರಲ್ಲಿ ಎಷ್ಟು ಆದರವೋ, ಎಷ್ಟು ಏಕಾಗ್ರತೆಯೋ, ಒಂದು ತಾಮ್ರದ ತಂಬುಗೆಯನ್ನು ತೊಳೆಯುವದರಲ್ಲಿಯೂ ಅಷ್ಟೇ ಆದರವನ್ನೂ ಏಕಾಗ್ರತೆಯನ್ನೂ ಪವ್ಹಾರಿ ಬಾಬನು ತೋರಿಸುತ್ತಿದ್ದನೆಂದೂ 'ಸಾಧನವೇ ಫಲವೋ ಎಂಬಂತೆ ಅದನ್ನೇ ಪ್ರೇಮದಿಂದ ಸೇವಿಸಬೇಕು'- ಎಂಬುದೇ ಆತನು ಉಪದೇಶಿಸುತ್ತಿದ್ದ ಕರ್ಮಯೋಗರಹಸ್ಯವೆಂದೂ ಸ್ವಾಮಿಗಳವರು ಬರೆದಿರುತ್ತಾರೆ.

★★★★★

# ಪವ್ಹಾರಿಬಾಬಾ[1] -2

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

'ಪವ್ಹಾರಿಬಾಬಾ' ಎಂಬ ಹೆಸರು ಶ್ರೀವಿವೇಕಾನಂದಸ್ವಾಮಿಗಳಿಂದ ಜಗತ್ಪ್ರಸಿದ್ಧವಾಯಿತು. ಸ್ವಾಮಿಗಳು ಆ ಸಾಧುವರ್ಯನ ಮಹಿಮೆಯನ್ನು ಕಣ್ಣಾರೆ ನೋಡಿ ಅವರ ಶಿಷ್ಯವೃತ್ತಿಯನ್ನೇ ಸ್ವೀಕರಿಸೋಣವೆ? ಎಂದು ಯೋಚಿಸಿಕೊಳ್ಳುವಷ್ಟರ ಮಟ್ಟಿಗೂ ಆತನ ತೇಜಸ್ವಿಗೆ ಮನಸೋತಿದ್ದರು. ಈ ಲೇಖನಕ್ಕೆ ಸ್ವಾಮಿಗಳು ಬರೆದಿರುವ ಸಂಕ್ಷಿಪ್ತಚರಿತ್ರೆಯೇ ಆಧಾರವು.

ಪವ್ಹಾರಿಬಾಬನ ಮೊದಲಿನ ಹೆಸರೇನೋ ತಿಳಿಯದು. ಕಾಶಿಯ ಬಳಿಯಲ್ಲಿ ಒಂದು ಹಳ್ಳಿಯಲ್ಲಿ ಜನಿಸಿದ್ದು ಚಿಕ್ಕಂದಿನಲ್ಲಿಯೇ ಇವರು ಗಾಸಿಪುರದಲ್ಲಿದ್ದ ಚಿಕ್ಕಪ್ಪನ ಮನೆಗೆ ಬಂದುಬಿಟ್ಟರು. ಆ ಚಿಕ್ಕಪ್ಪನು ರಾಮಾನುಜಸಂಪ್ರದಾಯದ ವೈಷ್ಣವಬ್ರಾಹ್ಮಣನು. ನೈಷ್ಠಿಕಬ್ರಹ್ಮಚಾರಿಯಾಗಿದ್ದ ಆತನ ರಕ್ಷಣೆಯಲ್ಲಿ ಬೆಳೆದ ಈ ಹುಡುಗನು ತರ್ಕವ್ಯಾಕರಣಗಳಲ್ಲಿ ಪಾಂಡಿತ್ಯವನ್ನು ಪಡೆದುಕೊಂಡನು. ಚಿಕ್ಕಪ್ಪನು ದೈವಾಧೀನನಾಗುತ್ತಲೂ ತೀರ್ಥಯಾತ್ರೆಗೆ ಹೊರಟು ಅನೇಕ ವರ್ಷಗಳವರೆಗೆ

1. ಶ್ರೀಸ್ವಾಮಿ ವಿವೇಕಾನಂದರವರ ಲೇಖನದ ಆಧಾರದಿಂದ ಬರೆದದ್ದು.

ಭರತಖಂಡದ ಬೇರೆಬೇರೆಯ ಭಾಗಗಳಲ್ಲಿ ಸಂಚರಿಸಿ ಸದ್ವಿಚಾರವನ್ನೂ ಸಾಧನೆಯನ್ನೂ ಅಳವಡಿಸಿಕೊಂಡು ಮತ್ತೆ ಗಾಸೀಪುರಕ್ಕೇ ಬಂದನು. ಅಲ್ಲಿ ಇವನ ಮುಖತೇಜಸ್ಸನ್ನು ಕಂಡ ಹಳೆಯ ಸ್ನೇಹಿತರು ಇವನನ್ನು ಗೌರವದಿಂದ ಬರಮಾಡಿಕೊಂಡರು.

ಇಷ್ಟೇ ಇವನ ಜೀವನಚರಿತ್ರೆಯಲ್ಲಿ ತಿಳಿದಿರುವ ಲೌಕಿಕಘಟನೆಗಳು. ತೀರ್ಥಯಾತ್ರೆಯ ಕಾಲದಲ್ಲಿ ಈತನು ದಕ್ಷಿಣದೇಶಗಳಿಗೂ ಹೋಗಿರಬೇಕೆಂಬುದು ಇವನಿಗೆ ಬರುತ್ತಿದ್ದ ತಮಿಳು, ತೆಲಗು-ಮುಂತಾದ ದ್ರಾವಿಡಭಾಷೆಗಳಿಂದ ಜನರು ಊಹಿಸಿದ್ದು. ಚೈತನ್ಯಪಂಥದವರ ಹಳೆಯ ಬಂಗಾಳಿಯ ಪರಿಚಯವೂ ಬಾಬಾನಿಗಿದ್ದರಿಂದ ಅವನು ಬಂಗಾಳದಲ್ಲಿ ಸಾಕಷ್ಟು ದೀರ್ಘಕಾಲ ವಾಸವನ್ನು ಮಾಡಿರಬೇಕೆಂದು ಊಹಿಸಲಾಗಿದೆ. ಮುಖ್ಯವಾಗಿ ಜೈನರಿಗೂ ಬೌದ್ಧರಿಗೂ ಯಾತ್ರಾಸ್ಥಳವಾಗಿರುವದಲ್ಲದೆ ದತ್ತಾತ್ರೇಯರ ಕ್ಷೇತ್ರವೆಂದು ಹಿಂದುಗಳು ಕೂಡ ಸಂಭಾವಿಸುವ ಕಾಥೆವಾಡದ ಗಿರ್ನಾರು ಬೆಟ್ಟದಲ್ಲಿ ಈತನು ಯೋಗಾಭ್ಯಾಸವನ್ನು ಕಲಿತುಕೊಂಡನೆಂದು ಆತನ ಬಾಲ್ಯಸ್ನೇಹಿತರು ಅಭಿಪ್ರಾಯಪಟ್ಟಿರುತ್ತಾರೆ.

ಪವ್ಹಾರಿಬಾಬನು ಗಂಗಾತೀರವಾಸಿಯಾದ ಒಬ್ಬ ಸಂನ್ಯಾಸಿಯ ಶಿಷ್ಯನಾಗಿ ಆತನ ಸೇವೆಯಲ್ಲಿ ಕೆಲವು ದಿನಗಳನ್ನು ಕಳೆದನು. ಆ ಸಂನ್ಯಾಸಿಯು ನದಿಯ ತೀರದಲ್ಲಿ ಒಂದು ಗುಂಡಿಯನ್ನು ತೋಡಿಕೊಂಡು ಅದರಲ್ಲಿ ಕುಳಿತು ಯೋಗಾಭ್ಯಾಸವನ್ನು ಮಾಡುತ್ತಿದ್ದನು. ಅವನ ಪ್ರಭಾವವು ಬಾಬನ ಮೇಲೆ ಬಹಳವಾಗಿ ಉಂಟಾಯಿತು. ಅದೇ ಕಾಲದಲ್ಲಿ ಇವನು ವಾರಾಣಸಿಯ ಒಬ್ಬ ಸಂನ್ಯಾಸಿಯಲ್ಲಿ ಅದ್ವೈತವ್ಯಾಸಂಗವನ್ನು ಮಾಡುತ್ತಿದ್ದನೆಂದೂ ಹೇಳುತ್ತಾರೆ.

ಇದು ಹೇಗಾದರೂ ಇರಲಿ, ಪಹ್ಹಾರಿಬಾಬನು ಗಾಸೀಪುರಕ್ಕೇ ಬಂದ ಮೇಲೆ ಒಂದು ನೆಲಗವಿಯನ್ನು ಮಾಡಿಕೊಂಡು ಅವರಲ್ಲಿ ಪ್ರತಿದಿನವೂ ಬಹಳ ಹೊತ್ತಿನವರೆಗೆಇರುವದಕ್ಕೆಮೊದಲುಮಾಡಿದನು. ಆಶ್ರಮದಲ್ಲಿಶ್ರೀರಾಮಚಂದ್ರನ ಆರಾಧನೆಯನ್ನು ಮಾಡುವದು, ತಾನೇ ಸಿದ್ಧಪಡಿಸಿ ನೈವೇದ್ಯಮಾಡಿದ ರುಚಿರುಚಿಯಾದ ಭಕ್ಷ್ಯಭೋಜ್ಯಗಳನ್ನು ಸ್ನೇಹಿತರಿಗೂ ಒಡವರಿಗೂ ಪ್ರಸಾದವಾಗಿ ಹಂಚುವದು, ಮಿಕ್ಕಕಾಲದಲ್ಲಿ ರಾತ್ರೆಯಾಗುವವರೆಗೂ ಜನರ ಯೋಗಕ್ಷೇಮವನ್ನು ನೋಡಿಕೊಳ್ಳುವದು- ಇದು ಅವನ ದೈನಂದಿನದ ಪದ್ಧತಿಯಾಯಿತು. ಎಲ್ಲರೂ

ಮಲಗಿಕೊಂಡ ಮೇಲೆ ಯಾರಿಗೂ ತಿಳಿಯದಂತೆ ಗಂಗಾನದಿಯನ್ನು ಈಜಿಕೊಂಡು ಆಚೆಯ ದಡಕ್ಕೆ ಹೋಗಿ ಇಡಿಯ ರಾತ್ರೆಯೂ ಭಜನೆಯೇ ಮುಂತಾದ ಸಾಧನಗಳಿಂದ ಜಾಗರಣವನ್ನು ಮಾಡಿ, ಬೆಳಗಾಗುವದರೊಳಗೆ ಮತ್ತೆ ಊರೊಳಕ್ಕೆ ಬಂದು, ಎಲ್ಲರನ್ನೂ ಎಬ್ಬಿಸಿ ಮತ್ತೆ ಜನತಾಜನಾರ್ದನನ ಸೇವೆಗೆ ಕೈಹಚ್ಚುತ್ತಿದ್ದನಂತೆ!

ಇವನ ಆಹಾರವು ದಿನದಿನಕ್ಕೂ ಸೂಕ್ಷ್ಮವಾಗುತ್ತಾ ಬಂದು ಕೊನೆಗೆ ಒಂದು ಹಿಡಿ ಬೇವಿನಸೊಪ್ಪೋ, ಕೆಲವು ಮೆಣಸಿನಕಾಯಿಗಳ ಸಿಪ್ಪೆಯೋ- ಇಷ್ಟಕ್ಕಿಳಿಯಿತು. ಅಲ್ಲಿಂದ ಮುಂದಕ್ಕೆ ರಾತ್ರೆಯಲ್ಲಿ ನದಿಯ ಆಚೆಯದಡಕ್ಕೆ ಹೋಗುವದನ್ನು ಬಿಟ್ಟು ಗವಿಯಲ್ಲಿಯೇ ಹೆಚ್ಚು ಹೆಚ್ಚಾಗಿ ಕಾಲವನ್ನು ಕಳೆಯಲಾರಂಭಿಸಿದನು. ಅಲ್ಲಿ ಒಂದೊಂದು ಸಲ ಹೆಚ್ಚು ಹೆಚ್ಚಾಗಿ ಕಾಲವನ್ನು ಕಳೆಯಲಾರಂಭಿಸಿದನು. ಅಲ್ಲಿ ಒಂದೊಂದು ಸಲ ಎಷ್ಟೋ ದಿನಗಳವರೆಗೂ – ಕೆಲಕೆಲವು ಸಂದರ್ಭಗಳಲ್ಲಿ ಎಷ್ಟೋ ತಿಂಗಳುಗಳವರೆಗೆ ಕೂಡ- ಇದ್ದುಬಿಡುತ್ತಿದ್ದನು. ಆಗ ಇವನು ಏನು ಆಹಾರವನ್ನು ತೆಗೆದುಕೊಳ್ಳುತ್ತಾನೆಂಬುದು ಯಾರಿಗೂ ತಿಳಿಯದ್ದರಿಂದ ಅವರು ಈತನಿಗೆ ''ಪವಹಾರಿ (=ಪವನಾಹಾರಿ)ಬಾಬಾ'' ಎಂದರೆ 'ಗಾಳಿಯನ್ನು ತಿನ್ನುವ ಸಾಧು' ಎಂಬ ಹೆಸರನ್ನಿಟ್ಟರು. ಒಂದು ಸಲ ಬಾಬನು ಗವಿಯೊಳಕ್ಕೆ ಹೋದವನು ಬಹುದೀರ್ಘಕಾಲದವರೆಗೂ ಹೊರಕ್ಕೆ ಬರಲೇ ಇಲ್ಲ. ಆದ್ದರಿಂದ ಜನರು ಅವನು ಸತ್ತನೆಂದೇ ಮಾಡಿಕೊಂಡುಬಿಟ್ಟಿದ್ದರು; ಆದರೆ ಕೊನೆಗೆ ಒಂದು ದಿನ ಅವನು ಹೊರಕ್ಕೆ ಬಂದು ಅನೇಕ ಜನ ಸಾಧುಗಳಿಗೆ ಭಂಡಾರವನ್ನು ಹಂಚಿದನು.

ಈ ಮಹಾತ್ಮನು ಧ್ಯಾನಮಗ್ನನಾಗದೆ ಇರುವ ಕಾಲದಲ್ಲಿ ಗವಿಯ ಮೇಲುಗಡೆಯಿದ್ದ ಒಂದು ಸಣ್ಣ ಕುಟೀರದಲ್ಲಿದ್ದುಕೊಂಡು ಬಂದ ಜನರೊಡನೆ ಮಾತನಾಡುತ್ತಿದ್ದನು, ಈತನ ಕೀರ್ತಿಯು ಬಹುಬೇಗನೆ ಎಲ್ಲೆಲ್ಲಿಯೂ ಹರಡಿತು. ಗಾಸೀಪುರದ ಅಫೀಮು ಇಲಾಖೆಯ ಅಧಿಕಾರಿಯಾಗಿದ್ದ ರಾಯ ಗಗನಚಂದ್ರ ರಾಯಬಹದ್ದೂರ್ ಎಂಬಾತನಿಗೂ ಈತನಲ್ಲಿ ಪೂಜ್ಯಬುದ್ಧಿಯುಂಟಾಯಿತು. ಆ ಅಧಿಕಾರಿಯೇ ವಿವೇಕಾನಂದಸ್ವಾಮಿಗಳಿಗೆ ಬಾಬನ ಪರಿಚಯವನ್ನು ಮಾಡಿಕೊಟ್ಟವನು.

ಒಮ್ಮೆ ವಿವೇಕಾನಂದರು ''ಬಾಬಜೀ, ತಾವು ಗುಹೆಯಿಂದ ಹೊರಕ್ಕೆ ಬಂದು ಜನೋಪಕಾರದ ಕೆಲಸವನ್ನೇಕೆ ಮಾಡಬಾರದು?'' ಎಂದು ಕೇಳಲು ಆತನು ''ಅಪ್ಪ,

ಮೂಗುಹರಕ ಸಾಧುವಿನ ಕಥೆಯನ್ನು ನೀನು ಕೇಳಲ್ಲವೆ? ತನ್ನ ದುಷ್ಟವರ್ತನೆಗಾಗಿ ಯಾರೋ ಮೂಗನ್ನು ಕತ್ತರಿಸಿಬಿಡಲು ಅವನು ನಾಚಿಕೆಯಿಂದ ಕಾಡನ್ನು ಸೇರಿದನು. ಅಲ್ಲಿಗೆ ಯಾರಾದರೂ ಬಂದರೆ ಧ್ಯಾನಮಾಡುತ್ತಿರುವವನಂತೆ ಬಂದು ಹುಲಿಯಚರ್ಮದ ಮೇಲೆ ಕುಳಿತುಕೊಳ್ಳುತ್ತಿದ್ದನು. ಇದರಿಂದ ಅವನ ಖ್ಯಾತಿಯು ಇನ್ನಷ್ಟು ಬೆಳೆದು ಜನರು ಅವನನ್ನು ಉಪದೇಶ ಕೊಡಬೇಕೆಂದು ಪೀಡಿಸಹತ್ತಿದರು. ಅದರಲ್ಲಿಯೂ ಒಬ್ಬ ತರುಣನು 'ತಮ್ಮ ಸಂಪ್ರದಾಯದ ದೀಕ್ಷೆಯನ್ನು ನನಗೆ ಕೊಟ್ಟೇತೀರಬೇಕು'– ಎಂದು ಬಹುವಾಗಿ ಕಾಡಿದನು ಸಾಧುವು 'ಹಾಗಾದರೆ ನಾಳೆ ಒಂದು ಹರಿತವಾದ ಕ್ಷೌರಕತ್ತಿಯನ್ನು ತೆಗೆದುಕೊಂಡು ಬಾ' ಎಂದನು. ಮಾರನೆಯ ದಿನ ಶಿಷ್ಯನು ಹತ್ತಿರಕ್ಕೆ ಬರುತ್ತಲೂ ಹೇಳದೆಕೇಳದೆ ಅವನ ಮೂಗನ್ನು ಕತ್ತರಿಸಿಬಿಟ್ಟು 'ಇಗೊ, ಇದೇ ನನ್ನ ದೀಕ್ಷೆ. ಇದನ್ನು ನೀನು ಮಿಕ್ಕವರಿಗೂ ಕೊಡಬಹುದು' ಎಂದನಂತೆ; ಶಿಷ್ಯನು ಈ ಗುಟ್ಟನ್ನು ಯಾರಿಗೂ ಹೇಳದೆ ತಾನೂ ಅದೇ ಬಗೆಯ ಶಿಷ್ಯರ ಪರಂಪರೆಯನ್ನು ಮಾಡಿಟ್ಟನಂತೆ! ನಾನೂ ಇಂಥ ಸಂಪ್ರದಾಯವೊಂದನ್ನು ಏರ್ಪಡಿಸಬೇಕೆನ್ನುವೆಯೇನು?'' ಎಂದು ನಗುತ್ತಾ ಕೇಳಿದನಂತೆ! ಮತ್ತೊಮ್ಮೆ ಅದೇ ಪ್ರಶ್ನೆಯು ಮುಂದಕ್ಕೆ ಬಂದಾಗ ''ಶಾರೀರಕಸಹಾಯವೇ ಸಹಾಯವೆ? ಶರೀರವನ್ನು ಕದಲಿಸದೆ ಒಂದು ಮನಸ್ಸು ಇತರ ಮನಸ್ಸುಗಳಿಗೆ ಸಹಾಯ ಮಾಡಲಾರದೇನು?'' ಎಂದನಂತೆ.

''ತಾವು ಮಹಾಯೋಗಿಗಳು, ತಮಗೇತಕ್ಕೆ ಕರ್ಮ?'' ಎಂಬ ಪ್ರಶ್ನೆಗೆ ಬಾಬನು ''ಮಾಡುವ ಕರ್ಮವೆಲ್ಲ ತನಗೇ ಎಂದಾಗಬೇಕೆ? ಮತ್ತೊಬ್ಬರಿಗಾಗಿ ಕರ್ಮವನ್ನು ಮಾಡಕೂಡದೇನು?'' ಎಂದನಂತೆ. ಲೋಕಸಂಗ್ರಹಕ್ಕಾಗಿಯೇ ಕೆಲಸಮಾಡುತ್ತಿದ್ದ ಆ ಮಹಾತ್ಮನಿಗೆ ತಕ್ಕ ನುಡಿಗಳಿವು.

ಚರಾಚರಪ್ರಪಂಚವೆಲ್ಲವೂ ಭಗವಂತನ ವಿಭೂತಿಯೇ ಎಂಬ ತತ್ತ್ವವನ್ನು ಈ ಸಾಧುವರೇಣ್ಯನು ಅಕ್ಷರಶಃ ಪಾಲಿಸುತ್ತಿದ್ದನೆಂಬುದಕ್ಕೆ ಅನೇಕ ಉದಾಹರಣೆಗಳಿವೆ. ಆಶ್ರಮಕ್ಕೆ ಕಳವುಮಾಡುವದಕ್ಕೆಂದು ಬಂದಿದ್ದ ಒಬ್ಬ ತುಡುಗನು ಬಾಬನನ್ನು ಕಂಡ ಒಡನೆಯೇ ತಾನು ಕಟ್ಟಿಟ್ಟಿದ್ದ ಪದಾರ್ಥಗಳ ಗಂಟನ್ನು ಅಲ್ಲಿಯೇ ಇಟ್ಟು ಕಾಲಿಗೆ ಬುದ್ಧಿಹೇಳಿದನು. ಮಹಾತ್ಮನು ಅವನ ಹಿಂದೆಯೇ ಓಡಿಹೋಗಿ ಕಣ್ಣೀರಿಡುತ್ತಾ ಕೈಮುಗಿದುಕೊಂಡು 'ನಾರಾಯಣ! ಈ ಸಾಮಾನುಗಳು ನಿನ್ನವು, ತೆಗೆದುಕೊ. ನಿನ್ನ ಸಮಯವನ್ನರಿಯದೆ ಒಳಕ್ಕೆ ಬಂದ ನನ್ನ ತಪ್ಪನ್ನು ಮನ್ನಿಸು!' ಎಂದು

ಗಂಟನ್ನು ಕೆಳಗಿಟ್ಟು ಕಾಲಿಗೆ ಬಿದ್ದನಂತೆ! ಒಂದುಸಲ ಇವನನ್ನು ನಾಗರಹಾವು ಕಚ್ಚಲು ವಿಷವೇರಿ ಬಹುಕಾಲ ಮೂರ್ಛೆಬಿದ್ದಿದ್ದು ತಿಳಿದೆದ್ದನು. ಸ್ನೇಹಿತರು 'ಬಹಳ ವ್ಯಥೆಯಾಯಿತೇನು?' ಎಂದು ವಿಚಾರಿಸಿದ್ದಕ್ಕೆ 'ವ್ಯಥೆಯೇಕೆ? ಆ ಹಾವು ನನ್ನ ಪ್ರಿಯತಮನು ಕಳುಹಿಸಿಕೊಟ್ಟಿದ್ದ ದೂತನು' ಎಂದನಂತೆ! ತನ್ನನ್ನು ಗೋಳುಗುಟ್ಟಿಸುವ ರೋಗರುಜಿನಗಳನ್ನು ಕೂಡ ಈ ಮಹಾತ್ಮನು 'ಪ್ರಿಯನಕಡೆಯ ದೂತರು' ಎಂದೇ ಕರೆಯುತ್ತಿದ್ದನು.

ಕೊನೆಕೊನೆಗೆ ಜನರಿಗೆ ದರ್ಶನಕೊಡುವದು ನಿಂತುಹೋಯಿತು. ಜನರೊಡನೆ ಮಾತನಾಡಬೇಕಾಗಿಬಂದರೂ ಬಾಗಿಲನ್ನು ಮುಚ್ಚಿಕೊಂಡೇ ಇರುತ್ತಿದ್ದನು. ಬಹುಕಾಲ ಗುಹೆಯಲ್ಲಿಯೇ ಇರುತ್ತಿದ್ದನು. ಹೋಮಧೂಮವು ಮೇಲಕ್ಕೇಳುವದರಿಂದಲೋ ಪೂಜಾಪಾತ್ರೆಗಳ ಟಣಟಣಶಬ್ದದಿಂದಲೋ ಸಾಧುವು ಗವಿಯ ಮೇಲುಗಡೆ ಇದಾನೆಂದು ಜನರು ಅರಿತುಕೊಳ್ಳುತ್ತಿದ್ದರು. ಆದ್ದರಿಂದು ತಾವು ತಂದಿರುವ ಹಣ್ಣುಹಂಪಲುಗಳನ್ನು ಆತನು ಸಮಾಧಿಯಲ್ಲಿಲ್ಲದಾಗ ತೆಗೆದುಕೊಳ್ಳಲೆಂದು ಬಾಗಿಲಬಳಿಯಲ್ಲಿಯೇ ಸಮರ್ಪಿಸಿ ಹೋಗುತ್ತಿದ್ದರು.

ಪರಮೇಶ್ವರನ ಆರಾಧನೆಯೆಂದರೆ ಪವ್ಹಾರಿಬಾಬನಿಗೆ ಬಲು ಅಕ್ಕರೆ. ಪೂಜೆಯಲ್ಲಿ ಎಷ್ಟು ಶ್ರದ್ಧೆಯೊ ಪೂಜೆಗೆ ಬೇಕಾದ ತಂಬಿಗೆತಟ್ಟೆಗಳನ್ನು ತೊಳೆಯುವದರಲ್ಲಿಯೂ ಅಷ್ಟೇ ಶ್ರದ್ಧೆಯು, ಅಷ್ಟೇ ಭಕ್ತಿಯು ಆತನಿಗಿರುತ್ತಿತ್ತು. ಪರಿಶುದ್ಧಾತ್ಮತೆ, ಅಮಾನಿತ್ವ, ಭಗದ್ಭಕ್ತಿ, ಭೂತದಯೆ – ಇವುಗಳಿಗೆಲ್ಲ ಆತನು ಎಲ್ಲರಿಗೂ ಮೇಲುಪಙ್ಕ್ತಿಯಾಗಿರುತ್ತಿದ್ದನು.

ಒಂದುದಿನ ಗುಹೆಯ ಕಡೆಯಿಂದ ಹೊರಟ ಹೊಗೆಯಲ್ಲಿ ಮಾಂಸವನ್ನು ಸುಟ್ಟವಾಸನೆಯು ಬರುವದಕ್ಕೆ ಪ್ರಾರಂಭವಾಯಿತು. ಬರಬರುತ್ತಾ ವಾಸನೆಯು ಪ್ರಬಲವಾಗಿ ಹೊಗೆಯು ದಟ್ಟವಾಗಿ ಏಳುವದಕ್ಕೆ ಮೊದಲಾಯಿತು. ಇದೇನೆಂದು ಸಂಶಯದಿಂದ ಜನರು ಬಾಗಿಲನ್ನು ಒಡೆದು ನೋಡುತ್ತಾರೆ, ಪವ್ಹಾರಿಬಾಬನು ಆತ್ಮಹೋಮವನ್ನು ಮಾಡಿಕೊಂಡು ಅಗ್ನಿಕುಂಡದಲ್ಲಿ ಬಿದ್ದುಬಿಟ್ಟಿದ್ದಾನೆ! ಸ್ವಲ್ಪಹೊತ್ತಿನಲ್ಲಿಯೇ ಶರೀರವು ಬೂದಿಯಾಗಿಬಿಟ್ಟಿತು. ಮಹಾತ್ಮರಕೃತಿಗಳಿಗೆಲ್ಲ, ಕಾರಣವೇನೆಂಬುದನ್ನು ತಿಳಿಯುವದು ನಮ್ಮಂಥವರಿಗೆ ಅಸಾಧ್ಯ. ತನ್ನ

ಆಯುಃಪರಿಮಿತಿಯು ಮುಗಿಯಿತೆಂದು ತಿಳಿದುಕೊಂಡು ಈತನು ಮತ್ತೊಬ್ಬರಿಗೆ ತನಗೋಸ್ಕರ ತೊಂದರೆಯಾಗಬಾರದೆಂದೇ ಹೀಗೆ ತನ್ನ ಅಂತ್ಯೇಷ್ಟಿಯನ್ನು ತಾನೇ ಮಾಡಿಕೊಂಡಿರಬಹುದೇ?

★★★★★

# ತುಲಸೀದಾಸರು

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ಉತ್ತರದೇಶದಲ್ಲಿ ಹದಿನಾರು ಹದಿನೇಳನೆಯ ಶತಮಾನಗಳಲ್ಲಿ ಉಂಟಾದ ಧಾರ್ಮಿಕಪಂಥಗಳ ಚಟುವಟಿಕೆಗೆ ಮೂಲಕಾರಣರಾದವರು ನಿಂಬಾರ್ಕ, ರಾಮಾನಂದ - ಎಂಬ ಇಬ್ಬರು ವೈಷ್ಣವಾಚಾರ್ಯರೇ ಎನ್ನಬಹುದಾಗಿದೆ. ಈ ಪಂಥಗಳ ಉಪದೇಶವು ಎರಡು ಬಗೆ; ವೇದವೇ ಮುಂತಾದ ಯಾವ ಪ್ರಮಾಣ ವನ್ನೂ ಒಪ್ಪದೆ ಅನುಭವದ ಮೇಲೆಯೇ ಧರ್ಮೋಪದೇಶವನ್ನು ಮಾಡುತ್ತಿದ್ದವರ ಪಂಗಡವೊಂದು; ಪೂರ್ವದ ಆಚಾರವಿಚಾರಗಳನ್ನೂ ಪ್ರಮಾಣಗ್ರಂಥಗಳನ್ನೂ ಒಪ್ಪಿಕೊಂಡೇ ಜನರನ್ನು ಸನ್ಮಾರ್ಗಕ್ಕೆ ಒಲಿಸಿದವರ ಪಂಗಡವೊಂದು. ಆಗ್ಗೆ ಸ್ವತಂತ್ರಪ್ರವೃತ್ತಿಯವರು ವಿಶೇಷವಾಗಿ ದೇಶಭಾಷೆಯಲ್ಲಿಯೇ ತಮ್ಮ ಉಪದೇಶಗಳನ್ನು ಇಡುತ್ತಿದ್ದರು; ಸಂಪ್ರದಾಯಮಾರ್ಗದವರು ಮುಖ್ಯವಾಗಿ ಸಂಸ್ಕೃತಭಾಷೆಯಲ್ಲಿಯೇ ಗ್ರಂಥರಚನೆಯನ್ನು ಮಾಡುತ್ತಿದ್ದರು. ಈ ಲೇಖನದಲ್ಲಿ ನಾವು ಉಲ್ಲೇಖಿಸುವ ಗೋಸಾಇ ತುಳಸೀದಾಸಜಿಯವರು ಸಂಪ್ರದಾಯದ ಗುಂಪಿಗೆ ಸೇರಿದವರಾದರೂ ದೇಶಭಾಷೆಯಲ್ಲಿಯೇ ಗ್ರಂಥರಚನೆಯನ್ನು ಮಾಡಿದರೆಂಬುದೊಂದು ಅವರಲ್ಲಿ ವಿಶೇಷವು. ಅವರಿಂದ ಮುಂದೆ ಎಷ್ಟೋ ಜನ ಸಾಂಪ್ರದಾಯಿಕ ವೈಷ್ಣವರು ಇದೇ ಮಾರ್ಗವನ್ನು ಅನುಸರಿಸಿರುತ್ತಾರೆ.

ರಾಮಾನಂದನ ವಿಚಾರವಾಗಿ ಈ ಹಿಂದೆ ಒಂದು ಲೇಖನವನ್ನು ಬರೆದಿರುತ್ತದೆಯಲ್ಲವೆ? ಆತನಂತೆಯೇ ತುಳಸೀದಾಸರೂ ರಾಮಭಕ್ತಿಯನ್ನೇ ಮುಂದಕ್ಕೆ ತಂದಿರುತ್ತಾರೆ. ಆದ್ದರಿಂದಲೇ ಏನೋ ಇವರೂ ರಾಮಾನಂದನ ಪಂಥಕ್ಕೇ ಸೇರಿದವರೆಂದು ಪ್ರತೀತಿಯಿದೆ. ಆದರೆ ತುಳಸೀಕೃತ ಗ್ರಂಥಗಳಲ್ಲೆಲ್ಲ

ಮುಖ್ಯವಾದದ್ದೆಂದು ಲೋಕಪ್ರಸಿದ್ಧವಾಗಿರುವ 'ರಾಮಚರಿತಮಾನಸ'ದಲ್ಲಿ ನಿರ್ವಿಶೇಷಾದ್ವೈತದ ತತ್ತ್ವಗಳಿಗೇನೂ ಕಡಿಮೆಯಿರುವದಿಲ್ಲ; ಅಧ್ಯಾತ್ಮ ರಾಮಾಯಣಕ್ಕೂ ಅವರ ರಾಮಾಯಣಕ್ಕೂ ಎಷ್ಟೋ ಕಡೆಗಳಲ್ಲಿ ತತ್ತ್ವನಿರೂಪಣೆಯ ಕ್ರಮದಲ್ಲಿ ಪೂರ ಸಾಮ್ಯವು ಕಂಡುಬರುತ್ತದೆ. ಈ ಕಾರಣದಿಂದ ತುಳಸೀದಾಸರು ಸರ್ವಪ್ರಕಾರದಿಂದಲೂ ವಿಶಿಷ್ಟಾದ್ವೈತಿಯಾದ ರಾಮಾನಂದ ಪಂಥದವರೇ ಎಂದು ಹೇಳಲು ಅಡಚಣೆಗಳಿವೆ.

ತುಳಸೀದಾಸರ ಜನ್ಮಸ್ಥಳವು ಯಾವದೆಂಬುದು ನಿಶ್ಚಿತವಾಗಿ ತಿಳಿದಿಲ್ಲ. ಒಬ್ಬೊಬ್ಬರು ಒಂದೊಂದು ಸ್ಥಳವನ್ನು ಹೇಳುತ್ತಾರೆ. ಸುಮಾರು ಕ್ರಿ.ಶ. 1532ನೆಯ ವರ್ಷದಲ್ಲಿ ಇವರು ಹುಟ್ಟಿದರಂತೆ; ಅಭುಕ್ತಮೂಲಾನಕ್ಷತ್ರದಲ್ಲಿ ಹುಟ್ಟಿದ್ದರಿಂದ ತಂದೆತಾಯಿಗಳು ಮಗುವನ್ನು ಒಂದುಕಡೆ ಹಾಕಿಬಿಟ್ಟರೆಂದೂ ಯಾವನೋ ಒಬ್ಬ ಸಾಧುವು ಅದನ್ನು ಸಾಕಿ ತುಲಸೀದಾಸನೆಂಬ ಹೆಸರನ್ನಿಟ್ಟನೆಂದೂ ಹೇಳುತ್ತಾರೆ. ತಂದೆಯ ಹೆಸರು ಆತ್ಮಾರಾಮನು, ತಾಯಿಯ ಹೆಸರು ಹುಳಸಿ, ಇವನ ಮೊದಲಿನ ಹೆಸರು ರಾಮಬೋಲ-ಎಂದು ಒಂದು ಸಾಂಪ್ರದಾಯಿಕಪದ್ಯದಲ್ಲಿದೆ. ಈತನು ಕಾನ್ಯಕುಬ್ಜಬ್ರಾಹ್ಮಣನೆಂದು ಕೆಲವರೂ ಸರಯೂಪಾರೀಣಬ್ರಾಹ್ಮಣನೆಂದು ಮತ್ತೆ ಕೆಲವರೂ ಹೇಳುತ್ತಾರೆ. ತುಳಸೀದಾಸನು ರತ್ನಾವಳಿ ಎಂಬ ಪತ್ನಿಯನ್ನು ಮದುವೆಯಾಗಿ ಅವಳಲ್ಲಿ ತುಂಬ ಅನುರಕ್ತನಾಗಿದ್ದು ಒಮ್ಮೆ ಆಕೆಯು ತವರು ಮನೆಗೆ ಹೋಗಿರಲು ವಿರಹವನ್ನು ತಡೆಯಲಾರದೆ ಅಲ್ಲಿಗೆ ರಾತ್ರೆಯಲ್ಲಿಯೇ ಹೋಗಿತಲುಪಿದನೆಂದೂ "ನನ್ನ ಮೇಲೆ ಇಟ್ಟಿರುವ ಪ್ರೀತಿಯನ್ನು ರಾಮನ ಮೇಲೆ ಇಟ್ಟಿದ್ದರೆ ಭೂಮಿಯೇ ಚಿನ್ನವಾಗುತ್ತಿತ್ತಲ್ಲ!"- ಎಂದು ಆಕೆ ನುಡಿಯಲು ಅದನ್ನೇ ಉಪದೇಶವಾಗಿ ಭಾವಿಸಿ ಅಂದಿನಿಂದಲೇ ರಾಮಭಕ್ತನಾಗಿ ಬಿಟ್ಟನೆಂದೂ ಒಂದು ಕಥೆಯಿದೆ. ಈತನು ಮಾಡಿತೋರಿಸಿದ ಎಷ್ಟೋ ಲೀಲೆಗಳನ್ನು ಜನರು ಹೇಳಿಕೊಳ್ಳುತ್ತಾರೆ; ಎಷ್ಟೋ ಜನ ರಾಜವಂಶದವರು ಇವನ ಸ್ನೇಹಿತರಾಗಿ ದ್ದರೆಂದೂ ಹೇಳುವದು. ಇದೆಲ್ಲ ಎಷ್ಟರಮಟ್ಟಿಗಾದರೂ ನಿಜವಾಗಿರಲಿ. ಆತನು ಅಯೋಧ್ಯೇಯಲ್ಲಿ ಕೆಲವು ಕಾಲವಿದ್ದು ಕೊನೆಗೆ ಕಾಶಿಯನ್ನು ತನ್ನ ವಾಸಸ್ಥಳವಾಗಿ ಮಾಡಿಕೊಂಡನೆಂಬುದೂ ಮಥುರೆ, ಬೃಂದಾವನ, ಕುರುಕ್ಷೇತ್ರ, ಪ್ರಯಾಗ, ಪುರುಷೋತ್ತಮಪುರಿ - ಮುಂತಾದ ಕ್ಷೇತ್ರಗಳ ಸಂಚಾರವನ್ನು ಮಾಡಿದನೆಂಬುದೂ ನಿಶ್ಚಯವು. ಉತ್ತಮವಾದ ಗ್ರಂಥರತ್ನಗಳನ್ನು ನಿರ್ಮಿಸಿ ರಾಮಭಕ್ತನೆಂದು

ಲೋಕಪ್ರಸಿದ್ಧನಾಗಿ ತನ್ನ ತೊಂಬತ್ತನೆಯ ವಯಸ್ಸಿನಲ್ಲಿ ಕಾಶಿಯಲ್ಲಿ ಕ್ರಿ.ಶ. 1623 ರಲ್ಲಿ ದೇಹವನ್ನು ಬಿಟ್ಟನೆಂಬುದನ್ನು ಖಂಡಿತವಾಗಿ ಹೇಳಬಹುದಾಗಿದೆ.

ತುಳಸೀದಾಸರು ಅನೇಕ ಗ್ರಂಥಗಳನ್ನು ಬರೆದರೆಂದು ಪ್ರಸಿದ್ಧಿಯಿರುವದಾದರೂ **'ರಾಮಚರಿತಮಾನಸ'**, **'ಗೀತಾವಳಿ'**, **'ಕಬಿತ್ತಾವಳಿ'**, **'ವಿನಯಪತ್ರಿಕಾ'** – ಎಂಬ ನಾಲ್ಕು ಗ್ರಂಥಗಳು ಇವುಗಳಲ್ಲೆಲ್ಲ ಮುಖ್ಯವಾಗಿರುತ್ತವೆ. ಇವುಗಳಲ್ಲಿಯೂ ರಾಮಚರಿತಮಾನಸವೇ ಅತ್ಯಂತಮುಖ್ಯವಾದದ್ದು. ಉತ್ತಮವಾದ ವರ್ಣನೆಯಿಂದಲೂ ವಿಷಯಕ್ಕೆ ತಕ್ಕ ಭಾಷೆಯಿಂದಲೂ ಶೈಲಿಯಿಂದಲೂ ಕೂಡಿರುವದಲ್ಲದೆ ಭಕ್ತಿರಸಾಮೃತದಿಂದ ತುಂಬಿತುಳುಕುತ್ತಿರುವದರಿಂದ ಹಿಂದೀಭಾಷೆಯನ್ನಾಡುವ ಉತ್ತರದೇಶದ ಜನರಿಗೆಲ್ಲ ಈ ಗ್ರಂಥವು ವೇದತುಲ್ಯವಾಗಿರುವದು. ಈಗ ಇದನ್ನು ಇಂಗ್ಲಿಷುಭಾಷೆಯಲ್ಲಿಯೂ ಬೇರೆಯ ದೇಶ ಭಾಷೆಗಳಲ್ಲಿಯೂ ಓದಿ ಆನಂದಿಸುವವರು ಸಾವಿರಾರು ಜನರಿರುತ್ತಾರೆ.

ತುಳಸೀದಾಸರು ತಮ್ಮದೇ ಒಂದು ಪಂಥವನ್ನೇನೂ ಸ್ಥಾಪಿಸಲಿಲ್ಲ. ವೈಷ್ಣವಮತಕ್ಕೆ ಹೊಸ ವಿಚಾರಗಳನ್ನೇನೂ ಸೇರಿಸಲಿಲ್ಲ; ಆದರೂ ಉತ್ತರ ಹಿಂದೂಸ್ಥಾನದ ವೈಷ್ಣವರಿಗೆಲ್ಲ ಅವರು ಪರಮಾಚಾರ್ಯರ ಸ್ಥಾನದಲ್ಲಿರುವರೆಂದರೆ ಅತಿಶಯೋಕ್ತಿಯಾಗುವಂತಿಲ್ಲ .

ಅವರು ರಾಮನಾಮೋಚ್ಚಾರಣೆಯ ಫಲವನ್ನು ಹೀಗೆ ಹೇಳಿರುತ್ತಾರೆ –

**ರುಚಿರ ರಸನಾ ತೂ ರಾಮ ರಾಮ ಕ್ಯೋ ನ ರಟತ ।**
**ಸುಮಿರತ ಸುಖ ಸುಕೃತ ಬಢತ ಅಘ ಅಮಂಗಲ ಘಟತ ॥**
**ವಿನು ಶ್ರಮ ಕಲಿಕಲುಷಜಲ ಕಟು ಕರಾಲ ಕಟತ ।**
**ದಿನಕರಕೆ ಉದಯ ಜೈಸೇ ತಿಮಿರತೋಮ ಫಟತ ॥**
**ಜೋಗ ಜಾಗ ಜಪ ವಿರಾಗ ತಪ ಸುತೀರ್ಥ ಅಟತ ।**
**ಬಾಂಧಿ ಯೇಕೊ ಭಯಗಯನ್ದ ರೇನು ಕಿ ರಜು ವಟತ ॥**
**ಪರಿಹರಿ ಸುರಮುನಿ ಸುನಾಮ ಗುಂಜಾ ಲಖಿ ಲಟತ ।**
**ಲಾಲಚ ಲಘು ತೆರೋ ಲಖಿ ತುಲಸಿ ತೋಹಿ ದ್ದಟತ ॥**

ಎಲೈ ನಾಲಗೆಯೆ, ನೀನು 'ರಾಮ ರಾಮ' ಎಂದು ಕೂಗುವದಿಲ್ಲವೇಕೆ? ಸ್ಮರಣೆಮಾಡಿದ ಹಾಗೆಲ್ಲ ಸುಖವೂ ಪುಣ್ಯವೂ ಹೆಚ್ಚುವದು, ಪಾಪವೂ ಅಮಂಗಲವೂ ನಾಶವಾಗುವದು. ಯಾವ ಆಯಾಸವೂ ಇಲ್ಲದೆ ಅತಿಭಯಂಕರವಾದ ಕಲಿಕಲ್ಮಷವೆಲ್ಲವೂ ಸೂರ್ಯೋದಯವಾಗುತ್ತಲೂ ಕತ್ತಲೆಯ ರಾಶಿಯು ತೊಲಗುವಂತೆ ಹೋಗಿಬಿಡುವದು, ಯೋಗ, ಯಾಗ, ಜಪ, ವೈರಾಗ್ಯ, ತಪ, ತೀರ್ಥ – ಎಂದು ತೊಳಲುತ್ತಿರುವೆಯಲ್ಲ; ಸಂಸಾರ ಬಂಧದ ಹಗ್ಗವು ಒಂದಿಷ್ಟಾದರೂ ಬಿಚ್ಚಿಕೊಂಡೀತೇನು? ಎಲ್ಲವನ್ನೂ ಬಿಟ್ಟು ನಾರದಮುನಿಯು ಈ ಮಂಗಲನಾಮದ ಕೀರ್ತನೆಯನ್ನೊಂದನ್ನೇ ಲಕ್ಷ್ಯದಲ್ಲಿಟ್ಟಿರುತ್ತಾನೆ. ಎಲೈ ತುಲಸಿಯೆ, ಇದು ನಿನ್ನ ಲಕ್ಷ್ಯಕ್ಕೆ ಬಂದರೆ ಆಗಲೆ ದುರಾಶೆಯು ಹಿಮ್ಮೆಟ್ಟುವದು.

– ಗೋಸ್ವಾಮಿ ತುಲಸೀದಾಸಜೀ

★★★★★

# ಕಬೀರವೃತ್ತಾಂತ

– ಶ್ರೀ ರಾಮದಾಸಮಹನ್ತ, ಕಬೀರಪಂಥ

ಕಬೀರರು ಪ್ರಕಟನೆಯಾದ ಬಗೆ –

ಸಾಖೀ । ಗರೀಬ – ಗಗನಮಣ್ಡಲಸೆ ಉತರೆ, ಸತಗುರೂ ಪುರುಷ ಕಬೀರ ।
ಜಲ ಮಾಂಹೀ ಪೌಢನ ಕಿಯಾ, ಸಬ ಪೀರನಕೆ ಪೀರ ॥ 1 ॥

ಸಾಖೀ । ಗರೀಬ – ಕಾಶೀ ಪುರೀ ಕಸ್ತ ಕಿಯಾ, ಉತರೆ ಅಧರ ಅಧಾರ ।
ಮೊನನ ಕೊ ಮುಜರಾ ಹುಆ, ಜಂಗಲ ಮೆ ದೀದಾರ ॥ 2 ॥

ಸಾಖೀ । ಗರೀಬ – ಕಾಶೀ ಮೆ ಪ್ರಗಟ ಭಯೆ ಲಹರ ತಾಲಾಬ ಮೆ ಆನ ।
ನೀರೂ ಜುಲ್ಹಾ ಉಠಾ ಕರ ಲಾಯೆ, ಚಿನ್ಹೈ ನ ಪುರುಷ ಪುರಾನ ॥ 3 ॥

ಸಾಖೀ । ಗರೀಬ – ನಾ ಸತ ಗುರೂ ಜನನೀ ಜನ್ಯಾ, ಉನಕೆ ಮಾಯ ನಾ ಬಾಪ ।
ಪಿಣ್ಡ ಬ್ರಹ್ಮಾಣ್ಡ ಸೆ ರಹಿತ ಹೈ, ನಾ ವಹಾಂ ತೀನೊತಾಪ ॥ 4 ॥

**ಸಾಖೀ । ಗರೀಬ – ಪಾನೀಸೆ ಪೌದಾ ನಹೀ, ಶ್ವಾಸಾ ನಹೀ ಶರೀರ ।**
**ಪಾಂಚ ತತ್ತ್ವ ಜಾಕೆ ನಹೀ, ಉನಕಾ ನಾಮ ಕಬೀರ ॥ 5 ॥**

**– ಗ್ರಂಥಕಬೀರ್ ಆದ್ಯಜ್ಞಾನಪ್ರಕಾಶದಿಂದ**

ಗಗನಮಂಡಲದಿಂದ ಒಂದು ಪ್ರಕಾಶದ ತೇಜವು, ಕಾಶಿಯಲ್ಲಿ ''ಲಹರ್ ತಾಲಾವ್'' ಎಂಬ ಸರೋವರದಲ್ಲಿ ಇಳಿದು, ಒಂದು ಬಾಲಕರೂಪವನ್ನು ತಾಳಿ ಆ ಸರೋವರದ ಒಂದು ಕಮಲದ ಎಲೆಯ ಮೇಲೆ ಎಳೆಯ ಕೂಸಿನಂತೆ ಆಡುತ್ತಿತ್ತು. ಆ ಕಾಲಕ್ಕೆ ಮಹಮ್ಮದೀಯ ಮತದವರಾದ ನೀರೂ ಮತ್ತು ನೀಮಾ ಎಂಬ ದಂಪತಿಗಳು ಆ ಮಾರ್ಗವಾಗಿ ಹೋಗುತ್ತಿದ್ದರು. ಪತ್ನಿಯಾದ ನೀರೂ ಎಂಬಾಕೆಯು ನೀರು ಕುಡಿಯುವದಕ್ಕೆಂದು ಸರೋವರದ ಸಮೀಪಕ್ಕೆ ಹೋಗಿ ನೋಡುವಲ್ಲಿ, ಕಮಲದ ಎಲೆಯ ಮೇಲೆ ಸುಂದರವಾದ ಶಿಶುವು ಆಡುತ್ತಿತ್ತು. ಆ ಮಗುವಿನ ಸೌಂದರ್ಯವನ್ನೂ ತೇಜಸ್ಸನ್ನೂ ನೋಡಿ ಕೂಡಲೆ ಅದನ್ನು ಎತ್ತಿಕೊಂಡು ಮನೆಗೆ ಬಂದಳು. ಮುಸಲ್ಮಾನರ ಕಟ್ಟಳೆಯಂತೆ ನಾಮಕರಣ ಮಾಡಲು ಅವರು ಖಾಜಿಗಳನ್ನು ಕರೆತಂದರು. ಆ ಖಾಜಿಗಳು ತಮ್ಮ ಶಾಸ್ತ್ರ ರೀತಿಯಿಂದ ಕಟ್ಟಳೆಯನ್ನು ಮಾಡಿ ಖುರಾನನ್ನು ತೆಗೆದುನೋಡುತ್ತಿರಲಾಗಿ, ಆ ಮಗುವು ''ಹೇ ಖಾಜಿಗಳೆ, ನನ್ನ ಹೆಸರು ಕಬೀರ್; ಬೇರೆ ಹೆಸರಿಡಬೇಕಾದ ಅವಶ್ಯಕವಿಲ್ಲ'' ಎಂದು ತಾನೇ ಹೇಳಿತು. ಪುನಃ ಖುರಾನನ್ನು ತೆಗೆದುನೋಡುವಲ್ಲಿ ಕಬೀರ್ ಎಂಬ ಶಬ್ದವೇ ಅಲ್ಲಿಯೂ ಸಿಕ್ಕಿತು. ಕೊನೆಗೆ ಕಬೀರ್ ಎಂಬುದೇ ಸಿದ್ಧವಾಯಿತು. ಕಬೀರರು ಮಾತಾಪಿತೃಗಳ ಶುಕ್ಲಶೋಣಿತದ ಸಮರಸದಿಂದ ಜನನಿಯ ಗರ್ಭದ್ವಾರದಿಂದ ಉತ್ಪನ್ನರಾದವರಲ್ಲ. ಅವರಿಗೆ ಮಾತಾಪಿತ್ರಾದಿಗಳು ಯಾರೂ ಇಲ್ಲ, ಎಲ್ಲಿ ತ್ರಿವಿಧತಾಪವಿಲ್ಲವೋ ಮತ್ತು ಪಿಂಡ, ಬ್ರಹ್ಮಾಂಡಗಳಿಗೆ ರಹಿತವಾಗಿರುವುದು ಯಾವುದೋ ಅದಕ್ಕೆ 'ಕಬೀರ್' ಎಂದು ಹೆಸರು. ಕಬೀರರಿಗೆ ಶ್ವಾಸೋಚ್ಛ್ವಾಸಗಳಿಲ್ಲ. ಅವರಿಗೆ ಶರೀರವೇ ಇಲ್ಲ ಯಾವ ವಸ್ತುವು ಪಂಚಭೂತಗಳ ಸೋಂಕಿಲ್ಲದೆ ಇರುವುದೋ ಇದೇ ಕಬೀರ್. ಹೀಗೆಂಬುದು ಮೇಲಿನ ಸಾಖಿಯ ಸಾಲಿನ ತಾತ್ಪರ್ಯವು.

ಹೀಗಿರುವಲ್ಲಿ ಕಬೀರರನ್ನು ಹಿಂದುಗಳೆಂದಾಗಲಿ ಮುಸಲ್ಮಾನರೆಂದಾಗಲಿ ಒಪ್ಪುವದು ನಿರರ್ಥಕ, ಮತ್ತು ಅಪ್ರಾಮಾಣಿಕವಾದದ್ದು. ಅವರು ಹಿಂದುಗಳನ್ನೂ ಮುಸಲ್ಮಾನರನ್ನೂ ಏಕದೃಷ್ಟಿಯಿಂದ ನೋಡುತ್ತಿದ್ದರು.

## ಕಬೀರ್ ಸಾಹೇಬರು ಮತ್ತು ಸ್ವಾಮಿ ರಾಮಾನಂದಜಿಯವರು

ಕಬೀರ್ ಸಾಹೇಬರು ಬಾಲ್ಯವಸ್ಥೆಯಲ್ಲಿ ಅದ್ವಿತೀಯವಿಚಾರವನ್ನು ಜನ ಸಮುದಾಯದಲ್ಲಿ ಪ್ರಕಾಶಪಡಿಸುತ್ತಿದ್ದರು. ಅನೇಕರು ನಿಮ್ಮಗುರು ಯಾರೆಂದು ಕೇಳುವಲ್ಲಿ ಆ ಪ್ರಶ್ನೆಗೆ ನಿರುತ್ತರವಾಗಿರುತ್ತಿದ್ದರು. ಕೊನೆಗೆ ಅದೇ ಕಾಶಿಯಲ್ಲಿದ್ದಂಥ ಸ್ವಾಮಿ ರಾಮಾನಂದಜಿಯವರಿಂದ ದೀಕ್ಷೆಯನ್ನು ಪಡೆಯಲು ಪ್ರಯತ್ನಿಸಿದರು. ಆದರೆ ರಾಮಾನಂದರು ಮಹಮ್ಮದೀಯರ ಮುಖದರ್ಶನವನ್ನೇ ಮಾಡುವದಿಲ್ಲವಾಗಿ ನಿಯಮಮಾಡಿಕೊಂಡಿದ್ದರು. ರಾಮಾನಂದರು ಪ್ರತಿನಿತ್ಯವೂ ಬೆಳಗಿನ ಜಾವದಲ್ಲಿ ಸ್ನಾನಕ್ಕಾಗಿ ಗಂಗಾನದಿಗೆ ಹೋಗುವ ಪದ್ಧತಿಯಿತ್ತು. ಕಬೀರ್ ಸಾಹೇಬರು ಇದನ್ನರಿತು ಒಂದಾನೊಂದು ದಿವಸ ರಾಮಾನಂದರು ಬರುವ ಮಾರ್ಗದಲ್ಲಿ ಗಂಗಾನದಿಗೆ ಇಳಿಯುವ ಮೆಟ್ಟಿಲ ಮೇಲೆ ಬಾಲಕರೂಪವನ್ನು ತಾಳಿ ಅಡ್ಡವಾಗಿ ಮಲಗಿರಲು ಎಂದಿನಂತೆ ರಾಮಾನಂದರು ಆ ಕಡೆಗೇ ಬಂದು ಮೆಟ್ಟಿಲುಗಳನ್ನಿಳಿಯುವಾಗ ಅವರ ಪಾದರಕ್ಷೆಯು ಆ ಬಾಲಕನ ತಲೆಗೆ ತಗಲಿತು. ಕೂಡಲೆ ಆ ಬಾಲಕನು ಅಳುವುದಕ್ಕೆ ಪ್ರಾರಂಭಿಸಿದನು. ರಾಮಾನಂದಜಿಯವರು ''ಹೇ ಬಾಲಕ, ಅಳಬೇಡಪ್ಪ; ರಾಮ ರಾಮ ಎನ್ನು!'' ಎಂದು ಮಸ್ತಕದ ಮೇಲೆ ಹಸ್ತವನ್ನಿಟ್ಟು ಆಶೀರ್ವದಿಸಿದರು. ಅಂದಿನಿಂದಲೂ ಕಬೀರರು ರಾಮಾನಂದಜೀಯವರ ಶಿಷ್ಯರೆಂದು ಪ್ರಸಿದ್ಧಿಯಾಗಿದೆ. ಆದರೆ ಅವರೆಂಥ ಶಿಷ್ಯರಾಗಿದ್ದರು? ಏತಕ್ಕಾಗಿ ಗುರುಗಳನ್ನು ಸ್ವೀಕಾರಮಾಡಿದರು?- ಎಂಬುದು ವಿಚಾರಾಧೀನವಿಷಯವಾಗಿದೆ.

## ಕಮಾಲ್, ಕಮಾಲಿ ಮತ್ತು ಲೋಯಿ:

ಕಮಾಲ್, ಕಮಾಲಿ ಮತ್ತು ಲೋಯಿ- ಇವರುಗಳು ಕಬೀರರ ಸಂತಾನ ರೆಂದು ಲೋಕಪ್ರಸಿದ್ಧಿ. ಆದರೆ ಇಲ್ಲಿ ಸಂತಾನವೆಂದರೆ ಹೇಗೆ? ಸಂಸಾರದಲ್ಲಿ ಅನೇಕ ಪ್ರಕಾರವಾದ ಸಂತಾನವುಂಟು. ವಂಶಾವಳಿಯ ಸಂತಾನ, ಮಾನಸಿಕ ಸಂತಾನ, ದತ್ತಪುತ್ರ ಮತ್ತು ಗುರುಶಿಷ್ಯ- ಇವೆಲ್ಲ ಸಂತಾನವೇ, ಕಮಾಲ್, ಕಮಾಲಿ ಮತ್ತು ಲೋಯಿ-ಎಂಬುವದು ಕಬೀರ್ ಸಾಹೇಬರ ಧಾರ್ಮಿಕ ಸಂತಾನರಾಗಿದ್ದರು.

## ಕಬೀರ್ ಸಾಹೇಬ ಮತ್ತು ಮಹಾನ್ ಪಂಡಿತ ಸರ್ವಜಿತ:

ಸರ್ವಜಿತನು ಒಬ್ಬ ಅದ್ವಿತೀಯ ಪಂಡಿತನಾಗಿದ್ದನು; ಇವನು ಸರ್ವರನ್ನೂ ಜಯಿಸಿದ್ದನಾದ್ದರಿಂದ ಈತನನ್ನು ಸರ್ವಜಿತ್ ಎಂಬುದಾಗಿ ಹೊಗಳುತ್ತಿದ್ದರು, ಆತನು ಕಬೀರರ ವಿಷಯವನ್ನು ತಿಳಿದು ಅವರನ್ನು ಜಯಿಸುವ ಉದ್ದೇಶದಿಂದ ಸಪರಿವಾರನಾಗಿ ಹೊರಟು ಕಾಶಿಯಲ್ಲಿ ಸ್ವಾಮಿ ರಾಮಾನಂದರ ಆಶ್ರಮವನ್ನು ಸೇರಿದನು. ಅಲ್ಲಿ ಕಬೀರ್‌ಸಾಹೇಬರು ಕುಳಿತಿದ್ದರು. ಇನ್ನು ಹೇಳುವುದೇನಿದೆ? ಈ ಕಡೆ ಅಸಾಧಾರಣಪುರುಷರೆಂಬ ಕಬೀರರು, ಆ ಕಡೆ ಅದ್ವಿತೀಯ ಪಂಡಿತನೆಂಬ ಸರ್ವಜಿತ! ಈ ವಿಷಯವು ಎಲ್ಲೆಲ್ಲಿಯೂ ಹರಡಿಹೋಯಿತು. ಕಾಶಿಯಲ್ಲಿದ್ದಂಥ ತೀರ್ಥವಾಸಿಗಳು, ಪಂಡಿತರು, ವಿದ್ವಾಂಸರು, ಮಠಾಧಿಕಾರಿಗಳು; ಮುಸಲ್ಮಾನರಲ್ಲಿ ಖಾಜಿ, ಮುಲ್ಲಾ, ಷೀರ್- ಮೊದಲಾದವರೆಲ್ಲರೂ ಸೇರಿ ಒಂದು ದೊಡ್ಡ, ಸಭೆಯೇ ನೆರೆದು ಹೋಯಿತು.

★★★★★

# ಕಬೀರದಾಸರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಉತ್ತರಪ್ರದೇಶದಲ್ಲಿ ಮಧ್ಯಯುಗದಲ್ಲಿ ಮುಖ್ಯವಾಗಿ ನಾಲ್ಕುಜನ ಮಹಾತ್ಮರು ಜನರ ಚಿತ್ತವನ್ನು ವಶಮಾಡಿಕೊಂಡಿದ್ದರು. ಚೈತನ್ಯ, ಜ್ಞಾನದೇವ, ಕಬೀರ, ನಾನಕ - ಇವರೇ ಆ ಮಹಾಪುರುಷರು. ಇವರಲ್ಲಿ ಅದೇಕೊ, ಕಬೀರನೊಬ್ಬನೇ ದಕ್ಷಿಣದೇಶಕ್ಕೂ ತನ್ನ ಕೀರ್ತಿಯನ್ನು ಹರಡಿರುತ್ತಾನೆ. ಆತನು ಮಾಡಿರುವ ಪದಗಳನ್ನು ಪುರಂದರದಾಸರ ಪದಗಳು, ಕನಕದಾಸರ ಪದಗಳು- ಇವುಗಳ ಜೊತೆಯಲ್ಲಿ 'ಕಬೀರದಾಸರ ಪದಗಳು' ಎಂಬ ಹೆಸರಿನಿಂದ ನಮ್ಮ ದೇಶದವರು ಅನುರಾಗದಿಂದ ಹಾಡಿಕೊಳ್ಳುತ್ತಾರೆ.

ಕಬೀರನು ರಾಮಾನಂದನ ಶಿಷ್ಯರಲ್ಲೆಲ್ಲ ಮುಖ್ಯನಾದವನು, ಅವನು ಜನ್ಮದಿಂದ ಹಿಂದುವಾದರೂ ಮುಸಲ್ಮಾನ ತಂದೆತಾಯಿಗಳ ಪೋಷಣೆಯಲ್ಲಿ

ಬೆಳೆದವನು. ಆದ್ದರಿಂದ ತನ್ನನ್ನು ರಾಮಾನಂದನು ಶಿಷ್ಯನನ್ನಾಗಿ ಸ್ವೀಕರಿಸುವನೋ ಇಲ್ಲವೋ ಎಂಬ ಸಂಶಯದಿಂದ ಅವನು ಒಂದು ಉಪಾಯವನ್ನು ಮಾಡಿದನು. ಒಂದು ದಿನ ಅವನು ರಾಮಾನಂದನು ಸ್ನಾನಕ್ಕೆ ಬರುತ್ತಿದ್ದ ಪಂಚಗಂಗಾಘಾಟಿನ ಮೆಟ್ಟಿಲುಗಳಮೇಲೆ ರಾತ್ರಿಯೇ ಬಂದು ಮಲಗಿಕೊಂಡನು. ರಾಮಾನಂದನು ಇನ್ನೂ ನಡುಗತ್ತಲೆಯಾಗಿರುವಾಗಲೇ ಸ್ನಾನಕ್ಕೆಂದು ಬರುತ್ತಾ ದಾರಿಯಲ್ಲಿ ಕಬೀರನು ಮಲಗಿರುವದನ್ನು ಕಾಣದೆ ಅವನನ್ನು ಎಡವಿದನು; ಕೂಡಲೆ ಅವನ ಬಾಯಿಂದ 'ರಾಮ, ರಾಮ!' ಎಂಬ ಶಬ್ದಗಳು ಬಂದವು ಕಬೀರನು ಇದೇ ಶ್ರೀಗುರುವಿನ ಮುಖದಿಂದ ಬಂದ ದೀಕ್ಷಾಮಂತ್ರವೆಂದು ಭಾವಿಸಿದನು. ಅಂದಿನಿಂದ ರಾಮಾನಂದರೇ ತನ್ನ ಗುರುಗಳೆಂದು ಹೇಳಿಕೊಳ್ಳುವದಕ್ಕೆ ಪ್ರಾರಂಭಿಸಿದನು.

ಕಬೀರನು ಹಿಂದುವಾಗಿ ಹುಟ್ಟಿದನೆಂಬುದೂ ರಾಮಾನಂದರ ಶಿಷ್ಯನೆಂಬುದೂ ಬಹುಜನಸಮ್ಮತವಾಗಿರುತ್ತದೆಯಾದರೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯಗಳು ಉಂಟು. ಕಾಶಿಯ ಒಬ್ಬ ಬ್ರಾಹ್ಮಣವಿಧವೆಯ ಗರ್ಭದಲ್ಲಿ ಅವನು ಹುಟ್ಟಿದನೆಂದೂ ಆಕೆಯು ಲಜ್ಜೆಯಿಂದ ಮಗುವನ್ನು ಲಹರತಲಾವೆಂಬ ಸರೋವರದ ಬದಿಯಲ್ಲಿಟ್ಟುಬಿಟ್ಟಳೆಂದೂ ಆಮೇಲೆ ನೀರು ಎಂಬ ಮುಸಲ್ಮಾನನು ಆ ಮಗುವನ್ನೊಯ್ದು ಸಾಕಿದನೆಂದೂ ಒಂದು ಕಥೆ. ಆ ಸರೋವರದಲ್ಲಿ ಒಂದು ಕಮಲದಲ್ಲಿ ಕಬೀರನು ಶಿಶುವಾಗಿ ಪ್ರಕಟವಾದನೆಂದು ಕಬೀರಪಂಥಿಗಳು, ಅಭಿಪ್ರಾಯಪಡುತ್ತಾರೆ. ಒಬ್ಬ ಯೋಗಿಯ ದೆಸೆಯಿಂದ ಪ್ರತೀಚಿ ಎಂಬ ದೇವಾಂಗನೆಯ ಗರ್ಭದಲ್ಲಿ ಪ್ರಹ್ಲಾದನೇ ಕಬೀರನಾಗಿ ಜನಿಸಿ ಆ ರೀತಿ ಕಮಲದಲ್ಲಿ ಪ್ರಕಟವಾದನೆಂದು ಮತ್ತೊಂದು ಕಥೆ, ಕಬೀರನು ಮುಸಲ್ಮಾನನಾಗಿ ಯೇ ಹುಟ್ಟಿದನೆಂದೂ ರಾಮಾನಂದರ ಉಪದೇಶದಿಂದ ಹಿಂದೂಧರ್ಮದ ತತ್ತ್ವಗಳನ್ನು ತಿಳಿದುಕೊಂಡನೆಂದೂ ಕೆಲವರು ಹೇಳುವರು. ಇದರಂತೆ ಕಬೀರನು ಪ್ರಸಿದ್ಧ ಸೂಫಿ ಫಕೀರ ಶೇಕ್ ತಕ್ರಿಯಿಂದ ದೀಕ್ಷೆಯನ್ನು ಹೊಂದಿದನೆಂದೂ ಕೆಲವರು ಕಬೀರಪಂಥಿಗಳು ಅಭಿಪ್ರಾಯಪಡುವದುಂಟು. ಆದರೆ ಕಬೀರನು ರಾಮಾನಂದನ ಹೆಸರನ್ನು ಆದರದಿಂದ ಅಡಿಗಡಿಗೆ ಉಲ್ಲೇಖಿಸಿರುವಂತೆ ಶೇಕ್ ತಕ್ರಿಯ ಹೆಸರನ್ನು ಉಲ್ಲೇಖಿಸಿಲ್ಲ, ಇದರ ಜೊತೆಗೆ ಪೀರ ಪೀತಾಂಬರನ ಹೆಸರನ್ನೂ ಆಗಾಗ್ಯೆ ಆದರದಿಂದ ಉದಾಹರಿಸಿರುತ್ತಾನೆ. ಅಂತೂ ಒಟ್ಟಿನಲ್ಲಿ ಕಬ್ಬೀರನು

ಹಿಂದೂಮುಸಲ್ಮಾನಭೇದವನ್ನು ಬಿಟ್ಟು ಸತ್ಸಂಗವು ಸಿಕ್ಕಿದ ಕಡೆಯಲ್ಲೆಲ್ಲ ತತ್ತ್ವವನ್ನು ಸ್ವೀಕರಿಸುತ್ತಿದ್ದನೆಂದು ಸ್ಪಷ್ಟವಾಗುತ್ತದೆ.

ಕಬೀರನಿಗೆ ಕಮಾಲನೆಂಬ ಒಬ್ಬ ಮಗನೂ ಕಮಾಲಿ ಎಂಬ ಒಬ್ಬ ಮಗಳೂ ಇದ್ದರೆಂದು ಹೇಳುತ್ತಾರೆ. ಇವನು ತಂದೆಯ ಉದ್ಯೋಗವಾದ ನೇಯ್ಗೆಯನ್ನೇ ತಾನೂ ಇಟ್ಟುಕೊಂಡಿದ್ದನೆಂದೂ ಪ್ರಸಿದ್ಧವಾಗಿದೆ. ಇವನ ಗ್ರಂಥಗಳಲ್ಲಿ ಕುಟುಂಬಿಯ ಜೀವನವನ್ನು ಹೊಗಳಿರುವದರಿಂದಲೂ ಯೋಗಸಂನ್ಯಾಸಾದಿಗಳ ಹೊರಗಿನ ವೇಷವನ್ನು ತಿರಸ್ಕಾರದಿಂದ ಕಂಡಿರುವದರಿಂದಲೂ ಇದೇ ನಿಜವಿರಬೇಕೆಂದು ತೋರುತ್ತದೆ. ಇದರ ನಿಜವು ಹೇಗೇ ಇರಲಿ, ಇವನು ಮುಖ್ಯವಾಗಿ ಪರಮಾರ್ಥಚಿಂತನೆಯಲ್ಲಿಯೇ ಕಾಲಕ್ಷೇಪವನ್ನು ಮಾಡುತ್ತಿದ್ದನೇ ಹೊರತು ಸಂಸಾರದಲ್ಲಿ ಮುಳುಗಿದ್ದವನಲ್ಲವೆಂಬುದು ಖಂಡಿತ. ರಾಮಾನಂದರ ಅಪ್ಪಣೆಯಂತೆ ಸರ್ವಜಿತ್ತೆಂಬ ಪಂಡಿತನೊಡನೆ ಕಬೀರನು ವಾದಮಾಡುವದಕ್ಕೆ ತೊಡಗಿದಾಗ ಪಂಡಿತನು ''ನೀನು ನೇಯ್ಗೆಯವನೆ? ನೇಯ್ಗೆಯವನೆಂದರೆ ಯಾರು?'' ಎಂದು ಹಾಸ್ಯಮಾಡಲು ಕೂಡಲೆ ಕಬೀರನು ಹೇಳಿದ ಪದರೂಪದ ಉತ್ತರವು ಅವನ ದೃಷ್ಟಿಯಿನ್ನು ವ್ಯಕ್ತಗೊಳಿಸುವಂತಿದೆ. ಅದೇ ಅಭಿಪ್ರಾಯ ಮತ್ತೊಂದು ಪದ್ಯದ ಅನುವಾದವಿದು:

''ನೇಯ್ಗೆಯವನ ಗುಟ್ಟು ಯಾರಿಗೂ ತಿಳಿಯದು; ಅವನು ಈ ಲೋಕಕ್ಕೆ ಬಂದು ತನ್ನ ಮಗ್ಗವನ್ನು ಹಾಕಿರುತ್ತಾನೆ. ಭೂಮಿ, ಅಂತರಿಕ್ಷ- ಇವೆರಡೂ ಎರಡು ದಂಡಿಗಳು; ಸೂರ್ಯ, ಚಂದ್ರ- ಇವೆರಡೂ ಲಾಳಿಗಳು. ಒಂದು ಸಾವಿರ ನೂಲುಗಳನ್ನು ಅವನು ಹಾಸಾಗಿಡುತ್ತಾನೆ. ಆತನು ಇನ್ನೂ ನೇಯುತ್ತಲೆ ಇರುವದು, ಎಂದಿಗೆ ಕೊನೆಯಾಗುವದೋ ತಿಳಿಯುವದು ಕಷ್ಟ. ಕಬೀರನು ಹೇಳುವದೇನೆಂದರೆ ಕರ್ಮಕ್ಕೆ ಕರ್ಮವನ್ನು ಸೇರಿಸಿ ನೇಯ್ದನೂಲಿಗೆ ನೇಯದ ನೂಲುಗಳನ್ನು ಸೇರಿಸಿ ಆ ನೇಯ್ಗೆಯನು ಉತ್ತಮರೀತಿಯಲ್ಲಿ ನೇಯುತ್ತಿರುವನು.''

ತಾನು ಮನಗಂಡಿರತಕ್ಕ ತತ್ತ್ವಗಳನ್ನು ಎಲ್ಲರಿಗೂ ಬಹಿರಂಗವಾಗಿ ಬೋಧಿಸುವದೆ ಕಬೀರನ ಜೀವನವಾಗಿತ್ತೆಂದು ಹೇಳಬಹುದು. ಅವನು ಬೋಧಿಸುತ್ತಿದ್ದ ಪರಮಾರ್ಥತತ್ತ್ವವು ತನ್ನ ಅನುಭವಾನುಸಾರವಾಗಿತ್ತೇ ಹೊರತು ಮುಸಲ್ಮಾನರ ಅಥವಾ ಹಿಂದುಗಳ ಏಕಪಕ್ಷದ ದೃಷ್ಟಿಯನ್ನವಲಂಬಿಸಿ ಬಹಿರಾಚಾರಪ್ರಧಾನವಾದದ್ದಾಗಿರಲಿಲ್ಲ.

ಅವನ ತತ್ತ್ವೋಪದೇಶದ ರೀತಿಯನ್ನು ತಿಳಿಸುವದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು:-

‘‘ಅಯ್ಯಾ ಭಕ್ತನೆ, ನನ್ನನ್ನು ಎಲ್ಲಿ ಹುಡುಕುತ್ತಿದ್ದೀಯೆ? ಇಗೋ ನೋಡು, ನಿನ್ನ ಬಳಿಯಲ್ಲಿಯೇ ಇದ್ದೇನೆ. ನಾನು ದೇವಾಲಯದಲ್ಲಿಲ್ಲ, ಮಸೀದಿಯಲ್ಲಿಯೂ ಇಲ್ಲ, ಕಾಲದಲ್ಲಿಯೂ ಇಲ್ಲ, ಕೈಲಾಸದಲ್ಲಿಯೂ ಇಲ್ಲ; ನಾನು ಕರ್ಮಗಳಲ್ಲಿಯಾಗಲಿ, ಬಾಹ್ಯಾಚಾರಗಳಲ್ಲಿಯಾಗಲಿ ಇರುವದಿಲ್ಲ; ಯಾಗದಲ್ಲಿಲ್ಲ, ತ್ಯಾಗದಲ್ಲಿಯೂ ಇಲ್ಲ. ನೀನು ನಿಜವಾಗಿ ಹುಡುಕಿದರೆ ಕೂಡಲೆ ನನ್ನನ್ನು ಕಾಣುವೆ; ಒಂದು ಕ್ಷಣದಲ್ಲಿ ಕಾಣುವೆ ಕಬೀರನು ಹೇಳುವದೇನೆಂದರೆ ಸಾಧುವೆ, ಈಶ್ವರನು ಪ್ರಾಣಗಳಿಗೆಲ್ಲ ಪ್ರಾಣನು.’’

‘‘ತೀರ್ಥಗಳಲ್ಲಿ ಬರಿಯ ನೀರಲ್ಲದೆ ಮತ್ತೇನಿಲ್ಲ; ಅವುಗಳಲ್ಲಿ ಮುಳುಗಿ ಅವು ಏತಕ್ಕೂ ಬಾರವೆಂಬುದನ್ನು ನಾನು ಮನಗೊಂಡಿರುತ್ತೇನೆ. ವಿಗ್ರಹಗಳಲ್ಲಿ ಜೀವವಿಲ್ಲ, ಅವು ಮಾತನಾಡಲಾರವು; ನನಗೆ ಇದು ಚೆನ್ನಾಗಿ ಗೊತ್ತು. ಏಕೆಂದರೆ ಅವುಗಳನ್ನು ಗಟ್ಟಿಯಾಗಿ ಕೂಗಿ ಕರೆದಿದ್ದೇನೆ. ಪುರಾಣಗಳೂ ಖುರಾನೂ ಬರಿಯ ಶಬ್ದಗಳು, ತೆರೆಯನ್ನು ಎತ್ತಿ ನಾನು ನೋಡಿ ಬಿಟ್ಟಿದೇನೆ. ಕಬೀರನು ಅನುಭವದ ಮಾತುಗಳನ್ನಾಡಿರುತ್ತಾನೆ, ಮಿಕ್ಕವುಗಳೆಲ್ಲ ಅಸತ್ಯವೆಂಬುದನ್ನು ಅವನು ಬಲ್ಲನು.’’

ಇಂಥ ಉಪದೇಶವು ಧರ್ಮಾಂಧರಾದ ಹಿಂದುಗಳಿಗಾಗಲಿ ಮುಸಲ್ಮಾನರಿಗಾಗಲಿ ಸರಿಬೀಳಲಿಲ್ಲವೆಂದು ಹೇಳಬೇಕಾದದ್ದೇ ಇಲ್ಲ. ಕೆಲವರು ಧೂರ್ತರು ಒಬ್ಬ ವೇಶ್ಯೆಯಿಂದ ಅವನ ಪಾವಿತ್ರ್ಯವನ್ನು ಕೆಡಿಸುವದಕ್ಕೆ ಯತ್ನಿಸಿದರು. ಆದರೆ ಆಕೆಯೇ ಕಬೀರನ ಉಪದೇಶದಿಂದ ಪವಿತ್ರಜೀವನವನ್ನು ಸ್ವೀಕರಿಸಿಬಿಟ್ಟಳು. ಸಿಕಂದರಲೂದಿ ಎಂಬ ಚಕ್ರವರ್ತಿಯಲ್ಲಿ ಕೆಲವರು ಮಹಮ್ಮದೀಯರು ದೂರಿಟ್ಟರು ಚಕ್ರವರ್ತಿಯು ಇವನ ತೇಜಸ್ಸಿಗೆ ಬೆರಗಾಗಿ ಯಾವ ಶಿಕ್ಷೆಯನ್ನೂ ವಿಧಿಸುವದಕ್ಕೆ ಇಷ್ಟಪಡಲಿಲ್ಲವಾದರೂ ಜನರ ನೆಮ್ಮದಿಗೆ ಭಂಗವಾದೆ ಇರಲೆಂದು ಇವನು ಕಾಶಿಯಲ್ಲಿರಕೂಡದೆಂದು ಕಟ್ಟುಮಾಡಿದನು.

ಅಲ್ಲಿಂದ ಮುಂದಕ್ಕೆ ಕಬೀರನು ಸ್ಥಳದಿಂದ ಸ್ಥಳಕ್ಕೆ ಸಂಚರಿಸುತ್ತಾ ತನ್ನ ಸದುಪದೇಶದಿಂದ ಜನರ ಚಿತ್ತವನ್ನು ಸೆಳೆಯುತ್ತಿದ್ದನು. ಅನೇಕರು ಅವನ ಶಿಷ್ಯರಾದರು; ಕೊನೆಗೆ ಕ್ರಿ.ಶ.1518ರಲ್ಲಿ ಅವನು ಗೋರಖಪುರದ ಬಳಿಯಲ್ಲಿರುವ ಮಾಘರವೆಂಬ ಸ್ಥಳದಲ್ಲಿ ಪರಲೋಕಕ್ಕೆ ತೆರಳಿದನು.

ಕಬೀರನ ಕೃತಿಗಳು ಹೇರಳವಾಗಿರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳು ಯಾವದೆಂದರೆ ಬೀಜಕಸುಖನಿದಾನ; ರಮೈನಿ ಶಬ್ದಗಳು, ಸಾಖಿ ಮುಂತಾದ ಹೆಸರಿನ ಕೆಲವು ಸಂಗ್ರಹಗಳು ಇವುಗಳಲ್ಲಿರುತ್ತವೆ. ಈ ಗ್ರಂಥಗಳ ಭಾಷೆಯು ಪಂಜಾಬಿ, ರಾಜಸ್ಥಾನಿ, ಖಡಿಬೋಲಿ. ಅವಧಿ, ವಜ್ರಭಾಷಾ-ಮುಂತಾದವುಗಳ ಮಿಶ್ರವಾಗಿ ರುತ್ತದೆ. ಆದರೆ ಅವುಗಳಲ್ಲಿರುವ ವಿಷಯವು ಎಲ್ಲರನ್ನೂ ಮುಗ್ಧಗೊಳಿಸಿರುತ್ತದೆ. ದೇವರ ವಿಷಯದಲ್ಲಿ ಹಿಂದೂಮುಸಲ್ಮಾನರ ಸ್ಥೂಲದೃಷ್ಟಿಯ ಅಭಿಮಾನವನ್ನು ಬಿಟ್ಟು ಸರ್ವಸಮತಾಭಾವವನ್ನು ಇಟ್ಟುಕೊಂಡಿದ್ದದ್ದೇ ಅವನ ಕೀರ್ತಿಯು ಇಲ್ಲಿಯವರೆಗೂ ನಿಂತಿರುವದಕ್ಕೆ ಕಾರಣವಾಗಿದೆಯೆನ್ನಬಹುದು:

1. ''ದೇವರು ಮಸೀದಿಯೊಳಗೆ ಇದ್ದರೆ ಈ ಲೋಕವು ಯಾರದು? ರಾಮನು ಯಾತ್ರೆಯಲ್ಲಿ ಕಾಣುವ ವಿಗ್ರಹದಲ್ಲಿರುವದಾದರೆ ಅದರ ಹೊರಗೆ ನಡೆಯುವದನ್ನು ಅರಿಯುವಾತನು ಯಾರು? ಹರಿಯು ಪೂರ್ವದಲ್ಲಿರುವನು, ಅಲ್ಲಾಹನು ಪಶ್ಚಿಮದಲ್ಲಿರುವನು. ಆದರೆ ನಿಮ್ಮ ಹೃದಯದಲ್ಲಿ ನೋಡಿಕೊಳ್ಳಿರಿ, ಅಲ್ಲಿ ಕರೀಮನೂ ರಾಮನೂ ಇಬ್ಬರೂ ಇರುವದು. ಈ ಲೋಕದಲ್ಲಿರುವ ಪುರುಷರು ಸ್ತ್ರೀಯರು- ಎಲ್ಲರೂ ಆತನ ಜೀವಂತ ಆಕಾರಾಗಳೇ ಕಬೀರನು ಅಲ್ಲಾಹನ ಮತ್ತು ರಾಮನ ಮಗು; ಆತನೇ ನನ್ನ ಗುರು ಆತನೇ ನನ್ನ ಪೀರನು.''

2. ''ಅರಿಯದವರಿಗೆ ಸ್ವರ್ಗನರಕಗಳುಂಟು ಹರಿಯನ್ನರಿತವರಿಗೆ ಅವು ಇರುವದಿಲ್ಲ, ಸಾಮಾನ್ಯರು ಏತಕ್ಕೆ ಹೆದರುವರೋ ಆ ಅಂಜಿಕೆಯು ನಮಗಿಲ್ಲ; ಪಾಪಪುಣ್ಯಗಳ ಶಂಕೆಯಿಲ್ಲ. ಸ್ವರ್ಗನರಕಗಳಿಗೆ ಹೋಗಬೇಕಾದದ್ದೇ ಇಲ್ಲ ಕಬೀರನು ಹೇಳುತ್ತಾನೆ. ಸಂತರೆ ಕೇಳಿ: ಎಲ್ಲಿ ಅಂದರೆ ಅಲ್ಲಿ ಸಮಾಧಿ ದೊರಕುವದು.''

3. ''ಭಗವಂತನೆ, ನೀನು ನನ್ನ ತಾಯಿಯು, ನಾನು ನಿನ್ನ ಬಾಲಕನು, ನನ್ನ ಅಪರಾಧವನ್ನು ನೀನು ಕ್ಷಮಿಸದಿರುವದು ಹೇಗೆ ಆದೀತು? ಮಗನು ದಿನದಿನವೂ ಅಗಣಿತ ಅಪರಾಧಗಳನ್ನು ಮಾಡುತ್ತಿದ್ದರೂ ತಾಯಿಯ ಚಿತ್ತವು ಅತ್ತಕಡೆ ಇರುವದಿಲ್ಲ ಮಗನು ಆಕೆಯ ಕೂದಲನ್ನು ಹಿಡಿದುಕೊಂಡು ಹೊಡೆದರೂ ಆಕೆಯು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳುವದಿಲ್ಲ. ಆಕೆಯು ಒಂದನ್ನೇ ಚಿಂತಿಸುತ್ತಿರುವಳು, ಅವನು ದುಃಖಿಯಾದರೆ ತಾನೂ ದುಃಖಿಯಾಗುವಳು.''

4. ''ಈಶ್ವರನ ಮಂದಿರವು ತೆಂಗಿನಮರದಂತೆ ಬಹು ದೂರದಲ್ಲಿ ಮೇಲುಗಡೆ ಇರುವದು; ಮೇಲಕ್ಕೆ ಹತ್ತಿದವನಿಗೆ ಅನಂತಸುಖದ ಸವಿಯು ತೋರುವದು, ಕೆಳಕ್ಕೆ ಬಿದ್ದವನು ಚೂರುಚೂರಾಗುವನು.''

5. ''ಮಗನೆ, ಅಭಿಮಾನವನ್ನು ಬಿಟ್ಟು ರಾಮನಾಮವನ್ನು ಕೊಂಡುಕೊ ಹೃದಯದಲ್ಲಿ ಅದನ್ನು ತೂಗಿ ಬೆಲೆಕಟ್ಟು ನಾಮವನ್ನು ಯಾರು ಹಾಡುವರೋ ಅದನ್ನು ಯಾರು ಕೇಳುವರೋ ಅವರಿಗೆ ಕೊನೆಗೆ ಪರಮಗತಿ ದೊರಕುವದು. ಸಂಶಯವಿಲ್ಲ ಇದು ಕಬೀರನ ಮತವು.''

★★★★★

# ಮೀರಾಬಾಯಿ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಭರತಖಂಡದಲ್ಲಿ ಬಾಳಿದ ಮಹಾತ್ಮರುಗಳ ಜೀವನಚರಿತ್ರೆಯು ಇತಿಹಾಸಕಾಲದಲ್ಲಿ ಕೂಡ ಬಹುಮಟ್ಟಿಗೆ ಅವರು ಪ್ರಸಾರಮಾಡಿದ ಅಧ್ಯಾತ್ಮತತ್ತ್ವಗಳ ಚರಿತ್ರೆಯೇ ಹೊರತು ಮತ್ತೇನೂ ಆಗಿರುವದಿಲ್ಲ. ರಾಜಪುಟಾನದ ಪ್ರಸಿದ್ಧ ಭಕ್ತಮಣಿಯಾದ ಮೀರಾಬಾಯಿಯ ಚರಿತ್ರೆಯು ಈ ನಿಯಮಕ್ಕೆ ಪ್ರತಿಷೇಧವಲ್ಲ. ಆಕೆಯು ಹುಟ್ಟಿದ ಕಾಲ, ಮದುವೆಯಾದ ಗಂಡನ ಹೆಸರು ಮುಂತಾದವು ಇತಿಹಾಸಶೋಧಕರ ಚರ್ಚೆಗೆ ಈಗಲೂ ನಿಲುಕದೆ ಇದೆ. ಆದರೆ ಆಕೆಯ ಪರಭಕ್ತಿಯು ಮಾತ್ರ ನಿಸ್ಸಂಶಯವಾಗಿ ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿ ಸ್ಮರಣೆಮಾಡುವಂಥದ್ದಾಗಿರುತ್ತದೆ.

ಇನ್ನೂ ನಾಲ್ಕು ವರ್ಷದ ಸಣ್ಣಮಗುವಾಗಿದ್ದಾಗಲೆ ಮೀರೆಯಲ್ಲಿ ಶ್ರೀಕೃಷ್ಣಭಕ್ತಿಯ ಬುಗ್ಗೆಯು ಕಾಣಿಸಿಕೊಂಡಿತು. ಒಂದು ದಿನಮನೆಯ ಮುಂದೆ ಬಂದ ಮದುವೆಯ ಮೆರವಣಿಗೆಯನ್ನು ನೋಡಿ ''ಅಮ್ಮ, ನನ್ನ ಗಂಡನೆಲ್ಲಿ?'' ಎಂದು ಆಕೆಯು ಕೇಳಲು ತಾಯಿಯು ಮುಗುಳುನಗೆಯಿಂದ ''ಮಗೂ, ಆಗೋ ಆ ಗಿರಿಧರಗೋಪಾಲನೇ ನಿನ್ನ ಗಂಡನು'' ಎಂದು ದೇವರಕೋಣೆಯಲ್ಲಿದ್ದ

ಶ್ರೀಕೃಷ್ಣವಿಗ್ರಹವನ್ನು ತೋರಿಸಿದಳು. ಸರಿ, ಅಂದಿನಿಂದ ಮೀರೆಗೆ ನಿಜವಾಗಿಯೂ ಶ್ರೀಕೃಷ್ಣನೇ ಪತಿಯಾದನು, ಅವಳು ಕಾಂತಾಸಕ್ತಿಯಿಂದ ಆ ಗೋಪಾಲನ್ನು ಆರಾಧಿಸತೊಡಗಿಬಿಟ್ಟಳು!

ಚಿತ್ತೂರಿನ ರಾಜನಾದ ಸಂಗನ ಹಿರಿಯಮಗ ಭೋಜರಾಜನು[1] ಅವಳನ್ನು ಮದುವೆಯಾದ ಗಂಡನ ಉಪಚಾರವನ್ನೂ ಮನೆಯ ಕೆಲಸವನ್ನೂ ತೀರಿಸಿದ ಮೇಲೆ ಉಳಿದ ಕಾಲವನ್ನೆಲ್ಲ ಆಕೆಯು ಶ್ರೀಗಿರಿಧರನ ಭಜನೆಯಲ್ಲಿಯೇ ಕಳೆಯುತ್ತಿದ್ದಳು; ಒಬ್ಬರಿಬ್ಬರು ಭಕ್ತರನ್ನು ಜೊತೆಮಾಡಿಕೊಂಡು ರಾತ್ರಿಯೆಲ್ಲ, ಗೀತನರ್ತಗಳಿಂದಲೇ ಕಳೆಯುತ್ತಿದ್ದಳು. ಅತ್ತೆಯು ತಮ್ಮ ಮನೆತನದ ದೇವರಾದ ದುರ್ಗಾದೇವಿಯನ್ನೇ ಪೂಜಿಸೆಂದು ಮಾಡಿದ ಉಪದೇಶವು ಅವಳ ಮನಸ್ಸಿನಲ್ಲಿ ಹೋಗಲಿಲ್ಲ. ಅತ್ತೆಯ ಬೆದರಿಕೆಗೂ ಅವಳು ಜಗ್ಗಲಿಲ್ಲ. ಶ್ರೀ ಕೃಷ್ಣನ ಪಾದಾರವಿಂದದಲ್ಲಿ ಅರ್ಪಣೆಮಾಡಿಕೊಂಡಿದ್ದ ತನ್ನ ಚಿತ್ತವನ್ನು ಮತ್ತೆಲ್ಲಿಗೂ ಕದಲಿಸಲಾರದ ಏಕನಿಷ್ಠೆಯಿಂದ ಅವಳು ತನ್ನ ಭಜನಕ್ರಮವನ್ನು ಮುಂದುವರಿಸಿಯೇಬಿಟ್ಟಳು. ಭೋಜನರಾಜನು ಅವಳ ವರ್ತನೆಯ ವಿಷಯದಲ್ಲಿ ಸಂಶಯಪಟ್ಟು, ರಾತ್ರೆಯಲ್ಲಿ ಅವಳಿಗೆ ತಿಳಿಸದೆಯೇ ಪೂಜಾಲಯಕ್ಕೆ ಬಂದು ಹೊಂಚುಹಾಕಿ ನೋಡಿದನು, ಆಕೆಯಲ್ಲಿ ಕಂಡುಬಂದ ಭಕ್ತಿಯ ಭರವನ್ನೂ ಸಾತ್ತ್ವಿಕಭಾವಗಳನ್ನೂ ಅರಿತುಕೊಳ್ಳಲಾರದೆ ಅವಳಿಗೆ ಹುಚ್ಚು ಹಿಡಿದಿದೆಯೆಂದು ಕೆಲವು ದಿನಗಳವರೆಗೆ ಅವಳ ಗೋಜಿಗೆ ಹೋಗದೆ ಸುಮ್ಮನೆ ಇದ್ದುಬಿಟ್ಟನು.

ಮೀರಾಬಾಯಿಗೆ ಸಾಧುಗಳನ್ನು ಕಂಡರೆ ಬಲು ಅಕ್ಕರೆ. ಅವರ ಗುಂಪಿನಲ್ಲಿ ಸೇರುವದರಿಂದ ತನ್ನ ಮತ್ತು ತನ್ನ ಗಂಡನ ಮನೆಯವರ ವಂಶದ ಗೌರವಕ್ಕೆ ಕಲಂಕವು ಬಂದೀತೆಂದು ಆಕೆಯು ಒಂದಿಷ್ಟೂ ಎಣಿಸಲಿಲ್ಲ; ಏಕೆಂದರೆ ಅವಳ ಮನಸ್ಸು ಅಷ್ಟು ಶುದ್ಧವಾಗಿತ್ತು. ಆದರೂ ಮಾಂಸಮಯವಾದ ಕಣ್ಣಿಂದ ನೋಡುವ ಲೋಕದ ಜನರಿಗೆ ಅವಳ ನಡತೆಯು ಸರಿಬೀಳಲಿಲ್ಲವೆಂಬುದೇನೂ ಆಶ್ಚರ್ಯವಲ್ಲ; ಅವರು ಆಕೆಯ ವಿಷಯವಾಗಿ ಏನೇನೋ ಕಥೆಗಳನ್ನು ಕಟ್ಟಲಾರಂಭಿಸಿದರು.

---

1 . ಇದು ವಾದಗ್ರಸ್ತವಿಷಯವು, Kalyana Kalpataru ಎಂಬ ಪತ್ರಿಕೆಯಲ್ಲಿ ಬರೆದಿರುವ ಚರಿತ್ರೆಯನ್ನು ಈ ಲೇಖನದಲ್ಲಿ ಬಹುಮಟ್ಟಿಗೆ ಅನುಸರಿಸಿದೆ.

ಒಂದು ದಿನ ಅಕ್ಬರ್‌ಬಾದಷಹನ ಕಿವಿಗೂ ಆಕೆಯ ಭಕ್ತಿಯ ವಿಚಾರವೂ ಸೌಂದರ್ಯದ ಸುದ್ದಿಯೂ ಬಿದ್ದಿತು. ಬಾದಷಹನು ತನ್ನ ಪ್ರೇಮದ ಗಾಯಕನಾದ ತಾನ್ಸೆನ್ನನೊಡನೆ ಸಾಧುಗಳ ವೇಷದಲ್ಲಿ ಮೇವಾಡಕ್ಕೆ ಬಂದನು. ಮೀರಾಬಾಯಿಯ ಭಕ್ತಿಯನ್ನೂ, ಗಾನವನ್ನೂ ನರ್ತವನ್ನು ನೋಡಿ ಆನಂದದಿಂದ ಬೆಪ್ಪಾದ ಅಕ್ಬರ್‌ನು 'ಇದು ನಿನ್ನ ಮುದ್ದು ಗಿರಿಧರಗೋಪಾಲನಿಗೆ ಅರ್ಪಣ ಮಾಡುವದಕ್ಕೆ ತಕ್ಕದ್ದು' ಎಂದು ಒಂದು ಅನರ್ಘವಾದರತ್ನದ ಹಾರವನ್ನಿತ್ತು ನಮಸ್ಕರಿಸಿ ಹೊರಟು ಹೋದನು. ಈ ಸಂಗತಿಯು ಭೋಜರಾಜನಿಗೆ ತಿಳಿಯಿತು. ಅವನು ಕಿಡಿಕಿಡಿಯಾಗಿ ಹೆಂಡತಿಯನ್ನು ಕಂಡು ''ಮುಸಲ್ಮಾನರವರನ್ನು ದೇವಾಲಯದೊಳಗೆ ಬಿಟ್ಟು, ಅವನಿಂದ ಒಂದು ಹಾರವನ್ನು ಬೇರೆ ತೆಗೆದುಕೊಂಡೆಯ? ಥೀ, ನಿನ್ನ ಮುಖವನ್ನು ನನಗೆ ತೋರಿಸಬೇಡ, ಎಲ್ಲಿಯಾದರೂ ಒಂದು ನದಿಯೊಳಗೆ ಬಿದ್ದಾದರೂ ಸಾಯಬಾರದೆ?'' ಎಂದನು. ಮೀರಾಬಾಯಿಯು ಪತಿಯಾಜ್ಞೆಯನ್ನು ತಲೆಯಲ್ಲಿ ಹೊತ್ತು ಕೂಡಲೆ ಊರನ್ನು ಬಿಟ್ಟುಹೊರಟಳು. ಬಹುದೂರ ನಡೆದು ಸಂಜೆಯಲ್ಲಿ ಶ್ರೀಕೃಷ್ಣನ ಪೂಜೆಯ ಸಮಯಕ್ಕೆ ಸರಿಯಾಗಿ ಒಂದು ನದಿಯನ್ನು ಕಂಡು ಅದರೊಳಗೆ ಹಾರಿಕೊಳ್ಳೋಣವೆಂದು ಕಾಲುತೆಗೆಯುವದರೊಳಗಾಗಿ ಯಾರೋ ಹಿಂದಿನಿಂದ ಕೈಹಿಡಿದು ಎಳೆದಂತಾಯಿತು. ಹಿಂತಿರುಗಿ ನೋಡುವಲ್ಲಿ ಅವಳ ಇಷ್ಟದೇವತೆಯಾದ ಶ್ರೀಕೃಷ್ಣನು ದರ್ಶನವನ್ನು ಕೊಟ್ಟು ಅಂತರ್ಧಾನನಾದನು.

ಮುಂದೆ ಮೀರಾಬಾಯಿಯು ಬಲುದೂರ ಪ್ರಯಾಣಮಾಡಿ ವೃಂದಾವನಕ್ಕೆ ತೆರಳಿದಳು. ಅಲ್ಲಿ ಶ್ರೀಗೋಪಾಲಕೃಷ್ಣನ ಭಜನೆಯಲ್ಲಿ ಕಾಲವನ್ನು ಕಳೆಯುತ್ತಲೂ ಸಂಜೆಯ ವೇಳೆಯಲ್ಲಿ ಭಿಕ್ಷವೆತ್ತಿ ಶ್ರೀಕೃಷ್ಣನಿಗೆ ನಿವೇದನಮಾಡಿದ ಬಳಿಕ ಪ್ರಸಾದವನ್ನು ಸ್ವೀಕರಿಸಿ ಜಾಗರಣೆಮಾಡುತ್ತಲೂ ಆನಂದದಿಂದ ಕಾಲವನ್ನು ಕಳೆಯುತ್ತ ಬಂದಳು. ಹೇಗೋ ಆಕೆಯ ಹೆಸರು ಎಲ್ಲೆಲ್ಲಿಯೂ ಹಬ್ಬಿತು; ಎಷ್ಟೋ ಜನ ಭಕ್ತರು ಅವಳ ದರ್ಶನಕ್ಕೆ ಬಂದರು ಈ ಸುದ್ದಿಯು ಚಿತ್ತೂರಿನವರೆಗೂ ಹೋಯಿತು. ಭೋಜರಾಜನು ತಾನು ಮಾಡಿದ ಅಕೃತ್ಯಕ್ಕೆ ಪಶ್ಚಾತ್ತಾಪಪಟ್ಟು ತಾನೇ ವೃಂದಾವನಕ್ಕೆ ಬಂದು ಮೀರಾಬಾಯಿಯನ್ನು ಊರಿಗೆ ಬರಬೇಕೆಂದು ಕೇಳಿಕೊಂಡನು. ಆಕೆಯು ಒಪ್ಪಿ ಚಿತ್ತೋರಿಗೆ ಬಂದು ಮೊದಲಿನಂತೆ ಶ್ರೀಗಿರಿಧರನ ಭಜನೆಯಲ್ಲಿ ನಿರತಳಾಗಿರುತ್ತಿದ್ದಳು.

ಇಷ್ಟರಲ್ಲಿ ಭೋಜರಾಜನು ತೀರಿಕೊಂಡನು. ಆಗ ಮೀರಾಬಾಯಿಗೆ ಇನ್ನೂ ಇಪ್ಪತ್ತು ಮೂರು ವರ್ಷ. ಹೊಸ ರಾಜನಾದ ರತನಸಿಂಗನು – ಮೀರಾಬಾಯಿಯ ಭಾವನು–''ಇನ್ನು ಮೇಲೆ ಇಂಥ ಹುಚ್ಚಾಟವನ್ನು ನಿಲ್ಲಿಸಬೇಕು, ಇದು ನಮ್ಮ ವಂಶಕ್ಕೆ ಕೆಟ್ಟ ಹೆಸರನ್ನು ತರುತ್ತದೆ'' ಎನ್ನುವದಕ್ಕೆ ಮೊದಲು ಮಾಡಿದನು. ತನ್ನ ಮಾತನ್ನ ಮೀರಾಬಾಯಿಯು ಕೇಳದಿರಲು ಬಗೆಬಗೆಯಾಗಿ ಅವಳನ್ನು ಹಿಂಸಿಸಿದನು. ಆದರೆ ರತನಸಿಂಗನು ತನ್ನ ಪ್ರೇಮದ ಭಕ್ತಳನ್ನು ಕೊಲ್ಲುವದಕ್ಕೆ ಮಾಡಿದ ಹಂಚಿಕೆಗಳನ್ನೆಲ್ಲ ಭಗವಂತನೇ ನಿಷ್ಫಲವಾಗಿ ಮಾಡಿದನು. ಒಂದು ಸಲ ರಾಜನು ಹೂವಿನ ಸರವೆಂದು ಪಟ್ಟಿಗೆಯಲ್ಲಿ ಒಂದು ಹಾವನ್ನು ಅವಳ ಬಳಿಗೆ ಕಳುಹಿಸಿಕೊಟ್ಟನು. ಮೀರೆಯು ಮಿಂದು ಮಡಿಯುಟ್ಟು ಅದನ್ನು ತೆಗೆದು ನೋಡುವ ಹೊತ್ತಿಗೆ ಅದು ಒಂದು ಉತ್ತಮವಾದ ಸಾಲಗ್ರಾಮವಾಗಿ ಬಿಟ್ಟಿತ್ತು! ಮತ್ತೊಂದು ಸಲ ರಾಜನು ಕಳುಹಿಸಿದ ವಿಷವನ್ನು ಕುಡಿದು ಅಮೃತ ಪಾನಮಾಡಿದವಳಂತೆ ತೇಜೋಭರಿತಳಾದಳು! ಮೀರಾಬಾಯಿಯ ಪ್ರೇಮದ ಶಕ್ತಿಯು ಅದ್ಭುತವಾಗಿತ್ತೆಂದು ಹೇಳಬೇಕೆ?

ಮೀರಾಬಾಯಿಯು ಈಗ ದ್ವಾರಕಾನಗರಿಗೆ ಯಾತ್ರೆಹೊರಟಳು. ಅವಳು ಕಣ್ಮರೆಯಾಗುತ್ತಲೂ ಚಿತ್ತೂರಿಗೆ ಬರುತ್ತಿದ್ದ ಸಾಧುಗಳ ಯಾತ್ರೆಯು ನಿಂತು ಹೋಯಿತು, ಅಂತಃಕಲಹಗಳು ಹೆಚ್ಚಿದವು. ತಾನು ಮಾಡಿದ ಅವಿವೇಕವು ರಾಜನಿಗೆ ಈಗ ಪಶ್ಚಾತ್ತಾಪವನ್ನು ತಂದುಕೊಟ್ಟಿತು. ಆದ್ದರಿಂದ ಅವನು ಕೆಲವು ಜನ ಬ್ರಾಹ್ಮಣರನ್ನು ಕಳುಹಿಸಿ ಆಕೆಯನ್ನು ಮತ್ತೆ ಚಿತ್ತೂರಿಗೆ ಬರಬೇಕೆಂದು ಹೇಳಿಸಿದನು. ಅವರು ಬಹಳ ಬಲವಂತಪಡಿಸಿದ್ದರಿಂದ ಮೀರೆಯು ತನ್ನ ಶ್ರೀಕೃಷ್ಣನ ಅಪ್ಪಣೆಯನ್ನು ಕೇಳಿ ನಿಶ್ಚಯಿಸುವೆನೆಂದಳು. ದ್ವಾರಕಾನಗರದಲ್ಲಿದ್ದ ಶ್ರೀಕೃಷ್ಣನಿಗೆ 'ರಣಛೋಡ'ನೆಂದು ಹೆಸರು. ರಣಛೋಡನ ಧ್ಯಾನದಲ್ಲಿ ಮಗ್ನಳಾಗಿ ಮೀರಾಬಾಯಿಯು ಕುಳಿತುಕೊಂಡಾಗ ವಿಗ್ರಹವು ತನ್ನೊಳಕ್ಕೆ ಅವಳನ್ನು ಸೇರಿಸಿಕೊಂಡುಬಿಟ್ಟಿತೆಂದು ಹೇಳುತ್ತಾರೆ. ಈಗಿನ ಮೇವಾಡದ ರಾಜಧಾನಿಯಾದ ಉದಯಪುರದಲ್ಲಿ ಮೀರಾಬಾಯಿಯ ವಿಗ್ರಯವನ್ನೂ ರಣಛೋಡವಿಗ್ರಹವನ್ನೂ[1] ಜೊತೆಯಲ್ಲಿ ಪೂಜಿಸುತ್ತಾರೆ.

1. 'ರಣಛೋಡ'– ಎಂದರೆ ಯುದ್ಧವನ್ನು ಬಿಟ್ಟವರು. ಜರಾಸಂಧನಿಗೆ ಸೋತು ಶ್ರೀಕೃಷ್ಣನು ದ್ವಾರಕಿಗೆ ಓಡಿದ್ದನ್ನು ತಿಳಿಸುವ ಹೆಸರಿದು. ಯುದ್ಧವೇ ಮುಂತಾದ ಪಾಪಭಯದಿಂದ ಬಿಡಿಸುವವನು – ಎಂಬುದು ಶಬ್ದದ ಅರ್ಥವೆಂದು ಕೆಲವರು ಹೇಳುತ್ತಾರೆ; ಈ ಹೆಸರಿನಿಂದ ಶ್ರೀಕೃಷ್ಣನನ್ನು ದ್ವಾರಕೆಯಲ್ಲಿ ಮತ್ತು ಕಾಥೆವಾರಸಂಸ್ಥಾನದಲ್ಲೆಲ್ಲ ಪೂಜಿಸುತ್ತಾರಂತೆ.

ಮೀರಾಬಾಯಿಯ ಕಥೆಯನ್ನು ಕೇಳಿದರೆ ಶ್ರೀಕೃಷ್ಣಭಕ್ತಿಗಾಗಿ ತನು ಮನೋಧನಗಳನ್ನು ಒಪ್ಪಿಸುವ ಶಕ್ತಿಯು ಆಕೆಗೆ ಸ್ವಭಾವದಿಂದಲೇ ಇರುತ್ತಿತ್ತೆಂದು ಸ್ಪಷ್ಟವಾಗಿ ಕಂಡುಬರುತ್ತದೆ. ಭಕ್ತಿಯ ಆವೇಶವು ಒಂದಿದ್ದರೆ ಲೋಕದ ಸಂಪತ್ತು, ಬಡತನ, ಮಾನ, ಅಪಮಾನ-ಮುಂತಾದವುಗಳು ಭಕ್ತನನ್ನು ಸ್ವಲ್ಪವೂ ಮುಟ್ಟಲರಿಯವೆಂಬುದನ್ನು ಆಕೆಯ ಚರಿತ್ರೆಯಿಂದ ತಿಳಿಯಬಹುದು. ತನ್ನ ತಂದೆಯು ಬಗೆಬಗೆಯಾಗಿ ಪೀಡಿಸಿದರೂ ಪರಮಾತ್ಮನಲ್ಲಿ ಏಕನಿಷ್ಠೆಯನ್ನು ತೋಸಿದ ಪ್ರಹ್ಲಾದನ ಭಕ್ತಿಯು ಕಲಿಯುಗದಲ್ಲಿಯೂ ಸಾಧ್ಯವೆಂಬುದನ್ನು ಆ ಚರಿತ್ರೆಯು ನೆನಪುಕೊಡುವದು. ಈ ಭಕ್ತಿಗೆ ಹೆಣ್ಣು, ಗಂಡು-ಎಂಬ ಭೇದವಿಲ್ಲವೆಂಬುದಕ್ಕೆ ಇದು ಒಂದು ಉತ್ತಮ ಉದಾಹರಣೆಯಾಗಿರುವದು. ಅಜ್ಞರು ಮೊದಮೊದಲು ಧಾರ್ಮಿಕರನ್ನು ನಿಂದಿಸಿದರೂ ಹಿಂಸಿಸಿದರೂ ಭಗವಂತನು ತನ್ನ ಶರಣಾಗತರನ್ನು ಕೈಬಿಡದೆ ಪಾರುಗಾಣಿಸುವನೆಂಬುದಕ್ಕೂ, ಮೊದಲು ನಿಂದಿಸಿದವರೇ ಅಂಥ ಭಕ್ತರನ್ನು ಪೂಜಿಸುವರೆಂಬುದಕ್ಕೂ, ಇದೊಂದು ನಿದರ್ಶನವಾಗಿದೆ.

ಮೀರಾಬಾಯಿಯು ಮುಖ್ಯವಾಗಿ ಪಶ್ಚಿಮ ಹಿಂದೂಸ್ಥಾನದಲ್ಲಿ ಕೃಷ್ಣ ಭಕ್ತಿಯ ಪ್ರಸಾರವನ್ನು ಮಾಡಿದಳು. ಭಕ್ತಿಪ್ರಧಾನವಾದ ವಾಙ್ಮಯದಲ್ಲಿ ಶೃಂಗಾರಮಯವಾದ ವಚನಗಳು ಬರುವದು ಬಹಳ; ಮೀರಾಬಾಯಿಯು ಹೆಂಗಸಾದ್ದರಿಂದ ಅವಳು ಮಾಡಿರುವ ಕವಿತೆಗಳಲ್ಲಿರುವ ಇಂಥ ವಚನಗಳು ಅವಳ ಚರಿತ್ರೆಗೆ ಕಲಂಕವನ್ನೊಡ್ಡುವ ಪ್ರಯತ್ನಮಾಡಿದವರಿಗೆ ಸಹಾಯಕವಾಗಿರಬಹುದು. ಇದು ಹೇಗಾದರೂ ಇರಲಿ ಮೀರಾಬಾಯಿಯ ಕವಿತೆಯೇ ಈಗ ಜೀವಂತವಾಗಿ ರುವ ಆಕೆಯ ಕಥೆಯು.

★★★★★

# ಸಂತರೈದಾಸ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

**ಮೇರೆ ತೊ ಗಿರಧರ ಗೋಪಾಲ ದೂಸರೊ ನ ಕೊಈ ।**
**ಮಾತಾ ಛೋಡೀ ಪಿತಾ ಛೋಡೆ, ಛೋಡೆ ಸಗಾ ಸೋಈ ।**
**ಸಾಧಾಂ ಸಂಗ ಬೈಠಬೈಠ ಲೋಕಲಾಜ ಸೋಈ ॥ 1 ॥**

**ಸನ್ತ ದೆಖ ದೌಡ ಆಈ, ಜಗತ ದೇಖ ರೋಈ ।**
**ಪ್ರೇಮ ಆಂಸೂ ಡಾರಡಾರ ಅಮರಬೇಲ ಬೋಈ ॥ 2 ॥**

**ಮಾರಗ ಮೆ ತಾರನ ಮಿಲೆ ಸನ್ತನಾಮ ರೋಈ ।**
**ಸನ್ತ ಸದಾ ಸೀಸ ಪರ ನಾಮ ಹೃದೇ ಹೋಈ ॥ 3 ॥**

**ಅಬ ತೋ ಬಾತ ಫೈಲ ಗಈ,ಜಾನೌ ಸಬ ಕೋಈ ।**
**ದಾಸೀ ಮೀರಾ ಲಾಲ ಗಿರಿಧರ ಹೋನೀ ಸೋ ಹೋ ॥ 4 ॥**

ಈ ಪದವು ರಾಜಪುಟಾಣದ ಭಕ್ತವಂತಳಾದ ಮೀರಾಬಾಯಿಯ ಕೃತಿಯು. ಇದರ ಭಾವಾರ್ಥವು ಈ ರೀತಿಯಲ್ಲಿರುವದು;

''ನನ್ನವನೆಂದರೆ ಗಿರಿಧರ ಗೋಪಾಲನೊಬ್ಬನ ಹೊರತು ಎರಡನೆಯವರು ಯಾರೂ ಅಲ್ಲ. ತಾಯಿಯನ್ನು ಬಿಟ್ಟದ್ದಾಯಿತು, ತಂದೆಯನ್ನು ಆಗಲಿದ್ದಾಯಿತು. ಮಿಕ್ಕವರೆಲ್ಲರನ್ನೂ ಬಿಟ್ಟಂತಾಯಿತು. ಸಾಧುಸಂಗದಲ್ಲಿ ಕುಳಿತು ಲೋಕವನ್ನೂ ತೊರೆದೆನು. ಸಂತನೊಬ್ಬನನ್ನು ಕಂಡರೆ ಆತನ ಬಳಿಗೆ ಓಡಿಬರುತ್ತಿದ್ದೆನು, ಲೋಕದ ಜನರನ್ನು ಕಂಡು ಅಳುತ್ತಿದ್ದೆನು. ಕಣ್ಣೀರನ್ನು ಸುರಿದು ಸುರಿದು ಅಮಿತವಾದ ಪ್ರೇಮದ ಬಳ್ಳಿಯನ್ನು ಸಾಕಿದನು. ದಾರಿಯಲ್ಲಿ ನನಗೆ ತಾರಕವಾಗಿ ಸಾಧುವೂ ಭಗವನ್ನಾಮವೂ ದೊರೆತವು; ಅಲ್ಲಿಂದ ಮುಂದಕ್ಕೆ ತಲೆಯಮೇಲೆ ಸಂತರು, ಹೃದಯದಲ್ಲಿ ನಾಮ – ಆಗಿಬಿಟ್ಟವು! ಈಗ ಎಲ್ಲಾ ಮಾತೂ ಆಗಿಹೋಯಿತು, ಯಾರು ಏನೆಂದಾದರೂ ತಿಳಿದುಕೊಳ್ಳಲಿ. ಮೀರೆಯು ದಾಸಿಯು–ಗಿರಿಧರನೇ ಒಡೆಯನು. ಆದದ್ದೆಲ್ಲ ಆಗಲಿ!''

ಇಲ್ಲಿ ಮೀರಾಬಾಯಿಗೆ ದೊರೆತ ಸಂತನು ಯಾರೆಂದರೆ ರೈದಾಸನು ಎಂದು ಹೇಳುತ್ತಾರೆ. ಮೀರಾಬಾಯಿಯು ತನ್ನ ಕಷ್ಟಕಾಲದಲ್ಲಿ ಸತ್ಪುರುಷರ ಸಂಗ, ಭಗವನ್ನಾಮಸ್ಮರಣ – ಇವೆರಡನ್ನೇ ತರಣೆಂದು ಇಟ್ಟುಕೊಂಡಿದ್ದಳೆಂದು ಆಕೆಯ ಚರಿತ್ರೆಯಿಂದಲೇ ವ್ಯಕ್ತವಾಗುತ್ತದೆ. ಅಂಥ ಏಕನಿಷ್ಠೆಯ ಭಕ್ತಳ ಗುರುವಾಗುವದಕ್ಕೆ ರೈದಾಸನು ತಕ್ಕವನೇ ಎಂಬುದನ್ನು ಈ ಚಿಕ್ಕ ಲೇಖನದಲ್ಲಿ ವಾಚಕರಿಗೆ ತೋರಿಸಿಕೊಡುವದಕ್ಕೆ ಯತ್ನಿಸುವೆನು.

ರೈದಾಸನು ಜಾತಿಯಲ್ಲಿ ತೀರ ಕೀಳು ಪಂಗಡಕ್ಕೆ ಸೇರಿದ ಚಮ್ಮಾರನು. ಆದರೆ ಭಗವದ್ಭಕ್ತರ ಮಹಿಮೆಯನ್ನು ಅವರ ಜಾತಿಕುಲರೂಪಸಂಪತ್ತುಗಳಿಂದ ಅಳೆಯುವದಕ್ಕೆ ಬರುವದಿಲ್ಲ; ಭಗವಂತನಲ್ಲಿ ಅವರಿಗಿದ್ದ ಪ್ರೇಮಾತಿಶಯವೇ ಅದರ ಆಳವನ್ನು ಕಂಡುಹಿಡಿಯಬಲ್ಲ ಪಾತಾಳಜರಡಿಯಾಗಿರುತ್ತದೆ.

ರೈದಾಸನು ಹುಟ್ಟಿದಂದಿನಿಂದಲೂ ನಿಜವಾಗಿ 'ರವಿದಾಸ'ನಾಗಿದ್ದನು, ಅವನ ವೈರಾಗ್ಯ ಮತ್ತು ಭಗವದ್ಭಕ್ತಿಯೆಂಬ ಜ್ಯೋತಿಯ ಕಿರಣಗಳು ಮೊದಲಿನಿಂದಲೂ ಪ್ರಾಪಂಚಿಕರ ವಿಷಯಾಸಕ್ತಿಯ ಮಬ್ಬನ್ನು ಪರಿಹರಿಸುತ್ತಲೇ ಇದ್ದವು. ತಂದೆತಾಯಿಗಳು ಮಾರುವದಕ್ಕೆ ಕೊಟ್ಟಿದ್ದು ಜೋಡು, ಪಾಪಾಸು, ಮೆಟ್ಟು – ಯಾವದೇ ಆಗಲಿ, ಬಂದ ಹಣದಲ್ಲಿ ಸ್ವಲ್ಪ ಭಾಗವನ್ನು ದಾನಧರ್ಮಕ್ಕೆ ಉಪಯೋಗಿಸದೆ ರೈದಾಸನು ಮನೆಗೆ ಬರುತ್ತಿರಲಿಲ್ಲ. ಇದನ್ನು ಕಂಡು ಬೇಸತ್ತ ಅವನ ತಂದೆಯೂ ಅಣ್ಣಂದಿರೂ ಅವನನ್ನು ಹೊರಗಟ್ಟಿಬಿಟ್ಟರು. ಆದರೆ ಎಷ್ಟೇ ಬಡತನ ಬಂದರೂ ಎಷ್ಟೇ ಕಷ್ಟ ಬಂದರೂ ರೈದಾಸನು ರಾಮಭಕ್ತಿಯನ್ನಾಗಲೀ ದೀನ ಜನರಲ್ಲಿ ಕರುಣೆಯನ್ನಾಗಲೀ ಸ್ವಲ್ಪವೂ ತಗ್ಗಿಸಲಿಲ್ಲ.

ಒಂದು ದಿನ ಇವನು ತನ್ನ ಗುಡಿಸಲ ಮುಂದೆ ಜೋಡು ಹೊಲೆಯುತ್ತಾ ರಾಮಭಜನೆ ಮಾಡಿಕೊಂಡಿದ್ದನು. ಅಲ್ಲಿಗೆ ಒಬ್ಬ ಬ್ರಾಹ್ಮಣನು ಬಂದು ಇವನ ದಾರಿದ್ರ್ಯವನ್ನು ನೋಡಿ ಸಹಿಸಲಾರದೆ ತನ್ನಲ್ಲಿದ್ದ ಒಂದು ಪರಶುಮಣಿಯನ್ನು ಕೊಡುವದಕ್ಕೆ ಯತ್ನಿಸಲು ''ಸ್ವಾಮಿ, ಗುಡಿಸಲ ಮೇಲುಛಾವಣಿಯ ಮೇಲೆ ಅದನ್ನು ಹಾಕಿರಿ, ಬೇಕಾದರೆ ತೆಗೆದುಕೊಳ್ಳುವೆನು'' ಎಂದನಂತೆ! ಆತನು ಅದರಂತೆ ಇಟ್ಟು ಹೋಗಿ ಕೆಲವು ತಿಂಗಳುಗಳು ಕಳೆದ ಮೇಲೆ ಬಂದು ನೋಡಿದರೆ ರೈದಾಸನು ಮೊದಲಿನ ಸ್ಥಿತಿಯಲ್ಲಿಯೇ ಇದಾನೆ,

ಪರುಶಮಣಿಯು ಝೋಪಡಿಯ ಮೇಲೆ ಮೊದಲು ಇಟ್ಟಲ್ಲಿಯೇ ಬಿದ್ದಿದೆ! ಇದಲ್ಲವೆ, ಪರಮವೈರಾಗ್ಯದ ಒರೆಗಲ್ಲು? ಪರುಶಮಣಿಯು ಕಬ್ಬಿಣಕ್ಕೆ ತಗಲಿದರೆ ಚಿನ್ನವಾಗುವದಂತೆ, ಆದರೆ ಹರಿನಾಮದ ಪರುಶವು ತಾಕಿದ ಭಕ್ತರ ವಿರಕ್ತಹೃದಯವೆಂಬ ಅಪರಂಜಿಯ ಚಿನ್ನದ ಒರೆಗೆ ಭೂಮಂಡಲದ ಯಾವ ಚಿನ್ನವು ತಾನೆ ಸರಿಯಾದೀತು? ಸೂರದಾಸನು ಹಾಡಿರುವ ಒಂದು ಪದ್ಯದಲ್ಲಿರುವ ವಿಚಾರವು ರೈದಾಸನ ಜೀವನದಲ್ಲಿ ಆದ ಈ ಘಟನೆಗೆ ಸಂಬಂಧಪಟ್ಟದ್ದೆಂದು ಹೇಳುವರು:

**ಹರಿನಾಮವೆಂಬುದೇ ಪರಮನಿಧಿಯೆನಗೆ**
**ಪರಿಪರಿಯಲುಂಡರೂ ತೊರೆಯಾಗದಾ ||ಪ||**

**ಅರಮನೆಯಲಿದ್ದು ಕಳ್ಳರ ಕೈಗೆ ಸಿಗದಿರುವ**
**ಸಿರಿಯು ಹರಿನಾಮವಿದಕೆರಡಿಲ್ಲವು |**
**ಹರಿಯೆ ಸಿರಿಯೆಂದಿರುವ ಸೂರದಾಸಗೆ ಮತ್ತೆ**
**ಪರುಸದಾ ಗರುಜೆಂತು ದೊರೆ ಕೊಂಬುದೈ ||**

ಒಂದು ದಿನ ರೈದಾಸನ ಪೂಜೆಯ ಪೆಟ್ಟಿಗೆಯಲ್ಲಿ ಐದು ಸ್ವರ್ಣನಾಣ್ಯ ಗಳಿದ್ದದ್ದು ಕಂಡುಬಂದಿತು. ಅವನು ಈ ದೈವಿಕಘಟನೆಯನ್ನು ನೋಡಿ ''ಭಗವತ್ಪ್ರೇಮದಿಂದ ಕೂಡ ಧನವು ದೊರೆಯುವದಾದರೆ ಇನ್ನು ಮೇಲೆ ನನ್ನ ಗತಿಯೇನು? ಇನ್ನು ನಾನು ಸಂಸಾರದಲ್ಲಿ ಆಸಕ್ತನಾಗಿ ಕೆಟ್ಟುಹೋಗುವ ಕಾಲವು ಬಂತೆಂದು ತೋರುತ್ತದೆ!'' ಎಂದು ಚಿಂತೆಯಲ್ಲಿ ಮುಳುಗಿರಲು ಭಗವಂತನು ಸ್ವಪ್ನದಲ್ಲಿ ಕಾಣಿಸಿಕೊಂಡು ''ಮಗುವೆ, ಯೋಚಿಸಬೇಡ; ನಿನ್ನ ಯೋಗಕ್ಷೇಮಕ್ಕೆಂದು ನಾನೇ ಈ ಹಣವನ್ನು ಇಟ್ಟಿರುವೆನು. ಇವನ್ನು ತೆಗೆದುಕೊ ನಿನಗೆ ಒಳ್ಳೆಯದಾಗುವದು'' ಎಂದು ಹೇಳಿ ಅಂತರ್ಧಾನನಾದನು. ರೈದಾಸನು ಆ ಹಣವನ್ನು ತೆಗೆದುಕೊಂಡು ಒಂದು ಧರ್ಮಶಾಲೆಯನ್ನೂ ದೇವಾಲಯವನ್ನೂ ಕಟ್ಟಿಸುವದಕ್ಕೆ ಅದನ್ನು ವಿನಿಯೋಗಿಸಿದನು. ಇದರಿಂದ ವಿರಕ್ತಶಿಖಾಮಣಿಯಾದ ಆತನ ಕೀರ್ತಿಯು ಎಲ್ಲೆಲ್ಲಿಯೂ ಮತ್ತಷ್ಟು ಹಬ್ಬುವದಕ್ಕೆ ಕಾರಣವಾಯಿತು.

ರೈದಾಸನ ಮಹಿಮೆಯನ್ನು ಹೊಗಳುವ ಅನೇಕ ಕಥೆಗಳು ಜನರ ಬಾಯಲ್ಲಿವೆ. ಬ್ರಾಹ್ಮಣರು ಅವನೊಡನೆ ಭೋಜನಮಾಡುವದಕ್ಕೆ ಒಪ್ಪದಿರಲು,

ಅವರೆಲ್ಲರೂ ಒಟ್ಟು ಸೇರಿದ್ದ ಒಂದಾನೊಂದು ಸಂತರ್ಪಣೆಯಲ್ಲಿ ಪ್ರತಿ ಇಬ್ಬಿಬ್ಬರು ಬ್ರಾಹ್ಮಣರ ನಡುವೆಯೂ ಅವನು ಕುಳಿತು ಭೋಜನಮಾಡುತ್ತಿರುವಂತೆ ಕಾಣಿಸಿಕೊಂಡನಂತೆ. ರೈದಾಸನು ತೊನ್ನು ಮುಂತಾದ ಕೆಟ್ಟರೋಗಗಳಿಂದ ನರಳುತ್ತಿದ್ದವರನ್ನು ಆರೋಗ್ಯವಂತನಾಗಿ ಮಾಡಿದನೆಂದೂ ಅವನಲ್ಲಿಗೆ ಎಷ್ಟೋ ಮಂದಿ ಬ್ರಾಹ್ಮಣರೂ ರೋಗನಿವಾರಣೆಗೆ ಬರುತ್ತಿದ್ದರೆಂದೂ ಹೇಳುತ್ತಾರೆ. ಅವನು ಮೈಲಿಗೆಯ ತೊಗಲಿನಿಂದ ದೇವರ ಪ್ರತಿಮೆಯೊಂದನ್ನು ಮಾಡಿದನೆಂದು ಜನರು ಆಕ್ಷೇಪಿಸಲು, ತೊಗಲಿನ ಉಪಯೋಗಗಳನ್ನೊಳಗೊಂಡ ಒಂದು ಪದ್ಯವನ್ನೇ ಮಾಡಿ ಹಾಡಿ ಹೊಗಳಿದನಂತೆ. ಜಾತಿಭೇದದಲ್ಲಿ ನಂಬಿಕೆಯುಳ್ಳ ಬ್ರಾಹ್ಮಣರು ಮೊದಮೊದಲು ಇವನ ವರ್ತನೆಯನ್ನು ವಿರೋಧಿಸಿದರೆಂದೂ ಆಮೇಲೆ ಇವನ ನಿಜವಾದ ಯೋಗ್ಯತೆಯನ್ನು ಕಂಡಮೇಲೆ ಗೌರವಿಸಿದರೆಂದೂ ತೋರುತ್ತದೆ. ಆದ್ದರಿಂದಲೇ ಇವನು ಪೂರ್ವಜನ್ಮದಲ್ಲಿ ಬ್ರಾಹ್ಮಣನೆಂದೂ ಒಂದು ಕಥೆ ಹುಟ್ಟಿರುತ್ತದೆ; ಒಂದು ಸಲ ರೈದಾಸನು ತನ್ನ ಮೇಲುಚರ್ಮವನ್ನು ಸುಲಿದು ಒಳಗೆ ಇದ್ದ ಯಜ್ಞೋಪವೀತವನ್ನು ತೋರಿಸಿದನೆಂಬ ಅದ್ಭುತಲೀಲೆಯ ಕಥೆಯನ್ನು ಕೂಡ ಹೊರಕ್ಕೆ ಬಿಟ್ಟಿರುತ್ತಾರೆ.

ರಾಮಾನಂದನ ಶಿಷ್ಯರಲ್ಲಿ ಎಲ್ಲಾ ಜಾತಿಯವರೂ ಇದ್ದರೆಂದೂ ಇವರೆಲ್ಲರೂ ಭಗವದ್ಭಕ್ತಿಯ ಪ್ರಸಾದಕ್ಕೆ ಪ್ರೋತ್ಸಾಹವನ್ನಿತ್ತರೆಂದೂ ಹಿಂದೆ ಒಂದು ಲೇಖನದಲ್ಲಿ ತಿಳಿಸಿದೆಯಷ್ಟೆ; ಇಂಥ ಪ್ರಸಿದ್ಧ ರಾಮಾನಂದಿಗಳಲ್ಲಿ, ಹದಿನೈದನೆಯ ಶತಮಾನದಲ್ಲಿ ರಾಮಭಕ್ತಿಯನ್ನು ಎಲ್ಲೆಲ್ಲಿಯೂ ಹರಡುವಂತೆ ಮಾಡಿದ ಈ ಚಮ್ಮಾರಮಹಾತ್ಮನು ಒಬ್ಬನಾಗಿರುತ್ತಾನೆ. ಇವನ ಹೆಸರಿನಲ್ಲಿ ರೈದಾಸಿ (ಅಥವಾ ರವಿದಾಸಿ) ಎಂಬ ಒಂದು ವೈಷ್ಣವ ಪಂಥವೇ ಉತ್ತರಭಾರತದಲ್ಲಿ ಉಂಟಾಗಿರುತ್ತದೆ; ರಾಮಾನಂದಿಗಳು, ಕಬೀರ ಪಂಥಿಗಳು – ಇವರನ್ನು ಬಿಟ್ಟರೆ ರೈದಾಸಿಗಳ ಸಂಖ್ಯೆಯೇ ಅಲ್ಲಿಯ ವೈಷ್ಣವಪಂಥದಲ್ಲಿ ಹೆಚ್ಚಾಗಿ ಕಂಡುಬರುತ್ತದೆಯಂತೆ. ರೈದಾಸನು 120ವರ್ಷಗಳವರೆಗೂ ಬದುಕಿದ್ದು ಬ್ರಹ್ಮಪದವನ್ನು ಸೇರಿದನೆಂದೂ ತನ್ನೊಡನೆ ತನ್ನ ಸುಭಾಷಿತಗಳನ್ನೂ ತೆಗೆದುಕೊಂಡೇ ಅವನು ಅಂತರ್ಧಾನನಾದನೆಂದೂ ಆ ಪಂಥದವರು ಹೇಳುತ್ತಾರೆ. ಆದರೆ ಈತನ ಪದಗಳಲ್ಲಿ ಮೂವತ್ತಕ್ಕಿಂತ ಹೆಚ್ಚಾಗಿ ಸಿಕ್ಕದೆ '**ಆದಿಗ್ರಂಥ**'ದ ಸಂಗ್ರಹದಲ್ಲಿ ದೊರಕುತ್ತವೆ. ನಾಭಾದಾಸನ '**ಭಕ್ತಮಾಲಾ**' ಗ್ರಂಥದಲ್ಲಿ ಅವನಿಗೊಂದು ಪೂಜ್ಯಸ್ಥಾನವು ದೊರಕಿದೆ. ದಯಾಘನನಾದ

ಪರಮೇಶ್ವರನ ಭಕ್ತಿಯಿಂದ ಸಕಲಕಲ್ಮಷಗಳನ್ನೂ ಪರಿಹರಿಸಿಕೊಂಡು ಮನುಷ್ಯನು. ಪರಗತಿಯನ್ನು ಪಡೆಯಬಹುದೆಂಬುದೇ ರೈದಾಸನ ಮುಖ್ಯೋಪದೇಶವು. ಭಕ್ತನಿಗೂ ಪರಮೇಶ್ವರನಿಗೂ ಇರುವ ಸಂಬಂಧವನ್ನು ಸೂಚಿಸಿರುವ ಆತನ ಒಂದು ಕೀರ್ತನೆಯ ಅನುವಾದವನ್ನು ಕೊಟ್ಟು ಈ ಲೇಖನವನ್ನು ಉಪಸಂಹಾರಮಾಡುವೆನು;

ನನ್ನ ಬಿಡದಿರು ದೇವ, ನಿನ್ನ ನಾ ಬಿಡೆನು।
ನಿನ್ನ ಬಿಟ್ಟರೆ ಬಳಿಕಲನ್ಮೆರಾರನು ಸರ್ವ ॥ಪ॥

ಬೆಟ್ಟವಾದರೆ ನೀನು, ನಿನ್ನ ನವಿಲಾಗಿಹೆನು
ಬಟ್ಟತಿಂಗಳೆ ನೀನು? ನಾ ಚಕೋರ ॥
ನಟ್ಟ ದೀಪವೆನಲ್ಕೆ, ಪುಟ್ಟಬತ್ತಿಯು ನಾನು
ದಿಟ್ಟ, ಕ್ಷೇತ್ರವೆ ನೀನು? ಯಾತ್ರಿಕನೆ ಅಹೆನು ॥ 1 ॥

ನನ್ನ ಪ್ರೇಮವದಲ್ಲ ನಿನ್ನ ಹೊಂದಿಹುದಯ್ಯ
ಅನ್ಯರನು ಕೈಬಿಟ್ಟೆ ನಿನ್ನ ಸೇರಿ ।
ಇನ್ನದೆಲ್ಲಿಗೆ ಹೋಗೆ ನಿನ್ನ ಸೇವೆಯೆ ಇಹುದು
ಅನ್ಯದೈವವ ಕಾಣೆ ನಿನ್ನಂದದ ।
ನಿನ್ನ ಪೂಜಿಸಿ ಕಾಲಪಾಶವನು ಕತ್ತರಿಸಿ
ಧನ್ಯನೊಪಂತೆಸಗು ರವಿದಾಸನನ್ನ ॥ 2 ॥

★★★★★

# ದಾದೂ ದಯಾಲ

– ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಅಹಮ್ಮದಾಬಾದಿನಲ್ಲಿ ಲೋದಿರಾಮನೆಂಬ ಒಬ್ಬ ನಾಗರಬ್ರಾಹ್ಮಣನಿದ್ದನು ಒಂದುದಿನ ಆತನಿಗೆ ಸಾಬರಮತಿಯಲ್ಲಿ ತೇಲಿಹೋಗುತ್ತಿದ್ದ ಒಂದು ಪೆಟ್ಟಿಗೆಯು ಸಿಕ್ಕಿತು. ನದಿಯ ಪ್ರವಾಹದಿಂದ ಈಚೆಗೆ ತೆಗೆದು ಪೆಟ್ಟಿಗೆಯನ್ನು

ತೆರೆದುನೋಡುವಲ್ಲಿ ಅದರಲ್ಲಿ ಒಂದು ಜ್ಯೋತಿರ್ಮಯವಾದ ಸುಂದರವಾದ ನಗೆಮುಖದ ಮಗುವು ಕಂಡುಬಂದಿತು. ಸಂತಾನವಿಲ್ಲದೆ ಪೇಚಾಡುತ್ತಿದ್ದ ಆ ಬ್ರಾಹ್ಮಣನು ಬಹಳ ಸಂತೋಷದಿಂದ ಮಗುವನ್ನು ಮನೆಗೆ ತಂದು ತನ್ನ ಹೆಂಡತಿಗೆ ತೋರಿಸಿದನು. ಆಕೆಯು ಅದನ್ನು ಪೂರ್ಣಪುತ್ರವಾತ್ಸಲ್ಯದಿಂದ ಸಾಕಿದಳು. ಈ ಮಗುವೇ ನಮ್ಮ ಲೇಖನದ ನಾಯಕನಾದ ಸಾಧುಶ್ರೇಷ್ಠ ''ದಾದು ದಯಾಲ'' (ಕ್ರಿ.ಶ.1844-1603)ನೆಂಬ ಮಹಾತ್ಮನು.

ಇನ್ನೂ ಹನ್ನೆರಡು ವರ್ಷದ ಬಾಲಕನಾಗಿರುವಾಗಲೇ ದಾದುವಿಗೆ ಶ್ರೀಕೃಷ್ಣಭಗವಂತನು ಒಬ್ಬ ಮುದುಕನ ರೂಪದಿಂದ ದರ್ಶನವನ್ನು ಕೊಟ್ಟು ತತ್ತ್ವೋಪದೇಶವನ್ನು ಮಾಡಿದನು. ಬಾಲಕನು ಅಂದಿನಿಂದ ವಿರಕ್ತನೂ ಮಹಾಭಕ್ತನೂ ಆದನು. ಒಮ್ಮೆ ಅವನು ಸತ್ಸಂಗದ ಬಯಕೆಯಿಂದ ಗುಪ್ತವಾಗಿ ಮನೆಯನ್ನು ಬಿಟ್ಟು ಹೊರಡಲು, ತಂದೆತಾಯಿಗಳು ಅವನನ್ನು ಕಂಡುಹಿಡಿದು ಮನೆಗೆ ಕರೆತಂದು ಅವನಿಗೆ ಮದುವೆಮಾಡಿದರು, ಆದರೆ ನಿಜವಾಗಿಯೂ ವಿರಕ್ತನಾಗಿದ್ದ ದಾದುವು ಬಹುದಿನ ಮನೆಯಲ್ಲಿ ನಿಲ್ಲಲಿಲ್ಲ; ಆತನು ತನ್ನ ಹತ್ತೊಂಬತ್ತನೆಯ ವರ್ಷದಲ್ಲಿ ಮತ್ತೊಮ್ಮೆ ಮನೆಯನ್ನು ಬಿಟ್ಟು ಹೊರಟನು.

ಸಂಚಾರಕ್ರಮದಿಂದ ದಾದುವು ಜಯಪುರಸಂಸ್ಥಾನದಲ್ಲಿ ಸಾಂಬರ ಎಂಬ ಹಳ್ಳಿಯನ್ನು ಸೇರಿ ಅಲ್ಲಿ ಅಜ್ಞಾನತವಾಸದಿಂದ ಹತ್ತಿಯನ್ನು ಹಿಂಜುವ ವೃತ್ತಿಯನ್ನು ಅವಲಂಬಿಸಿದನು. ಕಸ್ತೂರಿಯನ್ನು ಮುಚ್ಚಿಟ್ಟರೂ ಅದರ ಪರಿಮಳವು ಎಲ್ಲೆಲ್ಲಿಯೂ ಹರಡುವಂತೆ ಇವನ ಖ್ಯಾತಿಯು ಸ್ವಲ್ಪ ದಿನಗಳಲ್ಲಿಯೇ ಎಲ್ಲೆಲ್ಲಿಯೂ ಹಬ್ಬಿತು. ಆ ಗ್ರಾಮದ ಕಾಜಿಯು ಒಂದು ದಿನ ಇವನ ಮೇಲೆ ಏನೋ ಕಾರಣದಿಂದ ಸಿಟ್ಟಾಗಿ ಇವನಿಗೆ ದಂಡವನ್ನು ವಿಧಿಸಿದನು; ಸಾಧುಸಂತಾಪದ ಫಲವಾಗಿ ಅವನಿಗೆ ದುಃಖವು ಪ್ರಾಪ್ತವಾಯಿತು, ಕೆಲವು ದಿನಗಳಲ್ಲಿಯೇ ಅವನು ಸತ್ತುಹೋದನು. ದಾದುವಿನ ಇನ್ನೂ ಕೆಲವು ಅದ್ಭುತಚರಿತ್ರೆಗಳನ್ನು ಕೇಳಿ ಜನರಿಗೆ ಇವನಲ್ಲಿ ತುಂಬ ಶ್ರದ್ಧೆಯುಂಟಾಯಿತು. ಸಾವಿರಾರು ಜನ ಆಸ್ತಿಕರು ಭಕ್ತಿಯಿಂದ ಇವನನ್ನು ಶರಣು ಹೊಕ್ಕು ಕೃತಾರ್ಥರಾದರು.

ಈ ಸಾಧುವರನು ಹನ್ನೆರಡು ವರ್ಷಗಳ ಕಾಲ ಕಠಿಣವಾದ ತಪಸ್ಸನ್ನು ಮಾಡಿ ಪೂರ್ಣಸಿದ್ಧಿಯನ್ನು ಪಡೆದಿದ್ದನು. ಇವನು ಯಾವಾಗಲೂ ಲಯಯೋಗವನ್ನು

ಅಭ್ಯಾಸಮಾಡುತ್ತಿದ್ದನು. ಇವನಲ್ಲಿ ಭಕ್ತಿರಸವು ತುಂಬಿತುಳುಕುತ್ತಲಿತ್ತು. ಇವನಲ್ಲಿದ್ದ ಮಿಗಿಲಿಲ್ಲದ ಕ್ಷಮಾಗುಣವೂ ದಯೆಯೂ ಇವನಿಗೆ ದಾದೂ 'ದಯಾಲ'ನೆಂಬ ಹೆಸರನ್ನು ತಂದುಕೊಟ್ಟವು, ವಿರಕ್ತನಾದ ಈ ಮಹಾತ್ಮನ ದೃಷ್ಟಿ ಪಾತವಾಗಿ ಇವನ ವಚನವು ಕಿವಿಗೆ ಬಿದ್ದೊಡನೆಯೇ ಸಾಂಸಾರಿಕರು ಪರಮಾರ್ಥ ಲಾಲಸೆಯನ್ನು ಪಡೆಯುತ್ತಿದ್ದರು. ರಿಜಹ್ ಎಂಬಾತನು ತನ್ನ ಮದುವೆಯ ಮೆರವಣಿಗೆಯಲ್ಲಿ ಕುದುರೆಯಮೇಲೆ ಕೂತುಕೊಂಡು ಬರುತ್ತಿರಲು ಇವನ ದೃಷ್ಟಿಯ ಮಹಿಮೆಯಿಂದ ಅವನು ಕುದುರೆಯಿಂದ ಬಗ್ಗನೆ ಇಳಿದು ಇವನ ಚರಣಕಮಲಕ್ಕೆರಗಿದನು: ತಲೆಯ ಮೇಲಿನ ಬಾಸಿಂಗವನ್ನು ಕಿತ್ತು ತನ್ನ ತಮ್ಮನನ್ನು ವಿವಾಹವಾಗುವಂತೆ ಕಟ್ಟುಮಾಡಿ ತನ್ನ ಪ್ರಾಣವಿರುವವರೆಗೂ ಸಂನ್ಯಾಸಿಯಾಗಿರುವೆನೆಂದು ಭೀಷ್ಮಪ್ರತಿಜ್ಞೆಯನ್ನು ಮಾಡಿಕೊಂಡುಬಿಟ್ಟನು! ಒಬ್ಬ ನಾಜಿಯು ನಿರಾನಾಂಗ್ರಾಮದಲ್ಲಿ ಹೋಳಿಯಹಬ್ಬದ ಹಾಡನ್ನು ಹಾಡುತ್ತಿರಲು ದಾದುದಯಾಲನ ''**ಐಸಾ ದೇಹ ರಚೀರೆ ಭಾಈ । ರಾಮ ನಿರಞ್ಜನ ಗಾವ್ರೋ ಅ ಈ॥**'' (ಇಂಥ ದೇಹವು ದೊರಕಿದೆಯಲ್ಲಣ್ಣ! ನಿರಂಜನ ರಾಮನ್ನು ಹಾಡಿಭಜಿಸುತ್ತಿರು) ಎಂಬ ಗಾನರೂಪ ಉಪದೇಶಮಾತ್ರದಿಂದಲೇ ಆತನು ಕೂಡಲೆ ಇವನಿಗೆ ಶರಣುಬಂದನಂತೆ. ಈ ಮಹಾತ್ಮನ ಹೆಸರು ಅಕ್ಬರ ಬಾದಷಹನ ಕಿವಿಗೂ ಮುಟ್ಟಿತು. ಚಕ್ರವರ್ತಿಯು ಇವನನ್ನು ಸಿಕ್ರಿ ಎಂಬಲ್ಲಿಗೆ ಕರೆಯಿಸಿಕೊಂಡು ನಲವತ್ತು ದಿನಗಳವರೆಗೆ ಇವನೊಡನೆ ತತ್ತ್ವವಿಚಾರಮಾಡುತ್ತಾ ಕಾಲ ಕ್ಷೇಪವನ್ನು ಮಾಡಿ ಗೌರವಪೂರ್ವಕವಾಗಿ ಕಳುಹಿಸಿಕೊಟ್ಟನು.

ದಾದುವಿಗೆ ಚಮತ್ಕಾರಗಳನ್ನು ತೋರಿಸಿ ಸಾಧ್ಯವೆನಿಸಿಕೊಳ್ಳುವದು ಸ್ವಲ್ಪವೂ ಬೇಡವಾಗಿತ್ತು. ಶ್ರದ್ಧಾಭಕ್ತಿಗಳಿಲ್ಲದೆ ಬರಿಯ ಆಡಂಬರಕ್ಕಾಗಿ ಮೂರ್ತಿಪೂಜೆ, ತೀರ್ಥಯಾತ್ರೆ, ಕಥಾಕಾಲಕ್ಷೇಪ - ಮುಂತಾದವುಗಳನ್ನು ಆಚರಿಸುವದು ನಿಷ್ಪ್ರಯೋಜವೆಂದು ಅವನ ಮತಮಿತ್ತು, ತನ್ನೊಳಗೇ ಅಂತರ್ಜೋತಿಯ ಧ್ಯಾನ, ಧರ್ಮ ಮುಂತಾದವುಗಳನ್ನು ಮಾಡುತ್ತಾ ಈಶ್ವರನಲ್ಲಿ ಲಯವಾಗುವ ಸಹಜಯೋಗದಲ್ಲಿ ಈತನಿಗೆ ಪ್ರೀತಿ ಹೆಚ್ಚಾಗಿತ್ತು. ಅಹಿಂಸೆ, ಸತ್ಯ, ಅಸ್ತೇಯ - ಮುಂತಾದ ಸಾತ್ತ್ವಿಕಗುಣಗಳನ್ನು ಪಡೆದುಕೊಳ್ಳುವದಕ್ಕೆ ಯಾರು ಪ್ರಯತ್ನಮಾಡುತ್ತಿರುವರೋ ಅವರೇ ನಿಜವಾದ ಸಾಧುಗಳೆಂಬುದು ಅವನ ಮತವಾಗಿತ್ತು.

ನಿರಂಜನನಿರಾಕಾರಬ್ರಹ್ಮದ ಅನುಭವವೇ ಮಾನವಜೀವನದ ಸಾರ್ಥಕ್ಯವೆಂದು ದಾದುದಯಾಲನ ಅಭಿಪ್ರಾಯವಿತ್ತು. ಅವನಿಗೆ ತನ್ನದೇ ಒಂದು ಸಂಪ್ರದಾಯವನ್ನು ಸ್ಥಾಪಿಸುವ ಇಚ್ಛೆ ಇರಲಿಲ್ಲ; ಆದರೂ ಅವನ ಜೀವಿತಕಾಲದಲ್ಲಿಯೇ ಒಂದು ಸಂಪ್ರದಾಯವು ಏರ್ಪಟ್ಟಿತು. ಶಿಷ್ಯರು ಅದಕ್ಕೆ '**ಬ್ರಹ್ಮಸಂಪ್ರದಾಯ**'ವೆಂದು ಹೆಸರಿಟ್ಟರು; ಈಗ ಅದಕ್ಕೆ '**ದಾದೂಪಂಥ**' ಎಂಬ ಹೆಸರು ಪ್ರಸಿದ್ಧವಾಗಿರುತ್ತದೆ. ದಾದುವಿಗೆ ಸಾವಿರಾರುಮಂದಿ ಶಿಷ್ಯರಿರುತ್ತಿದ್ದರೂ ಅವರಲ್ಲಿ ಮುಖ್ಯವಾಗಿ ಐವತ್ತೆರಡು ಮಂದಿ ಮಾತ್ರ ಸಂಪ್ರದಾಯಪ್ರವರ್ತಕರಾಗಿ ಮಹಂತರೆಂದು ಹೆಸರಾದರು.

ದಾದುವು ನರಾಯನಾ ಎಂಬ ಊರಿನಲ್ಲಿ ಪರಮಪದವನ್ನು ಹೊಂದಿದನು. ಅದು ಈಗ ದಾದುಪಂಥದವರ ಪ್ರಧಾನಸ್ಥಾನವಾಗಿರುತ್ತದೆ. ಈ ಪಂಥದವರು ಉತ್ತರಹಿಂದೂಸ್ಥಾನದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ನಗರಗಳಲ್ಲಿಯೂ ಪಟ್ಟಣಗಳಲ್ಲಿಯೂ ಗ್ರಾಮಗಳಲ್ಲಿಯೂ ಕಂಡುಬರುತ್ತಾರೆ. ಜಯಪುರಸಂಸ್ಥಾನದಲ್ಲಿ 'ನಾಗಾಜಮಾತ' ಎಂಬ ಪಂಗಡದವರು ಬಹುಸಂಖ್ಯೆಯವರು ಇರುತ್ತಾರೆ. ಆ ಸಾಧುಗಳು ಇತರ ದಾದುಪಂಥಿಗಳಂತೆ ಕಾವಿಯಬಟ್ಟೆಯನ್ನು ಉಡುವದಿಲ್ಲ; ಬಿಳಿಯ ಬಟ್ಟೆಗಳನ್ನೇ ಹಾಕಿಕೊಳ್ಳುತ್ತಾರೆ. ಇಷ್ಟೇ ಅಲ್ಲ, ವೀರಸ್ವಭಾವದವರಾಗಿ ಸೈನಿಕವೃತ್ತಿಯನ್ನು ಅವಲಂಬಿಸುತ್ತಾರೆ. **ವಿಚಾರ ಸಾಗರವೇ** ಮುಂತಾದ ಗ್ರಂಥಗಳ ಕರ್ತನಾದ ಸುಪ್ರಸಿದ್ಧ **ಸಾಧು ನಿಶ್ಚಲದಾಸನು** ಈ ಸಂಪ್ರದಾಯಕ್ಕೆ ಸೇರಿದಾತನು.

ದಾದುವಿಗೆ ಇಬ್ಬರು ಗಂಡುಮಕ್ಕಳೂ ಇಬ್ಬರು ಹೆಣ್ಣುಮಕ್ಕಳೂ ಇದ್ದರು. ಅವನ ನಿರ್ಯಾಣಾನಂತರದಲ್ಲಿ ಅವನ ಹಿರಿಯಮಗನಾಗ ಶ್ರೀಗರೀಬದಾಸನು ಅವನು ಗುರುಪೀಠದ ಗದ್ದುಗೆಯನ್ನೇರಿದನು.

ಹಿಂದಿಸಾಹಿತ್ಯಕ್ಕೆ ದಾದುವು ಮಾಡಿರುವ ಉಪಕಾರವು ಅಪಾರವಾಗಿರುತ್ತದೆ. ಆತನ ''ಬಾಣಿ'' ಎಂಬ ಗ್ರಂಥದಲ್ಲಿ ಸುಮಾರು 5000 ಪದ್ಯಗಳಿವೆ. ಸದ್ಗುರು, ಸ್ಮರಣ, ಮನಸ್ಸು, ತತ್ತ್ವ-ಮುಂತಾದ ವಿಷಯಗಳನ್ನೊಳಕೊಂಡ ಮೂವತ್ತೇಳು ಅಧ್ಯಾಯಗಳಿರುತ್ತವೆ. ಪದ್ಯಗಳು ಚಿತ್ತಾಕರ್ಷಕವಾಗಿವೆ; ಅವುಗಳನ್ನು ಭಕ್ತರು ಬೇರೆಬೇರೆಯ ರಾಗಾತಾಳಗಳಿಂದ ಭಜನೆಯಲ್ಲಿ ಹಾಡಿ ನಲಿಯುತ್ತಾರೆ. ದಾದುವಿನ ಮಕ್ಕಳೂ ಶಿಷ್ಯರೂ ಹಿಂದೀವಾಙ್ಮಯಕ್ಕೆ ಉತ್ತಮವಾದ ಮಹಾಗ್ರಂಥರಾಶಿಯನ್ನೇ

ಸೇರಿಸಿರುತ್ತಾರೆ. ದಾದುವು ಜಾತಿಯಲ್ಲಿ ಬ್ರಾಹ್ಮಣನಾದರೂ ತನ್ನ ಉತ್ತಮವಿಚಾರಗಳನ್ನು ಸಂಸ್ಕೃತಭಾಷೆಯಲ್ಲಿಡದೆ ದೇಶಭಾಷೆಯಲ್ಲಿಯೇ ಬರೆದು ತನ್ನ ಪಂಥದವರಿಗೂ ಮೇಲುಪಙ್ಕ್ತಿಯನ್ನು ಹಾಕಿಕೊಟ್ಟಿದ್ದು ಸಾಮಾನ್ಯಜನತೆಯ ಮೇಲೆ ಅವನಿಗಿದ್ದ ಪ್ರೀತಿಯ ಸೂಚಕವಾಗಿರುತ್ತದೆ. ಈ ಸಂಪ್ರದಾಯಕ್ಕೆ ಸೇರಿದ ನಿಶ್ಚಲದಾಸನು.

**ಬ್ರಹ್ಮರೂಪ ಹೈ ಬ್ರಹ್ಮವಿತ್ । ತಾಕೀ ವಾಣಿ ವೇದ ॥**
**ಭಾಷಾ ಅಥವಾ ಸಂಸ್ಕೃತ । ಕರತ ಭೇದ ಭ್ರಮಭೇದ ॥**

ಬ್ರಹ್ಮವನ್ನು ಬಲ್ಲವನು ಬ್ರಹ್ಮಸ್ವರೂಪನೇ ಆಗಿರುತ್ತಾನೆ, ಆತನ ವಾಣಿಯೇ ವೇದವು. ಅದು ಸಂಸ್ಕೃತವಾಗಿರಲಿ ದೇಶಭಾಷೆಯಾಗಿರಲಿ, ಅದು ಭೇದಭ್ರಮವನ್ನು ಕತ್ತರಿಸಿಹಾಕುತ್ತದೆ-ಎಂದು ಬರೆದಿರುತ್ತಾನೆ.

ದಾದು ದಯಾಲನ ವಿಚಾರಸರಣಿಯನ್ನು ತಿಳಿಯಬೇಕೆನ್ನುವವರು ಆತನ ''ಬಾಣಿ'' (ವಚನ) ಎಂಬ ಗ್ರಂಥವನ್ನು ನೋಡಬೇಕು. ದಾದುಪಂಥಿಯವರು ಈಚೆಗೆ ಈ ಗ್ರಂಥವನ್ನು ಬಹುಪೂಜ್ಯಬುದ್ಧಿಯಿಂದ ಪೂಜಿಸುತ್ತಿದಾರೆ; ತ್ರೈವರ್ಣಿಕರಿಗೆ ಮಾತ್ರ ಇದರಲ್ಲಿ ಅಧಿಕಾರವೆಂದು ಅವರಲ್ಲಿ ಅನೇಕರು ಹೇಳುತ್ತಿದಾರೆ. ಆದರೆ ಮೂಲದಲ್ಲಿ ಈ ಅಭಿಪ್ರಾಯವೇನೂ ಇರುವದಿಲ್ಲ. ದಾದುದಯಾಲನ ಕೆಲವು ವಚನಗಳ ಅಭಿಪ್ರಾಯವನ್ನು ಇಲ್ಲಿ ಕೊಟ್ಟು ಈ ಲೇಖನವನ್ನು ಇಲ್ಲಿಗೆ ಮುಗಿಸುತ್ತೇನೆ:

1. ಅಣ್ಣಗಳಿರ, ನನ್ನದು ಇಂಥ ಪಂಥವು; ಇದರಲ್ಲಿ ಎರಡು ಪಕ್ಷಗಳಿಲ್ಲ. ಇದು ಗಹನವಾದದ್ದು, ಒಂದೇ ಆಧಾರವುಳ್ಳದ್ದು, ಸಮದೃಷ್ಟಿಯಿಂದ ಕೂಡಿ ಸಹಜದಲ್ಲಿ ತಾನೇ ತನ್ನಲ್ಲಿ ವಿಚಾರಮಾಡತಕ್ಕದ್ದು ನಾನು ನೀನು, ನನ್ನದು – ಎಂಬ ಭೇದಬುದ್ಧಿಯು ಇದರಲ್ಲಿಲ್ಲ. ಯಾವ ವೈರಿಗಳೂ ಇಲ್ಲದ ನಿರಾಕಾರವಿಷಯವಿದು; ಕಾಮಕಲ್ಪನೆಯು ಒಂದಿಷ್ಟೂ ಇಲ್ಲ, ಪೂರ್ಣಬ್ರಹ್ಮವೊಂದೇ ಇಲ್ಲಿ ಪ್ರಿಯವಾಗಿರುವದು. ಈ ದಾರಿಯಲ್ಲಿಯೇ ದಾದುವು ಪಾರುಗಂಡನು. ಸಹಜಸ್ಥಿತಿಯನ್ನು ಪಡೆದನು.

2. ದಾದುವು ರಾಮನನ್ನು ಎಡೆಬಿಡದೆ ಭಜಿಸುತ್ತಿದ್ದನು. ಅತನು ಚೈತನ್ಯಾಂಶವನ್ನು ಸಾಕ್ಷಾತ್ಕರಿಸಿಕೊಂಡನು, ತನ್ನೊಳಗೇ ಇರುವ ಕನ್ನಡಿಯನ್ನು ಆಗಾಗ್ಗೆ ನೋಡಿಕೊಂಡನು.

3. ತುಪ್ಪವು ಹಾಲಿನಲ್ಲಿ ಸೇರಿಕೊಂದೇ ಇರುತ್ತದೆ, ಎಲ್ಲೆಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ; ಚೆನ್ನಾಗಿ ಕಡೆದುನೋಡಿ ತೆಗೆದುಕೊಂಡರೆ ಬೇಕಾದಷ್ಟು ಸಿಕ್ಕುವದು. ದಯಾಲುವಾದ ದೇವರು ಎಲ್ಲೆಲ್ಲಿಯೂ ತುಂಬಿರುತ್ತಾನೆ, ನಮ್ಮ ರೋಮರೋಮದಲ್ಲಿಯೂ ರಮಿಸುತ್ತಿದಾನೆ; ಅವನನ್ನೇ ಈ ಜನರು ದೂರವಿರುವನೆಂದು ತಿಳಿಯುತ್ತಾರೆ.

4. ಸದ್ಗುರುವು ಮನಸ್ಸೆಂಬ ಮಾಲೆಯನ್ನು ಪ್ರಾಣಕ್ಕೆ ಪೋಣಿಸಿಕೊಟ್ಟಿರುತ್ತಾನೆ: ಕೈಯಿಂದ ಸಹಾಯವಿಲ್ಲದೆ ಹಗಲೂ ರಾತ್ರೆಯೂ ಜಪಿಸಿದರೆ ಪರಮಜಪವಾಗುತ್ತದೆ. ಒಬ್ಬನೇ ಒಬ್ಬನು ಎಲ್ಲಾ ಮಾತುಗಳಿಗೂ ಮನಸ್ಸಿಗೂ ದೂರವಾಗಿರುವನು. ಆತನ ಸಂಗವನ್ನು ಮಾಡಿ ಸಹಜ ಸುರತಿಯನ್ನು ಪಡೆಯುಬೇಕು. ಒಂದೇ ಮೂಹೂರ್ತ ನಿರಂಜನ ರಾಮನ ಬಳಿಯಲ್ಲಿದ್ದರೆ ಸಾಕು, ಸಕಲಕರ್ಮವೂ ನಾಶವಾಗುವದೆಂದು ಕಂಡುಬರುತ್ತದೆ.

5. ಅಭಿಮಾನವನ್ನು ಬಿಟ್ಟು ಪಾಪರಹಿತವಾದದ್ದನ್ನು ಅರಿತುಕೊಳ್ಳಬೇಕು, ಪಾಪಶೂನ್ಯನಾದ ರಾಮನ ಸಂಗವನ್ನು ಮಾಡಿ ಆತನ ಸ್ಮರಣೆಯನ್ನೇ ಧಾರಾಕರವಾಗಿ ಮಾಡುತ್ತಿರಬೇಕು.

6. ಈಶ್ವರನ ಭಜನೆಯನ್ನು ಮಾಡಿದರೆ ರಾಗದ್ವೇಷಾದಿಗಳನ್ನು ಗೆದ್ದುಕೊಳ್ಳಬಹುದು. ಮನಸ್ಸಿನ ಪಾಪವಾಸನೆಗಳು ಕೂಡಲೆ ತೊಲಗುವವು. ಆತನ ಸ್ಮರಣೆಯು ನಿಂತರೆ ಮತ್ತೆ ಅವು ಹಿಂದಕ್ಕೆ ಬರುವವು.

7. ಎಲ್ಲಿ ದಾದುನಿರುವನೋ ಅಲ್ಲಿ ನಾನಿಲ್ಲ ನಾನಿರುವಲ್ಲಿ ರಾಮನಿಲ್ಲ; ಈ ಮನೆಯ (ಶರೀರದ ಹೃದಯದ) ಒಂದು ವಿಶೇಷವೇನೆಂದರೆ ಇದರಲ್ಲಿ ಇಬ್ಬರಿಗೂ ಸ್ಥಾನವಿರುವದಿಲ್ಲ.

8. ರಾಮನು ಹೇಗೆ ಅಪಾರನೋ ಭಕ್ತಿಯೂ ಹಾಗೆ ಅಪಾರವೇ; ಇವೆರಡಕ್ಕೂ ಮಿತಿಯಿಲ್ಲ. ಇದೇ ಎಲ್ಲರೂ ಹೇಳುವದರ ಸಾರವು. ರಾಮನು

ಹೇಗೆ ಅವರ್ಣನೀಯನೋ ಹಾಗೆ ಭಕ್ತಿಯೂ ಅವರ್ಣನೀಯವಾಗಿರುವದು; ಸಾವಿರ ಮುಖದ ಆದಿಶೇಷನು ಹೇಳಿದರೂ ಇವೆರಡಕ್ಕೂ ಮಿತಿಯಿರುವದಿಲ್ಲ. ರಾಮನು ಹೇಗೆ ನಿರ್ಗುಣನೋ ಹಾಗೆ ಭಕ್ತಿಯೂ ನಿರಂಜನಾಗಿರುವದೆಂದು ತಿಳಿಯಿರಿ; ಇವೆರಡಕ್ಕೂ ಮಿತಿಯಿಲ್ಲವೆಂದು ಸಂತರು ಅಪ್ಪಣೆಕೊಡಿಸಿರುತ್ತಾರೆ. ರಾಮನು ಹೇಗೆ ಪೂರ್ಣನೋ ಭಕ್ತಿಯೂ ಹಾಗೆಯೇ ಪೂರ್ಣ, ಇವೆರಡಕ್ಕೂ ಮಿತಿಯಿಲ್ಲವೆಂಬುದರಲ್ಲಿ ಸಂಶಯವಿಲ್ಲ.

★★★★★

# ಮಣಿದಾಸ

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಜಗನ್ನಾಥಪುರಿಯಲ್ಲಿ ಮಣಿದಾಸನೆಂಬ ಒಬ್ಬ ಹೂವಾಡಿಗನಿದ್ದನು. ಅವನು ಹೂವಿನ ಮಾಲೆಗಳನ್ನು ಮಾರಿ ಕುಟುಂಬಭರಣವನ್ನು ಮಾಡಿಕೊಂಡಿದ್ದನು. ತನ್ನ ಅಲ್ಪವಾದ ಆದಾಯದಲ್ಲಿಯೇ ದಾನಧರ್ಮಪರೋಪಕಾರಗಳನ್ನು ಮಾಡುತ್ತಾ ಜೀವಿತವನ್ನು ಭಗವಂತನ ಚಿಂತೆಯಲ್ಲಿಯೇ ಕಳೆಯುತ್ತಿದ್ದದ್ದರಿಂದ ಅವನ ಬಾಳುವೆಯು ಸುಖವಾಗಿಯೇ ಸಾಗುತ್ತಿತ್ತು.

ಹೀಗಿರಲು ಈಶ್ವರಸಂಕಲ್ಪದಿಂದ ಅವನ ಹೆಂಡತಿಮಕ್ಕಳೆಲ್ಲ ಒಬ್ಬೊಬ್ಬರಾಗಿ ಪರಲೋಕವನ್ನೈದಿದರು. ಮಣಿದಾಸನು ಎದೆಗುಂದದೆ ಅದೂ ಒಂದು ಬಗೆಯ ಈಶ್ವರನ ಆಶೀರ್ವಾದವೆಂದೇ ಬಗೆದನು. ''ನನ್ನ ಭಾರವನ್ನು ಕಡಿಮೆಮಾಡಿ ತನ್ನ ಕಡೆಗೇ ನನ್ನನ್ನು ಎಳೆದುಕೊಂಡನಲ್ಲ! ಎಂಥ ದಯಾವಂತನೀ ಪ್ರಭುವು!'' ಎಂದು ಸಂತತವಾಗಿ ಪರಮೇಶ್ವರನ ಚಿಂತೆಯಲ್ಲಿ ಕಾಲವನ್ನು ಕಳೆಯುವದಕ್ಕಾರಂಭಿಸಿದನು.

ಬೆಳಗ್ಗೆ ಏಳುತ್ತಲೂ ಸ್ನಾನಮಾಡಿ ಸ್ವಲ್ಪಹೊತ್ತು ಧ್ಯಾನಮಾಡಿದ ಬಳಿಕ ಕೈಯಲ್ಲಿ ತಾಳವನ್ನು ಹಿಡಿದುಕೊಂಡು ಜಗನ್ನಾಥದೇವಾಲಯದ ಸಿಂಹದ್ವಾರದ ಬಳಿಗೆ ಬಂದು ನಿಲ್ಲುತ್ತಿದ್ದನು. ಅಲ್ಲಿ ಸ್ವಲ್ಪಹೊತ್ತು ನಾಮಕೀರ್ತನೆಮಾಡುತ್ತಲೂ ಅದೇ ಭಾವದಲ್ಲಿ ಮುಳುಗಿ ಕುಣಿಯುತ್ತಲೂ ಇದ್ದು ದ್ವಾರವನ್ನು ತೆಗೆದ ಒಡನೆ

ಒಳಕ್ಕೆ ಬಂದು ಗರುಡಗಂಬದ ಹಿಂದೆ ನಿಂತುಕೊಂಡು ಭಗವಂತನ ದರ್ಶನವನ್ನು ಮಾಡುವದು, ಸ್ತೋತ್ರಮಾಡುವದು, ಕೀರ್ತನೆಮಾಡುವದು, ಕುಣಿಯುವದು- ಹೀಗೆ ಆನಂದದಿಂದ ಕಳೆಯುತ್ತಿದ್ದನು. ಕುಣಿಯುತ್ತ ಕುಣಿಯುತ್ತ ಮೂರ್ತಿಯ ಬಳಿಗೇ ಗಂಧದಮರ ಇಟ್ಟಿರುತ್ತಾರಲ್ಲ ಅಲ್ಲಿಯವರೆಗೂ - ಬಂದುಬಿಡೂತ್ತಿದ್ದನು. ಆಮೇಲೆ ಹಿಂದಕ್ಕೆ ಗರುಡಗಂಬದ ಕಡೆಗೆ ಹೋಗುತ್ತಿದ್ದನು. ಆಗ ಅವನಲ್ಲಿ ಅಷ್ಟಸಾತ್ತ್ವಿಕಭಾವಗಳೂ ಹೊರಸೂಸುತ್ತಿದ್ದವು. ಯಾರಾದರೂ ಮಹಾಪ್ರಸಾಧ ವನ್ನು ಕೂಟ್ಟರೆ ಸೇವಿಸುತ್ತಿದ್ದನು ಇಲ್ಲದಿದ್ದರೆ ಹಸಿವುಬಾಯಾರಿಕೆಗಳನ್ನೂ ಲೆಕ್ಕಿಸದೆ ಪ್ರಭುವಿನ ಚಿಂತನೆಯಲ್ಲಿಯೇ ಆನಂದದಿಂದ ಕಾಲಯಾಪನೆಮಾಡುತ್ತಿದ್ದನು!

ದೇವಾಲಯದ ಮಂಟಪದ ಒಂದು ಕಡೆಯಲ್ಲಿನಿತ್ಯವೂ ಪುರಾಣವಾಗುತ್ತಿತ್ತು. ಶ್ರವಣಕ್ಕೆ ಬಹಳ ಜನ ಹೆಂಗಸರೂ ಗಂಡಸರೂ ನೆರೆಯುತ್ತಿದ್ದರು. ಪುರಾಣವನ್ನು ಹೇಳುತ್ತಿದ್ದ ಪಂಡಿತನು ದೊಡ್ಡ ವಿದ್ವಾಂಸನಾದುದರಿಂದ ಒಳ್ಳೊಳ್ಳೆಯ ದೃಷ್ಟಾಂತಗಳನ್ನು ಕೊಟ್ಟು ಅರ್ಥವಿವರಣೆಮಾಡಿ ಉತ್ತಮರೀತಿಯಲ್ಲಿ ಜನರ ಮನಸ್ಸನ್ನು ಸೆಳೆಯುತ್ತಿದ್ದನು. ಒಂದುದಿನ ಪುರಾಣಪ್ರವಚನವು ಭರದಿಂದ ಸಾಗಿತ್ತು; ಆ ಸಮಯಕ್ಕೆ ''ರಾಮಕೃಷ್ಣಹರಿ!'' ಎಂದು ತಾಳವನ್ನು ಹಾಕಿಕೊಂಡು ಮಣಿದಾಸನು ಅಲ್ಲಿಗೆ ಬಂದನು. ಅವನಿಗೆ ಜನರು ಇಲ್ಲೇಕೆ ಹೀಗೆ ನೆರೆದಿದಾರೆ, ಏನುಮಾಡುತ್ತಿದ್ದರೆ- ಎಂಬುದೊಂದೂ ಮನಸ್ಸಿಗೆ ಹತ್ತಲಿಲ್ಲ, ಶ್ರೀಹರಿಯ ನಾಮಸ್ಮರಣೆಯಲ್ಲಿಯೇ ಅವನ ಚಿತ್ತವು ನೆಟ್ಟುಕೊಂಡಿತ್ತು! ಪುರಾಣವನ್ನು ಹೇಳುತ್ತಿದ್ದ ಪಂಡಿತಮಹಾಶಯನಿಗೆ ಅವನ ಈ ನಡತೆಯು ಸರಿಬೀಳಲಿಲ್ಲ. ಆತನು ತನ್ನ ಕಥೆಯನ್ನು ಅಷ್ಟಕ್ಕೇ ನಿಲ್ಲಿಸಿಬಿಟ್ಟನು. 'ಇನ್ನೂ ಹುಚ್ಚನಂತೆ ನಾಮಕೀರ್ತನೆಯನ್ನು ಮಾಡಿಕೊಂಡು ನರ್ತನೆಮಾಡುತ್ತಿದ್ದ ಮಣಿದಾಸನ ಮೇಲೆ ಅವನೂ ಕಥೆಯನ್ನು ಕೇಳುವದಕ್ಕೆ ಬಂದಿದ್ದವರೂ ರೇಗಿಬಿದ್ದು ಮನಬಂದಂತೆ ಅವನನು ಬಯ್ದರು, ಹೊಡೆದರು!'

ಇಷ್ಟರಲ್ಲಿ ಮಣಿದಾಸನಿಗೆ ಹೊರಗಿನ ಅರಿವು ಬಂತು, ಅವನಿಗೆ ಎಲ್ಲವೂ ತಿಳಿಯಿತು. ಅವನು ಒಂದು ಮಾತನ್ನೂ ಆಡದೆ ಅಲ್ಲಿಂದ ಹೊರಟು ಯಾವದೋ ಒಂದು ಮಠಕ್ಕೆ ಹೋಗಿ ಬಿದ್ದುಕೊಂಡನು. ''ಸ್ವಾಮಿಯ ಎದುರಿಗೇ ಆತನ ಕಥೆಯನ್ನು ಹೇಳುವವರೂ ಕೇಳುವವರೂ ನನ್ನನ್ನು ಹೊಡೆದರೆ ಮಾಡುವದೇನು? ಇದೇ ಸ್ವಾಮಿಯ ಚಿತ್ತಕ್ಕೆ ಬಂದಿರಬೇಕು!'' ಎಂದುಕೊಂಡನು.

ಸಾಯಂಕಾಲವಾಯಿತು ಸಂಜೆಯ ಮಂಗಳಾರತಿಯಾಯಿತು. ಮಂದಿರದ ಸೇವೆಯು ಪೂರ್ತಿಯಾಯಿತು. ಎಲ್ಲರೂ ಹೊರೆಗೆ ಹೋದರೆಂದು ತಿಳಿದ ಬಳಿಕ ಮಹಾದ್ವಾರವನ್ನು ಮುಚ್ಚಿಬಿಟ್ಟರು! ಆದರೆ ಮಣಿದಾಸನು ಮಾತ್ರ ಅನ್ನನೀರಿಲ್ಲದೆ ಮಠದಲ್ಲಿ ಬಿದ್ದಿದ್ದಾನೆ! ಇದನ್ನು ನೋಡಿ ಜಗನ್ನಾಥನು ಹೇಗೆ ಸಹಿಸುವನು? ಪುರಿಯ ರಾಜನ ಕನಸಿನಲ್ಲಿ ''ಭೂಪತಿ, ನಿನ್ನ ರಾಜ್ಯ ಭಾವವು ಎಂಥ ಕುರುಡು ಸರಕಾರವಾಗಿದೆ! ನಿನ್ನ ರಾಜ್ಯದಲ್ಲಿ ನನ್ನ ಮಂದಿರದಲ್ಲಿ ನಿನ್ನ ಪುರಾಣವಾಚಕನು ನನ್ನ ಪರಮ ಭಕ್ತ ಮಣಿದಾಸನನ್ನು ಹೊಡೆದು ಬಡಿದು ಹೊರಗೆ ಹಾಕಿರುತ್ತಾನೆ. ನೀನು ಸ್ವತಃ ಹೋಗಿ ಇನ್ನು ಮೇಲೆ ಇಂಥ ಅತ್ಯಾಚಾರಗಳು ನಡೆಯದಂತೆ ನೋಡಿಕೊ! ಹಾಗಾದರೆ ನನಗೆ ಸಂತೋಷವಾಗುವದು. ನಿನ್ನ ರಾಜ್ಯಕ್ಕೂ ಕ್ಷೇಮವಾಗುವದು!'' ಎಂದು ನುಡಿದನು. ಮಣಿದಾಸನ ಬಳಿಗೆ ಹೋಗಿ ಅವನನ್ನು ಮೈದಡವಿ ''ಅಪ್ಪಾ, ಮಣಿದಾಸ! ಹಸಿವಿನಿಂದೇಕೆ ಇರುವೆ! ಇಗೋ, ನಿನಗಾಗಿ ನಾನೂ ಉಪವಾಸವಿರಬೇಕಾಯಿತಲ್ಲ! ಏಳು, ಬೇಗನೆ ಭೋಜನಮಾಡು?'' ಎಂದು ಕೂಗಿದನು. ಮಣಿದಾಸನು ದಿಗ್ಗನೆ ಎದ್ದು ನೋಡುತ್ತಾನೆ, ಮಹಾಪ್ರಸಾದದ ತಪ್ಪಲೆಯೇ ಬಳಿಯಲ್ಲಿದೆ!

ಇಷ್ಟುಹೊತ್ತಿಗೆ ಶ್ರದ್ಧಾಲುವಾದ ಪುರೀನರೇಶನು ಜಗನ್ನಾಥನ ಅಪ್ಪಣೆಯಂತೆ ಕುದುರೆಯಮೇಲೆ ಕುಳಿತು ನಾಗಾಲೋಟದ ಸವಾರಿಯಿಂದ ಮಂದಿರಕ್ಕೆ ಬಂದು ಭಕ್ತಮಣಿದಾಸನಿದ್ದಲ್ಲಿಗೆ ತಲುಪಿದಾನೆ! ಅವನು ಎಚ್ಚತ್ತು ಮೇಲಕ್ಕೆದ್ದ ಮಣಿದಾಸನನ್ನು ಕುರಿತು ''ಭಕ್ತವರ! ನೀನೇ ಧನ್ಯನು! ಭಗವಂತನ ಪ್ರೇಮವಿಲ್ಲದ ಮೇಲುಜಾತಿ ಏತಕ್ಕೆ? ಪುರಾಣಶ್ರವಣವನ್ನು ಮಾಡುಸುತ್ತಿದ್ದ ಬ್ರಾಹ್ಮಣನ ಕಥಾವಾಚನಕ್ಕಿಂತಲೂ ಪ್ರಭುವಿಗೆ ನಿನ್ನ ಪ್ರೇಮಯುಕ್ತ ನಾಮಕೀರ್ತನೆಯೇ ಹೆಚ್ಚು ಮೆಚ್ಚಾಗಿರುತ್ತದೆ. ಏಳು, ನನ್ನೆದರಿಗೆ ಸ್ವಲ್ಪಹೊತ್ತು ನಿನ್ನ ಭಜನವನ್ನು ನೇತ್ರಾನಂದವನ್ನೂ ಕರ್ಣಾನಂದವನ್ನೂ ಮಾಡಿಸು!'' ಎಂದು ಬೇಡಿಕೊಂಡನು.

ಅಂದಿನಿಂದ ಪುರಾಣವಾಚನವು ಅಲ್ಲಿ ಆಗಕೂಡದೆಂದೂ ನೈಋತ್ಯದಿಕ್ಕಿನಲ್ಲಿರುವ ಶ್ರೀಲಕ್ಷ್ಮೀದೇವಿಯ ಮಂದಿರದಲ್ಲಿ ಅದು ನಡೆಯಬೇಕೆಂದೂ ರಾಜಾಜ್ಞೆಯಾಯಿತು. ಈಗಲೂ ಅಲ್ಲಿಯೇ ಪುರಾಣವು ನಡೆಯುತ್ತಿದೆ. ಸಭಾಮಂಟಪವು ಮಣಿದಾಸನಂಥ ಭಕ್ತವರನ ಪ್ರೇಮಪೂರಿತ ಕೀರ್ತನನೃತ್ಯಗಳಿಗೆ ಮೀಸಲಾಗಿರಬೇಕೆಂದು ನಿಶ್ಚಿತವಾಯಿತು.

ಮಣಿದಾಸನು ಬಹುಕಾಲದವರೆಗೆ ತನ್ನ ಕೀರ್ತನದಿಂದ ಜಗನ್ನಾಥಪುರಿಯ ನರನಾರಿಯರಿಗೆ ಆನಂದವನ್ನು ಕೊಡುತ್ತಿದ್ದು ಕೊನೆಗೆ ಆ ಆನಂದದಿಂದಲೇ ತನ್ನ ಜೀವನವನ್ನು ಸಮಾಪ್ತಿಗೈದನು.

★★★★★

# ಚಮ್ಮಾರ ರಾಮದಾಸ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಗೋದಾವರೀತೀರದಲ್ಲಿ ಕನಕಾವತಿಯೆಂಬ ನಗರಿಯೊಂದಿತ್ತು. ಅಲ್ಲಿ ರಾಮದಾಸನೆಂಬ ಚಮ್ಮಾರನೊಬ್ಬನಿದ್ದನು. ಚಮ್ಮಾರ ಸಾಧು ರೈದಾಸನು ಸುಪ್ರಸಿದ್ಧನಷ್ಟೆ; ಭಕ್ತಿಯಲ್ಲಿ ನಮ್ಮ ರಾಮದಾಸನು ಒಂದಿಷ್ಟೂ ಅವನಿಗೆ ಕಡಿಮೆಯಾಗಿರಲಿಲ್ಲ.

ಮನೆಯಲ್ಲಿ ರಾಮದಾಸ, ಅವನ ಹೆಂಡತಿ ಮಾಲಿ, ಒಬ್ಬ ಮಗ – ಹೀಗೆ ಮೂರು ಜನರಿದ್ದರು. ಗಂಡಹೆಂಡಿರಿಬ್ಬರೂ ಸೇರಿ ಜೋಡುಹೊಲೆಯುವದು; ರಾಮದಾಸನು ಅದನ್ನು ಪೇಟೆಯಲ್ಲಿ ಮಾರಿಬರುವದು, ತಮ್ಮ ಮೂರು ಜನರ ಹೊಟ್ಟೆಗೆ ಆಗಿ ಉಳಿದದ್ದನ್ನು ಅತಿಥಿಅಭ್ಯಾಗತರಿಗೆ ದಾನಮಾಡುವದು – ಇಷ್ಟೇ ಅವರ ದಿನಚರ್ಯೆಯಾಗಿರುತ್ತಿತ್ತು. ''ಸಾಲಮಾಡಬೇಡ ಸಾಲವೆನಬೇಡ, ನಾಳೆಗಿಡಬೇಡ'' ಎಂಬ ನೀತಿಯನ್ನು ರಾಮದಾಸನು ಕೃತಿಯಲ್ಲಿ ತೋರಿಸುತ್ತಿದ್ದನು.

ರಾಮದಾಸನಿಗೆ ಕೀರ್ತನೆಯಲ್ಲಿ ಬಹಳ ಪ್ರೀತಿ. ಆಗಾಗ್ಗೆ ಹರಿಕೀರ್ತನೆಯನ್ನು ಕೇಳುವದಕ್ಕೆ ಹೋಗಿಬಿಡುತ್ತಿದ್ದನು. ತಾನೂ ಮನೆಯಲ್ಲಿ ಪ್ರೇಮ ಪೂರ್ವಕವಾಗಿ ಕೀರ್ತನೆಯನ್ನು ಮಾಡುತ್ತಿದ್ದನು. ಒಂದು ಕೀರ್ತನೆಯಲ್ಲಿ ದಾಸರು ಹೇಳಿದ ''**ನಾನೂ ಹರಿ, ನೀನೂ ಹರಿ, ಜಗವೆಲ್ಲವು ಹರಿ**'' ಎಂಬರ್ಥದ ಪದಭಾಗವೊಂದು ಅವನ ಮನಸ್ಸಿಗೆ ಬಲು ಸೊಗಸಾಗಿ ತೋರಿತು. ಅಂದಿನಿಂದ ಅದನ್ನೇ ಅವನು ಹಾಡಿಕೊಂಡು ಕೆಲಸಮಾಡುತ್ತಿದ್ದನು, ಅದರ ಅಭಿಪ್ರಾಯವು ಅವನ ಹೃದಯದೊಳಗೆ ಹೊಕ್ಕು ಉತ್ತಮಪರಿಣಾಮವನ್ನುಂಟುಮಾಡಿತು. ತಾನು

ನಿಜವಾಗಿಯೂ ಸರ್ವವ್ಯಾಪಿಯಾದ ಶ್ರೀಹರಿಯ ಆಶ್ರಿತನು ಎಂಬ ಅರಿವಿನಿಂದ ಅವನು ಆನಂದದಿಂದ ಸಂಸಾರವನ್ನು ಸಾಗಿಸುತ್ತಿದ್ದನು.

ಒಂದು ದಿನ ಒಬ್ಬ ಕಳ್ಳನು ಒಂದು ಸುಂದರನು ಲಕ್ಷಣವಾದ ಶಾಲಗ್ರಾಮ ಮೂರ್ತಿಯನ್ನು ಕದ್ದು ಕೊಂಡು ಬಂದಿದ್ದನು. ಆದರೆ ರಾಮದಾಸನ ಮನೆಯ ಒಳಗೆ ಬರುತ್ತಲೂ ಅವನಿಗೆ ಒಂದು ಈಶ್ವರಪ್ರೇರಣೆಯಾಯಿತು. ಅವನು ''ಅಣ್ಣ, ಈ ದಿವ್ಯಮೂರ್ತಿಯನ್ನು ತೆಗೆದುಕೊಂಡು ಒಂದು ಜೊತೆ ಜೋಡನ್ನು ಕೊಡುತ್ತಿಯ?'' ಎಂದು ಕೇಳಿದನು. ರಾಮದಾಸನಿಗೆ ಹೊರಗಿನ ಭಾವವೇ ಇರಲಿಲ್ಲ; ಅವನು 'ನಾನೂ ಹರಿ, ನೀನೂ ಹರಿ, ಜಗವೆಲ್ಲವು ಹರಿ!' ಎಂದು ಹಾಡಿಕೊಂಡು ಭಗವಂತನ ಗಾನದಲ್ಲಿ ಲೀನವಾಗಿಬಿಟ್ಟಿದ್ದನು. ಅರೆಯೆಚ್ಚರದಿಂದ ಇವನು ಯಾರೋ ಜೋಡನ್ನು ಖರೀದಿಮಾಡುವದಕ್ಕೆ ಬಂದಿರಬೇಕೆಂದು ಅವನ ಮುಂದೆ ಒಂದು ಜೊತೆ ಜೋಡನ್ನಿಟ್ಟನು; ಕಳ್ಳನು ತಾನು ತಂದಿದ್ದ ಮೂರ್ತಿಯನ್ನು ಅಲ್ಲಿಟ್ಟು ಜೋಡನ್ನು ತೆಗೆದುಕೊಂಡು ಸಂತೋಷದಿಂದ ಹೊರಟುಹೋದನು. ರಾಮದಾಸನಿಗೆ ಜೋಡಿನ ಖರೀದಿ ಬಂತೆ, ಇಲ್ಲವೆ? – ಎಂಬ ಯೋಚನೆಯೇ ಹತ್ತಲಿಲ್ಲ.

ಅಲ್ಲಿಂದ ಮುಂದೆ ಒಂದು ದಿನ ಒಬ್ಬ ಬ್ರಾಹ್ಮಣನು ಆಕಡೆ ಬಂದನು. ರಾಮದಾಸನು ಮೂರ್ತಿಯನ್ನು ನೆಲದಮೇಲೆ ಇಟ್ಟುಕೊಂಡು ನೀರುಹಾಕಿ ತನ್ನ ಆಯುಧಗಳನ್ನು ಸಾಣೆಹಿಡಿಯುವದು, ಚರ್ಮವನ್ನು ಅದರ ಮೇಲೆ ಕತ್ತರಿಸುವದು, ಹೊಲೆಯುವದು – ಹೀಗೆಲ್ಲ ಮಾಡುತ್ತಾ ತನ್ನ ನಿತ್ಯಗಟ್ಟಲೆಯ ಪದ್ಯವನ್ನು ಹಾಡಿಕೊಳ್ಳುತ್ತಿದ್ದನು, ಬ್ರಾಹ್ಮಣನು 'ಅಯ್ಯೋ! ಮಂಗನ ಕೈಯಲ್ಲಿ ಮಾಣಿಕ್ಯವು ಸಿಕ್ಕಂತಾಯಿತಲ್ಲ!' ಎಂದುಕೊಂಡು ಅಪ್ಪ! ಆ ಕಲ್ಲನ್ನು ನನಗೆ ಕೊಡುತ್ತೀಯ? ಇದಕ್ಕಾಗಿ ಎಂಟುಹತ್ತು ರೂಪಾಯಿಬೇಕಾದರೂ ಕೊಡುತ್ತೇನೆ' ಎಂದು ಕೇಳಿದನು, ರಾಮದಾಸನು ಕೂಡಲೆ ಬ್ರಾಹ್ಮಣನಿಗೆ ಅದನ್ನು ಕೊಟ್ಟು 'ಸ್ವಾಮಿ, ಈ ಕಲ್ಲೇನೋ ನನಗೆ ತುಂಬ ಉಪಯೋಗಕರವಾಗಿದೆ; ಆದರೆ ತಮಗೆ ಅದರ ಮೇಲೆ ಅಷ್ಟೊಂದು ಪ್ರೀತಿಯಾಗಿದ್ದರೆ ಅಗತ್ಯವಾಗಿ ತೆಗೆದುಕೊಂಡು ಹೋಗಿರಿ. ನನಗೆ ದುಡ್ಡು ಏನೂಬೇಡ. ನಮ್ಮ ಮೂರು ಜನರಿಗಾಗುವಷ್ಟು ಭಗವಂತನು ದಿನದಿನವೂ ಕೊಡುತ್ತಲೇ ಇರುತ್ತಾನೆ: ಇದರ ಮೇಲೆ ಹಣವೇತಕ್ಕೆ? ಎಂದನು.

ಬ್ರಾಹ್ಮಣನು ಸಂತೋಷದಿಂದ ಮೂರ್ತಿಯನ್ನು ಮನೆಗೆ ತಂದು ಸಂಸ್ಕಾರವನ್ನು ಮಾಡಿ ವಿಧಿವತ್ತಾಗಿ ಅದನ್ನು ಪೂಜಿಸಲಾರಂಭಿಸಿದನು. ಪ್ರತಿದಿನವೂ ಪೂಜೆಯ ಕೊನೆಯಲ್ಲಿ 'ದೇವ, ನನಗೆ ರೂಪವನ್ನು ಕೊಡು, ಬಲವನ್ನು ಕೊಡು, ಹಣವನ್ನು ಕೊಡು, ನನ್ನ ಶತ್ರುಗಳನ್ನು ಸಂಹರಿಸು' ಎಂದು ಬೇಡಿಕೊಳ್ಳುತ್ತಿದ್ದನು. ಒಂದು ದಿನ ಅವನಿಗೆ ಸ್ವಪ್ನದಲ್ಲಿ ಭಗವಂತನು ಎಲಾ ಬ್ರಾಹ್ಮಣ ನಿನಗೆ ಬೇಕಾದದ್ದನ್ನು ಕೊಟ್ಟುಬಿಡುತ್ತೇನೆ, ನಾಳೆಯ ದಿನವೇ ನನ್ನನ್ನು ಚಮ್ಮಾರ ರಾಮದಾಸನ ಮನೆಗೆ ಸಾಗಿಸಿಬಿಡು. ಸಕಾಮವಾಗಿ ನೀನು ಮಾಡುವ ಶಾಸ್ತ್ರೀಯಾರ್ಚಣೆಗಿಂತಲೂ ಭಾವಭಕ್ತಿಯಿಂದ ಅವನು ನನಗೆ ಮಾಡುತ್ತಿದ್ದ ಅಪಚಾರಗಳೇ ಷೋಡಶೋಪಚಾರಗಳಾಗಿ ಹೆಚ್ಚು ಮೆಚ್ಚಾಗಿದ್ದವು. ಸಾತ್ವಿಕಭಕ್ತನಾದ ಆ ಚಮ್ಮಾರನ ಮನೆಯೇ ನನಗೆ ಹೆಚ್ಚು ಪ್ರಿಯವಾಗಿದೆ ಎಂದು ನುಡಿದನು.

ಬ್ರಾಹ್ಮಣನು ಬೆಳಗ್ಗೆ ಎಚ್ಚರವಾಗುತ್ತಲೂ ಬಹುವಾಗಿ ಅಂಜಿಕೊಂಡು ತನ್ನ ನಿತ್ಯಾಹ್ನಿಕವನ್ನು ಕೂಡ ಬಿಟ್ಟು ಆ ಸಾಲಗ್ರಾಮಮೂರ್ತಿಯನ್ನು ಒಂದು ಬಟ್ಟೆಯಲ್ಲಿ ಸುತ್ತಿಕೊಂಡು ನೆಟ್ಟಗೆ ರಾಮದಾಸನು ಮನೆಗೆ ಬಂದನು. ಆಗಲೂ ರಾಮದಾಸನು ಎಂದಿನಂತೆ '**ನಾನೂ ಹರಿ, ನೀನೂ ಹರಿ, ಜಗವೆಲ್ಲವು ಹರಿ!**' ಎಂದು ಹೇಳಿಕೊಳ್ಳುತ್ತಾ ಕಣ್ಣುಗಳಿಂದ ನೀರುಸುರಿಸುತ್ತಾ ಇದಾನೆ! ಇದನ್ನು ಕಂಡು ಬ್ರಾಹ್ಮಣನು ರಾಮದಾಸನೆ! ನೀನು ಧನ್ಯ! ನಿನ್ನ ತಂದೆತಾಯಿಗಳು ಧನ್ಯರು! ನೀನು ಭಗವಂತನನ್ನು ವಶಮಾಡಿಕೊಂಡಿರುವೆ ಇಗೋ ನಿನ್ನ ಮೂರ್ತಿ, ಇದನ್ನು ಸಾಮಾನ್ಯವಾದ ಕಲ್ಲೆಂದು ಮಾತ್ರ ಇನ್ನುಮೇಲೆ ಭಾವಿಸಿಬೇಡ! ಇದು ವಿಶ್ವ ವ್ಯಾಪಕನೂ ಸರ್ವಾತ್ಮಯನೂ ತ್ರಿಭುವನೇಶ್ವರನೂ ಆದ ಶ್ರೀಹರಿಯ ಪ್ರತಿಮೆಯು ಇದನ್ನು ನೀನು ಭಕ್ತಿಯಿಂದ ಪೂಜೆಮಾಡು. ನಿನ್ನ ಸರಳನಿಸ್ವಾರ್ಥಭಾವದಿಂದ ಪರಮೇಶ್ವರನು ನಿನ್ನಲ್ಲಿ ಬಹಳ ಪ್ರಸನ್ನನಾಗಿರುತ್ತಾನೆ. ಇದರ ಪೂಜೆಯಿಂದ ನಿನಗೆ ಆತನ ಸಾಕ್ಷಾದರ್ಶನವೇ ಆಗುವದು' ಎಂದು ಹೇಳಿ ಹೊರಟುಹೋದನು.

ಇತ್ತ ರಾಮದಾಸನಿಗೆ ಒಂದು ಬಗೆಯ ದಿವ್ಯಜ್ಞಾನವು ಉತ್ಪನವಾಯಿತು. 'ಏನು! ಇದು ಶ್ರೀಭಗವಂತನ ಮೂರ್ತಿಯೆ! ಭಗವಂತ! ನಾನು ಅತಿದೀನನು, ಹೀನನು, ಅಜ್ಞಾನಿಯು, ಅನಾಚಾರಿಯು, ಪತಿತನು ಇಂಥ ನನ್ನಲ್ಲಿ ನಿನಗೆ ಹೇಗೆ ಕೃಪೆಯುಂಟಾಯಿತು! ನಾನು ನಿನ್ನನ್ನು ಹೇಗೆ ಪೂಜಿಸಲಿ? ಅಥವಾ ನೀನು ನಿಜವಾಗಿಯೂ ದೀನಬಂಧುವು, ಪತಿತಪಾವನನು, ದಯಾಸಾಗರನು;

ಆದ್ದರಿಂದಲೇ ಈ ಅವಿವೇಕಿಯಮೇಲೆ ಇಂಥ ಅನುಗ್ರಹವನ್ನು ಮಾಡಿರುವೆ' ಎಂದು ಬಗೆಬಗೆಯಾಗಿ ಸ್ತೋತ್ರಮಾಡುತ್ತಾ ಆ ಮೂರ್ತಿಯನ್ನು ಒಂದು ಆಸನದಮೇಲೆ ಕುಳ್ಳಿರಿಸಿ ಪತ್ನೀ ಸಮೇತನಾಗಿ ಭಕ್ತಿಯಿಂದ ಪೂಜಿಸುವದು, ಗಾನಮಾಡುವದು, ನರ್ತನಮಾಡುವದು- ಹೀಗೆ ಭಗವಂತನ ಸೇವೆಯಲ್ಲಿಯೆ ಮಗ್ನನಾಗುತ್ತಾ ಬಂದನು.

ಬರುತ್ತಬರುತ್ತಾ ರಾಮದಾಸನಿಗೆ ಭಗವಂತನ ದರ್ಶನವನ್ನು ಮಾಡಿಕೊಳ್ಳಬೇಕೆಂಬ ಇಚ್ಛೆ ಬಲವಾಯಿತು. ಅವನಿಗೆ ವ್ಯವಹಾರದಲ್ಲಿ ಅಭಿರುಚಿ ತಪ್ಪಿ ಹೋಯಿತು. ಪ್ರೇಮಾವೇಶದಿಂದ ನಗುವದು, ಅಳುವದು, ಹಾಡುವದು, ನಾಮಕೀರ್ತನಮಾಡುವದು, ಕುಣಿಯುವದು - ಇವೇ ಅವನ ಸ್ವಭಾವವಾಗಿ ಬಿಟ್ಟಿತು. 'ಪ್ರಭುವೆ, ಎಂದಿಗೆ ನಿನ್ನ ದರ್ಶನವಾದೀತು?' ಎಂದು ಅದನು ಉತ್ಕಂಠತೆಯಿಂದ ಕೂಗಿಕೊಳ್ಳಲಾರಂಭಿಸಿದನು!

ಒಂದುದಿನ ಭಗವಂತನು ಒಬ್ಬ ವೃದ್ಧಬ್ರಾಹ್ಮಣನ ವೇಷದಿಂದ ಇವನ ಬಳಿಗೆ ಬಂದು 'ಅಯ್ಯ, ಕೆಲಸಕಾರ್ಯಗಳನ್ನು ಬಿಟ್ಟು ಹೀಗೇಕೆ ಹುಚ್ಚನಂತೆ ಆಡುತ್ತಿರುವೆ? ರಾತ್ರಿಯೂ ಹಗಲೂ ಯಾವಾಗಲೂ ಕುಣಿದಾಡುತ್ತಿರುವೆಯಲ್ಲ, ಇದು ಯಾರ ಪ್ರೀತಿಗಾಗಿ?' ಎಂದು ಕೇಳಿದನು. ರಾಮದಾಸನು ಸ್ವಾಮಿ ಈ ಮೂರ್ತಿಯನ್ನು ಪೂಜೆಮಾಡುತ್ತಿದ್ದರೆ ಭಗವಂತನ ಸಾಕ್ಷಾತ್ಕಾರವಾಗುವದೆಂದು ತಮ್ಮಂಥ ರವರೊಬ್ಬರು ಅಪ್ಪಣೆಕೊಡಿಸಿದ್ದರು. ಆದರೆ ಇದುವರೆಗೂ ಯಾವ ದರ್ಶನವೂ ಆಗಿರುವದಿಲ್ಲ, ನಾನು ಮಾಡಬೇಕಾದ ಸಾಧನೆಯಲ್ಲೇನಾದರೂ ತಪ್ಪಿದ್ದರೆ ತಾವು ದಯವಿಟ್ಟು ತಿಳಿಸಿಕೊಡಬೇಕು' ಎಂದನು.

ವೃದ್ಧಬ್ರಾಹ್ಮಣನು ನಕ್ಕು 'ಛೇ! ಭಗವಂತನ ದರ್ಶನವೆಂದರೆ ಅಷ್ಟು ಬಿಟ್ಟಿಬಿಸಾಡಿದೆಯೆಂದು ತಿಳಿದುಕೊಂಡೆಯೇನು? ದೊಡ್ಡದೊಡ್ಡ ದೇವತೆಗಳಿಗಾಗಲಿ ಋಷಿಗಳಿಗಾಗಲಿ ಅನಂತಕಾಲಮಾಡಿದ ತಪಸ್ಸಿಗೂ ಯೋಗಕ್ಕೂ ಗೋಚರವಾಗದ ಆ ದೇವನು ನಿನ್ನಂಥ ಸಾಮಾನ್ಯಮನುಷ್ಯನಿಗೆ ದರ್ಶನಕೊಡುವನೆ?' ಎನ್ನಲು ರಾಮದಾಸನು 'ನಿಜ, ನಿಜ! ನಾನು ಪತಿತನು! ಅವಿವೇಕಿಯು! ಶಾಸ್ತ್ರಜ್ಞಾನವಾಗಲಿ, ಕರ್ಮಾನುಷ್ಠಾನವಾಗಲಿ, ಯೋಗಾದಿಗಳ ಬಲವಾಗಲಿ ಇಲ್ಲದವನು! ಹೀನಜಾತಿಯವನು! ನನಗೆ ಆತನು ಒಲಿಸುವದೆಂದರೇನು. ಆದರೆ ಸ್ವಾಮಿ

ನನಗೊಂದೇ ಸಂಶಯ, ಆತನನ್ನು ನೋಡಬೇಕೆಂಬ ಈ ಬಲವಾದ ಇಚ್ಛೆಯು ನನ್ನ ಹೃದಯವನ್ನು ಒಳಹೂಗುವಂತೆ ಆತನು ಅವಕಾಶಕೊಟ್ಟಿದ್ದೇಕೆ? ಆತನು ಕರುಣಾಕರನಲ್ಲವೆ; ದೀನದಯಾಳುವಲ್ಲವೆ? ಅದು ಹೇಗಾದರೂ ಇರಲಿ! ಆತನ ದರ್ಶನಾಕಾಂಕ್ಷಿಯಾಗಿ ಈ ಜನ್ಮದಲ್ಲಿ ಪ್ರಾಣವನ್ನಾದರೂ ಕಳೆದುಕೊಂಡೇನು, ನನ್ನ ಇಚ್ಛೆಯನ್ನು ತಪ್ಪಿಸುವದಕ್ಕೆ ಯಾರಿಂದಲೂ ಆಗುವದಿಲ್ಲ!' ಎಂದು ದೀನನಾಗಿ ಗದ್ಗದ ಕಂಠದಿಂದ ನುಡಿದನು.

ಇನ್ನು ಭಗವಂತನಿಗೆ ಸುಮ್ಮನಿರುವದಕ್ಕೆ ಆಗಲಿಲ್ಲ. 'ವತ್ಸ, ರಾಮದಾಸ! ನೀನು ಧನ್ಯನು! ನಿನ್ನ ಪ್ರೇಮದಿಂದ ನನ್ನನ್ನು ಕಟ್ಟಿಹಾಕಿದೆ. ಪಾಪಯೋನಿಯೂ ಅಂತ್ಯಜನೂ ಆದವನು ಈ ಜನ್ಮದಲ್ಲಿಯೇ ಬ್ರಾಹ್ಮಣನಾಗಲಾರನು ನಿಜ; ಆದರೆ ನನ್ನಲ್ಲಿ ವಿಶುದ್ಧ ಪ್ರೇಮವನ್ನು ಮಾಡಿದರೆ ಅಂಥವನು ಕೂಡ ಬ್ರಾಹ್ಮಣರಿಗೂ ಪೂಜ್ಯನಾದ ಭಕ್ತನಾಗಬಹುದು. ಭಕ್ತರಿಗೂ ನನಗೂ ಯಾವ ಭೇದವೂ ಇರುವದಿಲ್ಲ. ಇದೇ ನೀನು ನಿತ್ಯವೂ ಹಾಡುತ್ತಿದ್ದ ಹಾಡಿನ ಅರ್ಥವು. ನನ್ನ ಭಕ್ತರಿಗೆ ನಾನು, ನೀನು, ಜಗತ್ತು – ಎಂಬ ಭೇದವೇ ಇಲ್ಲದೆ ಸರ್ವವೂ ವಾಸುದೇವಮಯವಾಗಿ ಬಿಡುವದು! ಇಗೋ ನೀನು ನಾಥನ ಪರಮಭಕ್ತನಾದೆ!' ಎಂದು ತನ್ನ ಕೋಟಿ ದಿವ್ಯಸೂರ್ಯಪ್ರಕಾಶದ ಸುಂದರ ಗುಣಮೂರ್ತಿಯನ್ನು ಅವನಿಗೆ ದರ್ಶನಮಾಡಿಸಿದನು. ರಾಮದಾಸನು ಆ ಪ್ರಕಾಶಕ್ಕೆ ಕಣ್ಣುಗಳನ್ನು ಮುಚ್ಚಿಕೊಂಡರೆ ಹೃದಯದಲ್ಲಿಯೂ ಅದೇ ಮೂರ್ತಿ, ಕಣ್ಣುತೆರೆದರೆ ಅದೇ ಮೂರ್ತಿ! ಎಲ್ಲೆಲ್ಲಿಯೂ ಅದೇ ಮೂರ್ತಿಯಿತ್ತು! ಹೀಗೆ ಎತ್ತ ನೋಡಿದರೆ ಅತ್ತ ಆ ದಿವ್ಯಮೂರ್ತಿಯನ್ನೇ ಕಾಣುತ್ತಾ ಅವನು 'ನಾನು ಹರಿ, ನೀನು ಹರಿ, ಜಗವೆಲ್ಲವು ಹರಿ!' ಎಂಬ ಮಂಗಳಗಾನವನ್ನು ಪ್ರೇಮದಿಂದ ಹಾಡುತ್ತಾ ತನ್ನ ಉಳಿದ ಜೀವನವನ್ನು ಆನಂದದಿಂದ ಕಳೆದು ಕಡೆಗೆ ಶ್ರೀಹರಿಯ ನಿತ್ಯಧಾಮವನ್ನೇ ಸೇರಿದನು.

★★★★★

# ತುಕಾರಾಮ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಮಹಾರಾಷ್ಟ್ರದಲ್ಲಿ ಭಕ್ತಿಪಂಥವನ್ನು ಹರಡಿದವರಲ್ಲಿ ಸಂತವರ ತುಕಾರಾಮನಿಗೆ ಒಂದು ಅಸಾಧಾರಣಸ್ಥಾನವುಂಟು. ಆತನು ಬರೆದಿರುವ ''ಅಭಂಗ''ಗಳಿಂದ ಇಡಿಯ ಮಹಾರಾಷ್ಟ್ರದಲ್ಲಿಯೇ ಭಕ್ತಿರಸವು ಉಕ್ಕಿಹರಿಯಿತು. ಜನಸಾಮಾನ್ಯಕ್ಕೆಲ್ಲ ಭಕ್ತಿಯ ಸವಿಯುದಕ್ಕಿತು ಜೀವನವನ್ನು ಸುಖಮಯವಾಗಿ ಮಾಡಿಕೊಳ್ಳುವ ರೀತಿಯನ್ನು ತನ್ನ ನಡೆನುಡಿಗಳಿಂದ ಉಪದೇಶಿಸಿ ಅನುಗ್ರಹಿಸಿದ ಆ ಮಹಾತ್ಮನನ್ನು ಇಂದು ಇಡಿಯ ಮಹಾರಾಷ್ಟ್ರವೇ ಹೆಮ್ಮೆಯಿಂದ ಸ್ಮರಣೆಮಾಡುತ್ತಿದೆ.

ತುಕಾರಾಮನು ಹುಟ್ಟಿದ ಕಾಲವು ಯಾವದೆಂಬುದು ಸುನಿಶ್ಚಿತವಾಗಿಲ್ಲ. ಅದು ಶಕೆ 1520 ಎಂದು ಆ ವರ್ಷದ ಮಾಘ ಬಹುಳ 5 ಗುರುವಾರವೆಂದೂ ಒಂದು ಮತ. ಪುಣೆಯಿಂದ ಉತ್ತರಕ್ಕೆ ಹತ್ತು ಕೋಶ (ಇಪ್ಪತ್ತುಮೈಲಿ)ಗಳಷ್ಟು ದೂರದಲ್ಲಿ ಇಂದ್ರಿಯಾಣೀನದಿಯ ದಡದಲ್ಲಿ ತುಕಾರಾಮನು ಹುಟ್ಟಿದನು. ಅವನ ಪೂರ್ವಜರು ಕುಣಬಿಶೂದ್ರರೆಂಬ ಜಾತಿಯವರು; ಕಿರಾಣಿಜಿನಸುಗಳ ಮತ್ತು ಧಾನ್ಯದ ವ್ಯಾಪಾರವೇ ಅವರ ಕಸಬು. ಅವರಿಗೆ ಪಂಡರಿಯ ರಾಯನಾದ ವಿಠಲನೇ ಕುಲದೇವತೆ. ತುಕಾರಾಮನ ಹಿಂದೆ ಎಂಟನೆಯ ತಲೆಯವನಾದ ವಿಶ್ವಂಭರ ಬೋವ ಎಂಬಾತನು ವಿಠಲನ ಮಹಾಭಕ್ತನು; ಆತನು ದೇಹೂಗ್ರಾಮದಲ್ಲಿ ಕಟ್ಟಿಸಿದ್ದ ವಿಠಲನ ಗುಡಿಯು ಈಗಲೂ ಇದೆಯಂತೆ. ಆತನೂ ಅವನ ಹೆಂಡತಿಯೂ ತುಂಬಾ ಭಾವಿಕರು; ಪ್ರತಿ ಪಕ್ಷವೂ ಪಂಢರಾಪುರಕ್ಕೆ ಯಾತ್ರೆಹೋಗಿಬರುತ್ತಿದ್ದರಂತೆ ಅವರ ಮಕ್ಕಳು ಯುದ್ಧದಲ್ಲಿ ಮಡಿಯಲು ಮಗ ಮುಕುಂದನ ಹೆಂಡತಿ ಸಹಗಮನವನ್ನು ಮಾಡಿದ್ದಳು! ಈ ವಂಶದವರೆಲ್ಲರೂ ಪ್ರತಿವರ್ಷವೂ ಆಷಾಢಕಾರ್ತಿಕಗಳಲ್ಲಿ ಪಂಢರಾಪುರಕ್ಕೆ ಹೋಗಿ ಬರುತ್ತಿದ್ದರು. ಈ ಪವಿತ್ರವಂಶದಲ್ಲಿ ಬೋಲ್ಹೋಬಾ, ಕನಕಾ – ಈ ದಂಪತಿಗಳ ಹೊಟ್ಟೆಯಲ್ಲಿ ತುಕಾರಾಮನು ಜನಿಸಿದನು. ತುಕಾರಾಮನ ಅಣ್ಣನ ಹೆಸರು ಸಾವಜಿ, ತಮ್ಮನ ಹೆಸರು ಕಾನ್ಹಜಿ.

ತುಕಾರಾಮನ ತಂದೆತಾಯಿಗಳು ಅವನು ಇನ್ನೂ ಚಿಕ್ಕವನಾಗಿದ್ದಾಗಲೆ ಪರಲೋಕವನ್ನೆದಿದರು. ಅಣ್ಣನು ಪತ್ನೀವಿಯೋಗದಿಂದ ವಿರಕ್ತನಾಗಿ

ತೀರ್ಥಯಾತ್ರೆಗೆ ಹೋಗಿ ಅಲ್ಲಿಯೇ ತನ್ನ ಬಾಳುವೆಯನ್ನು ಪೂರ್ತಿಮಾಡಿದನು. ದೇಶದಲ್ಲಿ ಬರಗಾಲವು ಬಂದು ವ್ಯಾಪರವು ಸಾಗದೆ ಇದ್ದಬದ್ದ ಆಸ್ತಿಯೂ ಹೋಯಿತು. ಹಿರಿಯ ಹೆಂಡತಿ ಹಾಗೂಹೀಗೂ ಕಾಲಹಾಕಿಕೊಂಡಿದ್ದು ಹೊಟ್ಟೆಗೆ ಅನ್ನವಿಲ್ಲದೆ ಪ್ರಾಣವನ್ನು ಬಿಟ್ಟಳು. ಪ್ರಿಯಪುತ್ರನಾದ ಶಿವಾಜಿಯೂ ಪರಲೋಕವನ್ನೈದಿದನು. ಸಾಲಗಾರರು ಅವನನ್ನು ಎಳೆಯುವದಕ್ಕೆ ಮೊದಲುಮಾಡಿದರು, ಮನೆಯಲ್ಲಿ ಕಿರಿಹೆಂಡತಿ – ಅಪ್ಪಾಜಿ ಗುಳವೆಯೆಂಬವನ ಮಗಳು ಅವಲಾಈ ಅಥವಾ ಜೀಜಾಬಾಈ ಎಂಬಾಕೆ ಸಂಸಾರದ ನಿಮಿತ್ತದಿಂದ ತುಕಾರಾಮನಿಗೆ ಬಹಳ ತೊಂದರೆಕೊಡುತ್ತಿದ್ದಳು, ಕೊನೆಗೆ ದಿವಾಳಿಯಾಗಿ ಎಲ್ಲವನ್ನೂ ಸಾಲಗಾರರಿಗೆ ಕೊಟ್ಟು ಕಳೆದುಳಿದ ಹಣವನ್ನು ಮೋಸಗಾರರ ಹಾವಳಿ, ದಾನಧರ್ಮ–ಇವುಗಳಿಂದ ಕಳೆದುಕೊಂಡು ಬರಿಗೈಯಾಗಿನಿಂತನು!

ಇಂಥ ಕಷ್ಟಪರಂಪರೆಯಲ್ಲಿ ಇನ್ನಾರಾದರೂ ಆಗಿದ್ದರೆ ಎದೆವಡೆದು, ಮನಬಂದಂತೆ ನಡೆದುಕೊಳ್ಳುತ್ತಿದ್ದರಲ್ಲವೆ? ಆದರೆ ತುಕಾರಾಮನು ಈ ವಿಪತ್ತನ್ನು ಸದುಪಯೋಗಮಾಡಿಕೊಂಡು ಕೂಡಲೆ ಪರಮಾರ್ಥಚಿಂತನೆಗೆ ಮನಸ್ಸುಹಾಕಿಬಿಟ್ಟನು. ಮಾಡುವದು, ಕೀರ್ತನೆಯನ್ನು ಮಾಡುವದು – ಈ ಪದ್ಧತಿಯನ್ನಿಟ್ಟುಕೊಂಡನು. ಜ್ಞಾನೇಶ್ವರ, ಕಬೀರ, ನಾಮದೇವ, ಏಕನಾಥ – ಮುಂತಾದ ಸಂತರ ವಚನಾಮೃತಗಳನ್ನು ಓದಿ ಮನನಮಾಡುವದು, ಸತ್ಪುರುಷರ ಪಾದವನ್ನು ವಿನಯದಿಂದ ಸೇವಿಸುವದು – ಹೀಗೆ ಸಾಧನವನ್ನು ಮಾಡುವದಕ್ಕಾರಂಭಿಸಿದನು. ದೊಡ್ಡವರಿಗೆ ವಿಪತ್ತು ಬಂದರೂ ಅದರಿಂದ ಅವರಿಗೆ ಒಳ್ಳೆಯದೇ ಆಗುತ್ತದೆ. ತುಕಾರಾಮನೇ ತನ್ನ ಒಂದು ಅಭಂಗದಲ್ಲಿ ಹೀಗೆಂದಿರುತ್ತಾನೆ –

**ಬರೇ ಝೂಲೇ ಬಾಈಲ ಕರ್ಕಶಾ ।**
**ಬರೀ ಹೇ ದುರ್ದಶಾ ಜನಾ ಮಧ್ಯೇ ॥**
**ಅನುತಾಪೇ ತುಝೋ ರಾಹಿಲೇ ಚಿಂತನ ।**
**ಝಾಲಾ ದಾ ವಮನ ಸಂಸಾರ ॥**

‘‘ದೇವ ಬರಗಾಲ ಬಂದು ಸಂಕಟವಾದದ್ದು ನಾನು ದಿವಾಳಿಯಾದದ್ದೂ ಒಳ್ಳೆಯದೇ ಆಯಿತು. ಹೆಂಡತಿಯು ಕರ್ಕಶವಾಣಿಯವಳಾದದ್ದೂ ಒಳ್ಳೆಯದೇ.

ಜನರ ನಡುವೆ ನನಗೆ ದುರ್ದಶೆ ಬಂದದ್ದೂ ಒಳ್ಳೆಯದೇ, ನನಗೆ ಪಶ್ಚಾತ್ತಾಪವುಂಟಾಗಿ ನಿನ್ನ ಚಿಂತನೆಯೇ ಒದಗಿತು, ಈ ಸಂಸಾರವೆಂಬುದು ವಮನಪ್ರಾಯವಾಯಿತು!''

ತುಕಾರಾಮನಿಗೆ ದೇಹಾತ್ಮಬುದ್ಧಿಯು ತೊಲಗಿ ಚಿತ್ತಶುದ್ಧಿಯಾಗುವ ಹೊತ್ತಿಗೆ- ಆಗ್ಗೆ ಅವನಿಗೆ 20ವರ್ಷಗಳು ಕಳೆದುಹೋಗಿದ್ದವು - **ಬಾಬಾಜಿ ಚೈತನ್ಯ** ಎಂಬವರು ಅವನಿಗೆ ಕನಸಿನಲ್ಲಿ ''**ರಾಮ ಕೃಷ್ಣ ಹರೀ**'' ಎಂಬ ಮಧುರವಾದ ಸರಳವಾದ ಮಂತ್ರವನ್ನು ಉಪದೇಶಮಾಡಿದರು. ತುಕಾರಾಮನು ಈ ನಾಮವನ್ನು ಘೋಷಮಾಡುತ್ತಾ ಕೆಲಕಾಲ ಏಕಾಂತವಾಸದಲ್ಲಿ ಕಾಲವನ್ನು ಕಳೆದನು.

ನಾಮಸ್ಮರಣೆಯಿಂದ ಕೃತಾರ್ಥನಾದ ಆತನ ಬಾಯಿಯಿಂದ ಕೀರ್ತನಕಾಲದಲ್ಲಿ ದಿವ್ಯವಾದ ವೇದಾರ್ಥಗಳುಳ್ಳ ಅಭಂಗಗಳು ಹೊರಡುವದಕ್ಕೆ ಮೊದಲಾಯಿತು. ಎಷ್ಟೋಜನರು ಆತನ ಕೀರ್ತನಗಳನ್ನು ಕೇಳಿ ಸಂತೋಷದಿಂದ ಇವನೊಬ್ಬ ಮಹಾಭಕ್ತನೆಂದು ಕೊಂಡಾಡಿದರು. ಆದರೆ ಪುಣೆಗೆ ಸುಮಾರು ಒಂಬತ್ತು ಮೈಲಿಗಳ ದೂರದಲ್ಲಿದ್ದ **ರಾಮೇಶ್ವರಭಟ್ಟ**ನೆಂಬ ವಿದ್ವಾಂಸನಾದ ಕರ್ಮಠಬ್ರಾಹ್ಮಣನೊಬ್ಬನಿಗೆ ಶೂದ್ರನ ಬಾಯಿಂದ ನಾಡನುಡಿಯಲ್ಲಿ ವೇದಾರ್ಥವು ಹೊರಬೀಳುವದೂ ಅದನ್ನು ಜನರೆಲ್ಲರೂ ಭಕ್ತಿಯಿಂದ ಕೇಳುವದೂ ಯುಕ್ತವಾಗಿ ತೋರಲಿಲ್ಲ. ಆದ್ದರಿಂದ ಅವನು ದೇಹೂಪಟೇಲನ ಸಹಾಯವನ್ನು ಪಡೆದು ತುಕಾರಾಮನನ್ನು ಊರಿನಿಂದ ಹೊರಕ್ಕೆ ಹೊರಡಿಸಿದನು. ತುಕಾರಾಮನು ಆ ಬ್ರಾಹ್ಮಣನ ಬಳಿಗೇ ಹೋಗಿ ''ಸ್ವಾಮಿ, ನಾನು ಅಭಂಗಗಳನ್ನು ಮಾಡುವದು ತಪ್ಪಾದರೆ ಇನ್ನು ಮೇಲೆ ಮಾಡುವದು ಬೇಡ, ಆದರೆ ಈವರೆಗೆ ಮಾಡಿಬಿಟ್ಟಿರುವ ಅಭಂಗಗಳನ್ನು ಏನು ಮಾಡಲಿ?'' ಎಂದು ಹೇಳಿಬಿಟ್ಟನು! ತುಕಾರಾಮನು ಅವನ ಅಪ್ಪಣೆಯಂತೆಯೇ ಅಭಂಗಗಳ ಪುಸ್ತಕಗಳನ್ನು ನದಿಯಲ್ಲಿ ಹಾಕಿದನು. ಆದರೆ ಅವನಿಗೆ ಭಗವಂತನ ನಾಮಸ್ಮರಣೆಯನ್ನು ಬಿಟ್ಟಿರುವದು ಸಹಿಸಲಿಲ್ಲ, ಅವನು ನದಿಯದಡದಲ್ಲಿ ಒಂದು ಕಲ್ಲಮೇಲೆ ದುಃಖದಿಂದ ಪರಿತಪಿಸುತ್ತಾ ಬಿದ್ದುಕೊಂಡಿದ್ದನು. ಇತ್ತ ಪುಣೆಯಲ್ಲಿ ನಾಗನಾಥಮಂದಿರದಲ್ಲಿ **ಅನಘಡಸಿದ್ಧ**ನೆಂಬ ಒಬ್ಬ ಮಹಾತ್ಮನಿದ್ದನು. ಅಲ್ಲಿದ್ದ ಒಂದು ಕೊಂಡದಲ್ಲಿ ಸ್ನಾನಮಾಡುವದಕ್ಕೆ ಹೋಗಿದ್ದ ರಾಮೇಶ್ವರಭಟ್ಟನಿಗೆ ಮೈಯೆಲ್ಲ ಉರಿಯುವದಕ್ಕೆ ಪ್ರಾರಂಭಿಸಿತು. ಅದು ಯಾವ ಔಷಧಿಯಿಂದಲೂ ಗುಣವಾಗಲಿಲ್ಲ; ಕನಸಿನಲ್ಲಿ ''ತುಕಾರಾಮ ಮಹಾರಾಜರಿಗೆ ಶರಣು ಹೋದರೆ ಇದು ಶಮನವಾದೀತು'' ಎಂದು ಜ್ಞಾನೇಶ್ವರರು

ಹೇಳಿದಂತೆ ಆಯಿತು. ಆದ್ದರಿಂದ ಆ ಬ್ರಾಹ್ಮಣನು ತುಕಾರಾಮನಿದ್ದಲ್ಲಿಗೆ ಬಂದನು. ಅಷ್ಟರೊಳಗಾಗಿ ತುಕಾರಾಮನಿಗೆ ಭಗವಂತನು ಸಾಕ್ಷಾತ್ಕಾರವಾಗಿ ''ನೀನು ರಚಿಸಿದ್ದ ಅಭಂಗಗಳು ಎಲ್ಲಿಯೂ ಹೋಗಿಲ್ಲ, ಅವುಗಳನ್ನು ಭದ್ರವಾಗಿ ಟ್ಟಿದ್ದೇನೆ. ಚಿಂತಿಸದಿರು'' ಎಂದು ವಿಠಲನೇ ಸಂತೈಸಿದ್ದನು. ರಾಮೇಶ್ವರ ಭಟ್ಟನೂ ಧೈರ್ಯದಿಂದ ಬಂದು ತುಕಾರಾಮರ ಅನುಗ್ರಹದಿಂದ ಕಷ್ಟವನ್ನು ದಾಟಿದನು, ಅವರ ಶಿಷ್ಯನೂ ಆದನು. ಅಭಂಗದ ಪುಸ್ತಕವು ಒಂದು ಪಕ್ಷವಾದ ಮೇಲೆ ಮತ್ತೆ ನದಿಯಲ್ಲಿ ತೇಲಿ ಮೇಲಕ್ಕೆ ಬಂದಿತಂತೆ! ತನ್ನ ಆತ್ಮಚರಿತ್ರೆಯನ್ನು ಸಂಕ್ಷಿಪ್ತವಾಗಿ ಒಂದು ಅಭಂಗದಲ್ಲಿ ಹೇಳಿಕೊಂಡಿರುವ ತುಕಾರಾಮನು ಕೊನೆಯಲ್ಲಿ ಹೇಳಿರುವದೇನೆಂದರೇ –

**ಭಕ್ತಾ ನಾರಾಯಣನುಪೇಕ್ಷೀ ಸರ್ವಥಾ ।**
**ಕೃಪಾವಂತ ಐನೇ ಕಳೋ ಆಲೇ ।**
**ತುಕಾ ಮ್ಹಣೇ ಮಾಝೋ ಸರ್ವಭಾಂಡವಲ।**
**ಬೋಲನಿಲೇ ಬೋಲಪಾಂಡುರಂಗೇ॥**

''ಭಕ್ತರನ್ನು ನಾರಾಯಣನು ಎಂದಿಗೂ ಉಪೇಕ್ಷಿಸುವದಿಲ್ಲ. ಆತನು ದಯಾವಂತನು ಎಂದು ತಿಳಿದು ಬಂದಿತು. ಇಗೋ, ನನ್ನ ಬಂಡವಾಳವೆಲ್ಲವನ್ನೂ ತಿಳಿಸಿಬಿಟ್ಟಿದ್ದೇನೆ. ಪಾಂಡುರಂಗನೇ ನನ್ನ ಸರ್ವಸ್ವವು; ಆತನು ನನ್ನಿಂದ ಈ ಮಾತು ಆಡಿಸಿರುತ್ತಾನೆ.''

ತುಕಾರಾಮನು ಕಾಮಿನೀಕಾಂಚನಗಳಲ್ಲಿ ಅತ್ಯಂತವಿರಕ್ತನಾಗಿದ್ದನು. ಅವನಿಗೆ ತನ್ನ ಹೆಂಡತಿಯ ಸಂಸಾರದ ವಿಚಾರವನ್ನು ಮಾಡುವಷ್ಟುಕೂಡ ವಿರಾಮವಿರಲಿಲ್ಲ; ಇನ್ನು ಪರಸ್ತ್ರೀವಿಚಾರದಲ್ಲಿ ಬರಬೇಕು? ಪರಸ್ತ್ರೀಯರೆಲ್ಲರೂ '**ರಖುಮಾ ಈ ಸಮಾನ**'ರೆಂಬುದೇ ಆತನ ನಿಶ್ಚಯ. ಒಮ್ಮೆ ಛತ್ರಪತಿ ಶಿವಾಜಿಯು ತನ್ನ ಕಡೆಯ ಜನರನ್ನು ಕುದುರೆ ಶಿಪಾಯಿಗಳು ಮುಂತಾದ ಗೌರವ ಸೂಚಕ ಸಾಮಗ್ರಿಗಳ ಸಮೇತ ಕಳುಹಿಸಿ ಆತನನ್ನು ಪುಣೆಗೆ ಕರೆತರುವಂತೆ ಹೇಳಿಕಳುಹಿಸಿದನು. ಆದರೆ ತುಕಾರಾಮನು ''ಅನಾಥರಾದವರಿಗೆ ಕುದುರೆಯೇತಕ್ಕೆ? ಭಗವಂತನು ನಮಗೆ ಬೇಕಾದೆದ್ದನ್ನು ಕೊಟ್ಟಿರುವನಾದ್ದರಿಂದ ಮತ್ತೊಬ್ಬನನ್ನು ಆಶ್ರಯಿಸಬೇಕಾದದಿಲ್ಲ''– ಎಂದು ಹೇಳಿಕಳುಹಿಸಿದನು.

ಧನವೆಂಬುದು ಗೋಮಾಂಸಸಮಾನವೆಂದು ತನ್ನ ಒಂದು ಅಭಂಗದಲ್ಲಿ ತುಕಾರಾಮನು ಹೇಳಿರುವದನ್ನು ನೋಡಿದರೆ ಆತನ ನಿಸ್ಪೃಹತೆಯ ಮೆಟ್ಟಿಲು ಯಾವದೆಂಬುದು ಸ್ವಲ್ಪಮಟ್ಟಿಗೆ ತಿಳಿದುಬಂದೀತು.

ತುಕೋಬನ ಕೀರ್ತಿಯು ಎಲ್ಲಾಕಡೆಗೂ ಹರಡೂತ್ತಾಬಂದಿತು. ಅವನ ಕೀರ್ತನೆಗೆ ಶಿವಾಜಿ ಮಹಾರಾಜನು ತಾನೇ ಬಂದು ಹೋಗುತ್ತಿದ್ದನು. ಕಾನ್ಹೋಬಾ, ಸಂತೋಬಾ ತೇಲೀ, ಗಂಗಾಧರ ಮವಾಳ ಕುಡುಸಕರ, ನಾವಜೀ ಮಾಳೀ, ಕೊಂಡೆಭಟ್ಟ ಪುರಾಣಿಕ – ಮುಂತಾದ ಎಲ್ಲಾಜಾತಿಯ ಭಾವಿಕಜನರೂ ಆತನ ಶಿಷ್ಯರಾಗಿದ್ದರು. ತುಕೋಬನ ಕೀರ್ತನೆಯು ಅತ್ಯಂತ ಪ್ರೇಮಯುಕ್ತವಾಗಿ ಯೂ ಸ್ಫೂರ್ತಿದಾಯಕವಾಗಿಯೂ ಇದ್ದಿತು. ಒಬ್ಬ ಅತ್ಯಂತ ಪ್ರಾಪಂಚಿಕನು ಎಂಟು ದಿವಸ ಕೀರ್ತನೆಯನ್ನು ಕೇಳಿ ತನ್ನ ಮನೆಯನ್ನು ತುಳಸೀಧಾರೆಯಿಟ್ಟು ದಾನಮಾಡಿ ತುಕಾರಾಮನ ಶಿಷ್ಯನಾದನಂತೆ! ಆತನಿಗೆ ಪಾಂಡುರಂಗನ ಭಕ್ತಿಯೊಂದೇ ಮುಖ್ಯವಾಗಿತ್ತು. ಧೂರ್ತರು, ಪಾಕಂಡಿಗಳು, ನಾಸ್ತಿಕರು, ತಾರ್ಕಿಕರು, ದಾಂಭಿಕರು, ಆಚಾರ ಭ್ರಷ್ಟರು – ಇಂಥವರನ್ನು ಆತನು ತೀವ್ರವಾಗಿ ಟೀಕಿಸಿರುತ್ತಾನೆ.

ತುಕೋಬಾರಾಯನಿಗೆ ಸಗುಣನಿರ್ಗುಣಗಳೆರಡೂ ಸೇರಿ ಪಾಂಡುರಂಗ ಮೂರ್ತಿಯಾಗಿದೆ ಎಂಬ ನಿಶ್ಚಯವಿತ್ತು. ''**ಬ್ರಹ್ಮಜ್ಞಾನವಾಗಲಿ ಆತ್ಮಸ್ಥಿತಿಯ ಭಾವವಾಗಲಿಬೇಡ; ನೀನು ದೇವನು, ನಾನು ಭಕ್ತನು- ಹೀಗಿರುವಂತೆ ಮಾಡು**'' ಎಂದು ಆತನು ಅಲ್ಲಲ್ಲಿ ಭಕ್ತಿಭಾವದಿಂದ ಹಾಡಿರುವಂತೆಯೇ ''**ನನ್ನಿಂದಲೇ ನಾನು ಹೊರಟುಬಂದಿರುವೆನು, ತನ್ನಲ್ಲಿಯೇ ತಾನು ಸೇರಬೇಕು**'' ಎಂದು ಅದ್ವೈತಭಾವನೆಯಿಂದಲೂ ಹಾಡಿರುತ್ತಾನೆ. ಮಿಕ್ಕ ಮಹಾರಾಷ್ಟ್ರದ ಸಂತರಂತೆ ತುಕೋಬನೂ ಅದ್ವೈತಿಯಾಗಿರುತ್ತಿದ್ದನು. ನಿಜವಾಗಿ ನೋಡಿದರೆ ಸಂತರಿಗೆ ಜಾತಿಕುಲವೆಂಬುದೇನೂ ಇಲ್ಲವಾದರೂ ವರ್ಣಸಂಕರವನ್ನು ಮಾಡಬಾರದು, ಕರ್ಮವನ್ನು ಬಿಡಬಾರದು- ಎಂದೇ ಆತನು ಬೋಧಿಸಿರುತ್ತಾನೆ. ಮಹಾರಾಷ್ಟ್ರದವರನ್ನೆಲ್ಲ ಭಕ್ತಿಪಂಥಕ್ಕೆ ಆತನು ಎಳೆದು ಅವರ ನಡೆನುಡಿಗಳನ್ನು ತಿದ್ದಿದ ಫಲವಾಗಿ ಆ ರಾಷ್ಟ್ರದಲ್ಲಿ ಶಿವಾಜಿಯಂಥ ದೇಶಭಕ್ತನೂ ಹುಟ್ಟಿದನು.

ತುಕಾರಾಮನು ಮಾಡಿರುವ ಅಭಂಗಗಳಲ್ಲಿ ಈಗ 4500 ಮಾತ್ರ ಸಿಕ್ಕುತ್ತವೆ. ಆತನ ಅಧ್ಯಾತ್ಮಭಂಡಾರಕ್ಕೆ ಈ ಅಭಂಗರತ್ನಗಳನ್ನು ಸೇರಿಸಿ ಆ ಸಾಧುಶ್ರೇಷ್ಠನು ಶಕೆ 1571ರಲ್ಲಿ ನಿರ್ವಾಣವಾಗಿ ವೈಕುಂಠಕ್ಕೆ ತೆರಳಿದನು.

★★★★★

# ಬಾಬಾ ಗಂಭೀರನಾಥಜಿ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಗೋರಖನಾಥರೆಂಬ ಯೋಗಿಗಳ ಹೆಸರು ನಮ್ಮ ದೇಶದಲ್ಲಿಯೂ ಪ್ರಸಿದ್ಧವಾಗಿಯೇ ಇರುತ್ತದೆ. ಅವರು 'ನಾಥಯೋಗಿ' ಅಥವಾ 'ಸಿದ್ಧಯೋಗಿ' ಎಂಬ ಸಂಪ್ರದಾಯಕ್ಕೆ ಪ್ರವರ್ತಕರು. ನಾಥರೆಂದರೆ ದೇಹೇನ್ದ್ರಿಯಮನಸ್ಸುಗಳನ್ನು ವಶದಲ್ಲಿ ಇಟ್ಟುಕೊಂಡಿರುವವರು; ಸಿದ್ದರೆಂದರೆ ಯೋಗಸಾಧನದಿಂದ ಸಿದ್ಧಿಗೊಳಿಸಿಕೊಂಡು ಅಮರವನ್ನಾಗಿ ಮಾಡಿಕೊಂಡವರು. ಗೋರಖನಾಥರು ಅಮರತ್ವವನ್ನು ಪಡೆದುಕೊಂಡು ಈಗಲೂ ಇರುತ್ತಾರೆಂದೂ ಅವರು ಆಗಾಗ ಪ್ರಕಟವಾಗಿ ಅಧಿಕಾರಿಗಳಿಗೆ ದರ್ಶನವನ್ನು ಕೊಡೂತ್ತಾರೆಂದೂ ನಾಥಸಂಪ್ರದಾಯದವರ ನಂಬಿಕೆ. ಇತ್ತೀಚೆಗೆ ಸುಮಾರು ವರ್ಷಗಳ ಕೆಳಗೆ ಮಹಾಸಮಾಧಿಯನ್ನು ಪಡೆದ ಗಂಭೀರನಾಥರೆಂಬ ಈ ಸಂಪ್ರದಾಯದ ಯೋಗಿ ವರ್ಯರೊಬ್ಬರ ಪರಿಚಯವನ್ನು ಮಾಡಿಕೊಡುವದೇ ಈ ಲೇಖನದ ಉದ್ದೇಶವು.

ಗಂಭೀರನಾಥರು ಕಾಶ್ಮೀರದೇಶಕ್ಕೆ ಸೇರಿದ ಜಂಜೂಪ್ರದೇಶದಿಂದ ಬಂದು ಗೋರಖಪುರದಲ್ಲಿ ಮಹಂತರಾಗಿದ್ದ ಗೋಪಾಲದಾಸರಿಂದ ದೀಕ್ಷೆಯನ್ನು ಹೊಂದಿ ಯೋಗಸಾಧನದಲ್ಲಿ ಪ್ರವೃತ್ತರಾದರು. ಗುರುಗಳು ಅವರಿಗೆ ಕೊಟ್ಟ 'ಗಂಭೀರನಾಥ' ಎಂಬ ಹೆಸರು ಅವರಿಗೆ ಎಲ್ಲಾ ಬಗೆಯಿಂದಲೂ ಅನ್ವರ್ಥವಾಗಿತ್ತು. ಅವರು ಭಾವದಲ್ಲಿ ಜ್ಞಾನದಲ್ಲಿ, ವಾಕ್ಯದಲ್ಲಿ, ದೃಷ್ಟಿಯಲ್ಲಿ- ಎಲ್ಲದರಲ್ಲಿಯೂ ಅಸಾಧಾರಣಗಾಂಭೀರ್ಯದಿಂದ ಕೂಡಿರುತ್ತಿದ್ದರು. ಅವರ ಪೂರ್ವಾಶ್ರಮಚರಿತ್ರೆಯು ಈ ಕಾರಣದಿಂದಲೇ ಯಾರಿಗೂ ಕೊನೆಯವರೆಗೂ ತಿಳಿಯಲೇ ಇಲ್ಲ.

ನಾಥಸಂಪ್ರದಾಯದಲ್ಲಿ ಶಿಷ್ಯನು ಮೊದಲು ಮಂತ್ರೋಪದೇಶವನ್ನು ಪಡೆಯುತ್ತಾನೆ; ಆಮೇಲೆ ರೇಷ್ಮೆಯದಾರಕ್ಕೆ ಕಟ್ಟಿದ ಒಂದು ಮರದ ಕೊಳವೆಯನ್ನು ಎದೆಯ ಮೇಲೆ ಕಾಣುವಂತೆ ಕೊರಳಿಗೆ ಹಾಕಿಕೊಂಡು ಅನಘೋರ (ಮನೆಯಿಲ್ಲದ ಬೈರಾಗಿ) ಆಗುತ್ತಾನೆ. ಕೊಳವೆಗೆ ನಾಥನೆಂದು ಹೆಸರು; ಅದು ಹೃದಯದ ಅನಾಹತಚಕ್ರದಲ್ಲಿ ಒಂದೇ ಸಮನೆ ಕೇಳಿಬರುವ ಪ್ರಣವನಾದದ ಕಡೆಗೆ ಚಿತ್ತವಿಡ ಬೇಕೆಂಬುದನ್ನು ಸೂಚಿಸುತ್ತದೆಯಂತೆ. ಹೀಗೆ ನಾಮಾನುಸಂಧಾನಮಾಡುವದು ಬ್ರಹ್ಮದಲ್ಲಿ ಚಿತ್ತವ್ಯಕ್ತಿಸಂತಾನವನ್ನು ನಡೆಯಿಸುವದಕ್ಕೆ ಸಾಧನವೆಂದು ಸಂಪ್ರದಾಯದವರ ಹೇಳಿಕೆ. ಈ ಸಾಧನವು ವಶವಾದಮೇಲೂ ಗಂಭೀರನಾಥರು ಕೊಳವೆಯನ್ನು ತೆಗೆದುಹಾಕದೆ ಇಟ್ಟುಕೊಂಡೇ ಇದ್ದರು. ಆಮೇಲೆ ಕಿವಿಯನ್ನು ಚುಚ್ಚಿಸಿಕೊಂಡು ಕುಂಡಲಗಳನ್ನು ಧರಿಸಿ 'ಕಾನಫಟ್' ಎಂಬ ದರ್ಶನಯೋಗಿ ಗಳಾದರು. ಇದು ದೀಕ್ಷೆಯ ಮೂರನೆಯ ಅಂತಸ್ತು ಒಳಗೆ ದರ್ಶನಸಿದ್ಧಿಯಾದ ಚಿಹ್ನವು.

ಹೀಗೆ ಗುರುಸನ್ನಿಧಿಯಲ್ಲಿ ಸಾಧನವನ್ನು ಪೂರೈಸಿದ ಬಳಿಕ ಗಂಭೀರನಾಥರು ಗುರುಗಳ ಅಪ್ಪಣೆಯಿಂದ ಸ್ವತಂತ್ರವಾಗಿ ಸಾಧನವನ್ನು ಮಾಡುವದಕ್ಕೆಂದು ಆಶ್ರಮವನ್ನು ಬಿಟ್ಟು ತೆಗೆರಳಿದನು. ಅವರು ಕೆಲವು ವರ್ಷಗಳ ಕಾಲ ಕಾಶಿಯಲ್ಲಿ ಮತ್ತೆ ಕೆಲವು ಕಾಲ ಪ್ರಯಾಗದಲ್ಲಿ ಒಂದು ಗುಹೆಯಲ್ಲಿ – ಹೀಗೆ ಸಾಧನವನ್ನು ಮಾಡಿದರು. ಅಲ್ಲಿಂದ ಮುಂದೆ ಪಾದಚಾರಿಗಳಾಗಿ ತೀರ್ಥಾಟನವನ್ನು ಮಾಡುತ್ತಾ ನರ್ಮದಾತೀರವನ್ನು ಸೇರಿ ಅಲ್ಲಿ ಕೆಲವು ವರ್ಷಗಳಿದ್ದರು. ಭಕ್ತಿಯೋಗಜ್ಞಾನಗಳ ಅಂತರಂಗಸಾಧನೆಗೆಂದು ಅವರು ಕೊನೆಗೆ ಆರಿಸಿಕೊಂಡದ್ದು ಗಯೆಯ ಹತ್ತಿರವಿರುವ ಕಪಿಲಧಾರೆ. ಅಲ್ಲಿ ಯಾವದೊಂದು ಆಶ್ರಮವೂ ಇರಲಿಲ್ಲ. ನಾಥರು ಬಯಲಿನಲ್ಲಿ ಚಳಿ, ಮಳೆ, ಸೆಕೆ – ಯಾವದನ್ನೂ ಲೆಕ್ಕಿಸದೆ ಪೂರ್ಣಸಮಾಧಿಯಲ್ಲಿ ಮುಳುಗಿರುತ್ತಿದ್ದರು. ಹನ್ನೆರಡು ಹದಿಮೂರು ವರ್ಷಗಳವರೆಗೆ ಹೀಗೆ ಸಾಧನನಿಷ್ಠರಾಗಿದ್ದ ಮೇಲೆ ಅವರಿಗೆ ಪೂರ್ಣಸಿದ್ಧಿಯಾಯಿತು. ಈಗ ಅವರಿಗೆ ಸಮಾಧಿಯೂ ವ್ಯುತ್ಥಾನವೂ ಒಂದೇ ಆಯಿತು. ಆ ನಿರ್ಜನಪ್ರದೇಶಕ್ಕೂ ಸಾಧಕರೂ, ಭಕ್ತರೂ, ಸಾಧುಗಳೂ ಬರಲಾರಂಭಿಸಿದರು. ನಾಥಜಿಯವರು ಎಲ್ಲೆಲ್ಲಿಯೂ ಪರತತ್ತ್ವವೊಂದನ್ನೇ ಕಾಣುತ್ತಾ ಪ್ರಶಾಂತ ಮಧುರಪ್ರೇಮಾನಂದ ಘನಸ್ವರೂಪದಿಂದ ಬೆಳಗುತ್ತಿದ್ದರು.

ಆದರೆ ವಿಧಿಯು ಅವರನ್ನು ಹೀಗೆಯೇ ಏಕಾಂತವಾಸದಲ್ಲಿರುವದಕ್ಕೆ ಬಿಡಲಿಲ್ಲ. ಈ ಸಮಯಕ್ಕೆ ಗೋರಖಪುರದ ಮಹಾಂತರು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಕಾರಣದಿಂದ ಅಲ್ಲಿ ಅನಾಚಾರಗಳುಂಟಾಗಿ ಆಶ್ರಮಕ್ಕೆ ಬಹಳ ಕೆಟ್ಟ ಹೆಸರು ಬಂದಿತ್ತು. ಇದನ್ನು ಕಂಡು ಕೆಲವರು ಸಾಧುಗಳೂ ಗೋರಖಪುರದ ಕೆಲವರು ದೊಡ್ಡ ಮನುಷ್ಯರೂ ಪ್ರಾರ್ಥಿಸಿದ ಮೇರೆಗೆ ಗಂಭೀರನಾಥರು ಅಲ್ಲಿಯ ಅಧಿಕಾರವನ್ನು ಸ್ವೀಕರಿಸಿದರು.

ನಿತ್ಯನಿರಂತರ ಸಮಾಧಿಯನ್ನನುಭವಿಸುವ ಮಹಾತ್ಮರೂ ವ್ಯವಹಾರದ ನಿಯಮಗಳನ್ನು ಪಾಲಿಸುವದು ಸಾಧ್ಯವೆಂಬುದನ್ನು ಗಂಭೀರನಾಥರು ಈಗ ತಮ್ಮ ನಡೆಯಿಂದ ತೋರಿಸಿಕೊಟ್ಟರು. ತಾವು ಇದುವರೆಗೆ ಏಕಾಂತವಾಸದಲ್ಲಿ ಉಪಯೋಗಿಸುತ್ತಿದ್ದ ಬರಿಯ ಕೌಪೀನದ ಜೊತೆಗೆ ಅವರು ಪಂಚೆಯನ್ನೂ ಧೋತ್ರವನ್ನೂ ಧರಿಸಿದರು; ತಾವು ತಪಸ್ಸಿಗಾಗಿ ಬಿಟ್ಟಿದ್ದ ಜಡೆಯನ್ನು ಬಿಡಿಸಿ ಬಾಚಿ ಕೊಂಡು ಕೇಶಪಾಶವನ್ನು ನೀಳವಾಗಿ ಬಿಟ್ಟುಕೊಂಡರು ಮೈಮೇಲೆ ಬೂದಿಯನ್ನು ಪೂಸಿಕೊಳ್ಳುತ್ತಿದ್ದುದನ್ನು ಬಿಟ್ಟುಬಿಟ್ಟರು. ಭೂಶಯ್ಯೆಯಲ್ಲಿದ್ದ ಅವರಿಗೆ ಮೆತ್ತೆ ಹಾಕಿದ್ದ ಒಂದು ಮಂಚವು ಈಗ ಕುಳಿತುಕೊಳ್ಳುವದಕ್ಕೂ ಮಲಗುವದಕ್ಕೂ ಆಶ್ರಯವಾಯಿತು. ಬಟ್ಟಬಯಲಿನಲ್ಲಿದ್ದು ಕೊಂಡಿದ್ದ ಅವರು ಈಗ ಒಂದು ನಸುಗತ್ತಲೆಯ ಕೋಣೆಯಲ್ಲಿದ್ದುಕೊಂಡು ಕಾರ್ಯನಿರ್ವಹಿಕ್ಕಾರಂಭಿಸಿದರು; ಅದು ಅವರು ಮಲಗುವ ಕೋಣೆ, ಬಂದವರನ್ನು ನೋಡುವ ಸ್ಥಳ, ಉದ್ಯೋಗಮಂದಿರ, ಸಾಧನರಿಗೆ ಉಪದೇಶಗೃಹ ಇಷ್ಟೂ ಆಯಿತು.

ಸಾಯಂಕಾಲ ಎರಡುಮೂರು ಘಂಟೆಯ ಹೊತ್ತು ಬಿಟ್ಟರೆ ಮಿಕ್ಕ ಕಾಲವೆಲ್ಲ ಗಂಭೀರನಾಥರು ಅರ್ಧಸಮಾಧಿಯಲ್ಲಿಯೇ ಇರುತ್ತಿದ್ದರು ಸಾಧುಗಳು, ಗೃಹಸ್ಥರು, ಮಠದ ನೌಕರರು, ರೈತರು, ಸಾಧಕರು, ಕಷ್ಟಕ್ಕೆ ಸಿಕ್ಕಿದವರು. ಸರ್ಕಾರಿ ಉದ್ಯೋಗಸ್ಥರು – ಎಲ್ಲರೂ ಇಲ್ಲಿಗೆ ಬಂದು ತಮ್ಮ ತಮ್ಮ ವಿಚಾರವನ್ನು ತಿಳಿಸಿ ಉತ್ತರವನ್ನು ಪಡೆಯುತ್ತಿದ್ದರು. ಸಾಮಾನ್ಯವಾಗಿ ನಗೆಮುಖದಿಂದ 'ಹೂ', 'ಉಹೂ' 'ಸರಿ', 'ಆಗಲಿ', 'ಬೇಡ', 'ಹೀಗೆ ಮಾಡಿ', 'ಇಲ್ಲ' – ಎಂದಿಷ್ಟೇ ಹೇಳುತ್ತಿದ್ದರೂ ಬಂದವರಿಗೆ ಪರಿಪೂರ್ಣತೃಪ್ತಿಯಾಗುತ್ತಿತ್ತು. ಆಶ್ರಮದವರು ತಮ್ಮ ನಡತೆಯೆಲ್ಲವೂ ಮಹಾತ್ಮರಿಗೆ ತಿಳಿದೇ ಇದೆಯೆಂಬ ಅಂಜಿಕೆಯಿಂದ ಕೆಲಸವನ್ನು ಮಾಡುತ್ತಿದ್ದರು. ರೈತರು ಅವರನ್ನು ನಂಬಿ ನೆಮ್ಮದಿಯಿಂದಿರುತ್ತಿದ್ದರು, ಅತಿಥಿಗಳು ತಮಗೆ ಮಠದಲ್ಲಿ ಆದರವು ದೊರೆಯುವದೆಂಬ ಭರವಸೆಯುಳ್ಳವರಾಗಿದ್ದರು.

ಗಂಭೀರನಾಥರು ಪರಮಸಿದ್ಧಿಯನ್ನು ಹೊಂದದವರಾದರೂ ಸಾಮಾನ್ಯಪೂಜಾಪದ್ಧತಿಗಳಿಗೆ ಒಂದಿಷ್ಟೂ ಲೋಪವಿಲ್ಲದಂತೆ ನೋಡಿಕೊಳ್ಳುತ್ತಿದ್ದರು. ಆಯಾ ಕಾಲಕ್ಕೆ ನಡೆಯಬೇಕಾದ ಉತ್ಸವಗಳನ್ನು ತಪ್ಪದೆ ನಡೆಯುವಂತೆ ಏರ್ಪಡಿಸಿರುತ್ತಿದ್ದರು. ಸಾಧುಗಳಿಗೂ ವಿದ್ವಾಂಸರಿಗೂ ತಕ್ಕ ಸಂಭಾವನೆ ದೊರೆಯುವಂತೆ ಏರ್ಪಡಿಸಿದ್ದರು. ಬಡವರಿಗೆಲ್ಲ ಅನ್ನಬಟ್ಟೆಗಳನ್ನು ಕೊಡಿಸುತ್ತಿದ್ದರು. ದುರ್ಬಲರು, ಅವಿದ್ಯಾವಂತರು, ರೋಗಿಗಳು ಎಲ್ಲರಿಗೂ ಆದರವು ದೊರೆಯುವಂತೆ ಏರ್ಪಡಿಸಿದ್ದರು. ಹೆಂಗಸರು, ಮಕ್ಕಳು, ವೃದ್ಧರು- ಯಾರಿಗೂ ಅಲ್ಲಿ ಕೊಟ್ಟೇಯಿರಲಿಲ್ಲ. ಮಾನವರನ್ನೇ ಕೀಳುಪ್ರಾಣಿಗಳನ್ನೂ ಗಂಭೀರನಾಥರು ಪೂಜ್ಯಬುದ್ಧಿಯಿಂದ ಕಾಣುತ್ತಿದ್ದರು. ಮಠದಲಿದ್ದ ಒಂದು ಹುಲಿಯು ಅವರ ಸನ್ನಿಧಿಯಲ್ಲಿ ಶಾಂತಸ್ವಭಾವವನ್ನೇ ಯಾವಾಗಲೂ ತಳೆದಿರುತ್ತಿತ್ತು.

ನಾಥರು ಯಾವ ಮತದಲ್ಲಿಯೂ ಅನಾದರವನ್ನು ತೋರಿಸುತ್ತಿರಲಿಲ್ಲ. ಎಲ್ಲಾ ಮತಗಳೂ ಒಬ್ಬ ಪರಮಾತ್ಮನನ್ನು ಸೇರುವ ಮಾರ್ಗಗಳೇ ಎಂದು ಶೋಧಿಸುತ್ತಿದ್ದರು. ಅವರ ಜೀವಮಾನದ ಕೊನೆಯ ಏಳೆಂಟು ವರ್ಷಗಳಲ್ಲಿ ಅವರಿಗೆ ನೂರಾರು ಜನ ಶಿಷ್ಯರಾದರು. ಸರ್ವತ್ರಸಮಬುದ್ಧಿಯೊಂದೇ ಹೆಚ್ಚೆಂಬುದನ್ನು ಅವರು ನಡೆಯಿಂದಲೂ ನುಡಿಯಿಂದಲೂ ಶಿಷ್ಯರಿಗೆ ಬೋಧಿಸುತ್ತಿದ್ದರು. ತಾವು ಹಠಯೋಗ ರಾಜಯೋಗದಲ್ಲಿ ಪೂರ್ಣಸಿದ್ಧರಾಗಿದ್ದರೂ ಕಲಿಯುಗಕ್ಕೆ ಭಕ್ತಿಯೋಗ, ನಿಷ್ಕಾಮಕರ್ಮ - ಇವೇ ತಕ್ಕ ಸಾಧನಗಳೆಂದು ಹೇಳುತ್ತಿದ್ದರು. ಲೋಕಕುಟುಂಬಿಯಾದ ಪರಮೇಶ್ವರನ ಆಡಳಿತದಲ್ಲಿ ಎಲ್ಲಾ ಸ್ಥಿತಿಯ ಜನರೂ ಸ್ವಾತಂತ್ರ್ಯದಿಂದಲೂ ಶ್ರದ್ಧಾವಿಶ್ವಾಸಗಳಿಂದಲೂ ವರ್ತಿಸುವಂಗೆ ಆ ಮಹಾತ್ಮರ ಸನ್ನಿಧಿಯಲ್ಲಿ ಎಲ್ಲಾರು ಭಯಭಕ್ತಿಯಿಂದ ನೆಮ್ಮದಿಯಾಗಿ ಬಾಳುತ್ತಿದ್ದರು.

★★★★★

# ಶ್ರೀ ಉತ್ತಮನಾಥಸ್ವಾಮಿಗಳವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ನಿಜವಾದ ಸಂನ್ಯಾಸಿಗಳಿಂದ ಲೋಕಕ್ಕೆ ಎಂಥ ಕಲ್ಯಾಣವಾಗ ಬಹುದೆಂಬುದನ್ನು ಶ್ರೀ ಉತ್ತಮನಾಥ ಗುರುಮಹಾರಾಜರವರ ಜೀವನ ವೃತ್ತಾಂತದಿಂದ ನಾವು ಊಹಿಸಬಹುದಾಗಿದೆ. ಈ ಮಹಾತ್ಮರು ಜೈಸಲಮೇರ್ ಸಂಸ್ಥಾನದಲ್ಲಿರುವ ಜೋಫಲೇ ಎಂಬ ಊರಿನಲ್ಲಿ ಶ್ರೀ ಜೇಠಮಲ ಸಿಂಹಜೀ ಭಾಟೀ ರಾಜಪೂತ – ಇವರ ಮನೆಯಲ್ಲಿ ಜನಿಸಿದರು. ತಮ್ಮ ತಂದೆಯವರಿಗೆ ಸತ್ಸಂಗದಲ್ಲಿದ್ದ ಪ್ರೇಮದ ಪ್ರಭಾವದಿಂದ ಇವರೂ ಸಾಧುಸಂತರ ಸೇವೆಯಲ್ಲಿ ನುರಿತು ವಿರಕ್ತರಾಗಿ ತಮ್ಮ ಇಪ್ಪತ್ತಮೂರನೆಯ ವಯಸ್ಸಿನಲ್ಲಿಯೇ ಶ್ರೀನವಲನಾಥಜಿಯವರಿಂದ ಸಂನ್ಯಾಸದೀಕ್ಷೆಯನ್ನು ವಹಿಸಿದರು.

ಸ್ವಾಮಿಗಳ ಮತ್ತು ಅವರ ದೀಕ್ಷಾಗುರುಗಳ ಹೆಸರಿನಿಂದಲೇ ಅವರು ನಾಥಸಂಪ್ರದಾಯಕ್ಕೆ ಸೇರಿದವರೆಂಬುದನ್ನು ಊಹಿಸಬಹುದಾಗಿದೆ. ಆದರೂ ಅವರಿಗೆ ಸಿದ್ಧಾಂತದಲ್ಲಿ ಪ್ರೇಮವು ಹೆಚ್ಚಾಗಿದ್ದಿತೇ ಹೊರತು ಸಂಪ್ರದಾಯಾಂಧತೆಯೇನೂ ಇರಲಿಲ್ಲ. ಈ ಗುರುಪರಂಪರೆಯಲ್ಲಿ ಮುಖ್ಯವಾಗಿ ಶ್ರೀಶಂಕರಚಾರ್ಯರಿಂದ ಪ್ರತಿಪಾದಿತವಾಗಿರುವ ಅದ್ವೈತವೇ ಸಿದ್ಧಾಂತವಾಗಿ ತ್ತೆಂಬುದು ಅವರು ಬರೆದಿರುವ ''ಬಾನಿ'' ಮತ್ತು ''ಶಬ್ದ''ಗಳಿಂದ ಸ್ಪಷ್ಟವಾಗುತ್ತದೆ.

ಸ್ವಾಮಿಗಳು ಚಳಿಗಾಲದಲ್ಲಿ ಬಹುಮಟ್ಟಿಗೆ ಹೃಷೀಕೇಶದಲ್ಲಿರುತ್ತಿದ್ದರು. ಬೇಸಗೆಯಲ್ಲಿಯೂ ಚಾತುರ್ಮಾಸ್ಯಕಾಲದಲ್ಲಿಯೂ ರಾಜಪೂತಾನದ ಬೇರೆಬೇರೆಯ ಕಡೆಗಳಲ್ಲಿ ವೇದಾಂತೋಪದೇಶವನ್ನು ಮಾಡಿಕೊಂಡಿರುತ್ತಿದ್ದರು. ಆಷಾಢ ಶುದ್ಧ ಏಕಾದಶಿಯಿಂದ ಭಾದ್ರಪದ ಶುದ್ಧ ಏಕಾದಶಿಯವರೆಗೆ ಮಾತ್ರ ಒಂದೇ ಸ್ಥಾನದಲ್ಲಿದ್ದುಕೊಂಡು ಭಗವದ್ಗೀತೆ, ಯೋಗವಾಸಿಷ್ಠ – ಮುಂತಾದ ಗ್ರಂಥಗಳ ಪ್ರವಚನವನ್ನು ಮಾಡುತ್ತಿದ್ದರು. ವೇದಾಂತದಂಥ ಗಹನವಿಷಯವನ್ನು ಕೂಡ ಸಾಧಾರಣಬುದ್ಧಿಯವರಿಗೂ ಸುಲಭವಾಗಿ ತಿಳಿಯುವಂತೆ ಇತಿಹಾಸ, ದೃಷ್ಟಾಂತ, ಕವಿತೆಗಳು, ವಾಣಿಗಳು ಮುಂತಾದವುಗಳನ್ನು ಅತ್ಯಂತವಾಗಿ ಮನೋರಂಜನವಾಗುವಂತೆ ಹೇಳುತ್ತಾ ಶ್ರೋತೃಗಳ ಚಿತ್ತವನ್ನು ತಮ್ಮ ಕಡೆಗೆ

ಸೆಳೆದುಕೊಂಡು ಅವರಿಗೆ ಶ್ರವಣದಲ್ಲಿಯೇ ಲಾಲಸೆಯುಂಟಾಗುವಂತೆ ಮಾಡುತ್ತಿದ್ದರು.

ಸ್ವಾಮಿಗಳು ಎಂಥ ಕಗ್ಗಂಟಿನ ಪ್ರಶ್ನೆಗಳನ್ನಾಗಲಿ ಬೇಸರಗೊಳ್ಳದೆ ಎಷ್ಟು ಆಯಾಸವಾದರೂ ಲೆಕ್ಕಿಸದೆ ತಾಳ್ಮೆಯಿಂದ ಬಿಡಿಸಿ ಜಿಜ್ಞಾಸುಗಳಿಗೆ ತೃಪ್ತಿಯನ್ನುಂಟುಮಾಡುತ್ತಿದ್ದರು. ಬರಿಯ ಒಣತರ್ಕವನ್ನು ಮುಖ್ಯವಾಗಿಟ್ಟು ಕೊಳ್ಳದೆ ಅನುಭವಪ್ರದವಾದ ವಿಷಯಗಳನ್ನೇ ತಿಳಿಸಿಕೊಡುತ್ತಾ ನಡತೆಯನ್ನು ಉತ್ತಮಗೊಳಿಸುವ ವ್ಯಾವಹಾರಿಕಜ್ಞಾನವನ್ನು ಹೆಚ್ಚಿಸುವ ವಿಚಾರಗಳನ್ನೂ ತಮ್ಮ ನಿರೂಪಣದ ನಡುವೆ ತುಂಬಿರುತ್ತಿದ್ದರು. ಅವರಿರುವಡೆಯಲ್ಲಿ ನೂರಾರು ಜನಗಳು ನೆರೆದೇ ಇರುತ್ತಿದ್ದರು. ಮತ್ತು ತಮ್ಮಲ್ಲಿಗೆ ಬಂದವರಲ್ಲಿ ಪ್ರತಿಯೊಬ್ಬನಿಗೂ ಯಥಾಯೋಗ್ಯವಾಗಿ ತಿಳಿವಳಿಕೆಯನ್ನುಂಟುಮಾಡದೆ ಬಿಡುತ್ತಿರಲಿಲ್ಲ ಅವರ ಸತ್ಸಂಗದಿಂದ ನೂರುಗಟ್ಟಲೆ ಹೆಂಗಸರೂ, ಗಂಡಸರೂ ಉತ್ತಮಲಾಭವನ್ನು ಹೊಂದಿ ಮನಶ್ಶಾಂತಿಯನ್ನು ಪಡೆದುಕೊಂಡಿರುತ್ತಾರೆ. ರಾಜರು, ಸಿರಿವಂತರು-ಮೊದಲಾದವರಿಂದ ಹಿಡಿದು ಅತ್ಯಂತಸಾಧಾರಣವ್ಯಕ್ತಿಗಳಿಗೂ ಅವರಿಂದ ಪ್ರಯೋಜನವನ್ನು ಹೊಂದುವದಕ್ಕೆ ಅವಕಾಶವಿರುತ್ತಿತ್ತು. ಅಸ್ಪೃಶ್ಯರಾದ ಚಂಡಾಲರಿಗೆ ಕೂಡ ಅವರ ಸದುಪದೇಶವು ಸಿಕ್ಕದೆ ಹೋಗಲಿಲ್ಲ.

ಬಿಕಾನೇಕ್ ಜೈಸಲಮೇರ್ ರಾಜ್ಯಗಳ ಮಹಾರಾಜರುಗಳು ಇವರಲ್ಲಿ ಹೆಚ್ಚಿನ ಪೂಜ್ಯಭಾವವಿರುತ್ತಿತ್ತು. ಜೈಸಲಮೇರಿನಲ್ಲಿ ರಾಜಪುತ್ರರು ತಮ್ಮ ಹೆಣ್ಣುಮಕ್ಕಳನ್ನು ಬಹುಮಟ್ಟಿಗೆ ಕೊಂದುಹಾಕಿಬಿಡುತ್ತಿದ್ದರಂತೆ; ಸರ್ವಕಾಲದಲ್ಲಿ ಅಲ್ಲಿ ಪಶುಬಲಿಯು ಮಿತಿಮೀರಿ ನಡೆಯುತ್ತಿತ್ತಂತೆ. ಈ ಎರಡು ಕೆಟ್ಟ ಪದ್ಧತಿಗಳನ್ನು ಬಲುಮಟ್ಟಿಗೆ ಉತ್ತಮನಾಥಜಿಯವರು ತಮ್ಮ ಉಪದೇಶಬಲದಿಂದ ಕಡಿಮೆಮಾಡಿಸಿದರು. ಎಷ್ಟೋಜನ ಜಹಗೀರುದಾರರೂ ಸಾಧಾರಣ ರಾಜಪೂತರೂ ಇವರ ಉಪದೇಶದಿಂದ ಮದ್ಯ, ಅಫೀಮು - ಮುಂತಾದ ಮಾದಕದ್ರವ್ಯಗಳ ಸೇವನೆಯನ್ನು ನಿಲ್ಲಿಸಿಬಿಟ್ಟರು. ಇವರ ಉಪದೇಶದ ಪ್ರಭಾವದಿಂದ ಹಲವು ಕಡೆಗಳಲ್ಲಿ ಹಲವು ಭಾವಿಗಳೂ ಹೊಂಡಗಳೂ ನಿರ್ಮಾಣವಾದವು.

ಸ್ವಾಮಿಗಳು ಅತ್ಯಂತ ಸರಳಜೀವನದವರು. ತಮ್ಮ ಬಟ್ಟೆಗಳು, ಒಂದೆರಡು ವೇದಾಂತಪುಸ್ತಕಗಳು - ಇವು ಹೊರತು ಅವರ ಬಳಿ ಮತ್ತೇನೂ ಇರುತ್ತಿರಲಿಲ್ಲ. ಭಕ್ತರು ಕೊಟ್ಟ ಫಲಪುಷ್ಪಗಳನ್ನು ದರ್ಶನಕ್ಕೆ ಬಂದವರಲ್ಲಿಯೇ ಹಂಚಿಬಿಡುತ್ತಿದ್ದರು. ಶಿಷ್ಯರು ಆಗ್ರಹಮಾಡಿದ ಕೆಲಸಂದರ್ಭಗಳಲ್ಲಿ ಹೊರತು ರೈಲಿನಲ್ಲಿ ಯಾವಾಗಲೂ ಎರಡನೆಯ ತರಗತಿಯ ಗಾಡಿಯನ್ನು ಹತ್ತಿದವರಲ್ಲ. ಶಿಷ್ಯರನ್ನು ಬಹುಕಾಲ ಹತ್ತಿರವಿಟ್ಟುಕೊಳ್ಳದೆ ಬೇಗಬೇಗನೆ ಕಳುಹಿಸಿಕೊಟ್ಟು ಬಿಡುತ್ತಿದ್ದರು. ಅವರು ತಮ್ಮಲ್ಲಿಗೆ ಬಂದವರಿಗೆ ಯಾವದಾದರೊಂದು ಸದ್ವಿಚಾರವನ್ನು ಮನಸ್ಸಿಗೆ ಹತ್ತಿಸಿಯೇ ತೀರುತ್ತಿದ್ದರು. ತಮ್ಮ ಪ್ರತಿಯೊಂದು ನಿರೂಪಣದ ಕೊನೆಯಲ್ಲಿಯೂ ''**ಪರಹಿತ ಸರಿಸ ಧರ್ಮ ನಹಿ ಬಾಈ! ಪರಪೀಡಾ ಸಮ ನ ಹಿ ಅಧಮಾಈ**'' ಎಂಬ ಪರೋಪಕಾರಪ್ರಶಂಸೆಯ ಚೌಪದಿಯನ್ನೂ ಹರೇರಾಮಮಂತ್ರವನ್ನೂ ಭಜನೆಮಾಡಿಸುತ್ತಿದ್ದರು.

ಸಂವತ್ಸರ 1986ನೆ ಆಶ್ವಿನಮಾಸದಲ್ಲಿ ಜೋಧಪುರದಲ್ಲಿ ಅವರು ಒಂದು ಎತ್ತರವಾದ ಮಹಡಿಯಮೇಲಿನಿಂದ ಬಿದ್ದಕಾರಣ ಮುಖಕ್ಕೆ ಬಲವಾದ ಪೆಟ್ಟು ಬಿದ್ದು ಅಪರೇಷನ್ ಆಗಬೇಕಾಯಿತು. ಕ್ಲೋರೋಫಾರಂ ಇಲ್ಲದೆಯೇ ಆ ಶಸ್ತ್ರ ಚಿಕಿತ್ಸೆಯನ್ನು ವಹಿಸುವಷ್ಟು ಸಹಿಷ್ಣುಗಳಾಗಿದ್ದರು, ಆ ಮಹಾತ್ಮರು! ಈ ಹೆಚ್ಚಿನ ಫಲವಾಗಿ ಅವರ ಮೂಗಿನ ಮೇಲೆ ಒಂದು ಗಾಯವು ಉಳಿದುಕೊಂಡುಬಿಟ್ಟಿತು, ಅವರ ಪಾಚನಶಕ್ತಿಯೂ ಕಡಿಮೆಯಾಗಿಬಿಟ್ಟಿತು. ಇದಾದ ಒಂದು ವರ್ಷದಮೇಲೆ ಸ್ವಾಮಿಗಳು ಒಂದು ಕಾಡಿನಲ್ಲಿ ಹೋಗುತ್ತಿರುವಾಗ ಒಂದು ಹುಚ್ಚು ಕಾಡುಹಂದಿ ಅವರ ಹೆಬ್ಬೆಟ್ಟನ್ನೂ ಮತ್ತು ಒಂದು ಬೆರಳನ್ನೂ ಕಡಿದು ತಿಂದದ್ದಲ್ಲದೆ ಮೈಮೇಲೆಯೂ ಬಿತ್ತು; ತಾವು ಒಬ್ಬರೇ ಇದ್ದರೂ ಅವರು ಅದರ ಮುಖವನ್ನು ಎರಡು ಕೈಗಳಿಂದಲೂ ಹಿಡಿದುಕೊಂಡು ಅದನ್ನು ಹಿಂತಳ್ಳುತ್ತಾ ಅರ್ಧಘಂಟೆಯವರೆಗೂ ಅದು ಮುನ್ನುಗ್ಗದಂತೆ ನೋಡಿಕೊಂಡಿದ್ದರು. ಅಂಥ ಕ್ಷತ್ರಿಯತೇಜಸ್ಸು, ಬ್ರಹ್ಮಚರ್ಯ, ಮತ್ತು ಆತ್ಮಶಕ್ತಿ ಆ ಮಹಾತ್ಮರದು! ಡಾಕ್ಟರರ ಆಗ್ರಹದಿಂದ ಹದಿನೈದು ದಿನಗಳು ಆಸ್ಪತ್ರೆಯಲ್ಲಿದ್ದ ಬಳಿಕ ಹಂದಿಯ ವಿಷವೇನೋ ಶಾಂತವಾದರೂ ಅವರ ಪಾಚನಶಕ್ತಿ ದಿನದಿನಕ್ಕೆ ಕಡಿಮೆಯಾಗುತ್ತಾಬಂತು ಇವರಿಗೆ ಮುಖ್ಯವಾಗಿ ಉದರವ್ಯಾಧಿ ಇದ್ದೇ ಇತ್ತು. ಸಂವತ್ 1988 ಮಾಘ ಶುದ್ಧ 11ನೆಯ

ದಿನ ತಮ್ಮ 51ನೆಯ ವಯಸ್ಸಿನಲ್ಲಿ ಬಿಕಾನೇರ್ ನಗರದಲ್ಲಿ ಬ್ರಹ್ಮೀಭೂತರಾದರು. ಬೇನೆಯಲ್ಲಿದ್ದಾಗಲೂ ಆತ್ಮವಿಚಾರವನ್ನು ಮಾಡುತ್ತಲೇ ಇದ್ದು ''ವಾಣಿ''ಗಳನ್ನು ಗಾನಮಾಡಿಸುತ್ತಾ ಶಾಂತಿಯಿಂದ ಪರಿಪೂರ್ಣರಾಗಿಯೇ ದೇಹತ್ಯಾಗವನ್ನು ಮಾಡಿದ ಧೀರರೀ ಮಹಾಸ್ವಾಮಿಗಳು!

★★★★★

# ಭಕ್ತವರ ನಾಮದೇವ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಹೈದರಾಬಾದನ ಸಂಸ್ಥಾನದಲ್ಲಿ ನರಸೀಬ್ರಾಹ್ಮಣ ಎಂಬ ಗ್ರಾಮದಲ್ಲಿ ಭಕ್ತವರನಾಮದೇವನು ಕ್ರಿ.ಶ.1270ರಲ್ಲಿ ಜನಿಸಿದನು. ಈತನ ಜನ್ಮದ ವಿಷಯದಲ್ಲಿ ಬಗೆಬಗೆಯ ಕಥೆಗಳನ್ನು ಹೇಳುತ್ತಾರೆ. ಅವುಗಳಲ್ಲಿ ಎಷ್ಟರಮಟ್ಟಿನ ನಿಜವಿದೆಯೆಂಬುದನ್ನು ಶೋಧನೆಯಿಂದ ಪುರಾತತ್ತ್ವಶೋಧಕರು ಕಂಡುಹಿಡೀಯಬೇಕಾಗಿದೆ. ಆದರೆ ಭಾವುಕರಿಗೆ ಭಗವದ್ಭಕ್ತರ ಚರಿತ್ರವು ಮುಖ್ಯವಾದದ್ದು. ಆದ್ದರಿಂದ ನಾಮದೇವನ ಪೂರ್ವಜರು ಸದಾಚಾರಿಗಳೂ ಸರಳ ಪ್ರಕೃತಿಯವರೂ ಭಗವದ್ಭಕ್ತರೂ ಆಗಿದ್ದರೆಂಬುದು ಅವರಿಗೆ ಸಾಕಾಗಿದೆ. ನಾಮದೇವನು ಹುಟ್ಟಿದ್ದು ಚಿಪ್ಪಿಗರ ಕುಲದಲ್ಲಿ; ಆದರೆ ಅವನು ತನ್ನ ಪ್ರೇಮಸೂಚಿಯಿಂದ ಇಡಿಯ ಭೂಮಂಡಲವನ್ನೇ ಪರಮಾತ್ಮನ ಪೀತಾಂಬರವಾಗಿ ಹೊಲೆದುಬಿಟ್ಟಿರುತ್ತಾನೆ. ಭಗವಂತನಿಗೆ ಯಾವ ಕುಲಜಾತಿಗಳೂ ಇಲ್ಲ; ಆತನ ಭಕ್ತರಲ್ಲಿ ಕುಲಜಾತಿಗಳಿಂದ ಭಿನ್ನಭಾವವನ್ನು ಎಣಿಸುವದಕ್ಕಾದೀತೆ?

ನಾಮದೇವನು ಬಾಲ್ಯದಿಂದಲೂ ಮನೆಯವರ ಭಕ್ತಿಮಾರ್ಗದ ಹೊರಚಿಹ್ನೆಗಳನ್ನು ಅನುಕರಿಸುತ್ತಿದ್ದನು. ಅವರು ಭಗವಂತನ ನಾಮವನ್ನು ಗಾನಮಾಡುತ್ತಾ ಭಗವಂತನ ಗುಣಗಳನ್ನು ಮನದಂದುಕೊಂಡು ಹಿಗ್ಗುತ್ತಿದ್ದರು. ಈ ಹುಡುಗನೂ ಅವರ ನಾಮಗಾನವನ್ನು ಕೇಳಿಕೇಳಿ ಅದನ್ನೇ ಕಲಿತುಕೊಳ್ಳುತ್ತಿದ್ದನು. ವಿಠಲನ ಮೂರ್ತಿಗಳನ್ನು ಮಾಡಿಕೊಂಡು ಪೂಜಿಸುವದು, ವಿಠಲನಾಮವನ್ನು ಗಾನಮಾಡುವದು, ವಿಠಲನ ಜಯಕಾರವನ್ನು ಘೋಷಣಮಾಡುವದು,

ಪಂಢರಪುರದ ವೃತ್ತಾಂತವನ್ನು ಕೇಳುವದು - ಇದೇ ನಾಮದೇವನ ಬಾಲಲೀಲೆಯಾಯಿತು. ಅವನ ಮನಸ್ಸಿನಲ್ಲಿ ವಿಠಲಮೂರ್ತಿ ಎಂದರೆ ಚಿನ್ಮಯವೇ ಆತನೇ ನಿಜವಾದ ಭಗವಂತನು - ಎಂದು ದೃಢವಾದ ನಂಬಿಕೆಯಾಗಿಬಿಟ್ಟಿತ್ತು. ಒಮ್ಮೆ ಇವನ ಅಜ್ಜನು ಕಾರ್ಯವಶದಿಂದ ಊರನ್ನು ಬಿಟ್ಟು ಎಲ್ಲಿಯೋ ಹೋಗಿದ್ದಾಗ ಆತನ ಪದ್ಧತಿಯಂತೆ ತಾನೂ ದೇವರಿಗೆ ನೈವೇದ್ಯ ಸಮರ್ಪಣೆಮಾಡಿ ಹಾಲನ್ನು ಕುಡಿಯಬೇಕೆಂದು ಪೂಜಾಸಾಮಗ್ರಿಯನ್ನು ತೆಗೆದುಕೊಂಡು ಹೋದನಂತೆ. ಆಗ ಆತನ ಭಕ್ತಿಭಾವಕ್ಕೆ ಮೆಚ್ಚಿದ ಭಗವಂತನು ಸಾಕ್ಷಾತ್ತಾಗಿಯೇ ಹಾಲನ್ನು ಸ್ವೀಕರಿಸಿದನಂತೆ! ನಾಮದೇವನು ಇನ್ನೂ ಒಂಬತ್ತು ವರ್ಷದವನಾಗಿರುವಾಗಲೇ ಪಂಢರಪುರಕ್ಕೆ ವಾರಕರಿ ನಡೆಯುವ ಭಾಗವತರಲ್ಲಿ ಗಣನೆಯಾದನೆಂದು ಹೇಳುತ್ತಾರೆ.

ನಾಮದೇವನಿಗೆ ತೀರ ಚಿಕ್ಕ ವಯಸ್ಸಿನಲ್ಲಿಯೇ ಮದುವೆಯಾಯಿತು. ಆದರೆ ಅವನಿಗೆ ವಯಸ್ಸಾದ ಹಾಗೆಲ್ಲ ವೈರಾಗ್ಯವೂ ಹೆಚ್ಚುತ್ತಿತ್ತು. ಭಕ್ತಿಯೂ ಶುದ್ಧತರವಾಗುತ್ತಾಬಂತು. ಬರುಬರುತ್ತಾ ಅವನಿಗೆ ನಾಮಕೀರ್ತನವನ್ನು ಬಿಟ್ಟು ಮತ್ತೇನು ಮಾಡುವದೂ ಆಗದಂತಾಯಿತು. ಆಗ ಆತನು ಊರನ್ನು ಬಿಟ್ಟು ಪಂಢರಪುರಕ್ಕೇ ಹೋಗಿ ಅಲ್ಲಿಯೇ ನೆಲೆಸಿಬಿಟ್ಟನು. ಅಲ್ಲಿ ಸುಪ್ರಸಿದ್ಧರಾಗಿದ್ದ ಭಕ್ತರೊಡನೆ ಸೇರಿಕೊಂಡು ಭಜನಕೀರ್ತನದಲ್ಲಿ ಮಗ್ನನಾಗಿಬಿಟ್ಟನು.

ಪಂಢರಪುರವೆಂಬುದೊಂದು ನಿರುಪಮವಾದ ಪುಣ್ಯಕ್ಷೇತ್ರವು. ಅದನ್ನು ''ನಾಮದ ಬಜಾರ್'' ಎಂದು ತುಕಾರಾಮರು ಬಣ್ಣಿಸಿರುತ್ತಾರೆ. ''ಅಲ್ಲಿ ನಾಮವನ್ನೇ ಕೊಡುತ್ತಾರೆ, ನಾಮವನ್ನೇ ಕೊಳ್ಳುತ್ತಾರೆ; ಅದರಿಂದ ಅವರ ಕುಲವೇ ಉದ್ಧಾರವಾಗುತ್ತದೆ. ಆಷಾಢದಲ್ಲಿಯೂ ಕಾರ್ತಿಕದಲ್ಲಿಯೂ ಯಾತ್ರೆಯ ಜನರು ಅಲ್ಲಿ ತುಂಬಿರುತ್ತಾರೆ ಭಗವಂತನ ಜಯ ಜಯಕಾರವು ಎಲ್ಲೆಲ್ಲಿಯೂ ಕೇಳಬರುತ್ತಿರುವದು. ಅಲ್ಲಲ್ಲಿಗೆ ಸಂತರು ಸಿಕ್ಕುವರು, ಅವರು ಬ್ರಹ್ಮಸಾರವನ್ನೇ ಪಾನಮಾಡುತ್ತಿರುವದು. ಊರಲ್ಲೆಲ್ಲ ಜನರ ಸಂದಣಿ, ನೂಕುನುಗ್ಗಿನ ಸೊಗಸು! ಪಂಢರಿ! ಪಂಢರಿ!- ಎಂದು ಉಚ್ಚರಿಸಿದರೂ ಸಾಕು, ಪಾಪವು ನಾಶವಾಗುವದು! ನಾಮದ ಉತ್ಸವವೇ ನಡೆಯುತ್ತಿರುವ ಆ ಸ್ಥಳವು ಜಗತ್ತಿನಲ್ಲಿಯೇ ಧನ್ಯ, ಧನ್ಯ! ಅದು ಪ್ರೇಮಾದರಗಳ ಗನಿಯು, ಅಲ್ಲಿರುವವರಿಗೆ ಋದ್ಧಿಸಿದ್ಧಿಗಳು ತಾವೇ ಹೊರಳಾಡಿಕೊಂಡು ಬರುವವು! ಕೇಳಿರಿ! ಅದು ವೈಕುಂಠಕ್ಕಿಂತ ಒಂದಕ್ಷರ

ಹೆಚ್ಚು, ಆದ್ದರಿಂದ ಅದನ್ನು ಭೂವೈಕುಂಠವೆನ್ನುವರು! ಯಾರಾದರೂ ಪಂಢರಿಗೆ ಹೋಗೋಣ ಎನ್ನುತ್ತಿರುವರು. ಅಲ್ಲಿ ಸಂಸಾರ ವಿರುವದನ್ನುವವರು ಹೊಲೆಯರು! ಭಾವ ಇರಲಿ, ಇಲ್ಲದಿರಲಿ, ಪಾಂಡುರಂಗನನ್ನು ನೋಡಿದವರಿಗೆ ಸಂಸಾರವಿಲ್ಲವೇ ಇಲ್ಲ, ಚಂದ್ರಭಾಗಾನದಿಯಲ್ಲಿ ಸ್ನಾನಮಾಡಿದವರಿಗೆ ಸಂಸಾರವು ಎಂದಿಗೂ ಇರದು'' ಹೀಗೆಲ್ಲ ಭಕ್ತರು ಕೊಂಡಾಡಿರುವ ಕ್ಷೇತ್ರವದು!

ಇಂಥ ಕ್ಷೇತ್ರಕ್ಕೆ ಬರಿಯ ಜಾತ್ರೆಗಾಗಿ ಹೋಗುವದು ನಾಮದೇವನಿಗೆ ತೃಪ್ತಿದಾಯಕವಾಗಲಿಲ್ಲ ಅವನಿಗೆ ಅದೇ ವಾಸಸ್ಥಲವಾಗಿಬಿಟ್ಟಿತು. ನದಿಯಲ್ಲಿ ಸ್ನಾನ ಭಕ್ತರ ಮತ್ತು ವಿಠಲನ ದರ್ಶನ, ನಿರಂತರವಾಗಿ ಬಂದುಹೋಗುವ ಭಕ್ತರ ಸಂಗ ಮಹಾದ್ವಾರದಬಳಿಯೂ ನದಿಯ ದಂಡೆಯಲ್ಲಿಯೂ ನಡೆಯುತ್ತಿರುವ ಕಥಾಕೀರ್ತನದಲ್ಲಿ ಮಗ್ನರಾಗಿರುವದು. ಈ ಸೌಭಾಗ್ಯವು ಆತನಿಗೆ ಪ್ರಾಪ್ತವಾಯಿತು! ಅವನು ಸೊಂಟದಮೇಲೆ ಕೈಯಿಟ್ಟುಕೊಂಡು ಇಟ್ಟಿಗೆಯಮೇಲೆ ನಿಂತಿರುವ ಪಂಢರಿನಾಥನ ಧ್ಯಾನದಿಂದ ಮತ್ತನಾಗಿರುತ್ತಿದ್ದನು! ''ಭಗವಂತ, ನಿನ್ನ ಪ್ರೇಮವು ನನ್ನನ್ನು ಎಳೆದು ತಂದಿರುತ್ತದೆ! ನನ್ನ ನಿನ್ನ ಸಂಬಂಧವು ಶರೀರಾತ್ಮರ ಸಂಬಂಧವಾಗಿ ರುತ್ತದೆ. ಇಷ್ಟೇ ಅಲ್ಲ, ಅವೆರಡೂ ನೀನೇ ಆಗಿರುವೆ'' ಎಂದು ಒಂದು ಕಡೆ ಹೇಳಿಕೊಂಡಿರುತ್ತಾನೆ. ಅವನು ಒಂದು ಅಭಂಗದಲ್ಲಿ ಭಗವಂತನಲ್ಲಿ ಆಡಿರುವ ಪ್ರೇಮದ ಸಲಿಗೆಯ ಮಾತುಗಳು ಅವನ ಭಕ್ತಿಯ ಆಳವನ್ನು ಸೂಚಿಸುತ್ತವೆ; ''ವಿಠಲ, ನಿನ್ನ ನಾಮದ ಅಗ್ಗಳಿಕೆಯು ಭಕ್ತರಿಂದಾಗಿರುವದು. ನಿನಗೆ ಹಲವು ನಾಮರೂಪಗಳನ್ನು ತೊಡಿಸಿ ಅಲಂಕರಿಸಿರುವವರೂ ಭಕ್ತರೇ, ನಿಜವಾಗಿ ನಿನಗೆ ನಾಮವಿಲ್ಲ, ರೂಪವಿಲ್ಲ, ಜಾತಿಯಿಲ್ಲ, ಕುಲವಿಲ್ಲ! ಇದೆಲ್ಲವೂ ನಿನಗೆ ಬಂದಿರುವದು ಭಕ್ತರಿಂದ! ನಿನಗೆ ಭಕ್ತವತ್ಸಲನೆಂಬ ಬಿರುದು ಬಂದಿರುವದೂ ಭಕ್ತರಿಂದಲೇ ನಿನ್ನ ದೊಡ್ಡಸ್ತಿಕೆಯು ನಮ್ಮಿಂದ! ಆದ್ದರಿಂದ ನಾವು ನಿನ್ನ ವಿಷಯಕ್ಕೆ ಹುಚ್ಚರಾಗಿರುವಂತೆಯೇ ನೀನು ನಮ್ಮ ವಿಷಯಕ್ಕೆ ಇರಬೇಕು. ಒಂದು ವೇಳೆ ಹಾಗಾಗದೆ ಇದ್ದರೆ ತಾನೆ ಕಷ್ಟವೇನು? ನಮ್ಮ ಪ್ರೇಮವನ್ನಾಗಲಿ ಆನಂದವನ್ನಾಗಲಿ ನೀನು ಅಪಹರಿಸಲಾರೆಯಷ್ಟೆ? ''ಇಂಥ ಅನನ್ಯಪ್ರೇಮ ಯುಕ್ತವಾದ ವಚನಗಳು ನಾಮದೇವನ ಅಭಂಗಗಳಲ್ಲಿ ತುಂಬಿರುವವು.

ಪ್ರಸಿದ್ಧರಾದ ಶ್ರೀಜ್ಞಾನೇಶ್ವರ ಸಾಧುಗಳು ಒಮ್ಮೆ ತೀರ್ಥಯಾತ್ರೆಗೆ ಹೋಗಿ ಬರೋಣವೆಂದು ನಾಮದೇವನನ್ನು ಕರೆದರಂತೆ. ಆದರೆ ಆತನು

ವಿಠಲನ ಅಪ್ಪಣೆಯಿಲ್ಲದೆ ಬರಲಾರೆನು ಎನ್ನಲು ಭಕ್ತಾಭೀಷಪ್ರದನಾದ ಶ್ರೀಹರಿಯು ''ಅಪ್ಪ, ನಾಮದೇವನು ನನ್ನ ಮುದ್ದುಕಂದನು! ಅವನನ್ನು ಒಂದು ಕ್ಷಣವೂ ಬಿಟ್ಟಿರಲಾರೆನು. ನೀನು ಬೇಕಾದರೆ ಇವನನ್ನು ಕರೆದುಕೊಂಡುಹೋಗು ಆದರೆ ಇವನನ್ನು ದಾರಿಯಲ್ಲಿ ಸರಿಯಾಗಿ ನೋಡಿಕೊಳ್ಳಬೇಕು, ಕಂಡೆಯ'' ಎಂದು ನಾಮದೇವನ ಕೈಯನ್ನು ಜ್ಞಾನೇಶ್ವರರ ಕೈಯಲ್ಲಿಟ್ಟ...! ಜ್ಞಾನಭಕ್ತಿಗಳ ಸಮ್ಮಿಲನವಾಯಿತು!

ತೀರ್ಥಯಾತ್ರೆಯಲ್ಲಿ ಒಂದು ದಿನ ಜ್ಞಾನೇಶ್ವರರು ''ಭಜನವನ್ನು ಹೇಗೆ ಮಾಡಬೇಕು? ಮನಸ್ಸನ್ನು ಹೇಗೆ ಸಾತ್ತ್ವಿಕವಾಗಿಟ್ಟುಕೊಳ್ಳಬೇಕು? ಶ್ರವಣಾದಿಗಳ ಮರ್ಮವು ಯಾವದು? ಭಕ್ತಿಯೆಂದರೇನು? ಧ್ಯಾನವೆಂದರೇನು?''- ಎಂದು ಕೇಳಿದ್ದಕ್ಕೆ ನಾಮದೇವನು ಅವರ ಕಾಲುಗಳನ್ನು ಹಿಡಿದುಕೊಂಡು ''ನಾನು ಪಾಂಡುರಂಗನ್ನೊಬ್ಬನನ್ನು ನಂಬಿರುತ್ತೇನೆ ಅಷ್ಟೆ ನನಗೆ ಇಂಥ ಜ್ಞಾನದ ಭಾಗ್ಯವೆಲ್ಲಿಂದ ಬರಬೇಕು? ಇದಕ್ಕಾಗಿಯೇ ಅಲ್ಲವೆ, ತಮ್ಮಲ್ಲಿಗೆ ಭಗವಂತನು ನನ್ನನ್ನು ಕಳುಹಿಸಿರುವದು?'' ಎಂದನು. ಜ್ಞಾನೇಶ್ವರರು ಮತ್ತೂ ಬಲವಂತಮಾಡಿ ''ನನಗೆ ನಿಜವಾಗಿಯೂ ನಿಮ್ಮ ಅನುಭವವನ್ನು ನಿಮ್ಮ ಮಾತಿನಿಂದಲೇ ಕೇಳಬೇಕೆಂಬ ಇಚ್ಛೆ ಇದೆ'' ಎಂದು ಕೇಳಿದ್ದಕ್ಕೆ ಆತನಿಂತೆಂದನು ''ನನಗಿನ್ನೇನೂ ತಿಳಿಯದು. ನಾಮಕೀರ್ತನೆಯೊಂದೇ ನನಗೆ ಅತ್ಯಂತ ಸುಲಭಮಾರ್ಗವೆಂದು ತೋರುತ್ತದೆ. ಅದರಲ್ಲಿಯೇ ನನಗೆ ಪ್ರೀತಿ. ಅದೇ ಭಜನೆ. ಗುಣದೋಷಗಳ ಗಣನೆಯಿಲ್ಲದೆ ಎಲ್ಲರಲ್ಲಿಯೂ ನಮ್ರಭಾವದಿಂದಿರುವದೇ ವಂದನೆಯು. ಅದರಿಂದ ಮನಸ್ಸು ಸಾತ್ತ್ವಿಕವಾಗುತ್ತದೆ. ಎಲ್ಲೆಲ್ಲಿಯೂ ವಿಠಲನನ್ನು ಕಾಣುವದು, ಆತನ ಚರಣವನ್ನು ಎಡಬಿಡದೆ ಹೃದಯದಲ್ಲಿ ಚಿಂತಿಸುತ್ತಿರುವದು, ಇದೇ ಧ್ಯಾನವು. ನಾಮದ ಧ್ವನಿಯನ್ನೇ ಸ್ಮರಣಮಾಡುತ್ತಾ ತಲ್ಲೀನನಾಗುವದೇ ಶ್ರವಣವು. ಭಗವಂತನ ಅನುಸಂಧಾನದಲ್ಲಿಯೇ ಮಗ್ನನಾಗಿ ರುವದು ನಿದಿಧ್ಯಾಸನವು. ಸರ್ವಭೂತಗಳಲ್ಲಿಯೂ ಆತನನ್ನೇ ಕಾಣುತ್ತಾ ಪ್ರೇಮಾಮೃತವನ್ನು ಪಾನಮಾಡುವದೇ ಭಕ್ತಿ, ಇದೆಲ್ಲವನ್ನೂ ಆ ಪಾಂಡುರಂಗನೇ ನನಗೆ ತಿಳಿಸಿಕೊಟ್ಟಿರುತ್ತಾನೆ.''

ನಾಮದೇವನಿಗೆ ತೀರ್ಥಯಾತ್ರೆಯಿಂದ ಬಂದಮೇಲೂ ಮೊದಲಿನ ನಿಶ್ಚಯವೇ ಬಲವಾಗಿತ್ತು. ''ಚಂದ್ರಭಾಗನದಿಗಿಂತ ಬೇರೊಂದು ತೀರ್ಥವಿಲ್ಲ

ನಿನಗಿಂತ ಬೇರೆ ದೇವರಿಲ್ಲ, ನಿನ್ನ ಕೀರ್ತಿಯನ್ನು ಕೇಳುವದೇ ನನ್ನ ಕಿವಿಗೆ ಆನಂದ; ಗರುಡ ಧ್ವಜವಿಲ್ಲದ್ದು ಸ್ಥಾನವೆ? ವೈಷ್ಣವರ ಜಾತ್ರೆಯೂ ಅಖಂಡ ಹರಿಕಥೆಯೂ ಇಲ್ಲದ್ದು ಕ್ಷೇತ್ರವೆ? ನನಗೆ ನಿನ್ನ ಹೊರತು ಮತ್ತೇನೂ ತಿಳಿಯದು. ನೀನು ಮಾತ್ರ ನಾನು ಎಲ್ಲಿದ್ದರೂ ಅದೇ ಪಂಢರಪುರವಾಗುವಂತೆ ಅನುಗ್ರಹಿಸು!'' ಎಂದು ಆತನು ವಿಠ್ಠಲನಲ್ಲಿ ಬಿನ್ನವಿಸಿಕೊಂಡನು.

ಜ್ಞಾನೇಶ್ವರರ ಸಮಾಧಿಯಾದ ಬಳಿಕ ನಾಮದೇವನು ತನ್ನ ಜೀವನದ ಉತ್ತಾರಾರ್ಧವನ್ನು ಪಂಜಾಬು ಮುಂತಾದ ದೇಶಗಳಲ್ಲಿ ಭಕ್ತಿಪ್ರಚಾರಮಾಡುತ್ತಾ ಕಳೆದನು. ಸಿಕ್ಕರ ''ಗ್ರಂಥಸಾಹೇಬ್'' ಎಂಬ ಧರ್ಮಗ್ರಂಥದಲ್ಲಿ ಅರುವತ್ತಕ್ಕಿಂತ ಹೆಚ್ಚು ಆತನ ಅಭಂಗಗಳು ಇವೆಯಂತೆ. ಅವರ ಗುರುಮುಖಿ ಭಾಷೆಯಲ್ಲಿ ಆತನ ಜನ್ಮಚರಿತ್ರೆಯನ್ನು ಬರೆದಿರುವದಾಗಿ ತಿಳಿಯಬಂದಿದೆ.

ನಾಮದೇವನಿಗೆ ಸರ್ವತ್ರ ಭಗವದ್ಭಾವನೆ ಎಂಬುದು ಸಹಜವಾಗಿರುತ್ತಿತ್ತು. ಒಂದು ಸಲ ಅವನ ಗುಡಿಸಿಲಿನ ಒಂದು ಭಾಗಕ್ಕೆ ಬೆಂಕಿ ಬಿತ್ತು. ಅಗ ಅವನು ''ಪ್ರಭುವೆ, ಒಂದು ಕಡೆಯಲ್ಲಿರುವ ಸಾಮಾನುಗಳನ್ನು ಗ್ರಹಿಸಿ ಮತ್ತೊಂದು ಕಡೆಯಲ್ಲಿರುವದನ್ನು ಬಿಡಬಹುದೆ? ಅವು ಮಾಡಿದ ಅಪರಾಧವೇನು? ಅವನ್ನೂ ಸ್ವೀಕರಿಸು!'' ಎಂದು ಎಲ್ಲಾ ಸಾಮಾನುಗಳನ್ನೂ ಬೆಂಕಿಯಲ್ಲಿ ಹಾಕಿ ಕುಣಿಯುವದಕ್ಕೆ ಹತ್ತಿದನಂತೆ! ಬಳಿಕ ಭಗವಂತನೇ ಆಳಾಗಿ ಬಂದು ಗುಡಿಸಲುಕಟ್ಟಿ ಕೊಟ್ಟನೆಂದು ಕಥೆ. ಇನ್ನೊಂದು ಸಲ ಈತನು ಒಂದು ಹಳ್ಳಿಯಲ್ಲಿ ದೆವ್ವದ ಮನೆ ಎಂದು ಪ್ರಸಿದ್ಧವಾಗಿದ್ದ ಒಂದು ಮನೆಯಲ್ಲಿರುವಾಗ ಒಂದು ಭಯಂಕರವಾದ ಭೂತವು ಕಾಣಿಸಿಕೊಂಡಿತಂತೆ. ಆದರೆ ನಾಮದೇವನು ಭಗವದ್ಭಾವನೆಯಿಂದಲೇ ಸ್ತುತಿಸಲು ಅದು ಭಗವಂತನ ರೂಪಕ್ಕೆ ತಿರುಗಿಬಿಟ್ಟಿತಂತೆ!

ಈ ಭಕ್ತವರ್ಯನು ಸಾವಿರಾರು ಜನರನ್ನು ಭಕ್ತಿಮಾರ್ಗಕ್ಕೆ ತಿರುಗಿಸಿ ಕ್ರಿ.ಶ.1250ರಲ್ಲಿ ತನ್ನ ಎಂಬತ್ತನೆಯ ವಯಸ್ಸಿನಲ್ಲಿ ಪಂಢರಪುರದಲ್ಲಿ ಕೀರ್ತಿಶರೀರನಾದನು. ಆತನ ಅಭಂಗಗಳನ್ನು ಈಗಲೂ ಪಂಢರಪುರದಲ್ಲಿಯೇ ಅಲ್ಲದೆ ಮಹಾರಾಷ್ಟ್ರದೇಶದಲ್ಲೆಲ್ಲ ಹಾಡಿಕೊಂಡು ಜನರು ಆನಂದಿಸುತ್ತಿರುವರು.

★★★★★

# ಆಚಾರ್ಯ ವಿಷ್ಣುಸ್ವಾಮಿ

## ಆಚಾರ್ಯ ವಿನೋಬ ಭಾವೆಯವರು

- ಶ್ರೀಯೋಗಿಕ, ದತ್ತದೀಕ್ಷಿತರು

ಆಚಾರ್ಯ ವಿಷ್ಣುಸ್ವಾಮಿ ಎಂಬುವರು ಶಂಕರಾಚಾರ್ಯರ ಈಚೆಗೆ ಆಗಿ ಹೋದ ಒಂದು ಸ್ವತಂತ್ರವಾದ ಸಂಪ್ರದಾಯಕಪ್ರವರ್ತಕರು. ಶಂಕರ, ರಾಮಾನುಜ, ನಿಬಾರ್ಕ, ಮಧ್ವ ಮತ್ತು ವಲ್ಲಭ - ಎಂಬ ಐದು ಜನ ಆಚಾರ್ಯರಹೆಸರುಗಳು ಲೋಕವಿದಿತವಾಗಿರುವ ಹಾಗೆ ವಿಷ್ಣುಸ್ವಾಮಿಗಳ ಹೆಸರು ಜನಕ್ಕೆ ಪರಿಚಿತವಾಗಿಲ್ಲ. ಇನ್ನು ಇವರ ಕಾಲವುಕೂಡ ನಿಶ್ಚಿತವಾಗಿಲ್ಲ, ಶಂಕರಾಚಾರ್ಯರ ತರುವಾಯ ಹಾಗೂ ಮೇಲೆ ಕಂಡ ಇನ್ನಿತರ ಆಚಾರ್ಯರಿಗಿಂತ ಮೊದಲಿಗೆ ಇವರು ಆಗಿಹೋಗಿ ರಬಹುದೆಂದು ಕಾಣುತ್ತದೆ.

ಶಂಕರಚಾರ್ಯರ ವಿಚಾರಪ್ರಣಾಲಿಯಲ್ಲಿ ಭಕ್ತಿಗೆ ಸಾಕಷ್ಟು ಮಹತ್ತ್ವವು ಕೊಡಲ್ಪಟ್ಟಿಲ್ಲ, ಇದನ್ನು ದೊರಕಿಸಿಕೊಡುವದೇ ವಿಷ್ಣುಸ್ವಾಮಿಯಿಂದ ವಲ್ಲಭರವರೆಗಿನ ಎಲ್ಲಾ ಆಚಾರ್ಯರದೂ ಮನೀಷೆಯಾಗಿದೆ. ಶಂಕರಾಚರ್ಯರು ಭಕ್ತಿಯ ಮಹಿಮೆಯನ್ನು ಅವಮಾನ್ಯಮಾಡಿಲ್ಲ ''**ಸತ್ಯಪಿ ಭೇದಾಪಗಮೇ ನಾಥ ತವಾಹಂ ನ ಮಾಮಕೀನಸ್ತ್ವಮ್**'' ಎಂಬ ಭೂಮಿಕೆಯು ಅದ್ವೈತದಲ್ಲಿಯೂ ಭಕ್ತಿಗೆ ತುಂಬ ಇಂಬುಕೊಟ್ಟಿದೆ. ಆದರೆ ಇದರಲ್ಲೂ ಜ್ಞಾನದ ರಾಜ್ಯದಲ್ಲಿ ಭಕ್ತಿಗಿರುವ ನಡೆವಳಿಕೆ (ಸ್ಥಿತಿ) ಗೆ ಬದಲಾಗಿ ಭಕ್ತಿಯ ರಾಜ್ಯದಲ್ಲಿ ಜ್ಞಾನವನ್ನು ಒಗ್ಗಿಸಬೇಕೆಂಬುದು ಹಲವು ಜನ ಭಕ್ತರ ಹೆಬ್ಬಯಕೆಯಾಗಿದೆ. ವಿಷ್ಣುಸ್ವಾಮಿಯಿಂದ ವಲ್ಲಭರವರೆಗಿನವರು ಬೇರೆಬೇರೆಯ ವಿಚಾರ ಭೂಮಿಕೆಗಳನ್ನು ರಚಿಸಿ ಈ ಉತ್ಸಾಹವನ್ನು ಪೂರ್ತಿಗೊಳಿಸಿಕೊಂಡಿದ್ದಾರೆ.

ಜ್ಞಾನೇಶ್ವರರು ಅದ್ವೈತದಲ್ಲಿಯೇ ಭಕ್ತಿಯನ್ನು ತಿಳಿಯಗೊಡದ ಹಾಗೆ ಕೂಡಿಸಿಬಿಟ್ಟಿದ್ದಾರೆ. ಶಂಕರಾಚಾರ್ಯರು ಭಕ್ತಿಗೆ ಕೊಟ್ಟಿರುವ ಸ್ಥಾನವು ಜ್ಞಾನವಾಗುವದಕ್ಕಿಂತ ಮೊದಲಿನದು. ಆದರೆ ಜ್ಞಾನವಾದ ಬಳಿಕವೂ ಜ್ಞಾನಕ್ಕೆ ಅಭಿನ್ನರೂಪವಾಗಿ ಭಕ್ತಿಯನ್ನು ಕಾಯ್ದುಕೊಳ್ಳುವ ಯುಕ್ತಿಯನ್ನು ಶೋಧಿಸಿ ತೆಗೆದವರು ಜ್ಞಾನೇಶ್ವರು''[1] (?) ಅಂತೆ ನವಮತ ಸಂಸ್ಥಾಪಕರಾದ ಆಚಾರ್ಯರ ಪಙ್ಕ್ತಿಯಲ್ಲಿ

1. '' ಏವಂಭೂತೋ ಜ್ಞಾನನಿಷ್ಠೋ ಮದ್ಭಕ್ತಿಂ ಮಯಿ ಪರಮೇಶ್ವರೇ ಭಕ್ತಿಂ ಭಜನಂ ಭಜನಂ ಪರಾಮ್ ಉತ್ತಮಾಂ ಜ್ಞಾನಲಕ್ಷಣಾಂ ಚತುರ್ಥೀಂ ಭಜತೇ । ಚತುರ್ವಿಧಾ ಭಜನ್ತೇ ಮಾಮ್ ಇತಿ ಹಿ ಉಕ್ತಮ್'' - ಎಂಬೀ ಶಾಂಕರಭಾಷ್ಯದಲ್ಲಿ ಜ್ಞಾನಕ್ಕೆ ಅಭಿನ್ನವಾದ ಪರಭಕ್ತಿಯನ್ನು ಸ್ಪಷ್ಟವಾಗಿ ಹೇಳಿದೆ.

ಜ್ಞಾನೇಶ್ವರರನ್ನು ಎಣಿಸುವದು ಅಗತ್ಯವಾಗಿದೆ. ಜ್ಞಾನದೇವರು ಪ್ರತಿವಾದಿಭಯಂಕರ, ಎಲ್ಲರಿಗೂ ಅಭಯಂಕರರಾಗಿದ್ದರೂ ಜ್ಞಾನೋತ್ತರಭಕ್ತಿ ಎಂಬುದು ಅವರದೊಂದು ವಾದವೇ ಆಗಿದೆ ಎಂದು ನನ್ನ ತಿಳಿವಳಿಕೆ. ಜ್ಞಾನೇಶ್ವರಿಯ ಆರಂಭಕ್ಕೆ ಗಣಪತಿಯು ರೂಪಕದಲ್ಲಿ ದ್ವೈತಾದ್ವೈತಗಳೆರಡು ಗಂಡಸ್ಥಲಗಳು ಸಮಾನತ್ವದಿಂದ ಒಟ್ಟು ಗೂಡಿದವೆಂದು ವರ್ಣಿಸಿದ್ದಾರೆ. ಇದರಲ್ಲಿಯೂ ಎಡಬಲಗಳೆಂಬ ಭೇದದ ಮೂಲಕ ಮತ್ತೇನಾದರೂ ತಾರತಮ್ಯವನ್ನು ಒಪ್ಪಿಕೊಂಡರೂ ಒಪ್ಪಿಕೊಳ್ಳಬಹುದು. ಏನೇ ಆದರೂ ಆಗ್ರಹಿ ಅದ್ವೈತಕ್ಕೆ ಈ ವರ್ಣನೆ ದಕ್ಕುವದಿಲ್ಲ. ಆಗ್ರಹವನ್ನಿಟ್ಟುಕೊಂಡ ಅದ್ವೈತವದು ಅದ್ವೈತವಲ್ಲ ಮತ್ತೇನೆಂದರೆ ದ್ವೈತವೇ ಆಗಿ ಕುಳಿತೀತು. ಈ ದೃಷ್ಟಿಯಿಂದ ಜ್ಞಾನದೇವರ ಭೂಮಿಕೆಯು ಕೃಷ್ಣನಿಗೆ ಬೆಣ್ಣೆ ಸಲೀಸಾಗಿ ಅರಗಿಹೋಗುವಂತೆ ನನಗೂ ಪಚನವಾಗಿಹೋಗುತ್ತದೆ.

ಆಚಾರ್ಯ ವಿಷ್ಣುಸ್ವಾಮಿಗಳ ಹೆಸರಿನವೆಂದು ಅನೇಕ ಗ್ರಂಥಗಳು ನಿರ್ದೇಶಿಸಲ್ಪಟ್ಟಿದ್ದರೂ ಅವೆಲ್ಲ ಉಪಲಬ್ಧವಾಗಿಲ್ಲ. ಅವರ ತತ್ತ್ವಜ್ಞಾನದ ಕಲ್ಪನೆಯನ್ನು ಅವರ ಪರಂಪರೆಯಲ್ಲಿಯ ಸುಪ್ರಸಿದ್ಧ ಟೀಕಾಕಾರಾದ ಶ್ರೀಧರ ಸ್ವಾಮಿಗಳಿಂದ ಮಾಡಿಕೊಳ್ಳಬೇಕಾಗುತ್ತದೆ. ಆ ರೀತಿಯಾಗಿ ವಿಷ್ಣುಸ್ವಾಮಿಯ ಮತವು ಜ್ಞಾನದೇವರಿಗೆ ಬಹಳ ಹತ್ತಿರದ್ದಾಗಿದೆ. ಡಾ॥ಭಂಡಾರಕರ್‌ರಂತೂ ವಿಷ್ಣುಸ್ವಾಮಿಯ ಸಂಪ್ರದಾಯದಲ್ಲಿಯೇ ಜ್ಞಾನದೇವರನ್ನು ಕೂಡಿಸಿಬಿಟ್ಟಿದಾರೆ. ಆದರೆ ಹೀಗೆಂದು ತಿಳಿಯಲು ಅಷ್ಟೊಂದು ಐತಿಹಾಸಿಕ ಆಧಾರಗಳು ಉಪಲಬ್ಧವಾಗಿಲ್ಲ. ಬಹಳ ಸಾಮ್ಯವಿದೆ ಎಂಬಲ್ಲಿ ಸಂಶಯವಿಲ್ಲ. ಶ್ರೀಧರರು ಆ ಜ್ಞಾನದೇವನ ತರುವಾಯ ಆಗಿಹೋದವರು. ಆದ್ದರಿಂದಲೂ ವಿಷ್ಣುಸ್ವಾಮಿಯ ಸಂಬಂಧವು ಜ್ಞಾನೇಶ್ವರರಿಗೆ ಹತ್ತುವದೇ ಇಲ್ಲವಾದ್ದರಿಂದಲೂ ಜ್ಞಾನೇಶ್ವರರ ವಿಚಾರಸರಣಿಯನ್ನು ಸ್ವತಂತ್ರವಾಗಿ ಯೇ ಸಿದ್ಧವಾದದ್ದೆಂದು ಒಪ್ಪಬೇಕಾಗುತ್ತದೆ.

ಜ್ಞಾನೇಶ್ವರರನ್ನು ಶಾಂಕರಸಂಪ್ರದಾಯದಲ್ಲಿ ಎಣಿಸುವ ರೂಢಿಯಿದೆ. ಶ್ರೀಧರರು ಶಾಂಕರಸಂಪ್ರದಾಯದವರೆಂದು ಬಹುಜನರು ತಿಳಿದುಕೊಂಡಿದಾರೆ. ವಸ್ತುತಃ ಶ್ರೀಧರರು ವಿಷ್ಣುಸ್ವಾಮಿಯ ಸಂಪ್ರದಾಯದವರು; ಮತ್ತು ಜ್ಞಾನೇಶ್ವರರು ಪೂರ್ವಾಚಾರ್ಯರ ವಿಷಯದಲ್ಲಿ ಆದರವುಳ್ಳ ಸಮನ್ವಯವಾದಿಗಳಾದ ಸ್ವತಂತ್ರವಿಚಾಕರಾಗಿದ್ದಾರೆ ಹಾಗೂ ಇವರಿಬ್ಬರ ವಿಚಾರಗಳಲ್ಲೂ ಬಹಳ ಹೊಂದಿಕೆಯಿದೆ, ಹೆಚ್ಚುಕಡಿಮೆಗಳೂ ಇವೆ. ಜ್ಞಾನದೇವರ ಗುರಿ ಜ್ಞಾನಭಕ್ತಿಗಳ ಭೇದವನ್ನು ಮುಗಿಸುವದರತ್ತಕಡೆ; ಶ್ರೀಧರರ ಗುರಿ ಜ್ಞಾನದಲ್ಲಿ ಭಕ್ತಿಯನ್ನು

ಕೂಡಿಸುವದರತ್ತಕಡೆ. ಜ್ಞಾನದೇವರ ಲಕ್ಷ್ಯ ಆಕಳಿಗೆ ಉತ್ತಮ ಆಹಾರಗಳನ್ನು ತಿನಿಸಿ ಅದರ ಹಾಲಿನ ರುಚಿಯನ್ನು ಹೆಚ್ಚಿಸುವದಾಗಿದೆ. ಶ್ರೀಧರರ ಆಲೋಚನೆ ಹಾಲಿನಲ್ಲಿ ಜೇನನ್ನು ಬೆರೆಯಿಸಿ ಅದರ ರುಚಿಯನ್ನು ಬೆಳೆಗಿಸುವದಾಗಿದೆ.

ಶ್ರೀಧರರು ವಿಷ್ಣುಸ್ವಾಮಿಗಳ ಸಾಂಪ್ರದಾಯಿಕರಿದ್ದರೂ ಶಾಂಕರಸಾಂಪ್ರದಾಯಿಕರೆಂದು ಎಣಿಸಲ್ಪಟ್ಟ ಕಾರಣವೆಂದರೆ ಅವರು ವಿಷ್ಣುಸ್ವಾಮಿಗಳನ್ನು ಅನುಸರಿಸಿದಲ್ಲದೆ ಅಗತ್ಯವಿದ್ದಲ್ಲಿ ಶಂಕರಾಚಾರ್ಯರನ್ನೂ ದಾರಿಕೇಳಿದ್ದು. ಅಂತೆಯೇ ಅವರ ಟಿಕೆಯಲ್ಲಿ ಒಳ್ಳೆ ಸವಿ ಇಳಿದಿದೆ. ಗೀತಾ ಮತ್ತು ಭಾಗವತ ಇವೆರಡು ಗ್ರಂಥಗಳಿಗೆ ಅವರು ಟೀಕೆಮಾಡಿದ್ದಾರೆ, ಭಾಗವತದ ಮೇಲಿನ ಟೀಕೆಯಂತೂ ಅದ್ವಿತೀಯವೇ ಆಗಿದೆ. ಸಂಸ್ಕೃತದಲ್ಲಿ ಅದಕ್ಕೆ ಸಮಾನವಾದ ಟೀಕೆ ಮತ್ತೊಂದಿಲ್ಲ. ಮರಾಠಿಯಲ್ಲಿಯ ಏಕನಾಥರ ಭಾಗವತವು ಶ್ರೀಧರರ ಟೀಕೆ ಯನ್ನು ಅನುಸರಿಸಿದೆ. ವಿವೇಚನೆಮಾಡುವಾಗ ಅನವಶ್ಯಕವಿಸ್ತಾರಮಾಡುವದು ಶ್ರೀಧರನಿಗೆ ಅಭ್ಯಾಸವಿಲ್ಲ; ಆತ ಸಾಹಸ ವಿವಾದಗಳಿಗೆ ಇಳಿಯುವದಿಲ್ಲ. ಶ್ರೀಧರನಿಗೆ ಹೆಚ್ಚಿನ ಚಾತುರ್ಯವನ್ನು ಗೀತಾಟೀಕೆಯಲ್ಲಿ ಉಪಯೋಗಿ ಸಬೇಕಾಗಿ ಬಂದಿದೆ. ಮುಂಚೆ ಗೀತೆಯಮೇಲೆ ಶಂಕರರಾಮಾನುಜರುಗಳಂಥ(?) ಮಹಾಪುರುಷರು ಭಾಷ್ಯಗಳನ್ನು ಬರೆದಿದ್ದಾರೆ. ಇಂಥ ದಿಗ್ಗಜಭಾಷ್ಯಕಾರರ ತರುವಾಯ ಗೀತೆಯ ಮೇಲೆ ಲೆಕ್ಕಣಿಕೆಯನ್ನು ನಡೆಯಿಸುವದು ಸುಲಭವಾದ ಕೆಲಸವಲ್ಲ. ಸಂಸ್ಕೃತದಲ್ಲಿ ಗೀತೆಯಮೇಲೆ ಹತ್ತುಹದಿನೈದು ಟೀಕೆಗಳು ಪ್ರಸಿದ್ಧವಾಗಿ ರುತ್ತವೆ; ಆದರೆ ಶಂಕರ ಮತ್ತು ರಾಮಾನುಜರ ಜೊತೆಗೆ ಒಪ್ಪುವ ಟೀಕೆ ಎಂದರೆ ಶ್ರೀಧರರರದೇ ಎಂದು ನನಗಂತೂ ಅನ್ನಿಸುತ್ತದೆ. ಶಂಕರಾನಂದ, ಮಧುಸೂದನ– ಮೊದಲಾದವರ ಟೀಕೆಗಳು ಶಾಂಕರಸಂಪ್ರದಾಯದ ವಿವರಣೆಗಳಾಗಿವೆ. ಕೆಲಕೆಲವು ಶ್ಲೋಕಗಳಿಗೆ ಹೊಸ ಅರ್ಥ ಹೆಚ್ಚಿದ್ದು ಕಂಡಬಂದರೂ ಒಟ್ಟಿನಮೇಲೆ ತುಂಬ ಬೇಸರಿಗೆಯ ವಿಷಯ ತುಂಬಿಹೋಗಿದೆ.[1] ಶ್ರೀಧರರ ಬರಹದ ವಿಷಯಕ್ಕೆ ಹೊಂದಿಕೊಂಡು ಪೂರ್ವಾಚಾರ್ಯರಿಂದ ತೆಗೆದುಕೊಳ್ಳುವಷ್ಟು ಅರ್ಥವನ್ನು ತೆಗೆದುಕೊಳ್ಳುತ್ತಾರೆ, ಬಿಡುವಷ್ಟನ್ನು ಗದ್ದಲಮಾಡದೆಬಿಟ್ಟುಕೊಡುತ್ತಾರೆ. ಹೀಗಾಗಿ ಅವರು ಬೇರೆಯಾದದ್ದನ್ನು ಹೇಳುತ್ತಿದ್ದರೂ ವಾದವು ಬೆಳಿಯುವದಿಲ್ಲ ಹೇಳುವದನ್ನು ಹೇಳಿಯೂ ಆಗುತ್ತದೆ.

1. ವಿಸ್ತಾರವಾದ ಬರವಣಿಗೆ, ಹಿತಮಿತವಾದ ಬರವಣಿಗೆ – ಈ ತಾರತಮ್ಯವಿದ್ದರೂ ಶ್ರೀಧರರಂತೆಯೇ ಮಧುಸೂದನಾಚಾರ್ಯರೂ ಭಕ್ತಿಗೆ ಹೆಚ್ಚಿನ ಪ್ರಾಧಾನ್ಯವನ್ನು ಕೊಟ್ಟಿರುತ್ತರೆ. ಕೆಲವು ಪ್ರಧಾನವಿಷಯಗಳನ್ನು ಶಂಕರಾಚಾರ್ಯರ ವಿರುದ್ಧವೇ ಬರೆದಿರುತ್ತರೆ. ಉದಾಹರಣೆಗೆ ''ಸರ್ವಧರ್ಮಾನ್ ಪರಿತ್ಯಜ್ಯ'' ಎಂಬ ಶ್ಲೋಕದ ವ್ಯಾಖ್ಯಾನವನ್ನು ನೋಡಿರಿ. ಬ್ರಹ್ಮಾನಂದಗಿರಿ ಎಂಬ ಗೀತಾವ್ಯಾಖ್ಯಾನದಲ್ಲಿ ಈ ವಿಷಯಕ್ಕೆ ಕಟುವಾದ ಟೀಕೆಯಿದೆ. – ಶ್ರೀಶ್ರೀಗಳವರು

ಒಂದೇ ಉದಾಹರಣೆಯನ್ನು ತೆಗೆದುಕೊಳ್ಳೋಣ ಗೀತೆಯ ಒಂಬತ್ತನೆಯ ಅಧ್ಯಾಯದ ಮೊದಲನೆಯ ಶ್ಲೋಕದಲ್ಲಿ 'ಗುಹ್ಯತಮವಾದ ಜ್ಞಾನವನ್ನು ಹೇಳುತ್ತೇನೆ' ಎಂದು ಪ್ರತಿಜ್ಞೆ ಆಗಿದೆ; ಇದಕ್ಕೆ ಶ್ರೀಧರರು ಹೀಗೆ ಬರೆಯುತ್ತಾರೆ; ''ಧರ್ಮಜ್ಞಾನವು ಗುಹ್ಯ, ಆತ್ಮಜ್ಞಾನವು ಗುಹ್ಯತರ, ಪರಮಾತ್ಮಜ್ಞಾನವು ಗುಹ್ಯತಮ'' ಆತ್ಮಜ್ಞಾನ ಮತ್ತು ಪರಮಾತ್ಮಜ್ಞಾನಗಳಲ್ಲಿ ಶಂಕರಾಚಾರ್ಯರೂ ಸಹಸಾ ಭೇದಮಾಡುವದಿಲ್ಲ[1] (?) ಶ್ರೀಧರರು ಈ ಭೇದವನ್ನು ಮಾಡಿದ್ದಲ್ಲದೆ 'ತರ' ಮತ್ತು 'ತಮ' ಈ ಪ್ರತ್ಯಯಗಳ ಲಾಭವನ್ನು ತೆಗೆದುಕೊಂಡು ಗೊಂದಲವಿಲ್ಲದೆ ವಾಚಕರ ಗಂಟಲಲ್ಲಿ ಇಳಿಸಿಬಿಟ್ಟಿದಾರೆ.

ವಿಷ್ಣುಸ್ವಾಮಿಗಳು ಮೊದಲಿಗೆ ಶಾಂಕರಮತಾನುಸಾರಿಗಳಾದ ಅದ್ವೈತವಾದಿಗಳಾಗಿದ್ದರು ಎನ್ನಬಹುದಾಗಿದೆ. ಮುಂದೆ ಮಾತ್ರ ಅವರು ನೃಸಿಂಹ ಮತ್ತು ಗೋಪಾಲ – ಇವೆರಡು ಸಗುಣಸಾಕಾರದ ಉಪಾಸನೆಗಳನ್ನು ನಿಲ್ಲಿಸಿ ಅದರಲ್ಲಿ ಅಗತ್ಯವಿದ್ದಷ್ಟು ದ್ವೈತವನ್ನು ತುಂಬಿಕೊಟ್ಟರು. ನೃಸಿಂಹೋಪಾಸನೆಯು ಎಲ್ಲೆಲ್ಲೋ ಶಂಕರಪೀಠಗಳಲ್ಲಿಯೂ ನಡೆಯುತ್ತದೆ; ಗೋಪಾಲೋಪಾಸನೆಯು ಶಂಕರಾಚಾರ್ಯರ ಸೋತ್ರದಲ್ಲಿಯೂ ಕಂಡುಬರುತ್ತದೆ. 'ನಾರಾಯಣ ಜಯಗೋಪಾಲ ಹರೇ' ಎಂಬ ಭಜನೆ ಪ್ರಸಿದ್ಧವೇ ಆಗಿದೆ. ಮುಂದೆ ಈ ಗೋಪಾಲೋಪಾಸನೆಯ ಕಸುವು ವಲ್ಲಭಸಂಪ್ರದಾಯದಲ್ಲಿ ಬಹಳವಾಗಿ ಹಬ್ಬಿಕೊಂಡಿತು. 'ಜಯ ಗೋಪಾಲ'ವೆಂಬುದನ್ನಂತೂ ಅವರು ತಮ್ಮ ಅಭಿವಾದನಮಂತ್ರವಾಗಿಯೇ ಮಾಡಿಕೊಂಡರು. ವಲ್ಲಭಸಂಪ್ರದಾಯದಲ್ಲಿಯ ಉಪಾಸನೆಯು ಅವರಿಗೆ ವಿಷ್ಣುಸ್ವಾಮಿಯ ಸಂಪ್ರದಾಯದಿಂದಲೇ ದೊರಕಿರುವದೆಂದು ಅನುಮಾನಮಾಡಲಾಗುತ್ತದೆ. ಉಪಾಸನೆಯ ಋಣವನ್ನು ಯಾರು ಎಲ್ಲಿಂದ ತೆಗೆದುಕೊಂಡರೆಂಬುದರ ಚರ್ಚೆ ನಿರರ್ಥಕವಾದದ್ದೇ. ಉಪಾಸನೆಯ ಪ್ರಚಾರವು ಬೇಕಾದದ್ದನ್ನೇ ಮಾಡುತ್ತಿರುತ್ತದೆ ಎಂದು ತಿಳಿದುಕೊಳ್ಳತಕ್ಕದ್ದು[2].

★★★★★

1. 'ದೇಹಕ್ಕಿಂತಭಿನ್ನವಾದ ಆತ್ಮಜ್ಞಾನವು ಶಾಸ್ತ್ರೀಯವ್ಯವಹಾರಕ್ಕೆ ಅವಶ್ಯವಾದರೂ ವೇದಾಂತವಿಹಿತವಾದ ಅಸಂಸಾರ್ಯಾತ್ಮತತ್ತ್ವಜ್ಞಾನವು ಅದಕ್ಕೆ ಬೇಕಾಗಿರುವದಿಲ್ಲ' – ಎಂಬ ಅಧ್ಯಾಸಭಾಷ್ಯದಲ್ಲಿ ಈ ಭೇದವನ್ನು ಮಾಡಿದೆ. ಸೂತ್ರಭಾಷ್ಯದ ಸಮನ್ವಯಾಧ್ಯಾಯವು ಈ ಭೇದವನ್ನವಲಂಬಿಸಿಯೇ ಸಾಗಿದೆ. – ಶ್ರೀಶ್ರೀಗಳವರು

2. ಉಪಾಸನೆಯ ಒಲವು ಅದ್ವೈತ ಅಥವಾ ದ್ವೈತಸಂಪ್ರದಾಯಕ್ಕೆ ಗುರುತಾಗಲಾರದೆಂದು ತೋರುತ್ತದೆ. ಯಾವ ಉಪಾಸಕನಾದರೂ ಅದ್ವೈತಿಯಾಗಿರಬಹುದಾಗಿದೆ. ಶ್ರೀಧರರು ಪರಾಮರ್ಶಿಸಿರುವ 'ಭಾಷ್ಯಕಾರರು' ವಿಷ್ಣುಸ್ವಾಮಿಗಳೇ? ಮತ್ತೆಲ್ಲಿಯಾದರೂ ವಿಷ್ಣುಸ್ವಾಮಿಗಳ ಪರಾಮರ್ಶವು ಶ್ರೀಧರಟೀಕೆಯಲ್ಲಿ ಸಿಕ್ಕುವದೆ? – ಎಂಬುದನ್ನು ನಿಶ್ಚಯಿಸುವದು ಅವಶ್ಯವೆಂದು ತೋರುತ್ತದೆ. – ಶ್ರೀಶ್ರೀಗಳವರು

# ಸಂತವರ ಶ್ರೀ ಜ್ಞಾನೇಶ್ವರ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸಂತವರ ಶ್ರೀಜ್ಞಾನೇಶ್ವರ ಮಹಾರಾಜರವರ ಚರಿತ್ರೆಯು ಮಹಾರಾಷ್ಟ್ರ ದೇಶದಲ್ಲಿ ಪ್ರಖ್ಯಾತವಾಗಿರುತ್ತದೆ. ಆ ದೇಶದಲ್ಲಿ ಭಕ್ತಿಪಂಥವನ್ನು ಉಜ್ಜೀವನಗೊಳಿಸಿದ ಕೀರ್ತಿಯು ಈ ಮಹಾತ್ಮರಿಗೆ ಸಲ್ಲತಕ್ಕದ್ದಾಗಿರುತ್ತದೆ.

ಜ್ಞಾನೇಶ್ವರರು ಇನ್ನೂ ಐದು ವರ್ಷದ ಹಸುಳೆಯಾಗಿರುವಾಗಲೇ ಅವರ ತಂದೆ ತಾಯಿಗಳು ಧರ್ಮಮರ್ಯಾದಾರಕ್ಷಣಕ್ಕಾಗಿ ತ್ರಿವೇಣಿಯಲ್ಲಿ ಶರೀರವನ್ನು ತೊರೆದು ದಿವಂಗತರಾಗಿಬಿಟ್ಟಿದ್ದರು. ಅವರ ತಂದೆಯಾದ ವಿಠಲಸಂತನು ಕಾಶಿಗೆ ಹೋಗಿ ರಾಮಾನಂದಸ್ವಾಮಿಗಳಲ್ಲಿ ಸಂನ್ಯಾಸವನ್ನು ಸ್ವೀಕರಿಸಿದ್ದನು. ಆದರೆ ಸ್ವಾಮಿಗಳು ದಕ್ಷಿಣದೇಶಕ್ಕೆ ತೀರ್ಥಯಾತ್ರೆಗೆ ಬರಲಾಗಿ ಆಲಂದಿಯಲ್ಲಿ ವಿಠಲನ ಧರ್ಮಪತ್ನಿ ರುಕ್ಮಿಣಿಯು ಇನ್ನೂ ಜೀವಂತಳಾಗಿರುವ ವಿಷಯವು ಅವರಿಗೆ ತಿಳಿಯಬಂತು. ಶಿಷ್ಯನು ತಮ್ಮಲ್ಲಿ ಸುಳ್ಳನ್ನು ಹೇಳಿ ಆಶ್ರಮಸ್ವೀಕಾರವನ್ನು ಮಾಡಿರುವನೆಂದು ತಿಳಿದ ರಮಾನಂದರು ಕೂಡಲೆ ಕಾಶಿಗೆ ಹಿಂತಿರುಗಿ ವಿಠಲನನ್ನು ಮತ್ತೆ ಗೃಹಸ್ಥನಾಗಿ ಬಾಳುವಂತೆ ಕಟ್ಟುಮಾಡಿದರು. ದಂಪತಿಗಳ ಸಂಗಮದ ಫಲವಾಗಿ ನಿವೃತ್ತಿನಾಥ, ಜ್ಞಾನದೇವ, ಸೋಪಾನ - ಎಂಬ ಮೂರು ಗಂಡು ಮಕ್ಕಳೂ ಮುಕ್ತಾಬಾಯಿ ಎಂಬ ಒಂದು ಹೆಣ್ಣುಶಿಶುವೂ ಜನಸಿದ್ದರು. ಎರಡನೆಯು ಮಗನಾದ ಜ್ಞಾನದೇವನೇ ಸುಪ್ರಸಿದ್ಧ ಜ್ಞಾನೇಶ್ವರನೆಂಬ ಸಾಧುಶ್ರೇಷ್ಠನು.

ಸಂನ್ಯಾಸಿಯಾದವನಿಗೆ ಮತ್ತೆ ಗೃಹಸ್ಥನಾಗಿ ಬಾಳುವದಕ್ಕೆ ಶಾಸ್ತ್ರದಲ್ಲಿ ಅನುಮತಿಯಿರುವದಿಲ್ಲ. ಈ ಕಾರಣದಿಂದ ಬ್ರಾಹ್ಮಣರು ವಿಠಲಪಂತನನ್ನು ಸಮಾಜದಿಂದ ಬಹಿಷ್ಕರಿಸಿಬಿಟ್ಟಿದ್ದರು. ತಂದೆತಾಯಿಗಳಿಲ್ಲದ ಈ ಸಣ್ಣಮಕ್ಕಳು ಶುಕ್ಲವೃತ್ತಿಯಿಂದ ಜೀವಿಸುತ್ತಾ ಯಾವಾಗಲೂ ಭಗವದ್ಭಜನ, ಭಗವತ್ಕಥಾ ಕೀರ್ತನ, ಭಗವಚ್ಚರ್ಚೆ- ಇವುಗಳಿಂದಲೇ ಕಾಲವನ್ನು ಕಳೆಯುತ್ತಿದ್ದದ್ದನ್ನು ಕಂಡು ಆಲಂದಿ ಗ್ರಾಮದಲ್ಲಿ ಕೆಲವರು ಇವರಲ್ಲಿ ಸಹಾನುಭೂತಿಯನ್ನು ತೋರಿಸುತ್ತಿದ್ದರು. ಅವರ ಮಾತಾಪಿತೃಗಳು ಪಶ್ಚಾತ್ತಾಪದಿಂದ ತೀರ್ಥದಲ್ಲಿ ದೇಹವನ್ನು ಬಿಟ್ಟಿದ್ದೂ ಜನರಮೇಲೆ ಉತ್ತಮಪರಿಣಾಮವನ್ನು ಮಾಡಿತ್ತು. ಆದ್ದರಿಂದ ಈ ಬಾಲಕರು

ತಮಗೆ ಉಪನಯನಸಂಸ್ಕಾರವನ್ನು ಮಾಡಿಸಬೇಕೆಂದು ಪ್ರಾರ್ಥಿಸಿಕೊಂಡಾಗ ಆಲಂದಿಯವರು ''ಪೈಠಣದಲ್ಲಿ ಶಾಸ್ತ್ರಬಲ್ಲವರು ಇರುತ್ತಾರೆ; ಅವರಿಂದ ಶುದ್ಧಿಪತ್ರವನ್ನು ತಂದರೆ ನಿಮಗೆ ಉಪನಯನವನ್ನು ಮಾಡಿಸುತ್ತೇವೆ'' ಎಂದು ಹೇಳಿದರು.

ಅದರಂತೆ ಈ ಹುಡುಗರೆಲ್ಲರೂ ಪೈಠಣಕ್ಕೆ ಬಂದರು ಅಲ್ಲಿ ಜ್ಞಾನೇಶ್ವರನು ತೋರಿಸಿದ ಅದ್ಭುತಲೀಲೆಗಳು ಪೈಠಣದ ಬ್ರಾಹ್ಮಣರನ್ನು ಬೆರಗುಮಾಡಿತು. ಮೊದಲು ಸೇರಿದ ಸಭೆಯಲ್ಲಿ ''ಈ ಬಾಲಕರಿಗೆ ಇನ್ನಾವ ರೀತಿಯಿಂದಲೂ ಶುದ್ಧಿಯಾಗುವಂತಿಲ್ಲ. ಇವರು ತಮ್ಮನ್ನು ನೋಡಿ ನಗುವವರನ್ನು ಮನಸ್ಸಿಗೆ ತಂದುಕೊಳ್ಳಬಾರದು ದೇಹದಮೇಲೆ ಅಭಿಮಾನವನ್ನೂ ಲಜ್ಜೆಯನ್ನೂ ತೊರೆದು ತಮ್ಮೆದುರಿಗೆ ಕಾಣಬರುವವರು ಯಾರೇ ಆಗಲಿ, ನಾಯಿ, ಚಂಡಾಲರು, ಗೋವು, ಕತ್ತೆ – ಇವುಗಳನ್ನು ಕೂಡ ವಂದಿಸಬೇಕು'' ಎಂದು ತೀರ್ಮಾನವಾಯಿತು. ವಿಠಲನ ಮಕ್ಕಳೆಲ್ಲರೂ ''ಇದು ಯುಕ್ತವಾಗಿರುತ್ತದೆ, ಹಾಗೆಯೇ ಮಾಡುತ್ತೇವೆ'' ಎಂದು ಒಪ್ಪಿಕೊಂಡರು. ಆದರೆ ಸಭೆಯಲ್ಲಿದ್ದ ಬ್ರಾಹ್ಮಣರಲ್ಲಿ ಕೆಲವರು ಇವರನ್ನು ಕಂಡು ಕುಚೇಷ್ಟೆಮಾಡುವದಕ್ಕೆ ಆರಂಭಿಸಿದರು. ಒಬ್ಬನು ''ನಿನ್ನ ಹೆಸರೇನು?''ಎಂದು ಕೇಳಿದನು. ''ಜ್ಞಾನದೇವ'' ಎಂಬ ಹೆಸರು ಕಿವಿಗೆ ಬೀಳುತ್ತಲೆ, ''ಹೆಸರು! ಜ್ಞಾನದೇವನ? ಇಗೋ ಇಲ್ಲಿ ಹೋಗುತ್ತಿರುವ ಕೋಣನೂ ಇಂಥ ಜ್ಞಾನದೇವನೇ; ಏಕೆಂದರೆ ಇದೂ ಜ್ಞಾನದ ಹೊರೆಯನ್ನು ದಿನದಿನವೂ ಹೊತ್ತುಕೊಂಡು ಸಂಚರಿಸುತ್ತದೆ. ಅಲ್ಲವೆ?'' ಎಂದು ಕೇಳಿದನು. ಜ್ಞಾನದೇವನು ''ಆಹಾ, ಅಡ್ಡಿಯೇನು? ಅದೂ ನನ್ನ ಆತ್ಮನೇ ನನಗೂ ಅದಕ್ಕೂ ಯಾವ ಭೇದವೂ ಇಲ್ಲ'' ಎಂದನು. ''ಹಾಗಾದರೆ ಇದಕ್ಕೆ ಎರಡು ಚಾವಟಿಪೆಟ್ಟುಕೊಟ್ಟರೆ ನಿನಗೇ ನೋವಾಗಬೇಕು, ಅಲ್ಲವೆ? ಇದೂ ಅಲ್ಲದೆ ಇದೂ ಜ್ಞಾನದೇವನಾದ್ದರಿಂದ ನಿನ್ನಂತೆಯೇ ಜ್ಞಾನದ ಮಾತುಗಳನ್ನು ಆಡಬೇಕು'' ಎಂದು ಮತ್ತೊಬ್ಬ ಬ್ರಾಹ್ಮಣನು ಚೇಷ್ಟೆಯ ಮಾತುಗಳನ್ನಾಡುತ್ತಾ ಆ ಕೋಣನಿಗೆ ಒಂದೆರಡು ಏಟುಗಳನ್ನು ಕೊಡಲು ಜ್ಞಾನದೇವನ ಬೆನ್ನಮೇಲೆ ಬಾಸುಂಡೆಗಳು ಮೂಡಿಕೊಂಡವು. ಜ್ಞಾನದೇವನು ಆ ಕೋಣನ ತಲೆಯನ್ನು ಸವರಲು ಅದು ಓಂಕಾರೋಚ್ಚಾರಣೆಯನ್ನು ಮಾಡಿ ವೇದಮಂತ್ರವನ್ನು ಹೇಳುವದಕ್ಕೆ ಪ್ರಾರಂಭಿಸಿತು! ಇನ್ನು ಕೆಲವು ದಿನಗಳಾದಮೇಲೆ ಜ್ಞಾನೇಶ್ವರನೇ ಮೊದಲಾದ ಈ ಬಾಲಕರು ಇಳಿದುಕೊಂಡಿದ್ದ ಮನೆಯ

ಬ್ರಾಹ್ಮಣನು ತಂದೆಯ ಶ್ರಾದ್ಧವನ್ನು ಮಾಡಬೇಕಾಗಿ ಬಂತು. ಪತಿತಸಂನ್ಯಾಸಿಯ ಮಕ್ಕಳ ಸಂಪರ್ಕವಿರುವ ಆ ಮನೆಗೆ ಪೂರ್ವಪಙ್ಕ್ತಿಯ ಊಟಕ್ಕೆ ಹೋದರೆ ತಮಗೆ ಬಹಿಷ್ಕಾರವಾದೀತೆಂದು ಯಾರೂ ಅವರ ಮನೆಗೆ ಬರುವದಕ್ಕೆ ಇಷ್ಟಪಡಲಿಲ್ಲ, ಜ್ಞಾನದೇವನು ಮನೆಯ ಯಜಮಾನನಿಗೆ ಧೈರ್ಯವನ್ನು ಹೇಳಿ ಶ್ರಾದ್ಧಕ್ಕೆ ಎಲ್ಲವನ್ನೂ ಸಜ್ಜುಗೊಳಿಸುವಂತೆ ಮಾಡಿದನು. ಆತನ ಮಹಿಮೆಯಿಂದ ಮನೆಯ ಪೂರ್ವಜರೇ ಸಾಕ್ಷಾತ್ತಾಗಿ ಸಶರೀರರಾಗಿ ಬಂದು ಭೋಜನಮಾಡಿ ಶ್ರಾದ್ಧವು ಸಂಪೂರ್ಣವಾಯಿತೆಂದು ಆಶೀರ್ವದಿಸಿತೆರಳಿದರು!

ಈ ಅದ್ಭುತಗಳನ್ನು ಕಂಡ ಪೈಠಣದ ಬ್ರಾಹ್ಮಣರು ಈ ಬಾಲಕರು ಸಾಮಾನ್ಯರಲ್ಲವೆಂದೂ ಯಾರೋ ಮಹಾತ್ಮರೆಂದೂ ಮನಗಂಡು ಇವರೆನ್ನೆಲ್ಲ ಸತ್ಕರಿಸಿ ಶುದ್ಧಿ ಪತ್ರವನ್ನು ಬರೆದುಕೊಟ್ಟರು. ಕೆಲವುಕಾಲ ಪೈಠಣದಲ್ಲಿ ಜನರಿಗೆ ತತ್ತ್ವೋಪದೇಶವನ್ನು ಮಾಡುತ್ತಿದ್ದು, ವೇದಮಂತ್ರವನ್ನು ಪಠಿಸಿದ ಕೋಣನನ್ನೂ ಜೊತೆಯಲ್ಲಿ ಕರೆದುಕೊಂಡು ''ಆಲೆ'' ಎಂಬಲ್ಲಿಗೆ ಎಲ್ಲರೂ ಬಂದು ತಲುಪಿದರು. ಅಲ್ಲಿ ಕೋಣನಿಗೆ ದೇಹಾರೋಗ್ಯವು ತಪ್ಪಿ, ಅದು ಇಹಲೋಕದ ಯಾತ್ರೆಯನ್ನು ಮುಗಿಸಿತು. ಆ ಸ್ಥಲದಲ್ಲಿ ಜನರು ಆ ಪ್ರಾಣಿಗೆ ಒಂದು ಸಮಾಧಿಯನ್ನು ಏರ್ಪಡಿಸಿದರು ಅಲ್ಲಿ ಪ್ರತಿ ಚೈತ್ರ ಶುದ್ಧ ಏಕಾದಶಿಯದಿನ ಈಗಲೂ ಒಂದು ಜಾತ್ರೆಯು ನಡೆಯುತ್ತಿರುವದು.

ಅಲ್ಲಿಂದ ಮುಂದಕ್ಕೆ ಈ ಹುಡುಗರೆಲ್ಲರೂ ನೇವಾಸೆ ಎಂಬಲ್ಲಿಗೆ ಬಂದು ತಲುಪಿದರು. ಆ ಊರಲ್ಲಿ ಜ್ಞಾನೇಶ್ವರರು ತಮ್ಮ ಹದಿನೈದನೆಯ ವಯಸ್ಸಿನಲ್ಲಿ ಗೀತಾ ವ್ಯಾಖ್ಯಾನವನ್ನು ಮಾಡಿದರು. ಸಚ್ಚಿದಾನಂದರೆಂಬುವರು ಅದನ್ನು ಬರೆದರು. ಆ ಗ್ರಂಥಕ್ಕೆ ''ಭಾವಾರ್ಥದೀಪಿಕೆ'' ಎಂಬ ಹೆಸರಿಟ್ಟರೂ ಈಗ ಅದು ''ಜ್ಞಾನೇಶ್ವರಿ'' ಎಂಬ ಹೆಸರಿನಿಂದಲೇ ಪ್ರಸಿದ್ಧವಾಗಿರುತ್ತದೆ. ಈ ಗ್ರಂಥದಲ್ಲಿ ಕಂಡುಬರುವ ಕಾವ್ಯಶೈಲಿಯೂ, ವಿಚಾರಪರಂಪರೆಯಲ್ಲಿ ಕಾಣಬರುವ ಅಗಾಧವಾದ ಜ್ಞಾನವೂ ಹೃದಯವನ್ನು ಕರಗಿಸುವಂತೆ ಹೊರಸೂಸುವ ಭಕ್ತಿಯ ಝುರಿಯೂ ಮಹಾರಾಷ್ಟ್ರದ ಜನರ ಚಿತ್ತವನ್ನು ಇಂದಿಗೂ ಸೆಳೆದುಕೊಂಡುಬಿಟ್ಟಿರುತ್ತದೆ. ಈ ಗ್ರಂಥವು ಹಿಂದಿನ ಮರಾಠಿಯ ಭಾಷೆಯಲ್ಲಿರುವದರಿಂದ ಆಡುಮಾತಿನಲ್ಲಿ ಇದಕ್ಕೆ ವ್ಯಾಖ್ಯಾನಗಳೂ ಹುಟ್ಟಿರುತ್ತವೆ. ಇದನ್ನು ದಿವಂಗತ ರಾಘವೇಂದ್ರ ಸುಬ್ಬರಾವ್ ಮೂಡಕಟ್ಟೆ ಎಂಬವರು ಕನ್ನಡಭಾಮಿನೀಷಟ್ಪದಿಯಲ್ಲಿ ಅನುವಾದಮಾಡಿರುತ್ತಾರೆ.

ಜ್ಞಾನೇಶ್ವರರು ತಮ್ಮ ಬಾಲ್ಯದಲ್ಲಿ ಮಾಡಿತೋರಿಸಿದ ಅದ್ಭುತಲೀಲೆಗಳಲ್ಲೆಲ್ಲ ಇದು ಹೆಚ್ಚಿನ ಲೀಲೆ ಎಂದರೆ ತಪ್ಪಾಗಲಾರದು. ಈ ಗ್ರಂಥದ ಜೊತೆಗೆ ಇವರು ''ಅಮೃತಾನುಭವ'' ಎಂಬ ಒಂದು ಸ್ವತಂತ್ರಗ್ರಂಥವನ್ನೂ ರಚಿಸಿದರು.

ಜ್ಞಾನದೇವನು ಆಳಂದಿಯಲ್ಲಿರುವಾಗ ಚಾಂಗದೇವನೆಂಬ ಒಬ್ಬ ಮಹಾಯೋಗಿಯು ಇವರಲ್ಲಿಗೆ ಏನೂ ಬರೆಯದೆ ಇದ್ದ ಒಂದು ಬರಿಯ ಕಾಗದವನ್ನು ಕಳುಹಿಸಿಕೊಟ್ಟರು. ಜ್ಞಾನೇಶ್ವರರು ಆ ಪತ್ರದಲ್ಲಿ ಅರವತ್ತೈದು ಓವಿ ಪದ್ಯಗಳ ಗ್ರಂಥವೊಂದನ್ನು ಬರೆದು ಕಳುಹಿಸಿದರು. ಅದರಲ್ಲಿ ಅಹಂಕಾರದಿಂದಾಗುವ ಕೇಡು, ಪರಮಾತ್ಮನನ್ನು ಶರಣುಹೋಗಬೇಕಾದದ್ದರ ಅವಶ್ಯಕತೆ- ಮುಂತಾದದ್ದನ್ನು ಬರೆದಿತ್ತು. ಆ ಗ್ರಂಥವು ''ಚಾಂಗದೇವಶಾಸಠೀ'' ಎಂಬಹೆಸರಿನಿಂದಪ್ರಖ್ಯಾತವಾಯಿತು.ಚಾಂಗದೇವನುಅನೇಕಯೋಗಸಿದ್ಧಿಗಳನ್ನು ಪಡೆದುಕೊಂಡಿದ್ದನು. ಅವನು 1430 ವರ್ಷಗಳಿಂದ ಜೀವಿಸಿರುತ್ತಾನೆಂದು ಜನರು ಹೇಳಿಕೊಳ್ಳುತ್ತಿದ್ದರು. ಜ್ಞಾನೇಶ್ವರರನ್ನು ನೋಡುವದಕ್ಕೆ ಆತನು ಒಂದು ಸಿಂಹವನ್ನೇರಿಕೊಂಡು ಹಾವನ್ನೇ ಚಾವಟಿಯಾಗಿ ಮಾಡಿಕೊಂಡು ನೂರಾರು ಜನ ಶಿಷ್ಯರೊಡನೆ ಬಂದನೆಂದೂ ಜ್ಞಾನೇಶ್ವರರು ಆಗ ಒಂದು ಮೋಟುಗೋಡೆಯ ಮೇಲೆ ಕುಳಿತಿದ್ದದ್ದರಿಂದ ಅದನ್ನೇ ಮುಂದಕ್ಕೆ ನಡೆಯಿಸಿಕೊಂಡು ಹೋಗಿ ಅವನನ್ನು ಎದುರುಗೊಂಡು ಆತನ ಯೋಗಸಿದ್ಧಿಯ ಹೆಮ್ಮೆಯನ್ನು ಕುಗ್ಗಿಸಿದರೆಂದೂ ಹೇಳುತ್ತಾರೆ.

ಜ್ಞಾನೇಶ್ವರರು ತೀರ್ಥಯಾತ್ರೆಗೆ ಹೊರಟು ಪಂಢರಾಪುರವನ್ನು ಸೇರಿದಾಗ ಸುಪ್ರಸಿದ್ಧ ಭಕ್ತಶ್ರೇಷ್ಠನಾದ ನಾಮದೇವನ ಪರಿಚಯವು ಅವರಿಗೆ ಆಯಿತು. ಜ್ಞಾನೇಶ್ವರನು ವಿಠಲನ ಭಕ್ತರಾಗಿ ಭಾಗವತಜನರ ವಾರಕರಿಸಂಪ್ರದಾಯವನ್ನು ಸ್ಥಾಪಿಸಿದರು. ಅವರು ಇನ್ನೂ ಹಲವು ಭಕ್ತರೊಡನೆ ಉಜ್ಜಯಿನಿ, ಪ್ರಯಾಗ, ಕಾಶಿ, ಗಯ, ಅಯೋಧ್ಯ, ಗೋಕುಲ, ಬೃಂದಾವನ, ದ್ವಾರಕೆ-ಮುಂತಾದ ತೀರ್ಥಗಳನ್ನೆಲ್ಲ ನೋಡಿಕೊಂಡು ಮತ್ತೆ ಪಂಢರಾಪುರಕ್ಕೆ ಬಂದರು. ಈ ಸಂತರು ಎಲ್ಲೆಲ್ಲಿ ಹೋದರೂ ಅಲ್ಲಲ್ಲಿ ಜನರು ಗುಂಪುಗುಂಪಾಗಿ ಬಂದು ಭಗವನ್ನಾಮದ ಪಾವಿತ್ರ್ಯವನ್ನೂ ಭಗವಂತನ ಮಹಿಮೆಯನ್ನೂ ಅವರಿಂದ ತಿಳಿದುಕೊಂಡು ತಾವೂ ಭಕ್ತರಾಗಿ ಉದ್ಧಾರವಾಗುತ್ತಿದ್ದರು.

ಇಷ್ಟುಹೊತ್ತಿಗೆ ಶ್ರೀ ಜ್ಞಾನೇಶ್ವರಮಹಾರಾಜರ ಕೀರ್ತಿಯು ಎಲ್ಲೆಲ್ಲಿಯೂ ಹಬ್ಬಿಕೊಂಡಿತು. ಅನೇಕ ಯೋಗಿಗಳೂ ಯತಿಗಳೂ ಸಾಧಕರೂ ಇವರ ದರ್ಶನಕ್ಕೆ ಬಂದುಹೋಗಲಾರಂಭಿಸಿದರು. ಮಹಾಯೋಗೀಶ್ವರನೆಂದು ಪ್ರಖ್ಯಾತನಾಗಿದ್ದ ಚಾಂಗದೇವನೂ ಜ್ಞಾನೇಶ್ವರರ ಶಿಷ್ಯನಾದನು. ಇಪ್ಪತ್ತೊಂದು ವರ್ಷ, ಮೂರು ತಿಂಗಳು, ಐದು ದಿನಗಳು ಮಾತ್ರ ಜ್ಞಾನೇಶ್ವರರು ಬದುಕಿದ್ದರು. ಕ್ರಿ.ಶ.1275ನೇ ವರ್ಷದ ಭಾದ್ರಪದ ಕೃಷ್ಣಾಷ್ಟಮಿಯ ದಿನ ರಾತ್ರೆಸರಿಹೊತ್ತಿನಲ್ಲಿ ಅವರ ಅವತಾರವಾಯಿತು. ಅವರು ಶ್ರೀಕೃಷ್ಣನ ಅಂಶದಿಂದ ಜನಿಸಿದವರೆಂದೇ ಮಹಾರಾಷ್ಟ್ರ ಜನರ ನಂಬಿಕೆ. ಕ್ರಿ.ಶ.1296ನೆಯ ವರ್ಷದಲ್ಲಿ ಅವರು ಈ ಲೋಕದ ವ್ಯಾಪಾರವನ್ನು ಬಿಟ್ಟರು. ಕಾರ್ತಿಕ ಬಹುಳ ಏಕಾದಶಿಯಿಂದ ತ್ರಯೋದಶಿಯವರೆಗೆ ನಾಮದೇವನೇ ಮುಂತಾದ ಭಕ್ತರು ಉತ್ಸವವನ್ನು ಮಾಡಿದರು; ಜ್ಞಾನದೇವರಿಗೆ ಸ್ನಾನಮಾಡಿಸಿ ಮೈಗೆ ಚಂದನವನ್ನು ಪೂಸಿ ಘಮಘಮಿಸುವ ಹೂಮಾಲೆಗಳನ್ನು ಕೊರಳಿಗೆ ಹಾಕಿ ಧೂಪದೀಪಾದಿಗಳಿಂದ ಪೂಜೆಯನ್ನು ಮಾಡಿದರು. ತ್ರಯೋದಶಿಯದಿನ ಜ್ಞಾನದೇವರು ಆಸನದಲ್ಲಿ ಕುಳಿತು ಸಜೀವಸಮಾಧಿಯನ್ನು ಹೊಂದಿದರು. ಸಮಾಧಿಯ ದ್ವಾರಕ್ಕೆ ನಿವೃತ್ತಿನಾಥನೇ ಹಾಸುಗಲ್ಲನ್ನು ಹಾಕಿದನು. ತಮ್ಮ ಅತ್ಯಂತ ಪ್ರಿಯನಾದ ಜ್ಞಾನೇಶ್ವರನ ದರ್ಶನವಾಗುವದು ಇಂದೇ ಕೊನೆಯದಿನ ಎಂದು ಆತನ ಸತ್ಸಂಗವನ್ನು ನೆನೆದುಕೊಂಡು ಎಲ್ಲರೂ ಕಣ್ಣೀರನ್ನು ತಂದುಕೊಂಡರು ತ್ರಯೋದಶಿಯ ದಿನ ಸಾವಿರಾರು ಜನರು ಇಂದಿಗೂ ಆಲಂದಿಗೆ ಈ ಸಮಾಧಿಯ ದರ್ಶನಕ್ಕೆ ಹೋಗುತ್ತಾರೆ. ಜ್ಞಾನೇಶ್ವರ ಮಹಾರಾಜರು ಈಗಲೂ ಅಲ್ಲಿ ಸಮಾಧಿಸ್ಥರಾಗಿರುವರೆಂದೇ ಭಕ್ತರು ನಂಬುತ್ತಾರೆ.

ಜ್ಞಾನೇಶ್ವರರ ಗ್ರಂಥಗಳು ಮುಖ್ಯವಾಗಿ ಬಾವಾರ್ಥದೀಪಿಕೆ ಎಂಬ (ಜ್ಞಾನೇಶ್ವರೀ) ಗೀತಾವ್ಯಾಖ್ಯಾನ, ಅಮೃತಾನುಭವ, ಹರಿಪಾಠ, ಚಾಂಗದೇವ ಪಾಸಠೀ ಈ ನಾಲ್ಕು. ಜ್ಞಾನೇಶ್ವರರು ಪಂಢರಾಪುರಿಯ ವಿಠಲನ ಭಕ್ತಾಗ್ರೇಸರರಾದರೂ ಅವರ ಭಕ್ತಿಯು ಅದ್ವೈತಜ್ಞಾನದ ಆಧಾರದಮೇಲೆ ನಿಂತಿತ್ತು. ಕ್ಷೇತ್ರಕ್ಷೇತ್ರಜ್ಞ ಅಥವಾ ಪ್ರಕೃತಿ, ಪುರುಷ- ಇವುಗಳ ಸಂಯೋಗದಿಂದ ಜಗತ್ತೆಲ್ಲವೂ ಜನಿಸುವದು, (13-704) ಆದರೂ ಈ ಎರಡು ತತ್ತ್ವಗಳು ಬೇರೆಬೇರೆಯಲ್ಲ. (13-705) ಪ್ರಕೃತಿ ಪುರುಷ-ಎರಡೂ ಸೇರಿಯೇ ಬ್ರಹ್ಮತತ್ತ್ವವಾಗಿರುತ್ತದೆ. (16-649) - ಎಂದು ಶಂಕರಾಚಾರ್ಯರಂತೆಯೇ ಅವರು ಹೇಳಿರುತ್ತಾರೆ. ಬಟ್ಟೆಗೂ ತಂತುವಿಗೂ ಈಶ್ವರನಿಗೂ ಘಟಾಕಾಶಮಠಾಕಾಶಗಳಿಗೆ ಇರುವಂತೆ ಅಭೇದವೇ

ಇರುತ್ತದೆ (13-711,712) - ಎಂದು ಅವರು ಸ್ಪಷ್ಟವಾಗಿ ನುಡಿದಿರುತ್ತಾರೆ. ತಾರತಮ್ಯವನ್ನುಂಟುಮಾಡಿರುವ ಮಾಯೆಯು ಎಲ್ಲೆಲ್ಲಿಯೂ ಹರಡಿರುತ್ತದೆ; ಇದು ಮಿಥ್ಯೆಯಲ್ಲ, ಬರಿಯ ಆಭಾಸ (3-756). ಹಾರವು ಕತ್ತಲೆಯಲ್ಲಿ ಹಾವಾಗಿ ತೋರುವಂತೆಯೂ ಕಪ್ಪೆಯಚಿಪ್ಪು ಬೆಳ್ಳಿಯಂತೆ ಹೊಳೆಯುವ ಹಾಗೂ ತೋರುವಂತೆಯೂ ಪರಮಾತ್ಮತತ್ತ್ವವು ಪ್ರಕೃತ್ತಿಗುಣದಿಂದ ಬೇರೆಬೇರೆಯಾಗಿ ತೋರುತ್ತದೆ (13-756 ರಿಂದ 759) - ಎಂದು ಅವರು ಹೇಳಿರುವರು. ಶ್ರೀಶಂಕರಾಚಾರ್ಯರ ಸಿದ್ಧಾಂತಕ್ಕೆ ಸಂಪೂರ್ಣವಾಗಿ ಹೊಂದುತ್ತದೆ. ಅಮೃತಾನುಭವವೆಂಬ ಗ್ರಂಥದಲ್ಲಿ ಅವರು ಅಜ್ಞಾನವಾದದ ಖಂಡನೆಯನ್ನು ಮಾಡಿರುವದನ್ನು ನೋಡಿ ಕೆಲವರು ಶಂಕರಾಚಾರ್ಯರ ಅವಿದ್ಯಾವಾದವನ್ನೇ ಅವರು ಖಂಡಿಸಿರುತ್ತಾರೆಂದು ಭ್ರಾಂತರಾಗಿರುತ್ತಾರೆ. ಆದರೆ ಅಲ್ಲಿ ಖಂಡಿಸಿರುವುದು ಸದಸದ್ವಿಲಕ್ಷಣವಾದ ಅನಿರ್ವಚನೀಯವಾದ ಮಾಯೆಯೆಂಬ ಹೆಸರಿನ ಅಜ್ಞಾನವು ಬ್ರಹ್ಮವನ್ನು ಆ ಅಜ್ಞಾನವು ಆಶ್ರಯಿಸಿದೆ ಎಂಬುದಕ್ಕಾಗಲಿ ಅದರಿಂದ ಜಗತ್ತು ಉಂಟಾಗಿದೆ ಎಂಬದಕ್ಕಾಗಲಿ ಯಾವ ಪ್ರಮಾಣವೂ ಇಲ್ಲ ಯುಕ್ತಿಯೂ ಇಲ್ಲ- ಎಂಬುದು ಅಜ್ಞಾನಖಂಡನೆಯ ಸಾರವು. ಪರಮಾತ್ಮನೇ ಸರ್ವವೂ ಆಗಬೇಕೆಂದು ಸಂಕಲ್ಪಿಸಿ ಸರ್ವವೂ ಆಗಿರುತ್ತಾನೆ. ಇದೆಲ್ಲವೂ ಬ್ರಹ್ಮಲೀಲೆಯೇ ಎಂಬ ಉಪನಿಷತ್ತಿನ ಸಿದ್ಧಾಂತವು ಜ್ಞಾನೇಶ್ವರರಂತೆ ಶಂಕರಚಾರ್ಯರಿಗೂ ಸಮ್ಮತವಾಗಿ ರುತ್ತದೆ ಎಂಬುದನ್ನು ಹೇಳಬೇಕಾದದ್ದೇ ಇಲ್ಲ.

ಪರಮಾತ್ಮನ ಭಕ್ತಿಯೇ ಅಜ್ಞಾನವನ್ನು ನಾಶಮಾಡುವ ಜ್ಞಾನಕ್ಕೆ ಮುಖ್ಯವಾದ ಉಪಾಯವು ಎಂಬುದು (100-106,107; 18-862 ರಿಂದ 911) ಶಂಕರಾಚಾರ್ಯರಂತೆಯೇ ಜ್ಞಾನೇಶ್ವರರಿಗೂ ಮಾನ್ಯರಾಗಿರುತ್ತವೆ. ಪರಮೇಶ್ವರನ ಭಕ್ತಿಗೆ ಸಮಾನವಾದದ್ದು ಮತ್ತೆ ಯಾವದೂ, ಇಲ್ಲವೆಂಬುದನ್ನು ಅವರು ಶಂಕರಾಚಾರ್ಯರೆಂತೆಯೇ ಜ್ಞಾನೇಶ್ವರಿಯ ಒಂಬತ್ತರಿಂದ ಹತ್ತನೆಯ ಅಧ್ಯಾಯಗಳವರೆಗೆ ಪ್ರತಿಪಾದಿಸಿರುತ್ತಾರೆ. ಸಂಸ್ಕೃತದಲ್ಲಿ ಕಠಿನವಾದ ವಾದಸರಣಿಯಲ್ಲಿ ಶಂಕರಾಚಾರ್ಯರು ಬರೆದಿದ್ದರ ತಿರುಳನ್ನು ತೆಗೆದು ಎಲ್ಲರಿಗೂ ತಿಳಿಯುವ ದೇಶಭಾಷೆಯಲ್ಲಿ ಸೂರೆಮಾಡಿದ ಕೀರ್ತಿಯು ಜ್ಞಾನೇಶ್ವರ ಮಹಾರಾಜರಿಗೆ ಸಲ್ಲತಕ್ಕದ್ದಾಗಿರುವದು. ಭಕ್ತಿಮಾರ್ಗದಲ್ಲಿ ಸೌಭ್ಯವನ್ನು ಜನಸಮಾನ್ಯಕ್ಕೆ ವಿವರವಾಗಿ ತಿಳಿಸಿ ತಮ್ಮ ಉಪದೇಶದಿಂದಲೂ ಆಚಾರದಿಂದಲೂ ಭಾಗವತ ಸಂಪ್ರದಾಯ ಪ್ರವರ್ತಕರಾದ ಕೀರ್ತಿಯಂತೂ ಅವರದೇ ಆಗಿರುತ್ತದೆ.

''ಅರ್ಜುನ, ಇದನ್ನು ನೀನು ನೆನಪಿಟ್ಟುಕೊ; ಭಕ್ತರಾದವರು ತಮ್ಮನ್ನು ತಾವು ನನಗೆ ಅರ್ಪಣೆಮಾಡುವುದೇ ನನ್ನ ಪ್ರಾಪ್ತಿಗೆ ಮುಖ್ಯವಾದ ಉಪಾಯವು ಮತ್ತೆ ಯಾವ ಉಪಾಯದಿಂದ ನನ್ನ ಸ್ವರೂಪದ ಲಾಭವುಂಟಾಗಲಾರದು. ವೇದಗಳಿಗಿಂತಲೂ ಯಾರು ಅಧಿಕಜ್ಞಾನಸಂಪನ್ನರಾದಾರು? ಸಾವಿರ ನಾಲಗೆಗಳ ಶೇಷನಿಗಿಂತಲೂ ಹೆಚ್ಚು ವಾಗ್ಮಿತೆಯು ಯಾರಿಗೆ ಬಂದೀತು? ಆದರೆ ಆ ಶೇಷನು ನನ್ನ ಹಾಸಿಗೆಯಾಗಿ ಸೇವೆ ಮಾಡುತ್ತಿರುವನು; ಆ ವೇದಗಳು ನೇತಿ ನೇತಿ ಎಂದು ನನ್ನಿಂದ ಹಿಂತಿರುಗುವವು ಸನಕಾದಿಗಳು ನನಗಾಗಿ ಹುಚ್ಚರಾಗಿರುವರು. ಯೋಗೀಶ್ವರನಾದ ಶಂಕರನಿಗೂ ಅವನ ತಪಸ್ಸಿನಿಂದ ಶಾಂತಿ ಸಿಕ್ಕಲಿಲ್ಲ; ಪಾದದಿಂದ ಹುಟ್ಟಿದ ಗಂಗೆಯನ್ನು ಆತನೂ ತಲೆಯಲ್ಲಿ ಧರಿಸಿದನು. ಆದ್ದರಿಂದ ನನ್ನ ಸ್ವರೂಪವನ್ನು ಪಡೆಯಬೇಕೆಂಬವನು ಧನಮಾನಾದಿಗಳ ಅಭಿಮಾನವನ್ನು ಬಿಡಬೇಕು. ತನ್ನ ಪಾಂಡಿತ್ಯದ ಅಭಿಮಾನವನ್ನು ಮರೆಯಬೇಕು; ವ್ಯವಹಾರದಲ್ಲಿ ಎಲ್ಲೆಲ್ಲಿಯೂ ನಮ್ರನಾಗಿರಬೇಕು, ಅಂಥವನೇ ನನ್ನನ್ನು ಪಡೆಯುವನು ನಾನು ಭಕ್ತನ ನಿರ್ಮಲಭಕ್ತಿಯೊಂದನ್ನೇ ಮೆಚ್ಚುತ್ತೇನೆ. ನಾನು ಜಾತಿ ಕುಲಗಳನ್ನು ನೋಡುವದಿಲ್ಲ; ಭಕ್ತನು ಯಾವ ಜಾತಿಯವನೇ ಆಗಿರಲಿ, ನಾನು ಅವನ ಮನೆಯಲ್ಲಿ ಅತಿಥಿಯಾಗಿರುತ್ತೇನೆ. ಯಾವ ಕಾರಣದಿಂದಲೇ ಆಗಲಿ ನನ್ನಲ್ಲಿ ಯಾವನ ಚಿತ್ತವು ನಿಲ್ಲುವದೋ ಅವನಿಗೆ ನಿಲ್ಲುವದೋ ಅವನಿಗೆ ನನ್ನ ಸ್ವರೂಪದ ಲಾಭವಾಗಿಬಿಡುತ್ತದೆ. ಇದು ವಸ್ತು ಸ್ವಭಾವವು. ಸ್ಪರ್ಶಮಣಿಯನ್ನು ಒಡೆಯಬೇಕೆಂದು ಯಾರಾದರೂ ಸಿಟ್ಟಿನಿಂದ ಅದರ ಮೇಲೆ ಕಬ್ಬಿಣದ ಸುತ್ತಿಗೆಯ ಪೆಟ್ಟು ಹಾಕಬಹುದು ಆದರೆ ಅದನ್ನು ಸೋಕಿದೊಡನೆ ಕಬ್ಬಿಣವು ಚಿನ್ನವಾಗಿಬಿಡುವುದು''. - ಜ್ಞಾನೇಶ್ವರಿ

★★★★★

# ಶ್ರಾದ್ಧಾನ್ನವನ್ನು ಹೊಲೆಯರಿಗೆ ಉಣಬಡಿಸಿದ ಮಹಾತ್ಮನು

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಒಂದು ದಿನ ಏಕನಾಥಮಹಾರಾಜರವರ ತಂದೆಯ ಶ್ರಾದ್ಧ. ಅಡಿಗೆ ಯಾಗುತ್ತಿದೆ. ಆ ಹೊತ್ತಿಗೆ ಬೀದಿಯಲ್ಲಿ ನಾಲ್ಕೈದು ಜನ ಹೊಲೆಯರು ಅವರ ಮನೆಯ ಮುಂದೆ ಹಾದು ಹೋಗುವ ಸಂಭವ ಬಿತ್ತು. ಮನೆಯಲ್ಲಿ ಏರ್ಪಾಡಾಗುತ್ತಿದ್ದ ಒಬಗೆಬಗೆಯ ಅಡಿಗೆಗಳ ಕಮ್ಮನೆಯ ವಾಸನೆಯು ಮೂಗಿಗೆ ಬಡಿಯಲು ಅವರು ಒಬ್ಬರಿಗೊಬ್ಬರು ''ಎಲಾ, ನೋಡಿದೆಯ ಎಂಥ ಘಮ! ಒಳಗೆ ಎಂಥೆಂಥ ಪಕ್ವಾನ್ನವಾಗಿರಬೇಡ! ಆದರೇನಪ್ಪ, ನಮ್ಮಂಥ ಬಡಪಾಯಿಗಳಿಗೆ ಈ ಊಟವುಣ್ಣುವ ಭಾಗ್ಯವೆಲ್ಲಿಂದ ಬಂದೀತು? ಅದೆಲ್ಲ ಬ್ರಾಹ್ಮಣರ ಮಾತಾಯಿತು. ಅವರು ದಿನಕ್ಕೊಂದು ಒಗೆಯೆಂದು ತಿನ್ನುವ ಭಕ್ಷ್ಯಭೋಜ್ಯಗಳ ವಾಸನೆಯನ್ನು ಕುಡಿಯುವದಾದರೂ ನಮ್ಮ ಹಣೆಯಲ್ಲಿ ಒರೆದಿದೆಯೇ?'' ಎಂದು ಕೊಳ್ಳುತಿದ್ದರು.

ಈ ಮಾತು ಏಕನಾಥರ ಕಿವಿಗೆ ಬಿದ್ದಿತು. ಅವರ ಹೃದಯವು ಕರಗಿ ಹೋಯಿತು. ಹೆಂಡತಿಯನ್ನು ಕೂಗಿ ''ಎಲೆ, ಮಾಡಿರುವ ಅಡಿಗೆಯನ್ನೆಲ್ಲ ಇವರಿಗೆ ಬಡಿಸಿಬಿಡು'' ಎಂದರು. ಗಿರಿಜಾಬಾಯಿಯು ಮಹಾರಾಜರಿಗೆ ತಕ್ಕ ಧರ್ಮಪತ್ನಿ ಆಕೆಯು ''ಅನ್ನವು ಬೇಕಾದಷ್ಟಿದೆಯಲ್ಲ! ಇವರಿಷ್ಟು ಜನವೇ ಏಕೆ, ಇವರ ಹೆಂಡಿರ ಮಕ್ಕಳನ್ನೆಲ್ಲ ಕರೆದುಕೊಂಡು ಬರುವಂತೆ ಹೇಳಿದರೆ ಇಲ್ಲಿಯೇ ಬಡಿಸಿಬಿಡಬಹುದು ಎಂದಳು''. ಅದನ್ನು ಕೇಳಿ ಹೊಲೆಯರು ಹಿಡಿಸದಷ್ಟು ಆನಂದದಿಂದ ಓಡಿಹೋಗಿ ತಮ್ಮವರನ್ನೆಲ್ಲ ಕರೆದುಕೊಂಡು ಬಂದರು. ಕೂಡಲೆ ಏಕನಾಥರು ಬೀದಿಯಲ್ಲಿ ಉದ್ದಕ್ಕೆ ಎಲೆಹಾಕಿಸಿ, ಬ್ರಾಹ್ಮಣರಿಗಾಗಿ ಸಿದ್ಧಪಡಿಸಿಟ್ಟಿದ್ದ ಗಂಧ, ಅಕ್ಷತೆ, ಹೂ-ಮುಂತಾದದ್ದನ್ನೆಲ್ಲ ಅವರಿಗೆ ಕೊಡಿಸಿ ಮನೆಯ ಆಳುಗಳ ಮೂಲಕವಾಗಿ ಮಾಡಿದ್ದ ಅಡಿಗೆಯನ್ನೆಲ್ಲ ಅವರಿಗೆ ಬಡಿಸಿದರು. ಆಮೇಲೆ **'ಜನೀ ಜನಾರ್ದನ ಆಹೆ ನಿಶ್ಚಿತ'** (ಜನಗಳಲ್ಲೆಲ್ಲ ಜನಾರ್ದನನೇ ಇರುವನೆಂಬುದರಲ್ಲಿ ಸಂದೇಹವಿಲ್ಲ) ಎನ್ನುತ್ತಾ ಸಂಕಲ್ಪ ಮಾಡಿ ಆ ಅನ್ನವನ್ನು ಭಗವದರ್ಪಣಮಾಡಿದರು. ಹೊಲೆಯರೆಲ್ಲರೂ ಹೊಟ್ಟೆ ತುಂಬ ಉಂಡು ತೃಪ್ತರಾದರು. ನಾಥಮಹಾರಾಜರೂ ಅವರ ಪತ್ನಿ ಗಿರಿಜಾಬಾಯಿಯೂ ಆಡಿದ ಪ್ರೇಮ ಯುಕ್ತವಾದ ಮಾತುಗಳಂತು ಅವರ ಹೃದಯದಲ್ಲಿ ಆನಂದಾಮೃತದ ಬುಗ್ಗೆಯನ್ನೇ ಎಬ್ಬಿಸಿದವು. 'ಈ ಮಹಾರಾಯ, ಬಹುಕಾಲ ತಣ್ಣಗೆ ಬದುಕಲಪ್ಪ!' ಎನ್ನುತ್ತ ತಾವು ಮಾಡಿದ ಊಟದ ಸವಿಯನ್ನೇ ನೆನಸಿಕೊಂಡು ಬಾಯಿಚಪ್ಪರಿಸುತ್ತಾ, ಸಂತೋಷದಿಂದ ತಮ್ಮ ತಮ್ಮ ಮನೆಗೆ ಹೋದರು.

ಇತ್ತ ಆ ದಿನ ಶ್ರಾದ್ಧಕ್ಕೆಂದು ಆಮಂತ್ರಿತರಾಗಿದ್ದ ಬ್ರಾಹ್ಮಣರಿಗೆ ಈ ಸುದ್ದಿಯು ಮುಟ್ಟಿತು. ಅವರು ಕಿಕಿಡಿಯಾದರು. ''ಛೆ! ಎಂಥ ನೀಚನು? ಬ್ರಾಹ್ಮಣರಿಗೆಂದು ಅಡಿಗೆಯನ್ನು ಮಾಡಿಸಿ ಹೆಸರು ಹೇಳಲಿಕ್ಕೂ ಅರ್ಹರಲ್ಲದ ಅಂತ್ಯಜರಿಗೆ ಉಣಬಡಿಸಿದನೆ? ಇವನ ಮನೆ ಯಲ್ಲಿ ನಾವು ಇನ್ನು ಹವ್ಯಕವ್ಯಗಳಿಗೆ ಹೋಗಬಹುದೆ?'' ಎಂದು ಬಗೆ ಒಗೆಯಾಗಿ ಏಕನಾಥರನ್ನು ಬಯ್ದರು. ಕೆಲವರಂತೂ ನಾಥರ ಮನೆಗೇ ಬಂದು ''ಎಲಾ ಭ್ರಷ್ಟ! ಪ್ರಖ್ಯಾತನಾದ ಭಾನುದಾಸನ ವಂಶದಲ್ಲಿ ಹುಟ್ಟಿ, ಕುಲಕ್ಕೇ ಬೆಂಕಿಯನ್ನು ಹತ್ತಿಸಿಬಿಟ್ಟೆಯಲ್ಲ! ಬ್ರಾಹ್ಮಣಾಚಾರವನ್ನೆಲ್ಲ ಹಾಳುಮಾಡಿ ವರ್ಣಸಂಕರವಾದ ನಿನಗೆ ಯಾವ ನರಕವೊ!'' ಎಂದು ಮನಬಂದಂತೆ ಶಪಿಸಿದರು.

ಆಗ ನಾಥರು ಶಾಂತಿಯುಕ್ತವಾದ ಗಂಭೀರವಾಣಿಯಿಂದ ಕೈಮುಗಿದುಕೊಂಡು ''ಮಹಾಸ್ವಾಮಿ, ಮೊದಲು ಮಾಡಿಸಿದ್ದ ಅಡಿಗೆಯು ತಮಗೋಸ್ಕರವೇ ಏರ್ಪಾಡಾದದ್ದಾದರೂ ಇದು ಕಂಪನ್ನು ಅಂತ್ಯಜರು ಆಘ್ರಾಣಿಸಿದರು. ಆ ಉಚ್ಛಿಷ್ಟವನ್ನು ತಮ್ಮಗಳಿಗೆ ಬಡಿಸುವದು ಅನುಚಿತವೆಂದು ಅದೆಲ್ಲವನ್ನೂ ಅವರಿಗೇ ಬಡಿಸಿಬಿಟ್ಟೆವು. ಈಗ ಮನೆಯನ್ನೆಲ್ಲ ಮತ್ತೆ ಸ್ವಚ್ಛ ಮಾಡಿದ್ದೇನೆ, ಹೊಸ ಅಡಿಗೆಯನ್ನು ಮಾಡಿದ್ದೇವೆ. ತಾವು ನಮ್ಮ ಅಪರಾಧವನ್ನು ಕ್ಷಮಿಸಿ ಇದನ್ನು ಸ್ವೀಕರಿಸಬೇಕು'' ಎಂದು ಎಷ್ಟು ಬೇಡಿಕೊಂಡರೂ ಬ್ರಾಹ್ಮಣರು ಕೇಳದೆ ''ಥೂ, ಚಂಡಾಲ!'' ಎನ್ನುತ್ತಾ ತಮ್ಮ ತಮ್ಮ ಮನೆಗೆ ತೆರಳಿಯೇಬಿಟ್ಟರು.

ಏಕನಾಥರು ಬ್ರಾಹ್ಮಣರ ನಡೆವಳಿಕೆಯಿಂದ ಬಹು ದುಃಖಿತರಾಗಿ, ಮಾಡಿಸಿಟ್ಟಿದ್ದ ಅಡಿಗೆಯನ್ನು ಪಿತೃಗಳಿಗೆ ಮನಸ್ಸಿನಿಂದಲಾದರೂ ಸಮರ್ಪಣೆಮಾಡಿಬಿಡೋಣವೆಂದು ಮೂರು ಎಲೆಗಳಲ್ಲಿ ಕ್ರಮವಾಗಿ ಕ್ರಮವಾಗಿ ಬಡಿಸಿ 'ಆಗತಂ' ಎಂದರೊ? ಇಲ್ಲವೊ ಸೂರ್ಯನಾರಾಯಣ, ಚಕ್ರಪಾಣಿ ಮತ್ತು ಭಾನುದಾಸ - ಎಂಬ ಅವರ ಮೂರು ಪಿತೃಗಳೂ ಕೂಡಲೇ ತಾವೇ ಮೂರ್ತಿವಂತರಾಗಿ ಬಂದು ಕುಳಿತು ಏಕನಾಥರ ಆದರಪೂರ್ವಕವಾದ ಪೂಜೆಯನ್ನು ಸ್ವೀಕರಿಸಿ ಊಟಮಾಡಿ, ಪ್ರಸನ್ನರಾಗಿ ಅಲ್ಲಿಯೇ ನಾಥರನ್ನು ಆಶೀರ್ವದಿಸಿ ಅಂತರ್ಧಾನರಾದರಂತೆ!

ಇತ್ತ ಬ್ರಾಹ್ಮಣರು ತಮ್ಮ ತಮ್ಮ ಮನೆಯಲ್ಲಿ ಊಟವನ್ನು ಮಾಡಿಕೊಂಡು ''ಎಲಾ, ಈ ಹೊತ್ತು ಏಕನಾಥನು ಹೇಗೆ ಶ್ರಾದ್ಧಮಾಡುತ್ತಾನೆ, ನೋಡೋಣ ಬನ್ನಿರೊ!'' ಎಂದು ನಾಥರ ಸಂಕಟವನ್ನು ಕಂಡು ಹಿಗ್ಗುವದಕ್ಕಾಗಿ ಅವರ ಮನೆಯ ಕಡೆಗೆ ಬಂದರು. ಅಷ್ಟರಲ್ಲಿಯೇ ಏಕನಾಥರ ಮನೆಯೊಳಗಿನಿಂದ ಎಂಜಲೆಲೆಗಳನ್ನು ಹೊರಕ್ಕೆ ತರುತ್ತಿದ್ದುದನ್ನು ಕಂಡು ಆಶ್ಚರ್ಯದಿಂದಲೂ ಸಿಟ್ಟಿನಿಂದಲೂ ಚಮಕಿತರಾಗಿ ''ನಾವೆಲ್ಲರೂ ಸೇರಿ ಬಹಿಷ್ಕಾರಹಾಕಿದ ಈ ಭ್ರಷ್ಟನ ಮನೆಗೆ ಬ್ರಾಹ್ಮಣಾರ್ಥಕ್ಕೆ ಇನ್ನೆಂಥ ಮಹಾತ್ಮರು ದೊರೆತರೊ!'' ಎಂದುಕೊಳ್ಳುತ್ತಾ ಅಲ್ಲಿಗೆ ಒಂದು ವಿಚಾರಿಸಲು ಅಲ್ಲಿ ನಡೆದಿದ್ದ ಸಂಗತಿಯನ್ನೆಲ್ಲ ಕಣ್ಣಾರೆ ಕಂಡಿದ್ದ ಶ್ರೀಖಂಡಿಯಾ ಎಂಬಾತನು ಏಕನಾಥರು ತಮ್ಮ ಪಿತೃಗಳಿಗೆ ಸಾಕ್ಷಾತ್ತಾಗಿ ಭೋಜನ ಮಾಡಿಸಿ ಪಿತೃಶ್ರಾದ್ಧವನ್ನು ಪೂರೈಸಿದ ರೀತಿಯನ್ನು ವಿವರಿಸಿದನು.

ಆಗ ಬ್ರಾಹ್ಮಣರ ಮನಸ್ಸಿನಲ್ಲಿ ಎಂಥೆಂಥ ಭಾವಗಳು ಮೂಡಿದ್ದವೋ ಅವನ್ನು ವರ್ಣಿಸತೀರದು. ಏಕನಾಥರು ಅಂತ್ಯಜರಲ್ಲಿ ತೋರ್ಪಡಿಸಿದ ದಯ ಮತ್ತು ಸದಾಚಾರಪಾಲನೆಯಲ್ಲಿ ಅವರಿಗಿದ್ದ ಶ್ರದ್ಧೆ - ಇವುಗಳ ಫಲವಾಗಿ ಆ ದಿನ ಅವರ ತಂದೆ, ಅಜ್ಜ, ಮತ್ತು ಮುತ್ತಜ್ಜ - ಮೂರು ಜನರೂ ಪ್ರಸನ್ನರಾಗಿ ಸಶರೀರವಾಗಿ ಬಂದು ಶ್ರಾದ್ಧವನ್ನು ಸಾಂಗಗೊಳಿಸಿದ ಸುದ್ದಿಯನ್ನು ಕೇಳಿದ ಮೇಲಂತೂ ಅವರಿಗೆ ಅತ್ಯಂತ ಆಶ್ಚರ್ಯವೂ ಭಯಭಕ್ತಿಗಳ ಉಂಟಾದವು. ''ಇಂಥ ಮಹಾತ್ಮನ ಮನಃಸ್ಥಿತಿಯನ್ನು ಅರಿತುಕೊಳ್ಳ ಲಾರದೆ ಅಪಕಾರವನ್ನು ಮಾಡಿದವಲ್ಲ!'' ಎಂಬ ಪಶ್ಚಾತ್ತಾಪವು ಅವರನ್ನೆಲ್ಲ ತುಂಬಿಕೊಂಡಿತು. ಕೂಡಲೆ ಅವರೆಲ್ಲರೂ ಆತನ ಕ್ಷಮೆಯನ್ನು ಬೇಡಿದ್ದಲ್ಲದೆ, ಮಾರನೆಯ ದಿನವೇ ಒಂದು ದೊಡ್ಡ ಸಭೆಯನ್ನು ಏರ್ಪಡಿಸಿ ಅವರ ಮಹಿಮೆಯನ್ನು ಬಗೆಬಗೆಯಾ ಕೊಂಡಾಡಿ ಶಾಸ್ತ್ರೋಕ್ತವಾಗಿ ಪ್ರಾಯಶ್ಚಿತ್ತವನ್ನು ಮಾಡಿಸಿ ಅವರನ್ನು ಜಾತಿಯೊಳಕ್ಕೆ ತೆಗೆದು ಕೊಂಡರಂತೆ!

★★★★★

# ಶ್ರೀ ರಾಮದಾಸಸ್ವಾಮಿಗಳವರು

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀರಾಮದಾಸಸ್ವಾಮಿಗಳೆಂಬುವರು ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ ಹೊಸದುರ್ಗದಲ್ಲಿ ಸಾರಸ್ವತಬ್ರಾಹ್ಮಣವಂಶದಲ್ಲಿ ಜನ್ಮವೆತ್ತಿದರು. ತಮ್ಮ ಜಿಲ್ಲೆಯಲ್ಲಿ ಇಂಗ್ಲೀಷು ವಿದ್ಯಾಭ್ಯಾಸವನ್ನು ಪ್ರಾರಂಭಮಾಡಿ ಬೊಂಬಾಯಿಯಲ್ಲಿರುವ ವಿಕ್ಟೋರಿಯ ಟೆಕ್ನಿಕಲ್ ಇನ್ಸ್ಟಿಟ್ಯೂಟ್ - ಎಂಬ ವಿದ್ಯಾಶಾಲೆಯಲ್ಲಿ ಬಿ.ಎ. ತರಗತಿಯಲ್ಲಿ ಉತ್ತೀರ್ಣರಾದರು. ಆಮೇಲೆ ಮದರಾಸು, ಕೋಯಮುತ್ತೂರು, ಅಹಮ್ಮದಾಬಾದ್ - ಮುಂತಾದ ಕಡೆಗಳಲ್ಲಿರುವ ಗಿರಣಿಯಲ್ಲಿ ಕೆಲವು ಕಾಲ ಉದ್ಯೋಗಮಾಡುತ್ತಿದ್ದರು. (ಅವರಿಗೆ ಒಬ್ಬಳೇ ಮಗಳು; ರಮಾಬಾಯಿಯೆಂದಾಕೆಯ ಹೆಸರು, ತಂದೆಯ ಸದ್ಗುಣಗಳು ಆಕೆಯಲ್ಲಿಯೂ ಕಂಡುಬರುತ್ತಿವೆ.)

ಇಷ್ಟರಲ್ಲಿ ಇವರಿಗೆ ತತ್ತ್ವಸಾಕ್ಷಾತ್ಕಾರವನ್ನು ಮಾಡಿಕೊಳ್ಳಬೇಕೆಂಬ ಹಂಬಲು ಹತ್ತಿಕೊಂಡಿತು. ಮೊದಮೊದಲು ಶ್ರೀರಾಮನಾಮವನ್ನು

ಕೀರ್ತನೆಮಾಡುತ್ತಿದ್ದರು. ಆಮೇಲೆ ಶ್ರೀರಾಮತ್ರಯೋದಶಾಕ್ಷರಿಯ ಮಂತ್ರವನ್ನು ತಮ್ಮ ತಂದೆಯಿಂದ ಉಪದೇಶಮಾಡಿಸಿಕೊಂಡು ಅದನ್ನು ಎಡೆಬಿಡದೆ ಜಪವನ್ನು ಮಾಡುವದಕ್ಕಾರಂಭಿಸಿದರು. ಅಂದಿನಿಂದ ಮಂತ್ರದೀಕ್ಷೆಯನ್ನು ಕೊಟ್ಟ ಗುರುವೆಂಬ ಭಾವನೆಯಿಂದ ತಮ್ಮ ತಂದೆಯನ್ನು ಶುಶ್ರೂಷೆಮಾಡುತ್ತಿದ್ದರು. ಕಾಲಕ್ರಮದಲ್ಲಿ ಅವರಿಗೆ ನಾಮದಲ್ಲಿ ಅಪರಿಮಿತವಾದ ಪ್ರೇಮವುಂಟಾಯಿತು. ಆಗ ಅವರು ದಿನಕ್ಕೆ ಒಂದೆರಡು ಘಂಟೆಗಳ ವಿಶ್ರಾಂತಿಯ ಹೊರತು ಉಳಿದ ಕಾಲವನ್ನೆಲ್ಲ ನಾಮಸ್ಮರಣೆಯಲ್ಲಿಯೇ ಕಳೆಯುತ್ತಿದ್ದರಂತೆ! ಕೆಲವುಕಾಲ ಯಾವ ವಿಶ್ರಾಂತಿಯೂ ಇಲ್ಲದೆಯೇ ಇಪ್ಪತ್ತುನಾಲ್ಕು ಘಂಟೆಗಳ ಕಾಲವೂ ರಾಮನಾಮಜಪದಲ್ಲಿಯೇ ಮುಳುಗಿರುತ್ತಿದ್ದರೆಂದು ಹೇಳುತ್ತಾರೆ.

ಹೀಗೆ ಒಂದು ವರ್ಷಕಾಲ ಸಾಧನೆಯನ್ನು ಮಾಡುತ್ತಿದ್ದು, ಕೊನೆಗೆ 1922ನೆಯ ಇಸವಿಯಲ್ಲಿ ಸಂನ್ಯಾಸಿಗಳಾಗಿ ಮನೆಯನ್ನು ಬಿಟ್ಟು ಹೊರಟು ಪರಮಹಂಸಪರಿವ್ರಾಜಕರಾದರು. ಕೆಲವು ವೇಳೆ ಕಾಲು ನಡಗೆಯಿಂದಲೂ ಕೆಲವು ವೇಳೆ ರೈಲುಗಾಡಿಯಲ್ಲಿಯೂ ಪ್ರಯಾಣ ಮಾಡುತ್ತಾ ಭರತಖಂಡದ ಮುಖ್ಯಕ್ಷೇತ್ರಗಳನ್ನೆಲ್ಲ ನೋಡಿಕೊಂಡು ಬಂದರು. ಈ ಸಂದರ್ಭದಲ್ಲಿ ಅವರು ಹೋದ ಕಡೆಯಲ್ಲೆಲ್ಲ ರಾಮನಾಮದ ಮಹಿಮೆಯನ್ನೂ ಸರ್ವಭೂತಪ್ರೇಮವನ್ನೂ ಮನದಟ್ಟಾಗುವಂತೆ ಜನರಿಗೆ ಬೋಧಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಗುಡ್ಡಬೆಟ್ಟಗಳ ಮೇಲೆಯೂ ಮತ್ತೆ ಕೆಲವು ಸಂದರ್ಭಗಳಲ್ಲಿ ಗುಹೆಗಳಲ್ಲಿಯೂ, ಬೇರೆ ಕೆಲವು ಸಂದರ್ಭಗಳಲ್ಲಿ ಕಾಡುಮೇಡುಗಳಲ್ಲಿಯೂ ಏಕಾಂತವಾಸವನ್ನು ಮಾಡಿಕೊಂಡಿರುತ್ತಿದ್ದರು. ಹೀಗೆ ತಾವು ಸಂಚರಿಸುತ್ತಿದ್ದ ಕಾಲದಲ್ಲಿ ತಮಗೆ ಉಂಟಾದ ಅನುಭವವಿಶೇಷಗಳನ್ನು ಅವರು ಇಂಗ್ಲಿಷುಭಾಷೆಯಲ್ಲಿ ಮೂರು ಪುಸ್ತಕಗಳಾಗಿ ಬರೆದಿಟ್ಟಿರುತ್ತಾರೆ. (1) **ಈಶ್ವರಾನ್ವೇಷಣ** (In Quest of God) (2) **ಈಶ್ವರಚರಣಶರಣಾಗತಿ** (At the Feet of God). (3) **ಈಶ್ವರದರ್ಶನ** (In the Vision of God) – ಎಂಬಿವೇ ಆ ಮೂರು ಗ್ರಂಥಗಳು.

ಹೀಗೆ ಕೆಲವು ಸಂವತ್ಸರಗಳು ಕಳೆದ ಬಳಿಕ ಇವರು ಒಂದಾನೊಂದು ಗೊತ್ತಾದ ಸ್ಥಳದಲ್ಲಿದ್ದುಕೊಂಡು ಬಗೆಬಗೆಯ ಉದ್ಯೋಗಪ್ರಯತ್ನಗಳನ್ನು ಹಬ್ಬಿಸಿ ಇನ್ನೂ ಹೆಚ್ಚಿನ ಜನತಾಸೇವೆಯನ್ನು ಕೈಕೊಳ್ಳಬೇಕೆಂಬುದು ಭಗವಂತನ ಸಂಕಲ್ಪವಾಯಿತೆಂದು ತೋರುತ್ತದೆ. ಆದ್ದರಿಂದ ಒಂದಾನೊಂದು ಆಶ್ರಮವನ್ನು ಕಲ್ಪಿಸಬೇಕೆಂದು ನಿರ್ಣಯವಾಗಿ ಅದನ್ನು ನಿರ್ಮಿಸುವದಕ್ಕೆ ತಕ್ಕ ಸಹಾಯವನ್ನು

ಯಥಾಶಕ್ತಿಯಾಗಿ ಮಾಡಬೇಕೆಂದು ಭರತಖಂಡದ ಬೇರೆಬೇರೆ ಭಾಗಗಳಲ್ಲಿ ಸ್ವಾಮಿಯವರಲ್ಲಿ ಶ್ರದ್ಧೆಯುಳ್ಳ ಉದಾರಾಶಯರನ್ನೆಲ್ಲ ಕೇಳಿಕೊಂಡದ್ದಾಯಿತು. ಈಗ ದಕ್ಷಿಣದೇಶದಲ್ಲಿ **ಆನಂದಾಶ್ರಮವೆಂಬ** ಹೆಸರಿನಿಂದ ಒಂದು ಸಂಸ್ಥೆಯು ಏರ್ಪಾಡಾಗಿರುತ್ತದೆ. ಇದು ಪಶ್ಚಿಮಸಮುದ್ರಕ್ಕೆ ಸುಮಾರು ನಾಲ್ಕು ಮೈಲಿಗಳ ದೂರದಲ್ಲಿರುವ ಕಾನ್ಹಂಗಾಡು (Kanhangad) ಎಂಬಲ್ಲಿ ಒಂದು ಸಣ್ಣ ಬೋರೆಯ ಮೇಲೆ ಇದೆ. ಆ ಸ್ಥಳಕ್ಕೆ ಈಗ ರಾಮನಗರವೆಂದು ಹೆಸರು. ಇದರಲ್ಲಿ (30ಅಡಿ ಉದ್ದವೂ 20ಅಡಿ ಅಗಲವೂ ಇರುವ) ಒಂದು ಕಟ್ಟಡವೂ, ಅದರ ಹತ್ತಿರ ಕೆಲವು ಕೊಟ್ಟಡಿಗಳೂ ಇವೆ. ಇಲ್ಲಿಗೆ ಅನೇಕ ಜನರು ದೂರ ದೇಶಗಳಿಂದಲೂ ಬಂದು ಹೋಗುತ್ತಿರುತ್ತಾರೆ. ಆಶ್ರಮವು ಇರುವ ಸ್ಥಾನವನ್ನೂ ಅದರ ಸನ್ನಿವೇಶವನ್ನೂ ನೋಡಿದರೆ ಅದು ಒಬ್ಬ ಋಷಿಗಳ ತಪೋವನವೆಂದೇ ಭಾವನೆಯುಂಟಾಗುವದು. ಶ್ರೀರಾಮನಾಮದ ಮಹಿಮೆ.

★★★★★

# ನಾರಾಯಣಗುರುಗಳು

**(ನವಕರ್ನಾಟಕದಲ್ಲಿ ಶ್ರೀಯುತ ಗೋಪಾಲನ್‌ರವರು ಬರೆದಿರುವದರ ಆಧಾರದಿಂದ)**

ತಿರುವನಂತಪುರದ ರಾಜಧಾನಿಯಾದ ಅನಂತಶಯನದಲ್ಲಿ ಈ ಮಹಾತ್ಮನು 1856ರಲ್ಲಿ ಜನ್ಮವನ್ನು ತಾಳಿದನು. ತಂದೆತಾಯಿಗಳು ತುಂಬ ಬಡವರು, ಒಕ್ಕಲುತನದಿಂದ ಜೀವಿಸುತ್ತಿದ್ದವರು. ಇವರು ಈಚಲುಗಿಡದಿಂದ ಹೆಂಡವನ್ನಿಳಿಸುತ್ತಿದ್ದ ಈಡಿಗರ ವಂಶದವರಾದರೂ ಹುಡುಗನಿಗೆ ತಕ್ಕಷ್ಟು ವಿದ್ಯೆಯನ್ನು ಕಲಿಸುವದಕ್ಕೆ ಏರ್ಪಾಡು ಮಾಡಿದ್ದರು. ನಾರಾಯಣನು ಚಿಕ್ಕಂದಿನಿಂದಲೂ ಚುರುಕುಬುದ್ಧಿಯವನಾಗಿದ್ದನು. ತನ್ನ ಚಿಕ್ಕಪ್ಪನಿಗೆ ಯಾರೋ ಬರೆದಿದ್ದ ಒಂದು ಸಂಸ್ಕೃತಪತ್ರವನ್ನು ಓದಿ ಅರ್ಥವನ್ನು ಹೇಳಿದ ಇವನ ಬದ್ಧಿಚಾತುರ್ಯಕ್ಕೆ ಮೆಚ್ಚಿ ಆ ಚಿಕ್ಕಪ್ಪನು ಒಬ್ಬ ಪಂಡಿತನಲ್ಲಿ ಸಂಸ್ಕೃತವನ್ನು ಕಲಿಯುವದಕ್ಕೆ ಇಟ್ಟನು. ಕೆಲವು ದಿನಗಳಲ್ಲಿಯೇ ನಾರಾಯಣನು ಆ ದೇವವಾಣಿಯನ್ನು ಚೆನ್ನಾಗಿ ಕಲಿತು ವಿದ್ಯಾವಂತನಾದನು.

ಕೇರಳಸೀಮೆಯಲ್ಲಿ ಅಸ್ಪೃಶ್ಯರಿಗೆ ಉಚ್ಚಜಾತಿಯವರಲ್ಲಿ ಬಳಕೆಯಿಂದಿರುವದಕ್ಕೆ ಯಾವಾಗಲೂ ಅಡ್ಡಿಗಳು ಹೆಚ್ಚು. ಹೀಗಿರುವಲ್ಲಿ ಆಗಿನ ಕಾಲದಲ್ಲಿ ಆ ದೇಶದಲ್ಲಿ ನಾರಾಯಣನಿಗೆ ಪಂಡಿತರ ಸಹವಾಸವು ದೊರೆತು ಸಂಸ್ಕೃತವಿದ್ಯಾಭ್ಯಾಸವು ದೊರೆತದ್ದು ಒಂದು ದೈವಲೀಲೆಯೇ ಸರಿ. ನಾರಾಯಣನು ಈ ಪಾಂಡಿತ್ಯವನ್ನು ಸರಿಯಾದ ದಾರಿಯಲ್ಲಿ ಉಪಯೋಗಿಸಿ ನಾರಾಯಣಗುರುವೆನಿಸಿದ್ದು ಆತನ ಮೇಲಿದ್ದ ಪರಮಾತ್ಮನ ಅನುಗ್ರಹವನ್ನು ವ್ಯಕ್ತಗೊಳಿಸುವದು. ಪರಮಾತ್ಮನಿಗೆ ನೀಚ, ಉಚ್ಚ – ಎಂಬ ಭೇದವಿಲ್ಲ; ಸನ್ಮಾರ್ಗಕ್ಕೆ ತಿರುಗುವವರಿಗೆಲ್ಲ ಸಹಾಯ ಮಾಡುವದು ಆತನ ಸ್ವಭಾವವು.

ನಾರಾಯಣನಿಗೆ ತಂದೆತಾಯಿಗಳು ಬಲಾತ್ಕಾರದಿಂದ ಮದುವೆಮಾಡಿಸಿದರೂ ಅವನು ವಿರಕ್ತಿಯಿಂದ ಮನೆಮಾರನ್ನೆಲ್ಲ ತೊರೆದು ಏಕಾಂತವಾಗಿದ್ದುಕೊಂಡು ಯೋಗಾಭ್ಯಾಸವನ್ನು ಮಾಡುತ್ತಾ ಕೊನೆಗೆ 1885ರಲ್ಲಿ 'ಅರವಿಪ್ಪುರಂ' ಎಂಬ ಊರಿಗೆ ಬಂದು ಅಲ್ಲಿ ಒಂದು ಗವಿಯಲ್ಲಿ ವಾಸಮಾಡಿಕೊಂಡಿದ್ದನು. ಆತನ ಹೆಸರು ಮುಂದೆ ಪ್ರಖ್ಯಾತಿಗೆ ಬಂದ ಹಾಗೆ ಈ ಸ್ಥಳವು ಒಂದು ಯಾತ್ರಾ ಸ್ಥಳವಾಗಿ ಪರಿಣಮಿಸಿತು.

ನಾರಾಯಣಗುರುಗಳು ಒಮ್ಮೆ ಒಂದು ಶಿವಲಿಂಗ ಪ್ರತಿಷ್ಠೆಯನ್ನು ಮಾಡಿದರು. ಸ್ವಲ್ಪ ಕಾಲದಲ್ಲಿಯೇ ಆ ದೇವರಿಗೆ ಗುಡಿಗೋಪುರಗಳು ಸಿದ್ಧವಾದವು. ಆ ಗುಡಿಯಲ್ಲಿ ಪೂಜಾರಿಗಳು, ಗಾಯಕರು, ಸೇವಕರು, ವ್ಯವಸ್ಥಾಪಕರು – ಎಲ್ಲರೂ ಅಸ್ಪೃಶ್ಯರೇ ಆಗಿದ್ದರು. ಎಷ್ಟೋ ಜನ ಅಸ್ಪೃಶ್ಯರು ಇವರ ಉಪದೇಶದಿಂದ ಮಾರಿಮಸಣಿಗಳನ್ನು ಪೂಜಿಸುವದನ್ನು ಬಿಟ್ಟು ಜಗತ್ತಿಗೆಲ್ಲ ಒಡೆಯನಾದ ಪರಮೇಶ್ವರನ ಆರಾಧನೆಯನ್ನು ಕೈಕೊಂಡರು; ಹೆಂಡಕಂಡಗಳನ್ನು ಉಪಯೋಗಿಸುವದನ್ನೂ ದೇವರಿಗೆ ನೈವೇದ್ಯಮಾಡುವದನ್ನೂ ಬಿಟ್ಟುಬಿಟ್ಟರು. ಇದುವರೆಗೆ ಮೇಲುಜಾತಿಯವರ ಗುಡಿಗಳಿಗೆ ಹೋಗಿ ದೂರದಲ್ಲಿ ನಿಂತು ಕಾಣಿಕೆಗಳನ್ನು ಒಪ್ಪಿಸಿ ಪೂಜಾರಿಯು ದೂರದಿಂದಲೇ ಬಿಸಾಡುವ ಪ್ರಸಾದವನ್ನು ಸ್ವೀಕರಿಸಬೇಕಾದ್ದ ಅಪಮಾನದ ಸ್ಥಾನವನ್ನು ಬಿಟ್ಟು ಸ್ವಾವಲಂಬನೆಯಿಂದ ಆತ್ಮಗೌರವವನ್ನು ಕಾಪಾಡಿಕೊಳ್ಳುವದಕ್ಕೂ ಮೊದಲುಮಾಡಿದರು.

ಬ್ರಾಹ್ಮಣರಲ್ಲದವರು ದೇವಪ್ರತಿಷ್ಠೆಯನ್ನು ಮಾಡಲಾಗದೆಂದು ಕೆಲವರು ಸ್ವಾರ್ಥಪರರು ಕುಚೋದ್ಯವನ್ನು ತೆಗೆದರೂ ನಾರಾಯಣಗುರುಗಳು ಸ್ಥಾಪಿಸಿದ ಶಿವಲಿಂಗದ ಮಹಿಮೆಯು ದಿನದಿನಕ್ಕೆ ಹರಡುತ್ತಲೇ ಬಂದಿತು.

ಜನೋಪಕಾರದಲ್ಲಿಯೇ ತಮ್ಮ ಕಾಲವನ್ನೆಲ್ಲ ಕಳೆದ ಈ ಗುರುಗಳನ್ನು ಅವರ ಅನುಯಾಯಿಗಳು ಅಭಿನವಬುದ್ಧನೆಂದು ಕರೆಯುವರಂತೆ. ಲೆಕ್ಕವಿಲ್ಲದಷ್ಟು ಅಸ್ಪೃಶ್ಯರು ಇವರ ಭಕ್ತರಾದರು. ಇವರ ಹೆಸರು ಎಲ್ಲಾ ಕಡೆಗೂ ಹಬ್ಬಿ ಇವರ ಮಹಿಮೆಯೂ ಅಧ್ಯಾತ್ಮಿಕಶಕ್ತಿಯೂ ಎಲ್ಲಾ ಜಾತಿಯವರಿಗೂ ಮನವರಿಕೆಯಾದವು. ಇವರಿಗೆ ಬ್ರಾಹ್ಮಣರೇ ಮೊದಲಾದ ಮೇಲು ಜಾತಿಯವರೂ ಶಿಷ್ಯರಾದರು. ಡಾ|| ರವೀಂದ್ರನಾಥ ಟಾಗೋರ್, ಮಹಾತ್ಮಗಾಂಧಿ, ಸ್ವಾಮಿ ಶ್ರದ್ಧಾನಂದ – ಮೊದಲಾದವರು ಕೂಡ ಇವರ ದರ್ಶನವನ್ನು ಹೊಂದಿ ಅವರ ಪವಿತ್ರಚರಿತ್ರೆಯನ್ನು ಕೊಂಡಾಡಿರುವರಂತೆ. 1902ರಲ್ಲಿ ಇವರು ಒಂದು ಸರ್ವಮತಸಮ್ಮೇಲನವನ್ನು ಕೂಡಿಸಿದರು. ಮಾನವ ಪ್ರಾಣಿಗಳಿಗೆಲ್ಲ ಒಬ್ಬನೇ ದೇವರಿರುವನೆಂದೂ ಎಲ್ಲರೂ ಅಣ್ಣತಮ್ಮಂದಿರಂತೆ ನಡೆದುಕೊಳ್ಳುಬೇಕೆಂದೂ ಇವರೂ ಆ ಸಭೆಯಲ್ಲಿ ಸರ್ವಸಮ್ಮತವಾಗುವಂತೆ ಸಾರಿ ಹೇಳಿದರು.

ಶ್ರೀನಾರಾಯಣಗುರುಗಳು ಧರ್ಮವೊಂದರಲ್ಲಿಯೇ ಅಲ್ಲದೆ ಅಸ್ಪೃಶ್ಯರನ್ನು ಸಮಾಜದೃಷ್ಟಿಯಿಂದ ತಿದ್ದುವದಕ್ಕೂ ತುಂಬ ಪ್ರಯತ್ನ ಮಾಡಿದರು. ಸಾರ್ವಜನಿಕ ಸಹಾಯದಿಂದ ಅರವಿಪ್ಪುರಂದಲ್ಲಿ ಇವರು ಒಂದು ಮಠವನ್ನೂ ಒಂದು ಶಾಲೆಯನ್ನೂ ಸ್ಥಾಪಿಸಿದರು; ಆದಿದ್ರಾವಿಡರಲ್ಲಿದ್ದ ಒಳಪಂಗಡಗಳನ್ನು ಬಿಡಿಸಿ ಸಮಭಾವವನ್ನು ನೆಲೆಗೊಳಿಸಿದರು, ಸಹಾಯಕ ಸಂಘಗಳನ್ನು ಏರ್ಪಡಿಸಿ ಬೇರೆಬೇರೆ ಕಸುಬುಗಳನ್ನೂ ಉದ್ಯೋಗಗಳನ್ನೂ ಏರ್ಪಡಿಸಿದರು; ಮದುವೆ ಮಹೋತ್ಸವ – ಮುಂತಾದ ಸಮಯಗಳಲ್ಲಿ ಮಿತವ್ಯಯವನ್ನು ಮಾಡುವಂತೆ ಬೋಧಿಸಿದರು.

ಹೀಗೆ ಅಸ್ಪೃಶ್ಯರನ್ನು ಎಲ್ಲಾ ಬಗೆಯಿಂದಲೂ ಆತ್ಮೋದ್ಧಾರಕ್ಕೆ ಸೊಂಟ ಕಟ್ಟಿಸಿದ ಈ ಮಹಾಯೋಗಿಗಳು 1929ರಲ್ಲಿ ದೇಹವನ್ನು ಬಿಟ್ಟು ಕೀರ್ತಿಶರೀರರಾದರು. ಶಿವಗಿರಿಗುಡ್ಡದ ಮೇಲೆ ಇವರ ಗದ್ದುಗೆಯಿದೆ. ಅವರ ನಿರ್ಮಾಣಕಾಯಗಳಂತೆ ಅಲ್ಲಲ್ಲಿ ಸದಾಚಾರಿಗಳೂ ಲೋಕೋಪಕಾರಿಗಳೂ ಆದ ಮಹನೀಯರು ಅವತರಿಸಿದರೆ ಅಸ್ಪೃಶ್ಯರು ಕೆಲವು ಕಾಲದಲ್ಲಿಯೇ ವಾಙ್ಮನಸ್ಸುಗಳಿಗೆ ಅಸ್ಪೃಶ್ಯ(ಮುಟ್ಟುವದಕ್ಕೆ ಸಿಲುಕದವ)ನಾದ ಪರಮಾತ್ಮನ ಭಕ್ತರಾಗಿ ನಲಿಯಲಾರರೇನು?

★★★★★

# ಕಲ್ಯಾಣದ ಬಸವಣ್ಣನವರು

-ಶ್ರೀ ಬಿ.ನಂಜಪ್ಪನವರು, ತಿಪಟೂರು

ವೈಶಾಖಶುದ್ಧ ಬಿದಿಗೆಯ ದಿವಸ ಕಲ್ಯಾಣದ ಮಹಾವಿಭೂತಿ, ಬಸವಣ್ಣನವರ ಜಯಂತಿಯು. ಇವರು ಕೆಲವು ವರ್ಷಗಳು ಮಾತ್ರವೇ ಜೀವಿಸಿದ್ದರೂ, ಕನ್ನಡಭಾಷೆಗೂ ಕನ್ನಡನಾಡಿಗೂ ಇವರು ಮಾಡಿದ ಸೇವೆಯು ಅಪಾರವಾದುದು. ಇವರು ಕನ್ನಡದೇಶದಲ್ಲಿ ಜನಿಸಿ ಕನ್ನಡಿಗರ ನಡುವೆ ವಾಸಿಸಿ, ಕನ್ನಡರಾಜ್ಯದ ಸೂತ್ರಧಾರಿಗಳಾಗಿ, ರಾಜಕೀಯ, ಸಾಮಾಜಿಕ, ನೈತಿಕ, ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಬಹಳವಾಗಿ ಶ್ರಮಿಸಿದ್ದಾರೆ. ಶ್ರೀಬಸವಣ್ಣನವರು ಅವತರಿಸಿದ ಕಾಲದಲ್ಲಿ ವೀರಶೈವಮತವು ತುಂಬ ದುರ್ದೆಶೆಯಲ್ಲಿತ್ತು. ವೀರಶೈವಮತದ ಸನಾತನತತ್ತ್ವಗಳನ್ನು ಬಸವಣ್ಣನವರು ಬಹಳವಾಗಿ ಮೆಚ್ಚಿ, ಜನರಿಗೆ ಬೋಧಿಸಿ ಅನೇಕರನ್ನು ಲಿಂಗಧಾರಿಗಳನ್ನಾಗಿ ಮಾಡಿದರು. ಹೀಗೆ ಲಿಂಗಧಾರಿಗಳಾದವರೆಲ್ಲರೂ ಅಪೇಯಪಾನ, ಅಭಕ್ಷ್ಯಭೋಜನಗಳನ್ನು ತ್ಯಜಿಸಿ ಕೇವಲ ಸಾತ್ತ್ವಿಕ ಜೀವನಮಾಡುತ್ತಿದ್ದಾರೆ. ಬಸವಣ್ಣನವರಿಂದ ಕನ್ನಡನಾಡಿಗಾದ ಮಹೋಪಕಾರಗಳಲ್ಲಿ ಇದೊಂದು. ಲಿಂಗಧಾರಿಗಳೆಲ್ಲರೂ ಸಮಾನರು. ಇವರಲ್ಲಿ ಕೀಳು ಮೇಲುಗಳಿಲ್ಲ. ಜನ್ಮ ಮುಖ್ಯವಲ್ಲ, ಆಚಾರವೇ ಮುಖ್ಯವೆಂದು ಜಗತ್ತಿಗೆ ಸಾರಿ ವಿಶ್ವಸೋದರತ್ವ (Universal Brotherhood)ವನ್ನು ಹರಡಿದ ಮಹನೀಯರಿವರು. ಸ್ತ್ರೀಯರೆಲ್ಲರೂ ವಿದ್ಯಾವಂತರಾಗಬೇಕೆಂದೂ, ಸುಶಿಕ್ಷಿತ ಸ್ತ್ರೀಯರೇ ಸಮಾಜದ ಆಧಾರಸ್ತಂಭಗಳೆಂದೂ, ಬಸವಣ್ಣನವರ ಭಾವನೆ, ಇದಕ್ಕಾಗಿ ''ಅನುಭವಮಂಟಪ''ಗಳೆಂಬ ಸಂಸ್ಥೆಗಳನ್ನು ಸ್ಥಾಪಿಸಿ, ಸ್ತ್ರೀಯರೆಲ್ಲರೂ ಅಲ್ಲಿ ಕಲಿತು, ಸದ್ಬೋಧೆಹೊಂದಲು ಅನುಕೂಲಗಳನ್ನು ಕಲ್ಪಿಸಿದರು.

ದೇಶದ ಪ್ರತಿಯೊಬ್ಬನೂ ಯಾವುದಾದರೊಂದು ಕಸಬು, ಕೈಗಾರಿಕೆಗಳನ್ನು ಮಾಡಿ ಜೀವಿಸಬೇಕೆಂದೂ, ಯಾರೂ ಸೋಮಾರಿಯಾಗಿರಬಾರದೆಂದೂ ಒಕ್ಕಲುತನ, ನೇಯುವುದು, ನೂಲುವುದು, ಬಡಗಿತನ- ಮುಂತಾದ ಎಷ್ಟೋ ಕೈಗಾರಿಕೆಗಳಿಗೆ ಉತ್ತೇಜನಕೊಟ್ಟು ಕೆಲಸದ ಗೌರವವನ್ನು (Dignity of Labour) ಲೋಕಕ್ಕೆ

ತೋರಿಸಿಕೊಟ್ಟರು. ಮಹಾತ್ಮ ಗಾಂಧಿಯವರು ಬೋಧಿಸಿರುವ ಖಾದಿಪ್ರಸಾರ, ಸ್ವದೇಶಿಪುರಸ್ಕಾರ, ಅಸ್ಪೃಶ್ಯತಾನಿವಾರಣೆ, ಮದ್ಯಪಾನನಿರೋಧ-ಮೊದಲಾದ ಸುಧಾರಣಪರಂಪರೆಗಳನ್ನು ಬಸವಣ್ಣನವರು ಈಗ ಸುಮಾರು 800 ವರ್ಷಗಳ ಹಿಂದೆಯೇ ಪ್ರಚಾರದಲ್ಲಿ ತಂದು, ಪೌರ್ವಾತ್ಯ ಮತ್ತು ಪಾಶ್ಚಾತ್ಯ ವಿದ್ವನ್ಮಣಿಗಳಿಂದ ಇಂದಿಗೂ ಅಭಿನಂದಿಸಲ್ಪಡುತ್ತಿದ್ದಾರೆ. ಕಸಬಿಗೆ ಉತ್ತೇಜನಕೊಟ್ಟು ಜನಾಂಗವನ್ನು ಸ್ವಾವಲಂಬಿಯನ್ನಾಗಿ ಮಾಡಿದ ಕೀರ್ತಿಯು ಕಲ್ಯಾಣದ ಬಸವಣ್ಣನವರಿಗೇ ಸೇರಿದೆ.

ಬಸವಣ್ಣನವರು ಕನ್ನಡ ಸಾಹಿತ್ಯಕ್ಕೆ ಮಾಡಿದ ಸೇವೆಯು ಘನತರವಾದುದು. ಇವರ ಕಾಲಕ್ಕೆ ಹಿಂದೆ ಕನ್ನಡದಲ್ಲಿ ವಚನಕಾವ್ಯಗಳಿದ್ದಂತೆ ಕಾಣುವುದಿಲ್ಲ. ಬಸವಣ್ಣನವರು ಜನತೆಯ ಉದ್ಧಾರಕ್ಕಾಗಿ, ಕ್ಲಿಷ್ಟವಾಗಿದ್ದ ಅನೇಕ ಉಪನಿಷತ್ಸಾರವನ್ನೆಲ್ಲ ವಚನರೂಪದಲ್ಲಿ ಹರಿಸಿದ್ದಾರೆ. ಇವರ ವಚನಕಾವ್ಯದಲ್ಲಿ, ಅನುಭವದ ಸಾರವೂ ಅಂತರಂಗದ ಅಂತಃಕರಣವೂ ಒಡೆದು ಕಾಣುತ್ತಿವೆ. ಇವರ ವಚನಗಳು ವಿಚಾರಪೂರಿತವಾಗಿಯೂ, ಅರ್ಥಗರ್ಭಿತವಾಗಿಯೂ ವೀರ್ಯವತ್ತಾಗಿಯೂ ಇವೆಯೆಂದು ಹೇಳಬೇಕಾಗಿಯೇ ಇಲ್ಲ. ಸರ್ವೋತ್ತಮವಾದ ನೀತಿಯ ಸಾರವೇ ಈ ವಚನಗ್ರಂಥದಲ್ಲಿ ಅಡಗಿರುವುದರಿಂದ ಪ್ರತಿಯೊಬ್ಬ ಕನ್ನಡಿಗನೂ ತನ್ನ ಜೀವಿತಕಾಲದಲ್ಲಿ ಬಸವಣ್ಣನವರ ವಚನಗಳನ್ನೊಮ್ಮೆ ಪರಿಶೀಲಿಸಬೇಕು.

ಕಲ್ಯಾಣದ ಬಸವಣ್ಣನವರ ಸುಧಾರಣೆಗಳ ವಿಚಾರದಲ್ಲಿ ಅನೇಕರು ಭಿನ್ನಾಭಿಪ್ರಾಯವುಳ್ಳವರಾಗಬಹುದು. ಆದರೆ ಇವರ ದೈವಭಕ್ತಿ, ಸದಾಚಾರ, ಪ್ರಾಣಿದಯಾಪರತೆ, ಹೃದಯಕೋಮಲತೆ- ಮುಂತಾದ ಅಸಂಖ್ಯಾತಸದ್ಗುಣಗಳನ್ನು ಯಾರೂ ಅಲ್ಲಗಳೆಯಲಾರರು, ಬಸವಣ್ಣನವರೆಂದರೆ ಬಡವರ ಬಂಧುಗಳು, ಪತಿತಪಾವನರು, ಕಾರುಣ್ಯದ ಮೂರ್ತಿಗಳು, ಉತ್ಕಟದೇಶಾಭಿಮಾನಿಗಳು – ಎಂದು ಧಾರಾಳವಾಗಿ ಹೇಳಬಹುದು.

ಒಬ್ಬಾನೊಬ್ಬ ಸಾಮಾನ್ಯಮನುಷ್ಯನಂತೆ ಜನಿಸಿ, ಸುಧಾರಕನಂತೆ ನಟಿಸಿ, ಜನರ ಕಣ್ಣಿಗೆ ಮಣ್ಣೆರಚಿ, ಮಾಯವಾದವರು ಬಸವಣ್ಣನವರಲ್ಲ, ಮಹಾತ್ಮನಂತೆ ಅವತರಿಸಿ, ಮಹತ್ತರವಾದ ಕೆಲಸಗಳನ್ನು ಸಾಧಿಸಿ, ತನ್ನ ಹೆಸರನ್ನು ಭೂತಲದಲ್ಲಿ ಅಜರಾಮರವಾಗಿ ಮಾಡಿಕೊಂಡು ಬಸವಣ್ಣನವರು ಕೀರ್ತಿಶೇಷರಾಗಿದ್ದಾರೆ.

ಕರ್ನಾಟಕದ ಆದರ್ಶಮೂರ್ತಿಯೂ, ವಿಶ್ವಪ್ರೇಮದ ಪುತ್ಥಳಿಯೂ, ಲೋಕಮಾನ್ಯನೂ ಆದ ಕಲ್ಯಾಣದ ಬಸವಣ್ಣನವರ ಜಯಂತಿಯನ್ನು ಕನ್ನಡಿಗರು, ಇವರ ಅಂತಸ್ತಿಗೆ ತಕ್ಕಂತೆ ಆಚರಿಸುವುದೂ, ಬಸವಣ್ಣನವರ ಗುಣಪರಂಪರೆಗಳನ್ನು ಮೈಗೂಡಿಸಿಕೊಂಡು ಅವರು ಹೋದ ದಾರಿಯಲ್ಲೇ ನಡೆದುಕೃತಾರ್ಥರಾಗುವದೂ, ಪ್ರತಿಯೊಬ್ಬ ಕನ್ನಡಿಗನಿಗೂ ಭೂಷಣವಲ್ಲವೆ?

★★★★★

# ಗುರುನಾನಕ

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸಿಕ್ಕಮತಸ್ಥಾಪಕನಾದ ನಾನಕನು ಕ್ರಿ.ಶ.1469ನೆಯ ವೈಶಾಖದಲ್ಲಿ ಲಾಹೋರದ ಹತ್ತಿರ ತಾಳವಂದಿಯೆಂಬ ಗ್ರಾಮದಲ್ಲಿ ಜನಿಸಿದನು. ಖತ್ರಿಯೆಂಬ ಹಿಂದುಜಾತಿಯವನಾದರೂ ಮಹಮ್ಮದೀಯರ ಸಹವಾಸವೇ ಬಾಲ್ಯದಲ್ಲಿ ವಿಶೇಷವಾಗಿ ಇವನಿಗೆ ದೊರೆಯಿತು. ಅವನ ತಂದೆಯು ಊರ ಶ್ಯಾನುಭೋಗನಾಗಿ ದ್ದನು; ಆಗ್ಗೆ ಕಾಗದಪತ್ರಗಳೆಲ್ಲ ಪಾರ್ಸಿಭಾಷೆಯಲ್ಲಿರುತ್ತಿದ್ದದ್ದರಿಂದ ಅವನಿಗೆ ಹಿಂದೂಪಂಜಾಬಿಗಳಲ್ಲದೆ ಆ ಭಾಷೆಯ ಪರಿಚಯವೂ ತಕ್ಕಮಟ್ಟಿಗೆ ಆಗಿರಬೇಕೆಂದು ತೋರುವದು.

ನಾನಕನು ಸಾಧುಗಳ ಸಂಗದಲ್ಲಿಯೇ ಮುಖ್ಯವಾಗಿ ವಿದ್ಯಾಭ್ಯಾಸ ಮಾಡಿದನು. ತಂದೆಯು ಇವನಿಗೆ ಲೋಕವ್ಯವಹಾರದಲ್ಲಿ ಮಮತೆಯನ್ನು ಹುಟ್ಟಿಸುವದಕ್ಕೆಂದು ತೋಟತುಡಿಕೆ, ವ್ಯಾಪರ-ಮುಂತಾದ ಕೆಲಸಗಳಿಗೆ ಹಚ್ಚಿ ದರೂ ಇವನ ಮನಸ್ಸು ಅಧ್ಯಾತ್ಮದಲ್ಲಿಯೇ ತೊಡಗಿತ್ತು; ಇವನ ಭಾವನು ದೌಲತಖಾನನೆಂಬ ಅಧಿಕಾರಿಯಿಂದ ಸುಲ್ತಾನಪುರದಲ್ಲಿ ಇವನಿಗೆ ಒಂದು ಗೌರವ ಯುಕ್ತವಾದ ನೌಕರಿಯನ್ನು ಮಾಡಿಸಿಕೊಟ್ಟನು. ಆದರೆ ಸ್ವಲ್ಪ ದಿನಗಳಲ್ಲಿಯೇ ನಾನಕನು ಆ ಕೆಲಸಕ್ಕೂ ರಾಜೀನಾಮೆಯನ್ನು ಕೊಟ್ಟುಬಿಟ್ಟನು; ತನ್ನಲ್ಲಿದ್ದ ಧನಧಾನ್ಯವನ್ನೆಲ್ಲ ಬಡವರಿಗೆ ಹಂಚಿ ಫಕೀರನಾಗಿ ಕಾಡಿಗೆ ಹೋಗಿ ನಿರಂತರವೂ ತಪಸ್ಸುಮಾಡಲಾರಂಭಿಸಿದನು. ಅಲ್ಲಿ ಅವನಿಗೆ ಪರಮೇಶ್ವರನು ಪ್ರಸನ್ನನಾಗಿ

ಅಪ್ಪಣೆಮಾಡಿದಂತೆ ತನ್ನ ಹೊಸ ಪಂಥವನ್ನು ಹಿಂದುಗಳಿಗೂ ಮುಸಲ್ಮಾನರಿಗೂ ಬೋಧಿಸುವದಕ್ಕೆ ಆರಂಭಿಸಿದನು.

ಅಲ್ಲಿಂದ ಮುಂದಕ್ಕೆ ನಾನಕರು ತನ್ನ ಮತವನ್ನು ಉಪದೇಶಿಸುತ್ತಲೂ ಸಾಧುಸಂತರೊಡನೆಯೂ ಪಂಡಿತರೊಡನೆಯೂ ಧರ್ಮವಿಚಾರದ ಚರ್ಚೆಯನ್ನು ಮಾಡುತ್ತಲೂ ಸಯ್ಯದ್‌ಪುರ, ಕುರುಕ್ಷೇತ್ರ, ಹರಿದ್ವಾರ, ಬೃಂದಾವನ, ಕಾಶಿ- ಹೀಗೆ ಮುಖ್ಯಮುಖ್ಯ ಸ್ಥಳಗಳಲ್ಲೆಲ್ಲ ಸಂಚರಿಸಿದನು. ಎಷ್ಟೋ ಜನ ಮುಸಲ್ಮಾನರೂ ಹಿಂದುಗಳೂ ಅವನ ಶಿಷ್ಯರಾದರು. ಅವನು ದಕ್ಷಿಣದಲ್ಲಿ ಸಿಂಹಳ ದ್ವೀಪದವರೆಗೂ ಸಂಚರಿಸಿದಲ್ಲದೆ ಅರೇಬಿಯದ ಮೆಕ್ಕಕ್ಕೆ ಕೂಡ ಯಾತ್ರಿಕನಾಗಿ ಹೋಗಿ ಬಂದನೆಂದು ಅವನ ಶಿಷ್ಯರು ಹೇಳುತ್ತಾರೆ. ನಾನಕನು ಎರಡನೆಯ ಸಲ ವಿಜಯಯಾತ್ರೆಗೆಂದು ಹೊರಟು ಸಯ್ಯದ್‌ಪುರದಲ್ಲಿರುವಾಗ ಬಾಬರನ ಸೀಪಾಯಿಗಳಿಗೆ ಕೈಸೆರೆಸಿಕ್ಕಿದನು. ಕೆಲವು ಘಟನೆಗಳಿಂದ ಚಕ್ರವರ್ತಿಗೂ ಇವನಿಗೂ ಸಂಭಾಷಣೆಯಾಗಿ ಆತನು ನಾನಕನಲ್ಲಿ ತುಂಬ ಗೌರವವನ್ನು ತೋರಿಸಿದ್ದಲ್ಲದೆ ಇವನ ಸೂಚನೆಯಂತೆ ಅಮೀನಾಬಾದಿನಲ್ಲಿ ತಾನು ಸೆರಿಹಿಡಿದಿದ್ದವರನ್ನೆಲ್ಲ ಬಿಟ್ಟುಬಿಟ್ಟನಂತೆ.

ಸುಮಾರು ಮೂವತ್ತೈದು ವರ್ಷಗಳವರೆಗೆ ಸಂಚರಿಸಿದ ಮೇಲೆ ನಾನಕನು ಸಾಧುವೇಷವನ್ನು ತೆಗೆದಿಟ್ಟು ಖರತ್ಪುರದಲ್ಲಿ ಸಕುಟುಂಬನಾಗಿ ನಿಂತುಬಿಟ್ಟನು. ಇವನ ಮೊಟ್ಟಮೊದಲಿನ ಶಿಷ್ಯರಲ್ಲಿ ಒಬ್ಬನಾದ ಮರ್ದನನೆಂಬವನು ಇವನ ಹಿಂದೆಯೇ ಎಲ್ಲೆಲ್ಲಿಯೂ ಸಂಚರಿಸುತ್ತಿದ್ದನು; ನಾನಕನು ತಾನು ರಚಿಸಿದ್ದ ಕೀರ್ತನೆಗಳನ್ನು ಹಾಡುವಾಗಲೆಲ್ಲ ಅವನು ರಬಾಬ್ ಎಂಬ ಒಂದು ಬಗೆಯ ಪಿಟೀಲನ್ನು ಬಾರಿಸುತ್ತಿದ್ದನು. ಅವನೂ ಖರತ್ಪುರದಲ್ಲಿ ಗುರುಸೇವೆಯನ್ನು ಮಾಡಿಕೊಂಡು ಕೆಲಕಾಲವಿದ್ದು ಬಳಿಕ ಕಾಲವಾದನು. ಅಲ್ಲಿಂದ ಮುಂದಕ್ಕೆ ನಾನಕನ ಮಗನೇ ಭಜನೆಯ ಕಾಲಕ್ಕೆ ಪಿಟೀಲುಬಾರಿಸುತ್ತಿದ್ದನು. ನಾನಕನು ಬೆಳಗ್ಗೆ ಸಾಯಂಕಾಲ ಭಜನೆ; ಮಿಕ್ಕ ಹೊತ್ತುಗಳಲ್ಲಿ ಧರ್ಮೋಪದೇಶ – ಹೀಗೆ ಕಾಲಹರಣಮಾಡುತ್ತಿದ್ದು ಕ್ರಿ.ಶ.1538 ರಲ್ಲಿ ತನ್ನ ಅರುವತ್ತೊಂಬತ್ತನೆಯ ವಯಸ್ಸಿನಲ್ಲಿ ದೇಹವನ್ನು ಬಿಟ್ಟನು. ನಾನಕನ ವಂಶದವರು ಈಗಲೂ ಇರುತ್ತಾರೆ; ಸಿಕ್ಕರು ಅವರನ್ನು ಅತ್ಯಂತ ಪೂಜ್ಯತೆಯಿಂದ ಕಾಣುತ್ತಾರೆ.

ನಾನಕನು ಆಗಿಂದಾಗ್ಯೆ ಮಾಡಿ ಹಾಡಿದ ಕೀರ್ತನೆಗಳನ್ನು ಈಚೆಗೆ ಸಿಕ್ಕರ ಮೂರನೆಯ ಗುರುವಾದ ಅರ್ಜುನದೇವನೆಂಬಾತನು **'ಆದಿಗ್ರಂಥ'**ವೆಂಬ ಹೆಸರಿನಿಂದ ಪ್ರಕಟಿಸಿದನು. **'ಜಪಜೀ'** ಎಂಬುದು ನಾನಕನು ರಚಿಸಿದ ಮತ್ತೊಂದು ಗ್ರಂಥವು; ಅದನ್ನು ಸಿಕ್ಕರು ಈಗಲೂ ಬೆಳಗಿನ ಹೊತ್ತು ಶ್ರದ್ಧೆಯಿಂದ ಪಠಿಸುತ್ತಾರೆ. ನಾನಕನು ತನ್ನದೇ ಒಂದು ಹೊಸ ಪಂಥವನ್ನೇನೂ ಸ್ಥಾಪಿಸುವದಕ್ಕೆ ಹೋಗಲಿಲ್ಲವಾದರೂ ರಾಜಕೀಯಕಾರಣಗಳಿಂದ ಅವನ ಮತದವರು ಸಿಕ್ಕರೆಂಬ ಹೆಸರಿನಿಂದ ಈಚೆಗೆ ಪ್ರಸಿದ್ಧರಾದರು. ಅವನ ಮಗನ ಮೂಲಕ **'ಉದಾಸಿ'**ಎಂಬ ಪಂಥವೊಂದು ಹೊರಟಿರುತ್ತದೆ.

ನಾನಕನು ಕಬೀರನ ಸಮಕಾಲಿಕನು. ಈ ಇಬ್ಬರು ಗುರುಗಳೂ ಹಿಂದುಗಳ ಧಾರ್ಮಿಕಭಾವನೆಗಳನ್ನು ಎಂದರೆ ಜೀವಾತ್ಮ, ಪರಮಾತ್ಮ, ಭಕ್ತಿ - ಮುಂತಾದವುಗಳನ್ನೂ ತೆಗೆದುಕೊಂಡಿದ್ದರಾದರೂ ಶ್ರುತಿಸ್ಮೃತಿಗಳ ಪ್ರಾಮಾಣ್ಯವನ್ನು ಮಾತ್ರ ಹಿಡಿಯಲಿಲ್ಲ. ಇವರಿಬ್ಬರಿಗೂ ಅನುಭವವೇ ಮುಖ್ಯಾಧಾರವಾಗಿತ್ತು. ದೇವರು ಒಬ್ಬನೆ, ಅವನ ಹೆಸರು ಸತ್ಯವು; ಆತನೇ ಸೃಷ್ಟಿಕರ್ತನು, ಅವನು ಹಿಂದುಗಳ ಅಥವಾ ಮುಸಲ್ಮಾನರ ದೇವರಲ್ಲ; ಅವನು ಎಲ್ಲರಿಗೂ ದೇವರೇ; ಆತನನ್ನು ಯಾವ ಹೆಸರಿನಿಂದಲಾದರೂ ಕರೆಯಿರಿ; ನಿಜವಾಗಿ ಆತನು ಒಬ್ಬನು, ಅದೃಶ್ಯನು, ನಿತ್ಯನು, ಶಾಶ್ವತನು. ಬ್ರಹ್ಮಜ್ಞಾನವೇ ಉತ್ತಮಜ್ಞಾನವು. ಅದು ಬ್ರಾಹ್ಮಣರ ಹಕ್ಕಲ್ಲ, ಆತನ ಪೂಜೆಯು ಬ್ರಾಹ್ಮಣರಿಗೆ ಮಾತ್ರ ಸೇರಿದ್ದಲ್ಲ; ಎಲ್ಲರೂ ಆತನನ್ನು ಪೂಜಿಸಬಹುದು, ಪೂಜಿಸಬೇಕು. ಈಶ್ವರನ ಪೂಜೆಗೆ ಧೂಪದೀಪನ್ಯೆವೇದ್ಯಗಳಾಗಲಿ ಯಜ್ಞಯಾಗಾದಿಗಳಾಗಲಿ ಬೇಕಿಲ್ಲ; ಸತ್ಯ, ಶ್ರದ್ಧೆ, ಭಕ್ತಿ-ಇವೇ ಆರಾಧನೆಯ ಮುಖ್ಯಸಾಮಗ್ರಿಗಳು; ನಾಮಸ್ಮರಣೆ, ದಾನ, ಪರೋಪಕಾರ, ಭಗವದ್ಧ್ಯಾನ- ಇವುಗಳನ್ನು ಭಕ್ತಿಯಿಂದ ಆಚರಿಸಿದವರಿಗೆಲ್ಲ ಸರ್ವರ ಹೃದಯದಲ್ಲಿಯೂ ಇರುವ ಪರಮೇಶ್ವರನ ಅನುಗ್ರಹದಿಂದಲೇ ಸದ್ಗತಿಯಾಗುವದು- ಹೀಗೆಂಬುದು ಗುರುನಾನಕನ ಉಪದೇಶದ ಸಾರವು.

★★★★★

# ಶ್ರೀ ರಮಣಮಹರ್ಷಿಗಳು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಉತ್ತರ ಆರ್ಕಾಟು ಜಿಲ್ಲೆಯ ತಿರುವಣ್ಣಾಮಲೆಗೆ ಅರುಣಾಚಲವೆಂಬುದು ಮತ್ತೊಂದು ಹೆಸರು. ಅರುಣಾಚಲವೆಂಬ ಹೆಸರನ್ನು ನಮ್ಮಲ್ಲಿ ಕೆಲವರು ಕೇಳಿದ್ದೆವಾದರೂ ಈಗ ಅಲ್ಲಿರುವ ರಮಣಾಶ್ರಮದಿಂದ ಅರುಣಾಚಲದ ಖ್ಯಾತಿಯು ಭರತಖಂಡವೊಂದರಲ್ಲಿಯೇ ಅಲ್ಲದೆ ಪಾಶ್ಚಾತ್ಯದೇಶಗಳಿಗೂ ಹರಡಿರುತ್ತದೆ.

ಶ್ರೀರಮಣಮಹರ್ಷಿಗಳು ಅರುಣಾಚಲಕ್ಕೆ ಬಂದು ಈಗ ಸುಮಾರು ನಲವತ್ತು ವರ್ಷಗಳಾಗಿವೆ. 1896ನೆಯ ಇಸವಿಯಲ್ಲಿ ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಇವರು ಈ ಸ್ಥಳಕ್ಕೆ ಬಂದರು. ಅರುಣಾಚಲದಲ್ಲಿ ತಮ್ಮ ಸಕಲ ಇಷ್ಟಾರ್ಥವೂ ನೆರವೇರಿ ಪರಮಪುರುಷಾರ್ಥವನ್ನೇ ದೊರಕಿಸಿಕೊಳ್ಳಬಹುದೆಂಬ 'ನಂಬಿಕೆಯು ಇವರಿಗೆ ಹೇಗೋ ಬಾಲ್ಯದಿಂದಲೂ ಇದ್ದಂತೆ ತೋರುತ್ತದೆ. ಇವರ ತಂದೆಯಾದ ಸುಂದರಂ ಅಯ್ಯರೆಂಬಾತನು ಇನ್ನೂ ಇವರು ಚಿಕ್ಕ ಮಗುವಾಗಿದ್ದಾಗಲೇ ದೇಹವನ್ನು ಬಿಟ್ಟಿದ್ದನು. ಯಾವನೋ ಒಬ್ಬ ನೆಂಟನು ತಿರುವಣ್ಣಾಮಲೆಯ ಯಾತ್ರೆಯಿಂದ ಹಿಂತಿರುಗಿ ಇವರ ಮನೆಯಲ್ಲಿ ಇಳಿದಂದಿನಿಂದ ಇವರ ಚಿತ್ತವೃತ್ತಿಯೇ ಮಾರ್ಪಟ್ಟಿತು; ಅರುಣಾಚಲೇಶ್ವರನೇ ತಮ್ಮ ತಂದೆಯೆಂದು ಭಾವಿಸಿಕೊಂಡನು. 'ಅಧ್ಯಾತ್ಮದ ಅನ್ವೇಷಣೆಯಿಂದ ನಾನು ಹೊರಟಿರುತ್ತೇನಾದ್ದರಿಂದ ನೀವು ನನ್ನನ್ನು ಹುಡುಕಿ ಶ್ರಮಪಡಬೇಡಿರಿ' ಎಂದು ಒಂದು ಕಾಗದವನ್ನು ಮನೆಯಲ್ಲಿ ಬರೆದಿಟ್ಟು ಕೂಡಲೆ ಆ ಕಡೆಗೆ ಹೊರಟರು. ಅಲ್ಲಿ ಒಂದು ಗುಹೆಯಲ್ಲಿ ಕುಳಿತು, ಅನ್ನಾಹಾರಗಳನ್ನು ತೊರೆದು ಹದಿನೈದು ವರ್ಷದವರೆಗೆ ಮೌನದಿಂದ ತಪಸ್ಸು ಮಾಡಿದರು. 'ವೆಂಕಟರಾಮನ್' ಎಂಬ ಹೆಸರಿನ ಬಾಲಕನು ಶ್ರೀಅರುಣಾಚಲೇಶ್ವರನ ಕೃಪಾಕಟಾಕ್ಷದಿಂದ 'ರಮಣಮಹರ್ಷಿ'ಯಾದನು.

ರಮಣಮಹರ್ಷಿಗಳು ಮಾಡಿದ ತಪಸ್ಸು ಯಾವ ಬಗೆಯದು? ಅವರಿಗೆ ಆಗಿರುವ ಸಿದ್ಧಿಯು ಎಂಥದ್ದು? – ಎಂದು ತಿಳಿದು ಕೊಳ್ಳುವದಕ್ಕೆ ನಮಗೆಲ್ಲರಿಗೂ ಕುತೂಹಲವಿರುವದು ಸಹಜವಾಗಿದೆ. ಮಹರ್ಷಿಗಳ

ತಪಸ್ಸೆಲ್ಲ ಜ್ಞಾನಮಯವಾದದ್ದು. ನಾನು ಯಾರು? ಜನನಮರಣಗಳ ರಹಸ್ಯವೇನು?- ಎಂಬುದನ್ನು ತಮ್ಮ ಅನುಭವದ ಆಧಾರದ ಮೇಲೆಯೇ ತಾವು ಕಂಡುಹಿಡಿಯುವದಕ್ಕೆ ಇವರು ಪ್ರಯತ್ನಿಸಿದರು. ಇವರಿಗೆ ಯಾವ ಗ್ರಂಥಗಳ ಅಥವಾ ಯಾವನೊಬ್ಬ ಗುರುವಿನ ಸಹಾಯವಿರಲಿಲ್ಲ; ಆದರೂ ತೀವ್ರವೈರಾಗ್ಯ, ಉತ್ಕಟವಾದ ಮೋಕ್ಷೇಚ್ಛೆ, ಅನುಭವದ ಆಲಂಬನೆ. ಈ ಮೂರರಿಂದಲೇ ಇವರ ಸಾಕ್ಷಾತ್ಕಾರದ ಅರುಣೋದಯವಾಯಿತು. ಶ್ರೀ ಅರುಣಾಚಲೇಶ್ವರನೇ ಇವರಿಗೆ ಗುರುವಾದನೆನ್ನಬಹುದು.

ಮಹರ್ಷಿಗಳಿಗೆ ಆಗಿರುವ ಸಿದ್ಧಿಯೆಂದರೆ ಅದ್ವೈತಾತ್ಮಸಾಕ್ಷಾತ್ಕಾರವೇ ಹೊರಗಿನ ಸಿದ್ಧಿಗಳಿಂದ ಜನರನ್ನು ಬೆರಗುಮಾಡುವವರು ಇವರಲ್ಲ. ಬಂದವರಿಗೆ ಐಹಿಕಸಂಪತ್ತಿನ ಆಸೆಯನ್ನೇನೂ ಇವರು ಹುಟ್ಟಿಸುವದಿಲ್ಲ; ರೋಗವನ್ನು ವಾಸಿಮಾಡುವದು, ಪೀಡೆಪಿಶಾಚಿಗಳ ಬಾಧೆಯನ್ನು ಕಳೆಯುವದು, ಮಕ್ಕಳು ಮರಿಗಳನ್ನು ಅನುಗ್ರಹಿಸುವದು, ಇಂಥ ಗೋಜಿಗೇನೂ ಹೋಗುವದಿಲ್ಲ. ಆದರೂ ಇವರ ಬಳಿಗೆ ಸಾವಿರಗಟ್ಟಲೆಯ ಜನರು ಜಾತ್ರೆಗೆ ಬರುವಂತೆ ಬರುತ್ತಿರುತ್ತಾರೆ. ಈ ಜನವರಿ ತಿಂಗಳಿನಲ್ಲಿ ಇವರ ಐವತ್ತಾರನೆಯ ಜಯಂತಿಯು ನಡೆಯಿತು. ಸಾವಿರಗಟ್ಟೆಲೆಯ ಭಕ್ತರು ಇವರ ದರ್ಶನಕ್ಕೆ ಒಂದು ಕೃತಾರ್ಥರಾದರೆಂದು ವೃತ್ತಪತ್ರಿಕೆಗಳಿಂದ ತಿಳಿಯುತ್ತದೆ. ಹೋದವರಿಗೆಲ್ಲ ಸುಖಶಾಂತಿಗಳ ನೆಲೆಯನ್ನು ತೋರಿಸಿಕೊಡುವ ಮಾಹಾತ್ಮ್ಯೆಯೇ ಈ ಮಹರ್ಷಿಗಳ ಗುಟ್ಟೆಂದು ಇವರನ್ನು ಕಂಡವರು ಅನೇಕರು ಹೇಳುತ್ತಿದ್ದಾರೆ. ಇವರ ಖ್ಯಾತಿಯು ಪಶ್ಚಿಮ ದೇಶಗಳಿಗೂ ಹಬ್ಬಿ ಅಲ್ಲಿಂದಲೂ ಕೆಲವರು ಇವರ ಶಿಷ್ಯವೃತ್ತಿಗೆ ಬಂದಿರುತ್ತಾರೆ. ಶ್ರೀಯುತ ಪಾಲ್‌ಬ್ರಂಟನ್, ಮಾರಿಸ್ ಫ್ರೈಡ್‌ಮ್ಯಾನ್, ಮೇಜರ್ ಚಾಡ್ವಿಕ್ - ಇವರು ಈ ಗುಂಪಿಗೆ ಸೇರಿದವರು.

ಮಹರ್ಷಿಗಳು ಮೌನವಾಗಿರುವದೇ ಬಹಳ. ಆದ್ದರಿಂದ ಅವರು ಏನು ಬೋಧೆಮಾಡುವರೆಂಬುದನ್ನು ಸ್ಪಷ್ಟವಾಗಿ ಬಿಡಿಸಿ ಹೇಳುವದಕ್ಕೆ ಆಗುವಂತಿಲ್ಲ ಆದರೂ ಪ್ರತಿಯೊಬ್ಬನೂ 'ತನ್ನ ಪರಮಾರ್ಥಸ್ವರೂಪವನ್ನು ಕಂಡುಕೊಳ್ಳಬೇಕು. ಇದೇ ಪರಮಪುರುಷಾರ್ಥವು- ಎಂಬುದು ಇವರ ಉಪದೇಶದ ತಿರುಳೆಂದು ಹೇಳಬಹುದಾಗಿರುತ್ತದೆ. ಇವರ ಶಿಷ್ಯರಲ್ಲಿ ಪ್ರಮುಖರೆನಿಸಿರುವ ಶ್ರೀ॥ ಕಾವ್ಯಕಂಠ ಗಣಪತಿಶಾಸ್ತ್ರಿಗಳು ಇವರಿಂದ ರಚಿತವಾಗಿರುವ 'ಉಪದೇಶಸಾರ'ಕ್ಕೆ ಒಂದು

ವ್ಯಾಖ್ಯಾನವನ್ನು ಬರೆದಿರುತ್ತಾರೆ: ಇವರು ತಮಿಳಿನಲ್ಲಿ ಬರೆದಿರುವ '**ಉಳ್ಳದು ನಾರ್ಪದು**' ಎಂಬ ಪದ್ಯಗ್ರಂಥಕ್ಕೆ 'ಸದ್ದರ್ಶನ'ವೆಂಬ ಹೆಸರಿನಿಂದ ಸಂಸ್ಕೃತಪದ್ಯ ಮಯವಾದ ಪರಿವರ್ತನೆಯನ್ನೂ ಬರೆದಿರುತ್ತಾರೆ; '**ರಮಣಗೀತೆ**'ಯೆಂಬುದು ಕಾವ್ಯಕಂಠರು ಬರೆದಿರುವ ಮತ್ತೊಂದು ಗ್ರಂಥವು.

ಸದ್ದರ್ಶನದಿಂದ ಕೆಲವು ಸೂಕ್ತಿಗಳನ್ನು ಕನ್ನಡಿಸಿ ಈ ಲೇಖನವನ್ನು ಮುಗಿಸುತ್ತೇನೆ:

1. 'ಇದೆ', 'ಇದೆ' - ಎಂಬ ಅರಿವುಗಳು ನಿಜವಾಗಿಯೂ ಇರುವ ಒಂದಾನೊಂದು ತತ್ತ್ವವಿಲ್ಲದಿದ್ದರೆ ಉಂಟಾದಾವೇನು? ಆ ಇರವೆಂಬ ತತ್ತ್ವವೇ ಹೃದಯದಲ್ಲಿರುವ ಪರಮಾತ್ಮನು. ಆ ಅಮೇಯನಾದ ಅದ್ವಿತೀಯಾತ್ಮನನ್ನು ಸ್ಮರಣೆಮಾಡುವದು ಹೇಗೆ? ಆತನೇ ನಾನೆಂಬ ನಿಷ್ಠೆಯೇ ಆತನ ಸ್ಮರಣೆಯು.

2. ಮೃತ್ಯುವಿಗೆ ಅಂಜಿ ಯಾರು ಮೃತ್ಯುಂಜಯನನ್ನು ಆಶ್ರಯಿಸುವರೋ ಅವರ ಅಹಂಬುದ್ಧಿಯು ಮೊದಲು ಮೃತ್ಯುವನ್ನೈವುವದು. ಸ್ವಭಾವದಿಂದಲೇ ಅಮೃತರಾಗಿರುವ ಅವರಿಗೆ ಆ ಮೇಲೆ ಮೃತಿ ಎಲ್ಲಿಂದ ಬರಬೇಕು?

3. ಜಗತ್ತು ಮನಸ್ಸಿನೊಡನೆ ಹುಟ್ಟುವದು. ಅದು ಹೋದರೆ ತಾನೂ ಇಲ್ಲವಾಗುವದು. ಆದ್ದರಿಂದ ಇದೆಲ್ಲವೂ ಮನೋವೃತ್ತಿಯಿಂದ ಬೆಳಗತಕ್ಕದ್ದಾಗಿರುವದು. ಮನಸ್ಸು, ಜಗತ್ತು-ಇವುಗಳ ಹುಟ್ಟುಹೊಂದುಗಳಿಗೆ ಆಶ್ರಯವಾಗಿರುವ ಸದ್ವಸ್ತುವೊಂದೇ ಹುಟ್ಟುಹೊಂದುಗಳಿಲ್ಲದ್ದು.

4. ಪರಮೇಶ್ವರನನ್ನು ಬೇರೆಬೇರೆ ನಾಮರೂಪಗಳಿಂದ ಪೂಜಿಸುವದು ಸದ್ದರ್ಶನಕ್ಕೆ ಸಾಧನವೇ ಸರಿ; ಆದರೆ ಸದ್ವಸ್ತುವೇ ನಾನೆಂಬ ನಿಷ್ಠೆಯೇ ನಿಜವಾದ ಸದ್ದರ್ಶನವು.

5. ವಿದ್ಯೆಯಿಲ್ಲದೆ ಅವಿದ್ಯೆಯಿಲ್ಲ, ಅವಿದ್ಯೆಯಿಲ್ಲದೆ ವಿದ್ಯೆಯು ತೋರದು. ಇವೆರಡೂ ಯಾರಿಗೆ?-ಎಂಬುದನ್ನು ಯೋಚಿಸಿ ಆ ಮೂಲಸ್ವರೂಪದಲ್ಲಿ ನಿಲ್ಲುವದೇ ಪರಮಾರ್ಥವಾದ ವಿದ್ಯೆಯು.

6. ನಿತ್ಯಸಿದ್ಧವಾಗಿರುವ ಸದ್ವಸ್ತುವಿನ ಸಿದ್ಧಿಯೇ ಸಿದ್ಧಿಯು, ಮಿಕ್ಕ ಸಿದ್ಧಿಗಳೆಲ್ಲ ಕನಸಿನಂತಿರುವವು. ಎಚ್ಚತ್ತವನಿಗೆ ಕನಸು ಹೇಗೆ ಸತ್ಯವಾಗಿದ್ದೀತು? ಸದ್ವಸ್ತುವಿನಲ್ಲಿ ನಿಂತವನು ಮತ್ತೆ ಮಾಯೆಯನ್ನು ಸೇರುವನೆ?

7. ದೇಹವು ನಾನು ಎಂದುಕೊಳ್ಳುವದಿಲ್ಲ, ನಿದ್ರೆಯಲ್ಲಿ ನಾನಿರಲಿಲ್ಲವೆಂದು ಯಾವನೂ ಎಂದುಕೊಳ್ಳುವದಿಲ್ಲ: ಯಾವದಿದ್ದರೆ ಎಲ್ಲವೂ ತೋರುವದೋ ಆ 'ನಾನು' ಎಂಬುದರ ತವರುಮನೆಯನ್ನು ಸೂಕ್ಷ್ಮವಿಚಾರದಿಂದ ಕಂಡುಹಿಡಿ.

★★★★★

# ಮಹಾವೀರ ಜಯಂತಿ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಶ್ರೀರಾಮ ಜಯಂತಿ, ಶ್ರೀಕೃಷ್ಣ ಜಯಂತಿ, ಶ್ರೀಶಂಕರ ಜಯಂತಿ, ಶ್ರೀ ಬಸವೇಶ್ವರ ಜಯಂತಿ ಮುಂತಾದ ಜಯಂತಿಗಳು ನಮ್ಮಲ್ಲಿ ಅನೇಕರ ಕಿವಿಗೆ ಬಿದ್ದಿದೆ. ಆದರೆ ಜೈನರ ತೀರ್ಥಂಕರರಲ್ಲಿ ಕಡೆಯವರಾದ ಶ್ರೀ ಮಹಾವೀರ ಸ್ವಾಮಿಯವರ ಜಯಂತಿಯು ಜನರಿಗೆ ತಿಳಿಯಬೇಕಾದಷ್ಟು ಇನ್ನೂ ನಮ್ಮಲ್ಲಿ ಸುಪ್ರಸಿದ್ಧವಾಗಿ ರುವದಿಲ್ಲವೆಂಬುದು ಬಹಳ ಶೋಚನೀಯವಾದದ್ದು.

ಜೈನಮತದ ವಿಷಯದಲ್ಲಿ ಜನರಿಗೆ ಬಹಳ ತಪ್ಪು ಅಭಿಪ್ರಾಯಗಳು ಹರಡಿದ್ದವು. ಜೈನರೆಂದರೆ ಬೌದ್ಧರೇ, ಅಥವಾ ಬೌದ್ಧರಲ್ಲಿ ಒಂದು ಪಂಗಡವೇ- ಎಂದು ನಮ್ಮ ಬಾಲ್ಯದಲ್ಲಿ ಜನರು ಹೇಳಿಕೊಳ್ಳುತ್ತಿದ್ದದ್ದನ್ನು ನಾವು ಕೇಳಿದ್ದೆವು. ಆದರೆ ಜೈನಮತವು ಪ್ರಪಂಚದ ಸುಪ್ರಮುಖಧರ್ಮಗಳಲ್ಲಿ ಒಂದೆಂದೂ ಅದು ಬಹು ಕಾಲದಿಂದಲೂ ಬೌದ್ಧಮತಕ್ಕಿಂತಲೂ ಹಿಂದಿನಿಂದ ನಡೆದು ಬಂದಿರುವದೆಂದೂ ಈಗ ನಿರ್ವಿವಾದವಾಗಿ ಎಲ್ಲರೂ ಒಪ್ಪಿರುತ್ತಾರೆ. ಆ ಮತವು ಐತಿಹಾಸಿಕ ಕಾಲಕ್ಕಿಂತಲೂ ಹಿಂದಿನದು, ಅನಾದಿಯಾದದ್ದು- ಎಂದು ಜೈನರು ಹೇಳಿಕೊಳ್ಳುತ್ತಾರೆ. ಅವರ ಅಭಿಪ್ರಾಯಕ್ಕೆ ಸಾಧಕಯುಕ್ತಿಗಳೂ ಇಲ್ಲದೆ ಇಲ್ಲ.

ಜೈನರ ತೀರ್ಥಂಕರಲ್ಲಿ ಇಪ್ಪತ್ತಮೂರನೆಯ ಪಾರ್ಶ್ವನಾಥರು ಮಹಾವೀರರಿ ಗಿಂತ 250 ವರ್ಷಗಳ ಹಿಂದೆ ಇದ್ದರೆಂದೂ ಅವರು ನೂರು ವರ್ಷ ಬಾಳಿದರೆಂದೂ ಜೈನರ ಹೇಳಿಕೆ. ಅವರೇ ಜೈನಮತಸ್ಥಾಪಕರೆಂದು ಕೆಲ ಇತಿಹಾಸಶೋಧಕರು ಅಭಿಪ್ರಾಯಪಟ್ಟಿರುತ್ತಾರೆ. ಇದು ಹೇಗಾದರೂ ಇರಲಿ ಇಪ್ಪತ್ತನಾಲ್ಕನೆಯ

ತೀರ್ಥಂಕರಾದ ಮಹಾವೀರಸ್ವಾಮಿಗಳ ಇತಿಹಾಸವು ಭರತಖಂಡದಲ್ಲಿ ಮಾತ್ರವೇ ಅಲ್ಲದೆ ಜಗತ್ತಿನಲ್ಲಿಯೇ ಪ್ರಸಿದ್ಧಪಡಿಸತಕ್ಕದ್ದಾಗಿರುತ್ತದೆ. ಅವರ ಪವಿತ್ರಸ್ಮರಣೆಯು ಮಾನವನ ಈಗಿನ ಸ್ಥಿತಿಯಲ್ಲಿ ಅಮಿತವಾಗಿ ಲಾಭದಾಯಕವಾಗುವದೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಮಹಾವೀರಸ್ವಾಮಿಗಳು ಈಗ್ಗೆ 2538 ವರ್ಷಗಳ ಹಿಂದೆ ಬಿಹಾರದೇಶದಲ್ಲಿ ಕುಂದಗ್ರಾಮವೆಂಬಲ್ಲಿ ಹುಟ್ಟಿದರು. ಅವರ ಜಯಂತಿಯು ಚೈತ್ರ ಶುದ್ಧ ತ್ರಯೋದಶಿ ದಿನವಾಗುತ್ತದೆ. ಅತುಲಿತವಾದ ಪರಾಕ್ರಮವಿದ್ದದ್ದರಿಂದ ಅವನಿಗೆ 'ಮಹಾವೀರ' ಎಂಬ ಹೆಸರು ಬಂದಿತು. ಅವರ ಕುಟುಂಬವು ಸತತವಾಗಿ ಅಭ್ಯುದಯವನ್ನು ತಳೆವದ್ದರಿಂದ ಅವರಿಗೆ 'ವರ್ಧಮಾನ, ಎಂಬ ಹೆಸರು ಬಂದಿತ್ತು; ಅವರ ಅಪರಿಮಿತಬುದ್ಧಿಶಕ್ತಿಯಿಂದ ಅವರಿಗೆ 'ಸನ್ಮತಿ' ಎಂಬ ಮತ್ತೊಂದು ಹೆಸರು ಬಂದಿತ್ತು.

ಮಹಾವೀರರು ರಾಜಕುಮಾರರಾದರೂ ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ವೈರಾಗ್ಯದಿಂದ ಸಂಪತ್ತನ್ನೆಲ್ಲ ಬಡವರಿಗಿತ್ತು ಧ್ಯಾನಮಗ್ನರಾದರು. ಹನ್ನೆರಡು ವರ್ಷಗಳ ತಪಸ್ಸನ್ನು ಆಚರಿಸಿದ ಬಳಿಕ ಸರ್ವಜ್ಞರಾಗಿ ಊರಿಂದೂರಿಗೂ ಪಟ್ಟಣದಿಂದ ಪಟ್ಟಣಕ್ಕೂ ಸಂಚರಿಸುತ್ತಾ ಜನರಿಗೆ ತತ್ತ್ವೋಪದೇಶವನ್ನು ಮಾಡುತ್ತಾ ಮೂವತ್ತು ವರ್ಷಗಳವರೆಗೆ ಸಂಚರಿಸಿದರು ಕೊನೆಗೆ ಬಿಹಾರಿನ ಪಾವಾಪುರಿ ಎಂಬಲ್ಲಿ ಕೈವಲ್ಯವನ್ನು ಹೊಂದಿದರು.

ಮಹಾವೀರನು ಜಗತ್ತಿಗೆ ಮಾಡಿದ ಪರರೋಪಕಾರಗಳಲ್ಲಿ ಅಹಿಂಸೆಯ ಉಪದೇಶವು ಬಹುಮುಖ್ಯವಾದದ್ದು. ಪ್ರತಿಯೊಬ್ಬನೂ ತನ್ನ ಕೈಯಲ್ಲಾದ ಮಟ್ಟಿಗೆ ಅಹಿಂಸೆಯನ್ನು ಆಚರಿಸಬೇಕೆಂಬುದೇ ಅವರ ಸಂದೇಶವು. ''ಅಹಿಂಸೆಯೇ ಪರಮಧರ್ಮ'' ಎಂಬ ತತ್ತ್ವಕ್ಕೆ ಅವರು ಜೀವಂತ ಉದಾಹರಣೆಯಾಗಿರುತ್ತಿದ್ದರು.

ಇಂದಿನ ಭೂಮಂಡಲದಲ್ಲಿ ಹಿಂಸೆಯು ತಾಂಡವವಾಡುತ್ತಿದೆ. ಯುದ್ಧದಿಂದ ಲಕ್ಷಗಟ್ಟಲೆಯ ಜನರು ಅನವಶ್ಯವಾಗಿ ಪ್ರಾಣವನ್ನು ಬಲಿಕೊಡುತ್ತಿದ್ದಾರೆ. ಆಹಾರಕ್ಕಾಗಿ ಲಕ್ಷಗಟ್ಟಲೆಯ ಪ್ರಾಣಿಗಳ ವಧೆಯಾಗುತ್ತಿದೆ. ನಮ್ಮ ಸುತ್ತು ಮುತ್ತಲಿನ ಪ್ರಾಣಿಗಳ ವಿಷಯದಲ್ಲಿ ಕನಿಕರವಿಲ್ಲದೆ ಅವುಗಳನ್ನು ನಾವು ಹಿಂಸೆ ಮಾಡುತ್ತಿರುವದು ಪ್ರಕೃತಿಮಾತೆಗೆ ಅತ್ಯಂತ ಅಸಹ್ಯವೆನಿಸಿರುತ್ತದೆ. ಧರ್ಮದ

ಹೆಸರಿನಲ್ಲಿಯೂ ಬೇಕಾದಷ್ಟು ಹಿಂಸೆಯಾಗುತ್ತಿದೆ. ನಾಗರಿಕರೆಂದು ಜಂಭ ಕೊಚ್ಚಿಕೊಳ್ಳುವ ನಾವುಗಳೆಲ್ಲರೂ ಶರೀರದಿಂದಲೂ ಮಾತಿನಿಂದಲೂ ಮನಸ್ಸಿನಿಂದಲೂ ಸರ್ವತ್ರ ಹಿಂಸಾಪ್ರಚಾರಕರಾಗಿಸುತ್ತೇವೆ; ಅಹಿಂಸೆಯ ಹೆಸರಿನಲ್ಲಿ ಕೂಡ ಹಿಂಸೆಯು ನಡೆಯುತ್ತಿದೆ, ನಮ್ಮಗಳ ನಡುವೆ!

ಮಾನವನ ಹೃಯದಲ್ಲಿ ಮಹಾವೀರನ ಪುನರವತಾರವಾಗಲಿ! ಚಿತ್ತಕ್ಕೆ ಕಲ್ಮಷವನ್ನುಂಟುಮಾಡುವ ಪಾಪಗಳಿಗೆಲ್ಲ ಮೂಲವು ಹಿಂಸೆಯೇ ಎಂಬ ಘನ ತತ್ತ್ವವು ನಮ್ಮಗಳಿಗೆ ಮನದಟ್ಟಾಗಲಿ! ಈ ಶುಕ್ಲತ್ರಯೋದಶಿಯಿಂದ ಅಹಿಂಸೆಯ ವಿಧಿಮುಖಸ್ವರೂಪವಾದ ಸರ್ವಭೂತಪ್ರೇಮವು ನಮ್ಮ ಹೃದಯದಲ್ಲಿ ಅಂಕುರಿಸಿ ಬೆಳೆಯುವಂತೆ ಮಹಾವೀರಸ್ವಾಮಿಗಳಂಥ ಮಹಾಮಹಿಮರ ಅನುಗ್ರಹವು ನಮಗೆಲ್ಲ ಉಂಟಾಗಲಿ! ಶರೀರದಿಂದಲಾಗಲಿ ಮಾತಿನಿಂದಲಾಗಲಿ ಮನಸ್ಸಿನಿಂದಲಾಗಲಿ ಯಾರೊಬ್ಬರಿಗೂ ಹಿಂಸೆಯನ್ನು ಮಾಡುವ ಪ್ರಕೃತಿಯೇ ನಮ್ಮಲ್ಲಿ ಉಂಟಾಗದಂತೆ ಶ್ರೀಮಹಾವೀರಸ್ವಾಮಿ, ಬುದ್ಧ, ಸೇಂಟ್‌ಫ್ರಾನ್ಸಿಸ್ಸು – ಇಂಥ ಮಹಾತ್ಮರು ನಮ್ಮಗಳನ್ನು ಅನುಗ್ರಹಿಸಲಿ!

★★★★★

# ಅನಂತಪ್ಪಮಹಾರಾಜರವರು

ಶ್ರೀ ಡಿ.ಸಿ.ನಂಜಪ್ಪಭಾಗವತರು

## 1

‘ಯಾವಾತನನ್ನು ಸಾಧುವೆಂದಾಗಲಿ ಅಸಾಧುವೆಂದಾಗಲಿ ಓದದವೆಂದಾಗಲಿ ಬಹಳ ಕಲಿತವನೆಂದಾಗಲಿ ಯಾರೂ ಅರಿಯರೋ ಆತನೇ ಬ್ರಾಹ್ಮಣನು.’ – **ಭಾರತ**

ಭೂಲೋಕದಲ್ಲಿರುವ ಅನೇಕ ಮಹಾವ್ಯಕ್ತಿಗಳನ್ನು ಜನರು ಸ್ವಲ್ಪವೂ ಅರಿಯದೆಯೇ ಇರುವದು. ದೊಡ್ಡವರ ಒಂದು ವಿಲಕ್ಷಣಸ್ವಭಾವವೇನೆಂದರೆ ತಮ್ಮ ವ್ಯಕ್ತಿತ್ವದ ನೆರಳು ಯಾರ ಮೇಲೂ ಬೀಳದೆಯೇ ಎಲ್ಲರಿಗೂ ಉಪಕಾರವನ್ನು

ಮಾಡುತ್ತಿರುವದು. ಆ ಉಪಕಾರವು ಶಾಶ್ವತವಾದ ಫಲವನ್ನುಂಟುಮಾಡುವಂತೆ ನಡೆದುಕೊಳ್ಳುವದು. ಇಂಥ ಮಹಾಮಹಿಮರ ಗುಂಪಿಗೆ ಸೇರತಕ್ಕವರು. ಬೆಂಗಳೂರಿನ ಶ್ರೀ ಅನಂತಪ್ಪಮಹಾರಾಜರವರು. ಈಗ ಬೆಂಗಳೂರಿನಲ್ಲಿ ಅಣ್ಣಮ್ಮನ ಗುಡಿಯ ಬೀದಿಯಲ್ಲಿ ಅವರ ಹೆಸರಿನಲ್ಲಿ ಒಂದು ಮಠವಿದೆ, ಸಾಧುಸಂತರುಗಳು ಆಗಾಗ್ಗೆ ಅಲ್ಲಿಗೆ ಬಂದು ಇಳಿದುಕೊಳ್ಳುತ್ತಾರೆ, ವಿಚಾರಗಳನ್ನೂ ಪ್ರವಚನಗಳನ್ನೂ ನಡೆಯಿಸುತ್ತಾರೆ. ಆದರೆ ಶಿಷ್ಯಮಂಡಲಿಗೆ ಸೇರಿದ ಕೆಲವರಿಗೆ ಹೊರತು ಮಿಕ್ಕವರಿಗೆ ಅನಂತಪ್ಪಮಹಾರಾಜರೆಂದರೆ ಯಾರೆಂಬುದೇ ತಿಳಿಯದು.

ನನಗೆ ಆ ಮಹನೀಯರ ಹೆಸರು ಕಿವಿಗೆ ಬಿದ್ದದ್ದು ಹೀಗೆ ಶ್ರೀ|| ಕೆ.ಎ.ಕೃಷ್ಣಸ್ವಾಮಿ ಅಯ್ಯರವರು ಬರೆದಿರುವ 'ವೇದಾಂತ ಅಥವಾ ಪರಮಾರ್ಥ ಸತ್ಯಶಾಸ್ತ್ರ' (Vedanta or the Science of Reality) ಎಂಬ ಇಂಗ್ಲಿಷು ಪುಸ್ತಕದ ಪೀಠಿಕೆಯಲ್ಲಿ ಒಂದು ಮಹಾವಾಕ್ಯವಿದೆ; 'ಅವಸ್ಥಾತ್ರಯವಿಚಾರದ ಪ್ರಾಮುಖ್ಯವು ನನ್ನ ಮನಸ್ಸಿಗೆ ಹತ್ತಿದ್ದು ಮೂವತ್ತು ವರ್ಷಗಳ ಹಿಂದೆ; ಅತ್ಯಂತ ಯುಕ್ತಿಪ್ರಧಾನವಾಗಿರುವಪ್ರಕ್ರಿಯೆಯಿಂದ ಬೋಧಿಸುತ್ತಿದ್ದ ಇಬ್ಬರು ಮಹಾಶಯರ ಸಹವಾಸದಿಂದ ನನಗೆ ಈ ಲಾಭವಾಯಿತು. ಅವರಲ್ಲಿ ಒಬ್ಬರು ಕೀರ್ತಿಶೇಷರಾಗಿ ರುವ ಬೆಂಗಳೂರಿನ ಶ್ರೀ ಅನಂತಪ್ಪಮಹಾರಾಜರವರು, ಇನ್ನೊಬ್ಬರು ಮೋಟಗಾನಹಳ್ಳಿಯ ಶಂಕರಶಾಸ್ತ್ರಿಗಳವರು, ಅವರಿಬ್ಬರೂ ನನ್ನ ಪಾಲಿಗೆ ಜಗದ್ಗುರು ಶ್ರೀ ಶಂಕರಾಚಾರ್ಯರವರ ಜೀವಂತ ಪ್ರತಿನಿಧಿಗಳಾಗಿರುತ್ತಿದ್ದರು' ಈ ವಾಕ್ಯವನ್ನು ಓದುತ್ತಲೂ ನನ್ನ ಹೃದಯದಲ್ಲಿ 'ಈ ಅನಂತಪ್ಪಮಹಾರಾಜರೆಂಬುವರು ಯಾರು? ಇದನ್ನು ಕೇಳಿ ತಿಳಿದುಕೊಳ್ಳಬೇಕು' ಎಂಬ ಕುತೂಹಲವು ಮೊಳಕೆಯಾಯಿತು. ಅದರ ಫಲವಾಗಿ ಶ್ರೀ ಕೆ.ಎ.ಕೃಷ್ಣಸ್ವಾಮಿ ಅಯ್ಯರವರ ಮೂಲಕ ದೊರೆತ ವಿಷಯಗಳಿವು. ಇವನ್ನು ನಾನು ಅಮೃತಬಿಂದುಗಳೆಂದೇ ಭಾವಿಸುತ್ತೇನೆ. ಆದರೆ ಅನಂತಪ್ಪನವರ ಜೀವಿತದ ಪುಣ್ಯಚರಿತ್ರೆಯನ್ನು ಕೇಳಬೇಕೆಂಬ ನನ್ನ ಮನಸ್ಸಿನ ಹಸಿವು ಇಷ್ಟರಿಂದಲೇ ಅಡಗುವ ಹಾಗಿಲ್ಲ. ಹೆಚ್ಚು ತಿಳಿದಿರುವ ಯಾರಾದರೂ ಮಹನೀಯರು ಅವರ ಪೂರ್ಣಪರಿಚಯವನ್ನು ಮಾಡಿಕೊಟ್ಟರೆ ತುಂಬ ಕೃತಜ್ಞನಾಗಿರುವೆನು. ಸದ್ಯಕ್ಕೆ ನಾನು ಶ್ರೀಅಯ್ಯರವರ ಮಾತುಗಳಿಂದ ದೊರೆತ ಕೆಲವು ಸಂಗತಿಗಳನ್ನೇ ಇಲ್ಲಿ ವಾಚಕರಿಗೆ ಸಮರ್ಪಿಸುತ್ತೇನೆ.

'ನಾನು ಅರಳೀಪೇಟೆಯಲ್ಲಿದ್ದಾಗ ಒಂದು ದಿನ ಒಬ್ಬ ಬ್ರಾಹ್ಮಣರು ನಮ್ಮ ಮನೆಗೆ ಉಪಾದಾನಕ್ಕೆ ಬಂದರು, ಹೊಸದಾಗಿ ಬಿ.ಎ.ಪರೀಕ್ಷೆಯನ್ನು ಮಾಡಿ ಆಧುನಿಕವಿಚಾರಧಾರೆಯ ಭಾವನಗಳಿಂದ ತುಂಬಿತುಳುಕುತ್ತಿದ್ದ ನನಗೆ ಬ್ರಾಹ್ಮಣರು ಹೀಗೆ ಸೋಮಾರಿತನದಿಂದ ಕಾಲವನ್ನು ಕಳೆಯುವದು ಯುಕ್ತವಲ್ಲವೆಂದು ತೋರಿತು. ಸ್ವಲ್ಪ ಬಿರುಸಾದ ಮಾತುಗಳಿಂದಲೇ ''ಏಕಪ್ಪ, ಏನಾದರೊಂದು ವೃತ್ತಿಯನ್ನವಲಂಭಿಸಬಾರದೆ ಕೈಕಾಲುಗಟ್ಟಿಯಾಗಿರುವವರೂ ಹೀಗೆ ಭಿಕ್ಷಕ್ಕೆ ಹೊರಟರೆ ಹೇಗೆ!' ಎಂದೆನು. ಅವರ ಸಾತ್ತ್ವಿಕಸ್ವಭಾವದವರಾದ್ದರಿಂದ ''ಸ್ವಾಮಿ, ತಮಗೆ ಇಷ್ಟು ಕೋಪವೇಕೆ? ನಾನೇನೋ ಈಗ ಯಾವ ಉದ್ಯೋಗವನ್ನೂ ಮಾಡುವ ಹಾಗಿಲ್ಲ ಪುಣ್ಯವಶದಿಂದ ಒಬ್ಬ ಸದ್ಗುರುಗಳು ದೊರೆತಿದ್ದಾರೆ, ಅವರಲ್ಲಿ ಸದ್ವಿಚಾರಮಾಡಿಕೊಂಡು ಹೀಗೆ ಉಪಾದಾನದಿಂದ ಕಾಲಕ್ಷೇಪವನ್ನು ಮಾಡಿಕೊಂಡಿದ್ದೇನೆ, ತಮಗೆ ಇದು ಸರಿಯಲ್ಲವೆಂದು ಕಂಡರೆ ತಾವು ಉಪಾದಾನವನ್ನು ಹಾಕಬೇಕಾದ್ದೇ ಇಲ್ಲವಲ್ಲ!'' ಎಂದರು. ನನಗೆ ಸ್ವಲ್ಪ ಕುತೂಹಲವಾಯಿತು. 'ಆ ಗುರುಗಳು ಯಾರು? ನಾನೂ ಅವರ ಬಳಿಗೆ ಬಂದು ಮಾತನಾಡಬಹುದೆ?'ಎಂದು ಮುಂತಾಗಿ ವಿಚಾರಿಸಿದೆನು. ಅವರು ಅನಂತಪ್ಪಮಹಾರಾಜರವರ ವಿಚಾರವನ್ನು ತಿಳಿಸಿದರು. ಇದೇ ನನಗೆ ಆ ಮಹಾತ್ಮರ ಪ್ರಥಮದರ್ಶನಕ್ಕೆ ಕಾರಣವಾಯಿತು.

'ಸಾಯಂಕಾಲಕ್ಕೆ ಹೋಗಿ ನೋಡುವಲ್ಲಿ, ಗುರುಮಹಾರಾಜರವರು ಕೆಲವರು ಶಿಷ್ಯರೊಡನೆ ಒಂದು ಕಡೆ ಕುಳಿತಿದ್ದರು. ನೋಡುವದಕ್ಕೇನೂ ವೇಷಭಾಷೆಗಳಲ್ಲಿ ಆಡಂಬರವಿರಲಿಲ್ಲ. ಒಂದು ಕೌಪೀನವನ್ನು ಹಾಕಿಕೊಂಡು ಒಂದು ಪಂಚೆಯನ್ನು ಕಂಕುಳ ಕೆಳಗೆ ಬರುವಂತೆ ಹೊದೆದುಕೊಂಡಿದ್ದರು. ಮುಖವನ್ನು ನೋಡಿದರೆ ಬಹಳ ಓದಿದವರೆಂದಾಗಲಿ ಪಂಡಿತರೆಂದಾಗಲಿ ತೋರುತ್ತಿರಲಿಲ್ಲ. ಆದರೂ ಈ ಸಾಧಾರಣವ್ಯಕ್ತಿಯ ಶಾಂತತೆಯು ತನ್ನನ್ನು ಒಂದಿಷ್ಟು ತನ್ನ ಕಡೆಗೆ ಸೆಳೆದುಕೊಂಡಿತು. ಶಿಷ್ಯರುಗಳು ತೋರಿಸುತ್ತಿದ್ದ ಗೌರವದಿಂದಾವರಲ್ಲಿ ಒಂದು ಬಗೆಯ ಪೂಜ್ಯ ಬುದ್ಧಿಯು ತೋರಿಕೊಂಡಿರಬಹುದು. ಅಲ್ಲಿ ನಡೆಯುತ್ತಿದ್ದ ವೇದಾಂತವಿಚಾರವೇ ಮುಂತಾದವುಗಳನ್ನು ಕಂಡು ಬೆಳಗ್ಗೆ ಆ ಬ್ರಾಹ್ಮಣನನ್ನು ಅನ್ಯಾಯವಾಗಿ ಗದರಿಸಿದೆನಲ್ಲ!- ಎಂಬ ಪಾಶ್ಚಾತ್ತಾಪವುಂಟಾಯಿತು. ಆದರೆ

ಈಗ ನೋಡಿದರೆ, ನಾನು ಆ ದಿನ ಮಾಡಿದ್ದೇ ಸರಿಯಾಯಿತೆಂದು ಹೇಳಬೇಕಾಗಿದೆ. ಇಲ್ಲದಿದ್ದರೆ ಆ ಆಭುಕ್ತಮೂಲೆಯಲ್ಲಿ ಇಂಥ ಒಬ್ಬ ಮಹಾತ್ಮರು ಇರುವರೆಂದು ನನಗೆ ಹೇಗೆ ಗೊತ್ತಾಗುತ್ತಿತ್ತು?

'ಸರಿ, ಅಂದಿನಿಂದ ನನಗೆ ಅವರಿದ್ದ ಸ್ಥಳಕ್ಕೆ ಹೋಗಿಬರಬೇಕೆಂಬ ಆಶೆಯುಮೂಡಿಕೊಂಡಿತು. ಅವರು ನನ್ನನ್ನು ಬೇರೆಬೇರೆ ಪ್ರಶ್ನೆಗಳಿಂದ ಪರೀಕ್ಷಿಸಿ ನನಗೆ ಎಷ್ಟರಮಟ್ಟಿಗೆ ತಿಳಿವಳಿಕೆಯಿದೆ ಎಂಬುದನ್ನು ಬಲುಬೇಗನೆ ತಿಳಿದುಕೊಂಡು ಬಿಟ್ಟರು; ನಾನು ಇನ್ನೂ ತಿಳುದುಕೊಳ್ಳಬೇಕಾದದ್ದು ಇದೆ ಎಂಬುದನ್ನೂ ನನಗೆ ಬಲುಬೇಗನೆ ಮನಗಾಣಿಸಿಕೊಟ್ಟುಬಿಟ್ಟರು.[1] ಆ ಮೇಲೆ ಪ್ರತಿದಿನವೂ ಸಾಯಂಕಾಲ ನಾನು ಉದ್ಯೋಗಮಾಡುತ್ತಿದ್ದ ಕಾಲೇಜಿನಿಂದ ಹಿಂತಿರುಗುವಾಗ ಗಾಡಿಯು ಅನಂತಪ್ಪಮಹಾರಾಜರವರ ಮಠಕ್ಕೇ ನೇರಾಗಿ ಹೋಗುತ್ತಿತ್ತು. ನಾನು ಸುಮಾರು 4 ಘಂಟೆಯಿಂದ 7 ಘಂಟೆಯವರೆಗೂ ಅಲ್ಲಿಯೇ ಪಾಠವು ನಡೆಯುವದನ್ನು ಕೇಳುತ್ತಲೋ ವಿಚಾರಮಾಡುತ್ತಲೋ ಆ ಗುರುವರ್ಯರ ಸನ್ನಿಧಿಯಲ್ಲಿಯೇ ಕಾಲವನ್ನು ಕಳೆಯುತ್ತಿದ್ದೆನು.

'ಮಠದಲ್ಲಿ ಭಗವದ್ಗೀತೆ, ಪಂಚದಶಿ– ಮುಂತಾದವುಗಳ ಪಾಠಪ್ರವಚನವು ಪ್ರತಿದಿನವೂ ನಡೆಯುತ್ತಿತ್ತು. ಬ್ರಾಹ್ಮಣರೂ ಅಬ್ರಾಹ್ಮಣರೂ ಅನೇಕರು ಬಂದು ನೆರೆಯುತ್ತಿದ್ದರು. ಗುರುಮಹಾರಾಜರು ಎಲ್ಲರೊಡನೆಯೂ ಶಾಂತತೆಯಿಂದಲೇ ವಿಚಾರಮಾಡುತ್ತಿದ್ದರು ಯಾರ ಮನಸ್ಸನ್ನೂ ನೋಯಿಸುತ್ತಿರಲಿಲ್ಲ; ಯಾರೊಬ್ಬರ ಕುತೂಹಲವನ್ನೂ ಅಸಡ್ಡೆಮಾಡುತ್ತಿರಲಿಲ್ಲ. ಎಲ್ಲರಿಗೂ ತಿಳಿಯುವಂತೆ ತಿಳಿಗನ್ನಡದಲ್ಲಿ ವಿಷಯವನ್ನು ಪ್ರತಿಪಾದಿಸುತ್ತಿದ್ದರು. ಅವರು ಸಂಸ್ಕೃತವನ್ನೇನೂ ಹೆಚ್ಚಾಗಿ ಓದಿರಲಿಲ್ಲ; ಆದರೆ ಸಂಸ್ಕೃತಪಂಡಿತರುಗಳೂ ಅವರ ಮಾತುಗಳಿಗೆ ತಲೆದೂಗುತ್ತಿದ್ದರು. ಅವರು ಹೇಳಿದ ವಾದವು ತತ್ತ್ವಾನುಭವಕ್ಕೆ ಸರಿಯಾಗಿ

1. ಒಂದು ಸಲ ಶ್ರೀಯುತ ಅಯ್ಯರವರು 'ವೇದಾಂತದಿಂದ ಯಾವ ಪ್ರಯೋಜನವಾಗುತ್ತದೆ?' ಎಂದು ಕೇಳಿದರಂತೆ. ಗುರುಗಳು ಕೂಡಲೆ ಅವರ ಇಂಗ್ಲೀಷನ್ನು ಅರಿತು 'ವೇದಾಂತದಿಂದ ಆಕಾಶಗಮನವೇ ಮುಂತಾದ ಸಿದ್ಧಿಗಳು ಯಾವವೂ ದೊರೆಕುವದಿಲ್ಲ. ಅಣಿಮಾಧಿಸಿದ್ಧಿಗಳು ಬೇಕಾದರೆ ಯೋಗಾಭ್ಯಾಸವನ್ನು ಮಾಡಬೇಕು. ಆದರೆ ಪರಮಾರ್ಥದ ಜ್ಞಾನವು ಆಗಬೇಕಾದರೆ ಮಾತ್ರ ವೇದಾಂತವನ್ನೇ ಓದಬೇಕು' ಎಂದು ಹೇಳಿದರಂತೆ. ಸಿದ್ಧಿಗಳು ದೊರಕುವದಕ್ಕಿಂತಲೂ ಜ್ಞಾನಲಾಭವು ಹೆಚ್ಚಿನದು ಎಂಬವರ ಅರಿವು ಕೂಡಲೆ ಅಯ್ಯರವರ ಮನಸ್ಸಿನಲ್ಲಿ ತಾಟಿತಂತೆ ಹೀಗೆಂದು ಅಯ್ಯರವರೇ ನಮಗೆ ಒಂದು ಸಲ ಹೇಳುತ್ತಾರೆ.

– ಶ್ರೀಶ್ರೀಗಳವರು

ದ್ದದ್ದರಿಂದ ಎಂಥ ಕುಶಲಮತಿಗಳಾದರೂ ಅವರ ಮೇಲೆ ಪ್ರತಿವಾದವನ್ನು ಹೂಡುವದಕ್ಕೆ ಆಗುತ್ತಿರಲಿಲ್ಲ. ಸಂಸ್ಕೃತಪಂಡಿತರುಗಳು ಯಾರಾದರೂ ಬಂದರೆ ತಾವು ಗ್ರಂಥವನ್ನು ಓದದೆ ಅವರಿಂದಲೇ ಓದಿಸಿ ಅರ್ಥವನ್ನು ಹೇಳುತ್ತಿದ್ದರು. ಒಮ್ಮೆ ಒಬ್ಬ ಸಂಸ್ಕೃತಪಂಡಿತಮಹಾಶಯರು ಸುಮಾರು ಒಂದು ಘಂಟೆಯವರೆಗೂ ದೀರ್ಘವಾಗಿ ಸಂಸ್ಕೃತದಲ್ಲಿ ಉಪನ್ಯಾಸಮಾಡಿದರು[1] ಕೊನೆಯಲ್ಲಿ ಅನಂತಪ್ಪಮಹಾರಾಜರು ಶಾಂತರೀತಿಯಿಂದ ಕೇಳಿದ ಎರಡು ಗಡುಚಾದ ಪ್ರಶ್ನೆಗಳಿಗೆ ಉತ್ತರವನ್ನು ಹೇಳಲಾರದೆ ತಮ್ಮ ವಿದ್ವತ್ತಿಗೂ ಎಲ್ಲೆಕಟ್ಟು ಉಂಟು ಎಂಬುದನ್ನೂ ಅವರು ಮನಗಂಡರು.

ಅನಂತಪ್ಪಮಹಾರಾಜರವರಿಗೆ ಅವಸ್ಥಾತ್ರಪ್ರಕ್ರಿಯೆಯಲ್ಲಿ[2] ಹೆಚ್ಚಿನ ಆದರವಿರುತ್ತಿತ್ತು, ಯಾವ ವಿಚಾರವು ಬಂದರೂ ಹೇಗೋ ಅವಸ್ಥೆಗಳ ವಿಚಾರಕ್ಕೆ ಬಂದುಮುಟ್ಟಿ ಬಿಡುತ್ತಿದ್ದರು. ಕೂಡಲೆ ಸಂಶಯಕ್ಕೆಡೆಯಾಗಿದ್ದ ವಿಷಯದ ತತ್ತ್ವವು ಪ್ರಶ್ನೆ ಮಾಡಿದವರಿಗೆ ಮನದಟ್ಟಾಗಿಬಿಡುತ್ತಿತ್ತು. ಅವರು ಆಗಾಗ್ಗೆ ಈ ವಿಷಯದಲ್ಲಿ ನನ್ನ ಮನಸ್ಸಿನಮೇಲೆ ಉತ್ತಮವಾದ ಪರಿಣಾಮವನ್ನುಂಟುಮಾಡಿರುತ್ತಾರೆ. ಈ ಪ್ರಕ್ರಿಯೆಯ ಗುಟ್ಟೆಲ್ಲ ಅವರಿಂದಲೇ ನನಗೆ ದೊರೆಯಿತೆಂದರೂ ಸಲ್ಲುತ್ತದೆ. ವಿರಕ್ತರಾಗಿ ಅವರಲ್ಲಿ ತತ್ತ್ವಚಿಂತನೆಗೆಂದು ಸೇರಿಕೊಂಡಿದ್ದ ಶಿಷ್ಯರನ್ನು ನೋಡಿ ಕಂಡಿರಾ, ಇವರು ಎಷ್ಟು ಬೇಗನೆ ವಿಷಯವನ್ನು ಗ್ರಹಿಸಿಬಿಡುತ್ತಾರೆ! ಗ್ರಹಸ್ಥರಾದ ಇವರು ತಿಳಿದುಕೊಳ್ಳುವಂತೆ ತತ್ತ್ವವಿಚಾರಕ್ಕೆಂದೇ ಬಂದಿರುವ ನೀವು

---

1. ಇವರೊಬ್ಬರು ತಾರ್ಕಿಕರಾಗಿರಬಹುಗೆಂದು ನಮ್ಮ ಊಹೆ ಗುರುಮಹಾರಾಜರನ್ನೇ ಆಕ್ಷೇಪಿಸಿದಂತೆ ಅವರು ಪ್ರಶ್ನೆಗಳನ್ನು ಹಾಕಿದಂತೆಯೂ ಆಗ ಅವರು 'ನನ್ನನ್ನು ಜಯಿಸುವದಕ್ಕಿಂತಲೂ ನಿಮ್ಮ ಮನಸ್ಸನ್ನೂ ಜಯಿಸುವದು ಹೆಚ್ಚಿನದಲ್ಲದೆ!' ಎಂದು ಕೇಳಿದಂತೆಯೂ ಅಯ್ಯರವರು ನಮಗೆ ಹೇಳಿದ್ದರು. ಪರಮಾಣುವಾದದ ಜೊಳ್ಳುತನವನ್ನು ಈ ಸಂದರ್ಭದಲ್ಲಿ ಅನಂತಪ್ಪಮಹಾರಾಜರು ತೋರಿಸಿಕೊಟ್ಟರೆಂದು ಅಯ್ಯರವರು ಹೇಳಿದ ನೆನಪು ನಮಗಿದೆ. – ಶ್ರೀಶ್ರೀಗಳು

2. ಒಂದು ಸಲ ಅಯ್ಯರವರು ಡಾಯ್ಸನ್ ಎಂಬ ಪಾಶ್ಚಾತ್ಯವಿದ್ವಾಂಸರು ಬರೆದಿರುವ ವೇದಾಂತವಿಚಾರಕ್ರಮನ್ನು ಕುರಿತು ಗುರುಗಳಲ್ಲಿ ಪ್ರಸ್ತಾಪಿಸಿದರಂತೆ. ಆಗ ಗುರುಗಳು 'ಆತನು ಆತ್ಮಸಿದ್ಧಿಯನ್ನು ಹೇಗೆ ಮಾಡಿರುತ್ತಾನೆ!' ಎಂದು ಕೇಳಿದರಂತೆ ಆತ್ಮನನ್ನು ಸಂಕಲ್ಪ () ಶಕ್ತಿಯಾಗಿ ಭಾವಿಸಿ ಆತನು ಬರೆದಿರುವದನ್ನು ಅಯ್ಯರವರು ವಿವರಿಸಲು ಮಹಾರಾಜರು ತಲೆಯನ್ನು ಅಲುಗಾಡಿಸಿ 'ಊಹೂ ಇದೆಲ್ಲ ನಡೆಯಲಾರದು. ಅವಸ್ಥಾತ್ರಯ ಮಾರ್ಗದಿಂದಲ್ಲದೆ ಇದು ಎಂದಿಗೂ ಮನಸ್ಸಿಗೆ ಒಪ್ಪಾಗಲಾರದು!' ಎಂದರಂತೆ. ಅಂದಿನಿಂದ ಅವಸ್ಥಾತ್ರಯದ ಹೆಚ್ಚುಗಾರಿಕೆಯನ್ನು ತಿಳಿದುಕೊಳ್ಳಬೇಕೆಂಬ ಕುತೂಹಲವು ತಮ್ಮನ್ನು ಪೀಡಿಸಹತ್ತಿತೆಂದು ಅಯ್ಯರವರು ನಮಗೆ ಹೇಳಿದ ನೆನಪಿದೆ. – ಶ್ರೀಶ್ರೀಗಳು

ತಿಳಿದುಕೊಳ್ಳುವದಾಗಿದ್ದರೆ ನನಗೆ ಮತ್ತಷ್ಟು ಸಂತೋಷವಾಗುತ್ತಿದ್ದಿತು' ಎಂದು ಆಗಾಗ್ಗೆ ನನಗೆ ಉತ್ತೇಜನವನ್ನು ಕೊಟ್ಟು ಮಾತಾಡುತ್ತಿದ್ದರು.

'ಗುರುಮಹಾರಾಜರು ಜಾತಿಯಲ್ಲಿ ಸ್ವಕುಳಸಾಲೆಯ ಪಂಗಡಕ್ಕೆ ಸೇರಿದವರು. ಆದರೆ ಅವರು ಬ್ರಾಹ್ಮಣರಲ್ಲಿ ವಿಶೇಷಗೌರವದನ್ನಿಟ್ಟಿದ್ದರು. ತಮ್ಮ ಶಿಷ್ಯಮಂಡಲಿಯವರು ಯಾರೂ ವರ್ಣಾಶ್ರಮವ್ಯವಸ್ಥೆಯನ್ನು ಸಡಿಲಿಸುವ ಪ್ರಯತ್ನವನ್ನು ಮಾಡದಂತೆ ಅವರು ನೋಡಿಕೊಳ್ಳುತ್ತಿದ್ದರು. ಆಗಾಗ್ಗೆ ಶಿಷ್ಯರುಗಳಿಗಾಗಿ ತಿಂಡಿತೀರ್ಥಗಳನ್ನು ಮಾಡಿಸುವದುಂಟು. ಅಂಥ ಸಂದರ್ಭದಲ್ಲಿ ಬ್ರಾಹ್ಮಣರಿಂದಲೇ ಅದನ್ನು ತಯಾರುಮಾಡಿಸಿ ಅವರಿಂದಲೇ ವಿನಿಯೋಗಿಸುತ್ತಿದ್ದರು. ಅದು ಶಿಷ್ಯರಿಗೆಂದು ತೋರದಂತೆ ನಮಗೆ ಇಂಥ ತಿಂಡಿತಿನ್ನಬೇಕೆನ್ನಿಸಿದೆ, ಮಾಡಿಸುವಿರಾ?' ಎಂದು ಪ್ರಸ್ತಾಪದಿಂದ ಹೇಳಿ ಮಾಡಿಸುತ್ತಿದ್ದರು. ಒಂದು ಸಲ ಅವರು ಬಸವನಗುಡಿಯಲ್ಲಿ ಒಂದು ದೇವತಾಪ್ರತಿಷ್ಠೆಯ ಕಾಲಕ್ಕೆ ದಯಮಾಡಿಸಿದ್ದರು. ಬ್ರ॥ಶ್ರೀ॥ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳವರೂ ಅಲ್ಲಿಗೆ ಬಂದಿದ್ದರು. ಇಬ್ಬರಿಗೂ ಹೆಚ್ಚಿನ ಪರಿಚಯವಿತ್ತು. ಗುರುಮಹಾರಾಜರಲ್ಲಿ ಶಾಸ್ತ್ರಿಗಳಿಗೆ ಸದಭಿಪ್ರಾಯವೇ ಇರುತ್ತಿತ್ತು; ಇದಕ್ಕೆ ಮಹಾರಾಜರ ವಿನಯವಾದ ವರ್ತನೆಯೂ ಅವರ ಪ್ರಶಾಂತತೆಯೂ ಕಾರಣವೆನ್ನಬಹುದು.

'ನಾನು ಸಾಯಂಕಾಲವಾದ ಮೇಲೆ ಮನೆಗೆ ಬಂದು ಬಿಡುತ್ತಿದ್ದೆನು. ಆದರೆ ಗುರುವರ್ಯರು ರಾತ್ರಿಯಾದಮೇಲೂ ಭಜನೆಯಿಂದಲೇ ಬಹುಕಾಲವನ್ನು ಕಳೆಯುತ್ತಿದ್ದರೆಂದೂ ಸ್ವಲ್ಪ ವಿಶ್ರಾಂತಿಯಾದ ಬಳಿಕ ಒಂದು ಆಸನದಲ್ಲಿ ಕೂತುಕೊಂಡೇ ಇರುತ್ತಿದ್ದರೆಂದೂ ಕೇಳಿರುತ್ತೇನೆ. ತತ್ತ್ವಚಿಂತನೆಯು ಅವರ ಜೀವನದ ಹಾಸುಹೊಕ್ಕಾಗಿರುತ್ತಿತ್ತೆಂದರೆ ಅತಿಶಯೋಕ್ತಿಯಾಗಲಾರದು. ಅವರಿದ್ದ ಬಳಿಗೆ ಅಗಾಗ್ಗೆ ತತ್ತ್ವವಿಚಾರರಸಿಕರಾದವರು ಬರುತ್ತಲೇ ಇದ್ದರು. ಹುಬ್ಬಳಿಯಿಂದ ಆರೂಢರ ಶಿಷ್ಯರುಗಳೂ ಬರುತ್ತಿದ್ದರು. ಅವರೂ ಮಹಾರಾಜರಲ್ಲಿ ಹೆಚ್ಚಿನ ಪೂಜ್ಯಬುದ್ಧಿಯುಳ್ಳವರಾಗಿರುತ್ತಿದ್ದರು.

'ಗುರುಮಹಾರಾಜರವರಿಗೆ ಅನೇಕರು[1] ಶಿಷ್ಯರುಗಳಿದ್ದರು. ಅವರುಗಳಲ್ಲಿ ಶ್ರೀಯುತ ಸಾಹುಕಾರ್ ರಾಮಚಂದ್ರರಾವ್ ಸಿಂಧ್ಯರವರ ತಂದೆಗಳು ಒಬ್ಬರು.

1. ಒಬ್ಬರು ಈಚೆಗೆ ಸಂನ್ಯಾಸಿಗಳಾಗಿ ಮೈಸೂರಿನಲ್ಲಿದ್ದರೆಂದು ಕೇಳಿದ್ದೇನೆ.

ಅವರು ಮಹಾರಾಜರಲ್ಲಿ ಭಗವದ್ಗೀತೆಯನ್ನು ಓದುತ್ತಿದ್ದರು. ಈಗಿನ ಮಠವನ್ನು ಕಟ್ಟಿಸುವದಕ್ಕೆ ಧನಸಹಾಯಮಾಡಿದವರಲ್ಲಿ ಅವರೇ ಮುಖ್ಯರೆಂದು ಕೇಳಿರುತ್ತೇನೆ.

'ಬೆಂಗಳೂರಿಗೆ ಮೊದಲನೆ ಸಲಕ್ಕೆ ಪ್ಲೇಗು ಬಂದಾಗ ಜನರಲ್ಲಿ ಪ್ರಾಣದ ಅಂಜಿಕೆಯು ಬಹಳವಾಗಿ ಹರಡಿತು. ಊರಲ್ಲೆಲ್ಲ ಆ ರೋಗದ ಹಾವಳಿಯು ತೋರುತ್ತಿತ್ತು. ಜನರು ಚಲ್ಲಾಪಿಲ್ಲಿಯಾದರು. ಆದರೂ ಮಹಾರಾಜರಲ್ಲಿ ಮಾತ್ರ ಶ್ರೋತೃವೃಂದವು ಕಡಿಮೆಯಾಗಲಿಲ್ಲ. ''ಈ ರೋಗವು ಸಾಂಕ್ರಾಮಿಕವೆಂದು ಕೇಳುತ್ತೇವೆ, ಆದ್ದರಿಂದ ನೀವು ಇಲ್ಲಿಗೆ ಬಂದು ಸೇರಬಾರದು'' ಎಂದು ಅವರು ಎಷ್ಟು ಹೇಳಿದರೂ ಶಿಷ್ಯರು ಕೇಳಲಿಲ್ಲ. ಕಡೆಗೆ ಮಹಾರಾಜರಿಗೂ ಜ್ವರ ಬಂದಿತ್ತು ''ಒಬ್ಬರೂ ಇಲ್ಲಿಗೆ ಬರಕೂಡದು'' ಎಂದು ಅವರು ಶಿಷ್ಯರಿಗೆ ಕಟ್ಟಪ್ಪಣೆ ಮಾಡಿಬಿಟ್ಟರು. ಆ ಕಾಲಕ್ಕೆ ಯಾವ ಶಿಷ್ಯರು ಉಳಿದುಕೊಂಡರೆಂಬುದು ತಿಳಿಯಲಿಲ್ಲ. ನಾನು ಮಾತ್ರ ಅವರ ಅಪ್ಪಣೆಯಂತೆ ಮನೆಯಲ್ಲಿಯೇ ಉಳಿದುಕೊಂಡಬಿಟ್ಟೆನು. ಒಂದೆರಡು ದಿನಗಳಲ್ಲಿಯೇ ಅವರು ದೇಹವನ್ನು ಬಿಟ್ಟರೆಂದು ತಿಳಿಯಿತು.

'ಈಗ ಮಠದಲ್ಲಿ ಶ್ರೀಗುರುಮಹಾರಾಜರ ಸಮಾಧಿಯಿದೆ ಅಲ್ಲಿ ವೇದಿಕೆಯ ಮೇಲೆ ಅವರದೊಂದು ಭಾವಚಿತ್ರವಿದೆ. ಅವರ ಶಿಷ್ಯರೂ ಇರುತ್ತಾರೆ, ವರ್ಷಕ್ಕೊಂದು ಸಲ ಆರಾಧನೆ ನಡೆಯುತ್ತಿದೆ. ಅನೇಕ ಸಾಧುಸಂತರು ಬಂದು ಹೋಗುತ್ತಾರೆ. ಆದರೆ ಅವರು ಮಾಡಿದ ತತ್ತ್ವೋಪದೇಶದ ಪ್ರತಿಷ್ಠೆಯು ಕೆಲವರು ಶಿಷ್ಯರ ಹೃದಯದಲ್ಲಿ ಆಗಿರುತ್ತದೆ. ಅಂಥ ಉಪಕೃತರಲ್ಲಿ ನಾನೂ ಒಬ್ಬನು. ನಾನು ಅವರಿಗೆ ಏನೂ ಮಾಡಲಿಲ್ಲ! ಏನಾದರೂ ಮಾಡಬೇಕಾಗಿತ್ತು– ಎನ್ನಿಸುತ್ತದೆ. ಆದರೆ ನಿತ್ಯತೃಪ್ತರಾದ ಆ ಮಹಾರಾಜರಿಗೆ ಯಾರಿಂದ ತಾನೇ ಏನು ಬೇಕಾಗಿರುವದು? ಅವರು ಉಪದೇಶಿಸಿರುವ ಅವಸ್ಥಾತ್ರಯಪ್ರಕ್ರಿಯೆಯ ಗಾಂಭೀರ್ಯವನ್ನು ಜನರು ಕಂಡುಕೊಂಡು ಕೃತಕೃತ್ಯರಾದರೆ ಅವರ ಅವತಾರದ ಉದ್ದೇಶವು ನೆರವೇರಿದಂತೆ ಅವರು ನಿಜವಾಗಿಯೂ ಪರಬ್ರಹ್ಮವೇ ಎಂದು ನನ್ನ ಭಾವನೆ.

ವಾಚಕಮಾಹಾಶಯರೆ ವೇದಾಂತಕೇಸರಿಗಳಾದ ಶ್ರೀಯುತ ಅಯ್ಯರವರು ಅಧ್ಯಾತ್ಮಪ್ರಕಾಶಕ್ಕೆ ಬರೆದಿರುವ ವಿಧವಿಧವಾದ ಶ್ರೇಷ್ಠಲೇಖನಗಳಿಂದ ತಮಗೆಲ್ಲ ಪರಿಚಿತರೇ ಆಗಿದ್ದಾರೆ. ಅವರ ದಿವ್ಯಗ್ರಂಥವು ಅವಸ್ಥಾತ್ರಯ ಪ್ರಕ್ರಿಯೆಯನ್ನು ಎತ್ತಿಹಿಡಿಯವದರ ಮೂಲಕ ವೇದಾಂತಪ್ರಪಂಚಕ್ಕೆ ಒಂದು

ಆನಂದದ ದಿವ್ಯಜ್ಯೋತಿಯನ್ನು ತೋರಿಸಿಕೊಟ್ಟು ಜನರನ್ನು ಚಿರಋಣಿಗಳನ್ನಾಗಿ ಮಾಡಿದೆ. ಅಯ್ಯರವರ ಜ್ಞಾನನಿಷ್ಠೆಯನ್ನೂ ಅವರ ವಿದ್ಯಾವೈಭವವೇ ಮೊದಲಾದ ಪೂರ್ಣಗುಣಗಳನ್ನೂ ಬರೆಯಲು ಇದು ಸಮಯವಲ್ಲ. ಅದನ್ನೇ ಬಲ್ಲವರು ಬೇರೆಯಾಗಿ ಬರೆಯತಕ್ಕದ್ದಾಗಿದೆ. ಇಂಥ ಮಹನೀಯರು ಬಾಯಿತುಂಬ ಹೊಗಳಿರುವ ಶ್ರೀ॥ಅನಂತಪ್ಪಮಹಾರಾಜರವರ ದೊಡ್ಡಸ್ತಿಕೆಯು ಎಷ್ಟಿರಬೇಕೆಂಬುದನ್ನು ಮಾತ್ರ ವಾಚಕರೇ ಮನಗಾಣಬೇಕು. ಎಷ್ಟೋವೇಳೆ ಅನಂತಪ್ಪನವರ ಹೆಸರೆತ್ತಿ ಶ್ರೀಯುತರು ಗದ್ಗದಕಂಟರಾಗಿ ಆನಂದಭಾಷ್ಪವನ್ನು ಸುರಿಸಿರುವದನ್ನು ಈ ಲೇಖಕನು ಕಣ್ಣಾರೆ ಕಂಡು ಅವರ ಗುರುಭಕ್ತಿಗೆ ಬೆರಗಾಗಿದ್ದಾನೆ. ಇಷ್ಟು ಹೇಳಿ ಶ್ರೀಅನಂತಪ್ಪಮಹಾರಾಜರವರ ಪವಿತ್ರಚರಿತ್ರೆಯನ್ನು ದೊಡ್ಡದಾಗಿ ಬರೆದು ಲೋಕಕ್ಕೆ ಉಪಕಾರಮಾಡಿ ಕೃತಾರ್ಥರಾಗುವ ಪುಣ್ಯವನ್ನು ಇತರ ಮಹಾಶಯರಿಗೆ ಬಿಟ್ಟು ವಿರಮಿಸುತ್ತೇನೆ.

## 2

''ಯಾವ ಜನರು ನಿನ್ನ ಲೀಲೆಯನ್ನು ಮತ್ತೆ ಮತ್ತೆ ಕೇಳುವರೋ, ಮತ್ತೆ ಮತ್ತೆ ಹಾಡುತ್ತಾ, ಮತ್ತೆ ಮತ್ತೆ ಹೇಳುತ್ತಾ, ಮತ್ತೆ ಮತ್ತೆ ನೆನಪಿಗೆ ತಂದುಕೊಳ್ಳುತ್ತಾ ಆನಂದದಲ್ಲಿ ಮುಳುಗಿರುವನೋ, ಅವರೇ ಸಂಸಾರದ ಸೆಳೆತವನ್ನು ನಿಲ್ಲಿಸುವ ನಿನ್ನ ಪಾದವನ್ನು ಬೇಗನೆ ಕಾಣುವದು'' **-ಭಾಗವತ 1-8-36**

ಶ್ರೀಅನಂತಪ್ಪಮಹಾರಾಜರವರ ಜೀವಚರಿತಾಮೃತದ ಕೆಲವು ಬಿಂದುಗಳನ್ನು ಹಿಂದೆ ವಾಚಕವೃಂದಕ್ಕೆ ಹಂಚಲಾಗಿದೆಯಷ್ಟೆ. ಈಚೆಗೆ ಮತ್ತೆ ಕೆಲವು ವಿಷಯಗಳು ದೊರಕಿರುತ್ತವೆ. ಇವೆಲ್ಲ ಗುರುಮಹಾರಾಜರನ್ನು ಸಾಕ್ಷಾತ್ತಾಗಿ ದರ್ಶನಮಾಡಿ ಅವರಲ್ಲಿ ಪೂರ್ಣಭಕ್ತಿಯಿಂದ ಅವರ ಅನುಗ್ರಹಕ್ಕೆ ಪಾತ್ರರಾದ ಶ್ರೀಯುತ ವಿಠಲರಾಯರ ಕೃಪೆಯಿಂದ ಪಡೆದವುಗಳಾಗಿರುತ್ತವೆ. ಇವುಗಳನ್ನು ಸವಿಯುವ ಓದುಗರು ನನ್ನಂತೆಯೇ ರಾಯರಿಗೆ ಕೃತಜ್ಞರಾಗಿರುವರೆಂಬುದರಲ್ಲಿ ಸಂಶಯವಿಲ್ಲ.

ಅನಂತಪ್ಪನವರ ತಂದೆಯವರು ಈಶ್ವರಪ್ಪನವರು ತಾಯಿ ರುದ್ರಮ್ಮನವರು. ಈ ಸಾತ್ತ್ವಿಕದಂಪತಿಗಳು ಲಕ್ಷ್ಮಿಯ ಕಟಾಕ್ಷಕ್ಕೆ ಚೆನ್ನಾಗಿ ಪಾತ್ರರಾಗಿದ್ದಲ್ಲದೆ ದೈವಭಕ್ತಿಯಿಂದ ಶುಚಿರ್ಭೂತರೂ ಆಗಿರುತ್ತಿದ್ದರು. ಅಧ್ಯಾತ್ಮಯೋಗವನ್ನು

ಪರಿಪೂರ್ತಿಗೊಳಿಸುವದಕ್ಕೆಂದು ದೊಡ್ಡವರು ಇಂಥವರ ಮನೆಯನ್ನೇ ಆರಿಸಿಕೊಳ್ಳುವರೆಂಬುದು ಗೀತಾಚಾರ್ಯನಾದ ಭಗವಂತನ ಮತವಲ್ಲವೆ? ಅತಿಥಿಸತ್ಕಾರನಿರತರೂ ಪರೋಪಕಾರಿಗಳೂ ಆಗಿದ್ದ ಈಶ್ವರಪ್ಪನವರು ತಮ್ಮ ಸುಗುಣಗಳಿಂದ ಎಲ್ಲರಲ್ಲಿಯೂ ಪ್ರಖ್ಯಾತರಾಗಿದ್ದರು. ಮನೆಯಲ್ಲಿ ದೇವರ ಪೂಜೆ, ಭಜನೆ, ಪುರಾಣ – ಮುಂತಾದವುಗಳು ತಪ್ಪದೆ ನಡೆಯುತ್ತಿದ್ದವು. ಸಾಧುಸಂತರ ಸೇವೆಯೂ ಪಂಡರಪುರಿಯ ಯಾತ್ರೆಯೂ ಅವರಿಗೆ ಬಹಳ ಮೆಚ್ಚಾಗಿದ್ದವು.

ಅನಂತಪದ್ಮನಾಭನ ಚತುರ್ದಶಿಯ ಶುಭದಿನದಲ್ಲಿ ಹುಟ್ಟಿದ್ದರಿಂದ ಅನಂತಪ್ಪನವರೆಂಬ ಹೆಸರು ನಮ್ಮ ಕಥಾನಾಯಕರಿಗೆ ಬಂದಿತು. ಆದರೆ ಇವರು ಮುಂದೆ ಅದನ್ನು ಅನ್ವರ್ಥಮಾಡಿಕೊಂಡು ಅನಂತಮಹಿಮರಾದದ್ದೊಂದು ಅವರಲ್ಲಿ ವಿಶೇಷವು. ಅನಂತಪ್ಪನವರ ಬಾಲ್ಯದ ಸಮಾಚಾರವೇನೂ ಅಷ್ಟಾಗಿ ತಿಳಿಯಬಂದಿಲ್ಲ. ಆ ಕಾಲದಲ್ಲಿ ಸರಕಾರದ ಸ್ಕೂಲುಗಳು ವಿಶೇಷವಾಗಿ ರಲಿಲ್ಲವಾದ್ದರಾದ ಸಿರಿವಂತರ ಮಕ್ಕಳಾದ ಇವರಿಗೆ ಬೇರೆಯ ಕೆಲವು ಮಕ್ಕಳೊಡನೆ ಮನೆಯಲ್ಲಿಯೇ ತಾಯ್ನುಡಿ ಯಾದ ಮರಾಠಿಯ ಪರಿಚಯವಾಯಿತು. ಸ್ವಲ್ಪಮಟ್ಟಿಗೆ ಕನ್ನಡವೂ ತಿಳಿಯಿತು. ವ್ಯವಹಾರಕ್ಕೆ ಸಾಕಾಗುವಷ್ಟು ಭಾಷಾಜ್ಞಾನವಾಯಿತೆನ್ನಬಹುದು. ಇವರು ವಿದ್ಯಾಭ್ಯಾಸ್ಯಕಾಲದಲ್ಲಿ ಪಾಠಗಳನ್ನು ಶ್ರದ್ಧಾಭಕ್ತಿಗಳಿಂದ ಬೇಗಬೇಗನೆ ಕಲಿಯುತ್ತಿದ್ದರಂತೆ.

ದೊಡ್ಡವರ ಮಕ್ಕಳಾದ ಅನಂತಪ್ಪನವರಿಗೆ ಆ ಕಾಲದ ಪದ್ಧತಿಯಂತೆ ತಮ್ಮ ಹದಿಮೂರನೆಯ ವರ್ಷದಲ್ಲಿಯೇ ವಿವಾಹವಾಯಿತು. ವಯಸ್ಸು ಬಂದಂತೆಲ್ಲ ಇವರು ತಮ್ಮ ತಂದೆಯವರ ಭಾರಿಯ ರೇಷ್ಮೇ ವ್ಯಾಪಾರದ ಕೆಲಸಕ್ಕೆ ನೆರವಾಗಿ ಧರ್ಮದಿಂದ ವ್ಯವಹಾರವನ್ನು ಸಾಗಿಸುತ್ತಾ ಎಲ್ಲರ ಪ್ರೀತಿಗೂ ಪಾತ್ರರಾಗಿ ಮನೆಗೂ ಕುಲಕ್ಕೂ ಕೀರ್ತಿಯನ್ನು ತಂದರು.

ಇವರ ಸಾತ್ತ್ವಿಕಸ್ವಭಾವವು ಬೆಳೆಯುವದಕ್ಕೆ ಮನೆಯಲ್ಲಿ ಹಲವು ಸನ್ನಿವೇಶಗಳು ತಕ್ಕಂತೆ ಇದ್ದವೆಂದು ಮೇಲೆಯೇ ಹೇಳಿರುತ್ತೇನೆ. ಪ್ರತಿದಿನವೂ ಸಾಯಂಕಾಲ ಪಂಢರಿಮಾಹಾತ್ಮ್ಯ, ಏಕನಾಥೀಭಾಗವತ, ಭಕ್ತಿವಿಜಯ – ಮುಂತಾದ ಮರಾಠಿ ಸದ್ಗ್ರಂಥಗಳ ಪುರಾಣವು ನಡೆದಿತ್ತು. ಅನಂತಪ್ಪನವರೂ ಶ್ರದ್ಧೆಯಿಂದ ಪುರಾಣವನ್ನು ಕೇಳುತ್ತಿದ್ದರು; ಬರುಬರುತ್ತಾ ಆ ಗ್ರಂಥಗಳನ್ನು

ಅವರೇ ಓದುವದು, ಮತ್ತೊಬ್ಬರು ಅರ್ಥ ಹೇಳುವದು – ಹೀಗೆ ಸಾಗುತ್ತಾಬಂತು. ಇಂಪಾದ ಕಠದಿಂದ ಭಾವಭಕ್ತಿಯುತರಾಗಿ ಓದುತ್ತಲೂ ಅರ್ಥವಿವರಣೆಯನ್ನು ಕೇಳುತ್ತಲೂ ಇದ್ದದ್ದರಿಂದ ಇವರ ಮನಸ್ಸಿನಲ್ಲಿ ಭಗವತ್ಪ್ರೇಮವು ಮೂಡುವದಕ್ಕೆ ಎಡೆಯಾಗುತ್ತಾ ಬಂತು. ಚಿತ್ತಶುದ್ಧಿಯು ಹೆಚ್ಚುವ ಒಂದು ಪ್ರಸಂಗವೂ ಒದಗಿತು.

ಮನೆಯಲ್ಲಿ ಪುರಾಣಶ್ರವಣಮಾಡಿಸುತ್ತಿದ್ದ ಭವಾನ್‌ಸಾ ಎಂಬುವರು ಇವರ ವ್ಯಾಪಾರಕ್ಕೆ ಸಂಬಂಧಪಟ್ಟ ಬಣ್ಣದ ಕೆಲಸದಲ್ಲಿ ನೌಕಾರರೂ ಆಗಿದ್ದರು. ದೊಡ್ಡಕುಟುಂಬಗಳಾಗಿದ್ದ ಸಾರವರು ಆಗಾಗ್ಗೆ ಅನಂತಪ್ಪನವರ ತಂದೆಯವರಲ್ಲಿ ಹೆಚ್ಚು ಹೆಚ್ಚು ಹಣವನ್ನು ಬಳಸಿಕೊಂಡದ್ದರಿಂದ ಅವರ ಸಾಲದ ಹೊರೆಯು ಹೆಚ್ಚಾಗುತ್ತಾ ಬಂದು ಅದನ್ನು ತೀರಿಸುವ ಬೇರೊಂದು ಹಾದಿಯನ್ನು ಕಾಣದೆ ಪೇಚಾಡುತ್ತಿದ್ದರು. ಇದನ್ನರಿತ ಈಶ್ವರಪ್ಪನವರು ''ಅಯ್ಯ ಯೋಚಿಸಬೇಡ; ನೀನು ಋಣಮುಕ್ತನಾಗುವ ಒಂದು ದಾರಿಯನ್ನು ಹೇಳುತ್ತೇನೆ, ಕೇಳು ನೀನು ಪುರಾಣವಾದ ಮೇಲೆ ನಮ್ಮ ಮನೆಯಲ್ಲಿಯೇ ಮಲಗಿಬಿಡು; ಬೆಳಗಿನ ಜಾವದಲ್ಲಿ ಎದ್ದು ನಮ್ಮ ಅನಂತನನ್ನೂ ಎಬ್ಬಿಸಿ ಸ್ನಾನಮಾಡಿಸಿ ದೇವರಪೂಜೆ, ಸ್ತೋತ್ರಪಾಠ, ಭಜನೆ- ಇವುಗಳನ್ನು ನಿತ್ಯನಿಯಮವಾಗಿ ಅವನಿಂದ ಮಾಡಿಸು, ಹೀಗೆ ಎರಡು ವರ್ಷಗಳು ಮಾಡಿದರೆ ನಮ್ಮ ಬಾಕಿ ಮುಟ್ಟಿತೆಂದು ನಿನಗೆ ಪಾವತಿ ಚೀಟಿಯನ್ನು ಬರೆದುಕೊಟ್ಟು ಬಿಡುವೆನು'' ಎಂದರು. ಸಾತ್ತ್ವಿಕನಾದ ಭವಾನ್ ಸಾರ ಮುಖವು ಅರಳಿತು. ಆತನು ಈ ಕೆಲಸವನ್ನು ಬಹಳ ಶ್ರದ್ಧೆಯಿಂದ ಮಾಡಿ ತಾನೂ ಋಣುಮುಕ್ತನಾದದ್ದಲ್ಲದೆ ಅನಂತಪ್ಪನವರಿಗೂ ಸಂಸಾರಋಣದಿಂದ ಮುಕ್ತನಾಗುವ ಉಪಾಯವನ್ನು ಕಲ್ಪಿಸಿಕೊಟ್ಟನು. ತಮ್ಮ ಮಗನಿಗೆ ಹಣಕ್ಕಿಂತಲೂ ದೈವಿಕಸಂಪತ್ತೇ ಹೆಚ್ಚಿನದೆಂದು ಬಗೆದ ಈಶ್ವರಪ್ಪನವರು ಎಂಥ ಧನ್ಯರು!

ಕೆಲವು ವರ್ಷಗಳು ಹೀಗೆ ನಡೆಯಲು ಅನಂತಪ್ಪನವರ ಚಿತ್ತವು ಉದಾರವಾಯಿತು. ಅವರ ವ್ಯವಹಾರದ ಕಾರ್ಯಗಳು ಹೆಚ್ಚು ಹೆಚ್ಚು ಸಾತ್ತ್ವಿಕವಾದವು, ದಾನಧರ್ಮಪರೋಪಕಾರಗಳು ದಿನದ ಸ್ವಭಾವವಾದವು. ಚಿತ್ತವು ಶುದ್ಧಿಯಾಗಿ ಕರ್ಮಯೋಗದ ಫಲವನ್ನು ಅವರಿಗೆ ತಂದುಕೊಟ್ಟಿತು. ಇಷ್ಟುಹೊತ್ತಿಗೆ ಸರಿಯಾಗಿ ಅವರಿಗೆ ಚಿದಂಬರದೀಕ್ಷಿತರೆಂಬ ಒಬ್ಬ ಯೋಗಿ ವರ್ಯರ ಅನುಗ್ರಹವು ದೊರೆಯಿತು. ಅವರ ಉಪದೇಶದಿಂದ ಅನಂತಪ್ಪನವರು ಯೋಗ ನಿರತರಾಗಿ ಪೂರ್ವಜನ್ಮವಾಸನೆಯಿಂದ ಬಲುಬೇಗ ಚಿತ್ತೈಕಾಗ್ರತೆಯನ್ನು ಅಳವಡಿಸಿಕೊಂಡರು.

ಯೋಗಿಗಳಲ್ಲೆಲ್ಲ ಭಗವಂತನಲ್ಲಿ ಶ್ರದ್ಧಾತಿಶಯದಿಂದ ಆಗುವ ಭಕ್ತಿಯುಳ್ಳಾತನೇ ಮಿಗಿಲಾದವನೆಂದು ಗೀತೋಕ್ತಿಯಿದೆಯಲ್ಲವೆ? ಅದಕ್ಕನುಗುಣವಾಗಿ ಅನಂತಪ್ಪನವರಿಗೆ ತೀವ್ರವೈರಾಗ್ಯವು ಉಂಟಾಗಿ ಭಗವಂತನ ಕಡೆಗೇ ಮನಸ್ಸು ಬಲೆಯುವದಕ್ಕೆ ಮೊದಲಾಯಿತು. ತಂದೆಯವರು ಮರಣಾನಂತರದಲ್ಲಿ ವ್ಯವಹಾರವೆಲ್ಲ ಇವರ ಕೈಗೇ ಬಂದಿತ್ತು. ಆದರೆ ಈಗ ಅವರಿಗೆ ವ್ಯವಹಾರದಲ್ಲಿ ಆಸಕ್ತಿಯು ಸಡಿಲವಾಗಿಬಿಟ್ಟಿತು; ವಿಷಯಸುಖಗಳು ತೀರ ಸಪ್ಪೆಯಾಗಿಕಂಡವು; ಭಗವಂತನನ್ನು ಸಾಕ್ಷಾತ್ಕಾರಮಾಡಿಕೊಳ್ಳಬೇಕೆಂಬ ಹಂಬಲವು ದಿನದಿನಕ್ಕೂ ಹೆಚ್ಚುತ್ತಾಬಂತು.

ಒಂದು ದಿನ – ಅದನ್ನು ಶುಭದಿನವೆಂದು ಕರೆಯೋಣ ರಾತ್ರಿ ಪುರಾಣದಲ್ಲಿ ''ಮನುಷ್ಯಜನ್ಮದ ಗುರಿಯು ಭಗವಂತನ ಭವ್ಯದರ್ಶನವೇ ಅದಕ್ಕೆ ಸಾಧನವೆಂದರೆ ವೈರಾಗ್ಯ ಮತ್ತು ದೈವಾನುಗ್ರಹ ಇವೇ'' ಎಂಬ ಮಹತ್ತ್ವದ ಸಂಗತಿಗಳು ಮೇಲಿಂದ ಮೇಲೆ ಬಂದು ಅನಂತಪ್ಪನವರ ಹೃದಯವನ್ನು ಸೂರೆಗೊಂಡವು ಅವರ ಮನಸ್ಸನ್ನು ತೀವ್ರವಾದ ಮುಮುಕ್ಷತೆಯು ಆವರಿಸಿಕೊಂಡಿತು. ಭಗವಂತನ ದರ್ಶನಕ್ಕಾಗಿ ಸರ್ವಸಂಗಪರಿತ್ಯಾಗವನ್ನು ಮಾಡಿಬಿಡಬೇಕೆಂದು ಅವರು ಆ ದಿನ ಕಟ್ಟಕಡೆಯ ನಿರ್ಧಾರವನ್ನು ಮಾಡಿದಂತೆ ಕಾಣುತ್ತದೆ. ಅಂದು ಅವರಿಗೆ ಅಶ್ರುಧಾರೆಯು ಒಂದೇ ಸಮನೆ ಸುರಿದು ರೋಮಾಂಚನವಾಯಿತು. ಗದ್ಗದ ಕಂಠವಾಗಿ ಪುರಾಣವನ್ನು ಓದುವದಕ್ಕೂ ಕೂಡ ಅಸಮರ್ಥರಾದರು ಮಂಗಳಾರತಿಯಾದಮೇಲೇ ಅವರು ಎಲ್ಲಿಯೂ ಕಾಣಬರಲಿಲ್ಲ!

ಅದೇ ರಾತ್ರಿಯೇ ಅವರು ಇಷ್ಟದೈವನಾದ ಪಂಢರಿನಾಥನ ದರ್ಶನದ ಬಯಕೆಯಿಂದ ಪಂಢರಿಪುರಕ್ಕೆ ಹೊರಟ್ಟಿದ್ದರು. ದಾರಿ ಇಂಥದೆಂದು ತಿಳಿಯದಿದ್ದರೂ ಮುಂದೆಮುಂದಕ್ಕೆ ಹೋಗುತ್ತಲೇ ಇದ್ದರು ಆ ದಯಾಮಯನು ತನ್ನ ಮಡಿಲಿಗೆ ಬಿದ್ದವರನ್ನು ಬಿಡುವನೆ? ದಾರಿಯಲ್ಲಿ ಅವರಿಗೆ ಒಬ್ಬ ತೇಜಸ್ವಿಯಾದ ವಟುವಿನ ಸಂಗ ದೊರೆಯಿತು; ಅವನ ಸಹಾಯದಿಂದ ದಾರಿಯು ಸುಗಮವಾಗಿ ಸಾಗಿ ಪಂಢರಿಯನ್ನು ಸೇರಿದರು ಭಗವಂತನೇ ಆ ವಟುರೂಪದಿಂದ ಅವರನ್ನು ಕರೆದುಕೊಂಡು ಹೋದನೆಂದು ಭಾವಿಕರ ನಂಬಿಕೆ ಏಕಾಗಬಾರದು? ಭಗವಂತನಿಗೇನು ಅದೊಂದು ದೊಡ್ಡಮಾತೆ? ಅಥವಾ ಯಾವ ರೂಪವು ತಾನೆ ಆ ಮಹಾಮಹಿಮನದಲ್ಲ?

ಪಂಢರಪುರದಲ್ಲಿ ವಿಠಲಮೂರ್ತಿಯ ದರ್ಶವಾಯಿತು; ಭಗವದ್ಭಕ್ತರ ಭಾವಭಜನೆಯನ್ನು ಕಂಡು ಸಂತಸದಲ್ಲಿ ಮುಳುಗಿದ್ದೂ ಆಯಿತು. ಅಲ್ಲಿಯ ಭಕ್ತಮಹಾಶಯರಲ್ಲಿ ವಿಠ್ಠಲಪಂತರೆಂಬ ಸಾಧುಗಳೊಬ್ಬರ ಭಕ್ತಿಭಾವವೂ ಪಾಂಡಿತ್ಯವೂ ಶಾಂತಿಯೂ ಅಮೃತವಾಗಿಯೂ ದಯಾದೃಷ್ಟಿಯೂ ಅನಂತಪ್ಪನವರ ಮನಸ್ಸನ್ನಾಕರ್ಷಿಸಿದ್ದರಿಂದ ಅವರು ಆ ಮಹನೀಯರ ಪಾದಸೇವಕರಾಗಿ ನಿಂತರು. ಆ ಸಾಧುವರ್ಯರು ಬಹಳ ನಿಷ್ಠರು. ಬೆಳಗಿನಜಾವದಿಂದ ಕಣ್ಣಿಗೆ ನಿದ್ರೆ ಬರುವವರೆಗೂ ಭಗವಂತನ ಸೇವೆಯಲ್ಲಿಯೇ ಇರುತ್ತಿದ್ದರು. ಪೂಜೆ, ಆರತಿ, ಜಪ, ಧ್ಯಾನ, ಭಜನೆ, ಸದ್ಗ್ರಂಥಾವಲೋಕನ, ಅತಿಥಿಸತ್ಕಾರ, ಸರ್ವ ಭೂತಪ್ರೇಮ- ಇವು ಅವರ ನಿತ್ಯನಿಯಮವಾಗಿದ್ದವು. ಏಕಾದಶಿಯ ದಿನ ಜಾಗರಣ, ಹರಿಕೀರ್ತನ- ಇವನ್ನು ತಪ್ಪದೆ ಮಾಡುತ್ತಿದ್ದರು. ಇಂಥ ಸಾಧುಗಳ ಹೃದಯದಲಲ್ಲವೆ, ಭಗವಂತನು ಪ್ರಕಟನಾಗಿರುವದು? ಅನಂತಪ್ಪನವರು ಅವರ ಸೇವೆಮಾಡುತ್ತಾ ಇವರ ದಿವ್ಯಮುಖದಿಂದ ಹೊರಸೂಸುವ ಭಕ್ತಿಜ್ಞಾನ ವೈರಾಗ್ಯಗಳ ಅಮೃತವಾಕ್ಕು ಗಳನ್ನು ಎಷ್ಟು ಪಾನಮಾಡಿದರೂ ತೃಪ್ತಿಯಿಲ್ಲದೆ ಇರುತ್ತಿದ್ದರು. ಅವರ ಜೊತೆಯಲ್ಲಿ ಭಜನೆಮಾಡಿ ತಲ್ಲೀನರಾಗುತ್ತಿದ್ದರು. ಹೀಗೆ ಭಗವದುಪಾಸಕರಾಗಿ ಇವರು ಪಂಢರಿಯಲ್ಲಿಯೇ ಗುರುಸಾಂನಿಧ್ಯದಲ್ಲಿ ಕೆಲವು ವರ್ಷಗಳು ನಿಂತುಬಿಟ್ಟರು, ಭಗವನ್ಮಯರಾದರು.

## 3

ಸಾಧಾರಣವಾಗಿ ಲೋಕದಲ್ಲಿ ಐಶ್ವರ್ಯವೂ ವೈರಾಗ್ಯವೂ ಪರಸ್ಪರ ವಿರುದ್ಧವಾಗಿರುತ್ತವೆ. ಇವು ಒಂದೇಕಡೆ ಸೇರುವದು ಅಪರೂಪ ನಮ್ಮ ಅನಂತಪ್ಪನವರ ವಿಷಯದಲ್ಲಿ ಮಾತ್ರ ಇವು ಒಟ್ಟುಗೂಡಿದವು. ಲಕ್ಷ್ಮೀಪುತ್ರರಾದ ಇವರು ಸರ್ವಸಂಗಪರಿತ್ಯಾಗಮಾಡಿ ಗುರುಸೇವಾತತ್ಪರರಾಗಿ ಭಕ್ತರಾದದ್ದು ಒಂದು ವಿಶೇಷವೇ ಸರಿ.

ಅನಂತಪ್ಪನವರು ಹೀಗೆ ಭಕ್ತವಾರಿಧಿಯಲ್ಲಿ ಆನಂದಾಮೃತವನ್ನು ಪಾನಮಾಡುತ್ತಾ ಇದ್ದು ಬಿಟ್ಟರಷ್ಟೆ. ಇತ್ತಲಾಗಿ ಬೆಂಗಳೂರಿನಲ್ಲಿ ಅವರ ತಾಯಿಯವರಿಗೂ ಮನೆಯವರಿಗೂ ಇತರ ಇಷ್ಟಬಾಂಧವರಿಗೂ

ಅವರ ನಿಯೋಗದುಃಖವು ಅಸಹನೀಯವಾಯಿತು. ಯಾರಿಗೂ ಅವರ ಸಮಾಚಾರದ ಸುಳಿವೇ ಆಗಲಿಲ್ಲ. ಅವರ ಸದ್ಗುಣಗಳನ್ನು ಸ್ಮರಿಸಿಕೊಂಡು ಅವರ ಶೋಧನೆಯಲ್ಲಿಯೇ ಇರುತ್ತಿದ್ದರು.

ಆಷಾಢ ಶುದ್ಧ ಏಕಾದಶಿಯು ಪಂಢರಪುರದಲ್ಲಿ ಬಹಳ ಪವಿತ್ರದಿನ. ಆಗ ಸಾವಿರಾರು ಭಕ್ತರು ಅಲ್ಲಿ ನೆರೆದು ಭಗವದ್ಭಜನಕೀರ್ತನೆಗಳಲ್ಲಿ ಮಗ್ನರಾಗಿರುವರು. ಇಂಥ ಸಮಯವನ್ನುಪಯೋಗಿಸಿಕೊಳ್ಳಬೇಕೆಂದು ಬೆಂಗಳೂರಿನ ಕೆಲವು ಭಾವಿಕರು ಒಂದು ಸಲ ಪಂಢರಪುರಕ್ಕೆ ಬಂದರು. ಅನಂತಪ್ಪನವರು ವಿಠ್ಠಲಭಕ್ತರಾಗಿದ್ದದ್ದು ಎಲ್ಲರಿಗೂ ಗೊತ್ತಿದ್ದದ್ದರಿಂದ ಅಲ್ಲೇನಾದರೂ ಅವರು ಸಿಕ್ಕಿಯಾರೆಂಬ ನಿರೀಕ್ಷಣೆ ಅವರಿಗೆ ಈ ಯಾತ್ರಿಕರಲ್ಲಿ ಭಗಮನತನಕ್ಕೆ ಸೇರಿಸ ಬಹಳ ಭಾವಿಕರಾದ ಗಂಗಮ್ಮನೆಂಬ ವೃದ್ಧಹೆಂಗಸೊಬ್ಬರಿದ್ದರು. ಆಕೆಗೆ ಅನಂತಪ್ಪನವರನ್ನು ಕಂಡರೆ ಪ್ರಾಣ. ಅವರನ್ನು ಏನಾದರೂ ಮಾಡಿ ಅಲ್ಲಿ ಕಂಡುಹಿಡಿಯಬೇಕೆಂದು ಹುಡುಕುತ್ತಿದ್ದರು.

ಒಂದು ದಿನ ಚಂದ್ರಭಾಗಾನದಿಯಲ್ಲಿ ಇವರು ಸ್ನಾನಮಾಡುತ್ತಿದ್ದಾಗ ಗಡ್ಡವನ್ನು ಬಿಟ್ಟು ವೈರಾಗಿಯಂತಿದ್ದ ಯಾರೋ ಒಬ್ಬರು ಭಗವನ್ನಾಮಸ್ಮರಣೆ ಮಾಡುತ್ತಾ ಅತ್ತಿತ್ತ ನೋಡದೆ ಒಂದು ಕುಕ್ಕೆ ತುಂಬ ಇದ್ದ ದೇವರ ಪೂಜಾಪಾತ್ರಾದಿಗಳನ್ನು ಬಹಳ ಶ್ರದ್ಧೆಯಿಂದ ಬೆಳಗುತ್ತಿದ್ದದ್ದು ಗಂಗಮ್ಮನವರ ಕಣ್ಣಿಗೆ ಬಿತ್ತು. ಆತನ ಕಾರ್ಯತತ್ಪರತೆಯೂ ಪ್ರಸನ್ನಮುಖಮುದ್ರೆಯೂ ಕಿವಿಗಿಂಪಾದ ಧ್ವನಿಯೂ ಆಕೆಯ ಮನಸ್ಸನ್ನು ತಮ್ಮ ಕಡೆಗೆ ಸೆಳೆದವು. ಆಕೆಯು ಕುತೂಹಲದಿಂದ ಹತ್ತಿರಕ್ಕೆ ಹೋಗಿ ಕಣ್ಣಿಟ್ಟು ನೋಡಿದಾಗ, ಆ ವೈರಾಗಿಯು ಅನಂತಪ್ಪನವರಾಗಿರಬಹುದೆಂಬ ಸಂಶಯ ಬಂತು. ಆ ವಿಷಯವನ್ನು ಆಕೆಯು ಇತರ ಬೆಂಗಳೂರಿನವರಿಗೆ ತಿಳಿಸಲು ಅವರೆಲ್ಲರೂ ಅವರ ಗುರುಮಂದಿರವನ್ನು ಹೇಗೋ ಕಂಡುಕೊಂಡು. ಅಲ್ಲಿ ಅನಂತಪ್ಪನವರನ್ನು ಗುರುತಿಸಿ ಎಲ್ಲಾ ಸಮಾಚಾರವನ್ನೂ ತಿಳಿಸಿ ಅನಂತಪ್ಪನವರನ್ನು ಹಿಂದಕ್ಕೆ ಕಳುಹಿಸಿಕೊಡಬೇಕೆಂದು ಬೇಡಿಕೊಂಡರು. ಅನಂತಪ್ಪನವರು ಹೊರಡಲು ಒಪ್ಪಲಿಲ್ಲ. ಆದರೆ ದಯಾಮಯರಾದ ಆ ಗುರುವರ್ಯರು ಜನರ ಪ್ರಾರ್ಥನೆಯನ್ನು ಅಂಗೀಕರಿಸಿ ಅನಂತಪ್ಪನವರಿಗೆ ಹೇಳಬೇಕಾದ ಬುದ್ಧಿವಾದವನ್ನು ಹೇಳಿ ಕರುಣೆಯಿಂದ ತಮ್ಮ ಪೂಜೆಯೊಳಗಿನ ಒಂದು ಪವಿತ್ರಸಾಲಿಗ್ರಾಮವನ್ನೇ ಅವರಿಗೆ ಅನುಗ್ರಹಿಸಿ ತಮ್ಮಂತೆಯೇ ಉಪಾಸನಾಮಾರ್ಗವನ್ನು ಬೆಂಗಳೂರಿನಲ್ಲಿಯೂ ಅನುಸರಿಸುತ್ತಾ ಪ್ರತಿ ಆಷಾಢ ಶುಭ ಏಕಾದಶಿಗೂ ಪಂಢರಿಗೆ ಬರುವಂತೆ ಅಪ್ಪಣೆಮಾಡಿ ಕಳುಹಿಸಿಕೊಟ್ಟರು.

ಅನಂತಪ್ಪನವರಿಗೆ ಗುರುವರ್ಯರ ಸೇವೆಯನ್ನು ಬಿಟ್ಟು ಹಿಂದಿರುಗಲು ಮನಸ್ಸು ಒಪ್ಪಲಿಲ್ಲವಾದರೂ ಗುರುವಿನ ಅಪ್ಪಣೆಯನ್ನು ಪ್ರತಿಯಾಡದೆ ನಡೆಸಲೇ ಬೇಕಾಯಿತು. ಬೆಂಗಳೂರಿನವರಿಗೇನೋ ಅವರನ್ನು ಕಂಡು ಆನಂದವಾಯಿತು. ಅವರು ಇಲ್ಲಿಗೆ ಬಂದಮೇಲೆ ಯಾವ ಪ್ರಾಪಂಚಿಕ ವ್ಯವಹಾರಕ್ಕೂ ಕೈಹಾಕದೆ ತಮ್ಮ ಮನೆಯ ಒಂದು ಭಾಗದಲ್ಲಿ ತಮ್ಮ ಗುರುಗಳ ಕ್ರಮದಂತೆಯೇ ಪೂಜೆ, ಭಜನೆ, ಪುರಾಣ- ಮೊದಲಾದ ನಿತ್ಯನಿಯಮಗಳನ್ನು ಸಾಗಿಸತೊಡಗಿದರು. ಪ್ರತಿದಿನವೂ ಹತ್ತಿರವೇ ಇದ್ದ ವಿಠೋಬ ದೇವಸ್ಥಾನಕ್ಕೆ ಹೋಗಿಬರುವ ಪದ್ಧತಿಯಿಟ್ಟರು. ಮನೆಯಲ್ಲಿ ಇವರಿಗೆ ಚಳಿಜ್ವರ ಬರಲಾರಂಭಿಸಿತು. ನಿದ್ರೆ ಹತ್ತದಾಯಿತು. ದಿನದಿನಕ್ಕೆ ಕೃಶರಾಗುತ್ತ ಬಂದರು, ಅದೇನು ದೈವವಿಲಾಸವೋ ಅವರಿಗೆ ದೇವಸ್ಥಾನದ ದೇವರ ನೈವೇದ್ಯವು ಮಾತ್ರ ಸೇರಹತ್ತಿತು. ಅಲ್ಲಿ ಮಲಗಿದರೆ ನಿದ್ರೆಯೂ ಬರುತ್ತಿತ್ತು. ಮನೆಗೆ ಬಂದೊಡನೆ ಪುನಃ ಕಾಯಿಲೇ ಇದನ್ನು ನೋಡಿದ ಅವರ ತಾಯಿಯವರು ''ನೀನು ಸುಖವಾಗಿದ್ದರೆ ಸಾಕು, ದೇವಸ್ಥಾನದಲ್ಲಿಯೇ ಇರಪ್ಪ!'' ಎಂದು ಅವರನ್ನು ದೇವಸ್ಥಾನಕ್ಕೇ ಕಳುಹಿಸಿ ಕೊಟ್ಟುಬಿಟ್ಟರು. ಹೆತ್ತತಾಯಿಯ ಪ್ರೀತಿಯೇ ಇಂಥದ್ದು!

ದೇವಸ್ಥಾನದಲ್ಲಿ ವಾಸಮಾಡುತ್ತಾ ಬಂದಮೇಲೆ ಅನಂತಪ್ಪನವರಿಗೆ ದಿನದಿನಕ್ಕೆ ಆರೋಗ್ಯ ಹೆಚ್ಚಿತು. ಅಲ್ಲಿ ಅವರು ಪಂಢರಿಯ ಉಪಾಸನಾಪದ್ಧತಿಗಳನ್ನೆಲ್ಲಾ ಚಾಚು ತಪ್ಪದಂತೆ ನಡೆಸುತ್ತಿದ್ದರು. ಮಧುಕರಿಮಾಡಿ ದೇವರಿಗೆ ಅರ್ಪಿಸಿದ ನೈವೇದ್ಯವೇ ಇವರ ಊಟ. ಇವರ ಸತ್ಕಾರ್ಯಪ್ರಭಾವದಿಂದ ಅಲ್ಲಿಯ ಸುತ್ತಮುತ್ತಲ ಜನರ ಮನೋಭಾವನೆಯೂ ಗುಣಗಳೂ ಆಚರಣೆಯೂ ಬದಲಾವಣೆಯಾದವು. ಅನೇಕರು ಇವರೊಂದಿಗೆ ಭಜನೆಗೆ ಸೇರಿದರು ಇವರು ಪ್ರತಿಸಾಯಂಕಾಲವೂ ನಡೆಸುತ್ತಿದ್ದ ಭಾವಾರ್ಥರಾಮಾಯಣ, ಏಕನಾಥಿಭಾಗವತ ಮುಂತಾದ ಸದ್ಗ್ರಂಥಗಳ ಪುರಾಣಶ್ರವಣಕ್ಕೆ ಅನೇಕರು ನೆರೆದು ಆನಂದಾನುಭವವನ್ನು ಹೊಂದುತ್ತಿದ್ದರು. ಇವರ ಭಕ್ತಿಪ್ರಭಾವವು ಬೆಂಗಳೂರಿನ ಇತರ ಭಾಗಗಳಲ್ಲಿಯೂ ಹರಡಿತು. ದರ್ಜಿಪೇಟೆ ದೇವಾಂಗ ಪೇಟೆ- ಮುಂತಾದ ಕಡೆಗಳಿಂದಲೂ ಜನರು ಬರಲು ಮೊದಲಿಟ್ಟರು. ಸಂಸಾರದುಃಖದಿಂದಬೆಂದು ಬೆಂಡಾಗಿದ್ದವರ ಹೃದಯಕ್ಕೆ ಅನಂತಪ್ಪನವರ ವಾಣಿಯು ಅಮೃತವೃಷ್ಟಿಯಾದಂತಾಯಿತು. ಜನಮಂಡಲಿಯಲ್ಲಿ ಭಗವದ್ಭಕ್ತಿಯೂ ಸರ್ವಭೂತಪ್ರೇಮವೂ ಮೊಳೆಯತೊಡಗಿದವು.

ಅನಂತಪ್ಪನವರು ಪ್ರತಿವರ್ಷವೂ ತಪ್ಪದೆ ಪಂಢರಿಗೆ ಹೋಗಿ ಗುರುದರ್ಶನವನ್ನು ಮಾಡಿಕೊಂಡು ಬರುತ್ತಿದ್ದರು. ಅವರ ಜತೆಯಲ್ಲಿ ಅನೇಕ ಜನರು ಹೋಗಿ ಬರುತ್ತಾ ಭಕ್ತಿಮಾರ್ಗಾವಲಂಬಿಗಳಾದರು. ಅನಂತಪ್ಪನವರು ಬೆಂಗಳೂರಿನಲ್ಲಿ ಮರಾಠ ದೇಶದ ಸಾಧುವರ್ಯರಾದ ತುಕಾರಾಮ ಏಕನಾಥ, ಜ್ಞಾನದೇವ ಮೊದಲಾದ ಮಹಾಪುರುಷರ ಪುಣ್ಯತಿಥಿಯ ಸಪ್ತಾಹಮಹೋತ್ಸವಗಳನ್ನು ನೆರವೇರಿಸುತ್ತಿದ್ದರು. ಆಗ ಅಖಂಡನಾಮಭಜನೆ, ಪುರಾಣಪುಣ್ಯಕಥೆಗಳು– ಮುಂತಾದ ಸೇವೆಗಳ ಏರ್ಪಾಡಾಗಿತ್ತು. ಅನಂತಪ್ಪನವರು ಕೆಲವು ವೇಳೆ ಬರಿಯ ಹಾಲಿನ ಮೇಲೆಯೇ ಇರುತ್ತಾ ಭಾಗವತಸಪ್ತಾಹಗಳನ್ನು ನಡೆಸುತ್ತಿದ್ದರು. ಸಪ್ತಾಹದ ಕೊನೆಯಲ್ಲಿ ಮಂಗಳವಾಗಿ ಸಂತರ್ಪಣೆ, ಉತ್ಸವ – ಇವುಗಳು ನೆರವೇರುತ್ತಿದ್ದವು. ಜನರು ಈ ಸತ್ಕಾರ್ಯಗಳಿಗೆಲ್ಲ ನೆರವಾಗುತ್ತಾ ಬಂದರು.

ಇವರ ಕೀರ್ತಿಲತೆಯು ಚೆನ್ನಾಗಿ ಹಬ್ಬುತ್ತಾ ಬಂತು. ಜನರು ಬಂದು ಹೋಗುವದೂ ಹೆಚ್ಚಿತು. ಇವರ ಕಾರ್ಯಕಲಾಪಗಳಿಗೆ ವಿಠೋಬದೇವಸ್ಥಾನವು ಸಾಲದಾಯಿತು. ಢಗೆಯವರು ಪಕ್ಕದಲ್ಲಿ ಒಂದು ಮನೆಯನ್ನು ಕೊಟ್ಟರು. ಆಮೇಲೆ ಒಂದು ವಿಸ್ತಾರವಾದ ಮಹಡಿಯನ್ನು ಕಟ್ಟಿಸಿಕೊಟ್ಟರು. ಇವರ ಏಕಾದಶಿ ಉಪವಾಸ, ಜಾಗರಣೆ, ದ್ವಾದಶಿಯ ಹರಿಕಥೆ– ಇವೇ ಮುಂತಾದ ಮನೋವಾಕ್ಕಾಯಗಳ ತಪಸ್ಸನ್ನು ಜನರೂ ಅನುಸರಿಸಿ ದೇಹಾತ್ಮಬುದ್ಧಿಯನ್ನು ದೂರಗೊಳಿಸಲು ಯತ್ನಿಸಿದರು. ಹರಿಕಥೆಯನ್ನು ಮಾಡುವಾಗ ಅನಂತಪ್ಪನವರ ಮಧುರವಾದ ಕಂಠದಿಂದ ಹೊರಸೂಸುವ ಇಂಪಾದ ಗಾನವೂ ಭಕ್ತ್ಯಾವೇಶ ಪೂರಿತವಾದ ವಾಣಿಯೂ ಜನರ ಮನಸ್ಸನ್ನಾಕರ್ಷಿಸಿ ಭಗದಚ್ಚಿಂತನೆಯಲ್ಲಿಯೇ ಮಗ್ನರಾಗುವಂತೆ ಮಾಡಿದವು. ಈ ಜಗತ್ತು ಮೂರುಗಳಿಗೆಯ ಬಾಳೆಂಬುದು ಚೆನ್ನಾಗಿ ಮನವರಿಕೆಯಾಯಿತು. ಅಹಂಮಮಕಾರಗಳನ್ನು ತೊರೆದು ರಾಗ ದ್ವೇಷರಹಿತರಾಗಿ ಭಗವದ್ದೃಷ್ಟಿಯಿಂದಲೇ ಶುದ್ಧವಾದ ಆಚರಣೆಯಿಂದಲೂ ದಿವ್ಯವಾದ ಬೋಧೆಯಿಂದಲೂ ಜನರ ಮನಸ್ಸಿಗೆ ಚೆನ್ನಾಗಿ ಗೋಚರವಾಯಿತು, ಸತ್ಯವೂ ಸ್ವಾಭಾವಿಕವೂ ಆದ ಅವರ ಮಾತುಗಳಿಂದಲೇ ಎಷ್ಟೋ ಜನರ ಇಷ್ಟಾರ್ಥಗಳು ಕೈಗೂಡಿದವು. ಅವರ ದರ್ಶನವೇ ಮನಶ್ಶಾಂತಿಗೆ ಕಾರಣವಾಯಿತು.

ಉಪಾಸನಾಮಾರ್ಗದಲ್ಲಿ ಹೀಗೆ ಮುಂದುವರಿಯುತ್ತಿದ್ದ ಅನಂತಪ್ಪನವರಿಗೆ ಎಂತಹ ಪ್ರಸಂಗಗಳಲ್ಲಿಯೂ ತಮ್ಮ ಸಮಾಧಾನವನ್ನು ಕಳೆದುಕೊಳ್ಳದೆ ಶಾಂತರಾಗಿಯೇ ಇರುವ ಸ್ವಭಾವವು ಮೈಗೂಡಿಕೊಂಡಿತು. ಇದು ಅವರಲ್ಲಿ ಎದ್ದು ಕಾಣಿಸಿದ ಒಂದು ಸಂದರ್ಭವನ್ನು ವಾಚಕಮಹಾಶಯರ ಅವಗಾಹನೆಗಾಗಿ ಈ ಕೆಳಗೆ ಕೊಟ್ಟಿದೆ:

ದತ್ತರಭಟ್ಟರೆಂಬ ಒಬ್ಬ ಮಹನೀಯರ ಸಹವಾಸದಿಂದ ಅನಂತಪ್ಪನವರು ಪ್ರತಿಗುರುವಾರವೂ ದತ್ತಾತ್ರೇಯರಪಾದುಕೆಗಳಉತ್ಸವವನ್ನು ನಡೆಸತೊಡಗಿದ್ದರು. ಇದಕ್ಕೆಗುರುವಾರದನಿಯಮವೆಂದುಹೆಸರಾಗಿತ್ತು. ಆಗಗುರುಮಹಿಮೆಸ್ತೋತ್ರವೂ ದತ್ತನ ಭಜನೆಯೂ ಆಗುತ್ತಿದ್ದವು. ಉತ್ಸವದ ಸಂಗಡ ಅನಂತಪ್ಪನವರು ಇತರ ಭಕ್ತಮಂಡಲಿಯೊಡನೆ ಹೊರಟು ಭಕ್ತ್ಯುದ್ರೇಕಪರವಶರಾಗಿ ''**ಸದ್ಗುರು ವಾಚೂನಿ ನಾಮದೇವ ಸೋಯ, ಧರಾವೇ ತೇ ಪಾಯ್ ಆದಿ ಆದಿ, ಅಪಣಾ ಸಾರೀಖೇ ಕರಿತಿ ತತ್ಕಾಳ್ ।** ಸದ್ಗುರು ಹೊರತು ಮುಕ್ತಿಮಾರ್ಗವು ಸಿಕ್ಕುವದಿಲ್ಲ. ಅವರು ಶಿಷ್ಯರನ್ನು ಕೂಡಲೆ ತನ್ನಂತೆಯೇ ಮಾಡಿಕೊಳ್ಳುತ್ತಾರೆ (**ಅಪಣಾ ಸಾರೀಖೇ ಕರಿತಿ** ); ಮೊದಲು ಅವರ ಪಾದಗಳಿಗೆ ಶರಣುಹೋಗು! ಎಂಬ ಪದವನ್ನು ಹಾಡಿಕೊಂಡು ಬಂದು ಗೊತ್ತಾದ ಸ್ಥಳದವರೆಗೂ ಹೋಗಿ ಹಿಂತಿರುಗುವಾಗ ದತ್ತ, ದತ್ತ!''- ಎಂದು ದತ್ತಾತ್ರೇಯರ ಭಜನೆಮಾಡಿಕೊಂಡು ಬರುವದು ಪದ್ಧತಿಯಾಗಿತ್ತು.

ಈ ಉತ್ಸವಹೊರಡುವ ದಾರಿಯಲ್ಲಿಯೇ ಇದ್ದ ಒಂದು ಮನೆಯಲ್ಲಿ ಲೋಭಿಯಾನ ಅಪ್ಪಣ್ಣನೆಂಬ ಒಬ್ಬ ಐಶ್ವರ್ಯವಂತನಿದ್ದರು. ಈತನು ಪರಮಾರ್ಥದ ಗಂಧವನ್ನೇ ಅರಿಯದ ಶುದ್ಧಲೌಕಿಕ ಇವನಿಗೆ ಮಕ್ಕಳಿರಲಿಲ್ಲ; ದತ್ತುಮಾಡಿಕೊಂಡಿದ್ದ. ಗುರುಗುರುವಾರವೂ ಇವನ ಕಿವಿಗೆ ಬೀಳುತ್ತಿದ್ದ 'ಆಪಣಾ ಸಾರಿಕೆ, 'ದತ್ತ ದತ್ತ' ಎಂಬ ಶಬ್ದಗಳು ಇವನ ಕಿವಿಗಳಿಗೆ ಇರಿದಂತಾಗಿದ್ದವು. ಇದಕ್ಕೆ ಅವನು ಆ ಶಬ್ದಗಳಿಗೆ ಮಾಡಿಕೊಂಡ ಅಪಾರ್ಥವೇ ಕಾರಣ, ''ಅಪ್ಪಣನೆಂಬ ತಾನು ಮಕ್ಕಳಿಲ್ಲದ ದುರದೃಷ್ಟಶಾಲಿಯೆಂದೂ ಅದಕ್ಕೇ! ಯಾರದೋ ಒಬ್ಬನನ್ನು ದತ್ತುಮಾಡಿಕೊಂಡಿರುವನೆಂದೂ'' ಪ್ರಕಟಿಸುವದಕ್ಕಾಗಿ ಅನಂತಪ್ಪನವರು ಈ ಗುಂಪನ್ನು ಸೇರಿಸಿಕೊಂಡು ಉತ್ಸವದ ನೆಪದಿಂದ ತನ್ನನ್ನು ಗೇಲಿಗೆಬ್ಬಿಸಿದ್ದಾರೆಂದು ಅದಕ್ಕೆ ವ್ಯಾಖ್ಯಾನಮಾಡಿಕೊಂಡನು! ಈ ಗುರುವಾರ ನಿಯಮವೂ ನಿರಂತರವೂ ಸಾಗುತ್ತಿದ್ದದ್ದರಿಂದ ಇವನ ಕೋಪವು

ಬೆಳೆಯುತ್ತಾಬಂತು. ಒಳಗೊಳಗೇ ಕುದ್ದುಕೊಳ್ಳುತ್ತ ಇದ್ದನು. ಒಂದು ಗುರುವಾರ ಅದು ಉದ್ರೇಕವಾಯಿತು. ಉತ್ಸವವು ಹಿಂತಿರುಗುವಾಗ ಎಂದಿನಂತೆ 'ದತ್ತ, ದತ್ತ!' ಎಂಬ ಭಜನೆಯು ಕಿವಿಗೆ ಬಿದ್ದೊಡನೆ ಅವನ ಕೋಪವು ಮಿತಿ ಮೀರಿದ್ದರಿಂದ ಅವನು ಹೊರಗೆ ಬಂದು ಅನಂತಪ್ಪನವರು ಕೆನ್ನೆಗೆ ಛಟೀರನೆ ಹೊಡೆದು ಮನಸ್ಸುಬಂದಂತೆ ಬಯ್ಯುಲಾರಂಭಿಸಿದನು. ಅನಂತಪ್ಪನವರು ಶಾಂತರಾಗಿಯೇ ಇದ್ದುಬಿಟ್ಟರು. ಆಗ ಈ ಮೂರ್ಖನ ಉದ್ಧಟತನವನ್ನು ಜನರು ಸಹಿಸಲಾರದೆ ಅವನಿಗೆ ಪ್ರತೀಕಾರಮಾಡಲುದ್ಯುಕ್ತರಾದರು. ಅನಂತಪ್ಪನವರು ಎಲ್ಲರನ್ನೂ ಸಮಾಧಾನಮಾಡಿ ಆತನ ಮೇಲೆ ಕೈಮಾಡಿದ್ದೆಲ್ಲ ನನ್ನ ಮೇಲೆ ಕೈಮಾಡಿದಂತೆಯೇ ಎಂದು ಆಣೆ ಇಟ್ಟರು, ಯತ್ನವಿಲ್ಲದೆ ಎಲ್ಲರೂ ಸುಮ್ಮನಾಗಬೇಕಾಯಿತು. ಅವರು ಜನರನ್ನು ಕುರಿತು ''ನಮಸ್ಕಾರಮಾಡಲಿಕ್ಕೆ ಮಂದಿ ಬಂದಾಗ ಸಂತೋಷದಿಂದ ಕಾಲು ಮುಂದುಮಾಡುವದು, ಹೊಡೆಯುವದಕ್ಕೆ ಬಂದಾಗ ಮಾತ್ರ ಸಿಟ್ಟಿನಿಂದ ಅವರಮೇಲೆ ಕೈಮಾಡುವದು – ಹೀಗೆ ಪಕ್ಷಪಾತಮಾಡಿದರೆ ಹೇಗೆ ಸರಿಯಾದೀತು?'' ಎಂದು ಶಾಂತರಾಗಿಯೇ ಹೇಳಿ ಅವನನ್ನು ''ಹೊಡೆಯಪ್ಪ ನಿನ್ನ ಮನಸ್ಸು ಬಂದಷ್ಟು ಹೊಡೆ, ಇದೆಲ್ಲ ದತ್ತನ ಪ್ರಸಾದವೇ'' ಎಂದು ಹೇಳಿದರು. ಆತನಿಗೆ ನಾಚಿಕೆಯಾಗಿ ಒಳಗೆ ಹೋಗಿಬಿಟ್ಟನು. ಪುನಃ ಎಂದಿನಂತೆ ಭಜನೆಯನ್ನು ಮಾಡುತ್ತಾ ಉತ್ಸವವನ್ನು ಸಾಂಗಗೊಳಿಸಿದರು. ಆ ವಿಷಯವನ್ನೇ ಮತ್ತೆ ಎತ್ತಲಿಲ್ಲವಂತೆ! ಎಂಥ ಸಮಾಧಾನ! ಎಷ್ಟು ಶಾಂತಿ ಆ ಮಹನೀಯರರದು!

ಹೀಗೆ ಸತ್ಪುರುಷರ ಮೇಲೆ ನಿಷ್ಕಾರಣವಾಗಿ ಕೈಮಾಡಿಡ ಅಪ್ಪಣ್ಣನಿಗೆ ಕೂಡಲೆ ಚಳಿಜ್ವರ ಬಂದು ಹಾಸಿಗೆಹಿಡಿಯುವಂತಾಯಿತು. ಅವನು ತನ್ನ ತಪ್ಪಿತಕ್ಕೆ ಪಶ್ಚಾತ್ತಾಪವುಂಟಾಗಿ ಅನುಂತಪ್ಪನವರ ಕ್ಷಮಾಪಣೆಬೇಡಿಕೊಂಡು ಅವರ ಶಿಷ್ಯನಾಗಿ ದಾನಧರ್ಮಿಷ್ಠನಾದನಂತೆ!

ಈ ಪ್ರಸಂಗವು ಅನಂತಪ್ಪನವರ ಶಾಂತತೆಗೆ ಒರೆಗಲ್ಲಾದದ್ದಲ್ಲದೆ ''ಇದ್ದಗ್ಲಿ ನಮನೊಡನೆ ಮಾಡಿದ ಸ್ನೇಹಕ್ಕಿಂತಲೂ, ಗಂಧದಂಗಡಿಯವನೊಡನೆ ನೆಡೆಸಿದ ಜಗಳವೇ ಲೇಸೆಂಬ'' ಗಾದೆಯನ್ನೂ ನೆನಪುಕೊಡುವಂತಾಯಿತು.

# 4

**''ಯಾವಾಗಲೂ ನನ್ನನ್ನೇ ಹೊಂದಿಕೊಂಡು ಪ್ರೇಮದಿಂದ ಭಜಿಸುತ್ತಿರುವ ಅಂಥ ಜನರಿಗೆ ನನ್ನ ಬಳಿಗೆ ಬಂದು ಸೇರುವದಕ್ಕೆ ತಕ್ಕ ಬುದ್ಧಿಯೋಗವನ್ನು ಕೊಡುವೆನು'' - ಭ. ಗೀ. 10-10**

ಉಪಾಸನಾಮಾರ್ಗದಿಂದ ಭಗವದ್ಭಕ್ತಿಯನ್ನು ಬೆಳೆಯಿಸಿಕೊಂಡು ಶಮದಮಾದಿಗಳಿಂದ ಕೂಡಿದ್ದ ಅನಂತಪ್ಪನವರ ಮನಸ್ಸು ಪರಮಾತ್ಮನ ಅನುಗ್ರಹದಿಂದ ಈಗ ಜ್ಞಾನಮಾರ್ಗದ ಕಡೆಗೆ ಹೆಚ್ಚುಹೆಚ್ಚಾಗಿ ಒಲಿಯಿತು. ಇವರು ಗುರುಗಳ ಅಪ್ಪಣೆಯಂತೆ ಪ್ರತಿವರ್ಷವೂ ಪಂಢರಿಯಾತ್ರೆಯನ್ನು ತಪ್ಪದೆ ನಡೆಯಿಸುತ್ತಿದ್ದರಷ್ಟೆ; ಆಗ ಇವರಿಗೆ ಅನೇಕ ಸಾಧುಸಂತರ ಸಹವಾಸಲಾಭವು ಒದಗುತ್ತಿತ್ತು, ಇವರ ಸಂಗದಿಂದ ತುಷ್ಟರಾದ ಸಂತರನೇಕರು ಇವರಲ್ಲಿ ಪ್ರೇಮವನ್ನಿಟ್ಟುಕೊಂಡಿದ್ದರು. ಸಾಧುಗಳಾಗಲಿ ಜ್ಞಾನಿಗಳಾಲಿ ಒಟ್ಟಿಗೆ ಸೇರುವದೆಂದರೆ ಸಾಮಾನ್ಯಘಟನೆಯೇ? ಆ ಕಾಲಕ್ಕೆ ಒಬ್ಬರಿಗೊಬ್ಬರ ಅನುಭವಗಳು ವಿನಿಮಯದಿಂದ ಸೇರುತ್ತವೆ. ಚಿನ್ನಕ್ಕೆ ಒಪ್ಪವಿಟ್ಟಂತ ಹೊಸಬಣ್ಣವನ್ನೇ ತಾಳುತ್ತವೆ.

ಅನಂತಪ್ಪನವರು ಹೀಗೆ ಕಂಡ ಸಾಧುಗಳಲ್ಲಿ ಸುಪ್ರಸಿದ್ಧರಾದ ಹುಬ್ಬಳ್ಳಿಯ ಸಿದ್ಧಾರೂಢಸ್ವಾಮಿಗಳವರೂ ಒಬ್ಬರು. ಇವರನ್ನು ಕಂಡರೆ ಆರೂಢಸ್ವಾಮಿಗಳಿಗೆ ಪ್ರಾಣ. ಹುಬ್ಬಳ್ಳಿಗೆ ಬಂದಾಗಲೆಲ್ಲ ಇವರಿಂದ ಹರಿಕೀರ್ತನೆ, ಪುರಾಣನಿರೂಪಣ ಮುಂತಾದವನ್ನು ತಮ್ಮ ಮಠದಲ್ಲಿ ಮಾಡಿಸಿ ಶ್ರೋತೃವೃಂದಕ್ಕೆ ಆನಂದವನ್ನು ತಂದುಕೊಡುತ್ತಿದ್ದರು. ಎಷ್ಟೋ ವೇಳೆ ಅನಂತಪ್ಪನವರನ್ನು ತಾವೇ ಕರೆಯಿಸಿಕೊಂಡು ಅನೇಕ ದಿವಸಗಳವರೆಗೆ ತಮ್ಮ ಪಕ್ಕದಲ್ಲಿಯೇ ಇಟ್ಟುಕೊಂಡು ಹೀಗೆ ಜನರಿಗೆ ಬೋಧೆಮಾಡಿಸುತ್ತಿದ್ದರಂತೆ. ಒಂದು ಸಲ ಅನಂತಪ್ಪನವರು ಹರಿಕೀರ್ತನೆಗೆ ನಿಂತು ತಮ್ಮ ಪ್ರೀತಿಯ ಭಜನೆಯಾದ ''ರಾಮಕೃಷ್ಣಹರಿ'' ಎಂಬುದನ್ನು ರಾಗದಿಂದ ಹೇಳುತ್ತಿರುವಾಗ ಭಗವದ್ಭಕ್ತಿಯ ಉದ್ರೇಕದಿಂದ ಗದ್ಗದಕಂಡರಾಗಿ ಆನಂದಬಾಷ್ಪವನ್ನು ಸುರಿಸುತ್ತಾ ಹಾಗೆಯೇ ಸಮಾಧಿಸ್ಥರಾಗಿಬಿಟ್ಟರಂತೆ! ಆ ದಿನ ಕೀರ್ತನೆಯು ಅಷ್ಟಕ್ಕೇ ನಿಲ್ಲಬೇಕಾಯಿತು. ಜನರೆಲ್ಲರೂ ಅವರಂತೆಯೇ ಎಚ್ಚರತಪ್ಪಿ ಭಗವನ್ಮಯವಾಗಿದ್ದು ಬಿಟ್ಟಿದ್ದರು! ಆರೂಢರವರು ಅನಂತಪ್ಪನವರ ಸ್ಥಿತಿಯನ್ನು ಕಂಡು ಸಂತೋಷದಿಂದ ಬಿಗಿದಪ್ಪಿ ತಮ್ಮ ಅರ್ಧಾಸದನದಲ್ಲಿಯೇ ಅವರನ್ನೂ ಕೂಡಿಸಿಕೊಂಡರಂತೆ! ಆಗ ಜನವೆಲ್ಲರೂ ಆರೂಢಸ್ವಾಮಿಗಳನ್ನು ಪೂಜಿಸಿ

ಅವರಿಗೆ ಕರ್ಪೂರಾರತಿಯ ಮಂಗಳವನ್ನು ಪಾಡಿದಂತೆಯೇ ಅವರೊಂದಿಗೆ ಅನಂತಪ್ಪನವರಿಗೂ ಪೂಜಾದಿ ಸತ್ಕಾರವನ್ನೂ ಆರತಿಯನ್ನೂ ನಡೆಯಿಸಿದರಂತೆ! ಪ್ರಾಯಶಃ ಅಲ್ಲಿಂದ ಮುಂದಕ್ಕೆ ಅನಂತಪ್ಪನವರು ಹರಿಕೀರ್ತನೆಯನ್ನು ಮಾಡುವದು ನಿಂತಿದೆಂದು ತಿಳಿದು ಬಂದಿದೆ ಕೀರ್ತನೆಯ ಅಮೃತಫಲವನ್ನು ಸವಿದಮೇಲೆ ಅದರಿಗೆ ಮತ್ತೇನು ಬೇಕಾದೀತು?

ಬಿಜಾಪುರದ ಷಣ್ಮುಗಸ್ವಾಮಿಗಳೆಂಬ ಜ್ಞಾನಿಗಳಿಗೂ ಅನಂತಪ್ಪನವರಿಗೂ ಆರೂಢಸ್ವಾಮಿಗಳಂತೆಯೇ ಗಾಢವಾದ ಸ್ನೇಹವಿದ್ದಂತೆ ತಿಳಿದುಬಂದಿದೆ. ಈ ಮೂವರು ಮಹನೀಯರೂ ಆಗಾಗ್ಗೆ ಕಲೆಯುತ್ತಿದ್ದ ಸುಸಮಯಗಳನ್ನು ಕಣ್ಣಾರೆ ಕಂಡು ಆನಂದಿಸಿದ್ದ ಅನೇಕ ಭಕ್ತವರ್ಯರು ''ಇವರು ತ್ರಿಮೂರ್ತಿಗಳ ಅವತಾರ''ವೆಂದು ವರ್ಣಿಸುತ್ತಿದ್ದದ್ದು ಆಶ್ಚರ್ಯವಲ್ಲ.

ಅನಂತಪ್ಪನವರನ್ನು ಬಿಜಾಪುರ, ಇಂಡಿ, ಗದಗ, ಮೊದಲಾದ ಉತ್ತರಕರ್ನಾಟಕದೇಶದ ಅನೇಕ ಸದ್ಗೃಹಸ್ಥರು ತಮ್ಮ ಸ್ಥಳಗಳಿಗೆ ಕರೆದೊಯ್ದು ಸತ್ಕರಿಸಿ ಅವರ ಸಂಗಲಾಭವನ್ನು ಪಡೆಯಲಾರಂಭಿಸಿದರು. ಜ್ಞಾನದ ಬಲವುಳ್ಳ ಅನಂತಪ್ಪನವರಿಗೆ ಈ ಸಾಧುಗಳ ಸಹವಾಸದಿಂದ ವಿಚಾರಪ್ರಧಾನವಾದ ಗ್ರಂಥಗಳಲ್ಲಿಯೂ ಅಭಿರುಚಿ ಹುಟ್ಟಿತೆಂದು ಕಾಣುತ್ತದೆ. ಬೆಟಗೇರಿಯಲ್ಲಿ ಇವರಿದ್ದಾಗ ಶಾಸ್ತ್ರವೆತ್ತರೂ ಗೊಂದಾವಳಿ ಶ್ರೀಬ್ರಹ್ಮಚೈತನ್ಯ ಸದ್ಗುರು ಮಹಾರಾಜರ ಸೇವಾನಿರತರೂ ನಿಷ್ಠರೂ ಆಗಿದ್ದ ಬ್ರ॥ ಶ್ರೀ॥ ಕೃಷ್ಣಶಾಸ್ತ್ರಿಗಳವರ ಸಹಾಯದಿಂದ ಕೆಲವು ಸಂಸ್ಕೃತ ವೇದಾಂತಗ್ರಂಥಗಳ ಪರಿಚಯವನ್ನು ಮಾಡಿಕೊಂಡರು. ಗುಣಗ್ರಾಹಿಗಳಾದ ಅನಂತಪ್ಪನವರಿಗೆ ಇದು ಭೂಷಣವೇ ಆಯಿತು.

ಹೀಗೆ ಬರುಬರುತ್ತಾ ಅನಂತಪ್ಪನವರ ಸಾಧನೆಯು ಜ್ಞಾನಕ್ಕೆ ತಿರುಗಿ ದುದರಿಂದ ಭಗವಂತನು ''ಅವರ ಮೇಲಿನ ಮರುಕದಿಂದ ನಾನು ಅವರ ಹೃದಯದಲ್ಲಿಯೇ ಇದ್ದುಕೊಂಡು ಅಜ್ಞಾನದಿಂದುಂಟಾಗಿದ್ದ ಕತ್ತಲೆಯನ್ನು ತೊಲಗಿ ಸುವೆನು'' ಎಂದು ಗೀತೆಯಲ್ಲಿ ಮಾಡಿರುವ ಪ್ರತಿಜ್ಞೆಯಂತೆ ಇವರಿಗೆ ಜ್ಞಾನವನ್ನು ಅನುಗ್ರಹಿಸಿ ಬ್ರಹ್ಮನಿಷ್ಠರನ್ನಾಗಿ ಮಾಡಿದನು.

ಬಳಿಕ ಬೆಂಗಳೂರಿನಲ್ಲಿ ಥಗೆಯವರು ಕೊಟ್ಟಿದ್ದ ಮಹಡಿಯ ಮೇಲೆ ಅನಂತಪ್ಪನವರು ಬೆಳಗ್ಗೆ ಭಗವದ್ಗೀತೆ, ಪಂಚದಶಿ, ವಿಚಾರಸಾಗರ ಮುಂತಾದ

ಗ್ರಂಥಗಳ ಪಾಕವನ್ನೂ ಮಧ್ಯಾಹ್ನದ ಮೇಲೆ ಯೋಗವಾಸಿಷ್ಠ, ಜ್ಞಾನೇಶ್ವರಿ ಮುಂತಾದ ಪುರಾಣಗಳ ನಿರೂಪಣವನ್ನೂ ನಡೆಯಿಸಲಾರಂಭಿಸಿದರು ಆದಿನಕ್ಕೆ ಶ್ರೋತ್ರಗಳ ಸಂದಣಿಯು ಹೆಚ್ಚಾಯಿತು. ಶಿಷ್ಯವರ್ಗವೂ ಬೆಳೆಯಿತು; ಸುತ್ತುಮುತ್ತಲಿನ ವ್ಯಾಪಾರಿಗಳಿಗೂ ಗೃಹಸ್ಥರಿಗೂ ತೊಂದರೆಯಾಗಬಾರದೆಂದು ಅನಂತಪ್ಪನವರು ಒಂದು ಏಕಾಂತಸ್ಥಳವನ್ನು ಹುಡುಕಿ ಈಗಿನ ಅವರ ಮಠದ ಎದುರಿನಲ್ಲಿರುವ ಶ್ರೀಚಂದ್ರಮೌಳೇಶ್ವರಸ್ವಾಮಿಯ ದೇವಸ್ಥಾನಕ್ಕೆ ಹೋಗಿ ನಿಂತರು. ಈಗ ಆ ಸ್ಥಳವನ್ನು ಜನಭರಿತವಾಗಿದ್ದರೂ ಆ ಕಾಲಕ್ಕೆ ಸುತ್ತಲೂ ನಿರ್ಜನಪ್ರದೇಶವಾಗಿ ಊರಿಗೆ ದೂರವಾಗಿ ಶಾಂತವಾಗಿತ್ತಂತೆ.

ಇನ್ನು ಮುಂದೆ ಅನಂತಪ್ಪನವರು ಜ್ಞಾನಿಗಳಾಗಿಯೇ ಪ್ರಸಿದ್ಧಿಯನ್ನು ಪಡೆದರು. ಮುಮುಕ್ಷುಗಳಾದ ಅನೇಕ ಶಿಷ್ಯರು ಅವರಿಂದ ಅನುಗ್ರಹಿಸಲ್ಪಟ್ಟರು. ಅನಂತಪ್ಪನವರು ಬೋಧಿಸುತ್ತಿದ್ದ ಜ್ಞಾನಮಾರ್ಗವು ಉಳಿದ ಜ್ಞಾನಿಗಳ ಬೋಧನೆಗಿಂತ ಒಂದು ವಿಶೇಷಜಾತಿಯನ್ನವಲಂಬಿಸಿತ್ತು. ಅವರು ಸರ್ವಾನುಭವ ಸಮ್ಮತರಾದ ಅವಸ್ಥಾತ್ರತಪ್ರಕ್ರಿಯೆಯನ್ನೇ ಮುಖ್ಯವಾಗಿ ಎತ್ತಿಹಿಡಿದು ವಿಚಾರವನ್ನು ನಡೆಯಿಸುತ್ತಿದ್ದರು. ಇದು ಅಧಿಕಾರಿಗಳಾದವರೆಲ್ಲರಿಗೂ ಮನದಟ್ಟಾಗಿ ಅದ್ವೈತಾನುಭವನ್ನುಂಟುಮಾಡುತ್ತಿತ್ತು. ''ಅನಂತಪ್ಪನವರಿಲ್ಲದಿದ್ದರೆ, ನನಗೆಲ್ಲಪ್ಪ, ವೇದಾಂತವು ತಿಳಿಯುತ್ತಿತ್ತು? ಒಂದು ವೇಳೆ ತಿಳಿದಿದ್ದರೂ ಇದು ಬರಿಯ ಬಾಯಿವೇದಾಂತವಾಗಿರುತ್ತಿತ್ತೇ ಹೊರತು ಅನುಭವಕ್ಕೆ ಬರುತ್ತಿರಲಿಲ್ಲ! ಆಹ! ಅವರ ವಿಚಾರಿಸರಣಿಯು ಎಂಥ ಅನುಭವಪೂರ್ವಕವಾದದ್ದು!'' ಎಂದು ಶ್ರೀಯುತ ಕೆ.ಎ.ಕೃಷ್ಣಸ್ವಾಮಿ ಅಯ್ಯರವರು ಅಪ್ಪಣೆಕೊಡಿಸಿದ್ದಾರೆ. ಅಯ್ಯರವರೂ ಈ ದೇವಸ್ಥಾನದಲ್ಲಿಯೇ ಅನಂತಪ್ಪನವರನ್ನು ಮೊದಲು ಕಂಡದ್ದು!

ಅನಂತಪ್ಪನವರು ಹೀಗೆ ಜ್ಞಾನಮಾರ್ಗಾವಲಂಬಿಗಳಾಗಿದ್ದರೂ ಉಪಾಸನಾಮಾರ್ಗವನ್ನು ಬಿಡದೆ ಹಿಂದೆ ಅವರು ಭಜನೆಯನ್ನು ನಡೆಸಿಕೊಂಡು ಬಂದಿದ್ದ ದೇವಾಲಯಗಳಿಗೆ ಆಗಾಗ್ಗೆ ದಯಮಾಡಿಸುತ್ತಾ, ಸಪ್ತಾಹಸಮಯಗಳಲ್ಲಿ ಪೂರ್ತಿಯಾಗಿ ಅಲ್ಲಿಯೇ ಇರುತ್ತಿದ್ದರು ಅವರ ಸನ್ನಿಧಿಯಿಂದ ಉಪಾಸನಾಮಾರ್ಗದವರಿಗೆ ಪ್ರೋತ್ಸಾಹವೂ ಬೆಂಬಲವೂ ದೊರೆಯುತ್ತಿದ್ದವು.

ಮುಂದೆ ಅನಂತಪ್ಪನವರಿಗೆ ಅನೇಕರು ಭಕ್ತರಾದರು ಅವರೆ ಪೂಜಾದಿಗಳನ್ನೂ ಭಕ್ತಿಯಿಂದ ನಡೆಸುತ್ತಾ ಬಂದರು ಒಂದು ಶುಭದಿನ ಶಿಷ್ಯವೃಂದದವರು ಅವರಿಗೆ

ಕಿರೀಟಧಾರಣೆಯ ಮಹೋತ್ಸವವನ್ನು ಮಾಡಿ ಸತ್ಕರಿಸಿದರು. ಶ್ರೀರಾಮನವಮಿ ಶಿವರಾತ್ರಿ- ಮುಂತಾದ ವಿಶೇಷದಿನಗಳಲ್ಲಿ ಅವರಿಗೆ ಹೀಗೆ ಕಿರೀಟಧಾರಣೆಮಾಡಿ ಅವರನ್ನು ಶ್ರೀರಾಮನೆಂದೂ ಪರಶಿವನೆಂದೂ ಭಾವಿಸಿ ಪೂಜಿಸುತ್ತಿದ್ದರು. ಇಂಥ ಒಂದು ಸಮಯದಲ್ಲಿ ಶಿಷ್ಯವರ್ಗಕ್ಕೆ ಸೇರಿದ್ದ ಒಬ್ಬ ವರ್ತಕ ಮಹಾಶಯರು ಮೈಸೂರಿನಿಂದ ಅವರಿಗಾಗಿ ನೆಯ್ಸಿದ ಭಾರಿ ಬೆಲೆಯ ಒಂದು ಶಾಲನ್ನು ಅನಂತಪ್ಪಮಹಾರಾಜರಿಗೇ ತಂದು ಹೊದ್ದಿಸಿ ನಲಿದರಂತೆ!

ಜನರು ತಮ್ಮನ್ನು ಹೀಗೆಲ್ಲ ಸಂಭಾವಿಸಿದರೂ ಅನಂತಪ್ಪನವರು ಮಾತ್ರ ಎಂದಿನಂತೆ ಸರಳರಾಗಿಯೇ ಇರುತ್ತಿದ್ದರು. ಕೆಲವರು ಶಿಷ್ಯರು ಬಳಿಯಲ್ಲಿಯೇ ನಿಂತು ಸದಾ ಅವರ ಸೇವೆಯನ್ನು ಮಾಡುತ್ತಿದ್ದರು. ಭಕ್ತರು ಒದಗಿಸುತ್ತಿದ್ದ ಸಾಮಾನುಗಳಿಂದ ಪ್ರತಿದಿನವೂ ಅಲ್ಲಿ ಅತಿಥಿಸತ್ಕಾರವು ನಡೆದಿತ್ತು. ಬೆಂಗಳೂರಿನ ಭಾವಿಕ ಜನರಲ್ಲದೆ ಹುಬ್ಬಳ್ಳಿ, ಗದಗ-ಮುಂತಾದ ಉತ್ತರ ಕರ್ನಾಟಕದಿಂದಲೂ ಮೈಸೂರು ಸೀಮೆಯ ಬೇರೆ ಕಡೆಗಳಿಂದಲೂ ತೆಲಗು ಪ್ರಾಂತದಿಂದಲೂ ಶಿಷ್ಯರು ಮೇಲಿಂದಮೇಲೆ ಬಂದು ವೇದಾಂತಶ್ರವಣವನ್ನು ಮಾಡಿ ಧನ್ಯರಾಗುತಿದ್ದರು. ಎಲ್ಲರೂ ವರ್ಣಾಶ್ರಮ ಪದ್ಧತಿಯಂತೆಯೇ ನಡೆಯಬೇಕೆಂದು ಅನಂತಪ್ಪನವರು ಕಟ್ಟಪ್ಪಣೆಮಾಡಿದ್ದರು. ಅನೇಖ ಶಿಷ್ಯರು ಭಿಕ್ಷನ್ನದಿಂದ ದೇಹಯಾತ್ರೆಯನ್ನು ಸಾಗಿಸುತ್ತಾ ವೇದಾಂತವನ್ನು ಕಲಿಯುತ್ತಿದ್ದರು. ಇವರನ್ನು ದೇವರೆಂದೇ ತಿಳಿದಿದ್ದ ಅನೇಕ ಗೃಹಸ್ಥರ ಇಷ್ಟಾರ್ಥಗಳು ಇವರ ತಪೋಮಹಿಮೆಯಿಂದ ನೆರವೇರುತ್ತಿದ್ದವು, ಈ ಗುರುವರ್ಯರು ಯಾರೊಬ್ಬರಿಂದಲೂ ಯಾವ ನಿಮಿತ್ತದಿಂದಲೂ ಒಂದು ಕಾಸನ್ನೂ ಮುಟ್ಟದೆ ನಿಸ್ಪೃಹರಿಗೆಲ್ಲ ಚಕ್ರವರ್ತಿಗಳೆನಿಸಿಕೊಂಡಿದ್ದರು; ಒಂದು ಕೌಪೀನ, ಹೊದ್ದುಕೊಂಡಿದ್ದ ಒಂದು ಪಂಚೆ ಇಷ್ಟರಿಂದಲೇ ತೃಪ್ತರಾಗಿದ್ದರು! ಶಿಷ್ಯರಿಗೆಲ್ಲ ಸರಳ ಜೀವನಕ್ಕೂ ಉದಾತ್ತಾಭಾವನೆಗೂ ಮಾದರಿಯಾಗಿದ್ದರು.

ಸರ್ವಾತ್ಮಭಾವವುಳ್ಳ ಈ ಮಹನೀಯರಲ್ಲಿ ಸರ್ವಭೂತಪ್ರೇಮವು ತುಂಬಿ ತುಳುಕುತ್ತಿತ್ತು. ಬೆಂಗಳುರಿಗೆ ಮೊದಲು ಪ್ಲೇಗು ಬರಿದಾಗ ಜನರ ಗಾಬರಿಯನ್ನು ಹೇಳುತೀರದು; ರೋಗಿಗಳನ್ನು ಉಪಚರಿಸುವದನ್ನು ಕೂಡ ಬಿಟ್ಟು ಜನರು ಹೇಳದೆ ಕೇಳದೆ ತಲೆತಪ್ಪಿಸಿಕೊಳ್ಳುತ್ತಿದ್ದರು. ಆಗ ಅನಂತಪ್ಪನವರು ದೇವಸ್ಥಾನದ ಮುಂದಿದ್ದ ಬಯಲಿನಲ್ಲಿ ಅನೇಕ ಕ್ಯಾಂಪುಗಳನ್ನು ಹಾಕಿಸಿ ಪ್ಲೇಗಾದವರನ್ನು ತಂದಿಟ್ಟುಕೊಂಡು ಸ್ವತಃ ಉಪಚರಿಸಿದೆದಲ್ಲದೆ, ಭಗವನ್ನಾಮಸ್ಮರಣೆ, ತತ್ತ್ವೋಪದೇಶ - ಅವುಗಳಿಂದ ಅವರ ಚಿಂತಾಯುತವಾದ ಮನಸ್ಸಿಗೆ ಸುಖವನ್ನು ತಂದು ಕೊಡಲು

ಪ್ರಯತ್ನಿಸುತ್ತಿದ್ದರು ಅವರ ಉಪಚಾರದಿಂದ ಹಲವರು ಬದುಕಿದರು; ದೇಹವನ್ನು ಬಿಟ್ಟವರೂ ಅವರ ಪವಿತ್ರಸಾನ್ನಿಧ್ಯ ತತ್ತ್ವೋಪದೇಶಗಳಿಂದ ತಮ್ಮ ಅಂತ್ಯಕಾಲವನ್ನು ಸಾರ್ಥಕಗೊಳಿಸಿಕೊಂಡರು.

1901ರಲ್ಲಿ ಪ್ಲೇಗುವ್ಯಾಧಿಯು ಅನಂತಪ್ಪನವರಿಗೂ ಬಂತು. ಆಗಲೂ ಅವರು ಶಾಂತರಾಗಿಯೇ ಇರುತ್ತಿದ್ದರು. ತಮ್ಮ ಪರಂಪರೆಯನ್ನು ಸಾಗಿಸಿಕೊಂಡು ಹೋಗುವಂತೆ ಯಾರನ್ನಾದರೂ ಗದ್ದುಗೆಯ ಮೇಲೆ ಕೂಡಿಸಬೇಕೆಂದು ಶಿಷ್ಯರು ಕೇಳಿಕೊಂಡದ್ದಕ್ಕೆ ''**ಬ್ರಹ್ಮಜಿಜ್ಞಾಸೆಯನ್ನು ನಡೆಯಿಸುವವರೆಲ್ಲರೂ ನನ್ನ ಪರಂಪರೆಯವರೇ**'' ಎಂದುಬಿಟ್ಟರು. ಅಂತ್ಯಕಾಲದಲ್ಲಿಯೂ ಪರಮಾತ್ಮನಿಷ್ಠರಾಗಿದ್ದುಕೊಂಡು ತಮ್ಮ ಬೌತಿಕಯಾತ್ರೆಯನ್ನು ಸಮಾಪ್ತಿಗೊಳಿಸಿದರು.

ಭಕ್ತಿಜ್ಞಾನವೈರಾಗ್ಯಗಳನ್ನೂ ಶುದ್ಧಾಚರಣೆಯನ್ನೂ ತತ್ತ್ವಬೋಧನೆಯನ್ನೂ ಕೊಟ್ಟು ಶಿಷ್ಯರನೇಕರನ್ನು ಕೃತಾರ್ಥರನ್ನಾಗಿ ಮಾಡಿದ ಆ ಮಹನೀಯರು ಈಗಲೂ ತಮ್ಮ ಅನಂತಪ್ಪರೂಪದಿಂದ ಭಾವಿಕರ ಹೃದಯದಲ್ಲಿ ನೆಲೆಸಿರುತ್ತಾರೆ. ಅನಂತಪ್ಪ ಮಹಾರಾಜರವರ ಕೀರ್ತಿಯು ಅನಂತವಾಗಿ ಹಬ್ಬಲಿ!

★★★★★

# ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

**ಶ್ರುತಿಶಿರಸಿನಿಗೂಢಂ ಶುದ್ಧಮದ್ವೈತತತ್ತ್ವಂ**
**ಕುಮತಿಭಿರನವಾಪ್ಯಂ ಹ್ಯೇತದರ್ಥಂ ನಿಬನ್ಧಮ್ ।**
**ವ್ಯತನುತ ಕೃಪಯಾ ಯಃ ಪ್ರೇರಯಿತ್ವಾ ಧಿಯೋ ಮೇ**
**ತಮಖಿಲಹೃದಯಜ್ಞಂ ಕೃಷ್ಣಸಂಜ್ಞಂ ನತೋಽಸ್ಮಿ ॥**

ಚಿತ್ರಭಾನುಸಂವತ್ಸರದ ಶುಕ್ಲ ತೃತೀಯೆಯ ಭಾನುವಾರ (ತಾ॥ 7-3-43) ದಿನ ಭರತಖಂಡದ ಜೀವಜ್ಯೋತಿಗಳಲ್ಲೊಂದರ ಪ್ರಖ್ಯಾತಪ್ರಭೆಯು ಅವ್ಯಕ್ತವಾಯಿತು. ಆ ಜ್ಯೋತಿಯ ಬೆಳಕಿನ ಆಶ್ರಯದಲ್ಲಿ ತಮ್ಮ ವ್ಯಾಪಾರವನ್ನು ಹಾಯಾಗಿ ನಡೆಯಿಸುತ್ತಿದ್ದ ಅನೇಕರ ಹೃದಯದಲ್ಲಿ ಈಗ ಶ್ರೀಕೃಷ್ಣನು ಪರಂಧಾಮಕ್ಕೆ ತೆರಳಿದ ಬಳಿಕ ಆತನ ಅಂತರಂಗದಲ್ಲುಂಟಾದ ಕಳವಳವು ಎದ್ದುಕೊಂಡಿರುತ್ತದೆ. ಶ್ರೀ ಕೆ. ಎ. ಕೃಷ್ಣಸ್ವಾಮಿ ಅಯ್ಯರೆಂಬ ನಾಮರೂಪಗಳ ಸಂಸ್ಮರಣೆಯೊಂದೇ ಈಗ ಅವರಿಗೆ ಉಳಿದುಕೊಂಡಿರುವ ಚಿತ್ತ ಸಮಾಧಾನೋಪಾಯವಾಗಿರುತ್ತದೆ.

ಅಯ್ಯರವರನ್ನು ನಾನು ಮೊದಲು ಕಂಡದ್ದು 1901ರಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಓದಬೇಕೆಂಬ ಆಸೆಯಿಂದ ಅವರ ಸಹಾಯವನ್ನು ಬಯಸಿ, ಒಂದು ಪರಿಚಯ ಪತ್ರವನ್ನು ಅವರಿಗೆ ಅಂದು ತಂದುಕೊಟ್ಟೆನು. ಮಿತ್ರಮಂಡಲಿಯ ನಡುವೆ ಕುಳಿತು ವಿನೋದದಿಂದ ಪಿಟೀಲು ಬಾರಿಸುತ್ತಾ ನಡುನಡುವೆ ರಸಹಾಸ್ಯದ ಮಾತುಗಳನ್ನು ಆಡುತ್ತಿದ್ದ ಅವರಿಗೂ ನನಗೂ ಮುಂದೆ ನಿಕಟಸಂಬಂಧವುಂಟಾದೀತೆಂಬ ಸೂಚನೆ ಯಾವದೂ ಆಗ ತೋರಲಿಲ್ಲ. ''ಬೇಕಾದರೆ ನಮ್ಮ ಮನೆಗೂ ಒಂದು ವಾರ ಊಟಕ್ಕೆ ಬಾರಪ್ಪ'' - ಎಂದು ಉದಾಸೀನಭಾವದಿಂದ ಅವರು ನನಗೆ ಹೇಳಿದ ಉತ್ತರವಂತೂ ಅವರ ವಿಷಯದಲ್ಲಿ ನನಗೆ ಹೆಚ್ಚಿನ ಭಾವನೆಯುಂಟಾಗುವದಕ್ಕೆ ಯಾವ ಪ್ರೋತ್ಸಾಹವನ್ನೂ ಕೊಡಲಿಲ್ಲ. ಆದರೂ ದೈವಘಟನೆಯು ವಿಚಿತ್ರವಾದದ್ದು. ಅಂದಿನಿಂದಲೇ ಅವರಿಗೆ ನನ್ನ ಮೇಲೆ ಒಂದು ಬಗೆಯ ಅವ್ಯಾಜಪ್ರೇಮವುಂಟಾಯಿತೆಂದು ಈಗ ಹೇಳಬೇಕಾಗಿ

ದೆ. ವಿದ್ಯಾರ್ಥಿಯ ದೆಶೆಯಲ್ಲಿ ನನಗೆ ಅವರು ಓದುಬರಹ, ನಡೆನುಡಿ – ಮುಂತಾದವುಗಳ ತಿದ್ದುಪಡಿಗೆ ಮೇಲುಪಜ್ಙ್ಯಯಾದದ್ದಲ್ಲದೆ ಸದ್ಯಕ್ಕೆ ನನ್ನ ಜೀವನದ ಉಸಿರಾಗಿಬಿಟ್ಟಿರುವ ವೇದಾಂತಚಿಂತನೆಯಲ್ಲಿ ಅಭಿರುಚಿಯನ್ನು ಬೆಳೆಯಿಸಿ ಕ್ರಮವಾದ ದಾರಿಗೆ ಬಿಡುವದಕ್ಕೂ ಮುಖ್ಯಕಾರಣರಾದರು!

ಅನಾರೋಗ್ಯವೇ ಮುಂತಾದ ಕಾರಣಗಳಿಂದ ನಾನು ಬೆಂಗಳೂರಿನಲ್ಲಿ ಓದುವದಕ್ಕಾಗದೆ ಹೊಟ್ಟೆಯಪಾಡಿಗಾಗಿ ಸರಕಾರಿಯ ಕೆಲಸಕ್ಕೆ ಸೇರಿಕೊಂಡೆನು. ನನಗೂ ಅವರಿಗೂ ಅಗಲಿಕೆಯಾಗಿ ಕೆಲವು ವರ್ಷಗಳಾದರೂ ಅವರು ನನ್ನನ್ನು ತಮ್ಮ ಕುಟುಂಬದಲ್ಲೊಬ್ಬನನ್ನಾಗಿ ಭಾವಿಸಿ ತೋರಿಸಿದ್ದ ಪ್ರೇಮವು ಮಾತ್ರ ನನ್ನ ಕೃತಜ್ಞತೆಯನ್ನು ಸೆರೆಹಿಡಿದಿತ್ತು. ಮುಂದೆ ನಾನು ಕುರ್ತಕೋಟಿಯ ಶ್ರೀ ಮಹಾಭಾಗವತರೆಂಬ ಸಾಧುಗಳ ಆಸರೆಯಲ್ಲಿ ಕೆಲಕಾಲವಿದ್ದಾಗ ಅವರ ಉಪನ್ಯಾಸವೊಂದನ್ನು ಇಂಗ್ಲಿಷಿನಲ್ಲಿ ಬರೆದು ಭಾಷೆಯ ತಿದ್ದುಪಡಿಗಾಗಿ ಅಯ್ಯರ್ ರವರ ನೆರವನ್ನು ಕೋರುವ ಸಮಯವು ಬಂತು. ಆಗ ಅವರು ಚಿಕ್ಕಬಳ್ಳಾಪುರದ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿದ್ದರು. ಆ ಸಂದರ್ಭದಲ್ಲಿ ನನಗೆ ಅವರ ಜೀವನದ ಮತ್ತೊಂದು ಪಾರ್ಶ್ವದ ದರ್ಶನವಾಯಿತು. ಕೃಷ್ಣಸ್ವಾಮಿ ಅಯ್ಯರವರು ಮನೆಯಲ್ಲಿ ಆದರ್ಶ ಕುಟುಂಬಿಗಳೂ ಸ್ಕೂಲಿನಲ್ಲಿ ಆದರ್ಶವಿದ್ಯಾಗುರುಗಳೂ ಆಗಿದ್ದದ್ದಲ್ಲದೆ ಊರಿನಲ್ಲಿ ಜನರ ಪೂರ್ಣಾನುರಾಗವನ್ನು ತಮ್ಮ ಕಡೆಗೆ ಸೆಳೆದು ಕೊಂಡಿದ್ದರು. ಚಿಕ್ಕಬಳ್ಳಾಪುರದ ಲಾಯರುಗಳು, ವರ್ತಕರುಗಳು- ಮುಂತಾದ ವರು ಇವರಲ್ಲಿ ಮಿಗಿಲಾದ ಗೌರವವನ್ನಿಟ್ಟುಕೊಂಡಿದ್ದರು. ಅದಕ್ಕೆ ಕಾರಣವು ಅಯ್ಯರವರ ದಿವ್ಯಸಂಭಾಷಣೆಯಿಂದ ಜನರಿಗೆ ಸಿಕ್ಕುತ್ತಿದ್ದ ಪರಮಲಾಭವೇ ಆಗಿತ್ತು. ಆ ಊರಿನ ರಾಮಮಂದಿರದಲ್ಲಿ ಜನರು ಮಾಡುತ್ತಿದ್ದ ಸತ್ಕಾಲಾಕ್ಷೇಪಕ್ಕೆ ಅವರಿಂದ ಒಂದು ಹೆಚ್ಚಿನ ಕಳೆಬಂದಿತ್ತು. ಆ ಮಂದಿರದಲ್ಲಿ ನನ್ನಿಂದ ಒಂದು ಚಿಕ್ಕ ಉಪನ್ಯಾಸವನ್ನು ಮಾಡಿಸಿ ಅವರು ಕಂಡ ಅಲ್ಪಗುಣವನ್ನೇ ಪ್ರಶಂಸೆಮಾಡಿ ವೇದಾಂತವಿಚಾರದಲ್ಲಿ ಮತ್ತೊಂದು ಹಜ್ಜೆಯನ್ನು ಮುಂದಿಡುವದಕ್ಕೆ ಪ್ರೋತ್ಸಾಹವನ್ನು ಕೊಟ್ಟರು.

ಆಮೇಲೆ ನಾನು ಅವರನ್ನು ಕಂಡದ್ದು ತುಮಕೂರಿನಲ್ಲಿ. ಇಷ್ಟುಹೊತ್ತಿಗೆ ನನಗೆ ವೇದಾಂತವಿಚಾರದಲ್ಲಿ ಸ್ವಲ್ಪ ಹೆಚ್ಚಿನ ಕುತೂಹಲವುಂಟಾಗಿತ್ತು. 'ಭಾಷ್ಯವನ್ನು ತಕ್ಕಮಟ್ಟಿಗೆ ಓದಿಕೊಂಡು ಚತುಸ್ಸೂತ್ರೀಭಾಗವನ್ನು ಕನ್ನಡಿಸಬೇಕೆಂದು ತವಕಿಸುತ್ತಿದ್ದೆನು. ಆದರೆ ಕೃಷ್ಣಸ್ವಾಮಿ ಅಯ್ಯರವರು ಅದನ್ನು ಆಗಲೆ ಅನುವಾದ

ಮಾಡಿರುತ್ತಾರೆಂದು ಕೇಳಿ ಆ ಅನುವಾದವು ಯಾವ ಭಾಷೆಯಲ್ಲಿದೆ ಎಂಬುದನ್ನು ತಿಳಿಯಬೇಕೆಂಬ ಇಚ್ಛೆಯಿಂದ ಅವರಲ್ಲಿಗೆ ಬಂದೆನು. ಅಯ್ಯರವರ ಮನೆಯವರು ಆಗತಾನೆ ಕೋಲಾರದಿಂದ ಬಂದಿಳಿದಿದ್ದರು. ಸಾಮಾನನ್ನು ಇಳಿಸಿಕೊಳ್ಳುವ ಗಡಿಬಿಡಿಯಲ್ಲಿದ್ದರೂ ಅವರು ಬಹು ಸಂತೋಷದಿಂದ ಬರಮಾಡಿಕೊಂಡು ತಾವು ಬೆಂಗಳೂರು ಮಿಥಿಕ್ ಸೊಸೈಟಿಯಲ್ಲಿ ಓದಿದ್ದ 'Fundamentals of Vedanta' (ವೇದಾಂತದ ಅಡಿಗಟ್ಟು) ಎಂಬ ಇಂಗ್ಲಿಷುಭಾಷಣದ ಪ್ರತಿಯನ್ನು ನನಗೆ ತೋರಿಸಿದರು. ಅದರಲ್ಲಿದ್ದ ವಿಚಾರಸರಣಿಯು ನನ್ನನ್ನು ಮುಗ್ಧನನ್ನಾಗಿ ಮಾಡಿಬಿಟ್ಟಿತು. ಶ್ರೀಗೌಡಪಾದರವರ ಮಾಂಡೂಕ್ಯಕಾರಿಕೆಯಲ್ಲಿದ್ದ ಅವಸ್ಥಾತ್ರಯಪರೀಕ್ಷೆಯ ಫಲಿತಾಂಶವನ್ನು ಪಾಶ್ಚಾತ್ಯವಿದ್ಯಾಸಂಸ್ಕಾರವುಳ್ಳವರಿಗೆ ತಕ್ಕ ಆಧುನಿಕ ಭಾಷೆಯಲ್ಲಿ ಇಷ್ಟು ಸ್ವಲ್ಪದರಲ್ಲಿ ಅತ್ಯಂತ ಸ್ಫುಟವಾಗಿ ವಿವರಿಸಿರುವ ಅಯ್ಯರವರು ಸಾಮಾನ್ಯ ವ್ಯಕ್ತಿಯಲ್ಲವೆಂಬುದು ನನ್ನ ಮನಸ್ಸಿನಲ್ಲಿ ಚೆನ್ನಾಗಿ ಮೂಡಿತು.

ನಾನು ಮತ್ತೊಂದು ಸಲ ಅಯ್ಯರವರ ದರ್ಶನವನ್ನು ತೆಗೆದುಕೊಂಡದ್ದು ಬೆಂಗಳೂರಿನಲ್ಲಿ. ಈಗ ನಾನು ಅವರ ಸಿಫಾರಸಿನ ಫಲವಾಗಿ ಬೆಂಗಳೂರಿನಲ್ಲಿ ಒಂದು ಮಿಡಲ್ ಸ್ಕೂಲಿನಲ್ಲಿ ಉಪಾಧ್ಯಾಯನಾಗಿ ಬಂದಿದ್ದೆನು. ಈಗ ನನಗೆ ಕೃಷ್ಣಸ್ವಾಮಿ ಅಯ್ಯರವರ ನಾನಾಮುಖವಾದ ಪಾಂಡಿತ್ಯವೂ ಪ್ರತಿಭೆಯೂ ದಾನಧರ್ಮಪರೋಪಕಾರ ಬುದ್ಧಿಗಳೂ ಜನಾನುರಾಗವೂ ವಿದ್ಯಾಪಕ್ಷಪಾತಿತ್ವವೂ ಇನ್ನಿತರಸಾಧಾರಣವಾದ ವೇದಾಂತವಿಚಾರನೈಪುಣ್ಯವೂ ಒಂದೊಂದಾಗಿ ಮನಸ್ಸಿಗೆ ಮಿಂಚಿದವು.

ಸಂಸ್ಕೃತ, ತಮಿಳು, ತೆಲಗು, ಇಂಗ್ಲಿಷು- ಈ ನಾಲ್ಕು ಭಾಷೆಗಳಲ್ಲಿ ಅವರಿಗೆ ಉತ್ತರೋತ್ತರವಾಗಿ ಹೆಚ್ಚಿನ ಪ್ರಾವೀಣ್ಯವಿತ್ತಲ್ಲದೆ ಕನ್ನಡದಲ್ಲಿ ಪ್ರೇಮವು ಆದರವೂ ಇತ್ತು. ಮನೆಯಲ್ಲಿ ಬಿಡುವಿದ್ದಾಗಲೆಲ್ಲ ಅವರು ಪಂಡಿತರೊಡನೆ ಗ್ರಂಥಕಾಲಕ್ಷೇಪವನ್ನು ಮಾಡುತ್ತಲೂ ರಸವತ್ತಾದ ಸಂಭಾಷಣೆಯನ್ನು ಮಾಡುತ್ತಲೂ ಹೊಸ ಲೇಖಕರುಗಳಿಗೆ ಯಥೋಚಿತವಾಗಿ ಉತ್ತೇಜನವನ್ನೂ ಪ್ರೋತ್ಸಾಹವನ್ನೂ ಕೊಡುತ್ತಲೂ ಇದ್ದರು. ಅವರಿರುವ ಸ್ಥಳವೇ ಒಂದು ವಿದ್ಯಾಸಭಾಮಂಟಪವೆಂಬಂತೆ ಶೋಭಿಸುತ್ತಿತ್ತು. ಜ್ಯೋತಿಷ, ಸಾಮುದ್ರಿತ, ಆಯುರ್ವೇದ, ವೇದಾಧ್ಯಯನ, ವ್ಯಾಕರಣಾಲಂಕಾರ - ಮುಂತಾದ

ವಿಷಯಗಳಲ್ಲಿ ನಿಪುಣರಾದವರೊಡನೆ ಸಂಭಾಷಣೆ ಮಾಡುವದು, ಅವರಿಗೆ ತಕ್ಕ ಸಹವಾಸವನ್ನೂ ಸಲಕರಣೆಯನ್ನೂ ಒದಗಿಸಿಕೊಡುವದು - ಮುಂತಾದ ರೀತಿಗಳಿಂದ ಪ್ರೋತ್ಸಾಹಿಸುವದೂ ಅವರಿಗೆ ಮೆಚ್ಚಿನ ಕಾರ್ಯಗಳಾಗಿರುತ್ತಿದ್ದವು. ದೃಶ್ಯಕಾವ್ಯ, ಶ್ರವ್ಯಕಾವ್ಯ - ಎರಡರಲ್ಲಿಯೂ ಅವರಿಗೆ ಅಭಿರುಚಿ; ಅವುಗಳಲ್ಲಿ ತಾವೂ ಲೇಖನಿಯನ್ನಾಡಿಸಿದವರಾದ್ದರಿಂದ ಬರಹಗಾರರೆಂದರೆ ಅವರಿಗೆ ಬಲು ಅಕ್ಕರೆ.

ಅಯ್ಯರವರು ಸಂಗೀತಕ್ಕೆ ತವರುಮನೆ. ಪಿಟೀಲು ಕೃಷ್ಣಸ್ವಾಮಿ ಅಯ್ಯರೆಂದೇ ಹಲವರು ಇಂದಿಗೂ ಅವರನ್ನು ಕರೆಯುವರು. ಅವರ ಮನೆಯಲ್ಲಿ ವೀಣೆ, ಕೊಳಲು, ಮೃದಂಗ - ಮುಂತಾದ ವಾದ್ಯಗಳ ಮತ್ತು ಚಿತ್ತಾರ್ಕರ್ಷಕವಾದ ಗಾನದ ಇಂಪಿನ ಧ್ವನಿಯು ಕಿವಿಗೆ ಕೇಳದಿರುವ ದಿನವೇ ಅಪೂರ್ವ. ಈ ವಿಷಯಕ್ಕೆ ಅವರ ಮನೆತನದವರೆಲ್ಲರೂ ಗಂಧರ್ವಾಂಶದವರೆಂದೇ ಹೇಳಬಹುದಾಗಿರುತ್ತದೆ. ಅವರು ಉತ್ತಮ ಸಂಗೀತವಿದ್ವಾಂಸರುಗಳ ಪರಿಚಯವುಳ್ಳವರಾಗಿದ್ದರೆಂಬುದೂ ಸಂಗೀತಗಾರರಿಗೆ ಬಗೆಬಗೆಯಿಂದ ಪ್ರೋತ್ಸಾಹವನ್ನು ಕೊಡುತ್ತಿದ್ದರೆಂಬುದೂ ಅನೇಕರಿಗೆ ತಿಳಿದಿರುವ ವಿಷಯಗಳು.

ತತ್ತ್ವಶಾಸ್ತ್ರ ವಿಚಾರವೆಂದರೆ ಅಯ್ಯರಿಗೆ ಪರಮಾದರ. ಪಾಶ್ಚಾತ್ಯತತ್ತ್ವಶಾಸ್ತ್ರವನ್ನು ಚಿಕ್ಕವಯಸ್ಸಿನಿಂದಲೂ ಅವರು ಅಭ್ಯಾಸಮಾಡುತ್ತಿದ್ದರೆಂದು ತಿಳಿಯಬಂದಿದೆ. ಡಾಯ್ಸನ್ ಎಂಬ ವಿದ್ವಾಂಸನು ಬರೆದಿರುವ Elements of Metaphysics (ಅತಿಭೌತಿಕವಿಚಾರಗಳ ಮೂಲತತ್ತ್ವಗಳು) ಎಂಬ ಗ್ರಂಥದ ವಿಮರ್ಶೆಯಾಗಿ ಬರೆದಿದ್ದ Critical Reflections (ವಿಮರ್ಶಾತ್ಮಕ ವಿಚಾರಗಳು) ಎಂಬ ಲೇಖನವನ್ನು ಆ ಗ್ರಂಥಕರ್ತನೇ ಓದಿ ಮೆಚ್ಚಿಕೆಯ ಉತ್ತರಪತ್ರವೊಂದನ್ನು ಅವರಿಗೆ ಬರೆದಿರುತ್ತಾನೆ. ವೇದಾಂತ ಶಾಸ್ತ್ರವೆಂಬುದಂತೂ ಅವರ ಹೃದಯವು, ವೇದಾಂತವನ್ನು ಅವರು ನಮ್ಮಗಳಂತೆ ಸಂಪ್ರದಾಯಗ್ರಂಥಗಳಿಂದ ಕ್ರಮಕ್ರಮವಾಗಿ ಓದಿ ಅಭ್ಯಾಸಮಾಡಿದವರಲ್ಲ; ಅವರ ವಿಚಾರದ ರಾಶಿಯು ಸಾರ್ವತ್ರಿಕಾನುಭವವೆಂಬ ಭದ್ರವಾದ ತಳಗಟ್ಟಿನ ಮೇಲೆ ನಿಂತಿರುವಂಥದ್ದು. ಅವರು ತಮಗೆ ಆಗಾಗ ಹೊಳೆದ ವೇದಾಂತಭಾವನೆಗಳನ್ನು ಗ್ರಂಥಗಳಲ್ಲಿಯೂ ದಿನಚರಿಯ ಪುಸ್ತಕಗಳಲ್ಲಿಯೂ ಬರೆದಿಟ್ಟಿರುತ್ತಾರೆ. ಆ ಲೇಖನರಾಶಿಯೊಂದು ತಿಳಿವಳಿಕೆಯ ಗನಿಯೆಂದರೆ ಅತ್ಯುಕ್ತಿಯಲ್ಲ. ಪುಸ್ತಕವೇದಾಂತಿಗಳೂಡನೆಯೂ

ಅನುಭವವೇದಾಂತಿಗಳೊಡನೆಯೂ ಚರ್ಚೆಮಾಡಿ ತತ್ತ್ವನಿರ್ಧಾರಣೆಮಾಡುವ ಉತ್ತಮಮಾರ್ಗವನ್ನು ಅವರು ಅವಲಂಬಿಸಿದ್ದರು. ಸ್ವಪ್ನದಲ್ಲಿ ತಮಗೆ ಶ್ರೀ ಶಂಕರಚಾರ್ಯರವರೇ ತತ್ತ್ವೋಪದೇಶವನ್ನು ಮಾಡಿದರೆಂದು ಅವರ ನಂಬಿಕೆಯಿತ್ತು. ಬೆಂಗಳೂರಿನಲ್ಲಿ ಸುಪ್ರಸಿದ್ಧವಿದ್ವಾಂಸರಾಗಿದ್ದ ಶ್ರೀ ಮೋಟಗಾನಹಳ್ಳಿ ಶಂಕರಶಾಸ್ತ್ರಿಗಳೊಡನೆ ಬಹುಕಾಲ ವಿಚಾರಗೋಷ್ಠಿಯ ಸುಖವನ್ನನುಭವಿಸುತ್ತಿದ್ದರೆಂದೂ ಸಾಧುಶ್ರೇಷ್ಠರಾದ ಅನಂತಪ್ಪಮಹಾರಾಜರವರ ಉಪದೇಶಗಳನ್ನು ಪೂಜ್ಯಬುದ್ಧಿಯಿಂದ ಸ್ವೀಕರಿಸಿದ್ದರೆಂದೂ ಅವರ ಹೇಳಿಕೆಯಿಂದಲೂ ಬರವಣಿಗೆಯಿಂದಲೂ ತಿಳಿಯಬಂದಿರುತ್ತದೆ. ಶಾಂಕರವೇದಾಂತದಲ್ಲಿ **ಮೂಲಾವಿದ್ಯಾವಾದವನ್ನು** ವ್ಯಾಖ್ಯಾನಕಾರರು ಹೊಸದಾಗಿ ಸೇರಿಸಿರುವರೆಂಬುದನ್ನು ನನ್ನ ಲಕ್ಷ್ಯಕ್ಕೆ ತಂದವರು ಅಯ್ಯರವರೇ; ಅವರೊಡನೆ ಮಾಡಿದ ಚರ್ಚೆಯ ಫಲಿತವಾಗಿಯೇ ನಾನು ಭಾಷ್ಯವನ್ನೂ ವ್ಯಾಖ್ಯಾನಗ್ರಂಥಗಳನ್ನೂ ವಿಮರ್ಶನಾ ದೃಷ್ಟಿಯಿಂದ ಓದಿ ಅವರ ಪ್ರೇರಣೆಯಿಂದಲೇ '**ಮೂಲಾವಿದ್ಯಾನಿರಾಸ ಅಥವಾ ಶಂಕರಹೃದಯ**' ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ಬರೆದೆನು. ನಮ್ಮಿಬ್ಬರಿಗೂ ಆದ ಚರ್ಚೆಯಲ್ಲಿ ಎಷ್ಟೋ ವಿಷಯಗಳು ಅಯ್ಯರವರ ಮುಖದಿಂದ ನನಗೆ ಮನವರಿಕೆಯಾದ ಬಳಿಕವೇ ಭಾಷ್ಯದಲ್ಲಿಯೂ ಅವು ಇರುವವೆಂಬುದು ನನಗೆ ತಿಳಿಯಬರುತ್ತಿತ್ತು. ಸ್ವಾನುಭವದಿಂದಲೇ ಭಾಷ್ಯದ ಹಲವು ವಿಷಯಗಳನ್ನು ಹೊರಗೆಡಹುತ್ತಿದ್ದ ಅವರನ್ನು ನಾನು ಋಷಿಸಮಾನರೆಂದು ಭಾವಿಸಿದ್ದರೆ ಆಶ್ಚರ್ಯವೇನು?

**ಅಧ್ಯಾತ್ಮಪ್ರಕಾಶಮಾಸಪತ್ರಿಕೆ**[1]ಯ ಮೊದಲನೆಯ ಎರಡನೆಯ ಸಂಪುಟಗಳಲ್ಲಿ ಅವರು ಬರೆದಿರುವ ಹಲವು ಲೇಖನಗಳಲ್ಲಿ ಅವರ ಕನ್ನಡಶೈಲಿಯ ಲಾಲಿತ್ಯವೂ ಗಂಭೀರವಾದ ವಿಷಯಗಳನ್ನು ಹೃದಯಂಗಮವಾದ ಕಥೆಯ ಅಥವಾ ಸಂಭಾಷಣೆಯ ಅನುಪಾನದಿಂದ ಸವಿಗಟ್ಟಾಗಿ ಮಾಡುವ ಚಾತುರಿಯೂ ಎದ್ದುಕಾಣುವವು. ಇಂಗ್ಲಿಷಿನ ವೇದಾಂತಕೇಸರಿಯಲ್ಲಿ ಅವರ ಅನೇಕ ತತ್ತ್ವವಿಚಾರದ ಪ್ರೌಢಲೇಖನಗಳು ಬಂದಿರುತ್ತವೆ. ಶ್ರೀರಾಮಕೃಷ್ಣ ಪರಮಹಂಸರವರ ಶತಮಾನೋತ್ಸವದ ಸ್ಮಾರಕವಾಗಿ ಪ್ರಕಾಶವಾಗಿರುವ 'The

---

1. ಆ ಲೇಖನಗಳನ್ನೆಲ್ಲ ಸಂಗ್ರಹಿಸಿ ವೇದಾಂತಲೇಖನಗಳು (ಕೆ. ಎ. ಕೃಷ್ಣಸ್ವಾಮಿಅಯ್ಯರ್) ಎಂಬ ಶೀರ್ಷಿಕೆಯಲ್ಲಿ ಅ.ಪ್ರ.ಕಾರ್ಯಾಲಯದಿಂದ ಪ್ರಕಟಿಸಲಾಗಿದೆ.

Cultural Heritage of India' (ಭರತಖಂಡದ ಸಂಸ್ಕೃತಿಯ ಪಿತ್ರಾರ್ಜಿತ) ಎಂಬ ಮಹಾನಿಬಂಧಮಾಲೆಯಲ್ಲಿ 'The Philosophy of Advaita or Nondualism' (ಅದ್ವೈತಸಿದ್ಧಾಂತ) ಎಂಬ ಹೆಸರಿನ ಒಂದು ಉತ್ತಮ ನಿಬಂಧವಿರುತ್ತದೆ. 'The Drumbeat of Angels' (ದೇವತೆಗಳ ಡಂಗುರ) 'Uma's Mirror' (ಉಮಾದರ್ಶ) ಎಂಬ ಎರಡು ಇಂಗ್ಲಿಷುಕಾವ್ಯಗಳು ಅಚ್ಚಾಗಿವೆ. ಡಾಕ್ಟರು ಎಂ. ಶ್ರೀನಿವಾಸರಾಯರೊಡನೆ ಅವರು ಇಂಗ್ಲಿಷಿನಲ್ಲಿ ಪ್ರಕಟಿಸಿರುವ ಪಂಚದಶಿಯಲ್ಲಿರುವ ಅಮೋಘವಾದ ಟಿಪ್ಪಣಿಗಳು ಅವರ ವಿಚಾರದ ಪ್ರೌಢಿಮೆಯನ್ನು ವ್ಯಕ್ತಗೊಳಿಸುತ್ತವೆ. ಎಲ್ಲಕ್ಕೂ ಮೇಲಾಗಿ **'Vedanta or The Science of Reality'**[1] (ವೇದಾಂತವೆಂಬ ಪರಮಾರ್ಥವಿಜ್ಞಾನಶಾಸ್ತ್ರವು) ಎಂಬ ಗ್ರಂಥರತ್ನವಂತೂ ವೇದಾಂತಚಕ್ರವರ್ತಿಯ ಕಿರೀಟದಲ್ಲಿ ಶೋಭಿಸುವ ಅನರ್ಘವಾದೊಂದು ವಜ್ರದಂತೆ ಇರುತ್ತದೆ. ಶಾಂಕರ ಸಿದ್ಧಾಂತವನ್ನು ಭದ್ರವಾದ ಯುಕ್ತ್ಯನುಭವಗಳ ತಳಗಟ್ಟಿನಮೇಲೆ ನಿಲ್ಲಿಸುವದಕ್ಕೆ ಶ್ರೀಕೃಷ್ಣಸ್ವಾಮಿ ಅಯ್ಯರವರು ಮಾಡಿರುವ ಸಾಹಸವು ಮನನಶೀಲರಾದ ಜಿಜ್ಞಾಸುಗಳು ಹಲವು ಶತಮಾನಗಳ ವರೆಗೆ ಕೃತಜ್ಞತೆಯಿಂದ ಕೊಂಡಾಡತಕ್ಕದ್ದಾಗಿರುವದೆಂಬುದು ಅದೊಂದು ಗ್ರಂಥದಿಂದಲೇ ಸುಸ್ಪಷ್ಟವಾಗುತ್ತದೆ.

ಇಂಥ ಮಹಾವಿಭೂತಿಗಳ ಜೀವನಚರಿತ್ರೆಯನ್ನು ವಿಸ್ತಾರವಾಗಿ ಬರೆದು ಪ್ರಕಟಿಸುವದು ಅವರಲ್ಲಿ ಪ್ರೇಮಾದರವುಳ್ಳ ಅನುಬಂಧಿಗಳು ಮತ್ತು ಶಿಷ್ಯರ ಅವಶ್ಯಕರ್ತವ್ಯವಾಗಿರುತ್ತದೆ. ಹಾಗೆ ಮಾಡುವದರಿಂದ ನಮ್ಮ ದೇಶದ ಯುವಕರಿಗೆ ಒಂದುಉತ್ತಮವಾದಜೀವನಧ್ಯೇಯವನ್ನುದೊರಕಿಸಿಕೊಟ್ಟಪುಣ್ಯವೂಲಭಿಸುತ್ತದೆ. ಆದ್ದರಿಂದ ಈ ಮಂಗಳಚರಿತ್ರೆಯ ವಿಶೇಷಾಂಶಗಳು ಯಾರುಯಾರಿಗೆ ಎಷ್ಟೆಷ್ಟು ತಿಳಿದಿದ್ದರೂ ಅಷ್ಟಷ್ಟನ್ನು ತಿಳಿಸಿಕೊಟ್ಟು ಉಪಕಾರಮಾಡಬೇಕೆಂದು ಸರಗೊಡ್ಡಿ ಬೇಡಿಕೊಳ್ಳುತ್ತೇನೆ. ಅಯ್ಯರವರ ಕುಟುಂಬದವರಿಗೆಲ್ಲರಿಗೂ ಅವರ ಅಗಲಿಕೆಯಿಂದಾಗಿರುವ ದುಃಖವನ್ನು ತಡೆದುಕೊಳ್ಳುವ ಶಕ್ತಿಯನ್ನು ಪರಮೇಶ್ವರನು ಅನುಗ್ರಹಿಸಲಿ. ಅವರು ಬರೆದಿಟ್ಟಿರುವ ಗ್ರಂಥಗಳನ್ನು ಪ್ರಕಟಿಸುವದಕ್ಕೂ ಅಚ್ಚುಮಾಡಿಸಿರುವ ಪುಸ್ತಕಗಳನ್ನು ಪ್ರಚಾರಮಾಡುವದಕ್ಕೂ ಅವರ ಮೆಚ್ಚಿಗೆಯ ಶಿಷ್ಯರಿಗೂ ಇಷ್ಟಮಿತ್ರರಿಗೂ ಆ ಭಗವಂತನು ಪ್ರೇರಣೆಯನ್ನುಂಟುಮಾಡಲಿ!

ಆ ಮಹನೀಯರು ವೇದಾಂತ ವಿಚಾರಕ್ಕೆ ಉಂಟುಮಾಡಿರುವ ವಿಚಾರಪ್ರಚೋದನೆಯ ಫಲವು ವೇದಾಂತಿಗಳ ಹೃದಯದಲ್ಲಿ ಸ್ಥಿರವಾಗಿ ನೆಲಸಲಿ!

**ವಿದ್ಯಾಮರ್ಥಂ ಚ ದಾರಾನ್ ಸುಕ್ರತಮಪಿ ಗೃಹಂ ಪುತ್ರಪೌತ್ರಾಭಿವೃದ್ಧಿಂ**
**ಸಂಪಾದ್ಯೈವಂ ಸ್ವಧರ್ಮಾಚರಣಮಥ ವಿಭೋರರ್ಚನಂ ಸಂವಿಧೇಯಮ್ ।**
**ದಾನಂ ದಾನ್ತಿರ್ದಯೈವಂ ನಿಜಪರಸಮತಾಬುದ್ಧಿರಪ್ಯೇವಮೇವಂ**
**ಸ್ವಾಚಾರೇಣೈವ ದೇಷ್ಟಾ ಬತ ಕಥಮಿಹ ನೋ ದೃಶ್ಯತಾಮೇತಿ ಕೃಷ್ಣಃ ॥ 1 ॥**

ವಿದ್ಯೆಯನ್ನೂ ಅರ್ಥವನ್ನೂ ಹೆಂಡತಿ, ಪುಣ್ಯಕರ್ಮ, ಮನೆ, ಮಕ್ಕಳ, ಮೊಮ್ಮಕ್ಕಳ ಅಭಿವೃದ್ಧಿ – ಇದೆಲ್ಲವನ್ನೂ ಹೀಗೆ ಸಂಪಾದನೆಮಾಡಿ ಸ್ವಧರ್ಮಾಚರಣೆಯನ್ನು ಪರಮೇಶ್ವರಪೂಜೆಯಾಗಿ ಮಾಡಬೇಕು. ದಾನವೆಂದರೆ ಹೀಗೆ, ದಾಂತಿಯೆಂದರೆ ಹೀಗೆ, ದಯೆಯೆಂದರೆ ಹೀಗೆ, ತನ್ನವರಲ್ಲಿಯೂ ಮತ್ತೊಬ್ಬರಲ್ಲಿಯೂ ಸಮತ್ವಬುದ್ಧಿಯನ್ನಿಡುವದು ಹೀಗೆ – ಎಂದೀ ಪರಿಯಲ್ಲಿ ತನ್ನ ಆಚಾರದಿಂದಲೇ ಉಪದೇಶಮಾಡುವ ಕೃಷ್ಣನು, ಅಯ್ಯೋ, ನಮಗೆ ಇಲ್ಲಿ ಹೇಗೆ ದೃಶ್ಯವಾಗುವನು?

**ಕಾವ್ಯನಾಟಕಸಂಗೀತತತ್ತ್ವಶಾಸ್ತ್ರಾಬ್ಧಿಚನ್ದ್ರಮಾಃ ।**
**ಸಂಸ್ಕೃತದ್ರಾವಿಡಾನ್ಧ್ರಜ್ಗ್ಲಭಾಷಾಭೂಷಣಭಾರತೀ ॥2॥**

**ನಿತ್ಯಾನನ್ದಪ್ರದಾದ್ವೈತ ವೇದಾನ್ತಾಬ್ಜವಿಭಾವಸುಃ ।**
**ಕಷ್ಣಾರ್ಯೋ ವಿಷ್ಣುಪದವೀಂ ಪ್ರಾಪ್ತಃ ಕೃಷ್ಣ ಇವಾವರಃ ॥3॥**

ಕಾವ್ಯ, ನಾಟಕ, ಸಂಗೀತ, ತತ್ತ್ವಶಾಸ್ತ್ರ– ಎಂಬ ಕಡಲನ್ನುಕ್ಕೇರಿಸುವ ಸಂಸ್ಕೃತ, ತಮಿಳು, ತೆಲಗು, ಇಂಗ್ಲಿಷ್ – ಎಂಬ ಭಾಷೆಗಳೆಂಬ ಅಲಂಕಾರಗಳಿಂದೊಪ್ಪುವ ಸರಸ್ವತಿಯೂ ನಿತ್ಯಾನಂದವನ್ನು ಕೊಡುವ ವೇದಾಂತಕಮಲವನ್ನರಳಿಸುವ ಸೂರ್ಯನೂ ಆದ ಕೃಷ್ಣಾರ್ಯನು ಮತ್ತೊಬ್ಬ ಕೃಷ್ಣನೋ ಎಂಬಂತೆ ವಿಷ್ಣುಪದವಿಯನ್ನು ಪಡೆದಿರುತ್ತಾನೆ.

★★★★★

# ಮಹಾಪುರುಷರೊಬ್ಬರ ಅಂತರ್ಧಾನ

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳವರು**

ಭರತಖಂಡದ ದಿವ್ಯಜ್ಯೋತಿಯೊಂದು 1967 ಆಗಸ್ಟ್ 20ರ ಮಧ್ಯಾಹ್ನ 2-30 ಘಂಟೆಯ ಸಮಯದಲ್ಲಿ ಕಣ್ಮರೆಯಾಯಿತು. ಅದನ್ನು **ಕರವೀರಪೀಠದ ಶ್ರೀಶಂಕರಾಚಾರ್ಯರು, ಡಾ|| ಕುರ್ತಕೋಟಿ, ಶ್ರೀಮಹಾಭಾಗವತರು** - ಎಂಬ ವಿವಿಧಾಭಿಧಾನಗಳಿಂದ ಜನರು ಕರೆಯುತ್ತಿದ್ದರು. ಅವರಲ್ಲಿ ಪೂಜ್ಯಬುದ್ಧಿಯನ್ನಿಟ್ಟು ಕೊಂಡು ಅವರ ಸಹವಾಸ ಮತ್ತು ಉಪದೇಶ ಇವುಗಳಿಂದ ಸ್ಫೂರ್ತಿಯನ್ನು ಪಡೆದ ಹಲವರಲ್ಲಿ ನಾನೂ ಒಬ್ಬನು. ಅವರ ಪ್ರಥಮದರ್ಶನವಾದಾಗಿನಿಂದ ಇಲ್ಲಿಯವರೆಗೂ ಅವರು ನನಗೆ '**ಮಹಾಭಾಗವತರೇ**' ಆಗಿರುತ್ತಾರೆ.

ಘಟನೆಗಳು ಮುಖ್ಯವಾಗಿದ್ದಂತೆ ಸಂವತ್ಸರಕಾಲಮಾನವು ಅಷ್ಟಾಗಿ ನನ್ನ ಮನಸ್ಸಿನ ಮೇಲೆ ಮುದ್ರೆಯನ್ನೊತ್ತಿರುವದಿಲ್ಲ. ಆದ್ದರಿಂದ ಇಲ್ಲಿ ನಾನು ಪರಾಮರ್ಶಿಸಿರುವ ವರ್ಷ(ಇಸವಿ)ಗಳ ಸಂಖ್ಯೆಯೆಲ್ಲವೂ ಸುನಿಶ್ಚಿತವೆನ್ನಲಾರೆ, ವಿಭೂತಿ ಪುರುಷರನ್ನು ನಾನು ಮೊಟ್ಟ ಮೊದಲು ಕಂಡದ್ದು ಸುಮಾರು 1910ರಲ್ಲಿರಬೇಕು. ನನ್ನ ಸ್ನೇಹಿತರೊಬ್ಬರು ಯಜ್ಞಾದಿಕರ್ಮಗಳ ವಿಷಯದಲ್ಲಿ ಅವರಿಗೆ ಅನಾದರವೆಂದು ಹೇಳಿದ್ದರು, ಕರ್ಮಗಳಲ್ಲಿ ಶ್ರದ್ಧಾಜಾಡ್ಯವುಳ್ಳ ನಾನು ಅವರೊಡನೆ ಚರ್ಚೆಮಾಡಬೇಕೆಂಬ ಅಭಿಮಾನದಿಂದಲೇ ಅವರಲ್ಲಿಗೆ ಹೋದೆನು. ಆಗ್ಗೆ ನನ್ನ ಸ್ನೇಹಿತರು ದಿ|| ಹೊಸಕೆರೆ ಚಿದಂಬರಯ್ಯನವರೂ ನನ್ನೊಡನೆ ಬಂದಿದ್ದರು. ಅವರಿಗೆ ಯೋಗಾಭ್ಯಾಸದಲ್ಲಿ ಒಲವು, ಆ ಮಹಾವಿಭೂತಿ ಪುರುಷರ ದರ್ಶನಮಾತ್ರದಿಂದ ನಮ್ಮಿಬ್ಬರಿಗೂ 'ನಷ್ಟೋ ಮೋಹಃ' ಎಂಬ ಅನುಭವವಾಯಿತು. ಬಂದವರನ್ನೆಲ್ಲ 'ಸಂಧ್ಯಾವಂದನೆಯಾಯಿತೊ?' ಎಂದು ಕೇಳುತ್ತಿದ್ದ ಅವರನ್ನು ಕರ್ಮವಿರೋಧಿಗಳೆನ್ನುವದು ಹೇಗೆ ಸರಿಯಾದೀತು ?- ಎಂದುಕೊಂಡೆನು. ಗೋಂದಾವಳಿಯ ಮಹಾರಾಜರು ಬರಿಯ ನಾಮಸ್ಮರಣೆಯನ್ನೇ ಹೇಳುತ್ತಾರೆಯೆ? ಎಂದು ಚಿದಂಬರಯ್ಯನವರು ಕೇಳಿದ್ದಕ್ಕೆ 'ಅವರವರಿಗೆ ತಕ್ಕಂತೆ ಹೇಳುತ್ತಾರೆ, ಕೆಲವರಿಗೆ ಪ್ರಾಣಾಯಾಮಾದಿಗಳನ್ನೂ ಹೇಳುತ್ತಾರೆ' ಎಂದುಬಿಟ್ಟರು. ನನ್ನ ಮಿತ್ರರಿಗೆ

ಅದೇ ಬೇಕಾಗಿತ್ತು. ಆ ಮಹಾತ್ಮರು ಗಗನಾಚಾರ್ಯರಲ್ಲಿ ಯೋಗಾಭ್ಯಾಸವನ್ನು ಮಾಡಿದ್ದರೆಂದು ಹಿಂದಿನಿಂದ ತಿಳಿಯಿತು.

1911ರಲ್ಲಿ ದಾವಣಗೆರೆಗೆ ಅವರು ದಯಮಾಡಿಸಿದ್ದಾಗ ನಾನು ಮನೆಗೆ ಕರೆದುಕೊಂಡುಹೋಗಿ ಸತ್ಕಾರವಾಡಲು ಪ್ರಯತ್ನಿಸಿದಾಗ 'ಉಪಚಾರದ ನೆಪದಿಂದ ಮಾಡಿದ ಅಪಚಾರಗಳನ್ನೆಲ್ಲ ಕ್ಷಮಿಸು' ಎಂದು ಧರ್ಮರಾಯನು ಶ್ರೀಕೃಷ್ಣನಲ್ಲಿ ಪ್ರಾರ್ಥಿಸಿದ ವಾಕ್ಯವು ನೆನಪಿಗೆ ಬಂತು. ಅವರ ಸರಳತನವನ್ನೂ ತಮ್ಮಲ್ಲಿಗೆ ಬಂದವರಲ್ಲಿ ಅವರು ಇಡುತ್ತಿದ್ದ ಅಭಿಮಾನವು ಎಂಥದ್ದೆಂಬುದನ್ನೂ ಮನಗಂಡೆನು. ನಾನು ಆಗಿಂದಾಗ್ಗೆ ಕುರ್ತಕೋಟಿ, ಧಾರವಾಡಗಳಿಗೆ ಹೋಗಿ ಬರುತ್ತಿದ್ದೆನು. ದಿ|| ಹೆಚ್. ಚಿದಂಬರಯ್ಯನವರು ಆಗ್ಗೆ ಮಹಾಭಾಗವತರ '**ಅಷ್ಟೋತ್ತರ ಶತಶ್ಲೋಕೀ**' ಎಂಬ ಸಂಸ್ಕೃತ ಗ್ರಂಥಕ್ಕೆ '**ಭಕ್ತಿದೀಪಿಕೆ**' ಎಂಬ ಹೆಸರಿನಿಂದ ಬರೆದ ಕನ್ನಡಪದ್ಯಾನುವಾದಕ್ಕೆ ನನ್ನ ಟಿಪ್ಪಣಿಯಿದ್ದುದನ್ನು ಕಂಡಾಗ ಅವರು ನಮ್ಮಿಬ್ಬರನ್ನೂ ಪ್ರೋತ್ಸಾಹಿಸುತ್ತಾ ಅಧ್ಯಾತ್ಮವಿಚಾರದ ಬರವಣಿಗೆಗೆ ಕೈ ಹಾಕುವಂತೆ ಮಾಡಿದರು. ಕಾಲಡಿಯಲ್ಲಿ ಶ್ರೀಶಂಕರಾಚಾರ್ಯರವರ ಮೂರ್ತಿ ಪ್ರತಿಷ್ಠೆಯಾದಾಗ ಶ್ರೀಶೃಂಗೇರೀಪೀಠಾಧಿಪ **ಶ್ರೀಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀಸ್ವಾಮಿಗಳವರಿಂದ** ಭಾಷ್ಯಶಾಂತಿಯನ್ನು ಮಾಡಿಸಿಕೊಳ್ಳುವದಕ್ಕೂ ಅಲ್ಲಿಂದ ಬಂದನಂತರ **ಗೋಂದಾವಳಿಯ ಶ್ರೀಬ್ರಹ್ಮಚೈತನ್ಯ ಸದ್ಗುರುಮಹಾರಾಜರವರ** ದರ್ಶನವನ್ನು ಪಡೆಯುವದಕ್ಕೂ ನನ್ನನ್ನು ಪ್ರೋತ್ಸಾಹಿಸಿದ್ದು ಅವರೇ. ಧಾರವಾಡದಲ್ಲಿ ಅವರು ಮಾಡಿದ ಉಪನ್ಯಾಸಗಳನ್ನು ಕನ್ನಡದಲ್ಲಿ '**ಭಗವದ್ಗೀತಾ ಸಾರವಿಚಾರ**' ಎಂಬ ಹೆಸರಿನಿಂದ ಶ್ರೀ ಚಿದಂಬರಯ್ಯನವರು ಹೊರಕ್ಕೆ ತಂದರು. ಹುಬ್ಬಳ್ಳಿಯ ಶ್ರೀಶಂಕರಜಯಂತಿ ಉತ್ಸವಕ್ಕೆ ಹೋದಾಗ ಅವರ ಪ್ರೋತ್ಸಾಹದಿಂದ ನಾನು ಅವರ ಕೆಲವು ಉಪನ್ಯಾಸಗಳನ್ನು "The Highest Goal of Human Life" (ಪರಮಪುರುಷಾರ್ಥ), "Spiritual Knowledge" (ಅಧ್ಯಾತ್ಮಜ್ಞಾನ) ಎಂಬ ಹೆಸರಿನ ಗ್ರಂಥಗಳ ರೂಪದಿಂದ ಇಂಗ್ಲಿಷಿನಲ್ಲಿ ಬರೆದೆನು.

ದಾವಣಗೆರೆಯಿಂದ ಕಳೂರುಕಟ್ಟೆಗೆ (ಹೊಸನಗರಕ್ಕೆ) ನನಗೆ ವರ್ಗವಾದ ಮೇಲೆ ಸುಮಾರು ಒಂದು ವರ್ಷಕ್ಕಿಂತ ಹೆಚ್ಚಾಗಿಯೇ ರಜದಲ್ಲಿದ್ದು ಮಹಾಭಾಗವತರ ಛಾಯಾನುವರ್ತಿಯಾಗಿ ಕಾಲವನ್ನು ಕಳೆದೆನು. ಆಗ್ಗೆ ಕುರ್ತಕೋಟಿ, ಧಾರವಾಡ, ಬೊಂಬಾಯಿ, ತಿರುವಾದಿ, ತಂಜಾವೂರು, ಮಧುರೆ, ರಾಮೇಶ್ವರ

ಮುಂತಾದ ಕಡೆಗಳಲ್ಲಿ ಸಂಚರಿಸುತ್ತಿದ್ದೆನು. ಅವರ ಪ್ರತಿಭೆ, ಸಂಸ್ಕೃತದಲ್ಲಿದ್ದ ವಿದ್ವತ್ತು, ಲೋಕಸಂಗ್ರಹವನ್ನು ಮಾಡುವ ಕರ್ತವ್ಯನಿಷ್ಠೆ – ಈ ಎಲ್ಲವುಗಳ ಅರಿವು ನನಗೆ ಆದದ್ದು ಆಗಲೇ. 'ಹಿಂದೂ ಮಿಷನೆರಿ' ಎಂದು ಅವರಿಗೆ ಒಂದು ಮೊದಲನೆಯ ತರಗತಿಯ ರೈಲ್ವೆ ಪಾಸು ಬಂದಿತ್ತು; ಅವರ ಸೇವಕನಾಗಿ ಜೊತೆಯಲ್ಲಿ ಒಮ್ಮೆ ನಾನೂ ಬೊಂಬಾಯಿಗೆ ಹೋಗಿದ್ದೆನು. Study of Sanskrit ಎಂಬ ಪುಸ್ತಕವನ್ನು ನನ್ನಿಂದ ಬರೆಯಿಸಿ ಕೊನೆಗೆ ಅದನ್ನು ತಮ್ಮದಾಗಿಯೇ ಮಾಡಿ ಕೊಂಡು ಪ್ರಕಟನೆಗೆ ತಂದದ್ದು ಆ ಕಾಲದಲ್ಲಿಯೇ ಆಗಿರಬೇಕೆಂದು ತೋರುತ್ತದೆ.

1915ರಲ್ಲಿ ಅವರು ಬೆಂಗಳೂರಿನಲ್ಲಿ 'Sanskrit Academy' ಎಂಬ ಸಂಸ್ಕೃತಚಿಂತನೆಯ ಮಹಾಸಂಸ್ಥೆಯೊಂದನ್ನು ಸ್ಥಾಪಿಸಿದರು. ಅದರ ಸಮಿತಿಯಲ್ಲಿ ಭಾರತದೇಶದ ವಿವಿಧ ಪ್ರಾಂತ್ಯಗಳ ಘನವಿದ್ವಾಂಸರುಗಳು ಸದಸ್ಯರಾಗಿದ್ದರು. **ಕುರ್ತಕೋಟಿ ಪಂಡಿತ ಲಿಂಗೇಶಮಹಾಭಾಗವತರು** M.R.A.S., **ವಿದ್ಯಾಭೂಷಣ, ವೇದಾಂತವಾಚಸ್ಪತಿ** ಎಂಬ ಹೆಸರಿನಿಂದ ಅವರ ಸಂಪಾದಕತ್ವದಲ್ಲಿ ಹೊರಟ San-skrit Research" (ಸಂಸ್ಕೃತಸಂದೇಶಃ) ಎಂಬ ನಾನು ಧೇಯದ ಆಂಗ್ಲ ಸಂಸ್ಕೃತ ಭಾಷಾಪತ್ರಿಕೆಯ ಕೆಲವು ಸಂಚಿಕೆಗಳು ಈಗಲೂ ನನ್ನಲ್ಲಿವೆ. ಆ ಪತ್ರಿಕೆಗೆ ನಾನೂ ಶಂಕರಾಚಾರ್ಯರನ್ನು ಕುರಿತ ಲೇಖನವೊಂದನ್ನು ಬರೆದಿದ್ದೆನು. ಈ ಸಂಸ್ಥೆಗೆ ಬರೋಡೆಯ ಮಹಾರಾಜರಾದ **ಶ್ರೀಮಂತ ಸಯಾಜಿ ರಾವ ಗಾಯಕವಾಡ**ರವರೇ ಮೊದಲಾದವರು ಒಮ್ಮೊಮ್ಮೆ ಬರುತ್ತಿದ್ದರು.

1915ರಲ್ಲಿಯೇ ಇರಬಹುದು, ಹೊಳಲ್ಕೆರೆಯಲ್ಲಿ ನಾನಿದ್ದಾಗ ಮಹಾಭಾಗವತರು ಕಾರಣಾಂತರದಿಂದ ಬಂದು ನನ್ನ ಮನೆಯಲ್ಲಿಯೇ ಇಳಿದುಕೊಂಡಿದ್ದರು. ಆಗ ಅವರು ದಾಸನವಮಿಯ ನಿಮಿತ್ತದಿಂದ ಅಲ್ಲಿ ಮಾಡಿದ '**ಚೋಖಾಮೇಳ**'ನ **ಕೀರ್ತನೆ**, ಊರಿನ ಮಾರುತಿಯದೇವಾಲಯದಲ್ಲಿ ರಾತ್ರಿ ಸುಮಾರು 11 ಘಂಟೆಯ ಹೊತ್ತಿನಲ್ಲಿ ಹೇಳಿದ **ಶ್ರೀಸಮರ್ಥರಾಮದಾಸರ ಜೀವನಚರಿತ್ರೆಯನ್ನು ಕುರಿತಭಾಷಣ**– ಇವುಗಳು ಶ್ರೋತೃಗಳ ಹೃದಯದಲ್ಲೆಲ್ಲ ವಿದ್ಯುತ್ಸಂಚಾರ ವಾದಂತೆ ಪ್ರಚೋದಕವಾಗಿದ್ದವು.

**ತಿರುವಾದಿಯ ಪರಿಷತ್ತಿನಲ್ಲಿ ಅವರು ಮಾಡಿದ ಸಂಸ್ಕೃತಭಾಷಣವು** ಸಭೆಯಲ್ಲಿ ನೆರೆದಿದ್ದ ನೂರಾರು ಸಂಸ್ಕೃತ ವಿದ್ವಾಂಸರನ್ನಲ್ಲದೆ ಇಂಗ್ಲಿಷುಮಾತ್ರವೇ

ಪರಿಚಯವುಳ್ಳ ಶ್ರೋತೃಗಳನ್ನೂ ಬೆರಗುಮಾಡಿತು. ಮಾರನೆಯ ದಿನ ಇಂಗ್ಲಿಷು ವೃತ್ತಾಂತಪತ್ರಿಕೆಗಳಲ್ಲಿ ಪ್ರಕಟವಾಗಿದ್ದ ಆ ಭಾಷಣವನ್ನು ಓದುವದಕ್ಕೆ ಜನರು ತೋರಿದ ಕುತೂಹಲವು ಇನ್ನೂ ನನ್ನ ಮನಸ್ಸಿನಮೇಲೆ ಅಚ್ಚದಂತೆ ನಿಂತಿದೆ. ಆ ಭಾಷಣವೂ, ಅಷ್ಟು ಹೊತ್ತಿಗೆ **Heart of the Bhagavadgita** ಎಂಬ ಗ್ರಂಥಕ್ಕೆ **ಅಮೆರಿಕಾದ ಹಾರ್ವರ್ಡ್‌ರ ಸಕಲವಿದ್ಯಾನಿಲಯದಿಂದ** ಅವರಿಗೆ ಬಂದಿದ್ದ **ಡಾಕ್ಟರೇಟ್ ಪ್ರಶಸ್ತಿ**ಯೂ ಎಲ್ಲೆಲ್ಲಿಯೂ ಹರಡಿದ್ದ ಅವರ ಕೀರ್ತಿಯೂ ಕೊಲ್ಲಾಪುರದ ಮಹಾರಾಜರವರ ಮನಸ್ಸಿನಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿತೆಂದು ಕಾಣುತ್ತದೆ. 1917ರಲ್ಲಿ ಅವರು ಮಹಾರಾಜರ ಮತ್ತು ಮಹಾ ಜನರ ಪ್ರಾರ್ಥನೆಯಂತೆ ''**ಕರವೀರಪೀಠದ ಶ್ರೀಶಂಕರಾಚಾರ್ಯರಾದರು**''. ನಾನು ಅಲ್ಲಿಗೂ ಒಮ್ಮೆ ಹೋಗಿ ದರ್ಶನವನ್ನು ಪಡೆದು ಎರಡುದಿನಗಳಿದ್ದು ಬಂದೆನು.

ಮಹಾರಾಜರಿಗೂ ಶ್ರೀಶಂಕರಾಚಾರ್ಯ ಡಾ|| ಕುರ್ತಕೋಟಿಯವರಿಗೂ ಕುಲಕರ್ಣಿಗಳನ್ನು ಉದ್ಯೋಗದಿಂದ ನಿವೃತ್ತಿ ಮಾಡಿದ ಸಂದರ್ಭದಲ್ಲಿ ಆದ ಭಿನ್ನಾಭಿಪ್ರಾಯಗಳೂ ಶ್ರೀಗಳು ಅಲ್ಲಿಂದ ಹೊರಬಿದ್ದು ಪಾದಚಾರಿಗಳಾಗಿ ಕೊನೆಗೆ **ನಾಸಿಕ**ದಲ್ಲಿ ನೆಲೆಸಿದ್ದೂ ನನಗೆ ಪರೋಕ್ಷವಾಗಿ ತಿಳಿದ ಘಟನೆಗಳು. ಶ್ರೀಶಂಕರಾಚಾರ್ಯರು 1933ರಲ್ಲಿ ನಡೆಯಿಸಿದ '**ಸರ್ವಮತಸಂಮೇಲನ**'ಕ್ಕೆ ನನ್ನನ್ನು ಕರೆಯಿಸಿ ಕೊಂಡು ಅಲ್ಲಿ 'ಭಯಪರಾಜಯ' (Conquest of Fear) ಎಂಬ ವಿಷಯದಲ್ಲಿ ಒಂದು ಇಂಗ್ಲಿಷುಭಾಷಣವನ್ನು ಮಾಡಿಸಿದರು. ಆಗ ಅವರ ಕೃಷ್ಣಮಂದಿರದಲ್ಲಿ ಕೆಲವು ದಿನಗಳು ಇದ್ದು ಬಂದೆನು. ಈಚೆಗೆ ವಲಾದ್ (ಗುಜರಾತ್)ನಲ್ಲಿದ್ದ ಬ್ರಹ್ಮಭೂತ ಶ್ರೀಮಾಧವತೀರ್ಥರವರ ಆಹ್ವಾನದಂತೆ ನಾನು ಬೊಂಬಾಯಿಗೆ ಹೋಗಿದ್ದಾಗ ಮತ್ತೊಮ್ಮೆ 1955ರಲ್ಲಿ ಅವರ ದರ್ಶನವನ್ನು ನಾಸಿಕದಲ್ಲಿ ಮಾಡಿಕೊಂಡಿದ್ದೆನು. ಕೊನೆಯಸಲ ನಾನು ಮಹಾಭಾಗವತರನ್ನು ಕಂಡದ್ದು 1966ರಲ್ಲಿ. ಉತ್ತರದೇಶದ ಯಾತ್ರೆಯ ನಿಮಿತ್ತದಿಂದ ನಾನು ನಾಸಿಕಕ್ಕೆ ಹೋದಾಗ ಶೃಂಗೇರಿ ಮಠದಲ್ಲಿ ತಂಗಿದ್ದು ಒಂದುರಾತ್ರೆ ಅವರ ದರ್ಶನಕ್ಕೆ ಹೋದೆನು. ಸ್ವಲ್ಪ ಹೊತ್ತೂ ಆಗಿತ್ತು ; ನನಗೂ ಅಷ್ಟು ಆರೋಗ್ಯವಿರಲಿಲ್ಲ. ನಾನು ಬರೆದಿದ್ದ **ಪಂಚಪಾದಿಕಾ ಪರಿಶೀಲನೆ**ಯನ್ನು ಅವರಿಗೆ ಆಗ ಒಪ್ಪಿಸಿದೆನು. ಅದೇ ಕೊನೆಯ ದರ್ಶನವೆಂಬುದು ಆಗ ನನ್ನ ಮನಸ್ಸಿಗೆ ಬರಲೇ ಇಲ್ಲ.

ಶ್ರೀಮಹಾಭಾಗವತರೆಂದರೆ ಸಮಾಜಸುಧಾರಕರು – ಎಂದು ಅನೇಕರು ಗೌರವಿಸುತ್ತಾರೆ. ಸಂಸ್ಕೃತಭಾಷಾಭಿಜ್ಞರು, ಆಶುಕವಿಗಳು ಎಂದು ಮತ್ತೆ ಕೆಲವರು

ಅಭಿಪ್ರಾಯಪಡುತ್ತಾರೆ. ರಾಯಲ್ ಏಷ್ಯಾಟಿಕ್ ಸೊಸೈಟಿಯಿಂದಲೂ ಹಾರ್ವರ್ಡ್ ಸಕಲವಿದ್ಯಾನಿಲಯದಿಂದಲೂ ಪ್ರಶಸ್ತಿಯನ್ನು ಪಡೆದವರು ಎಂದು ಅವರಿಗೆ ಮನ್ನಣೆಯನ್ನು ಕೊಡುವವರಿಗೇನೂ ಕಡಿಮೆಯಿಲ್ಲ. ಅವರು ಕರ್ಣಾಟಕದ ಮಹಾದೇಶಭಕ್ತರೆಂಬುದಂತೂ ಸರಿಯೆ. ಅವರು ಪೀಠಾಧಿಪತಿಗಳಾಗಿದ್ದುದೂ ನಿಜ. ಆದರೆ ಅವರು ಇವೆಲ್ಲಕ್ಕೂ ಮಿಗಿಲಾಗಿ 'ಮಹಾಭಾಗವತರು' ಭಗವದ್ಭಕ್ತಿಯ ಆಳವನ್ನು ಕಂಡುಕೊಂಡಿದ್ದವರು. ಜ್ಞಾನಕ್ಕೂ ಭಕ್ತಿಗೂ ಇರುವ ನಿಕಟಸಂಬಂಧವನ್ನು ಅವರು ಅರಿತಿದ್ದರು. ಜನರ ಹೃದಯವನ್ನು ಕಲಕುವ ಭಗವತ್ಪ್ರೇಮದ ಗುಟ್ಟು ಅವರಿಗೆ ತಿಳಿದಿತ್ತು. ವೇದಾಂತದ ಅಭ್ಯಾಸದಿಂದ ನನ್ನ ಹೃದಯದಮೇಲೆ ಒಂದಿಷ್ಟಾದರೂ ಪ್ರಭಾವವು ಬೀರಿದ್ದರೆ ಅದು ಅವರ ಸಂಗದಿಂದ ದೊರೆತ ಭಕ್ತಿಯ ಮಹಿಮೆಯ ಅರಿವಿನಿಂದಾದ ಹೃದಯಪರಿವರ್ತನೆಯಿಂದ ಎಂದು ಹೇಳಿಕೊಳ್ಳಲು ನನಗೆ ಬಲು ಹೆಮ್ಮೆ ಇಂಥ ಮಹಾತ್ಮರ ಮಾರ್ಗ ದರ್ಶನವು ನಮಗೆ ಸದಾ ದೊರಕಲಿ! – ಎಂದು ಭಗವಂತನಾದ ನಾರಾಯಣನಲ್ಲಿ ಪ್ರಾರ್ಥಿಸುವೆನು.

★★★★★

# ಕೈವಲ್ಯ ವೇದಾಂತಿ ಚಿಕ್ಕಲಿಂಗಣ್ಣನವರು

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಈ ವಸುಂಧರೆಯಲ್ಲಿ ಬಹಳ ರತ್ನಗಳಿರುವವೆಂಬುದೊಂದು ಸುಪ್ರಸಿದ್ಧವಾದ ಸುಭಾಷಿತವು. ಇಂಥ ಒಂದು ಜಾತಿಯರತ್ನವು ನಮ್ಮ ಮೈಸೂರಿನ ರಾಜಧಾನಿಯಲ್ಲಿ ಕೆಲವು ಕಾಲ ಥಳಗುಟ್ಟುತ್ತಿದ್ದು ಕಳೆದ ವರ್ಷ ಅವ್ಯಕ್ತವಾಯಿತು. ಅದು ವ್ಯಕ್ತವಾಗಿ ತನ್ನ ಪ್ರಕಾಶವನ್ನು ಬೀರುತ್ತಾ ಎಲ್ಲರಿಗೂ ಆನಂದವನ್ನುಂಟುಮಾಡುತ್ತಿದ್ದಾಗ **ವೇದಾಂತಿಚಿಕ್ಕಲಿಂಗಣ್ಣ**ನವರೆಂಬ ಹೆಸರಿನಿಂದ ಕರೆಯಿಸಿಕೊಳ್ಳುತ್ತಿತ್ತು.

ವೇದಾಂತವು ತಿಳಿಯುವದಕ್ಕೆ ಕಷ್ಟವಾದದ್ದೆಂದೂ ತಿಳಿದರೂ ಅದರಿಂದ ಪ್ರಯೋಜನಜವು ಬಹಳ ಕಡಿಮೆಯೆಂದೂ ನಮ್ಮವರನೇಕರು ಭಾವಿಸುತ್ತಿರುವ ಈ ಕಾಲಕ್ಕೆ ವೇದಾಂತಿ ಚಿಕ್ಕಲಿಂಗಣ್ಣನವರ ಚರಿತ್ರೆಯು ಶ್ರದ್ಧೆಯಿಂದ ಮನನಮಾಡುವವದಕ್ಕೆ ಯೋಗ್ಯವಾದದ್ದಾಗಿದೆ.

ಈ ಮಹನೀಯರು ಮೈಸೂರು ಕೃಷ್ಣರಾಜಮೊಹಲ್ಲದ ಹಳೆ ಅಗ್ರಹಾರದಲ್ಲಿ ಗಂಗಡಿಕಾರ ಒಕ್ಕಲಿಗರ ಜಾತಿಯ ಕಪಿನೀಪತಯ್ಯನವರೆಂಬವರ ಪುತ್ರರಾಗಿ ಕ್ರಿ.ಶ.1864ರಲ್ಲಿ ಅವತರಿಸಿದರು; ಅವರ ಅಣ್ಣಂದಿರಾಗಿದ್ದ ದರೋಗ ಲಿಂಗಣ್ಣನವರು ಅಥವಾ ಬ್ಯಾಂಕು ಲಿಂಗಣ್ಣನವರು ಎಂಬುವರಿಗೆ ವಾಚಾದತ್ತ ಪುತ್ರರಾದರು. ದೇವಬ್ರಾಹ್ಮಣರಲ್ಲಿ ಭಕ್ತಿಯಿಟ್ಟಿದ್ದ ಸದ್ವಂಶದಲ್ಲಿ ಹುಟ್ಟಿದ್ದರ ಫಲವಾಗಿ ಚಿಕ್ಕಂದಿನಿಂದಲೂ ಮಹಾಮಹಾವಿದ್ವಾಂಸರ ಅನುಗ್ರಹದಿಂದ ಬಹುಬೇಗನೆ ಕನ್ನಡದಲ್ಲಿ ಧಾರಾಳವಾಗಿ ಸಂಸ್ಕೃತದಲ್ಲಿಯೂ ತಕ್ಕಮಟ್ಟಿಗೆ ವಿದ್ಯಾಭ್ಯಾಸವನ್ನು ಹೊಂದಿ ಹಿಂದಿನ ಜನ್ಮವು ಪುಣ್ಯವಾಸನೆಯಿಂದ ಪುರಾಣಶ್ರವಣದಲ್ಲಿ ಅಭಿರುಚಿಯನ್ನು ಸಂಪಾದಿಸಿಕೊಂಡರು. ಕನ್ನಡದಲ್ಲಿ ರಾಮಾಯಣ ಭಾರತಭಾಗವತಗಳನ್ನು ಅರ್ಥವಾಗುವಂತೆ ಇಂಪಾಗಿ ಓದುವದಲ್ಲದೆ ಅರ್ಥಮಾಡುವ ಶಕ್ತಿಯನ್ನೂ ಪ್ರದರ್ಶಿಸಿ ಸಭಿಕರನ್ನು ಬೆರಗುಮಾಡುತ್ತಿದ್ದರು. ಯಾವದೋ ನಿಮಿತ್ತದಿಂದ ತಮ್ಮ ಮಾವನವರ ಮನೆಗೆ ಹೋಗಿರುವಲ್ಲಿದೈವಾನುಗ್ರಹದಿಂದಅದೇಪೂರ್ವಜನ್ಮದವಾಸನಾವಿಶೇಷದಿಂದಲೇ ಸತ್ಪುರುಷರೊಬ್ಬರ ದರ್ಶನವಾಗಿ ವಾಸಿಷ್ಠರಾಮಾಯಣವು ಇವರಿಗೆ ದೊರಕಲು ವೇದಾಂತದಲ್ಲಿ ಉತ್ಕಟವಾದ ಜಿಜ್ಞಾಸುತ್ವವನ್ನೂ ಸಂಪಾದಿಸಿಕೊಂಡರು.

ಪರಮಾರ್ಥವನ್ನು ತಿಳಿದುಕೊಳ್ಳಲೇಬೇಕೆಂಬ ಆಶೆಯು ನಿಜವಾಗಿ ಹುಟ್ಟಿ ಬೆಳೆದು ಮಾಗಿದರೆ ಕೂಡಲೆ ಪರಮೇಶ್ವರನು ಸದ್ಗುರುವಿನ ರೂಪದಿಂದ ಆ ಆಶೆಯನ್ನು ಪರಿಪೂರ್ತಿಗೊಳಿಸುವನೆಂಬುದು ಇವರ ವಿಷಯಕ್ಕೆ ಅಕ್ಷರಶಃ ನಿಜವಾಯಿತು. ಇವರಿಗೆ ಸದ್ಗುರುವನ್ನು ಹುಡುಕುವ ಆಯಾಸವೂ ಇಲ್ಲದಂತೆ ಕ್ರಿ.ಶ. 1906ರಲ್ಲಿ ಬೆಂಗಳೂರಿನಿಂದ **ಸಹಜಾನಂದಭಾರತೀಸ್ವಾಮಿಗಳೆಂಬ** ಮಹಾತ್ಮರೊಬ್ಬರು ಮೈಸೂರಿಗೆ ತಾವು ರಚಿಸಿದ್ದ **ಪಂಚದಶೀ** ಗ್ರಂಥದ ಕನ್ನಡ ಅನುವಾದವನ್ನು ಅಚ್ಚುಮಾಡಿಸುವ ಉದ್ದೇಶದಿಂದ ದಯಮಾಡಿಸಿದರು. ಅವರ ಸೇವೆಯಿಂದ ನಮ್ಮ ಲಿಂಗಣ್ಣನವರು ಒಂದೊಂದುವರೆ ವರ್ಷದೊಳಗಾಗಿ ವೇದಾಂತಿ ಲಿಂಗಣ್ಣನವರಾದರು! ಸಹಜಾನಂದ ಭಾರತಿಗಳು ಮೈಸೂರಿನಲ್ಲಿದ್ದಾಗ ಮುಮುಕ್ಷುಗಳಿಗೆ ತಾವು ಮಾಡಿಸುತ್ತಿದ್ದ ವೇದಾಂತಶ್ರವಣವನ್ನು ಮುಂದುವರಿಸುವದಕ್ಕೆ ಎಲ್ಲರ ಅನುಮತಿಯಿಂದ ಇವರನ್ನೇ ನೇಮಿಸಿ ತಾವು ಬೆಂಗಳೂರಿಗೆ ಹಿಂತಿರುಗಿದರು.

ಸರಿ, ಅಂದಿನಿಂದ 1937ರಲ್ಲಿ ತಾವು ಪರಬ್ರಹ್ಮದಲ್ಲಿ ಲೀನರಾಗುವವರೆಗೂ ಲಿಂಗಣ್ಣನವರು ಮೈಸೂರು ಸಂತೆಪೇಟೆಯ ಕಮಲಮ್ಮನವರ ಮಠ, ಕಾಶಪ್ಪನವರ ಮಠ, ಸುಣ್ಣಕೇರಿಯಲ್ಲಿದ್ದ ತಮ್ಮದೊಂಡು ಮನೆ, ಮಂಡಿಮೊಹಲ್ಲದ ಗೋವಿಂದಪ್ಪನವರ ಮನೆ, ಬೆಂಕಿನವಾಬರ ಬೀದಿಯಲ್ಲಿ ಒಂದುಮನೆ ಹೀಗೆ ಬೇರೆಬೇರೆಕಡೆಗಳಲ್ಲಿ ನಿಯತವಾಗಿ ಪಾಠಪ್ರವಚನವನ್ನೂ ವೇದಾಂತಶ್ರವಣವನ್ನೂ ಮಾಡಿಸುತ್ತಲೇ ಇದ್ದರು. ಟವನ್‌ಹಾಲ್, ಜಗ್ಗುಲಾಲ್ ಛತ್ರ, ಒಕ್ಕಲಿಗರ ಹಾಸ್ಟೆಲ್ – ಮುಂತಾದಕಡೆಗಳಲ್ಲಿ ವಿಶೇಷಸಂದರ್ಭಗಳಲ್ಲಿ ಉಪನ್ಯಾಸಗಳನ್ನೂ ಪುರಾಣಶ್ರವಣವನ್ನೂ ಸಾವಿರಾರುಜನರಿಗೆ ಮಾಡಿಸುತ್ತಿದ್ದರು. ಬೆಂಗಳೂರಿನ ಸಹಜಾನಂದಮಠದಲ್ಲಿ ಆ ಸ್ವಾಮಿಗಳ ನಿರ್ವಾಣದ ನಂತರದಲ್ಲಿ ಅನೇಕಸಲ ಶ್ರವಣಾದಿಗಳನ್ನು ಏರ್ಪಡಿಸಿದರು. ಅವರಲ್ಲಿ ಶ್ರದ್ಧಾಭಕ್ತಿಗಳಿಂದ ವಿಚಾರಮಾಡುತ್ತಿದ್ದವರಲ್ಲಿ ಅನೇಕರು ಬ್ರಾಹ್ಮಣರೂ ಅಬ್ರಾಹ್ಮಣರೂ ಇರುತ್ತಿದ್ದರು.

ಚಿಕ್ಕಲಿಂಗಣ್ಣನವರಲ್ಲಿ ವೇದಾಂತಜ್ಞಾನಕ್ಕೆ ಭೂಷಣವಾದ ವಿನಯವು ಒಡೆದುಮೂಡುತ್ತಿದ್ದುದರಿಂದ ಅವರಿಗೆ ಅನೇಕ ವೇದಾಂತಿಗಳ, ವಿದ್ವಾಂಸರ, ಮಠಾದಿಪತಿಗಳ ಮತ್ತು ಮತಾಂತರದ ಅನುಯಾಯಿಗಳ ಪ್ರೇಮವೂ ವಿಶ್ವಾಸವೂ ವಶವಾಗಿದ್ದವು. ಅವರು ತತ್ತ್ವಾರ್ಥವನ್ನು ಚರ್ಚಿಸುವದರಲ್ಲಿ ಯಾರಿಗೂ ಅಂಜುತ್ತಿರಲಿಲ್ಲ; ಆದರೆ ವಿನಯದಲ್ಲಿ, ವರ್ಣಾಶ್ರಮಗಳಿಗೆ ಉಚಿತವಾದ ನಡೆನುಡಿಗಳ ಸಂಪ್ರದಾಯದಲ್ಲಿ ಮತ್ತು ಗುರುಹಿರಿಯರಲ್ಲಿ ತೋರಿಸಬೇಕಾದ ಶ್ರದ್ಧಾಭಕ್ತಿಗಳಲ್ಲಿ ಯಾರೊಬ್ಬರಿಗೂ ಹಿಂದೆನಿಸಿಕೊಂಡಿರಲಿಲ್ಲ. ಇದಕ್ಕೆ ಸಾಕ್ಷಿಯನ್ನು ಕೊಡಬಲ್ಲ ಬೇರೆಬೇರೆ ಮತಾನುಯಾಯಿಗಳು ಇನ್ನೂ ಹಲವರು ಜೀವಂತವಾಗಿರುತ್ತಾರೆ. ಲಿಂಗಣ್ಣನವರು ತಮ್ಮ ಗುರುವರ್ಯರು ರಚಿಸಿದ್ದ **ವೃತ್ತಿಪ್ರಭಾಕರದ** ಅನುವಾದವನ್ನು ಸಂಸ್ಕರಿಸಿ ಅಚ್ಚುಮಾಡಿಸಿರುತ್ತಾರೆ. ಆ ಗ್ರಂಥವನ್ನೂ **ವಿಚಾರಸಾಗರವನ್ನೂ ಪಂಚದಶಿಯಂತೆಯೇ** ಅನೇಕರಿಗೆ ಪಾಠಹೇಳಿರುತ್ತಾರೆ. ಚಿದ್ಘನಾನಂದರವರು ಹಿಂದಿಯಲ್ಲಿ ರಚಿಸಿರುವ **'ತತ್ತ್ವಾನುಸಂಧಾನ'**ವನ್ನು ಕನ್ನಡಿಸಿರುತ್ತಾರೆ. ಇದರಿಂದಲೂ ಕನ್ನಡದ ಭಾರತಾದಿಗಳನ್ನು ಶ್ರವಣಮಾಡಿಸಿರುವದರಿಂದಲೂ ಅವರು ಕನ್ನಡವಾಙ್ಮಯಕ್ಕೆ ಮಾಡಿರುವ ಸೇವೆಯು ವ್ಯಕ್ತವಾಗುವದಲ್ಲದೆ ಅವರಲ್ಲಿದ್ದ ಹೆಚ್ಚಿನ ಅಂತಸ್ತಿನ **ವೇದಾಂತಶಾಸ್ತ್ರದ ಪರಿಚಯವೂ** ಸ್ಪಷ್ಟವಾಗುತ್ತದೆ.

ನಮ್ಮ ಲಿಂಗಣ್ಣನವರು ವೇದಾಂತಿಗಳಾಗಿದ್ದು ವಿದ್ಯೆಯಿಂದಲೂ ವಿನಯದಿಂದಲೂ ಕೀರ್ತಿಯನ್ನು ಸಂಪಾದಿಸಿದ್ದಲ್ಲದೆ ಸಜ್ಜನರ ಗೌರವವನ್ನೂ ಹೆಚ್ಚಿನ ಪರಿಮಾಣದಲ್ಲಿ ದೊರಕಿಸಿಕೊಂಡಿದ್ದರು. ಅವರಿಂದ ಪುರಾಣಶ್ರವಣವನ್ನು ಮಾಡಿಸಿ ಅನೇಕ ಮಹನೀಯರು ಅವರಿಗೆ **'ಗೌರೀಶಂಕರ'**ವೆಂಬ ಕಂಠಾಭರಣವನ್ನು ಎರಡು ಸಂದರ್ಭದಲ್ಲಿ **ಸನ್ಮಾನಸೂಚಕವಾದ ಸಂಭಾವನೆ**ಯಾಗಿ ಅರ್ಪಿಸಿದ್ದರು. ಚುಂಚನಗಿರಿ ಮಠಕ್ಕೆ ಇವರನ್ನೇ ಮಠಾದಿಪತಿಯಾಗಿ ಮಾಡುವದಕ್ಕೂ ಪ್ರಯತ್ನಿಸಿದ್ದರೆಂದು ತಿಳಿದುಬರುತ್ತದೆ.

ವೇದಾಂತಿ ಲಿಂಗಣ್ಣನವರೆಂದು ನಾನು ಈವರೆಗೆ ಕರೆದಿರುವ ಪೂಜ್ಯವ್ಯಕ್ತಿಯು ಶಿಷ್ಯಮಂಡಲಿಯಲ್ಲಿ ರಾಜಯೋಗಿ ಚಿಕ್ಕಲಿಂಗಣ್ಣಸ್ವಾಮಿಗಳು ಎಂಬ ಹೆಸರಿನಿಂದ ಪ್ರಸಿದ್ಧವಾಗಿರುತ್ತದೆ. ಈ ರಾಜಯೋಗಿಗಳ ಸ್ಮಾರಕವಾಗಿ ಮೈಸೂರಿನಲ್ಲಿ ಕೈ॥ ಹಿರೊಡೆ ಮಲ್ಲಪ್ಪನೆಂಬವರು ವಿಚಾರಮಂದಿರವೊಂದನ್ನು ಕಟ್ಟಿಸಿರುತ್ತಾರೆ. ಅವರ ಪುಣ್ಯತಿಥಿಯ ಸ್ಮರಣೆಗಾಗಿ ಪಾದುಕಾಭಿಷೇಕಾದಿಗಳು, ಉಪನ್ಯಾಸಗಳು, ಸಂತರ್ಪಣೆ – ಮುಂತಾದ ಆರಾಧನೆಗಳನ್ನು ಶಿಷ್ಯವೃಂದದವರು ನಡೆಸುತ್ತಿರುತ್ತಾರೆ.

ಅಂತಃಕರಣಶುದ್ಧಿಯಿಂದ ಸದ್ಗುರುವಿನಲ್ಲಿ ಸದ್ಗುರುವಿನಲ್ಲಿ ತತ್ತ್ವವನ್ನು ತಿಳಿದುಕೊಂಡು ಅದನ್ನು ಮನಸ್ಸಿಗೆ ಅಳವಡಿಸಿಕೊಂಡದ್ದರ ಗುರುತಾಗಿ ಈ ಕರಾಳಕಲಿಗಾಲದಲ್ಲಿಯೂ ಅಜಾತಶತ್ರುವಾಗಿ ವರ್ತಿಸುತ್ತಾ ತನ್ನ ನಡೆನುಡಿಗಳಿಂದ ಸನ್ಮಾರ್ಗವನ್ನು ನೂರಾರು ಜನಗಳಿಗೆ ತೋರಿಸಿದ ಮಹನೀಯರು ಯಾರಿಗೆತಾನೆ ಪೂಜ್ಯರಲ್ಲ?

★★★★

# ಹೊಸಕೆರೆ ಚಿದಂಬರಯ್ಯನವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಚಿದಂಬರಯ್ಯನವರನ್ನು ನಾನು ಮೊದಲು ಕಂಡದ್ದು ಕಡೂರಿನಲ್ಲಿ ಕ್ರಿ.ಶ.1903ರಲ್ಲಿ ಆ ಊರಿನ ಟೌನ್ ಓವರ್ಸಿಯರಾಗಿದ್ದ ನಾನು ಒಂದು ದಿನ ಊರಿನಲ್ಲಿ ಅಡ್ಡಾಡುತ್ತಾ ಆಂಗ್ಲೋವರ್ನಾಕ್ಯುಲರ್ ಸ್ಕೂಲಿನ ಒಳಕ್ಕೆ ಹೋದೆ. ಕಟ್ಟಡದ ಬಲಭಾಗದಲ್ಲಿದ್ದ ಒಂದು ಕೋಣೆಯಲ್ಲಿ ಅವರು ಒಂದು ದೊಡ್ಡ ಪುಸ್ತಕವನ್ನು ಒದುತ್ತಾ ಕುರ್ಚಿಯಮೇಲೆ ಕುಳಿತಿದ್ದರು. ವ್ಯಕ್ತಿಯ ಉಡಿಗೆತೊಡಿಗೆಗಳಲ್ಲಾಗಲಿ ಮಾತುಕಥೆಗಳಲ್ಲಾಗಲಿ ಅಷ್ಟೇನೂ ವಿಶೇಷವು ಕಾಣಿಸಲಿಲ್ಲ. ಆದರೂ ಕಾಲಕರ್ಮಸಂಯೋಗದಿಂದ ದೊರೆತ ಆ ಪರಿಚಯವು ನಮ್ಮಿಬ್ಬರನ್ನೂ ತೀರ ಹತ್ತಿರದ ಗೆಳೆಯರನ್ನಾಗಿ ಮಾಡಿಬಿಟ್ಟಿತು.

ನಾವು ಆಗಾಗ್ಗೆ ಮತ್ತೆಮತ್ತೆ ಸೇರುವದಕ್ಕೆ ಮೊದಲಾಯಿತು. ಚಿದಂಬರಯ್ಯನವರು ಬಾಲ್ಯದಲ್ಲಿ ಅಷ್ಟೇನೂ ಸ್ಕೂಲಿನ ವಿದ್ಯಾಭ್ಯಾಸವನ್ನು ಪಡೆದವರಲ್ಲವಾದರೂ ತಮ್ಮ ಸ್ವಂತವ್ಯಾಸಂಗದಿಂದಲೂ ಉತ್ತಮ ಸಹವಾಸದಿಂದಲೂ ಕನ್ನಡ, ಸಂಸ್ಕೃತ, ಇಂಗ್ಲಿಷು – ಈ ಮೂರು ಭಾಷೆಗಳಲ್ಲಿಯೂ ತಕ್ಕಮಟ್ಟಿನ ಪರಿಚಯವನ್ನು ಸಂಪಾದನೆಮಾಡಿಕೊಂಡಿದ್ದರು. ಕನ್ನಡದಲ್ಲಿ ಆಗಾಗಲೆ ಒಂದೆರಡು ಗ್ರಂಥಗಳನ್ನು ಬರೆದಿದ್ದದ್ದಲ್ಲದೆ ಕಾವ್ಯರಸವನ್ನು ತಾವೂ ಈಂಟಬಲ್ಲವರಾಗಿದ್ದರು, ಜೊತೆಯವರಿಗೂ ಅದರ ಸವಿಯನ್ನು ನೋಡಿಸಬಲ್ಲ ಚತುರರಾಗಿದ್ದರು. ಓವರ್ಸಿಯರ್ ಕೆಲಸವು ನನಗೆ ಮನೆಯವರ ಬಲವಂತದಿಂದ ಗಂಟುಬಿದ್ದದ್ದೇ ಹೊರತು ನನಗೆ ಮೆಚ್ಚಿನದಾಗಿರದೆ ವಿದ್ಯಾಭ್ಯಾಸದ ಇಲಾಖೆಯ ಕಡೆಗೇ ನನ್ನ ಮನಸ್ಸು ಒಲಿಯುತ್ತಿದ್ದದ್ದರಿಂದಲೂ ಕನ್ನಡದಲ್ಲಿಯೂ ಸಂಸ್ಕೃತದಲ್ಲಿಯೂ ನನಗೂ ಸ್ವಲ್ಪ ಅಭಿರುಚಿಯಿದ್ದದ್ದರಿಂದಲೂ ಚಿದಂಬರಯ್ಯನವರು ಸಹಜವಾಗಿ ನನಗೆ ಸ್ವಲ್ಪ ಸಲುಗೆಯನ್ನು ಕೊಟ್ಟರು. ನಾವಿಬ್ಬರೂ ಒಕ್ಕಡೆಯಲ್ಲಿಯೇ ವಾಸಮಾಡುತ್ತಾ **ಲಘುಕೌಮುದಿ, ಶಬ್ದಾನುಶಾಸನ, ಸಾಹಿತ್ಯದರ್ಪಣ, ಕುವಲಯಾನಂದ, ಚಿಕ್ಕದೇವರಾಜವಿಜಯ, ಚಿಕ್ಕದೇವರಾಯವಂಶಾವಳಿ, ಶಬರಶಂಕರವಿಲಾಸ** – ಮುಂತಾದ ಗ್ರಂಥಗಳನ್ನು

ಜೊತೆಯಲ್ಲಿ ಅಭ್ಯಾಸಮಾಡುತ್ತಿದ್ದೆವು ಚಿದಂಬರಯ್ಯನವರು ಸ್ಕೂಲುಕೆಲಸದಲ್ಲಿ ಅತ್ಯಂತ ಆದರವುಳ್ಳವರಾಗಿದ್ದದ್ದು, ತಮ್ಮ ಕೆಲಸವನ್ನು ಮತ್ತೊಬ್ಬರಿಗೆ ಹೇಳದೆ ತಾವೇ ಮಾಡಿಕೊಳ್ಳುತ್ತಾ ಇದ್ದದ್ದು, ಬಿಡುವಿನ ಕಾಲದಲ್ಲಿ ಪರೀಕ್ಷೆಗೆ ಓದುವ ವಿದ್ಯಾರ್ಥಿಗಳಿಗಿಂತಲೂಹೆಚ್ಚಿನಅಕ್ಕರೆಯಿಂದಗ್ರಂಥಗಳನ್ನುಚಿಂತನೆಮಾಡುತ್ತಿದ್ದದ್ದು – ಇವೆಲ್ಲವೂ ನನಗೆ ಅವರಲ್ಲಿ ಹೆಚ್ಚಿನ ಗೌರವವುಂಟಾಗುವಂತೆ ಮಾಡಿದವು.

ಚಿದಂಬರಯ್ಯನವರ ಶಿಫಾರಸಿನಿಂದ ನನಗೆ ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸವಾಯಿತು; ನಾನು ಮೊಳಕಾಲ್ಮೂರು ಹೊಸದುರ್ಗಗಳನ್ನು ದಾಟಿ ಹೊಳಲುಕೆರೆಯ ಸ್ಕೂಲಿನ ಹೆಡ್‌ಮಾಸ್ಟರಾಗಿ ಬರುವ ಹೊತ್ತಿಗೆ ನಮ್ಮಿಬ್ಬರ ಸ್ನೇಹವು ಬಲವಾಗಿತ್ತು. ಚಿದಂಬರಯ್ಯನವರು ಕಡೂರಿನಲ್ಲಿ ಸ್ಥಾಪಿಸಿದ **ಉಪಾಧ್ಯಾಯರ** ಸಂಘಕ್ಕೆ ನನ್ನನ್ನು 'ಜಾಯಿಂಟ್ ಸೆಕ್ರಟೆರಿ'ಯಾಗಿ ಸೇರಿಸಿಕೊಂಡಿದ್ದರು ಸಂಘದಲ್ಲಿ ಅವರು ಓದಿದ 'ಮನಶ್ಶಿಕ್ಷಣ', 'ಬೋಧನಕ್ರಮ', 'ಬೋಧನೆಯ ಸ್ವಭಾವ' – ಮುಂತಾದ ಉಪನ್ಯಾಸಗಳು ಅಚ್ಚಾಗಿ, ಅನೇಕ ಟ್ರೇನಿಂಗು ಸ್ಕೂಲುಗಳ ಮೆಚ್ಚುಗೆಯನ್ನು ಪಡೆದವು; ಕಡೂರಿನಲ್ಲಿ ಒಂದು ವಿದ್ಯಾಭ್ಯಾಸದ ಪ್ರದರ್ಶನಮಹೋತ್ಸವವೂ ಆಯಿತು. (ಚಿದಂಬರಯ್ಯನವರಿಗೆ ಯಾವ ಟ್ರೇನಿಂಗೂ ಆಗಿರಲಿಲ್ಲ!) ಆ ಸುಮಾರಿನಲ್ಲಿ ಅವರು 'ಕಾಲಾಂತಕ', 'ತಾರಾನಾಥ', 'ಸ್ತ್ರೀಧರ್ಮಸಂಗ್ರಹ', 'ಮಾಧವರಾವ್ ಸಿಂಧೆ', 'ಗುಣನಿರೂಪಣೆ', 'ಕೃಷ್ಣಮಹೀಶ್ವರೀ' (ನಾಟಕ)–ಮುಂತಾದ ಗ್ರಂಥಗಳನ್ನು ಬರೆದರು.

ಆದರೆ ಇಷ್ಟುಹೊತ್ತಿಗೆ ಚಿದಂಬರಯ್ಯನವರಿಗೆ ನನ್ನ ಗಾಳಿ ಸ್ವಲ್ಪ ಬೀಸಿತ್ತು. ಕಡೂರಿನಲ್ಲಿದ್ದಾಗ ನಾನು **'ಪಂಚೀಕರಣ' 'ವೇದಾಂತಸಾರ'**– ಮುಂತಾದ ವೇದಾಂತಪ್ರಕರಣಗಳನ್ನು ಓದುತ್ತಿರುವದನ್ನು ಕಂಡು ಹಾಸ್ಯಮಾಡುತ್ತಿದ್ದವರು ಬಿಡುವು ದೊರೆತಾಗಲೆಲ್ಲ ಹೊಳಲುಕೆರೆಗೆ ಬಂದು ನನ್ನೊಡನೆ 'ಪಂಚದಶಿ'ಯನ್ನು ಓದುವದಕ್ಕೆ ಮೊದಲುಮಾಡಿದ್ದರು. ಕ್ರಿ.ಶ. 1906ರಲ್ಲಿ ಅವರಿಗೆ ಪತ್ನಿ ವಿಯೋಗವಾದಮೇಲೆ ಅವರು ಪಂಚದಶಿಯನ್ನು ಮುಗಿಸಿ ಶಂಕರಾನಂದರ ಗೀತಾ ತಾತ್ಪರ್ಯಬೋಧಿನಿಯನ್ನು ಓದಿ ವೇದಾಂತದ ಹುಚ್ಚುಹಿಡಿಸಿಕೊಂಡುಬಿಟ್ಟಿದ್ದರು. ಸಂನ್ಯಾಸವನ್ನು ತೆಗೆದುಕೊಂಡು ವೇದಾಂತಶ್ರವಣವನ್ನು ಮಾಡಬೇಕೆಂದು ಆಗಿಂದಾಗ್ಗೆ ಅವರು ಹೇಳುತ್ತಿದ್ದದ್ದು ಚೆನ್ನಾಗಿ ನನ್ನ ನೆನಪಿನಲ್ಲಿದೆ.

ಅಲ್ಲಿಂದ ಮುಂದಕ್ಕೆ ಜೊತೆಯಲ್ಲಿರಬೇಕೆಂಬ ಕುತೂಹಲವು ಇಬ್ಬರಲಿಯೂ ಬಲವಾಗಿ ಬೇರೂರಿತು. ನಾವಿಬ್ಬರೂ ದಾವಣಗೆರೆಯಲ್ಲಿ ಮತ್ತೆ ಸೇರಿದೆವು. ಅವರು ಅಲ್ಲಿಯ ಮಿಡಲ್‌ಸ್ಕೂಲಿನ ಮುಖ್ಯೋಪಾಧ್ಯಯರಾಗಿದ್ದರು; ನಾನು ಸಹಾಯೋಪಾಧ್ಯಾಯನಾಗಿದ್ದೆ. ಸ್ಕೂಲಿನ ಕೆಲಸದಲ್ಲಿದ್ದು ನಮ್ಮ ಉತ್ಸಾಹವೇನು ಕುಗ್ಗಲಿಲ್ಲವಾದರೂ ವೇದಾಂತವು ಹೆಚ್ಚು ಹೆಚ್ಚಾಗಿ ನಮ್ಮ ಮನಸ್ಸನ್ನು ಸೆಳೆಯಿತು. ಇಬ್ಬರೂ ಕಾಲಟಿಯಲ್ಲಿ ಕುಂಭಾಭಿಷೇಕಸಮಯಕ್ಕೆ ಶ್ರೀಸಚ್ಚಿದಾನಂದಶಿವಾಭಿನವ ನೃಸಿಂಹಭಾರತೀಸ್ವಾಮಿಗಳಲ್ಲಿ ಭಾಷ್ಯಶಾಂತಿಯನ್ನು ಮಾಡಿಸಿಕೊಂಡು ಧಾರವಾಡದಲ್ಲಿದ್ದ (ಈಚೆಗೆ ಶ್ರೀವಾಲುಕೇಶ್ವರಸ್ವಾಮಿಗಳಾಗಿ ಮೈಸೂರಿನಲ್ಲಿ ಬ್ರಹ್ಮೀ ಭೂತರಾದ) ಹಾನಗಲ್ಲ ವಿರೂಪಾಕ್ಷಶಾಸ್ತ್ರಿಗಳವರಲ್ಲಿ ಸೂತ್ರಭಾಷ್ಯವನ್ನು ಅಭ್ಯಾಸಮಾಡತೊಡಗಿದೆವು. ಆದರೆ ಚಿದಂಬರಯ್ಯನವರ ಮನಸ್ಸು ಬರಿಯ ಪುಸ್ತಕಪಾಠಿಯಾಗಿರಲು ಒಪ್ಪಲಿಲ್ಲ. ಸುಮಾರು 1910ರಲ್ಲಿ ನಮ್ಮಿಬ್ಬರಿಗೆ ದೊರೆತಿದ್ದ ಶ್ರೀ ಮಹಾಭಾಗವತರೆಂಬ ಸಾಧುಗಳ ದರ್ಶನದ ಫಲವಾಗಿ ಅವರು ಉತ್ಕಟವೈರಾಗ್ಯದಿಂದ ಗೋಂದಾವಳಿಯ ಶ್ರೀಬ್ರಹ್ಮಚೈತನ್ಯಮಹಾರಾಜರೆಂಬ ಸದ್ಗುರುಗಳ ಸೇವೆಗೆಂದು ರಜವನ್ನು ಪಡೆದುಕೊಂಡು ಹೋಗಿಬಿಟ್ಟರು; ಅವರ ಸೇವೆಯಲ್ಲಿ ಹಲವು ತಿಂಗಳುಗಳಿದ್ದು ಕೊನೆಗೆ ಕುರ್ತಕೋಟೆಯಲ್ಲಿ ಬ್ರಹ್ಮಚಿಂತೆನೆಯಲ್ಲಿಯೇ ಕಾಲಹರಣವನ್ನು ಮಾಡುತ್ತಾ ಇದ್ದುಬಿಟ್ಟರು. ಪುಸ್ತಕದ ವ್ಯಾಸಂಗವನ್ನು ನನ್ನಪಾಲಿಗೆ ಬಿಟ್ಟುಹೋಗಿದ್ದರು!

ಕುರ್ತಕೋಟೆಯಲ್ಲಿದ್ದಾಗ ಅವರ ಚಿತ್ತವು ಧ್ಯಾನಯೋಗ, ಭಕ್ತಿಯೋಗಗಳಲ್ಲಿ ನೆಲೆಗೊಂಡಿತು. ಅವರು ಬೆಳಗ್ಗೆ, ಸಾಯಂಕಾಲ – ಎರಡುಹೊತ್ತು ದೀರ್ಘಕಾಲ ಪ್ರಾಣಾಯಾಮ, ಸಗುಣಾರಾಧನ, ಲಯಚಿಂತನ – ಮುಂತಾದ ಸಾಧನಗಳನ್ನು ಮಾಡುತ್ತಿದ್ದರು; ಉಳಿದ ಕಾಲದಲ್ಲಿ ಭಕ್ತಿಪ್ರಧಾನವಾದ ಗ್ರಂಥಗಳನ್ನು ಓದುವದು, ಬರೆಯುವದು, 'ಪರಮಾರ್ಥ'ವೆಂಬ ಮಾಸಪತ್ರಿಕೆಯ ಸಂಪಾದಕತ್ವದ ಕೆಲಸವನ್ನು ನಿರ್ವಹಿಸುವದು – ಹೀಗೆ ಕಾಲಕ್ಷೇಪಮಾಡುತ್ತಿದ್ದರು. ಅವರು ವಿದ್ಯಾಭ್ಯಾಸದ ಇಲಾಖೆಯಲ್ಲಿ ಕೆಲಸಮಾಡುತ್ತಿದ್ದಾಗ ಇಟ್ಟುಕೊಂಡಿದ್ದ ಉತ್ಸಾಹವನ್ನೆಲ್ಲ ಈಗ ಪರಮಾರ್ಥವಿದ್ಯಾಭ್ಯಾಸದ ಇಲಾಖೆಯ ಸೇವೆಗೆ ಧಾರೆಯೆದಿದ್ದರೆನ್ನ ಬಹುದು. 'ಮೈತ್ರೇಯಿ', 'ಪರಮಾತ್ಮಸ್ತುತಿ', 'ವಾಲ್ಮೀಕಿಯ ಜಯ', 'ಭಗವದ್ಗೀತಾಸಾರವಿಚಾರ', 'ಗುರುಸ್ತುತಿಕುಸುಮಾಂಜಲಿ',

'ಸುಧರ್ಮಪ್ರಭಾವ', 'ಗೀತಾರ್ಥವಿವರಣೆ - ಮುಂತಾದ ಗ್ರಂಥಗಳನ್ನು ಅವರು ಹೊರಕ್ಕೆತಂದದ್ದು ಈ ಕಾಲದಲ್ಲಿಯೇ.

ಚಿದಂಬರಯ್ಯನವರು ಈಗ ವಾನಪ್ರಸ್ಥಾಶ್ರಮಿಗಳಂತೆ ದೇಹಾಭಿಮಾನವನ್ನು ತೀರ ತೊರೆದುಬಿಟ್ಟಿದ್ದರು. ಅವರು ತಮ್ಮ ತನುಮನೋಧನಗಳನ್ನು ಕುರ್ತಕೋಟಿಯಲ್ಲಿ ಶ್ರೀಮಹಾಭಾಗವತರ ಸೇವೆಗೂ ಅಲ್ಲಿ ಭಕ್ತಮಂಡಲಿಯವರಿಗಿದ್ದ ಸತ್ರದ ಸೇವೆಗೂ ಒಪ್ಪಿಸಿಬಿಟ್ಟಿದ್ದರೆಂದರೆ ಅತ್ಯುಕ್ತಿಯಾಗದು. ಆಗಿನ ಅವರ ಮನಃಸ್ಥಿತಿಯನ್ನು ಮನದಟ್ಟುಮಾಡಿಕೊಳ್ಳುವದಕ್ಕೆ ಒಂದು ಸಂದರ್ಭವನ್ನು ನೆನಪಿಗೆ ಕಂಡುಕೊಳ್ಳುವದು ಸಹಾಯಕವಾಗುತ್ತದೆ. ನಾನು ಒಮ್ಮೆ ಕುರ್ತಕೋಟಿಗೆ ಹೋಗಿ ಊಟವಾದ ಬಳಿಕ ಅವರ ಬಳಿಯಲ್ಲಿ ಕುಳಿತು ಮೇಜಿನಮೇಲಿದ್ದ ಒಂದು ಸರಕಾರಿಯ ಲಕೋಟೆಯನ್ನು ಕಂಡು ಇದೇನೆಂದು ಕೇಳಿದೆನು; ಅವರು 'ಅದು ರಜ ವಿಷಯದ ಕಾಗದವಿರಬೇಕು' ಎಂದು ಉದಾಸೀನವಾಗಿ ಉತ್ತರಕೊಟ್ಟರು. ನಾನು ಅದನ್ನು ಒಡೆದುನೋಡಲು ''ರಜಕೊಡುವದಾಗುವದಿಲ್ಲವೆಂದು ಇಂಡಾರ್ಸುಕೊಟ್ಟರೂ ನೀವು ಮತ್ತೆಮತ್ತೆ ರಜಕ್ಕೆ ಬರೆದುಕೊಳ್ಳುತ್ತಿರಾದ್ದರಿಂದ ನಿಮ್ಮನ್ನು ಕೆಲಸದಿಂದ ತೆಗೆದುಹಾಕಿದೆ'' ಎಂದು ಬರೆದಿತ್ತು. ಅದನ್ನು ನಾನು ಓದುತ್ತಲೂ ಚಿದಂಬರಯ್ಯನವರು ''ಸರಿ ಹಾಗಾದರೆ; ಮತ್ತೆ ರಜಕ್ಕೆ ಬರೆದುಕೊಳ್ಳುವದೇ ತಪ್ಪಿತು'' ಅಂದುಬಿಟ್ಟರು! ನಾನು ಆ ಸಂದರ್ಭಕ್ಕೆ ತಕ್ಕಂತೆ ಒಂದು ಅರ್ಜಿಬರೆದು ಬಲಾತ್ಕಾರದಿಂದ ಅವರ ರುಜುಹಾಕಿಸಿ ಸರಕಾರಕ್ಕೆ ಕಳುಹಿಸಿಕೊಟ್ಟೆ; ಸರಕಾರದವರು ಹಿಂದಿನ ಹುಕುಂ ವಜಮಾಡಿ ಅವರಿಗೆ ವಿಶ್ರಾಂತಿವೇತನವನ್ನು ಕೊಡಿಸಿಕೊಟ್ಟರು.

ಚಿದಂಬರಯ್ಯನವರು ಮಹಾಭಾಗವತರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿದ ಮೇಲೂ ಅವರೊಡನೆ ಸಂಚಾರಮಾಡಿ ಬಹುಕಾಲ ಸಂಚಾರದಿಂದಾದ ದೇಹಶ್ರಮವನ್ನೂ ಮನಃಶ್ರಮವನ್ನೂ ನಿವಾರಿಸಿಕೊಳ್ಳುವದಕ್ಕೆ ಸುಮಾರು ಕ್ರಿ.ಶ.1919ನೆಯ ಮೊದಲುಭಾಗದಲ್ಲಿ ಬೆಂಗಳೂರಿಗೆ ಬಂದರು. ಕೆಲಕಾಲ ನಾವಿಬ್ಬರೂ ವೇದಾಂತವಿಚಾರದಿಂದ ಕಾಲವನ್ನು ಕಳೆದೆವು. ಆ ಸುಮಾರಿಗೆ ಶ್ರೀಯುತ ಕೊಪ್ಪಳದ ಜಯರಾಮಾಚಾರ್ಯರು ಹರಿಕೀರ್ತನ ಸಮ್ಮೇಳನವೊಂದನ್ನು ಏರ್ಪಡಿಸಿ ಚಿದಂಬರಯ್ಯನವರ ಸಂಪಾದಕತ್ವದಲ್ಲಿ ''**ಭಕ್ತಬಂಧು**'' ಎಂಬ ಮಾಸಪತ್ರಿಕೆಯನ್ನು ಹೊರಡಿಸಿದರು. (ಪರಮಾರ್ಥ ಪತ್ರಿಕೆಯು ಮೂರುವರ್ಷಗಳು ನಡೆದ ಮೇಲೆ ಬೆಂಗಳೂರಿನಲ್ಲಿದ್ದ

ವೇ॥ಸಾಲಗ್ರಾಮದ ನಾರಾಯಣಶಾಸ್ತ್ರಿಗಳವರ ಸಂಪಾದಕತ್ವವನ್ನು ಪಡೆದಿತ್ತು.) ಆಗಿನಿಂದ ಚಿದಂಬರಯ್ಯನವರು ಪುರಾಣ ಆಖ್ಯಾನಗಳನ್ನು ಕೀರ್ತನಪರವಾಗಿ ಬರೆಯುತ್ತಾ ಬಂದು ಕೊನೆಗೆ ಅವನ್ನು '**ಕೀರ್ತನಕಂಠಾಭರಣ**'ವೆಂಬ ಹೆಸರಿನಿಂದ ಒಟ್ಟುಗೂಡಿಸಿ ಪ್ರಕಟಿಸಿದರು.

ಈ ನಡುವೆ ಧಾರವಾಡದ ''ನ್ಯಾಷನಲ್ ಕಾಲೇಜ್'' ಎಂಬ ದೇಶೀಯ ವಿದ್ಯಾಶಾಲೆಯವರ ಕರೆ ಬಂದದ್ದರಿಂದ ಅಲ್ಲಿಗೆ ಹೋಗಿ ಎರಡು ಮೂರು ವರ್ಷಗಳು ಅಲ್ಲಿದ್ದು ತಮ್ಮ ನೆರವನ್ನು ಅವರಿಗೆ ಕೊಟ್ಟದ್ದಲ್ಲದೆ, ಸುತ್ತುವರಿಯಲ್ಲಿದ್ದಾಗ 'ಭರತಖಂಡದ ಜೀವಜ್ಯೋತಿಗಳು'', 'ಆತ್ಮಶಕ್ತಿಯ ತೇಜಸ್ಸು', 'ಆರ್ಯ ಧರ್ಮಪ್ರದೀಪ', 'ವಿದ್ಯಾರಣ್ಯಕಾವ್ಯ', ಮುಂತಾದ ಗ್ರಂಥಗಳನ್ನು ರಚಿಸಿದರು.

ಚಿದಂಬರಯ್ಯನವರು ಸ್ಫಟಿಕದಂತೆ ಸ್ವಚ್ಛರಾಗಿರುತ್ತ ಆಯಾ ಉಪಾಧಿಗಳಿಗೆ ತಕ್ಕಂತೆ ಜನರಿಗೆ ಒಪ್ಪಾಗುವ ರೀತಿಯಲ್ಲಿರುತ್ತಿದ್ದರು. ಅವರು ಯಾವ ಯಾವ ಸಂದರ್ಭಗಳಲ್ಲಿ ಯಾವ ಯಾವ ಕಡೆಗೆ ತಮ್ಮ ಚಿತ್ತವನ್ನು ಓಲಬಿಟ್ಟರೆಂಬುದು ಒಂದೇ ಸಮವಾಗಿ ಹರಿಯುತ್ತಿದ್ದ ಅವರ ಲೇಖನಿಯಿಂದ ಬೆಳಕುಕಂಡಿರುವ ಗ್ರಂಥಗಳಿಂದಲೇ ತಿಳಿಯುವಂತಿದೆ. ಆದರೂ ಕಡಲಿನ ಮೇಲುಗಡೆಯಲ್ಲಿ ಅಲೆಗಳ ಹೊಡೆತವಿದ್ದರೂ ತೀರ ಆಳವಾಗಿ ಹೋಗಿ ನೋಡಿದರೆ ಶಾಂತಿಯೇ ಇರುವಂತೆಯೂ ವಾಯುಮಂಡಲಮೇಘಮಂಡಲಗಳ ಮುಸುಕಿನಲ್ಲಿ ಬಗೆಬಗೆಯ ಮಾರ್ಪಾಟುಗಳನ್ನು ಪಡೆಯುವಂತೆ ತೋರುವ ಅಂಬರವು ನಿಜವಾಗಿ ನಿಷ್ಕಲಂಕವಾಗಿಯೇ ಇರುವಂತೆಯೂ ಇವರು ಅಂತರಂಗದಲ್ಲಿ ಪರಮಾರ್ಥವಾಸನೆಯನ್ನು ಒಂದೇಸಮನೆ ಬೆಳಸಿಕೊಂಡು ಹೆಸರಿಗೆ ತಕ್ಕಂತೆ ಚಿದಂಬರರೇ ಆಗಿರುತ್ತಿದ್ದರು. ಅವರು ಧಾರವಾಡದಿಂದ ಬೆಂಗಳೂರಿಗೆ ಬಂದ ಮೇಲಂತು ಯಾವಾಗಲೂ ಸತ್ಕರ್ಮ, ಸದ್ವಿಚಾರ, ಸದ್ಗ್ರಂಥರಚನೆ-ಇವುಗಳಲ್ಲಿಯೇ ಹೆಚ್ಚಾಗಿ ಮನಸ್ಸನ್ನು ಮುಳುಗಿಸಿದ್ದರು. ಅವರು ಇತ್ತೀಚೆಗೆ ಬರೆದಿರುವ 'ಅನುಭವಾಮೃತ', 'ಮಾಂಡೂಕ್ಯಸಂವಾದ', 'ಗೀತಾರ್ಥಚಂದ್ರಿಕೆ', 'ಪಂಚದಶೀತತ್ತ್ವಾರ್ಥ', 'ವೇದಾಂತದ ಜೀವಾಳ', 'ವೇದಾಂತದ ರೂಪರೇಖೆ', 'ಬ್ರಹ್ಮಸೂತ್ರದ ಬೆಳಕು',- ಮುಂತಾದ ಗ್ರಂಥಗಳೇ ಅವರ ಮನಸ್ಸಿನ ಬಲುಮೆಯನ್ನು ಸರಿಯಾಗಿ ಅಳೆಯಬಲ್ಲ ಗ್ರಂಥಗಳು; ಮಿಕ್ಕವು ಆಯಾ ಕಾಲದ ಆಯಾ ಸುತ್ತುವಳೆಯದ ಪ್ರೇರಣೆಯ ಫಲಗಳು.

ಚಿದಂಬರಯ್ಯನವರು ಹೆಚ್ಚು ಮಾತಿನವರಲ್ಲ, ಹೊರಗಿನ ಆಡಂಬರವನ್ನು ಕಂಡವರಲ್ಲ. ಬಡತನದ ಒತ್ತರದಿಂದ ಚಿಕ್ಕಂದಿನಿಂದಲೂ ಕುಟುಂಬಪೋಷಣೆಗೆ ಹಣವನ್ನು ಗಳಿಸಲೇಬೇಕಾಗಿಬಂದರೂ ತಾವು ವಿದ್ಯಾಶಾಲೆಯಲ್ಲಿ ದೊರಕಿಸಲಾರದೆ ಹೋಗಿದ್ದ ವಿದ್ಯೆಯನ್ನು ಅವರು ತಮ್ಮ ಜೀವಿತದಲ್ಲೆಲ್ಲ ಸ್ವತಂತ್ರಪ್ರಯತ್ನದಿಂದ ಸಂಪಾದಿಸಿ ಅದನ್ನು ನಾಡಿನ ಸೇವೆಗೆ ಗ್ರಂಥರೂಪವಾಗಿ ಸೂರೆಗೊಡುತ್ತಲೇ ಇದ್ದರು. ಅವರು ಮೊದಮೊದಲು ಪ್ರೌಢಶೈಲಿಯಲ್ಲಿ ಕಾವ್ಯವನ್ನು ಬರೆಯುತ್ತಿದ್ದರಂತೆ; ಆದರೆ ನಮಗೆ ಈಗ ದೊರಕುವ ಕವಿತೆಗಳೆಲ್ಲ ಅತ್ಯಂತಲಲಿತವಾಗಿರುತ್ತವೆ. ಸಂಪ್ರದಾಯಕ್ರಮವನ್ನನುಸರಿಸಿ ದ್ರಾಕ್ಷಾಪಾಕವಾಗಿ ಹೃದಯವನ್ನರಳಿಸುವಂತೆ ಬರೆದ ಅವರ ಕವಿತೆಗೆ ಮೆಚ್ಚಿ ಒಂದಾನೊಂದು ಸಭೆಯವರು ಅವರಿಗೆ **'ಕರ್ಣಾಟಕಕವಿರತ್ನ'** ಎಂಬ ಬಿರುದನ್ನು ಕೊಟ್ಟಿದ್ದರು. 'ವಿದ್ಯಾರಣ್ಯ', 'ಚೂಡಾಲೆ' 'ಕೃಷ್ಣಮಹೀಶ್ವರಿ' ಮುಂತಾದವು ಚಂಪುನಾಟಕಾದಿಗಳ ರಚನೆಯಲ್ಲಿ ಅವರಿಗಿದ್ದ ಕೌಶಲದ ಮಟ್ಟವನ್ನು ವ್ಯಕ್ತಗೊಳಿಸುತ್ತವೆ. ಕನ್ನಡಗದ್ಯವನ್ನು ಬರೆಯುವಾಗ ಅವರು ಬಳಕೆಗೆ ತಂದಿರುವ ನುಡಿಗಳ ಬೆಡಗು ಎಷ್ಟೋಜನ ತರುಣರನ್ನು ಮುಗ್ಧಗೊಳಿಸಿ ಅವರ ಶೈಲಿಯನ್ನು ಅನುಕರಿಸುವಂತೆ ಹುರಿಗೊಳಿಸಿರುತ್ತದೆ. ಕನ್ನಡ ನಾಡಿನಲ್ಲಿಯೂ ಕನ್ನಡನುಡಿಯಲ್ಲಿಯೂ ಅವರಿಗಿದ್ದ ಅಭಿಮಾನವು ಮಿಕ್ಕ ಯಾವ ಕನ್ನಡಿಗರಿಗಿಂತಲೂ ಕಡಿಮೆಯಾಗಿರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಆದರೆ ಇವೆಲ್ಲಕ್ಕಿಂತಲೂ ಪರಮಾರ್ಥವಿಚಾರದಲ್ಲಿ ಅವರು ಮುಟ್ಟಿದ್ದ ಆಳವೂ ಅಧ್ಯಾತ್ಮಸಾಧನೆಯಲ್ಲಿ ಅವರು ತೋರಿಸುತ್ತಿದ್ದ ಶ್ರದ್ಧಾತತ್ಪರತೆಗಳೂ ತಮಗೆ ತಿಳಿದು ಬಂದ ವಿಷಯಗಳನ್ನು ತಿಳಿಗನ್ನಡದಲ್ಲಿ ಸೂರೆಗೊಟ್ಟ ಅವರ ಪ್ರತಿಭೆಯೂ ಔದಾರ್ಯವೂ ನನ್ನನ್ನು ಬೆರಗುಗೊಳಿಸಿರುತ್ತವೆ.

ಅಂತರಂಗದಲ್ಲಿ ನಾವಿಬ್ಬರೂ ಕಲೆತು ಮಾತಾಡುತ್ತಿದ್ದಾಗ ಅವರು ಸಂಭಾಷಣೆಯಲ್ಲಿ ತೋರಿಸುತ್ತಿದ್ದ ರಸಹಾಸ್ಯ, ತಮ್ಮ ಪರಿಚಯದವರಲ್ಲಿ ಒಬ್ಬನಾದ ನನ್ನಲ್ಲಿ ಅವರಿಟ್ಟಿದ್ದ ಪ್ರೇಮ - ಮುಂತಾದ ವೈಯಕ್ತಿಕಜೀವನದ ಭಾಗವನ್ನು ಕುರಿತು ಇಲ್ಲಿ ಪ್ರಸ್ತಾಪಿಸಲು ಎಡೆಯಿಲ್ಲ. ಆದರೆ ಇತ್ತೀಚೆಗೆ ವೇದಾಂತವಿಚಾರದಲ್ಲಿ ನನಗೂ ಅವರಿಗೂ ಉಂಟಾದ ಕೆಲವು ಅಭಿಪ್ರಾಯಭೇದಗಳನ್ನು ಅವರು ಮುಚ್ಚು ಮರೆಯಿಲ್ಲದೆ ಹೊರಗೆಡಹಿದ್ದು, ಈಚೆಗೆ ನನ್ನ ಅಭಿಪ್ರಾಯಗಳು ಸರಿಯೆಂದು ತಮಗೆ ಕಾಣಿಸಿದಮೇಲೆ ಮತ್ತೆ ನನ್ನಲ್ಲಿ ಮೊದಲಿಗಿಂತಲೂ ಹೆಚ್ಚಿನ

ಬಳಕೆಯಿಂದ ಬೆರತಿರಬೇಕೆಂದು ಹವಣಿಸಿದ್ದು, ನನ್ನ ದುರ್ದೈವದಿಂದ ಅಷ್ಟಕ್ಕೆಡೆಯಿಲ್ಲದೆ ಕರಾಳಕಾಲನ ವಶದಿಂದ ಅವರು ಚೈತ್ರ ಬಹುಳ ತದಿಗೆಯ ದಿನ ಇಹ ಲೋಕವನ್ನು ಬಿಟ್ಟು ತೆರಳಿದ್ದು - ಇವುಗಳಿಂದ ನನ್ನ ಮನದಲ್ಲುಂಟಾಗಿರುವ ಮೆಚ್ಚುಗೆಯೂ, ಮೈತ್ರಿಯ ಹೊರಹೊಮ್ಮುಗೆಯೂ ವಿರಹಶೋಕವೂ ಒಳತೋಟಿಯಾಡುತ್ತಿರುವವು. ಪರಮಾತ್ಮನಲ್ಲಿ ನಾವಿಬ್ಬರೂ ಯಾವಾಗಲೂ ಒಂದಾಗಿಯೇ ಇರುವೆವೆಂಬ ಶಾಸ್ತ್ರೀಯದೃಷ್ಟಿಯ ಸಮಾಧಾನವೊಂದೇ ಚಿತ್ತದ ಈ ಏರಿಳಿತಗಳಿಗೆ ತಡೆಯಾಗಬಲ್ಲದು.

ಇಡಿಯ ಕರ್ಣಾಟಕಕ್ಕೇ ಪರಿಚಿತರಾಗಿರುವ ಈ ಮಹಾನುಭಾವರ ಜೀವನವನ್ನು ನನ್ನ ಕಣ್ಣಿಂದ ಅಳೆದು ಬರೆದಿರುವದಕ್ಕಾಗಿ ಕನ್ನಡಿಗರೆಲ್ಲರ ಕ್ಷಮೆಯನ್ನು ಬೇಡುತ್ತೇನೆ. ಕಷ್ಟಸಹಿಷ್ಣುಗಳಾಗಿ ನಿರಂತರವಿದ್ಯಾಭ್ಯಾಸಿಗಳಾಗಿ ಇಹಕ್ಕೂಪರಕ್ಕೂ ಬೇಕಾದ ಹೆಗ್ಗುರಿಯನ್ನು ನಡೆಯಿಂದಲೂ ನುಡಿಯಿಂದಲೂ ಜನರಿಗೆ ತೋರಿಕೊಡಬಲ್ಲ ಇಂಥ ಚಿದಂಬರಯ್ಯನವರುಗಳು ಕನ್ನಡನಾಡಿನಲ್ಲಿ ಹೇರಳವಾಗಿ ಉದಯಿಸಲಿ! ಜಯ ಚಿದಂಬರ!!

★★★★★

# ಶ್ರೀ ದಯಾನಂದಸ್ವಾಮಿಗಳು

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀದಯಾನಂದಸರಸ್ವತಿಯವರು ನಿರ್ವಾಣವಾಗಿ ಇಂದಿಗೆ ಅರ್ಧಶತಮಾನವಾಯಿತು. ಈ ಬಗ್ಗೆ ಆರ್ಯಸಮಾಜದವರೂ ಸ್ವಾಮಿಗಳವರಲ್ಲಿ ಪೂಜ್ಯಬುದ್ಧಿಯಿರುವವರೂ ಸೇರಿ ಒಂದು ಮಹೋತ್ಸವವನ್ನು ಇಷ್ಟರಲ್ಲಿಯೇ ಏರ್ಪಡಿಸುವದರಲ್ಲಿರುತ್ತಾರೆ. ಈ ಸಮಯದಲ್ಲಿ ಅವರ ಪುಣ್ಯಚರಿತ್ರೆಯನ್ನೂ ಅವರಿಂದ ಆಗಿರುವ ಲೋಕೋಪಕಾರವನ್ನೂ ನೆನಸಿಕೊಳ್ಳುವದು ಭರತಖಂಡದವರಿಗೆಲ್ಲರಿಗೂ ಯುಕ್ತವಾಗಿರುತ್ತದೆ.

ಸ್ವಾಮಿಗಳವರು ಶಿವಭಕ್ತನಾದ ಒಬ್ಬ ಬ್ರಾಹ್ಮಣನ ಮನೆಯಲ್ಲಿ ಮೂಲಶಂಕರನೆಂಬ ಹೆಸರಿನಿಂದ ಕ್ರಿ.ಶ. 1824ರಲ್ಲಿ ಜನಿಸಿದರು. ಒಂದು ದಿನ ಶಿವರಾತ್ರೆಯಲ್ಲಿ ಶಿವಲಿಂಗದ ಮೇಲೆ ಇಲಿಯೊಂದು ಓಡಾಡುತ್ತಿದ್ದದ್ದನ್ನು ಕಂಡು ಬಾಲ್ಯದಲ್ಲಿಯೇ ಇವರಿಗೆ ''ವಿಗ್ರಹಾರಾಧನೆಯು ಶಾಸ್ತ್ರೋಕ್ತವಾಗಿರ ಬಹುದೆ?'' ಎಂಬ ಯೋಚನೆಯು ಹತ್ತಿತಂತೆ. ತಮ್ಮ ಪ್ರೀತಿಯ ತಂಗಿ, ಚಿಕ್ಕಪ್ಪ – ಇವರಿಬ್ಬರೂ ವಾಂತಿಭೇದಿಯ ರೋಗದಿಂದ ಸಾಯುತ್ತಲೂ 'ಸಾವುತಪ್ಪಿಸಲು ಮಾರ್ಗವುಂಟೇ? ಯೋಗಸಿದ್ಧಿಗಳಿಂದ ಅಜರಾಮರರಾಗಬಹುದೆ?' ಎಂಬುದನ್ನು ಪರೀಕ್ಷಿಸಿನೋಡಬೇಕೆಂಬ ಬುದ್ಧಿಯಾಯಿತಂತೆ. ತಂದೆಯು ಮದುವೆಯನ್ನು ಮಾಡುವ ಯೋಚನೆಯನ್ನು ಹಚ್ಚಿಕೊಳ್ಳುತ್ತಿರುವ ಹೊತ್ತಿಗೆ ಸಂಸಾರದಲ್ಲಿ ವಿರಕ್ತಿಯುಂಟಾಗಿ ಸತ್ಯವನ್ನು ತಿಳೀಯಬೇಕೆಂಬ ತವಕದಿಂದ ಮನೆಯನ್ನು ಬಿಟ್ಟು ಸದ್ಗುರುವನ್ನು ಹುಡುಕಿಕೊಂಡು ಹೊರಟರಂತೆ. ಇದೆಲ್ಲ ಇವರಲ್ಲಿ ಮೊದಲಿಂದಲೂ ಇದ್ದ ಪರಮಾರ್ಥವಾಸನೆಯನ್ನು ಸೂಚಿಸುವದು.

ದಾರಿಯಲ್ಲಿ ಸಿಕ್ಕ ಸಾಧುಗಳನ್ನೆಲ್ಲ ಕಂಡು ಮಾತನಾಡಿಸುತ್ತಾ ಲಾಲಭಗತರಾಮನೆಂಬ ನೈಷ್ಠಿಕಬ್ರಹ್ಮಚರ್ಯಾಶ್ರಮವನ್ನು ಪಡೆದು ಕೆಲವು ದಿನಗಳ ಮೇಲೆ ಪೂರ್ಣಾನಂದಸರಸ್ವತಿಗಳೆಂಬವರಿಂದ ಸಂನ್ಯಾಸಾಶ್ರಮವನ್ನು ಹೊಂದಿ ದಯಾನಂದಸರಸ್ವತಿಗಳೆಂಬ ಹೆಸರಿನಿಂದ ಪ್ರಸಿದ್ಧರಾದರು. ಜ್ವಾಲಾನಂದಗಿರಿ, ಶಿವಾನಂದಗಿರಿ – ಎಂಬಿಬ್ಬರಲ್ಲಿ ಯೋಗಾಭ್ಯಸವನ್ನು ಮಾಡಿ ಕಾಶ್ಮೀರಮರ್ಗವಾಗಿ ಹಿಮಾಲಯದವರೆಗೂ ಸದ್ಗುರುವನ್ನು ಹುಡುಕಿಕೊಂಡು ಕಾಲುನಡುಗೆಯಿಂದಲೇ ಆರ್ಯಾವರ್ತದಲ್ಲೆಲ್ಲ ಸಂಚರಿಸಿದರು. ತಮ್ಮ ಮೂವತ್ತಾರನೆಯ ವಯಸ್ಸಿನಲ್ಲಿ ವಿರಜಾನಂದಸ್ವಾಮಿಗಳಲ್ಲಿ ಶಿಷ್ಯವೃತ್ತಿಗೆನಿಂತು ಅವರ ಸದುಪದೇಶಗಳನ್ನು ಗ್ರಹಣಮಾಡಿ ತಾವು ಕಲಿತದ್ದನ್ನು ಸದ್ವಿನಿಯೋಗಮಾಡುವದಕ್ಕೆಂದು ಸೊಂಟಕಟ್ಟಿ ನಿಂತರು. ಇದೆಲ್ಲ ಅವರಿಗೆ ವಿದ್ಯಾಭ್ಯಾಸದಲ್ಲಿ ಇದ್ದ ಆದರವನ್ನೂ ತತ್ತ್ವನಿಷ್ಠೆಯನ್ನೂ ತೋರಿಸುವದು.

ಮುಂದೆ ತಮ್ಮ ಜೀವನವನ್ನೆಲ್ಲ ಸ್ವಾಮಿಗಳು ವೈದಿಕಮತವನ್ನು ಶುದ್ಧಿಗೊಳಿಸಿ ಅದನ್ನು ಪ್ರಾಚೀನಕಾಲದ ಉನ್ನತಸ್ಥಿತಿಗೆ ಎತ್ತುವದಕ್ಕೇ ವಿನಿಯೋಗಿಸಿ ತಮ್ಮ ಕೈಲಾದ ಸಾಹಸವನ್ನೆಲ್ಲ ಮಾಡಿದರು. ಅಲ್ಲಲ್ಲಿ ಉಪನ್ಯಾಸಗಳನ್ನು ಮಾಡುವದು; ಪಂಡಿತರ ಸಭೆಗಳನ್ನು ಸೇರಿಸಿ ವಾಕ್ಯಾರ್ಥಗಳನ್ನು ನಡೆಯಿಸುವದು; ಕರಪತ್ರಗಳು,

ಗ್ರಂಥಗಳು, ಭಾಷ್ಯ –ಮುಂತಾದವುಗಳನ್ನು ರಚಿಸುವದು – ಇವು ಅವರ ಜೀವಿತದ ಅಂತ್ಯಭಾಗದ ಉದ್ಯಮಗಳಲ್ಲಿ ಮುಖ್ಯಸ್ಥಾನವನ್ನು ಆಕ್ರಮಿಸಿದ್ದವು. ಕ್ರಿಸ್ತಿಯನ್ ಮಿಷನರಿಗಳೊಡನೆಯೂ ಮಹಮ್ಮದೀಯ ಮೌಲ್ವಿಗಳೊಡನೆಯೂ ಧರ್ಮಗ್ರಂಥ, ದೇವರಸ್ವರೂಪ, ಜನ್ಮಾಂತರ, ಅವತಾರ, ಪಾಪಪುಣ್ಯ – ಮುಂತಾದ ವಿಷಯಗಳನ್ನು ಚರ್ಚೆಮಾಡಿ ವೈದಿಕಮತದ ಹೆಚ್ಚುಗಾರಿಕೆಯನ್ನು ತೋರಿಸುವದಕ್ಕೂ ಇವರು ಮುಂದುಗಾಲಿಡುತ್ತಿದ್ದರು. ಇದೆಲ್ಲ ವೈದಿಕಧರ್ಮದಲ್ಲಿ ಸ್ವಾಮಿಗಳಿಗಿದ್ದ ಮಹಾಭಿಮಾನವನ್ನು ವ್ಯಕ್ತಗೊಳಿಸುವದು.

ಸ್ವಾಮಿಗಳವರು ಮಾಡಿರುವ ಮುಖ್ಯಕಾರ್ಯವೆಂದರೆ **ಆರ್ಯ ಸಮಾಜದ ಸ್ಥಾಪನೆ.** ಅವರು ಬೊಂಬಾಯಿಗೆ ಬಂದಿದ್ದಾಗ ಅನೇಕರ ಪ್ರಾರ್ಥನೆಯಂತೆ ಈ ಸಮಾಜವನ್ನು ಅಲ್ಲಿ 1875ರಲ್ಲಿ ಮೊದಲು ಸ್ಥಾಪಿಸಿದರು. ಮುಂದೆ 1877ರಲ್ಲಿ ಪಂಜಾಬಿಗೆ ಹೋದಾಗ ಈ ಸಮಾಜದ ನಿಯಮಗಳನ್ನು ಪರಿಷ್ಕರಿಸಿದರು. (1) ಎಲ್ಲಾ ಅರಿವಿಗೂ ಇರವಿಗೂ ಮೂಲಕಾರಣನು ಪರಮೇಶ್ವರನು. (2) ಪರಮೇಶ್ವರನು ಸಚ್ಚಿದಾನಂದಸ್ವರೂಪನೂ ನಿರಾಕಾರನೂ ಸರ್ವಶಕ್ತನೂ ನ್ಯಾಯಕಾರಿಯೂ ದಯಾಲುವೂ ಅಜನೂ ಅನಂತನೂ ನಿರ್ವಿಕಾರನೂ ಅನಾದಿಯೂ ಅನುಪಮನೂ ಸರ್ವಾಧಾರನೂ ಸರ್ವೇಶ್ವರನೂ ಸರ್ವವ್ಯಾಪಕನೂ ಸರ್ವಾಂತರ್ಯಾಮಿಯೂ ಅಜರಾಮರನೂ ಅಭಯನೂ ನಿತ್ಯನೂ ಪವಿತ್ರನೂ ಸೃಷ್ಟಿಕರ್ತನೂ ಆಗಿರುತ್ತಾನೆ. ಆತನನ್ನೇ ಉಪಾಸನೆಮಾಡಬೇಕು. (3) ವೇದವು ಸತ್ಯವನ್ನು ತಿಳಿಸುವ ಗ್ರಂಥವಾದ್ದರಿಂದ ಅದನ್ನು ಆರ್ಯರೆಲ್ಲರೂ ಓದಿ ಅರ್ಥಮಾಡಿಕೊಂಡು ಇತರರಿಗೂ ತಿಳಿಯಪಡಿಸಬೇಕು. (4) ಸತ್ಯವನ್ನು ಒಪ್ಪುವದಕ್ಕೂ ಅಸತ್ಯವನ್ನು ಬಿಡುವದಕ್ಕೂ ಯಾವಾಗಲೂ ಸಿದ್ಧರಿರಬೇಕು. (5) ಧರ್ಮಾನುಸಾರವಾಯೇ ಕೆಲಸಗಳನ್ನು ಮಾಡಬೇಕು. (6) ಲೋಕೋಪಕಾರವನ್ನು ಮಾಡುವದೇ ಆರ್ಯ 'ಮಾಜದ ಮುಖ್ಯೋದ್ದೇಶವು. (7) ಎಲ್ಲರಲ್ಲಿಯೂ ಪ್ರೀತಿಪೂರ್ವಕ, ಧರ್ಮಾನುಸಾರ, ಯಥಾಯೋಗ್ಯ ವರ್ತನವಿರಬೇಕು. (8) ಅಜ್ಞಾನವನ್ನು ನಾಶಗೊಳಿಸಬೇಕು, ಜ್ಞಾನವನ್ನು ಹಬ್ಬಿಸಬೇಕು. (9) ಸರ್ವರ ಉನ್ನತಿಯಿಂದಲೇ ತನ್ನ ಉನ್ನತಿಯಾಗುವದೆಂಬುದನ್ನು ಕಂಡುಕೊಳ್ಳಬೇಕು. (10) ಎಲ್ಲರೂ ಸಾಮಾಜಿಕಸರ್ವಹಿತಕಾರಿಯಾದ ನಿಯಮಗಳನ್ನು ಪಾಲಿಸಿಕೊಂಡು ಬರಬೇಕು; ಆದರೆ ಪ್ರತಿಯೊಬ್ಬನೂ ತನ್ನ ತನ್ನ ಹಿತಕಾರಿನಿಯಮದಲ್ಲಿ ತಾನು ತಾನು ಸ್ವತಂತ್ರನಿರುವನು– ಇದು ಸಮಾಜದ ಮುಖ್ಯನಿಯಮಗಳ ಸಾರಾಂಶವು.

ಸ್ವಾಮಿಗಳವರು ಜಾತಿಪದ್ಧತಿ, ಸ್ತ್ರೀಯರ ಸ್ಥಿತಿ, ಯುವಕಯುವತಿಯರ ಧರ್ಮ, ಕರ್ಮಾಚರಣೆಗಳು, ವಿವಾಹ, ಸಮುದ್ರಯಾನ - ಇವುಗಳ ವಿಷಯದಲ್ಲಿಯೇ ಮುಖ್ಯವಾದ ತಿದ್ದುಪಾಡುಗಳು ಹಿಂದೂಮತದಲ್ಲಿ ಆಗಬೇಕೆಂಬುದನ್ನು ನಿರ್ಭೀತಿಯಿಂದ ಸ್ಪಷ್ಟಪಡಿಸಿದರು. ವಿದ್ಯಾಭ್ಯಾಸದಲ್ಲಿ ಗುರುಕುಲಪದ್ಧತಿಯಿರಬೇಕೆಂಬುದನ್ನು ಮೊದಲು ಜನತೆಯ ಮುಂದೆ ಇಟ್ಟವರು ಇವರೇ; ಸಂಸ್ಕೃತದ ಜೊತೆಗೆ ರಾಜಭಾಷೆಯನ್ನೂ ಓದಲೇ ಬೇಕಂಬುದು ಅವರ ಹಿತವಾದ. ಪರಮತದವರು ಹಿಂದುಗಳನ್ನು ಆಗಾಗ್ಗೆ ತಮ್ಮ ಮತ್ತಕ್ಕೆ ದೀಕ್ಷೆಯನ್ನು ಕೊಟ್ಟು ತಿರುಗಿಸಿಕೊಳ್ಳುತ್ತಿರುವದು ಹಿಂದೂಸಮಾಜದ ಹೀನಸ್ಥಿತಿಗೆ ಕಾರಣವಾಗಿರುವದೆಂಬುದನ್ನು ಮೊದಲು ಜನರ ಲಕ್ಷ್ಯಕ್ಕೆ ತಂದವರೂ ದಯಾನಂದಸರಸ್ವತಿಗಳವರೇ ಎಂದು ಹೇಳಬಹುದು. ಇದೆಲ್ಲ ಸಮಾಜಶುದ್ಧಿಯನ್ನು ಕುರಿತು ಸ್ವಾಮಿಗಳಿಗಿದ್ದ ಅಭಿಪ್ರಾಯವನ್ನು ಹೊರಗೆಡವುತ್ತವೆ.

ದಯಾನಂದಸರಸ್ವತಿಗಳು ಹಿಂದಿನ ಭಾಷ್ಯಕಾರರುಗಳಂತೆಯೇ ವೇದಾರ್ಥವನ್ನು ತಿಳಿಸುವ ಗ್ರಂಥವನ್ನು ಬರೆಯುವದು, ಬರೆದ ಅಭಿಪ್ರಾಯಗಳನ್ನು ಆಚರಣೆಗೆ ತರುವದು, ಶಿಷ್ಯಕೋಟಿಯಲ್ಲಿಯೂ ಸ್ಥಾಪಿಸುವದು- ಈ ಕಾರ್ಯಗಳನ್ನು ಮಾಡಿರುವದರಿಂದ ಇವರನ್ನೂ ಒಬ್ಬ ಆಚಾರ್ಯರೆಂದೇ ಕರೆಯಬಹುದಾಗಿತ್ತಾದರೂ ಪ್ರಸ್ಥಾನತ್ರಯದ ಏಕವಾಕ್ಯತೆಯನ್ನೂ ತೋರಿಸದೆ ಹೋದ್ದರಿಂದಲೋ, ಅಥವಾ ವೇದವಿರುದ್ಧವಲ್ಲವೆಂದು ಮಿಕ್ಕ ಹಿಂದುಗಳು ನಂಬಿರುವ ಸ್ಮೃತಿಪುರಾಣವಾಕ್ಯಗಳನ್ನೂ ಅವುಗಳಲ್ಲಿ ಹೇಳಿರುವ ಆಚರಣೆಗಳನ್ನೂ ಇವರು ಖಂಡಿಸಿರುವದರಿಂದಲೋ ಏನೋ, ಇವರನ್ನು ಆಚಾರ್ಯರೆಂದು ಸನಾತಧರ್ಮಿಗಳು ಗಣಿಸಿಲ್ಲ. ಸ್ವಾಮಿಗಳು ಬರೆದಿರುವ ''**ಸತ್ಯಾರ್ಥಪ್ರಕಾಶ**''ವೆಂಬ ಗ್ರಂಥವನ್ನು ಓದಿದರೆ ಧರ್ಮವಿಷಯದಲ್ಲಿ ಇವರ ನಂಬಿಕೆಯು ಚೆನ್ನಾಗಿ ಗೊತ್ತಾಗುವದು. ಆ ಗ್ರಂಥದಲ್ಲಿ ಬರೆದಿರುವ ಎಲ್ಲಾ ಅಭಿಪ್ರಾಯಗಳೂ ಸನಾತನಹಿಂದುಗಳಿಗೆ ಒಪ್ಪಾಗುವಂತೆ ಇಲ್ಲ; ಆ ಗ್ರಂಥದಲ್ಲಿ ಬರೆದಿರುವ ಪರಮತಖಂಡನೆಯ ಭಾಗದಲ್ಲಿರುವ ಭಾಷೆಯು ಅನ್ಯಮತೀಯರಿಗೆ ತುಂಬ ನೋವನ್ನುಂಟುಮಾಡುವಂತೆ ಇದೆ; ಕೆಲವು ಸಂದರ್ಭಗಳಲ್ಲಿ ಈ ಭಾಗವು ಅನ್ಯಮತವನ್ನು ಯಥಾರ್ಥವಾಗಿ ವರ್ಣಿಸಿರುವದಿಲ್ಲವೆಂದೂ ಅನೇಕರು ಹೇಳುತ್ತಾರೆ. ಇದೆಲ್ಲ ಹೇಗಾದರೂ ಇರಲಿ. ಭರತಖಂಡದ

ಸಂಸ್ಕೃತಿಯಲ್ಲಿ ಬದ್ಧಾದರರಾಗಿ ಜನೋಪಕಾರವನ್ನು ಮಾಡುವದಕ್ಕೆಂದು ತಮ್ಮ ತನುಮನೋಧನಗಳನ್ನು ಧಾರೆಯೆರೆದ ಮಹಾವಿಭೂತಿಗಳಲ್ಲಿ ದಯಾನಂದಸರಸ್ವತಿಯವರೊ ಒಬ್ಬರೆಂಬ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

★★★★★

# ರಾಜಾ ರಾಮಮೋಹನ ರಾಯ

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ವೇದಪ್ರಾಮಾಣ್ಯವನ್ನು ಒಪ್ಪಿ ಹಿಂದೂಸಮಾಜವನ್ನೂ ಮತವನ್ನೂ ಶುದ್ಧಿಗೊಳಿಸುವದಕ್ಕೆ ಪ್ರಯತ್ನಪಟ್ಟ ಇತ್ತೀಚಿನ ದೇಶಾಭಿಮಾನಿಗಳಲ್ಲಿ ರಾಜಾರಾಮ ಮೋಹನರಾಯನು ಮೊಟ್ಟಮೊದಲನೆಯವನೆನ್ನಬಹುದು. ಆತನ ಪುಣ್ಯತಿಥಿಯ ಶತಾಬ್ದಿಕಮಹೋತ್ಸವವನ್ನು ಸೆಪ್ಟೆಂಬರು ತಿಂಗಳಲ್ಲಿ ನಡೆಯಿಸಬೇಕೆಂದು ಬ್ರಹ್ಮ ಸಮಾಜದವರೂ ಅವರಲ್ಲಿ ಸಹಾನುಭೂತಿಯುಳ್ಳವರೂ ನಿಶ್ಚಯಿಸಿರುತ್ತಾರೆ. ಆದ್ದರಿಂದ ಈ ಕಾಲದಲ್ಲಿ ಆತನ ಚರಿತ್ರೆಯನ್ನು ನೆನಪಿಗೆ ತಂದುಕೊಳ್ಳುವದು ನಮಗೆಲ್ಲರಿಗೂ ಯೋಗ್ಯವಾಗಿದೆ.

ರಾಮಮೋಹನರಾಯನು ವರ್ಧಮಾನದ ರಾಧಾನಗರದಲ್ಲಿ 'ರಾಯ'ರೆಂದು ವಂಶಪರಂಪರೆಯಿಂದ ಕರೆಯಿಸಿಕೊಂಡಿದ್ದ 'ಕುಲೀನ' ಬ್ರಾಹ್ಮಣರ ಮನೆಯಲ್ಲಿ ಹುಟ್ಟಿದನು. ಇವನಿಗೆ ಪಾಟ್ನದಲ್ಲಿ ಮೂರು ವರ್ಷ ವಿಧ್ಯಾಭ್ಯಾಸವಾಯಿತು, ಈಸ್ಟ್ ಇಂಡಿಯ ಕಂಪನಿಯ ನೌಕರಿಯಲ್ಲಿಯೇ ಮೊದಲ ಪ್ರಾಯವೆಲ್ಲ ಕಳೆಯಿತು. ಈ ಎರಡು ಬಗೆಯ ಸಹವಾಸದಿಂದ ಇವನಿಗೆ ಅರಬ್ಬಿ, ಪಾರಸಿ, ಇಂಗ್ಲಿಷ್, ಹೀಬ್ರೂ, ಗ್ರೀಕ್, ಲ್ಯಾಟಿನ್ – ಈ ಭಾಷೆಗಳಲ್ಲಿ ಒಳ್ಳೆಯ ಜ್ಞಾನವುಂಟಾಯಿತು. ಇಸ್ಲಾಂಮತದ ಮತ್ತು ಕ್ರಿಸ್ತಿಯನ್‌ಮತದ ತತ್ತ್ವಗಳೂ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನುಂಟುಮಾಡಿದವು. ಏಕೇಶ್ವರವಾದವು – ಎಂದರೆ ಜೀವರಿಗಿಂತ ಬೇರೆಯಾಗಿಯೂ ಅವರೆಲ್ಲರಿಗೂ ಉಪಾಸ್ಯನಾಗಿಯೂ ಇರುವ ದೇವರು ಒಬ್ಬನೇ ಎಂಬ ವಾದವು – ಅವನಿಗೆ ಹೆಚ್ಚಾಗಿ ರುಚಿಸುವದಕ್ಕೆ

ಇದೇ ಮುಖ್ಯಕಾರಣವೆನ್ನಬಹುದು. ರಾಯನು ಕಾಶಿಯಲ್ಲಿ ಸಂಸ್ಕೃತವನ್ನು ಓದಿ ಉಪನಿಷತ್ತುಗಳ ಮತ್ತು ಬ್ರಹ್ಮಸೂತ್ರದ ಪರಿಪರಿವನ್ನೂ ಮಾಡಿಕೊಂಡನು; ಆದರೆ ಅವುಗಳಲ್ಲಿ ಅವನಿಗೆ ಬ್ರಹ್ಮಾತ್ಮೈಕತ್ವವು ಗೋಚರವಾಗಲಿಲ್ಲ; ತನಗೆ ಮೆಚ್ಚಾಗಿದ್ದ ಏಕೇಶ್ವರವಾದವನ್ನೇ ಆ ಗ್ರಂಥಗಳೂ ಎತ್ತಿ ಹಿಡಿದಿರುವವೆಂದು ಬಗೆದು ಅವುಗಳಿಗೆ ಆ ಅಭಿಪ್ರಾಯದ ವ್ಯಾಖ್ಯಾನವನ್ನೇ ಆತನು ಬರೆದಿರುತ್ತಾನೆ.

ಸಮಾಜಸುಧಾರಣೆಯೆಂಬುದು ರಾಮಮೋಹನರಾಯನ ರಕ್ತಕ್ಕೆ ಸೇರಿ ಬಿಟ್ಟಿದ್ದ ಭಾವನೆ. ಸಹಗಮನಪದ್ಧತಿಯು ವೇದವಿರುದ್ಧವೆಂದು ತೋರಿಸುವದಕ್ಕೆ ಅವನು ಬರೆದ ಗ್ರಂಥದಿಂದ ಕ್ರುದ್ಧನಾದ ಅವನ ತಂದೆಯು ಅವನನ್ನು ಮನೆಯಿಂದ ಹೊರಡಿಸಿಬಿಟ್ಟನು. ತಂದೆಯು ಸಾಯುವವರೆಗೂ ರಾಯನು ಮತ್ತೆ ಮನೆಗೆ ಬಂದು ಸೇರುವದಾಗಲಿಲ್ಲ. ಈ ಸಂದರ್ಭದಲ್ಲಿಯೇ ಅವನು ಈಸ್ಟ್‌ಇಂಡಿಯ ಕಂಪೆನಿಯ ನೌಕರಿಗೆ ಸೇರಿಕೊಂಡದ್ದು. ಅವನು ಅಲ್ಲಿ ಮೇಲಿನಧಿಕಾರಿಗಳಿಗೆ ಮೆಚ್ಚಾಗಿ ಮೆಲ್ಲಮೆಲ್ಲಗೆ ಉನ್ನತಸ್ಥಾನವನ್ನೇರಿದನು; ಕೊನೆಗೆ ಅವನ ಪ್ರೇರಣೆಯಿಂದ ಸಹಗಮನಪದ್ಧತಿಯನ್ನು ನಿಲ್ಲಿಸುವ ರಾಜಶಾಸನವೇ ಆಗಿಬಿಟ್ಟಿತು. ಬಹುಪತ್ನೀ ನಿಷೇಧ, ವಿಧವಾವಿವಾಹ, ಹಿಂದೂಮುಸಲ್ಮಾನರ ಐಕ್ಯ, ಜಾತ್ಯಂತರವಿವಾಹ - ಮುಂತಾದ ಎಷ್ಟೋ ಸುಧಾರಣೆಗಳಿಗೆ ಇವನೇ ಮೊದಲು ಕೈಯಿಟ್ಟವನು.

ರಾಮಮೋಹನರಾಯನಿಗೆ ದೆಹಲಿಯ ಚಕ್ರವರ್ತಿಯು 'ರಾಜ'ನೆಂಬ ಬಿರುದನ್ನು ಕೊಟ್ಟಿದ್ದನು. ಕಂಪೆನಿಯ ಕೆಲಸದಲ್ಲಿದ್ದಾಗ ಇವನು ಸ್ವಂತವಾಗಿ ಸಂಪಾದಿಸಿದ್ದ ಹಣವೂ ಪಿತ್ರಾರ್ಜಿತವಾದ ಆಸ್ತಿಯ ಉತ್ಪತ್ತಿಯೂ ಸೇರಿ ಇಹಸೌಖ್ಯಕ್ಕೇನೂ ಕಡಿಮೆಯಿಲ್ಲದಂಥ ಸುಖಜೀವನಕ್ಕೆ ಅವಕಾಶವಾಗಿದ್ದಿತು. ಅದರೂ ಇವನು ತನ್ನ ಆದಾಯದ ಮೂರನೆಯೊಂದು ಪಾಲನ್ನು ಮಾತ್ರ ತನ್ನ ವೆಚ್ಚಕ್ಕೆ ಇಟ್ಟುಕೊಂಡು ಮಿಕ್ಕದ್ದೆಲ್ಲವನ್ನೂ ಬಂಧುಗಳಿಗೂ ವಿದ್ಯಾಭ್ಯಾಸಕ್ಕೂ ತನ್ನ ಪ್ರೀತಿಗೆ ಪಾತ್ರವಾಗಿದ್ದ ಯೂನಿಟೇರಿಯನ್ ಕ್ರೈಸ್ತಸಂಘಕ್ಕೂ ಅದರ ಮುದ್ರಣಾಲಯಕ್ಕೂ ಬೇರೆಬೇರೆ ದಾನಧರ್ಮಗಳಿಗೂ ವಿನಿಯೋಗಿಸುತ್ತಿದ್ದನು. ಇವನ ಪ್ರೋತ್ಸಾಹದಲ್ಲಿ ಎಷ್ಟೋ ವಿದ್ಯಾಶಾಲೆಗಳೂ ವರ್ತಮಾಸಪತ್ರಿಕೆಗಳೂ ಎದ್ದುಕೊಂಡವು.

ರಾಯನಿಗೆ ಮತಸುಧಾರಣೆಯಲ್ಲಿ ಅತಿಶಯವಾದ ಆದರವಿದ್ದಿತು. ತನ್ನ ಚಿಕ್ಕಂದಿನಲ್ಲಿಯೇ ಮೂರ್ತಿಪೂಜೆಯನ್ನು ಖಂಡನೆಮಾಡಿ ಬರೆದ ಒಂದು ಪಾರ್ಸಿ

ಗ್ರಂಥದಿಂದ ಇವನು ತಂದೆಯ ಅಸಮಾಧಾನಕ್ಕೆ ಗುರಿಯಾಗಿದ್ದನು. ಕ್ರಿಸ್ತಿಯನ್ ಮತದಲ್ಲಿ ತುಂಬ ಗೌರವವುಳ್ಳವನಾದರೂ ಅವರ ವ್ಯೂಹತ್ರಯ (Trinity) ವಾದವನ್ನು ನಿರ್ಭೀತಿಯಿಂದ ಖಂಡಿಸುತ್ತಿದ್ದನು. ಇವನನ್ನು ವಾದದಿಂದ ತನ್ನ ಮತಕ್ಕೆ ತಿರುಗಿಸಬೇಕೆಂದು ಬಂದ ಬ್ಯಾಪ್ಟಿಸ್ಟ್ ಮಿಷನರಿಯಾದ ಆಡಾಮನೆಂಬ ಪಾದ್ರಿಯು ತಾನೇ ಇವನ ಮತಕ್ಕೆ ತಿರುಗಿ ಅದರ ಪ್ರಸಾರಕ್ಕೆ ಸಹಾಯಕನಾದನು. ''**ಜೀಸಸ್ಸನ ಉಪದೇಶಗಳು- ಶಾಂತಿಗೂ ಸೌಖ್ಯಕ್ಕೂ ಮಾರ್ಗದರ್ಶಿಕೆ**'' ಎಂಬ ಹೆಸರಿನಿಂದ ಇವನು ಬರೆದ ಪುಸ್ತಕವು ಕೆಲವು ಕ್ರಿಸ್ತಿಯನ್ ಪಾದ್ರಿಗಳ ವಿರೋಧವನ್ನೂ ಇವನಿಗೆ ತಂದುಕೊಟ್ಟಿತು.

ರಾಮಮೋಹನರಾಯನಿಗೆ ಸೂಫಿಯವರ ಪರಿಣಾಮವಾಗಿ ಅವರ ಯೋಗಸಾಧನೆಯಲ್ಲಿ ಬಲವಾದ ವಿಶ್ವಾಸವಿತ್ತು. ಸಾಧನೆಯಿಂದ ದೊರೆಯುವ ಅನುಭವಕ್ಕೆ ಹೊಂದಿಕೆಯಾದ ವಿಚಾರಕ್ಕೆ ಯಾವದು ಒಟಾಗುವದೋ ಅದೇ ಸರಿಯಾದ ಧರ್ಮವೆಂದು ಅವನ ನಂಬಿಕೆ. ಅಂತು ಈತನು ಕ್ರೈಸ್ತಪ್ರೇಮಿಯಾದರೂ ಕ್ರಿಸ್ತಿಯನ್ನನಾಗಲಿಲ್ಲ; ಉಪನಿಷತ್ತುಗಳನ್ನು ಅಧ್ಯಯನಮಾಡಿದ್ದರೂ ಏಕಾತ್ಮವಾದಿಯಾಗಲಿಲ್ಲ; ಭಕ್ತಿಮಾರ್ಗಪ್ರಿಯನಾದರೂ ಬಂಗಾಳದಲ್ಲಿ ಹರಡಿದ್ದ ಕೃಷ್ಣಚೈತನ್ಯಮತವನ್ನು ಅನುಸರಿಸಲಿಲ್ಲ. ಯಾವದೊಂದು ಮತದವರ ಕಟ್ಟಿಗೂ ಸಿಕ್ಕದೆ ಸ್ವತಂತ್ರವಾಗಿಯೇ ದೇವರನ್ನು ಆರಾಧಿಸಬೇಕೆನ್ನುವವರಿಗಾಗಿ ತಾನೇ ಒಂದು ಹೊಸ ಸಂಘವನ್ನು ಏರ್ಪಡಿಸಿದ್ದನು. ಇದಕ್ಕಿಂತ ಮೊದಲು 1815ರಲ್ಲಿಯೇ ''**ಆತ್ಮೀಯಸಭೆ**''ಯೆಂಬ ಸಂಘವನ್ನು ಏರ್ಪಡಿಸಿದ್ದನು. 1817ರಲ್ಲಿ ತನ್ನ ಮತಕ್ಕನುಗುಣವಾಗಿ ಗಾಯತ್ರೀ ವ್ಯಾಖ್ಯಾನ ವನ್ನು ಬರೆದು ಪ್ರಕಟಿಸಿದನು. ಕೊನೆಗೆ 1828ರಲ್ಲಿ ಮಿತ್ರಮಂಡಲಿಯವರ ಪ್ರೋತ್ಸಾಹದಿಂದ ''**ಬ್ರಹ್ಮಸಮಾಜ**''ವೆಂಬ ಒಂದು ಏಕೇಶ್ವರವಾದಿಗಳ ಸಂಘವನ್ನು ಸ್ಥಾಪಿಸಿದನು. ಜಗತ್ತಿನ ಸೃಷ್ಟಿಸ್ಥಿತಿಗಳೊಡೆಯನಾದ ಪರಮೇಶ್ವರನ ಆರಾಧನೆಯನ್ನೂ ನೀತಿಭಕ್ತಿಪರೋಪಕಾರಗಳನ್ನೂ ಬೆಳೆಯಿಸುವದು ಎಲ್ಲಾ ಮತದವರಲ್ಲಿಯೂ ಒಬ್ಬರಲ್ಲೊಬ್ಬರಿಗೆ ಮೈತ್ರಿಯನ್ನು ಬಲಪಡಿಸುವದು- ಇವೇ ಆ ಸಮಾಜದ ಮುಖ್ಯೋದ್ದೇಶಗಳಾಗಿದ್ದವು.

ಬ್ರಹ್ಮಸಮಾಜವು ಪ್ರತಿಶನಿವಾರವೂ ಏಳರಿಂದ ಒಂಬತ್ತು ಘಂಟೆಯವರೆಗೆ ಕಲೆಯುತ್ತಿತ್ತು. ಆಗ ವೇದಾಧ್ಯಯನ, ಉಪನಿಷದ್ವಾಕ್ಯಸೇವೆ, ವೇದವಚನಗಳ

ಅಭಿಪ್ರಾಯವನ್ನು ವಿವರಿಸುವ ನಿರೂಪಣ, ರಾಮಮೋಹನರಾಯನು ರಚಿಸಿದ್ದ ಕೀರ್ತನೆಗಳ ಗಾನ - ಇಷ್ಟು ಕಾರ್ಯಕಲಾಪವು ನಡೆಯುತ್ತಿತ್ತು. ರಾಯನು ಅನೇಕ ಭಾಷಾವಿಶಾರದನೂ ಅನೇಕ ಗ್ರಂಥಗಳನ್ನು ನಿರ್ಮಾಣಮಾಡಿದವನೂ ಸಾಮಾಜಿಕ ರಾಜಿಕೀಯವಿಚಾರಗಳಲ್ಲಿಯೇ ಚೆನ್ನಾಗಿ ಪ್ರವರ್ತಿಸಿದವನೂ ಆಗಿದ್ದರೂ ಬ್ರಹ್ಮಸಮಾಜಸ್ಥಾಪಕನಾಗಿಯೇ ಈಗ ಅವನ ಹೆಸರು ಲೋಕಪ್ರಸಿದ್ಧವಾಗಿರುವದು. ಈ ಸಮಾಜವು ಹಿಂದುಗಳ ವಿಚಾರದೃಷ್ಟಿಯನ್ನು ಹಿಗ್ಗಿಸಿತು, ಕ್ರಿಸ್ತಿಯನ್ನರ ದುರಭಿಮಾನವನ್ನು ತಗ್ಗಿಸಿತು. ನಿರಾಕಾರಸಗುಣನಾದ ಏಕೇಶ್ವರನನ್ನು ನಂಬುವವರೆಲ್ಲರೂ ಬಣ್ಣ, ಜಾತಿ, ಜನಾಂಗ, ಮತ - ಇವುಗಳ ಭೇದವಿಲ್ಲದೆ ಸಾಮರಸ್ಯದಿಂದ ಒಕ್ಕಡೆಗೆ ಕಲೆತು ಭಗವತ್ಪ್ರಾರ್ಥನೆಯನ್ನು ಮಾಡುವದಕ್ಕೆ ಉತ್ತಮವಾದ ಅವಕಾಶವನ್ನು ಕಲ್ಪಿಸಿತು. ದೆಹಲಿಯ ಬಾದಷಹನ ರಾಯಭಾರಿಯಾಗಿ ಇಂಗ್ಲೆಂಡಿಗೆ ಹೋದ ರಾಮಮೋಹನ ರಾಯನು ಅಲ್ಲಿಯೇ 1830ರಲ್ಲಿ ಕಾಲವಾದನು; ಆಮೇಲೆ ಈ ಸಮಾಜದ ಕಳೆಯು ಸ್ವಲ್ಪ ಕಡಿಮೆಯಾಯಿತು. ಹಿಂದೂಕ್ರೈಸ್ತಮತಗಳೆರಡನ್ನೂ ಕರಗಿಸಿ ಎರಕಹೊಯ್ದಂತೆ ಹೊರಟ ಈ ಹೊಸ ಸಮಾಜವು ತಾನು ಹುಟ್ಟಿದ ಒಂದು ಶತಮಾನದೊಳಗಾಗಿ ಅನೇಕ ಮಹಾಪುರುಷರಿಂದ ಬಗೆಬಗೆಯ ಮಾರ್ಪಾಡುಗಳನ್ನು ಹೊಂದಿತು.

★★★★★

# ಶ್ರೀ ಶ್ರೀ ಸ್ವಾಮಿ ಶಿವಾನಂದಜಿ ಮಹಾರಾಜರವರು

**- ದಿವ್ಯಜೀವನಸಮಾಜದ ಕಾರ್ಯದರ್ಶಿಗಳವರು, ಹೃಷೀಕೇಶ**

ಪರಮಹಂಸಪರಿವ್ರಾಜಕಾಚಾರ್ಯ ಶ್ರೀ ಸ್ವಾಮಿ ಶಿವಾನಂದಜಿ ಮಹಾರಾಜರವರು ಕ್ರಿ.ಶ.1887ನೆಯ ಸೆಪ್ಟೆಂಬರು ಗುರುವಾರದ ದಿನ ತಿನ್ನಲವೆಲಿ ಜಿಲ್ಲೆಯಲ್ಲಿ ತಾಮ್ರಪರ್ಣೀ ತಿರದಲ್ಲಿರುವ ಪಟ್ಟಾಂಬಿ ಎಂಬ ಊರಿನಲ್ಲಿ ಜನಿಸಿದರು. ಅವರು ಸುಪ್ರಸಿದ್ಧಪಂಡಿತರೂ ಯೋಗಿಗಳೂ ಜ್ಞಾನಿಗಳೂ ಆದ ಶ್ರೀ ಅಪ್ಪಯ್ಯದೀಕ್ಷಿತರವರ ವಂಶದವರು, ಎಟ್ಟಿಯಾಪುರಂ ಎಸ್ಟೇಟಿನ ತಹಸೀಲುದಾರರಾದ ಶ್ರೀ॥ ಪಿ. ಎಸ್. ವೆಂಗು ಅಯ್ಯರವರ ಮಕ್ಕಳು.

ಅವರು ಚಿಕ್ಕವರಾಗಿರುವರಾಗಲೇ ಚಟುವಟಿಕೆಯುಳ್ಳರೂ ಚುರುಕು ಬುದ್ಧಿಯವರೂ ಆಗಿದ್ದರು; ಎಟ್ಟಿಯಾಪುರದ ಹೈಸ್ಕೂಲಿನಲ್ಲಿಯೂ ತಿರುಚಿನಾಪಲ್ಲಿಯ ಎಸ್.ಪಿ.ಜಿ ಕಾಲೇಜಿನಲ್ಲಿಯೂ ವಿದ್ಯಾಭ್ಯಾಸಮಾಡಿದರು; ಸೂಕ್ಷ್ಮದರ್ಶಕಯಂತ್ರ ಪ್ರಯೋಗದ ವಿಜ್ಞಾನದಲ್ಲಿಯೂ ಉಷ್ಣದೇಶಗಳ ಚಿಕಿತ್ಸೆಯಲ್ಲಿಯೂ ವಿಶೇಷವಾದ ನೈಪುಣ್ಯವನ್ನು ಸಂಪಾದಿಸಿದರು. ಅವರು ಸ್ಥೈರ್ಯಧೈರ್ಯೋತ್ಸಾಹಗಳಿಂದ ಕೂಡಿ ಮುಂದುವರಿದ ತರುಣರಾದ್ದರು. 1913ನೆಯ ಇಸವಿಯಲ್ಲಿ ಸ್ಟ್ರೇಟ್ ಸೆಟಲ್‌ಮೆಂಟು ಮತ್ತು ಸಂಯುಕ್ತಮಲಯಪ್ರಾಂತಗಳಿಗೆ ಹೋಗಿ ಅಲ್ಲಿ ಹತ್ತು ವರ್ಷಗಳವರೆಗೆ ವೈದ್ಯರ (ಡಾಕ್ಟರ್) ಕೆಲಸವನ್ನು ಮಾಡಿದರು.

ಚಿಕಿತ್ಸಾಕಾರ್ಯದಲ್ಲಿ ತೊಡಗಿದ್ದಾಗ ಅವರು ದಯಾಲುಗಳಾಗಿಯೂ ರೋಗಿಯಲ್ಲಿ ಸಹಾನುಭೂತಿಯುಳ್ಳವರೂ ಆಗಿದ್ದರು. ಅವರ ಇಂಪಾದ ಪ್ರೇಮಪೂರಿತ ವಾಕ್ಕು, ರಸಹಾಸ್ಯ- ಇವುಗಳಿಂದಲೇ ರೋಗಿಗಳಿಗೆ ಹೊಸ ಆರೋಗ್ಯವೂ ಉತ್ಸಾಹವೂ ವೀರ್ಯವೂ ಶಕ್ತಿಯೂ ಉಂಟಾಗುತ್ತಿದ್ದವು. ರೋಗಿಗಳಿಗೆ ಅನ್ನಹಾಕುವದು, ಅವರನ್ನು ಉಪಚರಿಸುವದು- ಇವುಗಳು ಅವರ ಸ್ವಭಾವವಾಗಿದ್ದವು. ಈ ಬಗೆಯ ನಿಷ್ಕಾಮಕರ್ಮದಿಂದ ಅವರಿಗೆ ಚಿತ್ತಶುದ್ಧಿಯಾಯಿತು, ಸ್ವಭಾವಪರಿವರ್ತನೆಯಾಯಿತು, ಅಧ್ಯಾತ್ಮಮಾರ್ಗಕ್ಕೆ ಮನಸ್ಸು ತಿರುಗಿತು. ಅವರ ಔದಾರ್ಯವೂ ಪರೋಪಕಾರದ ಕೃತಿಗಳೂ ಅವರ ಮನುಷಸ್ವಭಾವವನ್ನು ದೈವೀಪ್ರಕೃತಿಯನ್ನಾಗಿ ಮಾರ್ಪಡಿಸುವದಕ್ಕೆ ಬಲವಾದ ಸಹಕಾರಿಗಳಾದವು.

ಅವರು ಭರತಖಂಡಕ್ಕೆ ಹಿಂತೆರಳಿ 1923ನೆಯ ಇಸವಿಯಲ್ಲಿ ಪ್ರಪಂಚವನ್ನು ಪರಿತ್ಯಾಗಮಾಡಿದರು. ವಾರಾಣಸಿಯೇ ಮುಂತಾದ ಕ್ಷೇತ್ರಗಳಲ್ಲಿ ಸಂಚರಿಸಿದ ಬಳಿಕ ಹೃಷೀಕೇಶವನ್ನು ಸೇರಿ 1924ನೆಯ ಜೂನ್ ತಿಂಗಳಲ್ಲಿ ಸಂನ್ಯಾಸಾಶ್ರಮವನ್ನು ಸ್ವೀಕರಿಸಿದರು. (ಅವರು ಶೃಂಗೇರಿಮಠಕ್ಕೆ ಸೇರಿದವರು.) ಅಲ್ಲಿಂದ ಮುಂದೆ ಒಂಬತ್ತು ವರ್ಷಗಳವರೆಗೆ ಏಕಾಂತವಾಸದಲ್ಲಿದ್ದುಕೊಂಡು ಅಧ್ಯಾತ್ಮಸಾಧನಗಳಲ್ಲಿ ನಿರತರಾಗಿದ್ದರು.

ಸಹಜವಾದ ಒಂದಿಷ್ಟೂ ಸಂಕೋಚವಿಲ್ಲದ ಸರ್ವಭೂತಪ್ರೇಮ, ಅಮಾನಿತ್ವ ಸಮದೃಷ್ಟಿ, ಮೈತ್ರಿ, ಕರುಣೆ, ಕ್ಷಮೆ, ಸಹಾನುಭೂತಿ, ಸ್ವಾರ್ಥತ್ಯಾಗ, ಪರೋಪಕಾರ ಬುದ್ಧಿ- ಮುಂತಾದ ಸದ್ಗುಣಗಳು ಅವರಲ್ಲಿ ತುಂಬಿರುತ್ತಿತ್ತು. ಅವರು ಸಾಧಕರಿಗೆ ಬೇಕಾದ ಸಾಧನಮರ್ಮಗಳನ್ನು ತಿಳಿಸಿಕೊಟ್ಟು ಅವರನ್ನು ಸರಿಯಾದ ಮಾರ್ಗಕ್ಕೆ ಹಚ್ಚುವದು, ಅಂಚೆಯಮೂಲಕವೂ ಅವರವರಿಗೆ ತಿಳಿವಳಿಕೆಯನ್ನು ಕೊಡುವದು ಮಾಡುತ್ತಿದ್ದರು.

ಅವರು ಆಯಾ ಶಿಷ್ಯರ ಮನಸ್ಸಿನ ಸ್ವಭಾವ, ತಿಳಿವಳಿಕೆಯ ಅಂತಸ್ತು- ಇವುಗಳನ್ನು ನೋಡಿ ಅವರವರಿಗೆ ತಕ್ಕಂತೆ ಉಪದೇಶಮಾಡುತ್ತಿದ್ದರು. ಗುರುಸೇವೆ, ಸಾಧುಸೇವೆ, ದೀನಜನಸೇವೆ, ರುಗ್ಣಸೇವೆ- ಇವುಗಳೇ ಚಿತ್ತಶುದ್ಧಿಗೆ ಬೇಗನೆ ಕಾರಣವಾಗುವವೆಂದು ಅವರು ಉಪದೇಶಮಾಡುತ್ತಿದ್ದರು. ಅವರ ಅಭಿಪ್ರಾಯದಲ್ಲಿ ಇದೊಂದು ಪರಮಯೋಗವಾಗಿತ್ತು.

ಬ್ರಹ್ಮನಿಷ್ಠರಾಗಿದ್ದುಕೊಂಡು ಕೈಗಳನ್ನೂ ಮನಸ್ಸನ್ನೂ ಇಂದ್ರಿಯಗಳನ್ನೂ ಮಾನವರ ಸೇವೆಗೆ ಉಪಯೋಗಿಸುವದು, ಭಕ್ತರ ಪ್ರೇಮವನ್ನು ಉಕ್ಕೇರಿಸುವಂತೆ ಭಗವಂತನ ನಾಮಸ್ಮರಣೆಯನ್ನು ಮಾಡುವದು, ಅಧ್ಯಾತ್ಮಸಾಧಕರಿಗೆ ಉಪದೇಶ ಮಾಡುವದು, ಎಲ್ಲರಿಗೂ ತತ್ತ್ವವನ್ನು ಉಪದೇಶಿಸುವದು - ಇವೇ ಅವರ ಧನ್ಯವಾದ ಧರ್ಮವು.

ಅವರು ಬಹು ಉತ್ಸಾಹಭರಿತರಾದ ಅಧ್ಯಾತ್ಮೋಪದೇಶಕರು, ಸಭಿಕರನ್ನು ರೋಮಾಂಚಗೊಳಿಸಿ ಮುಗ್ಧರಾಗಿಸಬಲ್ಲಂಥ ವಾಗ್ಮಿಗಳು, ಅನೇಕ ಗ್ರಂಥಗಳನ್ನು ಬರೆದಿರುವವರು ಮತ್ತು ಬರೆದಿರುವವರು. ಅವರ ಬರಹಗಳು ಜನರಿಗೆ ಸ್ಫೂರ್ತಿಯುಂಟುಮಾಡತಕ್ಕವು, ವೀರ್ಯವತ್ತಾಗಿರುವವು, ಅತ್ಯಂತ ಲಲಿತವಾಗಿ ರುವಂಥವು. ಅವರು ಯೋಗವೇದಾಂತಗಳ ಗಹನವಿಚಾರಗಳನ್ನು ಕೂಡ ಸರಳವಾದ ಭಾಷೆಯಲ್ಲಿ ಮನೋಹರವಾದ ದೃಷ್ಟಾಂತಗಳ ಮತ್ತು ಬಲವಾದ ಯುಕ್ತಿಗಳ ಮೂಲಕ ತಿಳಿಯಪಡಿಸಿರುತ್ತಾರೆ. ಅವರು ತಮ್ಮ ಅನುಭವಗಳನ್ನೂ ಅಧ್ಯಾತ್ಮೋಪದೇಶಗಳನ್ನೂ ಭರತಖಂಡದಲ್ಲಿಯೂ ಪರದೇಶಗಳಲ್ಲಿಯೂ ತಮ್ಮ ವಿವಿಧವಾದ ಗ್ರಂಥಗಳಿಂದಲೂ, ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಪ್ರಧಾನಪತ್ರಿಕೆಗಳಲ್ಲಿ ಬರೆಯುವ ಲೇಖನಗಳಿಂದಲೂ ಹರಡುತ್ತಿದ್ದರು. ಮೈತ್ರಿಯೊಡಗೂಡಿದ ಪ್ರೇಮ,

ಭಕ್ತಿ– ಇವುಗಳು ಅವರಲ್ಲಿ ತುಂಬಿತುಳುಕಾಡುತ್ತಿರುವವು; ಸಂಕೀರ್ತನದಲ್ಲಿ ಅವರು ದಕ್ಷರು. ಅವರೊಬ್ಬ ಮಹಾಯೋಗಿಗಳೂ, ನಿಯಮಬದ್ಧವಾಗಿ ಜೀವಮಾಡುತ್ತಾ ಕಠಿನವಾದ ತಪಸ್ಸನ್ನಾಚರಿಸುವ ಪೂರ್ಣವಿರಕ್ತರೂ ಆಗಿರುವವರು.

1936ನೆಯ ಇಸವಿಯಲ್ಲಿಅವರು "ದಿವ್ಯಜೀವನಸಮಾಜ"ವನ್ನು ಸ್ಥಾಪಿಸಿದರು. ಆ ಸಂಘದ ಧ್ಯೇಯಗಳೂ ಉದ್ದೇಶಗಳೂ ಉದಾತ್ತವಾಗಿರುತ್ತವೆ; ಭಾರತದಲ್ಲಿಯೂ ಪರರಾಷ್ಟ್ರಗಳಲ್ಲಿಯೂ ಅದಕ್ಕೆ ಅನೇಕ ಶಾಖೆಗಳಾಗಿ ಆ ಮೂಲಕ ಅಧ್ಯಾತ್ಮತತ್ತ್ವವನ್ನು ಇಡಿಯ ಮಾನವವರ್ಗಕ್ಕೇ ಹಂಚಿಕೊಡುತ್ತಿವೆ. ಸಮಾಜವು ಅಂಚೆಯ ವೆಚ್ಚವನ್ನೂ ವಹಿಸಿಕೊಳ್ಳುವವರಿಗೆಲ್ಲ ಅಧ್ಯಾತ್ಮಸಾಧನವನ್ನೊಳಗೊಂಡ ಸಾವಿರಾರು ಚಿಕ್ಕ ಪುಸ್ತಕಗಳನ್ನು ಕರಪತ್ರಗಳನ್ನೂ ಉಚಿತವಾಗಿ ಹಂಚುತ್ತಾ ಇದೆ.

★★★★★

# ದ್ವಾರಕಾಪೀಠದ ಶ್ರೀಜಗದ್ಗುರು ಶಂಕರಾಚಾರ್ಯರವರ ಪಟ್ಟಾಭಿಷೇಕ

ಶ್ರೀಶಂಕರಾಚಾರ್ಯರಿಂದ ಸ್ಥಾಪಿತವೆಂದು ಪ್ರಖ್ಯಾತವಾಗಿರುವ ನಾಲ್ಕು ಮಠಗಳಲ್ಲಿ ಒಂದಾದ ದ್ವಾರಕೆಯ ಪೀಠದಲ್ಲಿ ಗುರುಪರಂಪರಾಕ್ರಮದಿಂದ ಹಲವು ಪೀಠಾಧಿಪತಿಗಳು ಧರ್ಮಜ್ಞಾನಪ್ರಚಾರಕಾರ್ಯವನ್ನು ನಡೆಯಿಸುತ್ತಿದ್ದು ಕಾರಣಾಂತರದಿಂದ ಶ್ರೀಕೃಷ್ಣಾನಂದ ಶ್ರೀತೀರ್ಥಸ್ವಾಮಿಗಳವರ ಕಾಲಕ್ಕೆ (ಸುಮಾರು ಕ್ರಿ.ಶ.1545ರಲ್ಲಿ) ಆ ಮಠವು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಿಂತಿತು. ಬಳಿಕ ಸುಮಾರು 1660ರಲ್ಲಿ ಶ್ರೀ ಅಗ್ನಿಮೂರ್ಧ ಕೃಷ್ಣಾನಂದತೀರ್ಥಸ್ವಾಮಿಗಳವರು ಶಿವಪ್ಪನಾಯಕ ಮತ್ತು ಭದ್ರಪ್ಪನಾಯಕ– ಇವರುಗಳ ಪ್ರೋತ್ಸಾಹದಿಂದ ಈಗಿನ ಶಿವಮೊಗ್ಗ ಜಿಲ್ಲೆಯಲ್ಲಿರುವ ಮುಳುಬಾಗಿಲಿಗೆ ಬಂದು ನೆಲಸಿದರು.

ಬಹುದೂರವಿರುವ ದ್ವಾರಕೆಗೂ ಮುಳುಬಾಗಲಿಗೂ ಸಂಬಂಧವು ತಪ್ಪಿಹೋಗಿತ್ತು. ಆದರೆ ದ್ವಾರಕೆಯಲ್ಲಿ ನಡೆದುಕೊಂಡುಬಂದಿದ್ದ ಮತ್ತೊಂದು ಗುರುಪರಂಪರೆಯಲ್ಲಿ ಶ್ರೀಜಗದ್ಗುರು ಸ್ವರೂಪಾನಂದ ತೀರ್ಥಸ್ವಾಮಿಗಳೆಂಬವರು

ಬರೆದ ಮೃತ್ಯುಪತ್ರದಲ್ಲಿ ಈಗಿನ ದ್ವಾರಕಾಪೀಠಾಧಿಪರನ್ನೇ ಉತ್ತರಾಧಿಕಾರಿಗಳನ್ನಾಗಿ ನೇಮಿಸಿದನಿಮಿತ್ತದಿಂದ ಮುಳುಬಾಗಿಲುಮಠದ ಶ್ರೀಅಭಿನವ ಸಚ್ಚಿದಾನಂದತೀರ್ಥಸ್ವಾಮಿಗಳವರು ಶ್ರೀಡಂಕಪುರಕ್ಷೇತ್ರ (ದಾಕೋರ್)ನಲ್ಲಿ ಈ ಜೇಷ್ಠ ಶುದ್ಧ ಪೂರ್ಣಿಮೆಯ ದಿನ ಶ್ರೀ ದ್ವಾರಕಾಜಗದ್ಗುರುಪೀಠದಲ್ಲಿ ಪಟ್ಟಾಭಿಷಿಕ್ತರಾದರೆಂದೂ ಅಲ್ಲಿ ಭಕ್ತರುಗಳಿಂದ ಸತ್ಕೃತರಾಗಿ ಜ್ಞಾನೋಪದೇಶವನ್ನು ಮಾಡುತ್ತಾ ಚಾತುರ್ಮಾಸ್ಯವನ್ನೂ ಮುಗಿಸಿಕೊಂಡು ಮುಳುಬಾಗಿಲುಮಠದಲ್ಲಿ ನಡೆಯಬೇಕಾಗಿದ್ದ ಶರನ್ನವ ರಾತ್ರಿಗಾಗಿ ತಾ|| 29-9-43 ನೆಯ ದಿನ ಹಿಂದಕ್ಕೆ ವಿಜಯಿಮಾಡಿದರೆಂದೂ ಶ್ರೀಮಠದಿಂದ ಹೊರಟ ಒಂದು ವಿವರಣೆಯು ತಿಳಿಸುತ್ತದೆ.

ಮಠಗಳು ನಮ್ಮ ಭರತಖಂಡದಲ್ಲಿ ಮಾಡಿರಿವ ಜನೋಪಕಾರವು ನಮ್ಮೆಲ್ಲರಿಗೂ ತಿಳಿದಿದೆ. ಆದರೆ ದುರ್ದೈವದಿಂದ ಈಗಿನ ಜನಸಾಮಾನ್ಯಕ್ಕೂ ಮಠಗಳಿಗೂ ಇರಬೇಕಾದಷ್ಟು ನಿಕಟಸಂಬಂಧವು ಇಲ್ಲದೆ ಸಮಾಜದ ಬಿಕ್ಕಟ್ಟು ಶಿಥಿಲವಾಗುತ್ತಿರುವದು ಶೋಚನೀಯವಾಗಿರುತ್ತದೆ. ಇದಕ್ಕೆ ಶಿಷ್ಯಮಂಡಲಿಯವರೂ ಕಾರಣವಾಗಿರುತ್ತಾರಾದರೂ ಮಠದ ಅಧಿಕಾರಿಗಳು ಕಾಲೋಚಿತವಾದ ಹೊಸ ಏರ್ಪಾಡುಗಳನ್ನು ಮಾಡದೆ ಇರುವದೂ ಒಂದು ಕಾರಣವೆಂದರೆ ತಪ್ಪಗಲಾರದು. ದ್ವಾರಕಮಠದ ಶ್ರೀಗಳವರ ಪ್ರೋತ್ಸಾಹದಲ್ಲಿ ಸನಾತನಧರ್ಮಕ್ಕೆ. ಆಗುತ್ತಿಗಿರುವ ಹೊಸ ಹುರುಪನ್ನು ಕೊಡುವ ಹಲವು ಏರ್ಪಾಡುಗಳು ಕಾಣುತ್ತಿರುವದು ಒಂದು ಶುಭಚಿಹ್ನೆಯೇ ಸರಿ. ಈಗ ಶ್ರೀಗಳವರ ಕಾರ್ಯಕ್ಷೇತ್ರವು ವಿಸ್ತರಿಸಿರುವದರಿಂದ ಧರ್ಮಜ್ಞಾನಗಳ ಪ್ರಚಾರ ಕೈನೆರವಾಗಿ ರುವ ಸುಧಾರಣೆಗಳು ಅನೇಕವಾಗಿ ಅವರ ಪ್ರೋತ್ಸಾಹದಿಂದ ಆಗಲಿ ಎಂದು ನಾವು ಹಾರೈಸೋಣ.

ಸಂಸ್ಕೃತವಿದ್ಯೆಯನ್ನು ಶಿಷ್ಯಮಂಡಲಿಯಲ್ಲಿ ಹಬ್ಬಿಸುವದು, ಶ್ರುತಿಸ್ಮೃತಿಗಳ ಸಂಗ್ರಹಗಳನ್ನು ದೇಶಭಾಷೆಯ ಅರ್ಥದೊಡನೆ ಪ್ರಕಟಿಸಿ ಜನರಿಗೆ ಧರ್ಮದ ಅರಿವನ್ನುಂಟುಮಾಡಿಕೊಡುವದು, ದೇಶದಭಾಷೆಯಲ್ಲಿ ವೇದಾಂತಗ್ರಂಥಗಳನ್ನೂ ಪುರಾಣಗ್ರಂಥಗಳ ಸಂಗ್ರಹವನ್ನೂ ಪ್ರಕಟಮಾಡಿಸುವದು, ಈಗಿನ ಕಾಲದಲ್ಲಿ ಸನಾತನಧರ್ಮವನ್ನು ಕಾಪಾಡಿಕೊಳ್ಳುವದಕ್ಕೆ ಬೇಕಾದ ಸೂಚನೆಗಳನ್ನೊಳಗೊಂಡ ಒಂದು ನಿಯತಕಾಲಿಕ ಪತ್ರಿಕೆಯನ್ನು ಹೊರಡಿಸುವದು, ಧರ್ಮೋಪದೇಶಕರನ್ನು

ಸಜ್ಜುಗೊಳಿಸಿ ಜನರಿಗೆ ಬೋಧೆಯನ್ನೇರ್ಪಡಿಸುವದು - ಇದೇ ಮುಂತಾದ ಕಾರ್ಯಗಳು ಎಲ್ಲಾ ಮಠಗಳಿಗೂ ಸಮಾನವಾದ ಕರ್ತವ್ಯಗಳಾಗಿರುತ್ತವೆ. ಆದರೆ ದ್ವಾರಕಾಧೀಶನಾದ ಶ್ರೀಕೃಷ್ಣನ ಆರಾಧನೆಯಿಂದಲೇ ವಿಶೇಷಪ್ರಾಶಸ್ತ್ಯವನ್ನು ಹೊಂದಿರುವ ಶ್ರೀದ್ವಾರಕಾ ಮಠದಲ್ಲಿ ಶ್ರೀಕೃಷ್ಣಭಕ್ತಿಪ್ರಧಾನವಾದ ಧರ್ಮದ ಪ್ರಸಾರಣೆಯು ಮುಖ್ಯವಾಗಿ ನಡೆಯಬೇಕೆಂದು ನಮ್ಮ ಅಭಿಪ್ರಾಯವಿದೆ. ಭಾರತ ಭಾಗವತವಿಷ್ಣುಪುರಾಣಾದಿಗಳಲ್ಲಿ ಪ್ರತಿಪಾದಿತವಾಗಿರುವ ''ಭಾಗವತಧರ್ಮ''ದ ಸ್ವರೂಪವನ್ನು ಶ್ರೀ ಶಂಕರಾಚಾರ್ಯರವರ ಸಿದ್ಧಾಂತಕ್ಕನುಗುಣವಾಗಿ ಶಿಷ್ಯಮಂಡಲಿಯ ಚಿತ್ತದಲ್ಲಿ ಬೇರೂರುವಂತೆ ಮಾಡುವದು, ಮೊಟ್ಟಮೊದಲನೆಯ ಕಾರ್ಯವಾಗಿರಬೇಕು. ಭಗವದ್ಗೀತೆಯಲ್ಲಿ ಶ್ರೀಕೃಷ್ಣಭಗವಂತನು ಮಾಡಿರುವ ಉಪದೇಶವು ಪ್ರತಿಯೊಂದು ದೇಶಭಾಷೆಯಲ್ಲಿಯೂ ಎಲ್ಲರಿಗೂ ತಿಳಿಯುವಂತೆ ಆಗಬೇಕು. ಈ ಮಹಾಕಾರ್ಯವು ಶ್ರೀಮಠದಿಂದ ನೆರವೇರಲೆಂದೂ ಶ್ರೀಕೃಷ್ಣಭಗವಂತನನ್ನು ಪ್ರಾರ್ಥಿಸುತ್ತೇವೆ.

★★★★★

# ಅವಚನೇನೈವ ಪ್ರೋವಾಚ

(''ತತ್ತ್ವಭಿಕ್ಷು'')

ಭರತಖಂಡದ ಸಂಸ್ಕೃತಿಯಲ್ಲಿ ಅಧ್ಯಾತ್ಮವಿದ್ಯೆಗೆ ಬಹಳ ಹೆಚ್ಚಿನ ಸ್ಥಾನವಿದೆ. ಅಧ್ಯಾತ್ಮವಿದ್ಯೆಯೆಂದರೆ ಪರಮಾರ್ಥವನ್ನು ಸಾಕ್ಷಾತ್ಕರಿಸಿಕೊಂಡು ಆನಂದಿಸುವದು. ಈ ವಿದ್ಯೆಯಿಂದ ಒಂದಾನೊಂದು ತತ್ತ್ವವನ್ನು ಅರಿತುಕೊಂಡದ್ದರಿಂದ ಎಲ್ಲವನ್ನೂ ಅರಿತುಕೊಂಡಂತೆ ಆಗುವದೆಂದು ಉಪನಿಷತ್ತುಗಳಲ್ಲಿ ಮತ್ತೆ ಮತ್ತೆ ಹೇಳಿರುತ್ತದೆ.

ಆದ್ದರಿಂದಲೇ ಅಧ್ಯಾತ್ಮವಿದ್ಯೆಯ ಸಂಪಾದನೆಗಾಗಿ ಮಿಕ್ಕ ಎಲ್ಲವನ್ನೂ ಕಡೆಗಣಿಸಿ ಎಲ್ಲವೂ ಅನಿತ್ಯವೂ, ಅಸಾರವು, ಎಂದು ಮನಗಂಡು ವೈರಾಗ್ಯದಿಂದ ಸದ್ಗುರುವನ್ನು ಸೇರಬೇಕು. ಇದಕ್ಕಿಂತ ಹೆಚ್ಚಿನ ವಿದ್ಯೆಯಿಲ್ಲ, ಇದರಲ್ಲಿ ಹೇಳಿರುವ ವಿಷಯಕ್ಕಿಂತ ಹೆಚ್ಚಿನ ತತ್ತ್ವವೂ ಇಲ್ಲ. ಎಲ್ಲಾ ವಿದ್ಯೆಗಳೂ ಈ ವಿದ್ಯೆಯಲ್ಲಿ ಕೊನೆಕಾಣುವವು; ಆದ್ದರಿಂದ ಇದನ್ನು ಬ್ರಹ್ಮವಿದ್ಯೆ ಎಂದೂ ಕರೆಯುತ್ತಾರೆ.

ಆದರೆ ಅಧ್ಯಾತ್ಮವಿದ್ಯೆಯು, ಅಥವಾ ಬ್ರಹ್ಮವಿದ್ಯೆಯು, ಹೇಳುವ ಪರಮಾರ್ಥತತ್ತ್ವವು ಎಂಥದ್ದು? ಅದರ ಸ್ವರೂಪವು ಹೇಗಿರುವದು? ಎಂಬ ಪ್ರಶ್ನೆಗೆ ಬಲ್ಲವರು ಒಂದು ವಿಲಕ್ಷಣಭಾಷೆಯಿಂದ ಉತ್ತರವನ್ನು ಹೇಳಿರುತ್ತಾರೆ. ಆ ತತ್ತ್ವವು ಅನುಭವೈಕವೇದ್ಯವು; ಅದನ್ನು ಇಂಥದ್ದು ಅಂಥದ್ದು ಎಂದು ವರ್ಣಿಸಿ ತಿಳಿಸುವದಕ್ಕೆ ಆಗಲಾರದು. ಅದನ್ನು ಯಾವದಾದರೂ ಲಕ್ಷಣವಾಕ್ಯದಿಂದ ತಿಳಿಸಿದರೆ ಅದಕ್ಕೆ ಪರಿಚ್ಛೇದವನ್ನು ಕಲ್ಪಿಸಿದಂತೆ ಆಗುತ್ತದೆ; ಆ ವರ್ಣನೆಯಿಂದ ಅದನ್ನು ಹೆಚ್ಚಿನದೆಂದು ತಿಳಿಸುವದಕ್ಕೆ ಬದಲು ಅದರ ಗೌರವವನ್ನು ಕಡಿಮೆಮಾಡಿದಂತೆ ಆಗುತ್ತದೆ ಎಂಬುದೇ ಅನುಭವಿಗಳ ಉತ್ತರವು. ಹಿಂದೆ ಭಾಷ್ಕಲಿ ಎಂಬಾತನು ಬಾಧ್ವನೆಂಬ ಋಷಿಯನ್ನು 'ಪರಮಾರ್ಥ ತತ್ತ್ವವನ್ನು ನನಗೆ ತಿಳಿಸಿಕೊಡಿ' ಎಂದು ಮತ್ತೆ ಮತ್ತೆ ಕೇಳಿದರೂ ಏನೊಂದು ಮಾರುತ್ತರವನ್ನೂ ಕೊಡದೆ ಸುಮ್ಮನೆ ಇರುತ್ತಿದ್ದನಂತೆ ಕೊನೆಗೆ ಮತ್ತೂ ಶಿಷ್ಯನು ಕೇಳಿದ್ದಕ್ಕೆ ''ಅಪ್ಪ, ನಾವು ಹೇಳುತ್ತಲೇ ಇದ್ದೇವೆ, ಆದರೆ ನೀನು ಇದನ್ನು ಅರಿತುಕೊಳ್ಳದೆ ಇರುವೆ. ಈ ಪರಮಾತ್ಮನು ಉಪಶಾಂತನಾಗಿರುವನು ಸಕಲವಿಶೇಷಣಗಳನ್ನೂ ಮೀರಿದವನಾಗಿರುತ್ತಾನೆ'' ಎಂದು ನುಡಿದನಂತೆ!

ಮೌನದಿಂದಲೇ ಪರಮಾರ್ಥವನ್ನು ವ್ಯಾಖ್ಯಾನಮಾಡಬಹುದೆಂಬುದಕ್ಕೆ ಈ ನಮ್ಮ ಕಾಲದಲ್ಲಿಯೂ ಕೆಲವರು ಮಹಾತ್ಮರು ನಿದರ್ಶನವಾಗಿರುತ್ತಾರೆ. ಇದಕ್ಕೆ ತೀರ ಇತ್ತೀಚಿನ ಉದಾಹರಣೆಗಳನ್ನು ಕೊಡಬೇಕೆಂದರೆ ಅರುಣಾಚಲದ ರಮಣಮಹರ್ಷಿಗಳನ್ನೂ ಪಾಂಡಿಚೆರಿಯ ಶ್ರೀ ಅರವಿಂದ ಘೋಷರನ್ನೂ ಉದಾಹರಿಸಬಹುದಾಗಿದೆ. ಆ ಇಬ್ಬರು ಮಹನೀಯರೂ ಅಧ್ಯಾತ್ಮವಿದ್ಯೆಯ ಮಹತ್ತ್ವವನ್ನೂ ಮೌನದ ಉಚ್ಚಭೂಮಿಕೆಯನ್ನೂ ತಮ್ಮ ಜೀವನಕ್ರಮದಿಂದ ನಮಗೆ ತಿಳಿಸಿಕೊಟ್ಟಿರುತ್ತಾರೆ.

ರಮಣ ಮಹರ್ಷಿಗಳು ಬಾಲ್ಯದಿಂದಲೇ ಅರುಣಾಚಲದ ಮಹಿಮೆಯನ್ನು ಕೇಳಿ ಪರಮಾತ್ಮನನ್ನು ನಮ್ಮ ಹೃದಯಾಂತರಾಲದಲ್ಲಿರುವ ಆಕಾಶದಲ್ಲಿ ನೇರಾಗಿ ಕಂಡು ಆನಂದಿಸಬಹುದು ಎಂಬುದನ್ನು ತಮ್ಮ ತಪಃಪ್ರಧಾನವಾದ ಜೀವನದಿಂದ ಲೋಕಕ್ಕೆ ಹೇಳಿಕೊಟ್ಟರು. ಅವರ ಕೀರ್ತಿಯು ಅವರ ಪ್ರಯತ್ನವಿಲ್ಲದೆಯೇ ನಾಗರಿಕಭೂಮಂಡಲವನ್ನೆಲ್ಲ ವ್ಯಾಪಿಸಿತು. ಅವರ ದರ್ಶನವನ್ನು ತೆಗೆದುಕೊಂಡು ಅವರಿಂದ ಯಾವದೊಂದು ಉತ್ತರವನ್ನೂ ಪಡೆಯದೆ ಇದ್ದರೂ,

ಪ್ರಶಾಂತಹೃದಯರಾಗಿ ಹಿಂತಿರುಗಿದವರು ನೂರಾರು ಮಂದಿ ಇರುತ್ತಾರೆ. ಅವರು ತಮಿಳಿನಲ್ಲಿ ರಚಿಸಿರುವ ''ಉಳ್ಳದು ನಾರ್ಪದು'' ಎಂಬ ಸದ್ವಿದ್ಯಾದರ್ಶನದ ನಲವತ್ತು ಪದ್ಯಗಳನ್ನು ನೇರಾಗಿ ಅಥವಾ ಭಾಷಾಂತರದಿಂದ ಓದಿ ಮನಃ ಶಾಂತಿಯನ್ನು ಹೊಂದಿದವರು ಲೆಕ್ಕವಿಲ್ಲದಷ್ಟು ಜನರು ಈಗಲೂ ಇರುತ್ತಾರೆ.

ಅರವಿಂದಘೋಷರು ಇಂಗ್ಲೆಂಡಿನಲ್ಲಿ ವಿದ್ಯಾಭ್ಯಾಸವನ್ನು ಪಡೆದು, ನಮ್ಮ ದೇಶದ ತರುಣರ ತಲೆಯನ್ನು ತಿರುಗಿಸುವ ರಾಜಕೀಯ ಚಳುವಳಿಯ ಸಮುದ್ರದಲ್ಲಿ ಈಜಿ ಲೋಕವಿಖ್ಯಾತರಾದವರು ಅವರು ಸಂಪಾದಕರಾಗಿದ್ದ 'ವಂದೇ ಮಾತರಮ್', 'ಕರ್ಮಯೋಗಿನ್', 'ಧರ್ಮ'- ಎಂಬ ರಾಜಕೀಯ ವಿಚಾರದ ಪತ್ರಿಕೆಗಳಲ್ಲಿಯೂ ಅವರಿಗೆ ಪ್ರಾಚೀನಸಂಸ್ಕೃತಿಯಲ್ಲಿದ್ದ ಗೌರವವು ಹೊರಸೂಸುತ್ತಿತ್ತು. ಆದರೆ ಕಾಲಕರ್ಮಸಂಯೋಗದಿಂದ ಅಧ್ಯಾತ್ಮಯೋಗದ ಹೆಚ್ಚುಗಾರಿಕೆಯು ಅವರ ಮನಸ್ಸನ್ನು ಸೆಳೆಯಿತು. ಪಾಂಡಿಚೆರಿಯಲ್ಲಿ ಅವರು ಸ್ಥಾಪಿಸಿದ ಆಶ್ರಮವು ನಾನಾಜನಾಂಗದವರನ್ನೂ ಶಾಂತಿಯ ಅನ್ವೇಷಣೆಗಾಗಿ ಅಲ್ಲಿಗೆ ಕರೆತಂದಿತು. ಅವರ ದರ್ಶನಮಾತ್ರದಿಂದಲೇ ಧನ್ಯರಾದೆವೆಂದು ಎಣಿಸುವ ಸಾವಿರಗಟ್ಟಲೆಯ ಸಾಧಕರು ಅಲ್ಲಿ ನೆರೆಯುತ್ತಿದ್ದರು. ಅವರು ಇಂಗ್ಲಿಷಿನಲ್ಲಿ ಬರೆದಿರುವ ''ದಿವ್ಯಜೀವನ'' (Life Divine) ಎಂಬ ಗ್ರಂಥವು ಅನೇಕ ತತ್ತ್ವಜಿಜ್ಞಾಸುಗಳಿಗೆ ವೇದವಾಗಿ ಪರಿಣಮಿಸಿದೆ.

ಮೌನದ ಮಹಾತ್ಮ್ಯವನ್ನು ಮನದಿಂದಲೇ ವ್ಯಾಖ್ಯಾನಮಾಡಿ ಮಹಾಮೌನಸಮಾಧಿಯನ್ನು ನಮ್ಮ ಕಣ್ಣಮುಂದೆಯೇ ಪಡೆದು ಎಲ್ಲರನ್ನೂ ಬೆರಗುಮಾಡಿರುವ ಈ ಮಹಾತ್ಮರ ಚರಿತ್ರೆಯನ್ನು ನಮ್ಮ ದೇಶದ ಯುವಕರು ಮನನ ಮಾಡುವದರಿಂದ ಲಾಭವುಂಟು.

★★★★★

# ಶ್ರೀ ಶ್ರೀ ಅಭೇದಾನಂದಸ್ವಾಮಿಯವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಶ್ರೀರಾಮಕೃಷ್ಣಪರಮಹಂಸಸ್ವಾಮಿಗಳ ಸಾಕಾಚ್ಛಿಷ್ಯರುಗಳಲ್ಲಿ ಒಬ್ಬ ಪ್ರಮುಖರಾದ ಶ್ರೀ ಅಭೇದಾನಂದಸ್ವಾಮಿಗಳವರು ತಮ್ಮ ಎಪ್ಪತ್ತು ಮೂರನೆಯ ವರ್ಷದಲ್ಲಿ ದೇಹವನ್ನು ಬಿಟ್ಟರೆಂಬ ಸುದ್ದಿಯು ಇಡಿಯ ಜಗತ್ತಿಗೆ ವಿಷಾದವನ್ನು ಬಿಟ್ಟು ಮಾಡಿರುತ್ತದೆ. ಸ್ವಾಮಿಯವರು ವೇದಾಂತದಲ್ಲಿ ವಿಶೇಷವಾಗಿ ಪರಿಶ್ರಮವುಳ್ಳ ವರ ಅನುಭವಿಗಳೂ ವಿರಕ್ತರೂ ಆಗಿರುತ್ತಿದ್ದರು. ಅವರು ಭರತಖಂಡಕ್ಕೆ ಮಾಡಿರುವ ಉಪಕಾರವು ಅಪಾರವಾಗಿರುತ್ತದೆ.

ಸ್ವಾಮಿಗಳ ಜೀವನ ಚರಿತ್ರೆಯನ್ನು ಬಹುಸಂಕ್ಷಿಪ್ತವಾಗಿ ಅಕ್ಟೋಬರು ತಿಂಗಳಿನ 'ವೇದಾಂತಕೇಸರಿ' ಮಾಸಪತ್ರಿಕೆಯಲ್ಲಿ ಕೊಟ್ಟಿರುತ್ತಾರೆ. ಸ್ವಾಮಿಗಳ ಪೂರ್ವಾಶ್ರಮದ ಹೆಸರು ಕಾಳೀಪ್ರಸಾದಚಂದ್ರನೆಂದಿತ್ತು. ಅವರು 1866ನೆಯ ಇಸವಿಯ ಅಕ್ಟೋಬರು ತಿಂಗಳಿನಲ್ಲಿ ಕಲಕತ್ತೆಯ ರಸಿಕಲಾಲಚಂದ್ರನೆಂಬ ಒಬ್ಬ ಉಪಾಧ್ಯಾಯರ ಮಕ್ಕಳಾಗಿ ಜನಿಸಿದರು. ಸಂಸ್ಕೃತವನ್ನೂ ದೇಶಭಾಷೆಯನ್ನೂ ಅಭ್ಯಾಸಮಾಡಿ ಇಂಗ್ಲಿಷಿನಲ್ಲಿ ಎಂಟ್ರೆನ್ಸು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಬಳಿಕ ಅವರಿಗೆ ತತ್ತ್ವಜಿಜ್ಞಾಸೆಯಲ್ಲಿಯೇ ಜೀವನವನ್ನು ಕಳೆಯಬೇಕೆಂಬ ಆಶೆಯುಂಟಾಯಿತು. ಚಿಕ್ಕಂದಿನಲ್ಲಿ ಅವರು ಓದಿದ್ದ ಭಗವದ್ಗೀತೆ, ಶಂಕರಾಚಾರ್ಯರ ಚರಿತ್ರೆ, ಇವುಗಳಿಂದ ಆ ಆಶೆಯು ಮೊಳೆಯಿತಂತೆ. ಪಾತಂಜಲಸೂತ್ರವನ್ನೂ ಶಿವಸಂಹಿತೆಯನ್ನೂ ಓದಿ ಯೋಗದಲ್ಲಿ ಆದರವುಳ್ಳವ ರಾದರು. ಕೆಲವು ದಿನಗಳ ಮೇಲೆ ಯೋಗಾಭ್ಯಾಸಕ್ಕೆ ಒಬ್ಬ ಗುರುಗಳು ಬೇಕೇ ಬೇಕೆಂದು ತಿಳಿದುಬಂದದ್ದರಿಂದ ಗುರುವಿನ ಅನ್ವೇಷಣೆಯಲ್ಲಿ ತತ್ಪರರಾದರು.

ಶ್ರೀರಾಮಕೃಷ್ಣಪರಮಹಂಸರ ಪ್ರಥಮಸಂದರ್ಶನದಲ್ಲಿಯೇ ಆ ಮಹಾಪುರುಷರ ಅನುಗ್ರಹದಿಂದ ಅವರಿಗೆ ಸಮಾಧಿಯ ಅನುಭವವು ದೊರೆತುದೊಂದು ವಿಶೇಷವು. ಮುಂದೆ ಅವರಲ್ಲಿ ಶಿಷ್ಯವೃತ್ತಿಯಿಂದಿದ್ದು ಸ್ವಾಮಿಯವರು ಅನೇಕ ಅಧ್ಯಾತ್ಮಾನುಭವಗಳನ್ನು ಪಡೆದುಕೊಂಡರು. ಕ್ರಿ.ಶ. 1886ರಲ್ಲಿ ಗುರುಗಳು ಬ್ರಹ್ಮಭೂತರಾಗಲು ಶ್ರೀವಿವೇಕಾನಂದಸ್ವಾಮಿಯವರು

ಏರ್ಪಡಿಸಿದ ಸಂನ್ಯಾಸಿಗಳ ಗುಂಪಿನಲ್ಲಿ ಇವರು ಶ್ರದ್ಧಾಪೂರ್ವಕವಾಗಿ ಸೇರಿ ಅಲ್ಲಿ ಮಾಡಿದ ಅಭ್ಯಾಸದ ಫಲವಾಗಿ ತತ್ತ್ವವಿಚಾರದಲ್ಲಿ ಪಾರಂಗತರಾದರು. ಬಳಿಕ ಶ್ರೀ ಸ್ವಾಮಿವಿವೇಕಾನಂದರಂತೆಯೇ ಇವರೂ ಬದರಿಯಿಂದರಾಮೇಶ್ವರದವರೆಗೂ ಪರಿವ್ರಾಜಕರಾಗಿ ಕಾಲುನಡಗೆಯಿಂದ ಸಂಚರಿಸಿದರು; ಆ ಕಾಲದಲ್ಲಿ ಹಿಮಾಲಯದ ಒಂದಾನೊಂದು ಗುಹೆಯಲ್ಲಿ ಮೂರು ತಿಂಗಳ ಕಾಲ ಸಾಧನವನ್ನು ಮಾಡಿದರು. ಹೃಷಿಕೇಶದಲ್ಲಿ ಧನರಾಜಗಿರಿ ಎಂಬ ವಿದ್ವಾಂಸರಲ್ಲಿ ಗ್ರಂಥಾಭ್ಯಾಸವನ್ನು ಮಾಡಿ ವೇದಾಂತದಲ್ಲಿ ಹೆಚ್ಚಿನ ಪಾಂಡಿತ್ಯವನ್ನು ಸಂಪಾದಿಸಿಕೊಂಡರು.

1896ರಲ್ಲಿ ಸ್ವಾಮಿಯವರು ಇಂಗ್ಲೆಂಡಿಗೆ ಹೋಗಿ ವೇದಾಂತಪ್ರಚಾರಕ್ಕಾಗಿ ಒಂದು ವರ್ಷ ದುಡಿದದ್ದೂ ಆಮೇಲೆ ಅಮೆರಿಕದಲ್ಲಿ ನ್ಯೂಯಾರ್ಕ್ನಗರಿಯ ವೇದಾಂತಸಮಾಜಕ್ಕೆ ಇಪ್ಪತ್ತುವರ್ಷಗಳಿಗಿಂತಲೂ ಮೇಲುಪಟ್ಟು ಅಧ್ಯಕ್ಷರಾಗಿರುತ್ತಾ ಮಾಡಿದ ಮಹಾಕಾರ್ಯವೂ ಅವರು 1921ರಲ್ಲಿ ಭರತಖಂಡಕ್ಕೆ ಹಿಂತಿರುಗಿ ಬರುವಾಗ ದಾರಿಯಲ್ಲಿ ಬೇರೆಬೇರೆಯ ಸ್ಥಳಗಳಲ್ಲಿ ಮಾಡಿದ ವೇದಾಂತೋಪನ್ಯಾಸಗಳೂ ಜಗದ್ವಿಖ್ಯಾತವಾಗಿರುತ್ತವೆ. ಇಲ್ಲಿಗೆ ಬಂದಮೇಲೆ ಸ್ವಾಮಿಗಳು ರಾಮಕೃಷ್ಣಮಠಕ್ಕೂ ಮಿಷನ್ನಿಗೂ ಉಪಾಧ್ಯಕ್ಷರಾದರು; ಈ ಪದವಿಯು ಶ್ರೀ ವಿವೇಕಾನಂದಸ್ವಾಮಿಗಳು ಮೊದಲೇ ಮಾಡಿಟ್ಟಿದ್ದ ಏರ್ಪಾಡಿನಿಂದಲೇ ಅವರಿಗೆ ಪ್ರಾಪ್ತವಾಯಿತು. 1922ರಲ್ಲಿ ಇವರು ಟಿಬೆಟ್ ದೇಶಕ್ಕೆ ಹೋಗಿ ಅಲ್ಲಿಯ ಜನರ ಆಚಾರವಿಚಾರಗಳನ್ನೂ ಲಾಮಾರತವೆಂಬ ಹೆಸರಿನಿಂದ ಅಲ್ಲಿ ಬಳಕೆಯಲ್ಲಿರುವ ಬೌದ್ಧಧರ್ಮದ ಸ್ವರೂಪವನ್ನೂ ತಿಳಿದುಕೊಂಡುಬಂದರು. ಮಾರನೆಯ ವರ್ಷದಲ್ಲಿ ಕಲಕತ್ತೆಯಲ್ಲಿ ರಾಮಕೃಷ್ಣವೇದಾಂತಸಮಾಜವನ್ನು ಸ್ಥಾಪಿಸಿ ಡಾರ್ಜಿಲಿಂಗ್ ನಗರದಲ್ಲಿ ಅದರ ಒಂದು ಶಾಖೆಯನ್ನು ಏರ್ಪಡಿಸಿದರು. ಅವರೇ ಈ ಸಮಾಜಕ್ಕೆ ಸ್ಥಾಪಕಾಧ್ಯಕ್ಷರಾಗಿರುತ್ತಿದ್ದರು.

ಶ್ರೀಸ್ವಾಮಿ ಅಭೇದಾನಂದರವರು ತಮ್ಮ ಅಧ್ಯಾತ್ಮಸಾಧನ, ಪಾಂಡಿತ್ಯ, ಭಾಷಣ ಸಾಮರ್ಥ್ಯ– ಇವುಗಳ ಬಲದಿಂದ ಲೋಕಕ್ಕೆ ಮಾಡಿರುವ ಉಪಕಾರವು ಅಪಾರವಾಗಿರುತ್ತದೆ; ಅವರ ಜೀವನವು ಶಾಶ್ವತ ಶಾಂತಿಯನ್ನು ಬಯಸುವ ಮುಮುಕ್ಷುಗಳಿಗೆ ಒಂದು ಆದರ್ಶವಾಗಿರುತ್ತದೆ. ಅವರಿಂದ ರಚಿತವಾಗಿ ಅಚ್ಚಾಗಿರುವ 'ಆತ್ಮ ಜ್ಞಾನ', 'ಪುನರ್ಜನ್ಮ,' 'ಮಾನವನ ನಿಸರ್ಗಸಿದ್ಧವಾದ ಪರಮಾತ್ಮಭಾವ', 'ಮಾನುಷಪ್ರೇಮವೂ ಭಗವಕ್ಷೇಮವೂ', 'ಅಧ್ಯಾತ್ಮವಿಕಾಸ',

'ಪ್ರಪಂಚದ ಮುಕ್ತಿದಾಯಕರು' ಮುಂತಾದ ಇಂಗ್ಲಿಷು ಗ್ರಂಥಗಳೂ ಮತ್ತು ಉಪನ್ಯಾಸಗಳೂ ಜಿಜ್ಞಾಸುಗಳಿಗೆ ಅಧ್ಯಾತ್ಮರತ್ನಗಳ ಭಂಡಾರವಾಗಿಯೇ ಇರುತ್ತವೆ. ಆ ಮಹಾತ್ಮರ ಆಶೀರ್ವಾದಬಲದಿಂದ ಭರತಖಂಡದಲ್ಲಿರುವ ಮುಮುಕ್ಷುಗಳನೇಕರು ಅಭೇದಸಾಕ್ಷಾತ್ಕಾರವನ್ನು ಪಡೆಯುವಂತಾಗಲೆಂದು ಸರ್ವಾತ್ಮನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

★★★★★

# ಸಾಧವೋ ಧರ್ಮಚಾರಿಣಃ

**- ಶ್ರೀ ಡಿ. ಸಿ. ಅನಂತರಾಮಯ್ಯನವರು, ಬೆಂಗಳೂರು**

'ಈ ಪಕ್ಷಿರಾಜನು ನನಗೋಸ್ಕರವಾಗಿ ತನ್ನ ಪ್ರಾಣಗಳನ್ನೇ ಅರ್ಪಿಸಿರುತ್ತಾನೆ, ಹೀಗೆ ಧರ್ಮನಿಷ್ಠರಾದ ಸಾಧುಗಳು ಎಲ್ಲೆಲ್ಲಿಯೂ ಕಂಡುಬರುತ್ತಾರೆ' ಎಂದು ಶ್ರೀರಾಮನು ಜಟಾಯುವಿನ ವಿಷಯಕ್ಕೆ ಲಕ್ಷ್ಮಣನೊಡನೆ ಹೇಳಿದನೆಂದು ರಾಮಾಯಣದಲ್ಲಿದೆ. ನಮ್ಮ ಭರತಖಂಡದ ಸೌಭಾಗ್ಯವೇ ಸಾಧು ಸತ್ಪುರುಷರೆನ್ನಬಹುದು. ಇಂಥ ಸಾಧುಗಳಲ್ಲಿ ಶಿರಡಿ ಸಾಯಿಬಾಬಾರವರೂ ಒಬ್ಬರು. ಅವರು 1918ರಲ್ಲೇ ಸಮಾಧಿಸ್ಥರಾದರು. ಅವರ ಬಗ್ಗೆ ಅನೇಕ ಪರಿಚಯಸ್ಥ ಭಕ್ತರುಗಳ ಅನುಭವಗಳು ಲೇಖನರೂಪದಲ್ಲಿ ದೊರಕುತ್ತವೆ. ಅವರನ್ನು ದತ್ತಾತ್ರೇಯರ ಅವತಾರವೆಂದೇ ಅವರ ಶಿಷ್ಯರು ಭಾವಿಸಿದ್ದರು. ಅವರು ಬ್ರಹ್ಮಚಾರಿಗಳು; ಭಿಕ್ಷಾ ಆಹಾರವನ್ನೇ ಸೇವಿಸುತ್ತಿದ್ದರು. ಅವರನ್ನು ಅವಧೂತರೆಂದೂ ಫಕೀರರೆಂದೂ ಕರೆದರೂ ತಪ್ಪಾಗಲಾರದು.

ಒಮ್ಮೆ ಒಬ್ಬ ಲೋಭಿಯು ಅವರನ್ನು ಸಂಧಿಸಿ ಬ್ರಹ್ಮಜ್ಞಾನವನ್ನು ನೀಡಬೇಕೆಂದು ಬೇಡಿದನು. ಅವರು ಲೋಭಿತನಕ್ಕೂ ಬ್ರಹ್ಮವಿದ್ಯೆಗೂ ಕತ್ತಲೆ ಬೆಳಕುಗಳಷ್ಟು ಅಂತರವಿದೆ; ನೀನು ಮೊದಲು ಅಧ್ಯಾತ್ಮಸಾಧಕನಾಗಬೇಕು; ಅನಂತರ ಸಿದ್ಧನಾಗುವೆ, ಈಗಲೇ ಈ ಸ್ಥಿತಿಯಲ್ಲಿ ನೀನು ಬ್ರಹ್ಮಜ್ಞಾನವನ್ನು ಪಡೆಯಲಾರೆ' ಎಂದರು. ಅವರ ಕೆಲವು ಉಪದೇಶಗಳು ಹೀಗಿವೆ:

1. ಮುಕ್ತಿಯನ್ನು ಪಡೆಯಬೇಕೆನ್ನುವವನಿಗೆ ಇನ್ನೇನೂ ಸಾಧನ-ಸಂಸ್ಕಾರಗಳಿಲ್ಲದಿದ್ದರೂ ಅದನ್ನು ಪಡೆಯಲೇಬೇಕೆಂಬ ತೀವ್ರವಾದ ಇಚ್ಛೆಯಿರಲೇಬೇಕು.ಇದನ್ನು 'ಮುಮುಕುತ್ವ'ವೆನ್ನುವರು. ಇದು ಅಂತಃಕರಣದಲ್ಲಿ ಚೆನ್ನಾಗಿ ಮೂಡಿದವನು ಉಳಿದ ಪ್ರಾಪಂಚಿಕ ಸುಖಭೋಗಗಳ ಆಶೆಯನ್ನು ಕೈಬಿಟ್ಟು ಸದ್ಗುರುವನ್ನು ಹುಡುಕಿಕೊಂಡು ಹೋಗಬೇಕು. ಸ್ವಾನುಭವಿಯಾದ ಸದ್ಗುರುವು ತನ್ನ ಶಿಷ್ಯನನ್ನು ಅಧ್ಯಾತ್ಮಮಾರ್ಗದಲ್ಲೇ ಅವಶ್ಯವಾಗಿ ಕೊಂಡೊಯ್ಯುತ್ತಾನೆ.

2. ಶರೀರವು ಒಂದು ರಥ, ಜೀವಾತ್ಮನೇ ಅದರ ಒಡೆಯ, ಮನಸ್ಸು ಕಡಿವಾಣ. ಇಂದ್ರಿಯಗಳೇ ಕುದುರೆಗಳು, ಬುದ್ಧಿಯೇ ಸಾರಥಿ, ಸಾರಥಿಯು ವಿಜ್ಞಾನವುಳ್ಳವನಾಗಿದ್ದಲ್ಲಿ ರಥಿಕನನ್ನು ಸರಿಯಾದ ರೀತಿಯಲ್ಲಿ ದಡಮುಟ್ಟಿಸುತ್ತಾನೆ. ಆದ್ದರಿಂದ ಪ್ರತಿಯೊಬ್ಬರೂ ತಮ್ಮ ಬುದ್ಧಿಶುದ್ಧಿಗೂ ಅದರ ಉನ್ನತಿಗೂ ಹೋರಾಡಬೇಕು.

3. ಸಾಧಕನು ಮೊದಲು ಪಾಪಕಾರ್ಯಗಳಿಂದ ಹಿಮ್ಮೆಟ್ಟಬೇಕು. ಅನಂತರ ಸದಾಚಾರ, ತಪಸ್ಸು, ಬ್ರಹ್ಮಚರ್ಯಾದಿಗಳಿಂದ ಮನಸ್ಸನ್ನು ಗೆಲ್ಲಬೇಕು. ಅದು ಸ್ವಾಧೀನವಾದಾಗಲೇ ಅಂತರ್ಮುಖನಾಗಿ ತಿರುಗಿಸಬೇಕು. ಅನಂತರವೇ ಅದು ಬ್ರಹ್ಮಾನಂದದ ರುಚಿಯನ್ನು ಸವಿಯಬಲ್ಲದು. ಒಮ್ಮೆ ಹಾಗೆ ಸವಿದ ಮನಸ್ಸು ಇನ್ನೆಂದಿಗೂ ವಿಷಯಾಭಿಮುಖವಾಗಲಾರದು. ಇದೇ ಸಾಧನದ ಕಡೆಯ ಮಜಲು.

★★★★★

# ಡಾ|| ಹರಿಪ್ರಸಾದ ಶಾಸ್ತ್ರಿಗಳು

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಡಾ|| ಹರಿಪ್ರಸಾದ ಶಾಸ್ತ್ರಿಗಳು ಒಬ್ಬ ಮಹಾ ಸಂಸ್ಕೃತವಿದ್ವಾಂಸರು ಮತ್ತು ವೇದಾಂತಿಗಳು. ಅವರಿಗೆ ಭೂಮಂಡಲದ ಧಾರ್ಮಿಕವಾಙ್ಮಯದಲ್ಲಿ ಹೆಚ್ಚಿನ ಪರಿಚಯವಿತ್ತು. ಅವರು ಇಂಗ್ಲೆಂಡಿನಲ್ಲಿ ವೇದಾಂತಪ್ರವಚನವನ್ನು ಮಾಡುತ್ತಿದ್ದರು.

1956ರ ಜನವರಿ 29ನೆಯ ಭಾನುವಾರ ದೇಹವನ್ನಿಟ್ಟರೆಂಬುದನ್ನು ಕೇಳಿದ ಅಧ್ಯಾತ್ಮಜಿಜ್ಞಾಸುಗಳಿಗೆಲ್ಲ ವಿಷಾದವಾಗಿರುತ್ತದೆ. ಅವರ ಶಿಷ್ಯರಿಗೂ ಭಕ್ತರಿಗೂ ಅವರನ್ನಗಲಿದ ದುಃಖವನ್ನು ಸಹಿಸಿಕೊಳ್ಳುವ ಎದೆಯೂ ವೇದಾಂತದಲ್ಲಿ ಅಚಲ ಶ್ರದ್ಧೆಯೂ ಉಳಿಯಲಿ. ಈ ಮಹಾಶಯರ ಜೀವನಚರಿತ್ರೆಯನ್ನು ''ನಿರ್ವಿಶೇಷದೇವ'' ಎಂಬವರ ಲೇಖನದಿಂದ ಸಂಗ್ರಹಿಸಲಾಗಿದೆ.

ಹರಿಪ್ರಸಾದ ಶಾಸ್ತ್ರಿಗಳವರು ಉತ್ತರಭಾರತದಲ್ಲಿರುವ ಬ್ಯಾರಿಲಿ ಎಂಬಲ್ಲಿ 1882ರಲ್ಲಿ ಜನಿಸಿದರು. ಅವರ ತಂದೆಯು ಶ್ರೀ ನಾರಾಯಣಪ್ರಸಾದನೆಂಬ ಬಡ ಬ್ರಾಹ್ಮಣಶ್ರೇಷ್ಠನು. ಆತನ ಅನುಯಾಯಿಗಳು 'ದಾರಾ' ಅಂಬ ಗೌರವನಾಮಧೇಯದಿಂದ ಕರೆಯುತ್ತಿದ್ದರು. ಈತನೆ ತನ್ನ ಪುತ್ರನಿಗೂ ಗುರುವಾದನು. ಈ ಬ್ರಾಹ್ಮಣನು ಹಿಮಾಲಯಪ್ರಾಂತದ ಮಹಾತ್ಮರಾದ ಶ್ರೀ ೕಕೃಷ್ಣಾನಂದಸ್ವಾಮಿಗಳವರ ಉಪದೇಶದಿಂದ ''ಮಾನವಯೋಗ''ವನ್ನು ಅಭ್ಯಾಸಮಾಡತೊಡಗಿದ್ದರಿಂದ ಶ್ರೀಮಂತನಾದ ಅವರ ತಂದೆಯು ಅವನಿಗೆ ಯಾವ ಆಸ್ತಿಯನ್ನೂ ಕೊಡದೆ ಮನೆಯಿಂದಟ್ಟಿದ್ದನು; ಆದ್ದರಿಂದ ಅವನು ರೈಲುಇಲಾಖೆಯಲ್ಲಿ ಒಂದು ಗುಮಾಸ್ತೆಕೆಲಸವನ್ನು ಆಶ್ರಯಿಸಬೇಕಾಯಿತು.

ನಾರಾಯಣಪ್ರಸಾದನ ಗುರುಗಳಾದ ಶ್ರೀಕೃಷ್ಣಾನಂದಸ್ವಾಮಿಗಳಿಗೆ ಸ್ವಾಮಿಮಂಗಲನಾಥಜಿ, ಸಚ್ಚಿದಾನಂದಜಿ, ನಿರ್ಭಯಾನಂದಜಿ - ಎಂಬ ಬೇರೆ ಮೂವರು ಶಿಷ್ಯರುಗಳಿದ್ದರು. ಇವರೆಲ್ಲರೂ ವೇದಾಂತವನ್ನು ಕುರಿತು ಉತ್ತಮಕಾವ್ಯಗಳನ್ನೂ ಬರೆದಿರುತ್ತಾರೆ. ನಾರಾಯಣಪ್ರಸಾದನು ಹರಿದ್ವಾರಕ್ಕೆ ಹೋದಾಗ ಅಲ್ಲೊಬ್ಬರು ಮಹಾತ್ಮರ ದರ್ಶನ್ನಾಯಿತು; ಆ ಮಹಾತ್ಮರೇ ಸುಪ್ರಸಿದ್ಧ ಶ್ರೀ ಸ್ವಾಮಿರಾಮತೀರ್ಥರಿಗೆ ತುರೀಯಾಶ್ರಮವನ್ನು ಅನುಗ್ರಹಿಸಿದ ಗುರುಗಳು.

ನಾರಾಯಣಪ್ರಸಾದನ ಮಗನಾದ ಹರಿಪ್ರಸಾದನು ಕೆಲವು ವರ್ಷಗಳು ಭಾರತದಲ್ಲೆಲ್ಲ ಸಂಚರಿಸಿ ಸತ್ಸಂಗದ ಲಾಭವನ್ನು ಪಡೆದುಕೊಂಡನು. ಅವನು ಒಂದು ಸ್ಕೂಲಿನಲ್ಲಿ ಸ್ವಲ್ಪಕಾಲ ಗಣಿತಪಾಠವನ್ನು ಹೇಳಿಕೊಡುತ್ತಿದ್ದನು; ಬಳಿಕ ಒಬ್ಬ ಮಹಾರಜನ ಪುಸ್ತಕಭಂಡಾರದಲ್ಲಿ ಗ್ರಂಥಪರೀಕ್ಷಣದ ಉದ್ಯೋಗದಲ್ಲಿರುತ್ತಿದ್ದನು; ಕಾಲಕ್ರಮದಲ್ಲಿ 'ಮಹಾಮಹೋಪಾಧ್ಯಾಯ'ನಾಗಿ 'ಶಾಸ್ತ್ರಿ' ಎಂಬ ಪ್ರಶಸ್ತಿಯನ್ನು ಪಡೆದುಕೊಂಡನು. ಆ ಬಳಿಕ ಸಿಂಗಪುರಕ್ಕೆ ಹೋಗಿ ಅಧ್ಯಾತ್ಮವಿದ್ಯಾಜಿಜ್ಞಾಸುಗಳಿಗೆ

ಉಪದೇಶಮಡುತ್ತಾ ಹಲವು ವರ್ಷಗಳು ಅಲ್ಲಿದ್ದುಕೊಂಡಿದ್ದನು; ಇಂಥ ಶಿಷ್ಯರಲ್ಲಿ ಚೈನ ರಿಪಬ್ಲಿಕ್ ಸ್ಥಾಪಕನೆಂದು ಪ್ರಸಿದ್ಧನಾದ ಡಾ|| ಸೂನ್‌ಯತ್ ಸೇನ್ – ಎಂಬಾತನೊಬ್ಬನು.

ಡಾ|| ಹರಿಪ್ರಸಾದ ಶಾಸ್ತ್ರಿಗಳು ಲಂಡನ್ ನಗರಿಗೆ 1929ರಲ್ಲಿ ತಮ್ಮ ಜಪಾನಿ ಪತ್ನಿಯೊಡನೆ ಬಂದು ನೆಲಸಿದರು; ಅಂದಿನಿಂದ ಅವರಲ್ಲಿ ಭಕ್ತಿಯುಳ್ಳ ಅನೇಕ ಶಿಷ್ಯರುಗಳ ಪ್ರೇಮಕ್ಕೆ ಪಾತ್ರರಾದರು. ಬಹುಮಟ್ಟಿಗೆ ಏಕಾಂತವಾಸದಲ್ಲಿಯೇ ಇರುತ್ತಿದ್ದರೂ W. B. ಯೀಟ್ಸ್, ಜಾರ್ಜ್ ರಸೆಲ್, ಆಗಸ್ಟಸ್ ಜಾನ್ ಎಂಬ ಪ್ರಖ್ಯಾತ ಚಿತ್ರಗಾರ – ಇಂಥ ದೊಡ್ಡ ಮನುಷ್ಯರುಗಳೂ ಅವರ ಸತ್ಸಂಗದಿಂದ ಶ್ರೀಶಂಕರಾಚಾರ್ಯರ ಮತ್ತು ವಿದ್ಯಾರಣ್ಯರ ಸಿದ್ಧಾಂತಗಳನ್ನು ಪರಿಚಯಮಾಡಿಕೊಂಡರು. ಇಂಗ್ಲೆಂಡಿನಲ್ಲಿ ಈ ಇಪ್ಪತ್ತೇಳು ವರ್ಷಗಳಲ್ಲಿ ಎಷ್ಟೋ ಜನ ಮುಮುಕ್ಷುಗಳಿಗೆ ದೀಕ್ಷೋಪದೇಶಗಳನ್ನು ಶಾಸ್ತ್ರಿಗಳು ಅನುಗ್ರಹಿಸಿರುತ್ತಾರೆ. ಇಂಥ ವೇದಾಂತೋಪದೇಶದ ಧ್ಯಾನಮಂದಿರವು ಈ ಮುಂಚೆ ಇಂಗ್ಲೆಂಡಿನಲ್ಲಿರಲೇ ಇಲ್ಲ. ಇವರ ಆಶ್ರಮಕ್ಕೆ '**ಶಾಂತಿಸದನ**'ವೆಂದು ಹೆಸರು; ಅವರ ಉಪದೇಶದಪ್ರಭಾವದಿಂದ ಇಂಗ್ಲೆಂಡಿನಲ್ಲಿ ಮುಂದೆ ಪ್ರಚಂಡಪರಿಣಾಮವಾಗುವ ಸಂಭವವಿದೆ. ಶಾಂತಿಸದನವು ನೋಡುವದಕ್ಕೆ ಸಣ್ಣದು, ಅದರ ಮಹತ್ತ್ವವೇನೂ ಅಷ್ಟು ಹೊರತೋರುತ್ತಿಲ್ಲ. ಆದರೆ ಶ್ರೀಶಾಸ್ತ್ರಿಗಳನ್ನು ವೇದಾಂತಸಂಪ್ರದಾಯವನ್ನು ಹರಡುವದಕ್ಕೆಂದು ಕಳುಹಿಸಿರುವ ಪವಿತ್ರಾತ್ಮರಾದ ಗುರುಗಳ ಪ್ರೋತ್ಸಾಹವು ಆ ಆಶ್ರಮಕ್ಕೆ ಇರುತ್ತದೆ. ಇತ್ತೀಚೆಗೆ ಶ್ರೀಮತಿ ಪಂಡಿತ್ ರವರು ಆ ಸದನಕ್ಕೆ ಭೇಟಿಯಿತ್ತಾಗ 'ಇದೊಂದು ಮಹಾಕಾರ್ಯ!' ಎಂದರಂತೆ.

ಯೂರೋಪುದೇಶದವರ ಸಂಪರ್ಕದಿಂದ ನಮ್ಮ ದೇಶಕ್ಕೆ ಹಲವು ಕೊಡುಗೆಗಳು ಆಗಿರುತ್ತವೆ. ಮುಖ್ಯವಾಗಿ ಅವರು ಭೌತಿಕವಿಜ್ಞಾನವನ್ನೂ ಸ್ವಾತಂತ್ರ್ಯಪ್ರೀತಿಯನ್ನೂ ನಮಗೆಲ್ಲ ಕಲಿಸಿಕೊಟ್ಟಿರುತ್ತಾರೆ. ಆದರೆ ಭಾರತವು ಆ ಪ್ರದೇಶಕ್ಕೆ ಮಾಡಬಹುದಾದ ಮಹಾದಾನವೊಂದಿದೆ. ಅದೇ ವೇದಾಂತದಲ್ಲಿರುವ ಅಧ್ಯಾತ್ಮವಿದ್ಯೆ. ಸರ್ವಮಾನವರಲ್ಲಿಯೇ ಅಲ್ಲದೆ, ಸರ್ವಭೂತಗಳಲ್ಲಿಯೂ ಒಬ್ಬನೇಪರಮಾತ್ಮನನ್ನು ಕಾಣುವ ಈ ಪುರಾತನ ಋಷಿಗಳ ಉಪದೇಶವನ್ನು ಪಾಶ್ಚಾತ್ಯದೇಶಗಳಿಗೆಕೊಂಡೊಯ್ದು ಬಿತ್ತುವ ಮಹಾವೀರರಾದ ಆಚಾರ್ಯರುಗಳು ಹೆಚ್ಚಿನ ಸಂಖ್ಯೆಯಲ್ಲಿ ಬೇಕಾಗಿರುತ್ತಾರೆ.

★★★★★

# ಆದರ್ಶಭಕ್ತ ಮಹಾವೀರ

- ಸ್ವಾಮಿ ಜಗದೀಶ್ವರಾನಂದ

ನಮ್ಮ ದೇಶದ ಪುರಾಣಗಳಲ್ಲಿ ಚಿತ್ರಿಸಲ್ಪಟ್ಟಿರುವ ಅತ್ಯುತ್ತಮಪಾತ್ರಗಳಲ್ಲಿ ಮಹಾವೀರನು ಒಬ್ಬನು. ಅವನ ಮಹಾಭಕ್ತಿ, ಅಚಲಶ್ರದ್ಧೆ, ನಿರ್ಮಲೋದ್ದೇಶ, ಉತ್ಸಾಹಾನ್ವಿತಸೇವೆ, ಇವುಗಳು ಅವನನ್ನು ಆದರ್ಶಪ್ರಾಯನನ್ನಾಗಿ ಮಾಡಿವೆ; ಇವುಗಳಲ್ಲಿ ಅವನನ್ನು ಮೀರಿಸುವವರಿಲ್ಲವೆನಬಹುದು. ಅವನಲ್ಲಿ ಭಕ್ತಿ, ಸೇವೆ, ಶ್ರದ್ಧೆ, ಪರಾಕ್ರಮಗಳ ಅಪೂರ್ವಯೋಗವಿತ್ತು. ಮನೋವಾಕ್ಕಾಯಗಳಲ್ಲಿನ ಬ್ರಹ್ಮಚರ್ಯದಿಂದೊಗಿದ ಶಕ್ತಿ ಅವನ ಜೀವನದ ಆಧಾರ.

ಹಿಂದೂಯುವಕರು ಮಹಾವೀರನ ಉದಾತ್ತಜೀವನವನ್ನು ಅನುಕರಿಸುವುದು ಶ್ರೇಯಸ್ಕರವೆಂದು ಸ್ವಾಮಿ ವಿವೇಕಾನಂದರ ಅಭಿಪ್ರಾಯ. ನಮ್ಮ ನಾಡಿನ ಯುವಕರ ಏಳ್ಗೆಗೆ ಮಹಾವೀರ (ಅಂತೆಯೇ ಸಚಿಕೇತ)ನು ಮಾದರಿಯಾಗಬೇಕೆಂಬ ಅಂಶವನ್ನು ಅವರು ಈ ಮಾತುಗಳಲ್ಲಿ ವಿವರಿಸಿರುವರು:-

''ನೀವೀಗ ಮಹಾವೀರನನ್ನು ಆದರ್ಶವಾಗಿಟ್ಟುಕೊಳ್ಳಬೇಕು. ರಾಮಚಂದ್ರನ ಆಜ್ಞೆಯಾದೊಡನೆ ಜೀವನಮರಣಗಳ ಯೋಚನೆಯನ್ನು ಸಹ ಬಿಟ್ಟು ಸಮುದ್ರವನ್ನು ದಾಟಿದ ಆತನ ನಿರ್ಲಿಪ್ತಭಕ್ತಿಯನ್ನು ನೋಡಿರಿ. ಅವನು ಇಂದ್ರಿಯಗಳನ್ನು ಅಧೀನದಲ್ಲಿಟ್ಟುಕೊಂಡವನು; ಕುಶಾಗ್ರಬುದ್ಧಿ, ಗುರುಸೇವೆಯೆಂಬ ಉಚ್ಚಧ್ಯೇಯದಿಂದ ಅವನಂತೆ ನೀವೂ ಜೀವನವನ್ನು ಆಧಾರಮಾಡಿಕೊಳ್ಳಬೇಕು. ಇದರಿಂದ ಇತರ ಎಲ್ಲಾ ಆದರ್ಶಗಳೂ ಸಾಧ್ಯವಾಗುತ್ತವೆ. ಗುರುವಿಗೆ ವಿಧೇಯನಾಗಿರುವುದೂ ಬ್ರಹ್ಮಚರ್ಯಸಾಧನೆಯೂ ಇಷ್ಟಾರ್ಥಸಿದ್ಧಿಯ ಮೂಲ ರಾಮನಿಗಾಗಿ ತನ್ನ ಸರ್ವಸ್ವವನ್ನೂ ತೆರಬೇಕಾದರೂ ಮಹಾವೀರನಿಗೆ ಸಂತೋಷ. ರಾಮಭದ್ರನ ಸೇವೆಯೇ ಅವನ ಪರಮೋಧ್ಯೇಯ. ಅದಿಲ್ಲದ ಬ್ರಹ್ಮಪದವಿ ಸಹ ಅವನಿಗೆ ಬೇಕಾಗಿರಲಿಲ್ಲ, ರಾಮಾಜ್ಞೆಯನ್ನು ಪಾಲಿಸುವುದೇ ಅವನ ದೃಢಪ್ರತಿಜ್ಞೆ ಅವನಲ್ಲಿ ಸೇವೆಯಂತೆಯೇ ಸಿಂಹಸಾಹಸವೂ ಹೇಚ್ಚಾಗಿತ್ತು. ಅವನ ಅನುಕರಣೆಯೇ ನಮ್ಮ ಉದ್ಧಾರಕ್ಕೆ ದಾರಿ.''

ಆಂಜನೇಯನಿಗೆ ಶ್ರೀರಾಮನು ಸ್ವಾಮಿ, ದೇವತೆ; ಹೆಚ್ಚೇಕೆ? ಸರ್ವಸ್ವ ಅವನು ಬಾಲ್ಯದಲ್ಲಿ ವೇದಗಳನ್ನು ವಿಶೇಷ ಉತ್ಸಾಹದಿಂದ ಓದಿ ತಿಳಿದನು. ಅವನ ಜ್ಞಾನವಾಹಿನಿಯು, ಶ್ರೀರಾಮನ ದೇವತ್ವವನ್ನು ರೂಪುಗೊಳಿಸುವ ರೂಪಕವೊಂದನ್ನು ಅವನಿಂದ ಒರೆಯಿಸಿತು. ಹುಡುಗನಾಗಿರುವಾಗಲೇ ಅವನು ಹೆಚ್ಚಿನ ಬಲಶಾಲಿ, ಧೈರ್ಯಶಾಲಿ ಕಾರ್ಯದಕ್ಷ; ಅವನಲ್ಲಿ ಆತ್ಮವಿಶ್ವಾಸವು ಅಧಿಕವಾಗಿತ್ತು. ಇದು ಪ್ರಾಯಶಃ ಎಲ್ಲಾ ಮಹಾಪುರುಷರ ಬಾಲ್ಯದಲ್ಲಿಯೂ ತೋರಿಬರುತ್ತದೆ. ಸ್ವಾಮಿ ವಿವೇಕಾನಂದರ ಚಿಕ್ಕಂದಿನಲ್ಲಿ ಇಂತಹ ಆತ್ಮವಿಶ್ವಾಸವೇ ಮುಂತಾದ ಅಮೋಘಗುಣಗಳಿದ್ದುದರಿಂದ ಅವರ ಸಂಗಾತಿಗಳು ಅವರನ್ನು ಗರ್ವಾಹಂಭಾವಗಳ ಗಣಿಯೆಂದು ತಪ್ಪು ತಿಳಿದುಕೊಂಡರು. ಕೊನೆಯಲ್ಲಿ ತಮ್ಮ ತಪ್ಪನ್ನು ಕಂಡುಕೊಂಡು ಪಶ್ಚಾತ್ತಾಪಪಟ್ಟರು. ಮೊಲೆಯುಣ್ಣುವ ಬಾಲಕನಾಗಿದ್ದಾಗಲೇ, ಪ್ರಾತಃಕಾಲದ ಕೆಂಬಣ್ಣದ ಸೂರ್ಯಬಿಂಬನ್ನು ಒಂದೇ ಜಿಗಿತದಲ್ಲಿ ಹಿಡಿದು ಆದರೊಡನೆ ಆಡಬೇಕೆಂಬ ಮಹದಾಕಾಂಕ್ಷೆ ಮಹಾವೀರನದು. ಅಂತಹ ಅಭಿಲಾಷೆಗಳು ಮನುಷ್ಯಮೇಲ್ಮೆಗೆ ಕಾರಣವೆಂದು ಬಲ್ಲವರು ಹೇಳುತ್ತಾರೆ.

ಮಾರುತಿಯು ಸುಗ್ರೀವನ ಅಮೂಲ್ಯ ಮಿತ್ರನಾದುದರಿಂದ ಅವನಿಗೆ ಅನೇಕ ವೇಳೆ ಹಿತೋಪದೇಶವನ್ನು ಕೊಡುತ್ತಿದ್ದನು; ಕಷ್ಟಗಳಿಂದ ಪಾರುಮಾಡುತ್ತಿದ್ದನು. ಸುಗ್ರೀವನನ್ನು ಅವನ ಅಣ್ಣ ವಾಲಿಯು ಕಾಡಿಗೆ ಹೊಡೆದೋಡಿಸಲು ಅವನ ಪಾಡಿಗೆ ಬಿಡುವ ಹೇಡಿಯು 'ಮಹಾವೀರ'ನಲ್ಲ. ಅವನ ಕಷ್ಟಗಳಲ್ಲಿ ಭಾಗಿಯಾದುದಲ್ಲದೆ ಅವನ ಮೈತ್ರಿಯಲ್ಲಿ ಸ್ವಾರ್ಥದ ಲೇಶವೂ ಇರಲಿಲ್ಲ. ಅಂತಹ ಗೆಳೆತನವು ಲೋಕದಲ್ಲಿ ಅಪೂರ್ವ!

ಶ್ರೀರಾಮಚಂದ್ರನು ಸೀತಾದೇವಿಯನ್ನು ಕಳೆದುಕೊಂಡು ಕಳವಳಗೊಂಡು, ಲಕ್ಷ್ಮಣನೊಡನೆ ಆಕೆಯನ್ನು ಹುಡುಕಾಡಿ ಬಳಲಿರಲು, ಆತನಿಗೆ ಮಹಾವೀರನು ಕಾಣಿಸಿಕೊಂಡನು. ರಾವಣನು ಅಪಹರಿಸಿದ ಸೀತೆಯನ್ನು ಲಂಕಾ (ಆಧುನಿಕ ಸಿಂಹಳ) ದ್ವೀಪದಲ್ಲಿ ಹುಡುಕಿಹಿಡಿಯುವ ಕಠಿನಕಾರ್ಯವನ್ನು ಅವನು ವಹಿಸಿಕೊಂಡನು. ರಾಮನ ಸಮಾಗಮದಿಂದ ಅವನ ಜೀವನಪಥವು ಸಂಪೂರ್ಣವಾಗಿ ಬದಲಾಯಿಸಿತು. ಶ್ರೀರಾಮನಲ್ಲಿ ಅವನ ಭಕ್ತಿಯು ಕ್ರಮಕ್ರಮವಾಗಿ ಹಚ್ಚಾದುದರಿಂದ ಅವನು ತನ್ನ ಜೀವನವನ್ನು ರಾಮಸೇವೆಗಾಗಿ ಧಾರೆಯೆರೆದನು. ರಾಮನ ದರ್ಶನದಿಂದ ತನ್ನ ಮನೆಯನ್ನೂ

ಬಂಧುಮಿತ್ರರನ್ನೂ ಮರೆತ ಮಹಾವೀರನು ಬ್ರಹ್ಮಚರ್ಯವ್ರತವನ್ನು ಕೈಕೊಂಡನು; ಸಾಂಸಾರಿಕ ಜೀವನದ ಯೋಚನೆಯನ್ನೇ ಬಿಟ್ಟುಬಿಟ್ಟನು. ಸೀತೆಯನ್ನು ಹುಡುಕುವುದರಲ್ಲಿ–ಅದೇ ಅವನ ಸ್ವಾಮಿಯ ಆಜ್ಞೆ–ಅವನ ಪ್ರಯತ್ನವು ಫಲಿಸಿತು. ಸೀತಾಮಾತೆಯ ಬಿಡುಗಡೆಯಾಗುವ ಮೊದಲು ಅವನು ವಿಶ್ರಾಂತಿಯನ್ನು ಸಹ ವಲ್ಲನು. ರಾಮಧ್ಯಾನಾಸಕ್ತನಾದ ಅವನಿಗೆ ದಿನ ಕಳೆದುದರ ಜ್ಞಾನ ಕೂಡ ಇರಲಿಲ್ಲ. ಇದಕ್ಕೆ ಕಾರಣವನ್ನು ಕೇಳಿದರೆ, ''ರಾಮನೇ ನನ್ನ ಶಾಶ್ವತತೇದಿ ಇನ್ನೊಂದೂ ನನಗೆ ಗೊತ್ತಿಲ್ಲ'' ಎಂದು ಉತ್ತರವೀಯುವನು. 'ಶ್ರದ್ಧಾವಿಶ್ವಾಸಗಳು ಅಚಲವನ್ನಾದರೂ ಚಲಿಸಬಲ್ಲುವು. ಅಸಾಧ್ಯವಾದುದನ್ನು ಭಕ್ತನ ವಿಷಯದಲ್ಲಿ ಸಾಧ್ಯವಾಗಿಸಬಲ್ಲುವು' ಎಂಬುದಕ್ಕೆ ಮಹಾವೀರನ ದಿವ್ಯಚರಿತ್ರೆಯೇ ನಿದರ್ಶನ ದೇವರಲ್ಲಿ ಪೂರ್ಣನಂಬಿಕೆ ಯಿಟ್ಟ ಅವನು ಆಶ್ಚರ್ಯಕರವಾದ ಕಾರ್ಯಗಳನ್ನು ಮಾಡಿರುವನು. 'ನಂಬಿಕೆ' ಅಥವಾ 'ವಿಶ್ವಾಸ' ಎಂದರೆ ನಿಶ್ಚೇಷ್ಟತೆ ಮತ್ತು ಸೋಮಾರಿತನಗಳ ಭಾವ–ಇವೇ ನಮ್ಮ ಮನಸ್ಸಿಗೆ ಬರುತ್ತವೆ. ಮಹಾವೀರನ ದೃಷ್ಟಿಯಿಂದ ಅದು ಹಾಗಲ್ಲ. ನಿರಂತರ ದೇವರ ಅಧೀನದಲ್ಲಿರುವುದು, 'ಅಹಂ'ಭಾವದ ಪೂರ್ಣವಾದ ಮರೆವು–ಇವೇ ಅವನಿಗೆ 'ವಿಶ್ವಾಸ' ಗಾಢವಿಶ್ವಾಸವಿದ್ದುದರಿಂದ ದೇವರು ಹೇಳಿದಂತೆ ಮಾಡುವನವನು. ಇದರಿಂದ ಅವನಲ್ಲಿ ಕ್ರಮಕ್ರಮವಾಗಿ ದೈವೀಜ್ಯೋತಿಯೊಂದು ಬೆಳಗಲುಪಕ್ರಮಿಸಿತು. ಜಾನಕಿಯನ್ನು ಹುಡುಕುವುದಕ್ಕೋಸ್ಕರ ಲಂಕೆ ಮತ್ತು ಹಿಂದೂದೇವಶಗಳ ನಡುವಣ ಕಡಲನ್ನು ದಾಟುವ ಪ್ರಸಂಗ ಬಂದಾಗ ಅವನು–

**ಪ್ರಾಣಪ್ರಯಾಣಸಮಯೇ ಯಸ್ಯ ನಾಮ ಸಕೃತ್‌ಸ್ಮರನ್ ।**
**ನರಸ್ತೀರ್ತ್ವಾ ಭವಾಂಭೋಧಿಮಪಾರಂ ಯಾತಿ ತತ್ಪದಮ್ ॥**
**ಕಿಂ ಪುನಸ್ತಸ್ಯ ದೂತೋಽಹಂ ತದಙ್ಗಾಙ್ಗುಲಿಮುದ್ರಿಕಃ ।**
**ತಮೇವ ಹೃದಯೇ ಧ್ಯಾತ್ವಾ ಲಂಘಯಾಮ್ಯಲ್ಪವಾರಿಧಿಮ್ ॥**

ಎಂದರೆ, ''ಯಾವ ದೇವರ ನಾಮವನ್ನು ಸಾಯುವಾಗ ಒಂದು ಸಲ ಉಚ್ಚರಿಸಿದ ಮಾತ್ರಕ್ಕೆ ಮನುಷ್ಯನು ಅಪಾರವಾದ ಭವಸಾಗರವನ್ನು ದಾಟಿ ಅವನಲ್ಲಿ ಲೀನನಾಗುವನೋ, ಅಂತಹ ಶ್ರೀರಾಮನ ದೂತನು ನಾನು. ಅವನ ಉಂಗುರವು ನನ್ನಲ್ಲಿದೆ. ಅವನನ್ನು ಧ್ಯಾನಿಸಿಕೊಂಡು ಈ ಸಣ್ಣ ಸಮುದ್ರವನ್ನು ದಾಟಿಬಿಡುತ್ತೇನೆ'' ಎಂದು ಒಂದೇ ಜಿಗಿತದಲ್ಲಿ ಹಾರಿ ಸುರಕ್ಷಿತವಾಗಿ ದಾಟಿದನು. ರಾಮನಾಸ್ಮರಣದಿಂದ ಅವನ ಅಂಗಗಳಲ್ಲಿ ಅಸಾಧಾರಣ ಶಕ್ತಿಯುಂಟಾಯಿತು.

ನಾಮೋಚ್ಚಾರಣದಿಂದ ದೇವರ ಅನಂತಶಕ್ತಿಯು ಭಕ್ತನಿಗೆ ಬರುತ್ತದೆಂಬುದ ಎಲ್ಲಾ ಸಾಧುಗಳ ಅನುಭವ. ಮಹಾವೀರನು ಬಹಳ ಹೊತ್ತು ಹುಡುಕಿದ ಮೇಲೆ ಸೀತೆಯನ್ನು ಒಂದು ಅಶೋಕವನದಲ್ಲಿ ಕಂಡನು. ಆಕೆಯ ಕೂದಲು ಕೆದರಿತ್ತು, ಸೀರೆಯು ಹರಿದು ಮಾಸಿಹೋಗಿತ್ತು. ರಾಮನ ವಿರಹದಿಂದ ಮೃತಪ್ರಾಯಗಳಾದ ಆಕೆ ಮಹಾವೀರನ ರಾಮಭಜನೆಯಿಂದ ಸುಖಿತಳಾದಳು. ಅವನು ರಾಮನ ಉಂಗುರವನ್ನು ತೋರಿಸಿದ ಮೇಲೆ, ರಾಮನ ದಾಸನಿವನೆಂದು ನಂಬಿದಳು. ರಾಮನ ವಾರ್ತೆಯನ್ನು ಕೇಳಿ ಅತ್ಯಂತ ಸಂತೋಷಪಟ್ಟಳು.

ಹನುಮಂತನು ಬಂದಿದಾನೆಂಬ ಸುದ್ಧಿಯು ಊರಲ್ಲೆಲ್ಲಾ ಹರಡಲು ಇಂದ್ರಜಿತು ಬಂದು ಅವನನ್ನು ಬಂಧಿಸಿ ರಾವಣನ ಆಸ್ಥಾನಕ್ಕೆ ಕರದೊಯ್ದನು. ಆತ್ಮವಿಶ್ವಾಸಿಯಾದ ಆ ಭಕ್ತನಿಗೆ ಸ್ವಲ್ಪವೂ ಹೆದರಿಕೆಯಿರಲಿಲ್ಲ. ರಾವಣನ ರಾಮದೂಷಣೆಯನ್ನು ಅವನು ಸಹಿಸದಾದನು. ಸ್ವಭಾವತಃ ನಿರ್ಭಯನಾದ ಅವನು ಕನಲ್ದು, ''ನಾನು ರಾಮಚಂದ್ರನ ಪುತ್ರನೂ ಸೇವಕನೂ ಆಗಿರುವುದರಿಂದ ನಿನ್ನಂಥ ಕೋಟಿ ರಾವಣರಿಗೆ ಕೂಡ ಹೆದರುವವನಲ್ಲ'' ಎಂದು ರಾವಣನನ್ನು ತಿರಸ್ಕರಿಸಿದನು. ಅವನ ಈ ದಿಟ್ಟತನವನ್ನು ನೋಡಿ ಉರಿದೆದ್ದ ರಾವಣನು ತನ್ನ ಸೇವಕರಿಗೆ ಅವನನ್ನು ಕೊಲ್ಲುವಂತೆ ಆಣತಿಯಿತ್ತನು. ಈ ಆಜ್ಞೆ ಹನುಮಂತನನ್ನು ಕೊಂಚವೂ ಎದೆಗೆಡಿಸಲಿಲ್ಲ. ಧೈರ್ಯಶಾಲಿಯಾದ ಅವನು, ರಾಮನೊಡನೆ ದ್ವೇಷವನ್ನು ಬಿಡುವಂತೆಯೂ ಅವನನ್ನು ಶರಣುಹೊಗುವಂತೆಯೂ ಸೀತೆಯನ್ನು ಮರ್ಯಾದೆಯಿಂದ ಅಯೋಧ್ಯೆಗೆ ಕಳುಹಿಸುವಂತೆಯೂ ರಾವಣನಿಗೆ ಬುದ್ಧಿಹೇಳಿದನು. ಆದರೆ ಅವನ ಹಿತೋಕ್ತಿ ನಿಷ್ಫಲವಾಯಿತು.

ವಿಭೀಷಣನು ಅಣ್ಣ ರಾವಣನಿಗೆ ದೂತನನ್ನು ಕೊಲ್ಲಿಸುವುದು ರಾಜನೀತಿಗೆ ವಿರುದ್ಧವೆಂದು ಹೇಳಿ ರಾಮದೂತನಾದ ಅವನನ್ನು ಕೊಲ್ಲದಂತೆ ಸಾರಿದನು, ಬೇಡಿದನು. ಅದುದರಿಂದ ರಾವಣನು ಮೊದಲು ನಿಶ್ಚಯಿಸಿದಂತೆ ಮಾಡದೆ ವಾಯುಪುತ್ರನ ಬಾಲಕ್ಕೆ ಎಣ್ಣೆಯ ಬಟ್ಟೆಯನ್ನು ಸುತ್ತಿ ಬೆಂಕಿ ಹಚ್ಚುವಂತೆ ಅಜ್ಞಾಪಿಸಿದನು. ಆಗ ಮಹಾವೀರನು ಈ ರೀತಿ ರಾಮಧ್ಯಾನಮಾಡುತ್ತಿದ್ದನು:–

**ಯನ್ನಾಮಸಂಸ್ಮರಣಧೂತಸಮಸ್ತಪಾಪಾಃ**
**ತಾಪತ್ರಯಾನಲಮಪೀಹ ತರನ್ತಿ ಸದ್ಯಃ ।**

**ತಸ್ಯೈವ ಕಿಂ ರಘುವರಸ್ಯ ವಿಶಿಷ್ಟದೂತಃ**
**ಸಂಪತಪ್ಯತೇ ಕಥಮಸೌ ಪ್ರಕೃತಾನಲೇನ ॥**

ಎಂತೆಂತಹ ಪಾಪಿಗಳಾದರೂ ತಾಪತ್ರಯವೆಂಬ ಅಗ್ನಿಯನ್ನು ಯಾರ ನಾಮಸ್ಮರಣದಿಂದ ನಿವಾರಿಸಬಲ್ಲರೋ ಆ ಶ್ರೀರಘುವರನ ಶ್ರೇಷ್ಠದೂತನಾದ ನಾನು ಈ ಬೆಂಕಿಯಿಂದ ಹೇಗೆ ತಾನೆ ತಾಪಪಟ್ಟೇನು? ರಾಮಭಕ್ತಿಯೆಂಬ ಕವಚವನ್ನು ತೊಟ್ಟ ಅವನಿಗೆ ಬೆಂಕಿಯಿಂದ ತೊಂದರೆಯಾಗಲಿಲ್ಲ. ಅವನು ಸೀತೆಯ ಸಮಾಚಾರವನ್ನೆಲ್ಲಾ ತಿಳಿದು ಸ್ವದೇಶಕ್ಕೆ ಹೊರಟನು. ಹೊರಡುವದಕ್ಕೆ ಮೊದಲು, ಸೀತೆಯು ಒಪ್ಪಿದರೆ ಆಕೆಯನ್ನು ತನ್ನ ಭುಜದ ಮೇಲೆ ಹೊತ್ತುಕೊಂಡು ಹೋಗುವ ಅಭೀಷ್ಟವನ್ನೂ ಆಕೆಗೆ ತಿಳಿಸಿದನು. ಆದರೆ ಆ ರೀತಿ ತಪ್ಪಿಸಿಕೊಂಡು ಹೋಗುವದು ಆಕೆಗೆ ಇಷ್ಟವಿರಲಿಲ್ಲ. ಸೀತೆಯ ವಾರ್ತೆಯನ್ನು ತಂದ ಮಹಾವೀರನು ಶ್ರೀರಾಮನ ಪ್ರೀತಿಗೆ ಪಾತ್ರನಾದನು.

ಒಂದು ಸಲ ರಾಮಲಕ್ಷ್ಮಣರು ನಾಗಪಾಶದಲ್ಲಿ ಸಿಕ್ಕಿಬಿದ್ದರು. ತಮ್ಮನ್ನು ಬಿಡಿಸಲು ಅವರು ಗರುಡನನ್ನು ಬರಹೇಳಿದರು. ಭಕ್ತನಾದ ಗರುಡನು ಬಂದು ಅವರನ್ನು ಬಿಡಿಸಿದನು. ಅನಂತರ ಅವನು ತನ್ನ ಇಷ್ಟ ದೇವತೆಯಾದ ವಿಷ್ಣುವಿನ ರೂಪವನ್ನು ತೋರಿಸಬೇಕೆಂದು ಶ್ರೀರಾಮನನ್ನು ಬೇಡಿಕೊಂಡನು. ರಾಮನು ಭಕ್ತನ ಇಚ್ಛೆಯನ್ನು ಪೂರೈಸಿದನು. ಇದರಿಂದ ಮಹಾವೀರನ ವಿಶ್ವಾಸವು ಸ್ವಲ್ಪವಾದರೂ ಕಡಿಮೆಯಾಗಲಿಲ್ಲ. ಅವನಿಗೆ ಇಷ್ಟನಿಷ್ಠೆಯ ನಿಜವಾದ ಜ್ಞಾನವಿದ್ದುದರಿಂದ ಅಸಹನೆಯಿರಲಿಲ್ಲ. ಅಸಹನೆಯಿಂದ ದೇವರ ರೂಪಾಂತರಗಳ ದ್ವೇಷವುಂಟಾಗುತ್ತದೆಂದು ಬಲ್ಲವನಾದ ಅವನು

**ಶ್ರೀನಾಥೇ ಜಾನಕೀನಾಥೇ ಅಭೇದಃ ಪರಮಾತ್ಮನಿ ।**
**ತಥಾಪಿ ಮಮ ಸರ್ವಸ್ವಂ ರಾಮಃ ಕಮಲಲೋಚನಃ ॥**

ಪರಮಾತ್ಮನ ರೂಪಾಂತರರಾದ ವಿಷ್ಣು(ಶ್ರೀನಾಥ)ವಿಗೂ ರಾಮ (ಜಾನಕೀನಾಥ)ನಿಗೂ ಭೇದವಿಲ್ಲ; ಆದರೂ ಕಮಲಲೋಚನನಾದ ರಾಮನೇ ನನ್ನ ಸರ್ವಸ್ವ - ಎಂದು ಅಭಿಪ್ರಾಯವನ್ನು ಸ್ಪಷ್ಟಪಡಿಸಿದನು. ಇಷ್ಟನಿಷ್ಠತೆಯೆಂದರೆ ದುರಭಿಮಾನವಲ್ಲ. ನಾವು ಆಚರಿಸುವ ಇಷ್ಟನಿಷ್ಠೆಯು ನಿಜವಾದುದು ಹಾಸ್ಯಚಿತ್ರ ಅದು ಭಕ್ತಿಯ ಅಭಿವೃದ್ಧಿಗೆ ವಿಘ್ನಕಾರಿ, ''ಒಳ್ಳೆಯ ಹೆಂಡತಿಯಾದವಳು ತನ್ನ

ಗಂಡನನ್ನು ಹೆಚ್ಚಿನ ಭಕ್ತಿವಿಶ್ವಾಸಗಳಿಂದ ಕಾಣುತ್ತಾಳೆ; ಯಾವ ದುರುದ್ದೇಶ ದುಷ್ಟಾಭಿಪ್ರಾಯಗಳನ್ನೂ ಇಟ್ಟುಕೊಳ್ಳದೆ ಮೈದುನರನ್ನೂ ಪ್ರೀತಿಸುತ್ತಾಳೆ. ಹಾಗೆಯೇ, ದೇವ ಭಕ್ತನು ತನ್ನ ಇಷ್ಟದೇವತೆಯನ್ನು ಆರಾಧಿಸುತ್ತಿದ್ದು, ಇತರ ದೇವತೆಗಳನ್ನೂ ಅದರ ರೂಪಭೇದವೆಂದು ತಿಳಿದು ಆದರಿಸುತ್ತಾನೆ'' ಎಂದು ಮಹಾಪುರುಷರೊಬ್ಬರು ಹೇಳಿರುತ್ತಾರೆ.

ಮಹಾವೀರನು ಮತಾಚಾರಭ್ರಾಂತನಲ್ಲ, ಹಿಂದೂಧರ್ಮದ ಔದಾರ್ಯಮೂರ್ತಿಯೇ ಅವನು ಭಿನ್ನಮತಗಳ ಬೇರೆಬೇರೆ ಪೂಜಾಪದ್ಧತಿಗಳ ಧ್ಯೇಯವು ಒಂದೇ ಎಂಬುದು ಅವನಿಗೆ ಗೊತ್ತು ಉತ್ಸಾಹಶಾಲಿಯಾದ ಭಕ್ತನು ಅಧ್ಯಾತ್ಮಿಕ ಜೀವನದ ಉಚ್ಚತರಶ್ರೇಣಿಯನ್ನೇರಿದ ಹಾಗೆಲ್ಲಾ ಈ ಸತ್ಯವನ್ನು ಚೆನ್ನಾಗಿ ಮನಗಾಣುತ್ತಾನೆ. ದೇವರ ವಿಷಯದಲ್ಲಿ ಜನರ ಭಾವವು ಬೇರೆಯಾದುದಂತೆಲ್ಲ ಅವರ ದಿವ್ಯ ಅನುಭವಗಳು ಬದಲಾಗುತ್ತವೆ. ಪರಮಸತ್ಯವನ್ನು ಕಾಣದೆ ಆತ್ಮವಿಕಾಸವು ಪೂರ್ಣವಾಗುವುದಿಲ್ಲ. ಶ್ರೀರಾಮನೊಮ್ಮೆ, 'ನನ್ನನ್ನು ಏನೆಂದು ತಿಳಿದಿರುವೆ?' ಎಂದು ಹನುಮಂತನನ್ನು ಕೇಳಿದನು. ಅವನು ಕೂಡಲೆ ಯಾವ ಅನುಮಾನವೂ ಇಲ್ಲದೆ

**ದೇಹಬುದ್ಧ್ಯಾ ತು ದಾಸೋಽಸ್ಮಿ ಜೀವಬುದ್ಧ್ಯಾ ತ್ವದಂಶಕಃ ।**
**ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ ॥**

ದೇಹವೇ ನಾನೆಂದು ಯೋಚಿಸಿದಾಗ ನಾನು ನಿನ್ನ ದಾಸನು; 'ನಾನು ಜೀವಾತ್ಮ. ನೀನು ಪರಮಾತ್ಮ' ಎಂಬ ಭಾವ ಬಂದಾಗಲೆಲ್ಲ ನಾನು ನಿನ್ನಂಶ; ಆತ್ಮಜ್ಞಾನವಾದಾಗ ನಾನೇ ನೀನು, ನೀನೇ ನಾನು – ಎಂದು ಉತ್ತರವಿತ್ತನು. ಇದು ವೇದಾಂತದ ಸಾರ. ಅವನಲ್ಲಿ ಭಕ್ತಶ್ರೇಷ್ಠನ ಗುಣಗಳೆಲ್ಲಾ ಇದ್ದುವು. ಅವನಿಗೆ ಮನಸ್ಸು ಸ್ವಾಧೀನವಾಗಿತ್ತು. ಅಧ್ಯಾತ್ಮಜೀವನದ ಅನುಭವವು ಸ್ವಲ್ಪವಾದರೂ ಇದ್ದವರಿಗೆ ಮನೋನಿಗ್ರಹವೆಷ್ಟು ಕಷ್ಟವೆಂಬುದು ಗೊತ್ತಿರುತ್ತದೆ. ಅರ್ಜುನನು ಕೂಡ ಮನಸ್ಸನ್ನು ಹಿಡೀತದಲ್ಲಿಟ್ಟುಕೊಳ್ಳಲಾರದೆ ಹೋದನು. 'ಮನಸ್ಸು ಗಾಳಿಯಂತೆ ತಡೆಯಿಲ್ಲದ್ದು (ದುರ್ನಿಯಮ್ಯ)' ಎಂದು ಅವನ ಅಭಿಪ್ರಾಯ. ಸಾಧುವರ್ಯನೊಬ್ಬನು ಮನಸ್ಸಿನ ಗತಿಯನ್ನು, ಕಳ್ಳುಕುಡಿಸಿ ಚೇಳುಕಡಿಸಿ ಉನ್ಮತ್ತವಾದ ಕಪಿಯ ಅವಸ್ಥೆಗೆ ಹೋಲಿಸಿದ್ದಾನೆ. ಆದರೆ ಮಹಾವೀರನ ಮನಸ್ಸು

ಸ್ತಿಮಿತದಲ್ಲಿತ್ತು. ಅದು ಅವನ ಆಧ್ಯಾತ್ಮಿಕಜೀವನಯಾತ್ರೆಗೆ ಅಡ್ಡಿಯನ್ನೊಡ್ಡಲಿಲ್ಲ, ಸಹಾಯವನ್ನೇ ಮಾಡಿತು. ಭೂಮಿಜೆಯನರಸಲ್ಕೆ ಪೋದ ಅವನು ಲಂಕೆಯ ಜನರ ವಿಷಯಾಸಕ್ತಿ, ದುಂದುಗಾರಿಕೆ, ಸ್ತ್ರೀಲಾಂಪಟ್ಯ ಮತ್ತು ಇವುಗಳಿಗೆ ಅನುಕೂಲವಾದ ನಿರ್ಬಂಧಭಾವ – ಇವುಗಳನ್ನು ಕಂಡು ವಿಷಾದಪಟ್ಟನು; ಗಾಬರಿಯಾಗಲಿಲ್ಲ, ಮನಸೋಲಲಿಲ್ಲ. ತನ್ನ ಕೆಲಸವನ್ನು ಸಾಧಿಸುತ್ತಾ ಅವನು ಹೀಗೆಂದನು–

**ಮನೋ ಹಿ ಹೇತುಃ ಸರ್ವೇಷಾಮಿನ್ದ್ರಿಯಾಣಾಂ ಪ್ರವರ್ತನೇ ।**
**ಶುಭಾಶುಭಾಸ್ವವಸ್ಥಾಸು ತಚ್ಚ ಮೇ ಸುವ್ಯವಸ್ಥಿತಮ್ ॥**

ಮನಸ್ಸೇ ಇಂದ್ರಿಯಗಳನ್ನು ವಿಷಯಗಳಿಗೆಳೆಯುವಂತಹುದು. ನನ್ನ ಮನವಾದರೋ ಸುಖದುಃಖಗಳಲ್ಲಿ ಶಾಂತವಾಗಿರುತ್ತದೆ. ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡಿರುವವನು ನಮಗೆಲ್ಲ ಮಾನ್ಯನು.

ಶ್ರೀರಾಮನು ರಾವಣನನ್ನು ಕೊಂದು ಸೀತೆಯನ್ನು ಅಯೋಧ್ಯೆಗೆ ಕರೆದುಕೊಂಡು ಹೋದನು. ಪ್ರಜೆಗಳೆಲ್ಲ ಸಂತೋಷದಿಂದ ಅವನಿಗೆ ಪಟ್ಟಾಭಿಷೇಕ ಮಾಡಿದರು. ತನ್ನ ಮಿತ್ರರೂ ಅನುಯಾಯಿಗಳೂ ಮಾಡಿದ ಉಪಕಾರಸ್ಮರಣೆಗಾಗಿ ಆತನು ಅವರಿಗೆಲ್ಲಾ ಬಹುಮಾನಗಳನ್ನಿತ್ತನು ಆದರೆ ಉತ್ಸವದ ಗಡಿಬಿಡಿಯಲ್ಲಿ ಪ್ರೀತಿಯ ಸೇವಕನಾದ ಆಂಜನೇಯನಿಗೆ ಪಾರಿತೋಷಕವನ್ನು ಕೊಡುವುದನ್ನು ಮರೆತನು. ಆದುದರಿಂದ ಭಕ್ತಾಗ್ರಣಿಯು ರಾಮನ ಬಳಿಸಾರಿ, ಮಣಿದು, ತನಗೆ ಪ್ರಸಾದವು ಸಿಗದಿರುವದಕ್ಕೆ ಕಾರಣವನ್ನು ವಿನಯಪೂರ್ವಕವಾಗಿ ಕೇಳಿದನು. ಇದನ್ನು ನೋಡಿದ ಸೀತೆಯು ನಾಥನ ಅನುಮತಿಯನ್ನು ಪಡೆದು ತನ್ನ ಪ್ರೀತಿಯ ಮುಕ್ತಾಹಾರವನ್ನು ಮಹಾವೀರನಿಗೆ ಕೊಟ್ಟಳು. ಅವನು ಆಕೆಗೆ ಸಾಷ್ಟಾಂಗನಮಸ್ಕಾರ ಮಾಡಿ ಸ್ವಲ್ಪಕಾಲ ಹಾರವನ್ನು ಧರಿಸಿಕೊಂಡನು. ಅನಂತರ ಅದನ್ನು ತೆಗೆದು ಮಣಿಗಳನ್ನು ಒಂದೊಂದಾಗಿ ಕಡಿದು ಎಸೆಯಲಾರಂಭಿಸಿದನು. ಇದನ್ನು ನೋಡಿ ಆಶ್ಚರ್ಯಚಕಿತವಾದ ರಾಜಸಮಾಜವು ಅವನ ಅಪೂರ್ವವರ್ತನೆಯ ಉದ್ದೇಶವನ್ನು ಕೇಳಿತು. ಅವನ ಉತ್ತರವಿದು: ‘‘ನನ್ನ ದೇಹ, ಮನಸ್ಸು, ಆತ್ಮ – ಇವೆಲ್ಲಾ ರಾಮನವು. ರಾಮನಾಮಾಂಕಿತವಲ್ಲದ ಯಾವುದೊಂದನ್ನೂ ಸ್ವೀಕರಿಸಲಾರೆನು. ಒಳಗಡೆ ರಾಮನಾಮವಿದೆಯೇ ಎಂದು ಪರೀಕ್ಷಿಸಲು

ಮಣಿಗಳನ್ನು ಕಡಿದುನೋಡುತಿದ್ದೇನೆ.'' ಅವನ ಈ ಉತ್ತರದಿಂದ ಕೋಪಗೊಂಡ ಲಕ್ಷ್ಮಣನು, 'ನಿನಗೆ ಅತಿಪ್ರಿಯವಾದ ಶರೀರದಲ್ಲಿ ರಾಮನಾಮವು ಕೆತ್ತಿದೆಯೆ?' ಎಂದು ಕೇಳಲು, 'ಮಹಾವೀರ'ನು ತನ್ನ ಎದೆಯನ್ನು ಸೀಳಿತೋರಿಸಿ ತನ್ನ ಹೆಸನ್ನು ಸಾರ್ಥ(ಅನ್ವರ್ಥ)ಗೊಳಿಸಿದನು. ಅವನ ಪ್ರತಿಯೊಂದು ರಕ್ತಕಣದಲ್ಲಿಯೂ ಮಾಂಸಖಂಡದಲ್ಲಿಯೂ ಅಸ್ಥಿಭಾಗದಲ್ಲಿಯೂ ರಾಮನಾಮವಿದ್ದುದನ್ನು ನೋಡಿ ಎಲ್ಲರಿಗೂ ಆಶ್ಚರ್ಯವಾಯಿತು. ಎಲ್ಲಾ ಭಕ್ತೋತ್ತಮರಿಗೂ ಹೀಗೆಯೇ ಇರುತ್ತದೆಂದು ಮನೀಷಿಗಳು ಹೇಳುತ್ತಾರೆ. 'ಸೂಫಿ'ಪಂಗಡದ ಸಾಧುವರ್ಯನಾದ ಮನ್ಸೂರ್ ಎಂಬವ ದೇಹವನ್ನು ತುಂಡರಿಸಿದಾಗ ಎಲ್ಲಾ ಅಂಗಗಳಿಂದಲೂ '**ಅನಲ್ ಹಕ್**' (ಎಂದರೆ ಸೋऽಹಂ, ಅವನೇ ನಾನು) ಎಂಬ ಪರಮತತ್ತ್ವೋಚ್ಚಾರಣವಾಯಿತಂತೆ. ಭಕ್ತಶಿರೋಮಣಿಯು ಜೀವಪರಮಾತ್ಮರ ಐಕ್ಯವನ್ನು ಕೂಡ ಮರೆತು ಪರಮಾತ್ಮನನ್ನೇ ಎಲ್ಲೆಡೆಯಲ್ಲಿಯೂ ಕಾಣುವನೆಂದು ಇಂತಹ ಉದಾಹರಣೆಗಳಿಂದ ತಿಳಿಯುತ್ತದೆ. ''ದೇವರು ಹೆಚ್ಚಾಗಿ ವಾಸಮಾಡುವ ಸ್ಥಾನವು ಭಕ್ತನ ಹೃದಯ'' ಎಂದು ಪವಿತ್ರಾತ್ಮನೊಬ್ಬನು ಸಾರಿದ್ದಾನೆ. ಮಹಾವೀರನ ಕೊನೆಯ ದಿನಗಳಲ್ಲಿ (ಎಂದರೆ ಮುದಿತನದಲ್ಲಿ) ಅವನ ಭಕ್ತಿಯು ಪರಮಾವಧಿಯನ್ನು ಪಡೆಯಿತು. ರಾಮನ ರಾಜ್ಯಾಭಿಷೇಕವಾದ ಮೇಲೆ ಅಯೋಧ್ಯೆಯಲ್ಲೆಲ್ಲ ಶಾಂತಿ ನೆಲೆಸಿರಲು ಮಾರುತಿಯು ಹಿಮಾಲಯದ ಪವಿತ್ರಸ್ಥಾನಗಳಿಗೆ ಹೋಗಿ ಧ್ಯಾನತಪಸ್ಸುಗಳಲ್ಲೇ ಕಾಲಕ್ಷೇಪಮಾಡಲು ಬಯಸಿದನು. ಹೊರಡುವ ಮೊದಲು ರಾಮದೇವನ ಅನುಮತಿ ಆಶೀರ್ವಾದಗಳನ್ನು ಪಡೆಯಲು ಹೋದನು. ಅವನು ಕೇಳದ ಯಾವವರನ್ನಾದರೂ ಕೊಡುತ್ತೇನೆಂದು ರಾಮಚಂದ್ರನು ವಾಗ್ದಾನಮಾಡಿದನು. ಮಹಾವೀರನು

**ತ್ವನ್ನಾಮ ಸ್ಮರತೋ ರಾಮ ನ ತೃಪ್ಯತಿ ಮನೋ ಮಮ ।**
**ಅತಸ್ತ್ವನ್ನಾಮ ಸತತಂ ಸ್ಮರನ್ ಸ್ಥಾಸ್ಯಾಮಿ ಭೂತಲೇ ॥**
**ಯಾವತ್ ಸ್ಥಾಸ್ಯತಿ ತೇ ನಾಮ ಲೋಕೇ ತಾವತ್ ಕಲೇವರಮ್ ।**
**ಯಾವತ್ತವ ಕಥಾ ಲೋಕೇ ವಿಚರಿಷ್ಯತಿ ಪಾವನೀ ॥**
**ತಾವತ್ ಸ್ಥಾಸ್ಯಾಮಿ ಮೇದಿನ್ಯಾಂ ತವಾಜ್ಞಾಮನುಪಾಲಯನ್॥**

ನಿನ್ನ ನಾಮಸ್ಮರಣೆ ಎಷ್ಟು ಹೆಚ್ಚಾಗಿ ಮಾಡಿದರೂ ನನಗೆ ತೃಪ್ತಿಯಾಗುವುದಿಲ್ಲ. ಅದರಿಂದ ನಿನ್ನ ಹೆಸರನ್ನು ಯಾವಾಗಲೂ ನೆನೆಯುತ್ತಿರುತ್ತೇನೆ. ಎಂದಿನವರೆಗೆ ನಿನ್ನ

ಪವಿತ್ರಚರಿತ್ರೆಯನ್ನು ಜನರು ನೆನರುತಾರೋ ಅಂದಿನತನಕ ನಿನ್ನ ಆಜ್ಞೆಯಂತೆ ನಡೆಯುತ್ತಿರುವುದೇ ನನಗೆ ಇಷ್ಟ –ಎಂದು ಕೇಳಿಕೊಂಡನು.

ಹನುಮಂತನ ಭಕ್ತಿಗಿಂತ ಶ್ರೇಷ್ಠವಾದುದನ್ನು ಚಿಂತಿಸುವುದೂ ಅಸಾಧ್ಯ. ಈ ಆಶಯವನ್ನು ಪೋಷಿಸುವ ಶ್ಲೋಕವೊಂದಿದೆ:–

**ಯತ್ರಯತ್ರ ರಘುನಾಥಕೀರ್ತನಂ**
**ತತ್ರತತ್ರ ಕೃತಮಸ್ತಕಾಂಜಲಿಮ್ ।**
**ಬಾಷ್ಪವಾರಿಪರಿಪೂರ್ಣಲೋಚನಂ**
**ಮಾರುತಿಂ ನಮತ ರಾಕ್ಷಸಾಂತಕಮ್॥**

ಎಲ್ಲೆಲ್ಲಿ ರಘುನಾಥನ ಕೀರ್ತನೆಯಾಗುವುದೋ ಅಲ್ಲಲ್ಲಿ ಮಾರುತಿಯು ಭಕ್ತಿ ಬಾಷ್ಪವನ್ನು ಸುರಿಸುತ್ತ ನಮಸ್ಕಾರಮುದ್ರೆಯಲ್ಲಿ ಕುಳಿತಿರುತ್ತಾನೆ. ಅಂತಹ ರಾಕ್ಷಸಾಂತಕನಾದ ಭಕ್ತಶ್ರೇಷ್ಠನನ್ನು ನಮಸ್ಕರಿಸಿರಿ.

ಮಹಾವೀರನು ಭಕ್ತ್ಯತಿಶಯದಿಂದ ಅಮರತ್ವವನ್ನು ಪಡೆದ ಏಳು ಚಿರಂಜೀವಿಗಳಲ್ಲಿ ಒಬ್ಬನೆಂದು ಪರಿಗಣಿಸಲ್ಪಟ್ಟಿದ್ದಾನೆ. ಆ ಆಂಜನೇಯನೇ ಆದರ್ಶಭಕ್ತ, ಭಕ್ತರಿಗೆ ಆದರ್ಶ ಅವನು ನಮಗೆಲ್ಲ ಆವೇಶವನ್ನು ಕೊಡಲಿ.

★★★★★

# ಸರ್ ಜಗದೀಶ ಚಂದ್ರ ಬೋಸ್

– ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸರ್ ಜಗದೀಶ ಚಂದ್ರ ಬೋಸ್‌ರವರು ಅನ್ವರ್ಥವಾಗಿಯೂ ವಸುಗಳಲ್ಲೊಬ್ಬರ ಅಂಶದಿಂದ ಜನಿಸಿದವರೆನ್ನಿಕೊಳ್ಳುವಷ್ಟು ಖ್ಯಾತಿಗೆ ತಕ್ಕವರು ಅವರು 1937 ನವೆಂಬರು 23ನೆಯ ತಾರೀಖಿನಲ್ಲಿ ಭೂಲೋಕವನ್ನು ಬಿಟ್ಟು ತೆರಳಿದರೆಂದು ತಿಳಿದಾಗ ಭೂದೇವಿಯು 'ಇನ್ನು ಮೇಲೆ ನಾನು ಹೇಗೆ ವಸುಂಧರೆಯೆನಿಸಿಕೊಂಡೇನು?' ಎಂದು ಚಿಂತಿಸಿರಬೇಕು.

ಆ ಮಹನೀಯರ ವಿಜ್ಞಾನಶಾಸ್ತ್ರಪ್ರತಿಭೆಯು ಇಡಿಯ ಭೂಲೋಕವನ್ನೇ ಬೆರಗುಗೊಳಿಸಿತ್ತು. ತಂತಿಯಿಲ್ಲವೆ ವಿದ್ಯುದ್ವಾರ್ತೆಯನ್ನು ಕಳುಹುವ ಬಗೆಯನ್ನು ಸೂಚಿಸುವ ಪ್ರದರ್ಶನವನ್ನು ಮಾಡಿದ್ದು, ಹೃದಯವು ಬಡಿದುಕೊಳ್ಳುವ ಬೇರೆ ಬೇರೆ ರೀತಿಗಳನ್ನು ಒಂದು ಸೆಕೆಂಡಿನ ಶತಾಂಶದಷ್ಟು ಸೂಕ್ಷ್ಮಕಾಲವನ್ನು ಕೂಡ ಅಳತೆಮಾಡಿ ಗುರುತುಮಾಡುವ ಹೃದಯಕಂಪನೋಲ್ಲೇಖಿಸಿ (Resonant Cardiograph) ಎಂಬ ಯಂತ್ರವಿಶೇಷವನ್ನು ಕಂಡುಹಿಡಿದನು - ಇವೇ ಅವರ ಯೋಗ್ಯತೆಯನ್ನು ವೈಜ್ಞಾನಿಕರು ಮರೆಯಲಾಗದ ಪ್ರಕಾಶಕ್ಕೆ ತಂದುಬಿಟ್ಟಿದ್ದವು. ಆದರೆ ಸಸ್ಯಶಾಸ್ತ್ರದಲ್ಲಿ ಅವರು ಮಾಡಿದ ಅದ್ಭುತಶೋಧವು ಅವರ ಕೀರ್ತಿಯನ್ನು ಅಚಂದ್ರಾರ್ಕವಾಗಿ ಶಾಶ್ವತಗೊಳಿಸಿರುತ್ತದೆ.

ಪ್ರಾಣವು ಇಡಿಯ ಜಗತ್ತಿನಲ್ಲೆಲ್ಲ ಒಂದೇ ಆಗಿರುವದೆಂದೂ ಸ್ಥಾವರ ಜಂಗಮಪ್ರಾಣಿಗಳಲ್ಲಿ ಆಯಾ ಪ್ರಾಣಿಯ ದೇಹಕ್ಕೆ ತಕ್ಕಷ್ಟುಮಾತ್ರವೇ ಅದು ಅಭಿವ್ಯಕ್ತವಾಗುವದೆಂದೂ ನಮ್ಮ ಶ್ರುತಿಸ್ಮೃತಿಪುರಾಣಗಳಲ್ಲಿ ಸಾರಿರುತ್ತದೆ. ಆದರೆ ಪರೀಕ್ಷಣನಿರೀಕ್ಷಣಗಳಿಂದ ಪ್ರತ್ಯಕ್ಷವಾಗಿ ಮನಗಂಡಲ್ಲದೆ ಯಾವನನ್ನೂ ಒಪ್ಪುವದಕ್ಕೆ ಸಿದ್ಧವಾಗಿಲ್ಲದ ಈ ವಿಜ್ಞಾನಯುಗದ ಜನರಿಗೆ ಅವರ ಬುದ್ಧಿಗೆ ಅನುಗುಣವಾಗಿಯೇ ಈ ವಿಷಯವನ್ನು ನಿರ್ಮಾಣಮಾಡಿಕೊಟ್ಟ ಯಶಸ್ಸು ಸರ್ ಜಗದೀಶ ಚಂದ್ರ ಬೋಸ್ ರವರಿಗೆ ಮೀಸಲಾಗಿದ್ದಿತು. ಈ ಸಸ್ಯಶಾಸ್ತ್ರವಿಶಾರದರು ಕಂಡುಹಿಡಿದ ಸಸ್ಯ ಸೂಕ್ಷ್ಮದರ್ಶಕಯಂತ್ರವಿಶೇಷವು (Crescograph) ವಸ್ತುವನ್ನು ಐದು ಕೋಟಿಯಷ್ಟು ಸ್ಥೂಲವಾಗಿಸಿ ತೋರಿಸಿ ಸಸ್ಯಪ್ರಪಂಚದ ವಿಸ್ಮಯನೀಯ ವಿಚಿತ್ರಗಳನ್ನು ಗೋಚರಗೊಳಿಸಿತು. ಮಿಕ್ಕ ಪ್ರಾಣಿಗಳಂತೆ ಸಸ್ಯವರ್ಗಕ್ಕೂ ಪ್ರಾಣವಿರುವದಲ್ಲದೆ ಸುಖದುಃಖಭಯ ಪ್ರೇಮಮದೋನ್ಮಾದಾದಿವೇದನೆಗಳೂ ಉಂಟೆಂದು ಅತಿಸೂಕ್ಷ್ಮ ಯಂತ್ರೋಪಕರಣಗಳ ಸಹಾಯದಿಂದ ಇವರು ಸ್ವಲ್ಪ ಹೆಚ್ಚುಕಡಿಮೆ ಸರ್ವವೈಜ್ಞಾನಿಕ ಸಮ್ಮತಿಯಿಂದ ಸಿದ್ಧಿಮಾಡಿಕೊಟ್ಟಿರುತ್ತಾರೆ.

ಜಗದೀಶಚಂದ್ರರು ಉತ್ತಮ ದೇಶಭಕ್ತರು ಮತ್ತು ಈಶಭಕ್ತರು. ಇವರು ತಮ್ಮ ವೈಜ್ಞಾನಿಕಯಂತ್ರಗಳನ್ನು ಭರತಖಂಡದಲ್ಲಿಯೇ ಮಾಡಿಸಿಕೊಂಡರು; ತಮ್ಮ ಅಮೂಲ್ಯ ಗ್ರಂಥಗಳನ್ನು 'ದೇಶಬಾಂಧವರಿಗೆ' ಅರ್ಪಣೆಮಾಡಿದರು; ತಮ್ಮ ವಿಜ್ಞಾನಮಂದಿರದ ಮೇಲೆ ದಧೀಚಿಋಷಿಯ ತ್ಯಾಗದ ಕುರುಹಾದ

ವಜ್ರಾಯುಧವನ್ನು ಕೊರೆಯಿಸಿ ಆ ಸಂಸ್ಥೆಯನ್ನು 'ಭರತಖಂಡದ ಗೌರವಕ್ಕಾಗಿಯೂ ಜಗತ್ತಿನ ಕಲ್ಯಾಣಕ್ಕಾಗಿಯೂ ಈಶ್ವರನ ಚರಣದಲ್ಲಿ' ಸಮರ್ಪಿಸಿದರು. ತಾವು ಬರೆದಿರುವ ಸಸ್ಯಶಾಸ್ತ್ರದ ಗ್ರಂಥವೊಂದರಲ್ಲಿ ''**ಏಕಂ ಸದ್ವಿಪ್ರಾ ಬಹುಧಾ ವದನ್ತಿ**'' (ಇರುವದು ಒಂದು, ಅದನ್ನೇ ಬಲ್ಲವರು ಬಗೆಬಗೆಯಾಗಿ ಕರೆಯುತ್ತಾರೆ) ಎಂಬ ವಾಕ್ಯವನ್ನು ಅವತರಣಿಕಾವಾಕ್ಯವಾಗಿ ಉಪಯೋಗಿಸಿಕೊಂಡಿರುತ್ತಾರೆ.

ಸ್ವದೇಶದಲ್ಲಿಯೂ ವಿದೇಶದಲ್ಲಿಯೂ ಪಂಡಿತರಿಂದಲೂ ಪಾಮರರಿಂದಲೂ ಸಕಲವಿದ್ಯಾನಿಲಯಗಳಿಂದಲೂ ಸರಕಾರದವರಿಂದಲೂ ಪರಿಪರಿಯಾಗಿ ಸಮ್ಮಾನಿತರಾಗಿ ಬಾಳಿ ತಮ್ಮ 80ನೆಯ ವಯಸ್ಸಿನಲ್ಲಿ ಸಮಷ್ಟಿಪ್ರಾಣೈಕ್ಯರಾದ ಇವರ ಮಾಹಾತ್ಮ್ಯೆಯನ್ನು ನಮ್ಮ ದೇಶದ ತರುಣರು ಚಿರಕಾಲ ಹೃದಯದಲ್ಲಿ ಧರಿಸಿರಲಿ! ಪ್ರಾಣೈಕ್ಯದಂತೆ ಆತ್ಮೈಕ್ಯವೂ ಶಾಸ್ತ್ರೀಯಸಿದ್ಧಾಂತವೇ ಎಂಬುದನ್ನು ತಾವೂ ಮನಗಂಡು ಲೋಕಕ್ಕೂ ಶಾಸ್ತ್ರೀಯಸಿದ್ಧಾಂತವೇ ಎಂಬುದನ್ನು ತಾವೂ ಮನಗಂಡು ಲೋಕಕ್ಕೂ ಮನಗಾಣಿಸಿ ಸುಖಶಾಂತಿಗಳ ತೌರುಮನೆಯಾಗಿರುವಂಥ ಅಧ್ಯಾತ್ಮವಿಜ್ಞಾನದ ಆಚಾರ್ಯರೂ ನಮ್ಮ ದೇಶದಲ್ಲಿ ಹೆಚ್ಚಿನ ಸಂಖ್ಯೆಯಿಂದ ಅವತರಿಸಲಿ! ಇಷ್ಟೇ ನಮ್ಮ ಹಾರೈಕೆ.

★★★★★

# ಆಬು ಸೈಯದ್ ಬಿ. ಆಬಿ ಅಲ್-ಖಯರ್

**('ಆರ್ಯನ್ ಪಾತ್' ಪತ್ರಿಕೆಯಲ್ಲಿ ಡಾಕ್ಟರ್ ಮಾರ್ಗರೆಟ್ ಸ್ಮಿತ್‌ರವರು ಬರೆದಿರುವ ಸಾರಾಂಶ)**

ಆಬು ಸೈಯದ್ ವದು ಅಲ್ಲ ಬಿ. ಆಬಿ ಅಲ್ – ಖಯರ್ ಎಂಬಾತನು ಖುರಾಸಾನ್ ಪ್ರಾಂತ್ಯದಲ್ಲಿ ಕ್ರಿ.ಶ.467ರಲ್ಲಿ ಹುಟ್ಟಿದನು. ಆತನ ತಂದೆಯು ತುಂಬ ಧರ್ಮಿಷ್ಠನು, ದೈವಭಕ್ತಿಯುಳ್ಳವನು, ಇಸ್ಲಾಂಶಾಸ್ತ್ರದಲ್ಲಿ ಪಂಡಿತನು, ಸೂಫಿಪಂಥವನ್ನು ಅನುಸರಿಸುವವನು. ಈ ಕಾರಣದಿಂದ ಚಿಕ್ಕಂಸಿನಿಂದಲೂ ಆಬು ಸೈಯದಿನಿಗೆ ಸೂಫಿಪಂಥದವರ ಸಂಬಂಧವೇ ಹೆಚ್ಚಾಗಿದ್ದಿತು.

ಆಬು ಸೈಯದನಿಗೆ ಒಳ್ಳೆಯ ಶಿಕ್ಷಣವು ದೊರೆತಿತ್ತು. ಅವನು ಆಗಿನ ಕಾಲಕ್ಕೆ ದೊರೆತ ಗಟ್ಟಿಗರಾದ ಉಪಾಧ್ಯಾಯರು ಕೈಕೆಳಗೆ ನುರಿತು ಖುರಾನ್, ಅರಬ್ಬೀಭಾಷೆ, ಇಸ್ಲಾಮಿಕಾವ್ಯ-ಇವುಗಳಲ್ಲಿ ಒಳ್ಳೆಯ ಪರಿಚಯವನ್ನು ಸಂಪಾದಿಸಿಕೊಂಡಿದ್ದನು. ಆಬು ಅಲ್ ಕಾಸಿಮ್ ಬಿಷ್ರಿಯಾನೀಸ್ ಎಂಬಾತನಲ್ಲಿ ಅವನು ಶಿಷ್ಯವೃತ್ತಿಯನ್ನು ಮಾಡಿ ಸೂಫಿಸಿದ್ಧಾಂತರಹಸ್ಯಗಳನ್ನು ತಿಳಿದುಕೊಂಡನು. ಆತನು ಇವನಿಗೆ ಎಡೆಬಿಡದೆ ಪರಮಾತ್ಮನ ಧ್ಯಾನಮಾಡುವ ಬಗೆಯನ್ನು ಹೇಳಿಕೊಟ್ಟು ಏಕಾಂತವಾಗಿ ರುವಾಗಲೆಲ್ಲ ಈ ಅಭಿಪ್ರಾಯದ ಪದ್ಯವೊಂದನ್ನು ಹೇಳಿಕೊಳ್ಳುತ್ತಿರುವಂತೆ ಕಟ್ಟುಮಾಡಿದನು:

**ನಿನ್ನುಳಿದು ನನಗಿನಿತು ಶಾಂತಿಯಿಲ್ಲ,**
**ನಿನ್ನನುಗ್ರಹವೆನಿತೊ ಲೆಕ್ಕವಿಲ್ಲ;**
**ಎನ್ನ ಮೈಮೇಲುಳ್ಳ ಲೋಮರಾಜಿಯದೆಲ್ಲ**
**ವೆನ್ನ ನಾಲಗೆಯಾದೊಡೇನು ನಾನು,**
**ನಿನ್ನವು ಪಕಾರಗಳ ಸಾಸಿರದಲಂಶವನು**
**ನನ್ನಿಯಿಂದಲಿ ಪೊಗಳಬಲ್ಲೆನೇನು?**

ಸೈಯದನು ಮರ್ವ್ ಎಂಬಲ್ಲಿಗೆ ಹೋಗಿ ಹತ್ತು ವರ್ಷ ಶಾಸ್ತ್ರಾಭ್ಯಾಸ ಮಾಡಿದನು. ಅಲ್ಲಿಂದ ಮುಂದಕ್ಕೆ ಸಾರಾಕ್ಸ್ ಎಂಬಲ್ಲಿಗೆ ಹೋಗಿ ಕುರಾನಿನ ಮರ್ಮವನ್ನೂ ಸಂಪ್ರದಾಯಗ್ರಂಥಗಳನ್ನೂ ಅಭ್ಯಾಸಮಾಡಿದನು. ಇಲ್ಲ ಒಂದು ಸೂಫಿಮಠಕ್ಕೆ ಹೋಗಿ ಆಬು ಅಲ್ - ಫಡಲ್ ಹಸನ್ ಎಂಬಾತನ ಶಿಷ್ಯನಾದನು. ಭಗವಜ್ಞಾ ್ಞನವು ತಾನು ಇದುವರೆಗೆ ಎಷ್ಟೋ ವರ್ಷಗಳಿಂದಲೂ ಮಾಡುತ್ತಿದ್ದ ತರ್ಕಪ್ರಧಾನವಾದ ಶಾಸ್ತ್ರಾಭ್ಯಾಸದಿಂದ ಬರುವದಲ್ಲವೆಂದೂ ಆ ಪರಮಾತ್ಮನನ್ನು ಹೃದಯದಲ್ಲಿ ಪ್ರಸನ್ನನಾಗುವಂತೆ ಸಾಕ್ಷಾತ್ಕಾರವನ್ನು ಮಾಡಿಕ್ಕೊಳ್ಳುವದೇ ಆ ಜ್ಞಾನಕ್ಕೆ ಮುಖ್ಯಸಾಧನವೆಂದೂ ಇಲ್ಲಿ ಅವನು ಕಂಡುಕೊಂಡನು. ಗುರುವಿನ ಅಪ್ಪಣೆಯಂತೆ ತನ್ನ ಊರಿಗೆ ಬಂದು ಮುಂದೆ ಏಳು ವರ್ಷಗಳವರೆಗೂ ಏಕಾಂತ ವಾಸಮಾಡುತ್ತಾ ಧ್ಯಾನಯೋಗದಲ್ಲಿ ಇದ್ದುಬಿಟ್ಟನು. ಆಮೇಲೆ ಆಬು ಅಲ್ ಫಡಲನು ಅವನನ್ನು ಕರೆಸಿ ಸೂಫಿಜ್ಞಾನವು ಪೂರ್ತಿಯಾದದ್ದರ ಗುರುತಾಗಿ ಆತನಿಗೆ ಕಂಥಾ(ಖಿರ್ಕಾ)ಧಾರಣೆಯನ್ನು ಮಾಡಿಸಿ, 'ಇಇನ್ನು ಮೇಲೆ ಜನ್ಮಭೂಮಿಗೆ ಹೋಗಿ ಜನರಿಗೆ ತತ್ತ್ವೋಪದೇಶವನ್ನು ಮಾಡು'' ಎಂದು ಹೇಳಿದನು. ಆಬು

ಸೈಯದನು ಇನ್ನೂ ಕೆಲವು ವರ್ಷಗಳವರೆಗೆ ತಮ್ಮ ಸೀಮೆಯ ಬೆಟ್ಟಗಳಲ್ಲಿಯೂ ಮರುಭೂಮಿಗಳಲ್ಲಿಯೂ ತಪಸ್ಸುಮಾಡುತ್ತಿದ್ದು ಕೊನೆಗೆ ಪರಿಪೂರ್ಣಸಿದ್ಧಿಯನ್ನು ಹೊಂದಿದನು. ಹೀಗೆ ಏಕಾಂತವಾಸದಲ್ಲಿರುವಾಗ ಅವನಿಗೆ ಅಹಂಕಾರವನ್ನು ಸಂಪೂರ್ಣವಾಗಿ ಬಿಟ್ಟ ಹೊರತು ಈಶ್ವರನಲ್ಲಿ ನಿಷ್ಠೆಯು ದೊರಕದೆಂಬ ರಹಸ್ಯವು ಮನಗಂಡಿತು. ಅವನು ಈ ವಿಷಯದಲ್ಲಿ ಹೀಗೆಂದು ಹೇಳಿರುತ್ತಾನೆ:-

ನೀನೂ ಒಬ್ಬನಿದ್ದು ಆತನೂ ಒಬ್ಬ ನಿದ್ದರೆ, ಇಬ್ಬರು ಇದ್ದಂತಾಯಿತು; ಅದೇ ಅನೇಕ ದೇವತಾಪೂಜೆಯು. ಆದ್ದರಿಂದ ನಾನೆಂಬ ಅಹಂಕಾರವನ್ನು ಪೂರ್ಣವಾಗಿಯೂ ಬದಿಗಿರಿಸಿಬಿಡಬೇಕು. ನಾನು ಒಂದು ಸಲ ಒಂದು ಗುಹೆಯಲ್ಲಿದ್ದಾಗ ಸಮಾಧಿಸುಖವನ್ನನುಭವಿಸಬೇಕೆಂಬ ಇಚ್ಛೆಯುಂಟಾಯಿತು. ನನ್ನ ಮೇಲೆ ಒಂದು ಬೆಳಕು ಬೀರಿತು, ನನ್ನ ಇರವಿನ ಕತ್ತಲನ್ನೆಲ್ಲ ತೊಲಗಿಸಿಬಿಟ್ಟಿತು. ಮಹಾಮಹಿಮನಾದ ಭಗವಂತನು 'ನಾನು ಇದೂ ಅಲ್ಲ, ಅದೂ ಅಲ್ಲ' ಎಂಬದನ್ನು ನನಗೆ ಬಿಚ್ಚಿ ತಿಳಿಸಿದನು. ಅದೇ ಆತನ ಅನುಗ್ರಹವು ಅದೇ ಆತನ ಪ್ರಸಾದವು ನಾನು ಆಗ ಇಂತೆಂದೆನು:-

**ಎನ್ನಯ ಕಂಗಳ ತೆರೆದು ನೋಡಲು ರೆ ನಿನ್ನಯ ಚೆಲುವೇ ಕಾಣಿಪುದು,**
**ಎನ್ನ ರಹಸ್ಯವ ನಿನ್ನೊಡನರುಹಲು ನನ್ನ ದೇಹವೇ ಆತ್ಮವಿದು,**
**ಇನ್ನೊಬ್ಬರ ಸಂಭಾಷಣೆಯೆ ನಗದು ಗನ್ನ ಗತಕತನವೆನಿಸುವದು,**
**ನಿನ್ನೊಡನಾಡುವ ಸಲ್ಲಾಪದ ಸವಿ ನನ್ನಿಯು ಕೊನೆಯೇ ಕಾಣದದು॥**

ಆಗ ಪರಮೇಶ್ವರನು, 'ಅನಾನು ನಿನಗೆ ಕೊಡುವದು ಸುಖವಾಗಲಿ ದುಃಖವಾಗಲಿ, ಇದೆಲ್ಲ ನಿನ್ನ ಪರೀಕ್ಷೆಗಾಗಿಯೆ; ಒಳ್ಳೆಯದು ಕೆಟ್ಟದ್ದು ಎಂಬ ಭೇದಭಾವನೆಯ ಕೆಳಗಿನ ಮಟ್ಟಕ್ಕೆ ಇಳಿಯದೆ ಇರು'' ಎಂದು ಸಂತಯಿಸಿದನು.

ಆಬು ಸೈಯದನು ಹೀಗೆ ಸಾಧನಮಾರ್ಗವನ್ನು ಪೂರೈಸಿಕೊಂಡು, ಅಹಂಕಾರವನ್ನೆಲ್ಲ ಪೂರ್ಣವಾಗಿ ಮಟ್ಟುಮಾಡಿಕೊಂಡು ತನ್ನ ಸಂಕಲ್ಪವೂ ಈಶ್ವರನ ನಿತ್ಯಸಂಕಲ್ಪವೂ ಒಂದೇ ಎಂಬ ಹೊಂದುಗಡಿಯ ಸಿದ್ಧಿಯನ್ನು ಹೊಂದಿದಾಗಿನ ಸ್ಥಿತಿಯನ್ನು ಕುರಿತು ಹೀಗೆಂದು ಒಂದು ಪದ್ಯದಲ್ಲಿ ಹಾಡಿರುತ್ತಾನೆ:

**ನಿನ್ನ ಭಕುತಿಯ ಹಾದಿಯಲ್ಲದೇ ಬೇರೆಡೆಯೊಳೆನ್ನ ಹೃದಯವಿದೆಂದು ಸಂಚರಿಸುವದಿಲ್ಲ,**
**ನಿನ್ನ ಧ್ಯಾನದೊಳಿಂತು ದುಡಿವುದನು ಬಿಟ್ಟೇನುಮಿನ್ನೊಂದ ತಾ ಬಯಸಿ ಬೇಡುವದಿಲ್ಲ!**
**ನಿನ್ನ ಪ್ರೇಮದಿನೆನ್ನ ಹೃದಯವೇ ಬೇರಾದುದಿನ್ನು ಬೆದ್ದಲುಬಿದ್ದ ಬಯಲು ನೆಲನಾಯ್ತು,**
**ನಿನ್ನ ಪ್ರೇಮವದೊಂದನುಳಿದು ಮತ್ತೇತರೊಳು ಮುನ್ನಿನಂದದೆ ಪ್ರೇಮವಂಕುರಿಸದಾಯ್ತು.**

ಕ್ರಿ.ಶ.1009ರಲ್ಲಿ ಸೈಯದನು ಈ ಸಿದ್ಧಿಯನ್ನು ಪಡೆದು ತನ್ನ ಊರನ್ನು ಬಿಟ್ಟು ತೂಸ್, ನಿಷಾಪುರ್, ಖಾರಕಾನ್- ಮುಂತಾದ ಪ್ರಾಂತಗಳಲ್ಲಿ ಜನರಿಗೆ ಉಪದೇಶಮಾಡುತ್ತಾ ಸಾವಿರಾರು ಜನರನ್ನು ತನ್ನ ಮಾರ್ಗಕ್ಕೆ ತಿರುಗಿಸಿದನು. ನಿಷಾಪುರದಲ್ಲಿದ್ದ ಸೂಫಿಗಳು ಇವನನ್ನು ಪರಮಾದರದಿಂದ ಕಂಡು ಇವನನ್ನು ಆಬು ಆಲಿಟಾರಸೋಸಿ ಎಂಬಾತನ ಮಠದಲ್ಲಿ ಇಳಿಸಿಕೊಂಡರು. ಆ ಸ್ಥಳದಲ್ಲಿರುವ ವರೆಗೂ ಅಲ್ಲಿಯೇ ಅಬುಸೈಯದನು ಶಿಷ್ಯಸಮೇತನಾಗಿ ಇರುತ್ತಿದ್ದನು.

ಆಬು ಸೈಯದನು ತನ್ನ ಜನ್ಮಸ್ಥಳವಾದ ಮೇಹಾನದಲ್ಲಿಯೇ ಏಕಾಂತವಾಸಮಾಡುತ್ತಾ ವಾರ್ಧ್ಯಕ್ಯವನ್ನು ಕಳೆದನು. ಆತನು ತನ್ನ ಎಂಬತ್ತೆರಡನೆಯ ವರ್ಷದಲ್ಲಿ ದೇಹವನ್ನು ಬಿಟ್ಟನು. ಆತನ ಮನೆಯ ಬಳಿಯಲ್ಲಿದ್ದ ಮಸೀದಿಯಲ್ಲಿ ಅವನ ಸಮಾಧಿಯಾಯಿತು. ಆ ಗೋರಿಯ ಮೇಲಿನ ತಲೆಗಲ್ಲಿನಲ್ಲಿ ಆತನೇ ಬರೆದಿದ್ದ. ಈ ಅರ್ಥದ ಅರಬ್ಬೀಭಾಷೆಯ ಚರಮಶ್ಲೋಕವನ್ನು ಕೆತ್ತಿದ್ದರು:-

ನಾನು ಸತ್ತಮೇಲೆ ದಯವಿಟ್ಟು ನನ್ನ ಗೋರಿಯ ಕಲ್ಲಿನ ಮೇಲೆ 'ಈತನು ಪ್ರೇಮದ ದಾಸನಾಗಿದ್ದನು' ಎಂಬೀ ಮಾತುಗಳನ್ನು ಮರೆಯದೆ ಬರೆಯಿಸಬೇಕೆಂದು ಬೇಡಿಕೊಳ್ಳುತ್ತೇನೆ. ಪ್ರೇಮಸೂತ್ರವನ್ನು ಚೆನ್ನಾಗಿ ಬಲ್ಲವನು ಯಾರಾದರೂ ಈ ಅಪರಿಚಿತನಾದ ನನ್ನ ಸಮಾಧಿಯ ಮುಂದೆ ಹಾದು ಹೋಗುವಾಗ ನನ್ನನ್ನು ಸಮ್ಮಾನದಿಂದ ಕಂಡರೂ ಕಾಣಬಹುದು.

★★★★★

# ಎಪಿಕ್ಟೀಟಸ್

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸೀನೋ ಎಂಬಾತನು ಕ್ರಿ.ಪೂ. 308ರಲ್ಲಿ ಸ್ಥಾಪಿಸಿದ ಉದಾಸೀನಪಂಥಕ್ಕೆ ಸ್ಟೋಯಿಕ್‌ಪಂಥ(Stoicism)ವೆಂದು ಹೆಸರು. ಗ್ರೀಸ್‌ದೇಶದ ರಾಜಧಾನಿಯಾದ ಆಥೆನ್ಸ್‌ನಗರದಲ್ಲಿದ್ದ ಚಿತ್ರಮಂಟಪ (Painted Stoa) ದಲ್ಲಿಯೇ ಈ ಪಂಥದ ಆಚಾರ್ಯರು ತಮ್ಮ ಉಪದೇಶವನ್ನು ವಿಶೇಷವಾಗಿ ಮಾಡುತ್ತಿದ್ದದ್ದರಿಂದ ಇವರಿಗೆ 'ಸ್ಟೋಯಿಕ್' ಎಂದರೆ 'ಮಂಟಪದವರು' ಎಂದೇ ಹೆಸರಾಯಿತು. ಎಪಿಕ್ಟೀಟಸನು ಈ ಪಂಥಕ್ಕೆ ಸೇರಿದವನು.

ಈ ತತ್ತ್ವಜ್ಞಾನಿಯು ಯಾವಾಗ ಎಲ್ಲಿ ಹುಟ್ಟಿದನೆಂಬುದು ಸರಿಯಾಗಿ ಗೊತ್ತಿರುವದಿಲ್ಲ. ಸುಮಾರು ಕ್ರಿ.ಶ.50ರಲ್ಲಿ ಹುಟ್ಟಿ ಸುಮಾರು ಕ್ರಿ.ಶ.125ರಲ್ಲಿ ದೇಹವನ್ನು ಬಿಟ್ಟನೆಂದು ಹೇಳುವರು. ಏಷಿಯಾಮೈನರಿನಲ್ಲಿ ಫ್ರಿಜಿಯಾ ಎಂಬ ಜಿಲ್ಲೆಯಲ್ಲಿದ್ದ ಹೈರಾವಲಿಸ್ (Hirapolis) ಎಂಬುದೇ ಈತನ ಊರೆಂದು ಹೇಳುತ್ತಾರೆ. ಅವನು ರೋಮ್‌ನಗದಲ್ಲಿ ನೀರೋ ಚಕ್ರವರ್ತಿಯ ಮುಕ್ತದಾಸರಲ್ಲೊಬ್ಬನಾಗಿದ್ದ[1] ಎಪಾಫ್ರೊಡೈಟಿಸ್ ಎಂಬಾತನ ದಾಸನಾಗಿದ್ದನು. ಎಪಿಕ್ಟೀಟಸನ ಯಜಮಾನನು ತಾನೇನೋ ದುರಾಚಾರಿಯಾಗಿದ್ದರೂ ಆಗಿನ ಕಾಲದಲ್ಲಿ ಸ್ಟೋಯಿಕ್ ಪಂಥದಲ್ಲಿ ನಿಸ್ಸೀಮನೆನಿಸಿಕೊಂಡಿದ್ದ ಮುಸೋನಿಯಸ್ ರೂಫಸ್ ಎಂಬ ಆಚಾರ್ಯನ ನಿರೂಪಣಗಳನ್ನು ಕೇಳುವದಕ್ಕೆ ಎಪಿಕ್ಟೀಟನಿಗೆ ಅವಕಾಶವನ್ನು ಕೊದ್ದನು. ಈ ಗುರುವಿನ ಬಳಿಯಲ್ಲಿ ಎಪಿಕ್ಟೀಟಸನು ಚೆನ್ನಾಗಿ ವಿದ್ಯಾವಂತನಾದನು. ನೀರೋಚಕ್ರವರ್ತಿಗೆ ಸಹಾಯಕನಾಗಿದ್ದನೆಂಬ ಕಾರಣದಿಂದ ಎಪಾಫ್ರೊಡೈಟಸನಿಗೆ ಮರಣದಂಡನೆಯಾದ ಮೇಲೆ ಎಪಿಕ್ಟೀಟಸನು ಹೇಗೋ ಸ್ವಾತಂತ್ರ್ಯವನ್ನು ಹೊಂದಿ ಮುಂದೆ ತನ್ನ ಜೀವಮಾನವನ್ನೆಲ್ಲ ತತ್ತ್ವವಿಚಾರದಲ್ಲಿಯೇ ಕಳೆದನು.

ನೀರೋವಿನ ಬಳಿಕ ರಾಜ್ಯವನ್ನಾಕ್ರಮಿಸಿದ ಡಾಮಿಷಿಯನ್ ಎಂಬ ರಾಜನು ತತ್ತ್ವಶಾಸ್ತ್ರಜ್ಞರೆಲ್ಲರನ್ನೂ ರೋಮನಗರದಿಂದ ಹೊರಡಿಸಿಬಿಟ್ಟನು ಆಗ ಎಪಿಕ್ಟಿಟೀಸನು ಕೆಲವು ಕಾಲ ನಿಕಾಪಲಿಸ್ ಎಂಬಲ್ಲಿ ಅಜ್ಞಾತವಾಸವನ್ನು ಮಾಡಬೇಕಾಗಿ ಬಂದಿತು. ಆ ಕ್ರೂರಿಯಾದ ಭೂಪತಿಯು ಕಾಲವಾದ ಮೇಲೆ ಈತನು ಮತ್ತೆ ರೋಮನಗರಕ್ಕೆ ಬಂದು ಏಡ್ರಿಯಾನ್ ಮತ್ತು ಮಾರ್ಕಸ್ ಅರೀಲಿಯನ್ ಚಕ್ರವರ್ತಿಗಳಿಂದ ತುಂಬ ಗೌರವವನ್ನು ಹೊಂದಿ ಬಾಳಿದನು. ಎಪಿಕ್ಟೀಟಸನು ಕೊನೆಯವರೆಗೂ ಬ್ರಹ್ಮಚಾರಿಯೇ ಆಗಿದ್ದನು. ದರಿದ್ರನಾದ ತನ್ನ ಸ್ನೇಹಿತನೊಬ್ಬನ ಮಗು, ಅದನ್ನು ಸಾಕುವದಕ್ಕೆಂದು ಇಟ್ಟುಕೊಂಡಿದ್ದ ಒಬ್ಬ ಹೆಣ್ಣುಮಗಳು- ಈ ಇಬ್ಬರೇ ಅವನ ಕುಟುಂಬದಲ್ಲಿದ್ದವರು. ಅವನು ಒಂದು ಸಣ್ಣ ಗುಡಿಸಲಿನಲ್ಲಿರುತ್ತಿದ್ದನು; ಆತನ ಸೌಜನ್ಯವು ಲೋಕ ವಿಖ್ಯಾತವಾಗಿತ್ತು. ಆತನು ರಾತ್ರೆಯ ಹೊತ್ತು ಉಪಯೋಗಿಸುತ್ತಿದ್ದ ಮಣ್ಣಿನ ಹಣತೆಯನ್ನು ಆತನ ಮರಣಾನಂತರ ಹರಾಜುಹಾಕಲು ಆತನಲ್ಲಿದ್ದ ಪೂಜ್ಯಬುದ್ಧಿಯಿಂದ ಯಾರೋ

1. ಮೊದಲು ದಾಸನಾಗಿದ್ದು ಆಮೇಲೆ ಬಿಡುಗಡೆಹೊಂದಿದವನು.

3000 ದ್ರಾಕ್ಮಗಳಿಗೆ ಎಂದರೆ ಒಂದು ಸಾವಿರ ರೂಪಾಯಿಗಿಂತ ಹೆಚ್ಚಾದ ಬೆಲೆಗೆ – ತೆಗೆದುಕೊಂಡರಂತೆ!

ಎಪಿಕ್ಟೀಟಸನು ಯಾವ ಗ್ರಂಥವನ್ನೂ ಬರೆದಿಲ್ಲ. ಅವನ ಪ್ರಿಯಶಿಷ್ಯನಾದ ಆರಿಯಾನ್[1] ಎಂಬ ಐತಿಹಾಸಿಕನು ಆತನ ಉಪದೇಶಗಳನ್ನು ಒಟ್ಟುಗೂಡಿಸಿ ಎಂಟು ಅಧ್ಯಾಯಗಳ ಒಂದು ಗ್ರಂಥದ ರೂಪದಲ್ಲಿ ಬರೆದನು; ಅವುಗಳಲ್ಲಿ ನಾಲ್ಕು ಅಧ್ಯಾಯಗಳು ಮಾತ್ರ ಸಿಕ್ಕಿವೆ. ಈ ಉಪದೇಶಗಳಲ್ಲಿ ಅತ್ಯುಪಯುಕ್ತವಾಗಿಯೂ ಅವಶ್ಯಕವಾಗಿಯೂ ಜನರ ಮನಸ್ಸಿಗೆ ಉತ್ತಮಪರಿಣಾಮಕಾರಕವಾಗಿಯೂ ತನಗೆ ತೋರಿಬಂದವುಗಳನ್ನು ಆರಿಯಾನನು 'ಸೂಕ್ತಿಸಾರಸಂಗ್ರಹ' (Encheiridion or Manual)ಎಂಬ ಹೆಸರಿನಿಂದ ಒಕ್ಕಡೆಗೆ ಕೂಡಿಸಿಟ್ಟಿರುತ್ತಾನೆ. ಈತನು ಎಪಿಕ್ಟೀಟಸನ ಜೀವನಚರಿತ್ರೆಯೊಂದನ್ನು ಬರೆದಿದ್ದನಂತೆ; ಆದರೆ ಆ ಗ್ರಂಥವು ಈಗ ಸಿಕ್ಕುವದಿಲ್ಲ.

ಎಪಿಕ್ಟೀಟಸನ ಸಿದ್ಧಾಂತವನ್ನು ಸ್ವಲ್ಪದರಲ್ಲಿ ಹೇಳಬೇಕಾದರೆ ''ನೀತಿಯೇ ಪುರುಷಾರ್ಥ'ವೆಂಬುದು ಆತನ ಬೋಧೆಯೆಂದು ಹೇಳಬಹುದು. ಈಶ್ವರನು ಜಗತ್ತಿನ ಭಾಗಗಳನ್ನು ಒಂದಕ್ಕೊಂದು ಹೊಂದಿಕೆಯಾಗಿರುವಂತೆಯೂ ಸುಂದರವಾಗಿರುವಂತೆಯೂ ಕೆಲಸಕ್ಕೆ ತಕ್ಕಂತಿರುವಂತೆಯೂ ಮಾಡಿರುತ್ತಾನೆ. ಆತನು ಸರ್ವಶಕ್ತನು. ಮನುಷ್ಯರು ಈಶ್ವರನ ಮಕ್ಕಳಾದ್ದರಿಂದ ಆತನು ಸುಳ್ಳುನಿಜ ಗಳನ್ನು ವಿಂಗಡಿಸಿ ತಿಳಿದುಕೊಳ್ಳುವ ಶಕ್ತಿಯನ್ನು ಅವರಲ್ಲಿ ಇಟ್ಟಿರುತ್ತಾನೆ. ಉಳಿದ ಪ್ರಾಣಿಗಳೂ ದೇವರಿಂದಲೇ ಬಂದಿವೆಯಾದರೂ ಅದಕ್ಕೆ ಬುದ್ಧಿಯಿಲ್ಲದ್ದರಿಂದ ಅವುಗಳ ಸ್ವಭಾವವು ಎತ್ತ ಒಯ್ದುದ್ರೆ ಅತ್ತ ಹರಿದಾಡುತ್ತಿರುವದು. ಆದ್ದರಿಂದ ಅವು ಆಯಾ ಘಟನೆಗೆ ಒಳಗಾಗಿ ನಡೆದುಕೊಳ್ಳುವವು. ಮನುಷ್ಯನು ಮಾತ್ರ ಹಾಗಲ್ಲ; ದೇವರ ಮತ್ತು ಅವನ ಸೃಷ್ಟಿಯ ಸ್ವರೂಪವನ್ನು ತಿಳಿದುಕೊಂಡು ಇಂದ್ರಿಯಗಳ ಮೂಲಕ ಅವನಿಗೆ ತೋರಿಬರುವ ನೋಟಗಳನ್ನು ಸರಿಯಾಗಿ ಉಪಯೋಗಿ ಸಿಕೊಳ್ಳುವ ಸ್ವಾತಂತ್ರ್ಯವು ಇವನಿಗಿದೆ. ಆದ್ದರಿಂದ ತರ್ಕಮಾಡುವ ಶಕ್ತಿಯನ್ನೂ ಪ್ರವೃತ್ತಿವಿಜ್ಞಾನವನ್ನೂ ವಶಪಡಿಸಿಕೊಂಡು ತನ್ನ ನಡತೆಯನ್ನು ತಿದ್ದಿಕೊಳ್ಳುವದೇ ಮಾನವನ ಕರ್ತವ್ಯವು. ತಾನು ಶರೀರವಲ್ಲವೆಂದೂ ಶರೀರವನ್ನುಪಯೋಗಿ ಸುವಾತನೆಂದೂ ತಿಳಿದು ಈಶ್ವರನು ತನಗೆ ದಯಪಾಲಿಸಿರುವಷ್ಟು ಭೋಗಗಳನ್ನು

1. ಅಲೆಗ್ಸಾಂಡರ್ ಮಹಾಶಯನ ದಂಡಯಾತ್ರೆಯನ್ನೂ ಈತನೇ ವರ್ಣಿಸಿರುವವನು.

ತೃಪ್ತಿಯಿಂದ ಅನುಭವಿಸುತ್ತಾ ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳಬೇಕು. ಈಶ್ವರನ ಸಂಕಲ್ಪಕ್ಕೆ ತನ್ನ ಸಂಕಲ್ಪವನ್ನು ಹೊಂದಿಸಿ ಪ್ರಕೃತಿಯ ನಿಯಮಕ್ಕೆ ತಕ್ಕಂತೆ ನಡೆದುಕೊಳ್ಳುವದೇ, ಎಂದರೆ ಧರ್ಮವೇ ಪರಮಪುರುಷಾರ್ಥವು- ಎಂಬುದೀಗ ಎಪಿಕ್ಟೀಟಸನ ಮುಖ್ಯವಾದ ಉಪದೇಶವಾಗಿದ್ದಿತು.

★★★★★

# ಪ್ಲೋಟೈನಸ್

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಪಾಶ್ಚಾತ್ತ್ಯರ ಯೋಗವಿದ್ಯೆಗೆಲ್ಲ ಪ್ಲೋಟೈನಸ್ ಎಂಬಾತನೇ ಮೂಲಪ್ರವರ್ತಕನೆಂದು ಭಾವಿಸಬಹುದಾಗಿದೆ. ಕ್ರಿಸ್ತಶಕ ಮೂರನೆಯ ಶತಮಾನದಲ್ಲಿ ಯಹೂದಿ, ಕ್ರಿಸ್ತಿ, ಗ್ರೀಕ್- ಈ ಮೂವರ ತತ್ತ್ವವಿಚಾರಗಳು ಪೂರ್ವದೇಶಿಗಳ ಧ್ಯಾನಪದ್ಧತಿಯೊಡನೆ ಬೆರತಿದ್ದರಿಂದ ನವೀನ ಪ್ಲೇಟೋಸಿದ್ಧಾಂತ (Neo-Platonism)ವು ಹೊರಕ್ಕೆ ಬಂದಿತು. ಈ ಪಂಥವನ್ನು ಅಲೆಗ್ಸಾಂಡ್ರಿಯದ ಅಮ್ಮೋನಿಯಸ್ ಸಾಕಸ್ ಎಂಬಾತನು ಮೊದಲು ತೋರಿಸಿಕೊಟ್ಟನಾದರೂ ಅವನ ಶಿಷ್ಯನಾದ ಪ್ಲೋಟೈನಸನಿಂದಲೇ ಅದು ರೂಪುಗೊಂಡು ಹೆಚ್ಚಾಗಿ ಮುಂದುವರಿಯಿತು.

ಪ್ಲೋಟೈನಸನು ತನ್ನ ನಲವತ್ತನೆಯ ವಯಸ್ಸಿನಲ್ಲಿ ಪರ್ಷಿಯದೇಶಕ್ಕೆ ದಂಡಯಾತ್ರೆಗೆಂದು ಹೊರಟಿದ್ದ ರೋಮಕ ಸೈನ್ಯದೊಡನೆ ಆ ದೇಶದ ಕಡೆಗೆ ಹೊರಟನು. ಸಿಪಾಯಿಗಳಿಗೆ ಅಲ್ಲಿ ತಾವು ಹೊಡೆಯಬಹುದಾದ ಕೊಳ್ಳೆಯ ಮೇಲೆ ಕಣ್ಣಿದ್ದರೆ ಇವನಿಗೆ ಜ್ಞಾನಸಂಪಾದನೆಗೆ ಆ ದೇಶದಲ್ಲಿ ಮಾರ್ಗವೇನಾದರೂ ದೊರೆತೀತೇನೋ ಎಂಬ ಕುತೂಹಲ. ಆದರೆ ಇವನು ಪರ್ಷಿಯದವರೆಗೂ ಅವರೊಡನೆ ಹೋಗಲಿಲ್ಲ ಮೆಸೊಪೊಟೊಮಿಯವನ್ನು ತಲುಪಿದ ಮೇಲೆ, ಅದೇಕೋ, ಹಿಂತಿರುಗಿಬಿಟ್ಟನು. ಅಲ್ಲಿಂದ ರೋಮ್‌ನಗರಕ್ಕೆ ಬಂದು ತನ್ನ ಮುಂದಿನ ಜೀವಿತವನ್ನೆಲ್ಲ ಅಲ್ಲಿಯೇ ಕಳೆದನು.

ಪ್ಲೋಟೈನಸನು ಆ ನಗರದಲ್ಲಿ ಒಂದು ತತ್ತ್ವವಿದ್ಯಾಶಾಲೆಯನ್ನು ಇಟ್ಟುಕೊಂಡನು; ಅದಕ್ಕೆ ಚಕ್ರವರ್ತಿಯ ಆಶ್ರಯವು ಕೂಡ ದೊರೆತ್ತಿತ್ತು. ಅಲ್ಲಿ ಯೋಗಾಭ್ಯಾಸ ತತ್ತ್ವೋಪದೇಶ - ಇವೆರಡೇ ಅವನ ದಿನಚರ್ಯೆಯಾಗಿದ್ದವು. ಅವನ ಯೋಗ್ಯತೆಯನ್ನೂ ನಿಸ್ವಾರ್ಥಬುದ್ಧಿಯನ್ನೂ ಕಂಡು ಆಗಾಗ್ಗೆ ಜನರು ಅವನನ್ನು ತಮ್ಮ ವ್ಯವಹಾರಗಳಲ್ಲಿ ಪಂಚಾಯಿತಿಗೆ ಕರೆಯುತ್ತಿದ್ದರು. ಎಷ್ಟೋ ಅನಾಥಕುಟುಂಬಗಳ ಮೇಲುವಿಚಾರವನ್ನೂ ಇವನಿಗೆ ಒಪ್ಪಿಸುತ್ತಿದ್ದರು. ಕೆಲವು ಕಾಲದ ಮೇಲೆ ಇವನು ತನ್ನ ಸಿದ್ಧಾಂತವನ್ನು ವಿವರಿಸುವ ಷಣ್ಣವಕ (Enneads) ಎಂಬ ಒಂದು ಗ್ರಂಥವನ್ನು ಬರೆದನು. ಪಾರ್ಫಿದ ಎಂಬ ಈತನ ಶಿಷ್ಯನು ಇದನ್ನು ಆರು ಆರು ಖಂಡಗಳಾಗಿ ವಿಂಗಡಿಸಿರುತ್ತಾನೆ; ಪ್ರತಿಯೊಂದು ಖಂಡದಲ್ಲಿಯೂ ಒಂಬತ್ತೊಂಬತ್ತು ಅಧ್ಯಾಯಗಳಿರುವದರಿಂದ ಇವನ್ನು ನವಕಗಳೆಂದೇ ಕರೆಯುತ್ತಾರೆ. ಗ್ರಂಥವು ಬಹು ಕ್ಲಿಷ್ಟವಾದ ಶೈಲಿಯಲ್ಲಿ ಬರೆದಿರುವದರಿಂದ ಬೇಗನೆ ಅರ್ಥವಾಗುವಂತಿಲ್ಲ; ಆದರೆ ಮನಮುಟ್ಟಿ ಓದುವವರ ಮನಸ್ಸಿನ ಮೇಲೆ ಹೆಚ್ಚಿನ ಪರಿಣಾಮವನ್ನು ಮಾಡುವ ಮೇಲ್ತರದ ತತ್ತ್ವವಿಚಾರಗ್ರಂಥಗಳ ಗುಂಪಿಗೇ ಸೇರತಕ್ಕದ್ದಾಗಿರುವದು.

ಈತನ ಉಪದೇಶದಲ್ಲಿ ಸಿದ್ಧಾಂತವೆಂದೂ ಸಾಧನವೆಂದೂ ಎರಡು ಭಾಗಗಳಿರುವವು, ಸಿದ್ಧಾಂತವನ್ನು ತಿಳಿದುಕೊಳ್ಳುವದಕ್ಕೆ ಮೊದಲು ಪ್ಲೇಟೋಸಿದ್ಧಾಂತದ ಒಂದಂಶವನ್ನು ತಿಳಿದಿರುವದು ಸಹಾಯಕವಾಗುವದು. ಪ್ಲೇಟೋವಿನ ವಿಚಾರ ಸರಣಿ ಹೇಗಿತ್ತೆಂದರೆ- ಇಂದ್ರಿಯಗೋಚರವಾಗಿ ರುವ ಈ ವಿಷಯಪ್ರಪಂಚವು ವಿಕಾರಗಳುಳ್ಳದ್ದು; ಇದ್ದಂತಿರುವದಿಲ್ಲ, ಏನಾದರೊಂದು ಮಾರ್ಪಾಡನ್ನು ಹೊಂದುತ್ತಲೇ ಇರುವದು. ಆದ್ದರಿಂದ ಇದನ್ನು **'ಆಗುವದು'** ಎಂಬ ಮಾತಿನಿಂದ ತಿಳಿಸಬಹುದಾಗಿದೆ. ಇದಕ್ಕೆ ಆಧಾರವಾಗಿ ರುವ ಸಾಮಾನ್ಯಭಾವನೆಗಳ (Ideas) ಪ್ರಪಂಚವು ನಿರ್ವಿಕಾರವಾದದ್ದು, ಇದ್ದಂತೆಯೇ ಇರುವದು. ಆದ್ದರಿಂದ ಅದನ್ನು **'ಇರುವದು'** ಎಂಬ ಮಾತಿನಿಂದ ತಿಳಿಸಬಹುದಾಗಿದೆ. ಇವೆರಡರಲ್ಲಿ ಮೊದಲನೆಯದಾದ ವಿಷಯಪ್ರಪಂಚವು ಎರಡನೆಯದಾದ ಭಾವ ಪ್ರಪಂಚದ ಅಪೂರ್ಣವಾದ ಪ್ರತಿಬಿಂಬವಾಗಿರುವದು; ಪ್ರಕೃತಿಯ ಮೇಲೆ ಭಾವಪ್ರಪಂಚದ ನೆರಳು ಬಿದ್ದು ವಿಷಯ ಪ್ರಪಂಚವಾಗಿ ತೋರಿಕೊಳ್ಳುತ್ತಿರುವದು. ಆದರೆ ಭಾವಪ್ರಪಂಚವು ಮಾತ್ರ ಮತ್ತೊಂದರಿಂದ ತನ್ನ

ಇರವನ್ನು ಸಾಲತಂದಿರುವದಿಲ್ಲ, ಅದು ಸ್ವತಂತ್ರವಾದ ಇರವುಳ್ಳದ್ದು. ಆತ್ಮನು ಈ ಎರಡು ಪ್ರಪಂಚಗಳಲ್ಲಿಯೂ ಇದ್ದುಕೊಂಡಿರುವದರಿಂದ ಇವೆರಡನ್ನೂ ಅರಿತು ಗುರುತಿಸುವದಕ್ಕೆ ಅವಕಾಶವುಂಟಾಗಿದೆ.

ಈ ಪ್ಲೇಟೋಸಿದ್ಧಾಂತವೇ ಪ್ಲೊಟೈನಸನ **ತತ್ತ್ವತ್ರಯಸಿದ್ಧಾಂತ**ವೆಂಬ ನದಿಗೆ ಮೂಲಸ್ಥಾನವು. ತತ್ತ್ವತ್ರಯಜ್ಞಾನವೆಂದರೆ ಭಗವತ್ತತ್ವವು ಮೂರು ವ್ಯೂಹಗುಳುಳ್ಳದ್ದೆಂದು ತಿಳಿಯುವದು. ಏಕವಾಗಿಯೂ ಸದ್ರೂಪವಾಗಿಯೂ ಅನಂತವಾಗಿಯೂ ಇರುವ ತತ್ತ್ವವೇ ಮೊದಲನೆಯ ವ್ಯೂಹವು, ಇದು ಇಂಥದ್ದೆಂದು ವರ್ಣಿಸಿ ಹೇಳುವದಕ್ಕೆ ಬರುವದಿಲ್ಲ, ಮನುಷ್ಯನ ಬುದ್ಧಿಯನ್ನು ಮೀರಿರುವದು; 'ಇದಲ್ಲ', 'ಇದಲ್ಲ' – ಎಂದು ಮಾತ್ರ ಅದನ್ನು ತಿಳಿಸಬಹುದು. ಈ ಮೊದಲನೆಯ ವ್ಯೂಹದಿಂದ ಹೊರಕ್ಕೆ ಬಂದು **ಜ್ಞಾನರೂಪ**ವಾಗಿ ತೋರಿಕೊಂಡಿರುವ ತತ್ತ್ವವೇ ಎರಡನೆಯ ವ್ಯೂಹವು. ಇದೇ ಭಾವನೆಗಳಿಗೆಲ್ಲ ನಿವಾಸಸ್ಥಾನವು, ಮನುಷ್ಯನು ತನ್ನ ಬುದ್ಧಿಯಿಂದ ಇದನ್ನು ಮಾತ್ರ ಅರಿತುಕೊಳ್ಳಬಹುದು. ಈ ವ್ಯೂಹದಿಂದ ಹೊರಟು ಇಂದ್ರಿಯಗೋಚರವಾಗಿರುವ ಪ್ರಪಂಚವನ್ನೆಲ್ಲ ವ್ಯಾಪಿಸಿಕೊಂಡು ಅದಕ್ಕೆ ತನ್ನ ಚೈತನ್ಯವನ್ನು ಕೊಟ್ಟು ಅನುಗ್ರಹಿಸಿರುವ ಪರಮಾತ್ಮತತ್ತ್ವವೇ ಮೂರನೆಯದು, ಪ್ರಪಂಚವೆಂಬುದು ಈ ಪರಮಾತ್ಮನ ಲೀಲೆಯು. ಜೀವಾತ್ಮರೆಲ್ಲ ಈತನ ಅಂಶಗಳೇ; ಆದರೆ ಅವರು ಮಿಥ್ಯಾರೂಪವಾಗಿರುವ ಪ್ರಕೃತಿಯ ಸಂಬಂಧದಿಂದ ಈಗ ದೇಹಿಗಳಾಗಿರುತ್ತಾರೆ. ಸದ್ರೂಪವಾಗಿ **ಏಕತತ್ತ್ವ**ವನ್ನು ಬಿಟ್ಟು ಅವರು ಬೇರೆಯಾಗಿರುವದಕ್ಕೆ ಈ ಪ್ರಕೃತಿಯ ಸಂಬಂಧವೇ ಕಾರಣವು.

ಮೇಲೆ ತಿಳಿಸಿರುವ ಮೂರು ಬಗೆಯ ವ್ಯೂಹಗಳನ್ನೂ ಒಂದೊಂದಾಗಿ ಸೇರಿ ಕೊನೆಗೆ ಪರಮಾರ್ಥವಾದ ಅದ್ವಿತೀಯ ತತ್ತ್ವದಲ್ಲಿ ಬೆರತುಕೊಳ್ಳುವದು ಹೇಗೆಂಬುದನ್ನು ತಿಳಿಸುವದೇ ಸಾಧನವು. ಈ ಸಾಧನದಲ್ಲಿ ಪ್ರತ್ಯಾಹಾರ, ಧ್ಯಾನ, ಸಮಾಧಿ – ಎಂಬ ಮೂರು ಮೆಟ್ಟಿಲುಗಳು ಇರುವವು. **ಪ್ರತ್ಯಾಹಾರ**ವೆಂಬ ಮೊದಲನೆಯ ಮೆಟ್ಟಿಲಿನಿಂದ ಪರಮಾತ್ಮವ್ಯೂಹವನ್ನು ಸೇರಬಹುದು. ವಿಗ್ರಹವನ್ನು ಮಾಡುವಾತನು ಓರೆಕೋರೆಗಳನ್ನು ಒಂದೂ ಬಿಡದಂತೆ ಕೆತ್ತಿಹಾಕುವಂತೆ, ಸಾಧಕನು ತನ್ನಲ್ಲಿರುವ ದೋಷಗಳನ್ನೆಲ್ಲ ಒಂದೊಂದಾಗಿ ಪರಿಹರಿಸಿಕೊಂಡು ತನ್ನೊಳಕ್ಕೆ ತಾನು ಸರಿದುಕೊಳ್ಳುವದಕ್ಕೆ ಪ್ರತ್ಯಾಹಾರವು. ಉಳಿಯ ಕೆಲಸವು ಮುಗಿಯುತ್ತಲೂ ವಿಗ್ರಹದ ಸೌಂದರ್ಯವು ಎದ್ದು ಕಾಣುವ ಹಾಗೆ, ಸಾಧನೆಯು ಪಕ್ವವಾದಾಗ

ಸದ್ಗುಣಗಳೆಲ್ಲ ಪೂರ್ಣವಾಗಿ ಮೂಡಿಕೊಳ್ಳುವವು. ಶಾಂತಿಯು ನೆಲೆಗೊಳ್ಳುವದು. ಧ್ಯಾನವೆಂಬ ಎರಡನೆಯ ಮೆಟ್ಟಿಲನ್ನೇರಿದರೆ ಜ್ಞಾನವ್ಯೂಹವನ್ನು ಸೇರಬಹುದು. ಆತ್ಮದ ಸ್ವಭಾವ ಪರಮಾರ್ಥತತ್ತ್ವ - ಮುಂತಾದವುಗಳನ್ನು ಕುರಿತು ಚಿಂತಿಸುವದೇ ಧ್ಯಾನವು. ವಿಷಯಾಸಕ್ತಿಯನ್ನು ಸಂಪೂರ್ಣವಾಗಿ ಬಿಟ್ಟು, ಇಂದ್ರಿಯಗಳ ಹೊರನೋಟವನ್ನು ತಪ್ಪಿಸಿ, ಪ್ರತಿಯೊಬ್ಬನಲ್ಲಿಯೂ ಸ್ವಭಾವಸಿದ್ಧವಾಗಿ ಇದ್ದು ಕೊಂಡೇ ಇರುವ ಒಳಗಣ್ಣಿನ ದೃಷ್ಟಿಯನ್ನು ತೆರೆದುಕೊಳ್ಳುವದೇ ಧ್ಯಾನದ ಉದ್ದೇಶವು. ಈ ಮೆಟ್ಟಿಲಿನಲ್ಲಿ ಇನ್ನೂ ಮನುಷ್ಯನ ಬುದ್ಧಿಯು ಕೆಲಸಮಾಡುತ್ತಿರುವದು; ಏಕೆಂದರೆ ಬುದ್ಧಿಯಿಂದಲೇ ಜ್ಞಾನವ್ಯೂಹವನ್ನು ಅರಿತುಕೊಳ್ಳಬೇಕಾಗಿರುವದು. ಆದರೆ ಬುದ್ಧಿಗೂ ಅತೀತವಾಗಿರುವ ಏಕತ್ವವ್ಯೂಹವನ್ನು ಕಂಡುಕೊಳ್ಳುವದಕ್ಕೆ ಬುದ್ಧಿಯ ವ್ಯಾಪಾರವೂ ನಿಂತುಹೋಗಬೇಕು. ಇದಕ್ಕೆ ಸಮಾಧಿಯೆಂಬ ಮೂರನೆಯ ಮೆಟ್ಟಿಲನ್ನು ಏರಬೇಕಾಗಿರುವದು. ಈ ಮೆಟ್ಟಿಲನ್ನು ಹತ್ತುವದರೊಳಗೆ ಆತ್ಮನಲ್ಲಿರುವ ಕಲ್ಮಷಗಳೆಲ್ಲ ತೊಳೆದುಹೋಗಿರುವವು; ಯಾವದೊಂದು ಅನಾತ್ಮದ ಕೊಳೆಯೂ ಅದರಲ್ಲಿರುವದಿಲ್ಲ; ಆತ್ಮನು ಕೇವಲ ಜ್ಯೋತೀರೂಪನಾಗಿ ಪರಿಣಮಿಸಿ ಬಿಟ್ಟಿರುತ್ತಾನೆ. ಈ ಸ್ಥಿತಿಯಲ್ಲಿ ಭಗವದಾವೇಶದಿಂದ ಶೂನ್ಯಸಮಾಧಿಯನ್ನು ಹೊಂದಿ, ಶಾಂತನಾಗುವನು. ಆಗ ಮನಸ್ಸು ಒಂದಿಷ್ಟೂ ಅಲುಗಾಡುವದಿಲ್ಲ. ತನ್ನನ್ನು ತಾನು ಅರಿಯುವದೆಂಬುದು ಕೂಡ ಇರುವದಿಲ್ಲ. ಧರ್ಮಾಧರ್ಮದ ಎಲ್ಲೆಯನ್ನು ಮೀರಿ ಬಂದಿರುತ್ತಾನೆ. ಉತ್ಸವಮೂರ್ತಿಯನ್ನು ಹೊರಗಿನ ಮಂಟಪದಲ್ಲಿಯೇ ಬಿಟ್ಟು ಗರ್ಭಗುಡಿಯಲ್ಲಿರುವ ಮೂಲಮೂರ್ತಿಯನ್ನು ಸೇರಿದವನಂತೆ ಹೊರಗಿನ ಸಂಬಂಧವನ್ನೆಲ್ಲ ಕಳಚಿಕೊಂಡು ಭಗವಂತನ ಬಳಿಗೆ ಬಂದಿರುತ್ತಾನೆ; ಪ್ರತಿಬಿಂಬವು ಬಿಂಬದಲ್ಲಿ ಸೇರಿಕೊಂಡುಬಿಡುವಂತೆ ಭಗವಂತನ ಸಾಯುಜ್ಯವನ್ನು ಹೊಂದಿಬಿಟ್ಟಿರುತ್ತಾನೆ.

ಈ ಪ್ರಪಂಚವೆಂಬುದು ಜೀವನಿಗೆ ಎಂದಿಗೂ ತೃಪ್ತಿಯನ್ನು ಕೊಡಲಾರದು. ತನ್ನೊಳಗೇ ಇದ್ದುಕೊಂಡು ಎಲ್ಲವನ್ನೂ ಮೀರಿರುವ ಭಗವತ್ತತ್ತ್ವವನ್ನು ಅರಿತು ಅದರಲ್ಲಿ ಐಕ್ಯವನ್ನು ಹೊಂದುವದು ಎಲ್ಲರಿಗೂ ಸಾಧ್ಯವು. ಈ ಸಾಯುಜ್ಯ ವೆಂಬುದು ಹೇಗೋ ಉಂಟಾಗುವ ಕೃತಕಸಿದ್ಧಿತಿಯಲ್ಲ; ಆನಂದದಿಂದಲೂ ಶಾಂತಿಯಿಂದಲೂ ಇರಬಹುದಾದ ಸಹಜವಾದ ಪರಮಾರ್ಥಸ್ಥಿತಿಯು. ತನ್ನ

ಮೂಲವನ್ನು ತಾನು ಸೇರಿ, ತಾನೇತಾನಾಗಿರುವ ಈ ಸ್ಥಿತಿಯನ್ನು ದೇವತೆಗಳು ಕೂಡಬಯಸುವರು- ಎಂಬುದೇ ಪ್ಲೊಟೈನಸ್ ಯೋಗಿಯ ಪರಮೋಪದೇಶವು.

ಪ್ಲೊಟೈನಸನು ಎಲ್ಲಿ ಯಾವಾಗ ಹುಟ್ಟಿದನೆಂಬುದು ಸರಿಯಾಗಿ ತಿಳಿದಿಲ್ಲ; ಸುಮಾರು ಕ್ರಿ.ಶ.204ರಲ್ಲಿ ಹುಟ್ಟಿದನೆಂದು ಊಹಿಸಲಾಗಿದೆ. ಆತನು ಯಾವಾಗ ಸತ್ತನೆಂಬುದೂ ನಿರ್ಣಯವಿಲ್ಲ; ಸುಮಾರು 270ರಲ್ಲಿ ಈ ಲೋಕವನ್ನು ಬಿಟ್ಟನೆಂದು ಹೇಳುತ್ತಾರೆ. ಅನಿತ್ಯವಾದ ದೇಹಸಂಬಂಧದ ವಿಷಯದಲ್ಲಿ ಹೆಮ್ಮೆಪಡುವದು ಅಯೋಗ್ಯವೆಂದು ಬಗೆದ ಆ ಮಹಾತ್ಮನು ತನ್ನ ಜಾತಿ, ಕುಲ, ಗೋತ್ರ, ಊರು, ಕೇರಿ- ಮುಂತಾದವುಗಳ ಸಂಬಂಧವಾಗಿ ಒಂದು ಬಿಡಿಮಾತನ್ನೂ ಆಡುತ್ತಿರಲಿಲ್ಲ. ತಾನು ದೇಹವನ್ನು ಬಿಡುವ ಕಾಲಕ್ಕೆ ಹತ್ತಿರಕ್ಕೆ ಬಂದ ಒಬ್ಬ ಸ್ನೇಹಿತನನ್ನು ಕಂಡು ಆತನು ''ಅಯ್ಯ, ನೀನು ಬಂದದ್ದು ಒಳ್ಳೆಯದಾಯಿತು; ಇಷ್ಟರಲ್ಲಿಯೇ ನನ್ನಲ್ಲಿರುವ ಭಗವದಂಶವು ಬ್ರಹ್ಮಾಂಡದಲ್ಲೆಲ್ಲ ತುಂಬಿರುವ ಪರಮಾತ್ಮತತ್ತ್ವದಲ್ಲಿ ಬೆರೆತುಹೋಗುವದು'' - ಎಂದು ನುಡಿದನಂತೆ! ಪ್ಲೊಟೈನಸನ ತರುವಾಯ ಈ ಯೋಗಮಾರ್ಗವನ್ನು ಸಾರ್ಫಿರಿ, ಐಯಾಂಬಿಕಸ್, ಪ್ರೋಕ್ಲಸ್ - ಎಂಬುದು ಬೆಳಸಿದರು: ಕೆಲವು ಕಾಲದ ಮೇಲೆ ಕ್ರಿಸ್ತಿಯನ್ ತತ್ತ್ವಜ್ಞಾನಿಗಳೂ ಅದನ್ನು ಅಂಗೀಕರಿಸಿದರು. ಇತ್ತೀಚಿನ ಎಷ್ಟೋ ಕವಿಗಳ ಮನಸ್ಸನ್ನೂ ಪ್ರಸಿದ್ಧರಾದ ತತ್ತ್ವವಿಚಾರಕರ ಮನಸ್ಸನ್ನೂ ಅದು ಹಿಡಿದುಕೊಂಡಿತ್ತೆಂದು ಅವರ ಗ್ರಂಥಗಳಿಂದ ಕಂಡುಬರುತ್ತದೆ.

★★★★★

# ಡಾ॥ ಆನಿ ಬೆಸಂಟ್

-ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಸೆಪ್ಟೆಂಬರ್ ತಾರೀಖು 20ರಲ್ಲಿ ಲೋಕಪ್ರಸಿದ್ಧರಾದ ಡಾ॥ ಆನಿ ಬೆಸಂಟಮ್ಮನವರು ದೇಹವನ್ನು ಬಿಟ್ಟದ್ದನ್ನು ಕೇಳಿ ಇಡಿಯ ಭೂಮಂಡಲದ ನಾಗರಿಕಲೋಕವೆಲ್ಲ ಶೋಕಸಾಗರದಲ್ಲಿ ಮಗ್ನವಾಯಿತು. ಮಹಾತ್ಮಗಾಂಧಿಯವರು, ಡಾ॥ ಟಾಗೂರ್, ಡಾ॥ ಮಹಮ್ಮದ್ ಆಲಮ್, ಸರ್.ಸಿ.ಪಿ.ರಾಮಸ್ವಾಮಿ ಅಯ್ಯರ್, ಶ್ರೀಯುತ ಸುಭಾಷಚಂದ್ರಬೋಸ್,

ಜಾರ್ಜ್ ಲಾನ್ಸ್ ಬರಿ, ಜಮ್‌ಷೆಟ್ ಮೆಹತಾ, ಜೆ. ಕೃಷ್ಣಮೂರ್ತಿ – ಮೊದಲಾದ ಪ್ರಸಿದ್ಧಪುರುಷರು ತಮಗೆ ಉಂಟಾದ ಅನುತಾಪವನ್ನು ಆನಿಬೆಸಂಟಮ್ಮನವರ ಗುಣಕಥನಪೂರ್ವಕವಾಗಿ ಸೂಚಿಸಿದರು; ಬೇರೆಬೇರೆ ಕಡೆಯ ಥಿಯಸಾಫಿಕಲ್ ಸಮಾಜದವರು ಅಪಾರವಾಗಿ ವ್ಯಸನವನ್ನು ವ್ಯಕ್ತಪಡಿಸಿದರು. ವೃತ್ತಪತ್ರಿಕೆಗಳಲ್ಲಿ ಇವರ ವಿಚಾರವಾಗಿ ದೀರ್ಘಲೇಖಗಳು ಹೊರಕ್ಕೆ ಬಂದವು. ಅಡಿಯಾರಿನಲ್ಲಿ ಇವರ ಉತ್ತರಕ್ರಿಯೆಗಳಿಗಾಗಿ ಶ್ರದ್ಧಾಭಕ್ತಿ ಪೂರ್ವಕವಾಗಿ ಮಾಡಿದ ವಿಸ್ತೃತವಾದ ಏರ್ಪಾಡುಗಳೂ ಅವರ ಅಂತ್ಯ ಸಂಸ್ಕಾರ ಕಾಲದಲ್ಲಿ ಸೇರಿದ್ದ ನೂರಾರು ಮಹಾಶಯರ ಸಮಾಗಮವೂ ಅವರು ಮಾಡಿದ ಗುಣಗಾನಗಳೂ ಆನಿಬೆಸೆಂಟಮ್ಮನವರ ನಿಧನದಿಂದ ಪ್ರಪಂಚಕ್ಕೆ ಎಂಥ ಮಹತ್ತರವಾದ ನಷ್ಟವಾಗಿ ದೆಯೆಂಬುದನ್ನು ಸ್ಪಷ್ಟಗೊಳಿಸಿ ನೋಡುವವರ ಹೃದಯವನ್ನು ಕರಗಿಸುವಂತಿದ್ದವು.

ಬೆಸಂಟಮ್ಮನವರು ಪ್ರಪಂಚಕ್ಕೆಲ್ಲ ಬೇಕಾದವರಾಗಿದ್ದರಾದರೂ ಮುಖ್ಯವಾಗಿ ಭರತಖಂಡಕ್ಕೇ ಅವರಿಂದ ಅಪಾರವಾದ ಉಪಕಾರವಾಗಿರುವದು. ಅವರು 1847ರಲ್ಲಿ ಇಂಗ್ಲೆಂಡಿನಲ್ಲಿ ಜನಿಸಿದರು; ಅವರು ದೊಡ್ಡವರಾದ ಮೇಲೆ ಸ್ವತಂತ್ರ ವಿಚಾರಗಳ ಸಮಾಜಕ್ಕೆ ಸೇರಿ ಚಾರ್ಲ್ಸ್ ಬ್ರಾಡ್ಲಾರವರೊಡನೆ ಕೂಲಿಕಾರರ ವಿಷಯವಾಗಿಯೂ ಸಾಮಾಜಿಕವಿಚಾರವಾಗಿಯೂ ಅಮೋಘವಾದ ಭಾಷಣಗಳನ್ನು ಮಾಡುತ್ತಿದ್ದರು, ಎಷ್ಟೋ ಗ್ರಂಥಗಳನ್ನೂ ಪ್ರಕಟಿಸಿದರು. ಆದರೆ 1849ರಲ್ಲಿ ಮ್ಯಾಡಮ್ ಬ್ಲಾವಟ್ಸ್ಕಿಯವರ ಮಾರ್ಗಕ್ಕೆ ತಿರುಗಿ ''**ಥಿಯಸಾಫಿಕಲ್ ಸೊಸೈಟಿ**'' ಎಂಬ ತತ್ತ್ವಜ್ಞಾನಸಮಾಜಕ್ಕೆ ಸೇರಿಕೊಂಡಂದಿನಿಂದ ಇವರು ಜಗದ್ವಿಖ್ಯಾತವ್ಯಕ್ತಿಗಳಲ್ಲಿ ಒಬ್ಬರಾದರು, ಭರತಖಂಡದ ಮಿತ್ರವರ್ಯರ ಗುಂಪಿಗೂ ಸೇರಿದವರಾದರು.

ಬ್ಲಾವಟ್ಸ್ಕಿ ಮತ್ತು ಕರ್ನಲ್ ಆಲ್ಕಾಟ್‌ರವರ ಕಾಲಕ್ಕೆ ಥಿಯಸಾಫಿಕಲ್ ಸಮಾಜವು ಬೌದ್ಧಮತದ ವಿಚಾರಗಳನ್ನೇ ವಿಶೇಷವಾಗಿ ಹೊರಕ್ಕೆ ಹಿಡಿಯುತ್ತಿದ್ದಿತು. ಆದರೆ ಆನಿಬೆಸಂಟಮ್ಮನವರು ಈ ಸಂಘದಲ್ಲಿ ತಮ್ಮ ಪ್ರಭಾವವನ್ನು ಬೀರುತ್ತಲೂ ಹಿಂದೂಧರ್ಮಕ್ಕೆ ವಸಂತೋದಯವಾದಂತಾಯಿತು. ಇವರು ನಾಲ್ಕು ಸಲ ಆ ಸೊಸೈಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟು ಕೊನೆಯವರೆಗೂ ಆ ಪದವಿಯನ್ನು ಅಲಂಕರಿಸಿದ್ದರು. ಈ ಕಾಲದಲ್ಲೆಲ್ಲ ಅವರು ಬಾಷಣಗಳಿಂದಲೂ ನೂರಾರು ಮತಗ್ರಂಥಗಳ ಪ್ರಕಾಶದಿಂದಲೂ ಹಿಂದೂಜನರ ಧಾರ್ಮಿಕಸ್ವಭಾವವನ್ನು ಎಲ್ಲ ಬಗೆಯಿಂದಲೂ ಉತ್ತೇಜನಗೊಳಿಸಿದ್ದಲ್ಲದೆ, ಹಿಂದೂಮತದ ಶ್ರೇಷ್ಠತೆಯನ್ನು

ಲೋಕಕ್ಕೆಲ್ಲ ಮನಗಾಣಿಸಿಕೊಟ್ಟರು. ಭಗವದ್ಗೀತೆಗೆ ಇವರು ಬರೆದಿರುವ ವ್ಯಾಖ್ಯಾನಗಳೂ ತಾತ್ಪರ್ಯಬೋಧಕ ಉಪನ್ಯಾಸಗಳೂ ಹೇರಳವಾಗಿವೆ. ಜನಾನುರಾಗಕ್ಕೆಲ್ಲ ಪಾತ್ರವಾದ ಇವರ ಇಂಗ್ಲಿಷ್ ಅನುವಾದದಿಂದೊಡಗೂಡಿದ ಗೀತೆಯನ್ನು ಮದರಾಸಿನ ಸುಪ್ರಸಿದ್ಧ ಗ್ರಂಥಪ್ರಕಾಶಕರಾದ ಜಿ.ಎ. ನಟೇಶನ್ ಕಂಪನಿಯವರು ತೀರ ತಗ್ಗಿಸಿದ ಬೆಲೆಯನ್ನಿಟ್ಟು ಅಂದವಾಗಿ ಅಚ್ಚುಕಟ್ಟಾದ ಆಕಾರದಲ್ಲಿ ಮುದ್ರಿಸಿ ಇಂಗ್ಲಿಷು ಬರುವವರಿಗೆಲ್ಲ ಸುಲಭವಾಗಿ ದೊರಕುವಂತೆ ಮಾಡಿರುತ್ತಾರೆ.

ವಿದ್ಯಾಭ್ಯಾಸ, ಸಮಾಜಸುಧಾರಣೆ, ರಾಜಕೀಯವಿಚಾರ – ಈ ಭಾಗಗಳಲ್ಲಿ ಡಾ॥ ಬೆಸಂಟಮ್ಮನವರ ಕಾರ್ಯಕ್ಷೇತ್ರವು ಬಹು ವಿಸ್ತಾರವಾಗಿತ್ತು. ಇವರ ಮಹಾಪ್ರಯತ್ನದ ಫಲವಾಗಿ ಕಾಶಿಯಲ್ಲಿರುವ ಸೆಂಟ್ರಲ್ ಹಿಂದೂ ಕಾಲೇಜಿನ ಸ್ಥಾಪನೆಯು ಹಿಂದೂಸಮಾಜದ ಸಂಸ್ಕೃತಿಯನ್ನು ಉಜ್ಜೀವನಗೊಳಿಸುವ ಧ್ವಜಸ್ತಂಭವಾಯಿತು. ರಾಜಕೀಯವಿಚಾರದಲ್ಲಿ ಇವರು ಬಹುಕಾಲ ಪಟ್ಟ ಶ್ರಮವೂ ಅದಕ್ಕಾಗಿ ಮಾಡಿದ ಸ್ವಾರ್ಥತ್ಯಾಗವೂ ನಮ್ಮೆಲ್ಲರ ಸ್ಮರಣೆಯಲ್ಲಿ ಇನ್ನೂ ಅಚ್ಚಳಿಯದೆ ಇದೆ. ಭಾರತೀಯರು ಇವರನ್ನು ಕಾಂಗ್ರೆಸಿಗೆ ಮತ್ತೆಮತ್ತೆ ಅಧ್ಯಕ್ಷರಾಗಿ ಆರಿಸಿ ಇವರಲ್ಲಿ ತಮಗಿದ್ದ ಶ್ರದ್ಧಾವಿಶ್ವಾಸಗಳನ್ನು ತೋರಡಿಸಿದರು. ಈಚೆಗೆ ಹೊರಕ್ಕೆ ಬಂದ ಮುಂದಾಳುಗಳಿಗೂ ತಮಗೂ ಭಿನ್ನಾಭಿಪ್ರಾಯವಾಗಿ ಇವರು ರಾಜಕೀಯಕ್ಷೇತ್ರದಿಂದ ನಿವೃತ್ತರಾದರೂ ದೇಶಾಭಿಮಾನವು ಮಾತ್ರ ಸ್ವಲ್ಪವೂ ಕುಗ್ಗಲಿಲ್ಲ. ಇಂಗ್ಲೆಂಡಿನಲ್ಲಿ ಹುಟ್ಟಿದರೂ ಇವರು ಭಾರತದೇಶವನ್ನೇ ತಮ್ಮ ವಾಸಭೂಮಿಯಾಗಿ ಆರಿಸಿಕೊಂಡರು; ಜನ್ಮದಿಂದ ಐರ್ಲೆಂಡಿನವರಾದರೂ ಚಿತ್ತವೃತ್ತಿಯಿಂದ ಭರತಖಂಡಕ್ಕೇ ಸೇರಿದವರಾಗಿದ್ದರು. ಇವರನ್ನು ತಮ್ಮ ಗುರುಗಳೆಂದು ಶ್ರದ್ಧಾಭಕ್ತಿಗಳಿಂದ ಭಾವಿಸುತ್ತಿರುವ ಭಾರತೀಯರು ಅಗಣಿತವಾಗಿ ರುವರು. ಮೃತ್ಯುರಾಜನು ಇವರ ಭೌತಿಕಶರೀರವನ್ನು ನಮ್ಮಿಂದ ಕಸಿದುಕೊಂಡರೂ ಇವರು ನಮಗೆ ಮಾಡಿರುವ ಪರೋಪಕಾರದ ಸ್ಮರಣೆಯನ್ನು ಮಾತ್ರ ನಮ ಹೃದಯದಿಂದ ಎಂದಿಗೂ ಅಗಲಿಸಲಾರನು. ಇವರಿಗೆ ಈ ಲೋಕದಲ್ಲಿ ಕೀರ್ತಿಯೂ ಗೌರವವೂ ಹೇಗೆ ನಿಷ್ಚಿತವೋ ಹಾಗೆಯೇ ಪರಲೋಕದಲ್ಲಿಯೂ ನಿತ್ಯಶಾಂತಿಯನ್ನು ಪರಮಾತ್ಮನು ಅನುಗ್ರಹಿಸಲೆಂದು ಹೃತ್ಪೂರ್ವಕವಾಗಿ ಪ್ರಾರ್ಥಿಸೋಣ.

★★★★★

# ಎಚ್. ಪಿ. ಬ್ಲಾವಟ್ಸ್ಕಿ ಅಮ್ಮನವರು

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು

ತಮ್ಮ ಅಧ್ಯಾತ್ಮಶಕ್ತಿಯ ಬೆಳಕಿನಿಂದ ಅಖಂಡಭೂಮಂಡಲವನ್ನೇ ಬೆಳಗಿ ಕೀರ್ತಿಶೇಷರಾಗಿರುವ ಬ್ಲಾವಟ್ಸ್ಕಿ ಅಮ್ಮನವರು 1891ನೆಯ ಮೇ 8ರಲ್ಲಿ ತಮ್ಮ ಭೌತಿಕದೇಹವನ್ನು ಬಿಟ್ಟರು. ಪ್ರತಿವರ್ಷದ ಮೇ ತಿಂಗಳಿನಲ್ಲಿಯೂ ಅವರ ಸ್ಮರಣೆಯನ್ನು ಅಧ್ಯಾತ್ಮವಿದ್ಯೆಯಲ್ಲಿ ಶ್ರದ್ಧೆಯುಳ್ಳವರು ಮಾಡಿಕೊಳ್ಳುವದು ಯೋಗ್ಯವಾಗಿರುವದು.

ಬ್ಲಾವಟ್ಸ್ಕಿಯವರು ಜನ್ಮ(12 ಆಗಸ್ಟ್ 1831)ದಿಂದ ರಷ್ಯದೇಶಕ್ಕೆ ಸೇರಿದವರಾದರೂ ದೇಶಸಂಚಾರದಿಂದಲೂ ಜ್ಞಾನಪ್ರಸಾರಣೆಯಿಂದಲೂ ಇಡಿಯ ನಾಗರಿಕ ಪ್ರಪಂಚಕ್ಕೇ ಸೇರಿದವರು, ಅದರಲ್ಲಿಯೂ ಮುಖ್ಯವಾಗಿ ನಮ್ಮ ಭರತ ಖಂಡಕ್ಕೆ ಸೇರಿದವರು. ಏಕೆಂದರೆ ಅವರ ಬಾಲ್ಯವೂ ಕೌಮಾರವೂ ವಿಶೇಷವಾಗಿ ಯೂರೋಪು, ಏಷಿಯ, ಆಫ್ರಿಕ, ಅಮೆರಿಕ– ಈ ದೇಶಗಳ ಸಂಚಾರದಲ್ಲಿಯೇ ಕಳೆದವು; ಅವರ ಜೀವನದ ಮುಖ್ಯೋದ್ದೇಶವಾದ **ಥಿಯಸಾಫಿಕಲ್ ಸೊಸೈಟಿ**[1] ಎಂಬ ತತ್ತ್ವವಿಚಾರಸಂಘವು ನಮ್ಮ ದೇಶದಲ್ಲಿಯೇ ಬೆಳೆದು ಜಗದ್ವಿಖ್ಯಾತವಾಯಿತು.

ಯೋಗಶಾಸ್ತ್ರವು ಬರಿಯ ಪುಸ್ತಕಜ್ಞಾನವಾಗಿಬಿಟ್ಟಿರುವ ಈ ಕಾಲದಲ್ಲಿ, ಯೋಗಸಿದ್ಧಿಗಳೆಂದರೆ ಕಾಗಕ್ಕಗುಬ್ಬಕ್ಕನ ಕಥೆಗಳಿಗೆ ಸೇರತಕ್ಕ ವಿಚಾರಗಳೆಂದು ಭೌತಿಕವಿಜ್ಞಾನದ ದೃಷ್ಟಫಲಗಳಿಗೆ ಮನಸೋತಿರುವ ನಾಗರಿಕತೆಯ ಸೆಳವಿಗೆ ಸಿಕ್ಕಿ ಆ ವಿಚಾರವನ್ನೇ ಕಡೆಗಣಿಸುತ್ತಿರುವವರ ಸಂಖ್ಯೆಯು ಹೆಚ್ಚಾಗುತ್ತಿರುವ ಈ ಆಶ್ರದ್ಧೆಯ ಕಾಲದಲ್ಲಿ, ಲೆಕ್ಕವಿಲ್ಲದಷ್ಟು ಅದ್ಭುತಕೃತಿಗಳನ್ನು ಮಾಡಿ ತೋರಿಸಿದ್ದಲ್ಲದೆ ಬರಹಗಳಿಂದಲೂ ಉಪನ್ಯಾಸಗಳಿಂದಲೂ ಯೋಗಶಕ್ತಿಗಳೆಂಬಿವು ಶಾಸ್ತ್ರೀಯ ವಾದವೇ ಎಂಬುದನ್ನು ಅನೇಕರಿಗೆ ಮನಗಾಣಿಸಿಕೊಟ್ಟ ಮಹನೀಯರಿವರು.

---

1 . ಈ ಹೆಸರನ್ನು ದಿವ್ಯಜ್ಞಾನಸಮಾಜ ತತ್ತ್ವಜ್ಞಾನಸಮಾಜ, ಬ್ರಹ್ಮವಿದ್ಯಾಸಮಾಜ – ಎಂದು ಬಗೆಬಗೆಯ ಮಾತುಗಳಿಂದ ಕನ್ನಡಿಸುವರು. ಆದರೆ ಈ ಯಾವದೊಂದು ಪರಿವರ್ತನೆಯಿಂದಲೂ ಸಮಾಜದ ಮೂಲೋದ್ದೇಶಗಳು ಹೊರಪಡುವಂತಿಲ್ಲ.

ಕರ್ನಲ್ ಅಲ್ಕಾಟ್‌ರವರ ಸಹಾಯದಿಂದ ಇವರು ಜನರ ಲಕ್ಷ್ಯಕ್ಕೆ ತಂದ ತತ್ತ್ವಜ್ಞಾನಸಮಾಜದ ಮೂರು ಉದ್ದೇಶಗಳನ್ನೂ ಇವರು ಆಚರಣೆಯಲ್ಲಿಟ್ಟುಕೊಂಡೇ ಇದ್ದರೆಂದು ಧಾರಾಳವಾಗಿ ಹೇಳಬಹುದು. ಏಕೆಂದರೆ ಜಾತಿ, ಮತ, ಕುಲ, ಗೋತ್ರ-ಇವುಗಳ ಭೇದವನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ ಎಲ್ಲರೂ ವಿಶ್ವಭ್ರಾತೃಗಳಾಗಿರಬೇಕೆಂಬುದನ್ನು ಇವರು ನಾನಾದೇಶದವರಲ್ಲಿ ಸ್ನೇಹವನ್ನು ಬೆಳೆಯಿಸಿ ತೋರಿಸಿದರು; ಧರ್ಮಜ್ಞಾನ ವಿಜ್ಞಾನಶಾಸ್ತ್ರ - ಇವುಗಳ ತುಲನಾತ್ಮಕವಿಚಾರಕ್ಕೆ ಉತ್ತೇಜನವನ್ನು ಕೊಡಬೇಕೆಂಬುದನ್ನು ಬೌದ್ಧಗ್ರಂಥಗಳ ಪರಿಶೀಲನೆಯಿಂದಲೂ ನಮ್ಮ ದೇಶದ ಆರ್ಯಸಮಾಜದವರ ಸಹಾನುಭೂತಿಯ ಸಂಪಾದನೆಯಿಂದಲೂ ತೋರಿಸಿಕೊಟ್ಟಿದ್ದಲ್ಲದೆ, '**ನಿರಾವರಣಪರಮೇಶ್ವರಿ**' (Isis Unveiled), '**ಥಿಯಾಸೊಫಿಯ ಮರ್ಮ**' (Key to Theosophy), '**ನಾದಾನುಸಂಧಾನ**' (The Voice of Silence), '**ಗುಪ್ತವಿದ್ಯಾ**' (The Secret Doctrine), '**ತತ್ತ್ವಜ್ಞಾನನಿಘಂಟು**' (The Theosophical Glossary)- ಎಂಬ ಅಮೋಘಗ್ರಂಥಗಳಲ್ಲಿ ತಾವು ಬರೆದಿಟ್ಟಿರುವ ವಿವಿಧಬರಹಗಳಿಂದ ಎಷ್ಟೋ ಜನ ಸಂಶಯವಾದಿಗಳನ್ನು ಸಹ ಆಸ್ತಿಕರಾಗಿ ಮಾಡಿ ಸಾಧನಪಥವನ್ನು ತೋರಿಸಿಕೊಟ್ಟಿರುತ್ತಾರೆ. ಮಾನವರಲ್ಲಿ ಅವ್ಯಕ್ತವಾಗಿರುವ ಗುಪ್ತಶಕ್ತಿಗಳನ್ನೂ ಇನ್ನೂ ನಿರ್ಧಾರವಾಗದೆ ಇರುವ ಪ್ರಕೃತಿನಿಯಮಗಳನ್ನೂ ಶೋಧನೆ ಮಾಡುವದೆಂಬ ಸಮಾಜದ ಮೂರನೆಯ ನಿಯಮವಂತೂ ಅವರ ಜೀವನದಲ್ಲಿ ಹಾಸುಹೊಕ್ಕಾಗಿದ್ದಿತೆಂಬುದು ಸುಪ್ರಸಿದ್ಧವಾಗಿರುತ್ತದೆ.

ಮ್ಯಾಡಮ್ ಬ್ಲಾವಟ್ಸ್ಕಿಯವರ ಅಭಿಪ್ರಾಯಗಳೆಲ್ಲ ಎಲ್ಲಾ ವಿಷಯದಲ್ಲಿಯೂ ಎಲ್ಲರಿಗೂ ಒಪ್ಪಾಗಿದ್ದವೆಂದು ಹೇಳುವದಕ್ಕಾಗುವದಿಲ್ಲ. ಏಕೆಂದರೆ ಇವರು ಇಂದ್ರಜಾಲವಿದ್ಯೆಯನ್ನೂ ಮೂಢಭಕ್ತಿಯನ್ನೂ ಬೆಳೆಯಿಸುತ್ತಾರೆಂದು ಅವರ ಜೀವಿತಕಾಲದಲ್ಲಿಯೇ ಕೆಲವರು ಅವರ ಮೇಲೆ ದೂರುಹೊರಿಸಿದ್ದರು. ಹೀಗಿದ್ದರೂ ಶ್ರೀಮಂತರಾಗಿ ಹುಟ್ಟಿ ಮನೆಮಠಗಳನ್ನು ತೊರೆದು ಯೋಗಶಾಸ್ತ್ರ, ತತ್ತ್ವವಿಚಾರ ಇವಕ್ಕಾಗಿಯೇ ತಮ್ಮ ಜೀವಮಾನವನ್ನೆಲ್ಲ ಅವರು ವಿನಿಯೋಗಿಸಿದರೆಂಬುವರಲ್ಲಿ ಎರಡಭಿಪ್ರಾಯಗಳೆಲ್ಲವೆಂದು ಧಾರಾಳವಾಗಿ ಹೇಳಬಹುದಾಗಿದೆ.

''ಎಲೈ ಶಿಷ್ಯನೆ, ಜ್ಞಾನಮಂದಿರದ ಮೂಲಕವಾಗಿ ಹೋಗ ಆನಂದಧಾಮವನ್ನು ಸೇರಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ ನಿನ್ನನ್ನು ಮಿಕ್ಕೆಲ್ಲದ್ದರಿಂದಲೂ ಬೇರ್ಪಡಿಸಿರುವ ಭಯಂಕರವಾದ ನಾಸ್ತಿಕ್ಯದ ಕಡೆಗೆ ದೃಷ್ಟಿಬೀಳದಂತೆ ಬಿಗಿಯಾಗಿ ಕಣ್ಣುಮುಚ್ಚಿಕೊ.

ನಿನ್ನ ದಿವ್ಯಚಿತ್ರವು ಮಾಯಾಸಾಗರದಲ್ಲಿ ಮುಳುಗಿ ವಿಶ್ವಮಾತೆಯನ್ನಗಲದಿರಲಿ; ತೇಜಸ್ಸೆಲ್ಲ ವಿಶ್ವಮಾತೆಯ ವಾಸಸ್ಥಾನವಾದ ಹೃದಯವೆಂಬ ಅಂತಃಪುರದೊಳಕ್ಕೆ ಹೋಗಿ ವಿಶ್ರಾಂತಿಯನ್ನು ಹೊಂದಲಿ.''

– The Voice of the Silence

★★★★★

# ವಿಲಿಯಮ್ ಎಲ್ಲರಿ ಚಾನ್ನಿಂಗ್

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಚಾನ್ನಿಂಗ್ ಎಂಬಾತನು ಅಮೇರಿಕದ ರೋಢ್ ದ್ವೀಪಕ್ಕೆ ಸೇರಿದ ನ್ಯೂಪೋರ್ಟ್ ಎಂಬಲ್ಲಿ 1780ರಲ್ಲಿ ಹುಟ್ಟಿದನು. ಹಾವರ್ಡ್ ಕಲಾಶಾಲೆಯಲ್ಲಿ ವಿದ್ಯಾಭ್ಯಾಸಮಾಡಿ ದೊಡ್ಡವನಾದ ಮೇಲೆ ಬೋಸ್ಟನ್ ನಗರದಲ್ಲಿ ಧರ್ಮಬೋಧಕನಾದನು. ಆತನ ವಿಶಾಲಹೃದಯದಲ್ಲಿ ವಿಶ್ವಕುಟುಂಬಿತ್ವಕ್ಕೆ ಬೇಕಾದ ಸಲಕರಣೆಗಳೆಲ್ಲವೂ ಇದ್ದದ್ದರಿಂದ ಆ ಮಹಾಪುರುಷನ ಚರಿತ್ರೆಯ ಪರಿಚಯವು ವಾಚಕರಿಗೆ ತುಂಬ ಪ್ರಯೋಜನಕರವಾಗಿರುವದೆಂಬುದರಲ್ಲಿ ಸಂಶಯವಿಲ್ಲ.

ಚಿಕ್ಕಂದಿನಲ್ಲಿಯೇ ತಂದೆಯನ್ನು ಕಳೆದುಕೊಂಡ ಚಾನ್ನಿಂಗನು ಆತನ ಪ್ಲೀಡರ್ ವೃತ್ತಿಯನ್ನು ಅನುಸರಿಸದೆ ತನ್ನ ಮನಸ್ಸಿಗೆ ಒಗ್ಗುವ ಮತಬೋಧಕನ ಜೀವನವನ್ನೇ ಹಿಡಿದನು. ಇವನು ತನ್ನ ತಂದೆಯು ಸೇರಿದ್ದ **ಕ್ಯಾಲ್ವಿನ್**[1] ಸಂಘವೆಂಬ ಕ್ರಿಸ್ತಿಯನ್‌ಮತದ ಶಾಖೆಯವರ ಸಿದ್ಧಾಂತವನ್ನೇ ಮೊದಮೊದಲು ಬೋಧಿಸಿದನು. ಆದರೆ ಆ ಶಾಖೆಯವರ ಸಿದ್ಧಾಂತದಲ್ಲಿ ಕೆಲಕೆಲವು ಭಾಗಗಳು ಅವನ ಮನಸ್ಸಿಗೆ ಒಪ್ಪಿಗೆಯಾಗದ್ದರಿಂದ ಕ್ರಮಕ್ರಮವಾಗಿ ಕೆಲವು ಸುಧಾರಣೆಗಳನ್ನು ಮಾಡಿಕೊಂಡು

1. ಈ ಶಾಖೆಯನ್ನು ಜಾನ್ ಕ್ಯಾಲ್ವಿನ್ ಎಂಬಾತನು (ಕ್ರಿ.ಶ.1509-1564) ಸ್ಥಾಪಿಸಿದನು.

ಕೊನೆಗೆ ಪೂರ್ಣವಾಗಿ '**ಯೂನಿಟೇರಿಯನ್**' ಎಂಬ ಏಕವ್ಯೂಹವಾದದ ಹೊಸ ಸಂಪ್ರದಾಯಕ್ಕೆ ಪ್ರವರ್ತಕನಾದನು.

ಕ್ಯಾಲ್ವಿನ್ ಮತದಲ್ಲಿ ಪರಮೇಶ್ವರನು ತಂದೆ, ಮಗ, ಪವಿತ್ರಾತ್ಮ- ಎಂದು ವ್ಯೂಹತ್ರಯಾತ್ಮಕನಾಗಿರುವನೆಂಬ ನಂಬಿಕೆಯಿದೆ. ಪರಮೇಶ್ವರನ ಅದ್ವಿತೀಯತ್ವದಲ್ಲಿ ಹೆಚ್ಚು ಹೆಚ್ಚು ವಿಶ್ವಾಸವನ್ನು ಪಡೆದುಕೊಂಡ ಚಾನ್ನಿಂಗನಿಗೆ ಈ ನಂಬಿಕೆಯು ಯುಕ್ತಿಗೂ ಶಾಸ್ತ್ರಕ್ಕೂ ವಿರುದ್ಧವಾಗಿರುವದಲ್ಲದೆ ತನಗೆ ತಾನೇ ವಿರುದ್ಧವಾಗಿಯೂ ಇರುವದೆಂದು ತೋಚಿತು. ದೇವರು ಮುಕ್ತಿಯೋಗ್ಯರನ್ನು ತಾನೇ ಆರಿಸಿಕೊಂಡು ಅವರಿಗೆ ಪೂರ್ಣಮುಕ್ತಿಯನ್ನು ಕೊಡುತ್ತಾನೆಂದೂ ಪಾಪಿಷ್ಠರಿಗೆ ಸ್ವಪ್ರಯತ್ನದಿಂದ ಧರ್ಮಮಾರ್ಗವಾಗಲಿ ಪಶ್ಚಾತ್ತಾಪವಾಗಲಿ ಎಂದಿಗೂ ದಕ್ಕಲಾರದೆಂದೂ ಮುಕ್ತಿಗೆ ಪರಮೇಶ್ವರನ ಪ್ರಸಾದವೇ ಮುಖ್ಯವೆಂದೂ ಹೇಳುತ್ತಿದ್ದ ಕ್ಯಾಲ್ವಿನ್ ಸಂಘದವರ ಉಪದೇಶವು ಇವನಿಗೆ ಸ್ವಲ್ಪವೂ ಸರಿಬೀಳಲಿಲ್ಲ. ದಯಾಳುವೂ ನ್ಯಾಯಪ್ರಿಯನೂ ಆಗಿರುವ ಭಗವಂತನು ಚೇತನರಾದ ಮನುಷ್ಯರನ್ನು ತಾನೇ ಸೃಷ್ಟಿಸಿ, ಅದರಲ್ಲಿಯೇ ಕೆಲವರನ್ನು ಮಾತ್ರ ನಿತ್ಯಸುಖಕ್ಕೂ ಉಳಿದವರನ್ನು ನಿತ್ಯನರಕಕ್ಕೂ ಗುರಿಮಾಡುವನೆಂಬ ಮಾತು ಅವನಿಗಾಗಲಿ ಅವನ ಅನುಯಾಯಿಗಳಿಗಾಗಲಿ ಎಳ್ಳಷ್ಟೂ ಒಪ್ಪಾಗಲಿಲ್ಲ.

ನಾವೆಲ್ಲರೂ ಭಗವಂತನ ಮಕ್ಕಳೇ. ಜೀಸಸ್ ಕ್ರೈಸ್ತನು ತಾನು ದೇವರ ಮಗನೆಂಬುದನ್ನು ಮರೆಯದೆ ಅನುಭವದಲ್ಲಿಟ್ಟುಕೊಂಡು ಮಿಕ್ಕವರೆಲ್ಲರಿಗೂ ಈ ಘನತತ್ತ್ವವನ್ನು ಬೋಧಿಸಿದನು; ನಾವುಗಳು ಮಾತ್ರ ನಮ್ಮ ಅಲೋಚನೆಗಳಿಂದಲೂ ಕೃತ್ಯಗಳಿಂದಲೂ ಈ ದಿವ್ಯಪುತ್ರತ್ವಕ್ಕೆ ಕಲಂಕವನ್ನು ತಂದುಕೊಂಡಿರುತ್ತೇವೆ. ಆದರೂ ಭಗವಂತನು ನಮ್ಮೆಲ್ಲರಲ್ಲಿಯೂ ಪ್ರೇಮಭರಿತನಾಗಿ ಪುತ್ರವಾತ್ಸಲ್ಯದಿಂದ ನಮ್ಮ ತಪ್ಪುಗಳನ್ನೆಲ್ಲ ಕ್ಷಮಿಸುವದಕ್ಕೆ ಸಿದ್ಧನಾಗಿರುತ್ತಾನೆ. ನಾವು ಮಾಡಿರುವ ಪಾಪಗಳಿಗಾಗಿ ನಮ್ಮಲ್ಲಿ ಆತನಿಗೆ ಮರುಕವಿದೆಯೇ ಹೊರತು ಕೋಪವಿರುವದಿಲ್ಲ. ಅವನಿಗೆ ಯಾವ ಬಲಿಯೂ ಬೇಕಾಗಿರುವದಿಲ್ಲ, ಅವನು ರಕ್ತಪ್ರಿಯನಲ್ಲ. ಜೀಸಸ್‌ಕ್ರೈಸ್ತನು ತೋರಿಸಿಕೊಟ್ಟಿರುವ ಪರಿಶುದ್ಧಮಾರ್ಗದಲ್ಲಿ ನಡೆದುಕೊಳ್ಳುವಂತೆ ಬಗೆಬಗೆಯ ರೀತಿಯಿಂದ ನಮ್ಮನ್ನೆಲ್ಲರನ್ನೂ ಆ ಪರಮೇಶ್ವರನೇ ಪ್ರೇರಿಸುತ್ತಿರುತ್ತಾನೆ. ಹೀಗೆಂಬುದು ಏಕವ್ಯೂಹವಾದಿಗಳ ದೃಢತನವಾದ ನಂಬಿಕೆ.

ಚಾನ್ನಿಂಗನು ಸ್ವಭಾವದಿಂದ ವಾದಪ್ರಿಯನಲ್ಲದಿದ್ದರೂ ಪ್ರತಿವಾದಿಗಳು ಈ ಪಂಗಡದವರ ಮೇಲೆ ಆರೋಪಿಸಿದ್ದ ದೋಷಗಳನ್ನೆಲ್ಲ ಪರಿಹರಿಸಿ ಏಕವ್ಯೂಹವಾದದಲ್ಲಿರುವ ಶ್ರೇಷ್ಠತೆಯನ್ನು ತೋರಿಸುವದಕ್ಕಾಗಿ ''**ಬಾಲ್ಟಿಮೋಡ್ ವ್ಯಾಖ್ಯಾನ**''ವೆಂಬ ಒಂದು ಉತ್ತಮ ಉಪನ್ಯಾಸವನ್ನು ಮಾಡಿದನು. ಅದರಿಂದ ಏಕವ್ಯೂಹವಾದಿಗಳ ಅಭಿಪ್ರಾಯವು ನಿಸ್ಸಂದಿಗ್ಧವಾಗಿ ಜನರಿಗೆ ತಿಳಿಯುವದಕ್ಕವಕಾಶವಾಯಿತು. ಚಾನ್ನಿಂಗನು ಈ ಮತದಲ್ಲಿ ಭಕ್ತಿಯ ಬೆಳವಣಿಗೆಗೆ ಇರುವ ಹೆಚ್ಚಿನ ಸೌಕರ್ಯವನ್ನು ತೋರಿಸಿಕೊಟ್ಟು ಮತ್ತೆ ಕೆಲವು ಭಾಷಣಗಳನ್ನು ಮಾಡಿದನು. ಎಲ್ಲಿ ಗುಣವಿದ್ದರೂ ಗ್ರಹಣಮಾಡುತ್ತಾ ತತ್ತ್ವಪಕ್ಷಪಾತಿಯಾಗಿಯೇ ಮಾತನಾಡುತ್ತಿದ್ದದ್ದರಿಂದ ಆತನು ಎಲ್ಲರ ಮನಸ್ಸನ್ನೂ ಬಲು ಬೇಗನೆ ತನ್ನ ಕಡೆಗೆ ಸೆಳೆದುಕೊಂಡು ಪ್ರಖ್ಯಾತನಾದನು.

ಕ್ರಿ.ಶ.1830ರಿಂದ ಚಾನ್ನಿಂಗನು ಮತಬೋಧನೆಯ ಜೊತೆಗೆ ಸಮಾಜ ಸುಧಾರಣೆ, ರಾಜಕೀಯಸುಧಾರಣೆ, ಲೋಕೋಪಕಾರದ ಕೆಲಸಗಳು– ಇವುಗಳಲ್ಲಿಯೂ ಕೈಹಾಕುತ್ತಾ ಬಂದನು. ಗುಲಾಮರನ್ನಿಟ್ಟುಕೊಳ್ಳುವ ಪದ್ಧತಿಯನ್ನು ನಾಶಗೊಳಿಸುವದಕ್ಕೆಂದು ಕೆಲವರು ಉದಾರಾಶಯರು ಪ್ರಯತ್ನಪಡುತ್ತಿರುವದನ್ನು ಕಂಡು ಅದಕ್ಕೆ ಮನಃಪೂರ್ವಕವಾಗಿ ಒತ್ತಾಸೆಯನ್ನಿತ್ತನು. ಬೋಸ್ಟನ್ ನಗರದಲ್ಲಿ ಅನಾಥರ ಪೋಷಣೆಗಾಗಿ ಮಾಡಿದ್ದ ಏರ್ಪಾಡುಗಳಿಗೆ ಬಹು ಮಟ್ಟಿಗೆ ಸಹಾಯವನ್ನು ಮಾಡಿದನು. ವಿದ್ಯಾಭ್ಯಾಸ, ಬಂದಿಗಳ ಸುಧಾರಣೆ, ಮರಣದಂಡನೆಯ ನಿವಾರಣೆ, ಮದ್ಯಪಾನನಿರೋಧ, ವೃದ್ಧರಿಗೂ ರೋಗಿಗಳಿಗೂ ಸಾಲದಲ್ಲಿ ಮುಳುಗಿ ಸಂಕಟಪಡುತ್ತಿರುವವರಿಗೂ ಮಾಡಬೇಕಾದ ಸಹಾಯ– ಇವುಗಳಲ್ಲೆಲ್ಲ ಹೆಚ್ಚುಹೆಚ್ಚು ಶ್ರದ್ಧೆಯನ್ನು ವಹಿಸುತ್ತಾ ಕ್ರಿಸ್ತಿಯನ್ ಧರ್ಮದ ಮೇಲ್ಮೆಯು ವ್ಯಕ್ತವಾಗಬೇಕಾದರೆ ಜನೋಪಕಾರದಲ್ಲಿಯೇ ಎಂಬ ಭಾವನೆಯನ್ನು ಮೈದುಂಬಿಸಿಕೊಂಡನು. ಪರಮೇಶ್ವರನ ಕಣ್ಣಿನಲ್ಲಿ ಎಲ್ಲರೂ ಸಮಾರು, ಅತ್ಯಂತ ನೀಚನಲ್ಲಿಯೂ ಸದ್ಗತಿಗೆ ಬರುವ ಯೋಗ್ಯತೆಯು ಅವ್ಯಕ್ತರೂಪದಲ್ಲಿದ್ದೇ ಇರುತ್ತದೆ. ಯಾರನ್ನಾದರೂ ಶರೀರದಿಂದಾಗಲಿ ಮನಸ್ಸಿನಿಂದಾಗಲಿ ದಾಸ್ಯದಲ್ಲಿರಿಸುವದು ಸರ್ವಥಾ ಅನುಚಿತವು. ತಪ್ಪು ಹಾದಿಯನ್ನು ತುಳಿಯುವವರನ್ನು ಎಚ್ಚರಿಸಿ ಒಳ್ಳೆಯ ಮಾರ್ಗಕ್ಕೆ ತರುವದಕ್ಕೆ ತನ್ನ ಕೈಯಲ್ಲಾದ ಮಟ್ಟಿಗೂ ಪ್ರತಿಯೊಬ್ಬನೂ ಪ್ರಯತ್ನಿಸಬೇಕು– ಎಂಬುದು ಈತನ ಜೀವನಪಥದ ಸೂತ್ರವಾಗಿದ್ದಿತು. ಈ ಸೂತ್ರಕ್ಕನುಸಾರವಾಗಿ

ತನ್ನ ಹೃದಯವನ್ನು ಅರಳಿಸಿಕೊಳ್ಳುತ್ತಾ ಪರೋಪಕಾರದಲ್ಲಿಯೇ ನಿರತನಾಗಿದ್ದು ಚಾನ್ನಿಂಗನು ತನ್ನ ಅರುವತ್ತೆರಡನೆಯ ವರ್ಷದಲ್ಲಿ ಕ್ರಿ.ಶ.1842ರಲ್ಲಿ ಈ ಲೋಕವನ್ನು ಬಿಟ್ಟು ತೆರಳಿದನು. ಈ ಮಹಾಶಯನ ಕೀರ್ತಿಯು ಅಮೆರಿಕದಲ್ಲಿಯೇ ಅಲ್ಲದೆ ಇಂಗ್ಲೆಂಡು, ಇಂಡಿಯ, ಜಪಾನು, ಚೈನ, ಸಿರಿಯ-ಮುಂತಾದ ಕಡೆಗಳಲ್ಲಿಯೂ ಹಬ್ಬಿರುತ್ತದೆ. ಆತನ ಉಪದೇಶವು ಕ್ರಿಸ್ತಿಯನ್ನರಲ್ಲಿಯೇ ಅಲ್ಲದೆ ಕೆಲವರು ಹಿಂದುಗಳಲ್ಲಿಯೂ ಮಹಮ್ಮದೀಯರಲ್ಲಿಯೂ ಕೂಡ ಮೆಚ್ಚಿಗೆಯನ್ನು ಪಡೆದಿರುತ್ತದೆಯೆಂದು ಅನೇಕ ಆಧಾರಗಳಿಂದ ತಿಳಿಯಬರುತ್ತದೆ.

★★★★★

# ಸೇಂಟ್ ಫ್ರಾನ್ಸಿಸ್

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಧನಿಕರ ವಂಶದಲ್ಲಿ ಹುಟ್ಟಿ ವಿಷಯಲಂಪಟರಾಗಿ ಕಾಲಹಾಕುವವರಿಗೂ ಕಾಲಕರ್ಮಸಂಯೋಗದಿಂದ ಉತ್ಕಟವಾದ ವೈರಾಗ್ಯವು ಉಂಟಾಗಬಹುದು, ಅಂಥವರನ್ನೇ ನಿಮಿತ್ತವಾಗಿ ಮಾಡಿಕೊಂಡು ಭಗವಂತನು ಧರ್ಮಸ್ಥಾಪನೆಯನ್ನು ಮಾಡಬಹುದು - ಎಂಬುದಕ್ಕೆ ಇಟಲಿಯ ಅಸಿಸಿಯೆಂಬಲ್ಲಿ ಜನಿಸಿದ ಫ್ರಾನ್ಸಿಸ್ಸನು ಉತ್ತಮವಾದ ಉದಾಹರಣೆಯಾಗಿರುತ್ತಾನೆ. ಆತನು ಪೀಟರ್ ಒನರ್ಡೋನಿ ಎಂಬ ಒಬ್ಬ ಶ್ರೀಮಂತ ಜವಳಿ ವ್ಯಾಪಾರಿಯ ಮಗನಾಗಿದ್ದು ಶ್ರೀಮಂತರ ಮಕ್ಕಳೊಡನೆಯೇ ತುಂಟಾಟಗಳನ್ನಾಡುತ್ತಾ ಬಾಲ್ಯವನ್ನು ಕಳೆದನು. ಆದರೆ ಒಮ್ಮೆ ಭಯಂಕರವಾದ ಒಂದು ರೋಗಕ್ಕೆಸಿಕ್ಕಿದ ಬಳಿಕ ಅವನ ದೃಷ್ಟಿಕೋಣವೇ ಪೂರ್ತಿಯಾಗಿ ಮಾರ್ಪಟ್ಟುಬಿಟ್ಟಿತು. ಅಂದಿನಿಂದ ಅವನಿಗೆ ತನ್ನ ಹುರುಳಿಲ್ಲದ ಜೀವನದಲ್ಲಿ ಬೇಸರವುಂಟಾಯಿತು; ಏಕಾಂತವಾಸದಲ್ಲಿ ಸುಖವಿರುವದೆಂಬುದು ಮನಸ್ಸಿಗೆ ಹೊಳೆಯಿತು; ಯಾವದಾದರೊಂದು ಮಹಾಕಾರ್ಯವನ್ನು ಮಾಡಿ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂದು ಹಂಬಲವೂ ಉಂಟಾಯಿತು.

ಆಗಿನ ಕಾಲದಲ್ಲಿ ಧರ್ಮಪೀಠದ ಮಹಿಮೆಯನ್ನು ಕಾಪಾಡುವದಕ್ಕೆ ಯುದ್ಧಮಾಡುವದೆಂಬುದೊಂದು ಮಹಾಯಶಸ್ಕರವಾದ ಕಾರ್ಯವೆಂದು

ಯುವಕರ ಭಾವನೆಯಿತ್ತು. ಫ್ರಾನ್ಸಿಸ್ಸನು ತಾನೂ ಒಂದು ಧರ್ಮಯುದ್ಧದಲ್ಲಿ ಕೀರ್ತಿಯನ್ನು ಹೊಂದಬೇಕೆಂದು ಒಬ್ಬಾನೊಬ್ಬ ಪ್ರಸಿದ್ಧಯೋಧನ ಸಹಾಯಕನಾಗಿ ಹೊರಟನು. ಆದರೆ ಪಯಣದ ಮೊಟಮೊದಲನೆಯ ದಿನವೇ ಅವನಿಗೊಂದು ಕನಸಾಯಿತು. ಇಡಿಯ ಜಗತ್ತಿನ ಯಜಮಾನನಾದ ಭಗವಂತನ ಸೇವೆಯನ್ನು ಬಿಟ್ಟು ಸ್ವಯಂದಾಸರಾಗಿರುವವರ ಸೇವೆಯನ್ನು ಕೈಕೊಳ್ಳುವದು ಉಚಿತವಲ್ಲವೆಂದು ಅವನಿಗೆ ತೋಚಿತು. ಕನಸಿನಲ್ಲಿ ದಿವ್ಯಸುಂದರಳೂ ಸರ್ವೈಶ್ವರ್ಯಸಂಪನ್ನಳೂ ಆದ ಒಬ್ಬ ಕನ್ಯಕೆಯು ಕಾಣಿಸಿಕೊಂಡಳು. ಆಕೆಯೇ ನಿರ್ಮಮತಾದೇವಿಯೆಂದೂ ಆಕೆಯ ಕಷ್ಟನಿವಾರಣೆಯನ್ನು ಮಾಡಿ ಅವಳನ್ನು ಮನವೊಲಿಸಿಕೊಳ್ಳುವ ಧರ್ಮವೀರನಾಗುವದೇ ತನ್ನ ಜನ್ಮದ ಸಾಫಲ್ಯವೆಂದೂ ಫ್ರಾನ್ಸಿಸ್ಸನು ನಿಶ್ಚಯಿಸಿಕೊಂಡನು.

ಇನ್ನು ಮೇಲೆ ಫ್ರಾನ್ಸಿಸ್ಸನ ಹಳೆಯ ಜೀವನವು ಸಂಪೂರ್ಣವಾಗಿ ಮಾಯವಾಯಿತು; ಹಣವಂತರ ಒಣಹೆಮ್ಮೆಯು ಈಗ ಅವನಿಗೆ ಒಗ್ಗದೆಹೋಯಿತು. ಹಿಂದೆ ತಾನು ಮಾಡಿದ ಅಪರಾಧಕ್ಕೆ ಕಪ್ಪುಕಾಣಿಕೆಯನ್ನು ಒಪ್ಪಿಸುವಂತೆ ಕೂಡಲೆ ಅವನು ಬಡವರು, ರೋಗಿಷ್ಠರು - ಇವರುಗಳ ಸೇವೆಯಲ್ಲಿಯೇ ನಿರತನಾಗಿರುವೆನೆಂದು ಸಂಕಲ್ಪಿಸಿಕೊಂಡನು.

ತಂದೆಯು ಮಗನ ನಡೆನುಡಿಗಳಲ್ಲಿ ಆಗುತ್ತಿದ್ದ ಈ ಬದಲಾವಣೆಗಳನ್ನು ಕಂಡು ಬೆಚ್ಚಿದನು. ತನ್ನ ಗೌರವಕ್ಕೆ ತಕ್ಕಂತೆ ಶ್ರೀಮಂತರ ಸಹವಾಸವನ್ನು ಬೆಳೆಸಿಕೊಳ್ಳದೆ ಈ ಹುಚ್ಚನು ದಟ್ಟದರಿದ್ರರ ಮತ್ತು ತೊನ್ನುಬಡುಕರ ಜೊತೆಯಲ್ಲಿ ಕಾಲಕಳೆಯುತ್ತಿರುವನಲ್ಲ! - ಎಂದು ಮನದಲ್ಲಿ ಕುದಿಯುತ್ತಾ ಅವನಿಗೆ ಬುದ್ಧಿಹೇಳಿದನು, ಬಯ್ದನು, ಗದರಿಸಿದನು. ಇದರಿಂದ ಫ್ರಾನ್ಸಿಸ್ಸನು ರಾತ್ರೆ ಮನೆಗೆ ಹೊತ್ತುಮೀರಿ ಬರುವದೊಂದು ಹೊರತು ಮತ್ತೆ ಯಾವ ಫಲವೂ ಉಂಟಾಗಲಿಲ್ಲ. ಅವನು ಹತ್ತಿರದಲ್ಲಿಯೇ ಇದ್ದ ಸೇಂಟ್ ಡೇಮಿಯನ್ ಪ್ರಾರ್ಥನಾಮಂದಿರಕ್ಕೆ ಹೋಗಿ ''ಭಗವಂತನೆ, ನನ್ನ ಸಕಲ ವೃತ್ತಿಗಳೂ ನಿನ್ನ ಸಂಕಲ್ಪಕ್ಕನುಗುಣವಾಗಿಯೇ ನಡೆಯುವಂತೆ ಅನುಗ್ರಹಿಸು!''ಎಂದು ಮೊರೆಯಿಡುತ್ತಿದ್ದನು. ಒಂದು ದಿನ ಅವನಿಗೆ ''ಮಗುವೆ, ನನ್ನ ಮಂದಿರವನ್ನೆಲ್ಲ ಜನರು ಹಾಳುಮಾಡಿದ್ದಾರೆ. ನಡೆ, ನೀನು ಅದನ್ನು ಜೀರ್ಣೋದ್ಧಾರಮಾಡು!'' ಎಂಬ ದಿವ್ಯವಾಣಿಯೊಂದು ಕೇಳಬಂತು. ಫ್ರಾನ್ಸಿಸ್ಸನ ಸಂಕಲ್ಪವು ಈಗ ಇನ್ನಷ್ಟು ದೃಢವಾಯಿತು.

ಬರ್ನಾರ್ಡೋನಿಯು ಮಗನನ್ನು ಹುಡುಕಿ ಇವನಿಗೆ ರೋಗದಿಂದ ಹುಚ್ಚು ಹಿಡಿದಿರಬೇಕೆಂದು ಭಾವಿಸಿ ಅವನನ್ನು ತನ್ನ ಮನೆಯ ಒಂದು ಕತ್ತಲೆಕೋಣೆಯಲ್ಲಿಟ್ಟು ಬೀಗಹಾಕಿದನು; ಆದರೆ ತಾಯಿಯ ಪ್ರೇಮವು ಅವನನ್ನು ಬಿಡುಗಡೆಮಾಡಿತು. ಬರ್ನಾರ್ಡೋನಿಯು ರೇಗಿದನು. ಮಗನನ್ನು ಊರಿನಿಂದಾಚೆಗೆ ಅಟ್ಟಬೇಕೆಂದು ಸರಕಾರದವರಲ್ಲಿ ಬಿನ್ನಹಮಾಡಿಕೊಂಡನು; ಅವರು ಈ ಬಿನ್ನಹಕ್ಕೆ ಕಿವಿಗೊಡದಿರಲು ಧರ್ಮಾಧಿಕಾರಿಗಳಲ್ಲಿ ದೂರಿಟ್ಟನು. ತಂದೆಯ ಸ್ವತ್ತು ಏನಿದ್ದರೂ ಫ್ರಾನ್ಸಿಸ್ಸನು ಕೊಟ್ಟುಬಿಡಬೇಕೆಂದು ಧರ್ಮಸ್ಥಾನದಲ್ಲಿ ತೀರ್ಪಾಯಿತು. ಫ್ರಾನ್ಸಿಸ್ಸನು ಕೂಡಲೆ ತನ್ನ ಮೈಮೇಲಿದ್ದ ಬಟ್ಟೆಗಳನ್ನು ಮೂಟೆಕಟ್ಟಿ ಇದ್ದಷ್ಟು ಹಣವನ್ನು ತಂದು ಅಧಿಕಾರಿಗಳ ಮುಂದೆ ಇಟ್ಟು ''ಸರ್ವರೂ ಆಲಿಸಿರಿ! ಇನ್ನು ಮುಂದೆ ನನಗೆ ನಿಜವಾದ ತಂದೆಯೆಂದರೆ ಪರಲೋಕದೊಡೆಯನಾದ ಪರಮಪಿತನಾದ ಭಗವಂತನೇ; ಆತನನ್ನು ಬಿಟ್ಟು ಮತ್ತೆಯಾರ ಮಾತನ್ನೂ ನಾನು ಆಡುವ ಹಾಗಿಲ್ಲ!'' ಎಂದು ಪ್ರತಿಜ್ಞೆಮಾಡಿಬಿಟ್ಟನು!

ವಿರಕ್ತಿಗಿಂತ ಹೆಚ್ಚಿನ ಸಂಪತ್ತಿಲ್ಲವೆಂಬುದು ಈಗ ಫ್ರಾನ್ಸಿಸಿನ ಪೂರ್ಣಾನುಭವಕ್ಕೆ ಗೋಚರವಾಯಿತು. ಅನನ್ಯಚಿತ್ತದಿಂದ ಉಪಾಸನೆಮಾಡುವವರ ಯೋಗಕ್ಷೇಮವನ್ನು ಭಗವಂತನೇ ಹೊತ್ತಿರುವನೆಂಬುದೂ ಸ್ಪಷ್ಟವಾಗಿ ಮನವರಿಕೆಯಾಯಿತು. ಇನ್ನು ಅವನು ಪರಮೇಶ್ವರನ ಆದೇಶದಂತೆ ದೇವಮಂದಿರವನ್ನು ಜೀರ್ಣೋದ್ಧಾರಮಾಡುವ ಸಂಕಲ್ಪವನ್ನು ಕಾರ್ಯರಂಗಕ್ಕೆ ಇಳಿಸುವದಕ್ಕೆ ಮೊದಲು ಮಾಡಿದನು. ಮೊಟ್ಟಮೊದಲು ಪರಮೇಶ್ವರನ ಆದೇಶವಾಕ್ಯಕ್ಕೆ ಲಕ್ಷರಾರ್ಥವನ್ನು ಕಲ್ಪಿಸಿಕೊಂಡು ಸುತ್ತುಮುತ್ತಲಿನ ಪ್ರಾರ್ಥನಾಲಯಗಳನ್ನು ಆಸ್ತಿಕರ ಸಹಾಯದಿಂದ ಜೀರ್ಣೋದ್ಧಾರಮಾಡುವ ಕೆಲಸವನ್ನು ಹಿಡಿದನು. ಆದರೆ ಪೇಡುಗಲ್ಲುಗಳನ್ನು ಹೊತ್ತು ತಂದು ದೇವಾಲಯಗಳನ್ನು ಕಟ್ಟುವದಕ್ಕಿಂತಲೂ ಜನರ ಹೃದಯದಲ್ಲಿ ಪರಮೇಶ್ವರನ ಭವ್ಯಮಂದಿರವನ್ನು ಕಟ್ಟುವದೇ ತನ್ನ ಜನ್ಮದ ಪರಮೋದ್ದೇಶವೆಂಬುದು ಅವನಿಗೆ ಬೇಗ ಕಂಡುಬಂದಿತು.

ಈ ಕಾರ್ಯಕ್ಕೆ ಅವನಂತೆಯೇ ಧೀರರಾದ ಕೆಲವರ ಸಹಾಯವೂ ದೊರಕಿತು. ಕ್ರೈಸ್ತನಿಗೆ ಹನ್ನೆರಡು ಜನ ಕಾರ್ಯಸಾಧಕರಾದ ಶಿಷ್ಯರು ದೊರಕಿದಂತೆ ಫ್ರಾನ್ಸಿಸ್ಸನಿಗೂ ಹನ್ನೆರಡು ಜನ ಮುಖ್ಯಶಿಷ್ಯರಾದರು. ಅವರದೇ ಒಂದು ಹೊಸ ಸಂಘವಾಯಿತು.

''ನೀವು ಎಲ್ಲಿಗೆ ಹೋದರೂ ದೇವರಾಜ್ಯವು ಹತ್ತಿರದಲ್ಲಿಯೇ ಇರುವದೆಂದು ಬೋಧಿಸಿರಿ. ರೋಗಿಗಳನ್ನು ಗುಣಪಡಿಸಿರಿ. ತೊನ್ನುಬಡುಕರನ್ನು ಶುದ್ಧಿಗೊಳಿಸಿರಿ, ದೆವ್ವಗಳನ್ನು ಬಿಡಿಸಿರಿ. ಪರಮೇಶ್ವರನು ನಿಮಗೆ ಹೇಗೆ ಉಚಿತವಾಗಿ ಕೊಟ್ಟಿರುವನೋ ನೀವೂ ಹಾಗೆಯೇ ಮಿಕ್ಕವರಿಗೂ ಉಚಿತವಾಗಿಯೇ ದಾನಮಾಡಿರಿ. ಬೆಳ್ಳಿಯ ನಾಣ್ಯವನ್ನಾಗಲಿ, ಚಿನ್ನದ ನಾಣ್ಯವನ್ನಾಗಲಿ. ಹಿತ್ತಾಳೆಯ ನಾಣ್ಯವನ್ನಾಗಲಿ, ಚೀಲದಲ್ಲಿಟ್ಟುಕೊಳ್ಳಬೇಡಿರಿ; ಬಟ್ಟೆಬರೆಯನ್ನಾಗಲಿ ಎರಡು ಅಂಗಿಗಳನ್ನಾಗಲಿ ಮೆಟ್ಟುಗಳನ್ನಾಲಿ ಕೋಲನ್ನಾಗಲಿ ಇಟ್ಟುಕೊಳ್ಳಬೇಡಿರಿ, ಏಕೆಂದರೆ ಕಷ್ಟಪಡುವವರಿಗೆ ಬೇಕಾದ ಅನ್ನವಸ್ತ್ರಾದಿಗಳು ದೊರತೇ ತೀರುವವು''– ಎಂಬ ಕ್ರೈಸ್ತನ ಉಪದೇಶವನ್ನೇ ಅವರು ತಮ್ಮ ಜೀವನದ ಸೂತ್ರವಾಕ್ಯವಾಗಿ ಮಾಡಿಕೊಂಡಿದ್ದರು.

ಪ್ರಾನ್ಸಿಸ್ಸನು ಬರಿಯ ಬಾಹ್ಯಸಂನ್ಯಾಸವನ್ನು ಮಾತ್ರ ಆಚರಣೆಗೆ ತರಲಿಲ್ಲ; ಸಕಲವಿಧವಾದ ಅಭಿಮಾನವನ್ನೂ ತ್ಯಜಿಸುವ ಒಳಸಂನ್ಯಾಸಕ್ಕೆ ಅವನ ಸಂಘದಲ್ಲಿ ಬಹಳ ಹೆಚ್ಚಿನ ಬೆಲೆಯಿದ್ದಿತು. ಅಮಾನಿತ್ವ, ವಿನಯ, ತಿತಿಕ್ಷೆ, ಸಾರ್ವತ್ರಿಕ ಪ್ರೇಮ – ಇವುಗಳು ಅವನಲ್ಲಿಯೂ ಅವನ ಶಿಷ್ಯಮಂಡಲಿಯವರಲ್ಲಿಯೂ ಅತ್ಯಂತ ಪ್ರಧಾನವಾಗಿದ್ದವು. ಅವನು ಅತ್ಯಂತ ಮಿತವಾದ ಆಹಾರದಿಂದ ತೃಪ್ತನಾಗಿ ರುತ್ತಿದ್ದನು. ಸಂಘದವರಿಗೆಲ್ಲ ಈ ಮಿತಜೀವನವು ಆದರ್ಶವಾಗಿರುತ್ತಿತ್ತು. ಸಂಘದವರು ತಮ್ಮನ್ನು ಯಾರು ಏನೆಂದರೂ ಲೆಕ್ಕಿಸದೆ ಎಲ್ಲರನ್ನೂ ಪ್ರೀತಿಸುತ್ತಾ ಆನಂದದಿಂದ ಕಾಲಕ್ಷೇಪವನ್ನು ಮಾಡುತ್ತಿರುವದನ್ನು ಕಂಡು ಎಷ್ಟೋ ಜನರು ತಾವು ಅವರಲ್ಲಿ ತೋರಿಸಿದ ಅನಾದರಕ್ಕೆ ಮನ್ನಣೆಯನ್ನು ಬೇಡುತ್ತಿದ್ದರು, ಆಮೇಲೆ ಅವರ ಸದುಪದೇಶದ ಲಾಭವನ್ನೂ ಹೊಂದುತ್ತಿದ್ದರು.

ಪ್ರಾನ್ಸಿಸ್ಸನ ಸಂಘದವರಿಗೆ ಮೊದಮೊದಲು 'ಪಶ್ಚಾತ್ತಾಪಿ'ಗಳು (Penitents) ಎಂಬ ಹೆಸರಿತ್ತು. ಆಮೇಲೆ ಅವರು 'ಎಲ್ಲರ ಆಡಿಯಾಳುಗಳು' (Fretres Minori) ಎಂಬರ್ಥದ ಹೆಸರನ್ನಿಟ್ಟುಕೊಂಡರು. ಈ ಹೆಸರು ಅವರಿಗೆ ಅನ್ವರ್ಥವಾಗಿಯೇ ಇತ್ತು, ಏಕೆಂದರೆ ಪ್ರಾನ್ಸಿಸ್ಸನನ್ನು ಮೊದಲುಗೊಂಡು ಅವರೆಲ್ಲರೂ ಯಾವದಾದರೊಂದು ಕಸುಬನ್ನು ಕಲಿತುಕೊಂಡು ಪ್ರತಿಫಲಾಪೇಕ್ಷೆಯೇ ಇಲ್ಲದೆ ಜನರ ಸೇವೆಯನ್ನು ಮಾಡುತ್ತಿದ್ದರು, ಕೈಕಷ್ಟವಿಲ್ಲದೆ ಸುಮ್ಮನೆ ಕುಳಿತು ಒಂದು ದಿನವೂ ಅವರು ಊಟವನ್ನು ಮಾಡಿದ್ದಿಲ್ಲ.

ಈ ಸಂಘದಲ್ಲಿ ಮೊದಮೊದಲು ಗಂಡಸರೇ ಇರುತ್ತಿದ್ದರು. ಆದರೆ ಲೇಡಿ ಕ್ಲೇರ್ ಎಂಬ ಶ್ರೀಮಂತ ಮಹಿಳೆಯೊಬ್ಬಳು ಬಂದ ಮೇಲೆ ಸ್ತ್ರೀಯರಿಗಾಗಿಯೂ ಒಂದು ಸಂಘವು ಏರ್ಪಟ್ಟಿತು. ಈ ಎರಡು ಸಂಘಗಳಲ್ಲಿ ಸೇರುವವರೂ ತಮ್ಮದೆಂಬ ಆಸ್ತಿಯಾವದನ್ನೂ ಇಟ್ಟುಕೊಳ್ಳದೆ ಭಿಕ್ಷುಭಿಕ್ಷುಣಿಯರಾಗಿಯೇ ಇರಬೇಕೆಂದು ನಿಯಮವಿತ್ತು. ಭಿಕ್ಷುಗಳು ಮುಖ್ಯವಾಗಿ ಧ್ಯಾನೋಪದೇಶಗಳನ್ನು ಕೈಕೊಳ್ಳುತ್ತಿದ್ದರು. ಜನರಿಗೆ ಉಪಕಾರದ ಕೆಲಸಗಳನ್ನು ಮಾಡಿಕೊಟ್ಟು ಸಂಘದ ವೃತ್ತಿಗೆ ಬೇಕಾದ ಆಹಾರಾದಿಪದಾರ್ಥಗಳನ್ನು ತರುತ್ತಿದ್ದರು. ಭಿಕ್ಷುಣಿಯರು ಧ್ಯಾನ, ರೋಗಿಗಳ ಉಪಚಾರ, ಹೆಣಿಗೆ, ನೇಗೆಯ ಕೆಲಸ-ಮುಂತಾದವುಗಳನ್ನು ಮಾಡುತ್ತಿದ್ದರು. ಫ್ರಾನ್ಸಿಸ್ಸನು ಕಾಲ ಕ್ರಮದಲ್ಲಿ ತೃತೀಯಸಂಘ (Tertiary) ಎಂಬ ಮೂರನೆಯ ಸಂಘವೊಂದನ್ನು ಏರ್ಪಡಿಸಿದನು. ಈ ಸಂಘದಲ್ಲಿ ಗೃಹಸ್ಥರೂ ಸೇರಿಕೊಳ್ಳುವದಕ್ಕೂ ಅವಕಾಶವನ್ನು ಕಲ್ಪಿಸಲಾಯಿತು. ತೃತೀಯ ಸಂಘಕ್ಕೆ ಸೇರುವವರು ಧನಾಶೆಯನ್ನು ತೊರೆದಿರಬೇಕು; ಅವರು ಐಶ್ವರ್ಯವಂತರಾಗಿದ್ದರೆ ತಮ್ಮ ಖರ್ಚನ್ನು ಕಳೆದು ಮಿಕ್ಕದ್ದನ್ನೆಲ್ಲ ಪರಮೇಶ್ವರಸಮಾರಾಧನೆಗೆ ಅರ್ಪಿಸಿಬಿಡಬೇಕು; ಬಡವರಾಗಿದ್ದರೆ ಪ್ರತಿಫಲವನ್ನಪೇಕ್ಷಿಸದೆ ಕೆಲಸಮಾಡುತ್ತಾ ತಮ್ಮ ಹೊಟ್ಟೆಬಟ್ಟೆಗೆ ಬೇಕಾದಷ್ಟನ್ನು ಪರಮೇಶ್ವರನ ಛತ್ರದಲ್ಲಿ (The Table of the Lord) ತೆಗೆದುಕೊಳ್ಳಬೇಕು. ಎಲ್ಲರೂ ತಮ್ಮ ತಮ್ಮ ಕೆಲಸವನ್ನು ಪರಮೇಶ್ವರಾರ್ಪಣಬುದ್ಧಿಯಿಂದ ಮಾಡಬೇಕು-ಎಂಬ ನಿಯಮವಿತ್ತು.

ಈ ಅಡಿಯಾಳುಗಳು ಸಂಘವು ಬರುಬರುತ್ತಾ ದೊಡ್ಡದಾಗಿ ಬೆಳೆಯಿತು. ಜನತೆಯ ಮತ್ತು ಮಠಾಧಿಪತಿಗಳ ಪ್ರೀತಿಯನ್ನು ಸಂಪಾದಿಸಿಕೊಂಡಿತು. ಆಗಾಗ್ಗೆ ಸೇರುತ್ತಿದ್ದ ಮಹಾಸಮ್ಮೇಳನದಲ್ಲಿ ಸಂಘದವರೆಲ್ಲರೂ ಸೇರುತ್ತಿದ್ದರು; ಅಲ್ಲಿ ತಮ್ಮ ಕಷ್ಟನಷ್ಟಗಳನ್ನೆಲ್ಲ ಫ್ರಾನ್ಸಿಸ್ಸನಲ್ಲಿ ಬಿನ್ನವಿಸಿಕೊಳ್ಳುತ್ತಿದ್ದರು, ಅವನ ಉತ್ಸಾಹಭರಿತವಾದ ವಾಕ್ಕುಗಳಿಂದ ಉತ್ತೇಜಿತರಾಗಿ ಮತ್ತೆ ಹುರಿದುಂಬಿ ಉಪದೇಶಯಾತ್ರೆಗೆ ಹೊರಡುತ್ತಿದ್ದರು. ಈ ಸಂದರ್ಭಗಳಲ್ಲಿ ಫ್ರಾನ್ಸಿಸ್ಸನು ತಾನು ಸಂಘಕ್ಕೆಲ್ಲ ಒಡೆಯನೆಂಬ ಹೆಮ್ಮೆಯನ್ನು ಒಂದಿಷ್ಟೂ ತೋರಿಸಿಕೊಳ್ಳುತ್ತಿರಲಿಲ್ಲ; ಆದರೂ ಎಲ್ಲರೂ ಅವನಲ್ಲಿ ಅತ್ಯಂತಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು.

ಫ್ರಾನ್ಸಿಸ್ಸಿನ ಉಪದೇಶವು ಇಟಲಿಯಲ್ಲೆಲ್ಲ ಹಬ್ಬಿತು; ಬೇರೆಬೇರೆಯ ಸಮ್ಮೇಳನಗಳಲ್ಲಿ ಸಂಘವು ಕೈಕೊಂಡ ಧರ್ಮಯಾತ್ರೆಗಳಿಂದ ಯೂರೋಪಿನಲ್ಲೆಲ್ಲ

ಹರಡಿತು. ಅಷ್ಟೇ ಅಲ್ಲ, ವಿದೇಶಗಳಿಗೆ ಕೂಡ ಕ್ರೈಸ್ತಸಂದೇಶವು ಹೋಗುವದಕ್ಕೆ ಅವನ ಉತ್ಸಾಹವು ಕಾರಣವಾಯಿತು. ಅವನು ಬರಿಯ ಪುಸ್ತಕಪಾಠಿಯಾಗಿ ರದೆ ಹೃದಯವನ್ನರಳಿಸಿ ಮಾತನಾಡುತ್ತಿದ್ದದ್ದರಿಂದ ಜನರು ಗುಂಪು ಗುಂಪಾಗಿ ಆತನ ಉಪದೇಶಗಳನ್ನು ಕೇಳುವದಕ್ಕೆ ಬರುತ್ತಿದ್ದರು. ಅವನಲ್ಲಿ ಅನೇಕ ಸಿದ್ಧಿಗಳೂ ತೋರಿಕೊಂಡವು. ಅವನ ಸ್ಪರ್ಶಮಾತ್ರದಿಂದಲೂ ದರ್ಶನಮಾತ್ರದಿಂದಲೂ ರೋಗಗಳು ವಾಸಿಯಾದವು, ಹುಚ್ಚುಗಳು ಪರಿಹಾರವಾದವು, ಕಣ್ಣು ಹೋದ ಒಬ್ಬ ಹೆಂಗಸಿಗೆ ಕಣ್ಣು ಬಂತು, ಮತ್ತೊಬ್ಬಳ ಕೈ ಬಿಗಿತುಕೊಂಡಿದ್ದದ್ದು ಸರಿಯಾಗಿ ಬಿಟ್ಟುಕೊಂಡು ಕೆಲಸಮಾಡಲಾರಂಭಿಸಿತು. ಅಂತೂ ಅವನೊಬ್ಬ ದೊಡ್ಡ ಮಹಾತ್ಮನೆಂಬುದು ಜನಜನಿತವಾದ ವಾರ್ತೆಯಾಗಿ ಹರಡಿತು.

ಫ್ರಾನ್ಸಿಸ್ಸನ ಪ್ರೇಮವುದ ಮನುಷ್ಯರಲ್ಲಿಯೇ ನಿಲ್ಲಲಿಲ್ಲ. ಪಶುಪಕ್ಷಿಗಳಲ್ಲಿಯೂ ಅವನಿಗೆ ಅಪರಿಮಿತವಾದ ಪ್ರೇಮವಿರುತ್ತಿತ್ತು. ಅವನು ಪಕ್ಷಿಗಳ ಹತ್ತಿರಕ್ಕೆ ಹೋಗಿ ಅವಕ್ಕೂ ಧರ್ಮಬೋಧೆಯನ್ನು ಮಾಡುತ್ತಿದ್ದನು. ಅವು ಮಕ್ಕಳಂತೆ ಅವನ ಬಳಿಗೆ ಬಂದು ಆಶೀರ್ವಾದವನ್ನು ಪಡೆಯುತ್ತಿದ್ದವು, ಬೀದಿಯಲ್ಲಿ ಹರಿದಾಡುವ ಹುಳುಹುಪ್ಪಟೆಗಳು ಎಲ್ಲಿ ಜನರ ತುಳಿತದಲ್ಲಿ ಸಿಕ್ಕಿ ಸಾಯುವವೋ ಎಂಬ ಅಂಜಿಕೆಯಿಂದ ಅವನ್ನು ಎತ್ತಿಎತ್ತಿ ಅತ್ತಕಡೆಗೆ ಬಿಡುತ್ತಿದ್ದನು. ಅವನಿಂದ ರಚಿತವಾಗಿರುವ ಒಂದು ಸ್ತವರಾಜ (Canticle) ದಲ್ಲಿ ಭಗವಂತನ ಸೃಷ್ಟಿಗೆ ಸೇರಿದ ಸೂರ್ಯ, ಚಂದ್ರ, ಗಾಳಿ, ನೀರು, ಬೆಂಕಿ, ಭೂಮಿ- ಮುಂತಾದವನ್ನು ಕೂಡ ಅಣ್ಣ, ಅಕ್ಕ, ಅಮ್ಮ - ಎಂದು ಕರೆದಿರುವದು ಕಂಡು ಬಂದಿರುತ್ತದೆ. ಆ ಮಹಾತ್ಮನ ಮೈತ್ರಿಗೆ ಇಡಿಯ ಬ್ರಹ್ಮಾಂಡವೇ ಸಾಲದೆ ಹೋಯಿತೋ ಎಂಬಂತೆ ತೋರುತ್ತದೆ. ಸರ್ವಭೂತಪ್ರೇಮವೆಂಬುದು ಆತನ ಜೀವನಸೂತ್ರವಾಗಿದ್ದದ್ದು ನಿಜ- ಎಂದು ಸಾಕ್ಷ್ಯವನ್ನು ಕೊಡುವವೋ ಎಂಬಂತೆ ಅವನು ದೇಹವನ್ನು ಬಿಟ್ಟ (ಕ್ರಿ.ಶ.1226 ಅಕ್ಟೋಬರ್ 4ನೆಯ) ದಿನ ಅನೇಕ ಭಾರದ್ವಾಜಪಕ್ಷಿಗಳು ಅವನು ಮಲಗಿದ್ದ ಗುಡಿಸಲಿನ ಮೇಲುಛಾವಣಿಯ ಸುತ್ತಲೂ ಪ್ರದಕ್ಷಿಣೆಯನ್ನು ಮಾಡಿ ಜಯಕಾರಧ್ವನಿಯಿಂದ ಹಾಡುತ್ತಾ ಅಂತರಿಕ್ಷವನ್ನಡರಿದವೆಂದು ಹೇಳುತ್ತಾರೆ.

★★★★★

# ಜಾನ್ ಟಾಲರ್

- ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಯೂರೋಪಿನಲ್ಲಿ ಹದಿಮೂರು ಹದಿನಾಲ್ಕನೆಯ ಶತಮಾನಗಳಲ್ಲಿ ಪ್ರಖ್ಯಾತಿಗೆ ಬಂದ ಸಾಧುಗಳಲ್ಲಿ ಜಾನ್ ಟಾಲರ್ ಎಂಬಾತನೊಬ್ಬನು. ಮೊದಮೊದಲು ಅವನು ಮತಬೋಧೆಯನ್ನು ಮಾಡುವ ಉದ್ಯೋಗವನ್ನೇ ಕೈಕೊಂಡಿದ್ದನಾದರೂ ಅಧ್ಯಾತ್ಮಾನುಭವವಿಲ್ಲದ್ದರಿಂದ ಅವನ ಬೋಧೆಯು ಜನರ ಮನಸ್ಸಿನ ಮೇಲೆ ಅಷ್ಟು ಪರಿಣಾಮಕಾರಿಯಾಗುತ್ತಿರಲಿಲ್ಲ; ಆದರೆ ಒಬ್ಬಾನೊಬ್ಬ ಸದ್ಗುರುವಿನ ಸೇವೆಯಿಂದ ಅವನಿಗೆ ಸರಿಯಾದ ಅನುಭವವುಂಟಾದ ಮೇಲೆ ಅವನು ಸುಪ್ರಸಿದ್ಧ ಮತಾಚಾರ್ಯನಾದನು, ಜರ್ಮನಿಯಲ್ಲಿ ಸ್ಟ್ರಾಸ್‌ಬರ್ಗ್ ನಗರದಲ್ಲಿ ತಲೆದೋರಿದ ಧ್ಯಾನಯೋಗಿಗಳ ಸಂಘಕ್ಕೆ ನಾಯಕನೂ ಆದನು.

ಆ ಸದ್ಗುರುವಿನ ಹೆಸರೇನೆಂಬುದು ಯಾರಿಗೂ ಸರಿಯಾಗಿ ತಿಳಿಯದು. ಅವನನ್ನು ''ಓಬರ್‌ಲ್ಯಾಂಡಿನ ಮಿತ್ರನು'' ಎಂದೇ ಕರೆಯುತ್ತಾರೆ. ಆತನು ಯಾವದೊಂದು ಶಾಸ್ತ್ರವನ್ನೂ ಅರಿಯದವನಾದರೂ ''**ಪರಮೇಶ್ವರನ ಮಿತ್ರರು**'' ಎಂಬ ಸಂಘದ ಸಂಪ್ರದಾಯಪ್ರವರ್ತಕನೆಂದು ಖ್ಯಾತಿಯನ್ನು ಹೊಂದಿರುತ್ತಾನೆ. ಅವನಲ್ಲಿದ್ದ ಭಕ್ತಿಶ್ರದ್ಧೆ, ಅಂತರ್ಮುಖತೆ, ಆಧ್ಯಾತ್ಮಿಕಶಕ್ತಿ- ಇವುಗಳಿಗಾಗಿಯೇ ಸಂಘದವರು ಅವನನ್ನು ಗೌರವಿಸುತ್ತಿದ್ದರು. ಅವನ ಸತ್ಸಂಗದಿಂದ ಟಾಲರನ ಜೀವನಕ್ರಮದಲ್ಲಿ ಒಂದು ದೊಡ್ಡ ಮಾರ್ಪಾಡು ಉಂಟಾಯಿತು. ''ನೀನು ಹೇಳುವದೇನೋ ಪರಮಾರ್ಥವೇ ಸರಿ, ಆದರೆ ನುಡಿಯುವಂತೆ ನಡೆಯಲ್ಲಿಯೂ ಇದನ್ನು ಇಟ್ಟುಕೊಂಡಿರುವೆಯೇನು?'' ಎಂದು ಆತನು ಕೇಳಿದ ಪ್ರಶ್ನೆಯಿಂದ ಟಾಲರನ ಮನಸ್ಸಿಗೆ ಅವನ ಮಾತಿನ ಯಾಥಾರ್ಥ್ಯವು ತಾಕಿತು. ಬರಿಯ ವಾಗ್ವೈಖರಿಯಿಂದ ಪ್ರಯೋಜನವಿಲ್ಲವೆಂದು ಕೂಡಲೇ ಆತನ ಶಿಷ್ಯನಾಗಿ ಅವನ ಅನುಗ್ರಹದಿಂದ (The Golden ABC ಎಂಬ) ಸಾಧನಗ್ರಂಥವೊಂದನ್ನು ಮನಮುಟ್ಟಿ ಓದಿ ಅದರಂತೆ ನಡೆಯುವದಕ್ಕೆ ಪ್ರಾರಂಭಿಸಿದನು. ಆ ಗ್ರಂಥವು 'ಪರಮೇಶ್ವರನ ಮಿತ್ರರ ಸಂಘ'ದ ನಿಯಮ ಗ್ರಂಥವಾಗಿರಬೇಕೆಂದು ತೋರುತ್ತದೆ. ಅಧರ್ಮವನ್ನು ಬಿಟ್ಟು ಧರ್ಮವನ್ನು ಸ್ವೀಕರಿಸಿ ಯುಕ್ತಾಹಾರವಿಹಾರನಾಗಿ

ದ್ದುಕೊಂಡು ನಡೆನುಡಿಗಳಲ್ಲಿ ವಿನಯವನ್ನಳವಡಿಸಿಕೊಂಡು ಪರಮೇಶ್ವರನಲ್ಲಿಯೇ ನಿಷ್ಠನಾಗಿರಬೇಕೆಂದು ಆ ಗ್ರಂಥೋಪದೇಶದ ಸಾರವಾಗಿತ್ತು.

ಟಾಲರನು ಎರಡು ವರ್ಷಗಳವರೆಗೆ ಮತಭೋಧೆಯನ್ನು ಮಾಡುವ ಗೋಜಿಗೆ ಹೋಗಲಿಲ್ಲ. ತತ್ಪರನಾಗಿ ಸದ್ಗುರುವಿನ ಬೋಧೆಯಂತೆ ಸಾಧನವನ್ನು ಮಾಡುವದರಲ್ಲಿಯೇ ಕಾಲವನ್ನು ಕಳೆದನು. ಆದರೂ ಯಾವದೊಂದು ಫಲವೂ ಅದರಿಂದ ಆದಂತೆ ತೋರಲಿಲ್ಲ. ಇದಕ್ಕಿಂತಲೂ ಯಾವ ಹೆಚ್ಚಿನ ಸಾಧನವನ್ನೂ ಮಾಡಲಾರೆನೆಂದು ಅವನು ನಿರಾಶನಾಗುವ ಸಮಯವು ಬಂತು. ಆದರೆ ಅಷ್ಟುಹೊತ್ತಿಗೆ ಸರಿಯಾಗಿ ಅವನಿಗೊಂದು ಅದ್ಭುತವಾದ ಅನುಭವವುಂಟಾಯಿತು. 'ಅಅಪ್ಪ, ತಲ್ಲಣಗೊಳ್ಳದಿರು, ಈಶ್ವರನಲ್ಲಿ ಶ್ರದ್ಧೆಯಿಡು. ಆತನು ಮಾನವರೂಪ ದಿಂದ ಈ ಭೂಮಿಯಲ್ಲಿ ಅವತರಿಸಿದಾಗ ಯಾರುಯಾರಿಗೆ ರೋಗವನ್ನು ಪರಿಹರಿಸಿಕೊಟ್ಟನೋ ಅವರಿಗೆಲ್ಲ ಮನಶ್ಶಾಂತಿಯನ್ನೂ ಕೊಟ್ಟಿರುತ್ತಾನೆ'' ಎಂಬ ಆಕಾಶವಾಣಿಯೊಂದು ಅವನ ಕಿವಿಗೆ ಸ್ಪಷ್ಟವಾಗಿ ಕೇಳಿಸಿತು. ಅದನ್ನು ಕೇಳಿದ ಕೂಡಲೆ ಅವನು ದೇಹಭಾನವಿಲ್ಲದೆ ಸಮಾಧಿಸ್ಥನಾಗಿಬಿಟ್ಟನು; ಮತ್ತೆ ಅವನಿಗೆ ಸ್ಮೃತಿಯು ಬರುವ ಹೊತ್ತಿಗೆ ತನ್ನಲ್ಲಿ ದಿವ್ಯಶಕ್ತಿಗಳು ಉದ್ಭವಿಸಿರುವರಾಗಿ ಕಂಡುಬಂತು. ಅವನ ಬುದ್ಧಿಯು ವಿಶದವಾಯಿತು, ಅದುವರೆಗೆ ತಿಳಿಯದೆ ಇದ್ದ ಎಷ್ಟೋ ವಿಚಾರಗಳು ಸ್ಪಷ್ಟವಾಗುವದಕ್ಕೆ ಮೊದಲಾದವು.

ಅಲ್ಲಿಂದ ಮುಂದಕ್ಕೆ ಅವನು ಸದ್ಗುರುವಿನ ಅನುಜ್ಞೆಯಿಂದ ಜನರಿಗೆ ಸನ್ಮಾರ್ಗವನ್ನು ತಿಳಿಸಿಕೊಡುವದಕ್ಕೆ ಪ್ರಾರಂಭಿಸಿದನು. ಪರಮೇಶ್ವರನ ಅನುಗ್ರಹದಿಂದ ಆಮೇಲೆ ಇವನ ಮಾತುಗಳೂ ಪರಿಶುದ್ಧವಾದ ನಡತೆಯೂ ಜನರ ಮೇಲೆ ಉತ್ಕೃಷ್ಟಪರಿಣಾಮವನ್ನು ಉಂಟುಮಾಡುತ್ತಿದ್ದಕಾರಣ ಎಲ್ಲರಿಗೂ ಇವನಲ್ಲಿ ಪರಮಗೌರವವುಂಟಾಯಿತು. ಇವನೂ ಒಬ್ಬ ''ಪರಮೇಶ್ವರಮಿತ್ರ''ನಾದನು.

ಆಗಿನ ಕಾಲದಲ್ಲಿ ಯೂರೋಪುಖಂಡದಲ್ಲಿ ನಾನಾವಿಧವಾದ ಸಂಕಷ್ಟಗಳು ಬಂದೊದಗಿದ್ದವು – ಆಗ ರಾಜರಿಗೂ ಕ್ರಿಸ್ತಮಠಾಧಿಶ ಪೋಪರಿಗೂ ಕಲಹಗಳು ಇರುತ್ತಲೇ ಇದ್ದವು. ಪೋಪನು ಸರ್ವಾಧಿಕಾರಿಯೆಂದು ಅವನ ಕಡೆಯ ಬೋಧಕವರ್ಗದವರು ವಾದಿಸುತ್ತಿದ್ದರು; ಚಕ್ರವರ್ತಿಯಾಗಲಿ ಜನರಾಗಲಿ ಇದನ್ನು ಒಪ್ಪಿಕೊಂಡಿರಲಿಲ್ಲ. ಮಠದವರು ಈ ಕಾರಣದಿಂದ ಸ್ಟ್ರಾಸ್‌ಬರ್ಗ್

ನಗರಕ್ಕೆ ಬಹಿಷ್ಕಾರವನ್ನು ಹಾಕಿಬಿಟ್ಟಿದ್ದರು. ಇದೇ ಕಾಲಕ್ಕೆ ಬ್ಲಾಕ್ ಡೆತ್ ಎಂಬ ಮಹಾಮಾರಿಕಾರೋಗವು ಯೂರೋಪಿನಲ್ಲೆಲ್ಲ ಹರಡಿಕೊಂಡಿದ್ದರಿಂದ ನಗರದ ಜನರಿಗೆ ಧರ್ಮಬೋಧೆಯಾಗಲಿ ಉತ್ತರಸಂಸ್ಕಾರಗಳಾಗಲಿ ಇಲ್ಲದಂತಾಗಿ ಬಿಟ್ಟಿತ್ತು. ದೇಶದಲ್ಲಿ ಬಿರುಗಾಳಿ, ನೆಲಗುಡುಗು, ಬರ – ಮುಂತಾದ ಉತ್ಪಾತಗಳು ಕಾಣಿಸಿಕೊಂಡಿದ್ದವು. ಜನಗಳಲ್ಲಿ ನಾಸ್ತಿಕ್ಯವು ಹೆಚ್ಚಿತ್ತು. ಮಠದಾರರಲ್ಲಿ ಇಬ್ಬಣಗಳಾಗಿ ಮತಕ್ಕೆ ಇಬ್ಬರು ಪೋಪರನ್ನು ಚುನಾವಣೆಮಾಡಿದ್ದರು. ಇಂಥ ಅಧರ್ಮಭೂಯಿಷ್ಠವಾದ ಕಾಲದಲ್ಲಿ ಟಾಲರನು ಜನರಿಗೆ ಎದೆಗೆಡದಂತೆ ತತ್ತ್ವವನ್ನು ಬೋಧಿಸುತ್ತಿದ್ದನು. ಸ್ಟ್ರಾಸ್‌ಬರ್ಗಿನಲ್ಲಿ ಪ್ಲೇಗಿನಿಂದ ದಿನಕ್ಕೆ ಐವತ್ತು ಮಂದಿಯ ಮೇಳೆ ಸಾಯುತ್ತಿದ್ದದ್ದರಿಂದ ಮಿಕ್ಕ ಉಪದೇಶಕರು ಚದರಿಹೋಗಿದ್ದರು. ಆದರೂ ಅವನು ತನ್ನ ಇಬ್ಬರು ಸ್ನೇಹಿತರೊಡನೆ ಜನರಿಗೆ ಧೈರ್ಯವನ್ನು ಹೇಳುತ್ತಲೇ ಇದ್ದನು. ಅವನು ಮಠದವರ ಬಹಿಷ್ಕಾರವನ್ನು ಲೆಕ್ಕಿಸಲಿಲ್ಲ; ಎಲ್ಲಿ ಯಾರಿಗೆ ಯಾವಾಗ ತನ್ನ ಸದ್ಬೋಧೆಯು ಅವಶ್ಯವೋ ಅಲ್ಲಿಗೆ ಆ ಕ್ಷಣದಲ್ಲಿ ಸಿದ್ಧನಾಗುತ್ತಿದ್ದನು. ಕರುಣಾಪೂರಿತವಾದ ಅವನ ಕೋಮಲ ಹೃದಯದ ಸದುಪದೇಶದಿಂದ ರೋಗಿಗಳೂ ಮರಣಶಯ್ಯೆಯಲ್ಲಿ ನರಳುತ್ತಿದ್ದವರೂ ಶಾಂತಿಸಮಾಧಾನಗಳನ್ನು ಹೊಂದುತ್ತಿದ್ದರು. 'ಈಮಠದವರು ಕೊಡುವ ಬಾಹ್ಯಸಂಸ್ಕಾರಗಳಿಲ್ಲದಿದ್ದರೇನು? ಆಧ್ಯಾತ್ಮಿಕಸಂಸ್ಕಾರಗಳನ್ನು ಅವರು ಎಂದಿಗೂ ಕಿತ್ತುಕೊಳ್ಳಲಾರರು.'' ಎಂಬ ಅವನ ನುಡಿಯು ಎಲ್ಲರಿಗೂ ಮನಸ್ಸಮಾಧಾನವನ್ನು ಕೊಡುತ್ತಿತ್ತು. ಅವನೂ ಅವನ ಇಬ್ಬರೂ ಸ್ನೇಹಿತರೂ ಸೇರಿ ಮಠದವರಿಗೆ ಒಂದು ಬಹಿರಂಗಪತ್ರವನ್ನು ಬರೆದರು. 'ಈನಿರಪರಾಧಿಗಳಾದವರನ್ನು ಸಂಸ್ಕಾರಹೀನರಾಗಿ ಸಾಯುವಂತೆ ಬಹಿಷ್ಕಾರಕ್ಕೆ ಗುರಿಮಾಡುವದು ಸರಿಯಲ್ಲ; ಅನ್ಯಾಯವಾಗಿ ಮಠದವರು ಹೀಗೆ ಕೊಟ್ಟ ಶಾಪವು ನಿಜವಾಗಿ ಪರಮೇಶ್ವರನ ಅನುಗ್ರಹವಾಗುತ್ತದೆ ಎಂದು ಅದರಲ್ಲಿ ಅವರು ಬರೆದದ್ದಲ್ಲದೆ ''ಕ್ರಿಸ್ತಿಯನ್‌ಮತದ ತತ್ತ್ವಗಳನ್ನು ಅನುಸರಿಸಿದರೆ ಸಾಕು, ಪೋಪನಿಗೆ ವಿಧೇಯರಾಗದ ಮಾತ್ರದಿಂದ ಎಂದಿಗೂ ನಾಸ್ತಿಕರಾಗಲಾರರು'' ಎಂದು ಸಾರಿದರು.

ಕ್ರಿ.ಶ.1340 ರಿಂದ 1361 ರಲ್ಲಿ ತನ್ನ ದೇಹವನ್ನು ಬಿಟ್ಟು ತೆರಳುವವರೆಗೂ ಟಾಲರನು ಹೀಗೆ ಜನರ ಸೇವೆಯೇ ಜನಾರ್ದನನ ಸೇವೆಯೆಂಬ ನಾಣ್ಣುಡಿಗೆ ಉದಾಹರಣೆಯಾಗಿ ತನ್ನ ಪವಿತ್ರಸಂದೇಶವನ್ನು ಜನರಿಗೆ ಮುಟ್ಟಿಸುತ್ತಿದ್ದನು.

ನಿರಂತರವಾದ ಇಂಥ ಸೇವೆಯಿಂದ ಜೀರ್ಣವಾದ ಶರೀರವನ್ನು ತನ್ನ ಎಪ್ಪತ್ತನೆಯ ವಯಸ್ಸಿನಲ್ಲಿ ಅವನು ಬಿಟ್ಟು ಪರಲೋಕಕ್ಕೆ ಹೊರಟಾಗ ಅವನಿದ್ದ ಮಠದವರೇ ಅಲ್ಲದೆ ಇಡಿಯ ಸ್ಟ್ರಾಸ್‌ಬರ್ಗ್ ನಗರವೇ ದುಃಖಸಾಗರದಲ್ಲಿ ಮುಳುಗಿತು. ಆ ಮಹಾನುಭಾವನು ಜನರಿಗೆ ಅಷ್ಟು ಬೇಕಾದವನಾಗಿದ್ದನು!

ಟಾಲರನ ಸೂಕ್ತಿಗಳಲ್ಲಿ ಕೆಲವನ್ನು ಇಲ್ಲಿ ಕೊಟ್ಟು ಈ ಲೇಖನವನ್ನು ಮುಗಿಸುವೆನು:

1. ಪರಮೇಶ್ವರನು ನಮಗೆ ಯಾವಾಗಲೂ ಎಲ್ಲೆಲ್ಲಿಯೂ ತೀರ ಹತ್ತಿರವೇ ಇರುವನಾದ್ದರಿಂದ ಆತನ ಸ್ವಾರಾಜ್ಯವನ್ನು ಪಡೆದುಕೊಳ್ಳುವದಕ್ಕೆ ನಾವೆಲ್ಲರೂ ಹವಣಿಸಬೇಕು. ಮನುಷ್ಯನಿಗೆ ಪರಮೇಶ್ವರನ ಸನ್ನಿಧಿಯನ್ನು ಅರಿತುಕೊಳ್ಳುವ ಶಕ್ತಿಯು ಇದ್ದೇ ಇದೆ; ಆ ಶಕ್ತಿಯನ್ನುಪಯೋಗಿಸಿಕೊಂಡು ಆತನನ್ನು ಸಾಕ್ಷಾತ್ಕಾರಮಾಡಿಕೊಂಡು ಪರಭಕ್ತಿಯನ್ನು ಮಾಡುವದರಿಂದಲೇ ಮಾನವನು ಧನ್ಯನಾಗುವನು – ಎಂಬುದು ಅವನ ಮುಖ್ಯಬೋಧೆಯಾಗಿತ್ತು.

2. ಪ್ಯಾರಿನಗರದ ಪಂಡಿತರು ದೊಡ್ಡದೊಡ್ಡ ಶಾಸ್ತ್ರಗ್ರಂಥಗಳನ್ನು ಓದುತ್ತಾ ಅವುಗಳ ಹಾಳೆಗಳನ್ನೇ ಮಗುಚಿಹಾಕುತ್ತಿರುತ್ತಾರೆ; ಆದರೆ ಪರಮೇಶ್ವರನ ಮಿತ್ರರಾದವರು ಜೀವಂತವಾದ ಒಂದೇ ಒಂದು ಗ್ರಂಥವನ್ನು ಓದುತ್ತಾರೆ, ಅದರಲ್ಲಿರುವದೆಲ್ಲ ಜೀವಂತವಾಗಿಯೇ ಇರುತ್ತದೆ.... ಅವರಿಗೆ ಕಾರ್ಯಾಕಾರ್ಯಗಳನ್ನು ಗೊತ್ತುಪಡಿಸುವ ಪವಿತ್ರವಾದ ಮನಸ್ಸಾಕ್ಷಿಯೊಂದು ದೊರಕಿರುತ್ತದೆ. ಒಳಗಿನ ಜ್ಞಾನಪ್ರಕಾಶದಿಂದ ಅವರಿಗೆ ಪವಿತ್ರಾತ್ಮನ ಶಾಂತಿಯೂ ಆನಂದವೂ ದೊರಕಿರುತ್ತವೆ.

3. ಮಾನವನ ಮೂಲಕ ಒಂದು ಸಾವಿರ ವರ್ಷಗಳಲ್ಲಿ ಕಲಿತುಕೊಳ್ಳಬಹುದಾದ್ದಕ್ಕಿಂತಲೂ ಹೆಚ್ಚಾಗಿಯೇ ಅಂತರ್ವಾಣಿಯಿಂದ ಒಂದೇ ಘಂಟೆಯಲ್ಲಿ ತಿಳಿದುಕೊಳ್ಳಬಹುದು.

4. ಪರಮೇಶ್ವರನ ಮಿತ್ರರ ಬುದ್ಧಿಯು ನಿರ್ಮಲವಾಗಿರುತ್ತವೆ; ಕಾಮಕ್ರೋಧಗಳನ್ನು ಸಾಧನೆಯಿಂದ ಗೆದ್ದುಕೊಂಡದ್ದರ ಫಲವಾಗಿ ಅವರ ಜೀವನ ಸ್ವರೂಪವಿವೇಚನೆಯನ್ನು ಮಾಡುವ ಶಕ್ತಿಯು ಬಂದಿರುತ್ತದೆ; ಹತ್ತಿರವಿರುವವನ

ಮುಖವನ್ನು ನೋಡಿದ ಮಾತ್ರದಿಂದಲೇ 'ಅವನು ದೈವ ಸಂಪತ್ತಿನವನೋ ಅಲ್ಲವೋ, ಅವನು ಅಧ್ಯಾತ್ಮಮಾರ್ಗದಲ್ಲಿ ಮುಂದುವರಿಯದಂತೆ ಅಡ್ಡಿಯಾಗಿ ರುವದು ಯಾವದು?' ಎಂಬುದನ್ನು ಅವರು ಕಂಡುಹಿಡಿದುಕೊಂಡುಬಿಡುತ್ತಾರೆ.''

5. ದೇವರು ಹೃದಯದಲ್ಲಿಯೇ ಇರುತ್ತಾನೆ, ಎಲ್ಲಕ್ಕಿಂತಲೂ ಹತ್ತಿರವಾಗಿ ರುತ್ತಾನೆ, ಆದರೆ ಅವನು ನಮ್ಮ ಯಾವ ಇಂದ್ರಿಯಗಳಿಗೂ ಗೋಚರನಾಗುವಂತಿಲ್ಲ, ಹೊರಗಿನ ಎಲ್ಲಾ ವಸ್ತುಗಳಗಿಂತಲೂ ನಮ್ಮ ಎಲ್ಲಾ ಅರಿವುಗಳಿಗಿಂತಲೂ ಆಚೆ ಇರುತ್ತಾನೆ. ಹೃದಯವೆಂಬ ರಹಸ್ಯಸ್ಥಳದಲ್ಲಿ ಯಾರಿಗೂ ಕಾಣದಂತೆ ಅವಿತುಕೊಂಡು ಹುಡುಕು; ಯಾವದೊಂದು ಮಾತಿನ ವ್ಯವಹಾರವೂ ಇಲ್ಲದೆ ಜೀವನಾಗಲಿ ಯಾವ ಕಲ್ಪನೆಯಾಗಲಿ ಮನೋರಥವಾಗಲಿ ಇಲ್ಲದೆ ಪ್ರಶಾಂತವಾಗಿರುವ ಆ ಏಕಾಂತ ಸ್ಥಳದಲ್ಲಿ ಅವನು ಕಾಣಬರುವನು.

6. ಶ್ರದ್ಧಾಭಕ್ತಿಯಿಂದ ಧ್ಯಾನಮಾಡಿ ಚಿತ್ತವನ್ನು ದೇವರ ಮೇಲುಮಟ್ಟಕ್ಕೆ ಏರಿಸಿದರೆ ಸ್ಪಷ್ಟವಾದ ಜೀವಚೈತನ್ಯವು ದೇವರ ಅನಾದಿಚೈತನ್ಯದಲ್ಲಿ ಐಕ್ಯವಾಗುವ ದ್ವಾರವು ಸಿಕ್ಕುತ್ತದೆ. ಆಗ ಜೀವತ್ವವೆಲ್ಲವನ್ನೂ ಈಶ್ವರನೊಳಗೆ ಸೇರಿದಂತೆ ಆಗುತ್ತದೆ. ಅದು ಆತನಲ್ಲಿ ಬೆರತುಕೊಂಡು ಒಂದೇ ಚೈತನ್ಯವಾಗಿರುತ್ತದೆ.

7. ಜ್ಞಾನವೆಂಬುದು 'ಗುರು'ಗಳಿಂದ ಕಲಿತುಕೊಳ್ಳತಕ್ಕದ್ದಲ್ಲ; ''ಈಶ್ವರನ ಅಂತಃ ಸ್ವರಾಜ್ಯವನ್ನು ಹೊಕ್ಕು ಅಲ್ಲಿಯೇ ನೆಲಸುವ ಅನುಭವದಿಂದಲೇ ಪಡೆದುಕೊಳ್ಳತಕ್ಕದ್ದಾಗಿದೆ. ಅದ್ರೆ ಶುದ್ಧಸತ್ಯವೂ ಮಾಧುರ್ಯವೂ ದೊರಕುತ್ತವೆ. ಇದರ ಸ್ವರೂಪವನ್ನಾಗಲಿ ಅದು ತಲೆದೋರುವ ಪರಿಯನ್ನಾಗಲಿ ಮಾತಿನಿಂದ ಬಣ್ಣಿಸುವದಕ್ಕಿಂತ ಅನುಭವಿಸಿ ತಿಳಿಯುವದೇ ಸುಲಭ ಇದುವರೆಗೆ ನಾನು ಹೇಳಿರುವದೆಲ್ಲ, ಅದಕ್ಕೆ ಹೋಲಿಸಿದರೆ ಸೂಜಿಯ ಮೊನೆಯನ್ನು ನಮ್ಮ ಮೇಲಿರುವ ಅನಂತಾಕಾಶಕ್ಕೆ ಹೋಲಿಸಿದಂತೆ ಅತ್ಯಲ್ಪವಾಗಿರುತ್ತದೆ. ಅದಕ್ಕೂ ಇದಕ್ಕೂ ಅಷ್ಟೇ ಅಂತರವಿರುತ್ತದೆ.''

★★★★★

# ಅಖ್ನೇಟನ್

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಏಕೇಶ್ವರವಾದವು ಇತ್ತೀಚೆಗೆ ಹುಟ್ಟಿದ್ದೆಂದು ಅನೇಕ ಪುರಾತನ ತತ್ತ್ವಶೋಧಕರು ಅಭಿಪ್ರಾಯಪಡುತ್ತಾರೆ; ಬಾಹ್ಯಪ್ರಪಂಚದಲ್ಲಿ ಕಾಣುವ ಚಂದ್ರಸೂರ್ಯಾದಿಗಳನ್ನೇ ದೇವರೆಂದೇ ಭಾವಿಸುವ **ಪ್ರಾಕೃತಿಕಧರ್ಮ** (Physical Religion) ಮನುಷ್ಯರ ಪೂರ್ವಿಕರನ್ನು ದೇವರ ಸಾಲಿಗೆ ಕೂಡಿಸುವ **ಪೈತೃಕಧರ್ಮ** (Aathropological), ಧರ್ಮ ಮಾನವನ ಹೃದಯದಲ್ಲಿ ಪ್ರಕಟವಾಗುವ ಈಶ್ವರನನ್ನು ಧ್ಯಾನಿಸುವ **ಮಾನಸಿಕಧರ್ಮ** (Phychological) ಎಂದು ಧರ್ಮವು ಕ್ರಮಕ್ರಮವಾಗಿ ಬೆಳೆಯುತ್ತಾ ಬಂದಿರುವದೆಂದು ಅವರ ಅಭಿಪ್ರಾಯವಿರುವದು. ಆದರೆ ಬಾಹ್ಯಪ್ರಪಂಚದಲ್ಲಿ ಕಾಣುವ ಸೂರ್ಯಾದಿಗಳ ಹೆಸರೆಲ್ಲ ಒಂದೇ ಒಂದು ನಿಜವಾಗಿರುವ ತತ್ತ್ವದ ಹೆಸರುಗಳೆಂದು ಸ್ಪಷ್ಟವಾಗಿ ವೇದದಲ್ಲಿರುತ್ತದೆ.

**ಇನ್ದ್ರಂ ಮಿತ್ರಂ ವರುಣಮಗ್ನಿಮಾಹುರಥೋ ದಿವ್ಯಃ ಸ ಸುಪರ್ಣೋ ಗರುತ್ಮಾನ್ ।**
**ಏಕಂ ಸದ್ವಿಪ್ರಾ ಬಹುಧಾ ವದನ್ತ್ಯಗ್ನಿಂ ಯಮಂ ಮಾತರಿಶ್ವಾನಮಾಹುಃ ॥**

**- ಋಗ್ವೇದ. 1-164-46**

ಇಂದ್ರ, ಮಿತ್ರ, ವರುಣ, ಅಗ್ನಿ ಮತ್ತು ಅಂತರಿಕ್ಷದಲ್ಲಿರುವ ಗರುತ್ಮಂತನಾದ ಸುಪರ್ಣನು ಎಂದು ಕರೆಯುತ್ತಾರೆ; ಅಗ್ನಿ, ಯಮ, ಮಾತರಿಶ್ವ - ಎಂದೂ ಕರೆಯುತ್ತಾರೆ. ಇರುವದು ಒಂದು, ಅದನ್ನೇ ತಿಳಿದವರು ಬಗೆಬಗೆಯಾಗಿ ಕರೆಯುತ್ತಾರೆ.

ಆದರೆ ಪಾಶ್ಚಾತ್ಯರ ದೃಷ್ಟಿಯಲ್ಲಿ ವೇದವು ಕೂಡ ಈಚಿನ ಕಾಲದಲ್ಲಿ ಹುಟ್ಟಿದ್ದು; ಕ್ರಿ. ಪೂ. 2000ಕ್ಕಿಂತ ಹಿಂದೆ ವೇದವು ಹುಟ್ಟಿರಲಿಲ್ಲವೆಂದೇ ಅವರ ಹೇಳಿಕೆ. ಈ ಮಾತಿನ ನಿಜವು ಹೇಗಾದರೂ ಇರಲಿ; ಏಕೆಂದರೆ ಪ್ರಕೃತವಿಷಯವು ವೇದದ ಕಾಲವಲ್ಲ; ಏಕೇಶ್ವರವಾದದ ಕಾಲದ ವಿಚಾರ. ಇತ್ತೀಚೆಗೆ ಭೂಗರ್ಭಶೋಧಕರ ಅನ್ವೇಷಣೆಯ ಫಲವಾಗಿ ದೊರಕಿರುವ ಅಖ್ನೇಟನ್ ಚಕ್ರವರ್ತಿಯ ಚರಿತೆಯನ್ನು ನೋಡಿದರೆ

ಏಕೇಶ್ವರವಾದವು ಈಜಿಪ್ಟು ದೇಶದಲ್ಲಿಯೂ ಈಗ ಮೂರುಸಾವಿರವರ್ಷಗಳ ಹಿಂದೆಯೇ ಪ್ರಸಿದ್ಧವಾಗಿತ್ತೆಂಬುದು ಕಂದುಬರುತ್ತದೆ.

ಅಖ್ನೇಟನ್ನನು ಮುಮ್ಮಡಿಯ ಅಮೂನ್ ಹಾಟೆಪ್ ಎಂಬಾತನಿಗೆ ಥೈ ಎಂಬ ರಾಣಿಯ ಗರ್ಭದಲ್ಲಿ ಕ್ರಿ.ಪೂ. 1386ರಲ್ಲಿ ಜನಿಸಿದನು. ಅವನಿಗೆ ಮೊದಲಿನಿಂದ ಶರೀರಾರೋಗ್ಯವು ಸರಿಯಾಗಿರಲೇ ಇಲ್ಲ; ಅವನು ಆಗಾಗ ಮಲರೋಗದಿಂದ ಸಂಕಟಪಡುತ್ತಿದ್ದನು. ಅವನಿಗೆ ಚಿಕ್ಕವಯಸ್ಸಿನಲ್ಲಿಯೇ ಕಾಡುಖಿವ ಎಂಬ ರಾಜಕುವರಿಯನ್ನು ತಂದು ಮದುವೆ ಮಾಡಿದರು. ಅವಳು ಬಹು ಬೇಗನೆ ಕಾಲವಾದ್ದರಿಂದ ನೆಫರ್ಟಿಟಿ ಎಂಬ ಈಜಿಪ್ಟು ದೇಶದ ಕನ್ಯಕೆಯೊಬ್ಬಳನ್ನು ತಂದು ಅವನಿಗೆ ಮತ್ತೆ ಮದುವೆಮಾಡಿಸಿದರು. ತಂದೆಯು ಕ್ರಿ.ಪೂ 1375ರಲ್ಲಿ ಪರಲೋಕವನ್ನೈದಲು ತನ್ನ ಹತ್ತು ಹನ್ನೆರಡನೆಯ ವಯಸ್ಸಿನಲ್ಲಿಯೇ ಇವನು ನಾಲ್ವಡಿಯ ಅಮೂನ್‌ಹಾಟೆಪ್ ಎಂಬ ಹೆಸರಿನಿಂದ ಚಕ್ರವರ್ತಿಯಾದನು. ಅವನ ತಾಯಿಯು ಅವನಿಗಾಗಿ ರಾಜ್ಯಭಾರವನ್ನು ನೋಡಿಕೊಳ್ಳುತ್ತಿದ್ದಳು.

ಅಖ್ನೇಟನ್ನನು ಹದಿನೇಳೇ ವರ್ಷ ರಾಜ್ಯಭಾರಮಾಡಿದನು. ಆ ಕಾಲದಲ್ಲಿ ಅವನು ''ರ''(ರವಿ) ಎಂಬ ಹಿಂದಿನ ಸೂರ್ಯದೇವರನ್ನು ಏಟನ್ (ಆದಿತ್ಯ) ಎಂಬ ಹೆಸರಿನಿಂದ ಸರ್ವೋತ್ಕೃಷ್ಟ ದೇವನೆಂದು ನಂಬಿ ಏಕೇಶ್ವರವಾದವನ್ನು ಉತ್ತಮ ರೀತಿಯಲ್ಲಿ ಪ್ರಚುರಪಡಿಸಿದನು. ಅಮೂನ್ ದೇವರಲ್ಲಿ ಶ್ರದ್ಧೆಯಿಟ್ಟಿದ್ದ ವೈದಿಕರಿಗೂ ಇವನಿಗೂ ಸರಿಬೀಳಲಿಲ್ಲವಾದ್ದರಿಂದ ರಾಜಧಾನಿಯಾದ ಥೀಟ್ಸನಗರಿಯನ್ನು ಬಿಟ್ಟು 'ಖುತ್-ಏಟನ್' (ಏಟನ್‌ದೇವನ ದಿಗಂತ ನಗರಿ) ಎಂಬ ಹೆಸರಿನಿಂದ ಒಂದು ಹೊಸ ನಗರಿಯನ್ನು ನಿರ್ಮಾಣ ಮಾಡಿಸಿಕೊಂಡನು. 'ಅಮೂನ್ ಹಾಟೆಪ್' (ಅಮೂನ್ ದೇವನ ಶಾಂತಿ) ಎಂಬ ಪೂರ್ವದ ಹೆಸರು ಈಗ ಅವನಿಗೆ ಅನ್ವಯಿಸುವಹಾಗಿರಲಿಲ್ಲವಾದ್ದರಿಂದ 'ಅಖ್ನೇಟನ್' (ಏಟನ್ ದೇವನ ಮಹಿಮೆ) ಎಂಬ ಹೊಸ ಹೆಸರನ್ನು ಇಟ್ಟುಕೊಂಡನು.

ಅಖ್ನೇಟನ್ನನ ರಾಜ್ಯವು ಕೇವಲ ನೈಲ್ ನದಿಯ ಸುತ್ತುಮುತ್ತಲಿನ ಭೂಮಿಯನ್ನು ಮಾತ್ರ ಒಳಗೊಂಡಿರಲಿಲ್ಲ. ಸೂಡಾನ್ ಸಹರಾಮರುಭೂಮಿಯ ಭಾಗಗಳಲ್ಲಿ ವಾಸಮಾಡುತ್ತಿದ್ದ ಬೇರೆ ಬೇರೆ ತಂಡದ ಜನರೂ ಅವನ ಪ್ರಜೆಗಳಾಗಿದ್ದರು. ಈಶಾನ್ಯದಿಕ್ಕಿನಲ್ಲಿ ಈಗಿನ ಸಿರಿಯದಲ್ಲಿದ್ದ ಪ್ರಾಂತಗಳು ಅವನಿಗೆ ಕಷ್ಟವನ್ನು ಕೊಡುತ್ತಿದ್ದವು.

ಅಖ್ನೇಟನ್ನನು ತನ್ನ ಹೊಸ ನಗರಿಯಲ್ಲಿ ಒಂದು ಮಹಾದೇವಾಲಯವನ್ನು ಕಟ್ಟಿಸಿದನು; ಅದರಲ್ಲಿ ಯಾವದಾದರೂ ವಿಗ್ರಹವನ್ನಿಟ್ಟರೆ ಅದನ್ನೇ ದೇವರೆಂದು ಜನರು ಭಾವಿಸಿಯಾರೆಂದು ವಿಗ್ರಹದ ಗೊಡವೆಗೇ ಹೋಗದೆ ಅಲ್ಲಿ ಒಂದು ಸುಂದರವಾದ ವೇದಿಕೆಯನ್ನೇರ್ಪಡಿಸಿದನು. ಆ ವೇದಿಕೆಯ ಮೇಲೆ ಪರಮೇಶ್ವರನಿಗೆ ಬಲಿಹರಣವನ್ನು ಒಪ್ಪಿಸುತ್ತಿದ್ದರು. ರಾಜನು ಸ್ವಂತವಾಗಿ ಕೆಲವು ಸೋತ್ರ್ರಗಳನ್ನೂ ಗಾನಗಳನ್ನೂ ರಚಿಸಿ ಪ್ರತಿದಿನವೂ ಅವುಗಳನ್ನು ದೇವಸ್ಥಾನದಲ್ಲಿ ಪಠಿಸುವಂತೆ ಕಟ್ಟುಮಾಡಿದ್ದನು. ಆ ಕವನಗಳಲ್ಲಿ ರಸವೂ ಭಾವವೂ ತುಂಬಿದ್ದವು.

ಅಖ್ನೇಟನ್ನನು ಈಶ್ವರನ ವಿಷಯದಲ್ಲಿ ಉತ್ತಮವಾದ ಪರಿಪೂರ್ಣವಾದ ಉದಾತ್ತವಾದ ಭಾವನೆಯನ್ನು ಇಟ್ಟುಕೊಂಡಿದ್ದನು. ಅವನು ಸೂರ್ಯಮಂಡಲವೇ ದೇವರೆಂದು ನಂಬಿರಲಿಲ್ಲ; ಸೂರ್ಯನನ್ನು ಸೃಷ್ಟಿಸಿ ಅವನ ಉಷ್ಣಕಿರಣಗಳ ಮೂಲಕ ಭೂಮಿಯನ್ನೆಲ್ಲ ವ್ಯಾಪಿಸಿಕೊಂಡು ಸಸ್ಯಗಳ ಬೆಳವಣಿಗೆಗೆ ಕಾರಣನಾಗಿರುವ ಮೂಲಪುರುಷನೇ ಈಶ್ವರನೆಂದು ಅವನು ಭಾವಿಸಿದ್ದನು. ಅವನು ರಚಿಸಿದ್ದ ಒಂದಾನೊಂದು ಸ್ತೋತ್ರದ ಭಾವಾರ್ಥವನ್ನು ಈಕೆಳಗೆ ಕೊಟ್ಟಿರುತ್ತದೆ.

'ಅನಿನ್ನ ಸೃಷ್ಟಿಯು ಎಷ್ಟು ಬಗೆಬಗೆಯಲ್ಲಿ ಪ್ರಕಟವಾಗಿರುತ್ತದೆ. ನಿನ್ನ ಸಂಕಲ್ಪಕೆ ಅನುಗುಣವಾಗಿ ಭೂಲೋಕವನ್ನೂ- ಮನುಷ್ಯರನ್ನೂ ಮೃಗಗಳನ್ನೂ ಭೂಮಿಯ ಮೇಲಿರುವ ಸಕಲವನ್ನೂ ನೀನು ಸೃಷ್ಟಿಸಿರುವೆ.

''ನೀನೇ ಋತುಗಳನ್ನೂ ಮಾಡುವವನು. ದೂರದಲ್ಲಿರುವ ಆಕಾಶವನ್ನು ನೀನೇ ಸೃಷ್ಟಿಸಿ ಅದರಲ್ಲಿ ಉದಯಿಸುತ್ತಿರುವೆ ಅರುಣೋದಯವಾಗಿ ದೂರದಲ್ಲಿ ಬೆಳಗುತ್ತಿದ್ದು ಮತ್ತೆ ಹಿಂತಿರುಗುವೆ.''

''ಈ ಪ್ರಪಂಚವು ನಿನ್ನ ಕೈಯಲ್ಲಿರುವದು. ನೀನು ಹೇಗೆ ಅವನ್ನು ಸೃಷ್ಟಿಸಿರುವೆಯೋ ಅವು ಹಾಗೆಯೇ ಇರುವವು. ನೀನು ಉದಯಿಸಿದರೆ ಅವು ಬದುಕಿರುವವು, ನೀನು ಅಸ್ತನಾದರೆ ಅವು ಸಾಯುವವು. ನಿನ್ನಿಂದಲೇ ಮನುಷ್ಯನು ಬದುಕಿರುವದು.''

ಪರಮೇಶ್ವರನು ಸಕಲಕ್ಕೂ ಸೃಷ್ಟಿಕರ್ತನು. ಸರ್ವಮಾನವರಿಗೂ ಪಿತನು, ಅವನು ಅಹಮಸ್ಮಿ ಎಂಬ ಬರಿಯರಿವು, ಅಗೋಚರವಾದ ಚೈತನ್ಯವು;

ಸಗುಣನು ಪ್ರೇಮಪೂರ್ಣನು, ಉದಾರಿಯು, ದಯಾಘನನು; ಶಾಂತಿರಕ್ಷಕನು, ಕರುಣಾಕರನು, ಅದ್ರ್ರಹೃದಯನು, ಕೋಮಲನು- ಎಂದು ಅಖ್ನೇಟನ್ನನು ನಂಬಿದ್ದನು.

ದೊರೆಯು ರಚಿಸಿದ್ದ ಒಂದಾನೊಂದು ಪದದಲ್ಲಿ ಹೀಗೆಂದು ಎಂದು ವರ್ಣಿಸಿರುತ್ತದೆ. ''ನಿನ್ನ ಪ್ರೇಮವು ದೊಡ್ಡದು, ವಿಶಾಲವಾದದ್ದು; ನಿನ್ನ ಪ್ರೇಮದಿಂದ ಈಜಿಪ್ಟಿನ ಮೇಲುಭಾಗ ಘಟ್ಟದ ಕೆಳಗಿನಭಾಗ ಎರಡನ್ನೂ ಮಾಡಿಕೊಂಡಿದ್ದೀಯೆ'' ಎಂದು ವರ್ಣಿಸಿರುತ್ತದೆ.

ರಾಜನು ಬರಿಯ ಮಾತಿನ ಮಲ್ಲನಲ್ಲ, ತಾನು ಆಡಿದಂತೆ ನಡೆಯಬಲ್ಲ ಅನುಷ್ಠಾನಪರನು. ಅವನು ಪ್ರಾಮಾಣಿಕತನದಲ್ಲಿಯೂ ನೀತಿಯ ಬಲದಲ್ಲಿಯೂ ನಿರುಪಮನಾಗಿದ್ದನು. ಹೆಚ್ಚೇಕೆ? ಅವನೊಬ್ಬ ರಾಜರ್ಷಿಯಾಗಿದ್ದನೆಂದು ಹೇಳಬಹುದು.

ರಾಜ್ಯಭಾರದಲ್ಲಿ ಹೇಗೋ ಕುಟುಂಬಭರಣದಲ್ಲಿಯೂ ಅಖ್ನೇಟನ್ನನು ಆದರ್ಶಪುರುಷನಾಗಿರುವದಕ್ಕೆ ಯತ್ನಿಸುತ್ತಿದ್ದನು. ಅವನು ಆಗಿನ ಕಾಲದ ರಾಜರುಗಳಂತೆ ಅಂತಃಪುರದಲ್ಲಿ ನೂರಾರು ಮಹಿಳೆಯರನ್ನು ಸೇರಿಸಿಕೊಂಡಿರಲಿಲ್ಲ. ತನ್ನ ಪಟ್ಟಮಹಿಷಿಯು ಏಳು ಜನ ಹೆಣ್ಣುಮಕ್ಕಳನ್ನೇ ಹಡೆದರೂ ರಾಜ್ಯಭಾರಕ್ಕೆ ಒಬ್ಬ ಮಗನಿರಬೇಕೆಂದು ಬಯಸುವದು ಅವನಂಥ ಚಕ್ರಾಧಿಪತಿಗೆ ಸ್ವಾಭಾವಿಕವಾದರೂ ಅವನು ಮತ್ತೊಂದು ಮದುವೆಯಾಗಲಿಲ್ಲ. ಆಕೆಯು ತನ್ನ ಪಟ್ಟದ ಮಹಿಷಿಯೆಂಬ ಗೌರವದಿಂದಲೂ ಪ್ರೀತಿಯಿಂದಲೂ ಅವನ ಹೃದಯವು ತುಂಬಿತ್ತು. ಜನರಿಗೂ ಅದೇ ಗೌರವವು ಇರಬೇಕೆಂಬುದು ಅವನ ಇಚ್ಛೇಯಾಗಿತ್ತು. ಆಗಾಗ್ಗೆ ಅವಳನ್ನು ರಥದಲ್ಲಿ ಕುಳ್ಳಿರಿಸಿಕೊಂಡು ಅಥವಾ ತನ್ನ ಮಕ್ಕಳಲ್ಲೊಬ್ಬರಿಗೆ ಕುದುರೆಯ ಕಡಿವಾಣವನ್ನು ಹಿಡಿದುಕೊಳ್ಳುವದನ್ನು ತೋರಿಸಿಕೊಡುತ್ತಾ ನಗರಿಯ ಬೀದಿಯಲ್ಲಿ ಜನರಿಗೆ ಕಾಣಿಸಿಕೊಳ್ಳುತ್ತಿದ್ದನು.

ಆಗಿನ ಕಾಲದ ಚಕ್ರವರ್ತಿಗಳಂತೆ ಚಿತ್ರಗಾರರು ತನ್ನನ್ನು ರಾಜವೇಷದಲ್ಲಿಯೇ ಚಿತ್ರಿಸಬೇಕೆಂದಾಗಲಿ ಪ್ರಜೆಗಳು ತನ್ನನ್ನು ಸಿಂಹಾಸನದ ಮೇಲಿರುವಾಗಲೇ ಕಾಣಬೇಕೆಂದಾಗಲಿ ಅವನು ಬಯಸುತ್ತಿರಲಿಲ್ಲ. ದೇವರೊಬ್ಬನೇ ಸರ್ವೇಶ್ವರನೆಂಬ ಗೌರವಕ್ಕೆ ಅರ್ಹನೆಂಬುದನ್ನು ಅವನು ಅನುಷ್ಠಾನದಲ್ಲಿ ತಂದುಕೊಂಡಿದ್ದನು.

ಅಖ್ನೇಟನ್ನನು ಒಳ್ಳೆ ಉದಾರಸ್ವಭಾವದವನು. ಅರಮನೆಯ ಕುಟುಂಬದವರಲ್ಲೆಲ್ಲ ಈ ಗುಣವನ್ನು ಅವನು ವ್ಯಕ್ತಗೊಳಿಸುತ್ತಿದ್ದನು. ಅವನು ದಾಸದಾಸಿಯರನ್ನಾಗಲಿ ಖೈದಿಗಳನ್ನಾಗಲಿ ಚಿತ್ರಹಿಂಸೆಮಾಡಕೂಡದೆಂದು ಕಟ್ಟಪ್ಪಣೆ ಮಾಡಿದ್ದನು ಮನುಷ್ಯರ ಮೇಲಾಗಲಿ ಪ್ರಾಣಿಗಳ ಮೇಲಾಗಲಿ ಕ್ರೌರ್ಯವನ್ನು ತೋರಿಸುವದಕ್ಕೆ ಅವನ ರಾಜ್ಯದಲ್ಲಿ ಅವಕಾಶವಿರಲಿಲ್ಲ. ಪ್ರಜೆಗಳೆಲ್ಲರೂ ತನ್ನ ಧರ್ಮಕ್ಕೆ ತಿರುಗುವದಕ್ಕೆ ಅವನು ತನ್ನ ದಯೆಯನ್ನೇ ಮುಖ್ಯಸಾಧನವಾಗಿ ಉಪಯೋಗಿಸುತ್ತಿದನು. ಶತ್ರುಗಳನ್ನು ಕೂಡ ತನ್ನ ಉದಾರಸ್ವಭಾವದಿಂದಲೇ ಗೆಲ್ಲಬೇಕೆಂಬುದು ಅವನ ಅಭಿಲಾಷೆ. ಅವನಿಗೆ ಯುದ್ಧವೆಂದರೆ ಸ್ವಲ್ಪವೂ ಮನಸ್ಸಿಗೆ ಬರುತ್ತಿರಲಿಲ್ಲ; ತನ್ನ ರಾಜ್ಯದಲ್ಲಿ ದಂಗೆಕೋರರು ತಲೆಯೆತ್ತಿಕೊಂಡರುಕೂಡ ಅವರ ಮೇಲೆ ಸೈನ್ಯವನ್ನು ಬಿಡುವದಕ್ಕೆ ಅವನಿಗೆ ಮನಸ್ಸು ಬರುತ್ತಿರಲಿಲ್ಲ!

ಅಖ್ನೇಟನ್ನನ ಏಕೇಶ್ವರಧರ್ಮವು ರಾಜ್ಯದಲ್ಲೆಲ್ಲ ಹರಡುವದರೊಳಗೆ ಅವನಿಗೆ ಆರೋಗ್ಯವು ತಪ್ಪಿತು. ಕ್ರಿ.ಪೂ.1358 ರಲ್ಲಿ ಅವನು ಕಾಲವಾದನು; ಅವನ ಚಕ್ರಾದಿಪತ್ಯವೂ ಕೊನೆಗಂಡಿತು.

ಏಟನ್ ಧರ್ಮವು ಅಖ್ನೇಟನ್ನನ ಕಾಲಕ್ಕೇ ಮುಗಿಯಿತಾದರೂ ಏಕೇಶ್ವರವಾದವೇನೂ ಮುಳುಗಲಿಲ್ಲ. ಅವನ ತರುವಾಯ ಬಂದ ಧೊರೆಯು ಮತ್ತೆ ಥೀಟ್ಸ್ ನಗರಿಗೇ ಬಂದನು. ಖುತ್‌ಆಟನ್ ದೇವಾಲಯವನ್ನು ನೆಲಸಮಮಾಡಿ ಅದರ ಕಲ್ಲುಗಳಿಂದ ಮತ್ತೆ ಅಮೂನ್ ದೇವರ ಗುಡಿಯೊಂದನ್ನು ಕಟ್ಟಿಸಿದನು. ಧ್ವಜಸ್ಥಂಬಗಳ ಮೇಲೆ ಇದ್ದ ಅಖ್ನೇಟನ್ನನ ಹೆಸರನ್ನು ಪೂಜಾರಿಗಳು ಅಳಿಸಿಹಾಕಿಸಿದರು. ಮತ್ತೆ ಹಿಂದಿನಂತೆ ಅಮೂನ್‌ಧರ್ಮದ ಉಪದೇಶಕರ ಹಾವಳಿಯು ಎದ್ದುಕೊಂಡಿತು. ಆದರೇನು? ಈಗ ಅವರನ್ನು ಯಾರೂ ನೆನಸುವದಿಲ್ಲ. ಥೀಬ್ಸುನಗರಿಯಲ್ಲಿ ಕ್ರಿ.ಶ.1907ರಲ್ಲಿ ದೊರೆತ ಅಖ್ನೇಟನ್ನನ ಅಸ್ತಿಗಳು ಈಗಲೂ ಇರುತ್ತವೆ; ಭೂಲೋಕದಲ್ಲಿ ಅಂಥ ಪ್ರಾಚೀನಕಾಲದಲ್ಲಿಯೇ ಏಕೇಶ್ವರಧರ್ಮವನ್ನು ಸಾರಿ ಅನುಷ್ಠಾನದಲ್ಲಿ ತಾನೂ ಅವಲಂಬಿಸಿದ ಮಹಾತ್ಮನೆಂದು ಅಖ್ನೇಟನ್ನನನ್ನು ಎಲ್ಲರೂ ಸಮ್ಮಾನದಿಂದ ಸ್ಮರಿಸುತ್ತಾರೆ!.

★★★★★

# ಈನ್ಸ್ಟೈನ್

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು

ಈನ್ಸ್ಟೈನ್ನನೆಂಬಾತನು ಒಬ್ಬ ಯಹೂದ್ಯನು, ಆತನು ಕಂಡುಹಿಡಿದ ಸಾಪೇಕ್ಷತಾವಾದವೆಂಬುದು (Theory of Relativity) ಈಗ ಜಗತ್ಪ್ರಸಿದ್ಧವಾಗಿ ರಾತ್ತದೆ. ಆದರೆ ಇದೇ ಮಹಾಶಯನು ಈಗ ಹಿಟ್ಲರನ ಉರಿಗಣ್ಣಿನ ಕಟಾಕ್ಷಕ್ಕೆ ಬಿದ್ದು ಜರ್ಮನಿಯಿಂದ ಗಡೀಪಾರಾಗಿರುತ್ತಾನೆ. ಅವನ ಆಸ್ತಿಯು ಸರಕಾರಕ್ಕೆ ಸೇರಿಹೋಗಿರುತ್ತದೆ; ಆತನು ಬ್ಯಾಂಕಿನಲ್ಲಿಟ್ಟಿದ್ದ ನಿಕ್ಷೇಪದ ಲೆಕ್ಕಾಚಾರವು ಸರಕಾರದ ಕೈವಶವಾಗಿಬಿಟ್ಟಿರುತ್ತದೆ!

ಈನ್ಸ್ಟೈನ್ನಿನ ಸ್ವಭಾವವು ಎಂಥದ್ದು? ಅವನೊಬ್ಬ ಬಹಳ ಸರಳಜೀವಿ, ಅವನಿಗೆ ಊಟದಲ್ಲಾಗಲಿ ಉಡುಪಿನಲ್ಲಾಗಲಿ ಯಾವ ಆಡಂಬರವೂ ಬೇಕಿರುವದಿಲ್ಲ. ಅವನಿಗೆ ಸಾವಿರ ಡಾಲರುಗಳು ಎಂದರೆ ಎರಡು ಸಾವಿರದ ಐದನೂರು ರೂಪಾಯಿಗಳ ಮೇಲೆ ಬೆಲೆಬಾಳುವ ಒಂದು ಚೆಕ್ಕನ್ನು ಕಳಿಹಿಸಿಕೊಟ್ಟಿದ್ದು. ಅವನು ಅದನ್ನು ತನ್ನ ಪುಸ್ತಕದಲ್ಲಿ ಓದಿದ ಭಾಗವನ್ನು ಗುರುತು ಮಾಡಿಕೊಳ್ಳುವ ಚೀಟಿಯಾಗಿಟ್ಟುಕೊಂಡುಬಿಟ್ಟನು. ಅದು ಆ ಪುಸ್ತಕದಲ್ಲಿ ಬಹುಕಾಲವಿತ್ತು, ಕೊನೆಗೆ ಆ ಪುಸ್ತಕವೂ ಎಲ್ಲಿಯೋ ಕಳೆದುಹೋಗಿಬಿಟ್ಟಿತು!

ಈನ್ಸ್ಟೈನ್ನದು ಬಹಳ ಓದುವದಿಲ್ಲವಂತೆ ರಾಗಮಾಲಿಕೆ ಅಥವಾ ಪಿಟೀಲು ಬಾರಿಸುವದು, ಆಗಾಗ್ಗೆ ಏನನ್ನೋ ಯೋಚಿಸುತ್ತಾ ಸಂಚಾರಕ್ಕೆ ಹೋಗಿ ಬರುವದು– ಇಷ್ಟೇ ಅವನ ದಿನಚರಿಯು ಕೆಲಸ, ತಾನು ಕಂಡುಹಿಡಿದ ಸಾಪೇಕ್ಷತಾವಾದವನ್ನು ಅವನು 12ಪುಟಗಳ ಒಂದು ಹಸ್ತಪತ್ರಿಕೆಯಾಗಿ ಬರೆದುಕೊಟ್ಟನು. ಇದಕ್ಕೆ ಪ್ರಕೃತಿಶಾಸ್ತ್ರದಲ್ಲಿ ಅವನಿಗೆ ಸುಪ್ರಸಿದ್ಧ ನೋಬೆಲ್ (Nobel) ಬಹುಮಾನವು ಬಂದಿತು. ಈ ಪತ್ರಿಕೆಯನ್ನು ಸೂತ್ರರೂಪವಾಗಿಟ್ಟುಕೊಂಡು ಬೇರೆ ವಿಜ್ಞಾನಶಾಸ್ತ್ರಜ್ಞರು ಸುಮಾರು 400 ಪುಸ್ತಕಗಳನ್ನೂ ಪುಸ್ತಿಕೆಗಳನ್ನೂ ಪ್ರಬಂಧಗಳನ್ನೂ ಬರೆದಿರುತ್ತಾರೆ. ಈಗ ಈ ವಾದದಿಂದಾಗಿ ಪಾಶ್ಚಾತ್ತ್ಯರ ಭೌತಿಕವಿಜ್ಞಾನವೂ ತತ್ತ್ವವಿಚಾರದ ಕ್ರಮವೂ ಮತವಿಚಾರದ ರೀತಿಯೂ ತೀರ ಬೇರ್ಪಡಬೇಕಾಗಿ ಬಂದಿರುತ್ತದೆ, ಅಂಥ ಅದ್ಭುತಶೋಧನವದು! ಈ ಶೋಧನದ ಮೂಲರೂಪವು ಮೊಟ್ಟಮೊದಲು

ಈನ್ಸ್ಟೈನನಿಗೆ ಒಂದು ಚಿಕ್ಕಮಕ್ಕಳ ಕೈಗಾಡಿಯಲ್ಲಿ ತನ್ನ ಗಂಡುಮಗುವನ್ನು ನೊಕಿಕೊಂಡು ಹೋಗುತ್ತಿದ್ದಾಗ ಪ್ರೇಗ್‌ಪಟ್ಟಣದಲ್ಲಿ ಮನಸ್ಸಿಗೆ ಹೊಳೆಯಿತಂತೆ!

ಈ ಸರಳಜೀವನದ ಮಹಾಶಯನಿಗೆ ಇಂಥ ಸಾಮಾನ್ಯರೀತಿಯಲ್ಲಿ ಹೊಳೆದ ಈ ವಾದವನ್ನು ವಿವರಿಸುವದು ವಿದ್ವಾಂಸರಿಗೂ ಬಲುಕಷ್ಟ. ಕಾಲವೂ ದೇಶವೂ ಸೇರಿ ನಾಲ್ಕು ಅಳತೆಗಳ ಒಂದೇ ಪದಾರ್ಥವೆಂಬುದೊಂದು ಈ ವಾದದಲ್ಲಿ ಹೊರ ಹೊರಟಿರುವ ಶೋಧವೂ ಸಾಮಾನ್ಯರಾದ ನಮ್ಮಂಥ ಸ್ಥೂಲಬುದ್ಧಿಗಳಿಗೆ ಅದರ ಅಭಿಪ್ರಾಯವು ಅಷ್ಟು ಬೇಗನೆ ಹೇಗೆ ತಿಳಿದೀತು!

ಈ ವಾದವೇನೂ ಇಲ್ಲಿ ನಮಗೆ ಪ್ರಕೃತವಲ್ಲ. ಇಂಥ ಅಗಾಧಪ್ರತಿಭೆಯ ಈ ಮಹಾಶಯದ ಅಮಾನಿತ್ವವೂ ಅದಂಭಿತ್ವವೂ  ನಮಗೆ ಅತ್ಯಂತಮನನೀಯವಾಗಿ ರುತ್ತದೆ. ಒಮ್ಮೆ ಈ ಮಹಾತ್ಮನನ್ನು ಗೌರವಿಸಿ ಒಂದು ಸತ್ಕಾರಕೂಟವನು ಏರ್ಪಡಿಸಿ ಭೋಜನಕ್ಕಾಗಿ ಅನೇಕ ದೊಡ್ಡಮನುಷ್ಯರು ಸೇರಿದ್ದರಂತೆ. ಪಾಶ್ಚಾತ್ಯರ ಆಚಾರಪದ್ಧತಿಯಂತೆ ಗೌರವಪಾತ್ರನಾದ ಅಭ್ಯಾಗತನು ಊಟದ ಕಾಲಕ್ಕೆ ಬಂದು ಭಾಷಣವನ್ನು ಮಾಡಬೇಕಾಗುತ್ತದೆ. ಅದರಂತೆ ಈನ್ಸ್ಟೈನ್ನಸನ್ನು ಮಾತನಾಡಬೇಕೆಂದು ಪ್ರಾರ್ಥಿಸಲಾಗಿ 'ಅಇಲ್ಲ; ಇದಕ್ಕಾಗಿ ನಾನು ವಿಷಾಧಿಸುತ್ತೇನೆ'' ಎಂದು ಕೂತುಕೊಂಡುಬಿಟ್ಟನು. ಸ್ವಲ್ಪ ಹೊತ್ತಿನಮೇಲೆ ಮತ್ತೆ ಎದ್ದು ನಿಂತು 'ಅಏನಾದರೂ ಹೇಳುವ ವಿಷಯವು ತೋಚಿದರೆ ಮತ್ತೆ ಬರುತ್ತೇನೆ'' ಎಂದುಬಿಟ್ಟನು! ಇದಾದಮೇಲೆ ಆರುತಿಂಗಳಾದಬಳಿಕ ಅಧ್ಯಕ್ಷರಿಗೆ 'ಅಇಗೊ, ಒಂದು ವಿಷಯ ತೋಚಿದೆ'' ಎಂದು ಬರೆದನು. ಮತ್ತೂ ಬಂದು ಸತ್ಕಾರಕೂಟದ ಸಂತರ್ಪಣೆಯು ಆತನ ಗೌರವಾರ್ಥವಾಗಿ ನೆಡೆಯಿತು. ಆಗ ಅವನು ತನ್ನ ಭಾಷಣವನ್ನು ಮಾಡಿದನಂತೆ ಅಂತೂ ಈನ್ಸ್ಟೈನ್ನನಿಗೆ ಸಮಾಜ ಪದ್ಧತಿಯ ಕಟ್ಟುಪಾಡಿ ಗೆ ಸಿಕ್ಕಿಕೊಳ್ಳುವ ಅಭ್ಯಾಸವೇ ಇಲ್ಲ.

ಈನ್ಸ್ಟೈನ್ನನನ್ನ ಜರ್ಮನರು ಹಿಂಸೆಗೆ ಗುರಿಮಾಡಿರುತ್ತಾರೆಷ್ಟೆ ಆದರೆ ಆತನೇನೂ ಯಾರನ್ನೂ ಹಗೆಮಾಡುತ್ತಿರುವದಿಲ್ಲ ಆತನಿಗೆ ಇಡಿಯ ಮಾನವರ್ಗದ ಮೇಲೆಯೇಪ್ರೀತಿ. ಇಡಿಯ ಭೂಮಂಡಲವೇಪರಸ್ಪರಸೌಹಾರ್ದದಿಂದಇರುವದು ಸಾಧ್ಯವೆಂಬುದು ಅವನ ಮತವಾಗಿರುತ್ತದೆ. ವಿಜ್ಞಾನಶಾಸ್ತ್ರದ ಒಂದಾನೊಂದು ತತ್ತ್ವವನ್ನು ಕಂಡುಹಿಡಿದ ಋಷಿ ಈನ್ಸ್ಟೈನ್ನನು. ಜಗತ್ತಿನ ಒಂದು ಭಾಗದ

ವಿಷಯವನ್ನು ತಿಳಿಯುವದರಲ್ಲಿ ಮಗ್ನವಾದ ಚಿತ್ತದಲ್ಲಿಯೇ ಇಂಥ ಸದ್ಗುಣಗಳು ಮೂಡುವವು; ಹೀಗಿರುವಲ್ಲಿ ಇಡಿಯ ದೃಶ್ಯರಾಶಿಯನ್ನೇ ಪರಬ್ರಹ್ಮವಾಗಿ ಕಂಡ ಮಹರ್ಷಿಗಳ ಹೃದಯವು ಎಷ್ಟು ವಿಶಾಲವಾಗಿದ್ದಿರಬೇಕು! 'ಅಸರ್ವವೂ ಆನಂದ ಸ್ವರೂಪವಾದ ಬ್ರಹ್ಮವೇ'' ಎಂಬ ಪರಮತತ್ತ್ವದ ಜ್ಞಾನವು ಹೃದಯವನ್ನು ಎಷ್ಟು ಹಿಗ್ಗಿಸಬೇಡ, ಎಂಥ ಶುದ್ಧವಾದ ಸೃಷ್ಟಿಪ್ರೇಮವನ್ನು ಹುಟ್ಟಿಸಬೇಡ!

★★★★★

# ಭೌತಿಕವಿಜ್ಞಾನದ ಋಷಿಯೊಬ್ಬನ ಅಂತರ್ಧಾನ

(ಆಲಬರ್ಟ್ ಐನ್‌ಸ್ಟನ್)

ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತಿಸ್ವಾಮಿಗಳವರು

**'ನೀತಿನಿಪುಣರಾದವರು ನಿಂದಿಸಲಿ ಅಥವಾ ಹೊಗಳಲಿ, ಲಕ್ಷ್ಮಿಯು ಬಂದು ಸೇರಲಿ ಅಥವಾ ತನ್ನಿಚ್ಛೆಯಿದ್ದಂತೆ ಹೊರಟುಹೋಗಲಿ, ಇಂದೇ ಮರಣವಾಗಲಿ ಅಥವಾ ಯುಗಾಂತರದಲ್ಲಾಗಲಿ, ಧೀರರಾದವರು ನ್ಯಾಯದ ಹಾದಿಯಿಂದ ಒಂದು ಹೆಜ್ಜೆಯನ್ನೂ ಅತ್ತ ಇಡುವದಿಲ್ಲ'** - ಎಂಬುದೊಂದು ಭರ್ತೃಹರಿಯ ಸುಭಾಷಿತವು. ತನಗೆ ನ್ಯಾಯವೆಂದು ತೋರಿದ ಭೌತಿಕವಿಜ್ಞಾನದ ಅನ್ವೇಷಣೆಯಲ್ಲಿಯೇ ಜನ್ಮವನ್ನೆಲ್ಲ ಕಳೆದ ಋಷಿತುಲ್ಯನಾದ **ಡಾ|| ಅಲ್ಬರ್ಟ್ ಐನ್‌ಸ್ಟನ್** ಎಂಬಾತನ ಜೀವನಚರಿತ್ರೆಯು ಈ ಸುಭಾಷಿತಕ್ಕೆ ಒಂದು ಉತ್ತಮ ಉದಾಹರಣೆಯಾಗಿರುತ್ತದೆ.

ಜರ್ಮನಿಯಲ್ಲಿ ಯಹೂದ್ಯರ ಮನೆತನದಲ್ಲಿ ಹುಟ್ಟಿಬೆಳೆದ ಈ ಧೀಮಂತನಿಗೆ ಬಾಹ್ಯಪ್ರಕೃತಿಶಾಸ್ತ್ರ ಮತ್ತು ಗಣಿತ- ಇವುಗಳಲ್ಲಿ ನಿರುಪಮವಾದ ಪ್ರೇಮವಿತ್ತು. ಆ ಪ್ರಕೃತಿಶಾಸ್ತ್ರದಲ್ಲಿ ಹಲವು ಕಡೆಗಳಲ್ಲಿ ಆಚಾರ್ಯಪದವಿಯನ್ನು ಪಡೆದು ನೋಬೆಲ್ ಬಹುಮಾನವನ್ನೂ ಅನೇಕ ಪದಕಗಳನ್ನೂ ಸಂಭಾವನೆಗಳನ್ನೂ ಹೊಂದಿ ಭೂಮಂಡಲದಲ್ಲೆಲ್ಲ ವಿಖ್ಯಾತನಾದನು. ನಾಸಿಯವರ ಯಹೂದ್ಯದ್ವೇಷದ ಫಲವಾಗಿ ಅಧಿಕಾರಚ್ಯುತಿ, ದೇಶಭ್ರಂಶ, ಪರದೇಶಗಳಲ್ಲಿ ಅಲೆದಾಟ-

ಇವುಗಳನ್ನನುಭವಿಸಿ ಕೊನೆಗೆ ಅಮೆರಿಕದಲ್ಲಿ ಪ್ರಿನ್ಸ್ಟನ್ ಎಂಬಲ್ಲಿಯ ಪ್ರೌಢತತ್ತ್ವಾನ್ವೇಷಣಾಸಂಸ್ಥೆಯಲ್ಲಿ ಅಜೀವವಾಗಿ ಆಚಾರ್ಯಪದವಿಯನ್ನು ಸ್ವೀಕರಿಸಿದನು. ಈಚೆಗೆ ವಿಶ್ರಾಂತನಾದ ಮೇಲೂ ಅಲ್ಲಿಯೇ ಏಕಾಂತವಾಸ ಮಾಡುತ್ತಾ ಗಣಿತದಲ್ಲಿ ತಾನು ಮಾಡುತ್ತಿದ್ದ ತತ್ತ್ವಶೋಧನೆಯ ಪರಿಪೂರ್ತಿಯಲ್ಲಿಯೇ ನಿರತನಾಗಿದ್ದು 1955 ಏಪ್ರಿಲ್ 18ರಲ್ಲಿ ತನ್ನ ಎಪ್ಪತ್ತಾರನೆಯ ವಯಸ್ಸಿನಲ್ಲಿ ಈ ಲೋಕವನ್ನು ಬಿಟ್ಟು ತೆರಳಿದನು. ಆದರೆ ಆತನು ಆವಿಷ್ಕಾರ ಮಾಡಿರುವ 'ಸಾಪೇಕ್ಷತಾವಾದ' (Theory of Relativity) ಎಂಬ ತತ್ತ್ವವು ಅವನ ಹೆಸರನ್ನು ವಿಜ್ಞಾನಿಗಳ ಪ್ರಪಂಚದಲ್ಲಿ ಅಜರಾಮರವಾಗಿ ಮಾಡಿರುವದು.

ಈ ಮಹಾವಿಜ್ಞಾನಿಯು ಪ್ರಪಂಚಕ್ಕೆ ಹರಿಸಿಕೊಟ್ಟಿರುವ ತತ್ತ್ವವಾದದ ಮರ್ಮವನ್ನು ಅರಿಯುವದು ಗಣಿತಶಾಸ್ತ್ರಪರಿಚಯವಿಲ್ಲದ ಸಾಮಾನ್ಯ ಜನರಿಗೆ ಸಾಧ್ಯವಿಲ್ಲ. ನನಗೆ ಆ ಪ್ರೌಢಶಾಸ್ತ್ರದ ಗಂಧವೂ ಇಲ್ಲದ್ದರಿಂದ ಮಹಾಮಹಾ ವಿಜ್ಞಾನಿಗಳುಮಾತ್ರವೇ ತಿಳಿಯಬಲ್ಲ ಆ ಗಹನವಿಷಯವನ್ನು ಬಿಡಿಸಿ ತಿಳಿಸುವ ಗೋಜಿಗೆ ನಾನು ಹೋಗುವದಿಲ್ಲ. ಆದರೆ ಆತನ ಶೋಧನೆಯ ಫಲಿತಾಂಶಗಳಲ್ಲಿ ಎರಡನ್ನು ಕುರಿತು ಇಲ್ಲಿ ಪ್ರಸ್ತಾಪಿಸುವದು ಅಧ್ಯಾತ್ಮಪ್ರಕಾಶದ ವಾಚಕರಿಗೆ ಪ್ರಯೋಜನಕಾರವಾದೀತೆಂದು ನನ್ನ ಭಾವನೆ. ಶಕ್ತಿಯೂ ದ್ರವ್ಯವೂ ಒಂದೇ ವಸ್ತುವಿನ ಆಕಾರವಿಶೇಷಗಳೆಂಬ ತತ್ತ್ವವು ಆತನ ವಾದದಿಂದ ಹೊರಟ ಸಿದ್ಧಾಂತವು. ಭೌತಿಕದ್ರವ್ಯದ ಅತ್ಯಂತಸೂಕ್ಷ್ಮಾಂಶದಲ್ಲಿಯೂ ಅಮಿತವಾದ ಶಕ್ತಿಯು ಅಡಗಿದೆ ಎಂದು ಆತನ ಶೋಧದಿಂದ ಗೊತ್ತಾಗಲು ಅಮೆರಿಕದ ವಿಜ್ಞಾನಿಗಳು ಆ ತತ್ತ್ವವನ್ನು ಅನುಸರಿಸಿಯೇ ಆಟಂಬಾಂಬ್ ಎಂಬ ಘಾತುಕಾಶಾಸ್ತ್ರವನ್ನು ಕಂಡುಹಿಡಿದರಂತೆ. ಶಾಂತಿಪ್ರಿಯರಾದವರನೇಕರು ಈ ಶಕ್ತಿಯನ್ನು ಜಗತ್ಕಲ್ಯಾಣಕ್ಕೆ ಉಪಯೋಗಿಸುವ ಮಾರ್ಗಗಳನ್ನು ಶೋಧಿಸಿ ತೆಗೆಯುತ್ತಿದಾರೆ. ಹೀಗೆ ಭೌತಿಕದ್ರವ್ಯದಲ್ಲಿ ಇಂಥ ಅದ್ಭುತಶಕ್ತಿಯು ಅಡಗಿರುವದೆಂಬುದು ವಿಶ್ವವೆಲ್ಲಕ್ಕೂ ಮೂಲವಾಗಿರುವ ಪರಮಾತ್ಮಶಕ್ತಿಯ ಅದ್ಭುತಸ್ವಭಾವವನ್ನು ಕಲ್ಪಿಸಿಕೊಳ್ಳುವವರಿಗೆ ಒಂದು ಸಾಧನವನ್ನು ಒದಗಿಸಿಕೊಟ್ಟಂತೆ ಆಗಿರುವದೆಂಬುದರಲ್ಲಿ ಸಂಶಯವೇನು? 'ನಮ್ಮ ಬುದ್ಧಿಗೆ ಅತೀತವಾಗಿರುವ ಗೂಢತತ್ತ್ವವೊಂದು ಇದೆ; ಅದೇ ಸರ್ವಜ್ಞತೆಯ ರೂಪದಿಂದಲೂ ನಿರತಿಶಯಸೌಂದರ್ಯರೂಪದಿಂದಲೂ ಕಾಣಿಸಿಕೊಳ್ಳುತ್ತಿದೆ ಎಂದು ತಿಳಿಯುವದೇ ಧರ್ಮದ ಮರ್ಮ' ಎಂದು ಈ ವಿಜ್ಞಾನಿಯೂ ಒಮ್ಮೆ ಹೇಳಿದ್ದನಂತೆ.

ಕಾಲವೆಂಬುದು ಉಷ್ಣ, ಅಗಲ, ಎತ್ತರ- ಇವುಗಳ ಜೊತೆಗೆ ಸೇರಿರುವ ನಾಲ್ಕನೆಯ ಅಳತೆ- ಎಂಬುದೊಂದುಆತನು ಕಂಡುಹಿಡಿದ ತತ್ತ್ವದ ಮತ್ತೊಂದು ಭಾಗವು. ಕಾಲಾಕಾಶಗಳೆರಡೂ ಸೇರಿ ಒಂದೇ ಪದಾರ್ಥವೆಂಬ ಈ ಸಿದ್ಧಾಂತವು ಭೌತಿಕಪ್ರಪಂಚದ ವಿಷಯಕ್ಕೆ ಈವರೆಗೆ ಇದ್ದ ಭಾವನೆಯಲ್ಲಿ ಒಂದು ಮಹಾಕ್ರಾಂತಿಯನ್ನೇ ಉಂಟುಮಾಡುತ್ತದೆ. ಈ ವಾದವನ್ನು ಮನಃಶಾಸ್ತ್ರಕ್ಕೂ ತತ್ತ್ವವಿಚಾರಕ್ಕೂ ಉಪಯೋಗಿಸಿಕೊಂಡು ಹಲವರು ಅನೇಕ ಉಪಸಿದ್ಧಾಂತಗಳನ್ನು ತೆಗೆದಿರುತ್ತಾರೆ. ಹೊರಗೆ ಸಾರ್ವತ್ರಿಕವಾದ ಅಖಂಡವಾದ ಕಾಲವೆಂಬುದೇ ಇಲ್ಲ. ಆಕಾಶವೂ ಇಲ್ಲ; ಹೊರಗೆ ಭೌತಿಕದ್ರವ್ಯವೆಂಬುದೇ ನಿಜವಾಗಿಲ್ಲ - ಎಂದು ಮುಂತಾಗಿ ತರ್ಕಿಸುತ್ತಿರುವ ವಿಜ್ಞಾನಮಾತ್ರವಾದಿಗಳು ಹಲವರು ಹುಟ್ಟಿಕೊಂಡಿದಾರೆ. ಇದು ಶ್ರೀಗೌಡಪಾದರ ಅಜಾತಿವಾದಕ್ಕೂ ಮಾಯಾವಾದಕ್ಕೂ ಹೆಚ್ಚಿನ ಒತ್ತಾಸೆಯನ್ನು ಕೊಡುತ್ತದೆ ಎಂದೂ ನಮ್ಮ ದೇಶದಲ್ಲಿ ಹಲವರು ವಾದಿಸುತ್ತಿದಾರೆ.

ಐನ್‌ಸ್ಟನ್ ಮಹಾಶಯನು ಜ್ಞಾನಾನ್ವೇಷಣೆಯಲ್ಲಿಯೇ ನಿರತರಾಗಿ ರುವವರಿಗೆ ಭೂಷಣವಾಗುವ ಸರಳಜೀವನ, ಅನೌದ್ಧತ್ಯ ವಿನಯ, ಏಕಾಂತಪ್ರಿಯತೆ ಮುಂತಾದ ಸುಗುಣಗಳಿಗೆ ಆಕರನಾಗಿದ್ದನೆಂದು ತಿಳಿದುಬಂದಿದೆ. ಆತನು ಭರತಖಂಡದವರಲ್ಲಿ ಬಹಳ ಪ್ರೇಮವುಳ್ಳವನಾಗಿದ್ದನಂತೆ; ಇದು ನಮ್ಮ ದೇಶದವರಿಗೆಲ್ಲ ಒಂದು ಹೆಮ್ಮೆಪಡತಕ್ಕ ವಿಷಯ.

ಭಗವಂತನ ಮಹಿಮೆಯು ಅಪಾರವಾದದ್ದು ಆತನ ಸೃಷ್ಟಿಯಾಗಿ ರುವ ಈ ವಿಶ್ವದಲ್ಲಿ ಒಂದು ಅಂಶವನ್ನು ವಿಚಾರಮಾಡುವವರೇ ಇಂಥ ಅದ್ಭುತಪ್ರತಿಭೆಯವರಾಗಿರುವಲ್ಲಿ, ಆತನನ್ನೇ ಅನನ್ಯಭಕ್ತಿಯಿಂದ ಭಜಿಸಿ ಆತನ ಅನುಗ್ರಹದಿಂದ ಪರಮಾರ್ಥಜ್ಞಾನವನ್ನು ಸಂಪಾದಿಸುವವರನ್ನು ಏನೆಂದು ಕೊಂಡಾಡೋಣ!

★★★★★

# ಜೆನೋ ಆದ ಸೇಂಟ್ ಕ್ಯಾಥರೀನ್

**ಶ್ರೀ ಶ್ರೀಸಚ್ಚಿದಾನಂದೇಂದ್ರಸರಸ್ವತೀಸ್ವಾಮಿಗಳು**

ಮನುಷ್ಯನು ತನ್ನ ಸ್ವಪ್ರಯತ್ನದಿಂದ ಸಿದ್ಧನಾಗುವದಿಲ್ಲ, ಪರಮೇಶ್ವರನ ದಯೆಯಿಂದಲೇ, ಆತನ ಅನುಗ್ರಹದಿಂದಲೇ ಅವನಿಗೆ ಸುಖರಾಶಿಗಳು ದೊರೆಯುತ್ತವೆ. ಈ ಲೋಕದಲ್ಲಿ ಭಗವದ್ಭಕ್ತಿಗಿಂತ ಹೆಚ್ಚಿನದು ಮತ್ತೆ ಯಾವದೂ ಇರುವದಿಲ್ಲ, ಅದೇ ಪರಮಪುರುಷಾರ್ಥವು, ಅದೇ ಪರಮಾನಂದವು.

ಈ ತತ್ತ್ವವು ಸೇಂಟ್ ಕ್ಯಾಥರೀನ್ ಎಂಬ ಮಹಾಮಹಿಮಳ ಚರಿತ್ರೆಯಿಂದ ಕಂಡುಬರುತ್ತದೆ. ಆಕೆಯು ಆಗರ್ಭಶ್ರೀಮಂತರಾದ ತಂದೆತಾಯಿಗಳ ಹೊಟ್ಟೆಯಲ್ಲಿ ಜನಿಸಿದಳು. ತಂದೆಯು ಅಂಜೌ ದೊರೆಯಾದ ರೀನಿ ಎಂಬಾತನ ಪ್ರತಿನಿಧಿಯಾಗಿ ನೇಪಲ್ಸ್ ನಗರದಲ್ಲಿ ಆಳುತ್ತಿದ್ದನು. ಅವನಿಗೆ ಅರಸರ ಹಾಗೆ ಸ್ವತಂತ್ರವಾದ ಟಂಕಸಾಲೆ ಇತ್ತು. ಆದರೇನು? ಕ್ಯಾಥರೀನಿನ ಚಿಕ್ಕಂದಿನಲ್ಲಿಯೇ ಅವನು ಕಾಲವಶನಾದನು; ಆಕೆಯ ಕೈಹಿಡಿದ ಗಂಡನು ದುಂದುವೆಚ್ಚದಿಂದ ಬಲುಬೇಗನೆ ತಮ್ಮಿಬ್ಬರ ಆಸ್ತಿಯನ್ನೂ ಪೋಲುಮಾಡಿಬಿಟ್ಟನು.

ದುಂದುಗಾರಿಕೆ, ವಿಷಯಾಸಕ್ತಿ, ಹಟಮಾರಿತನ- ಇವುಗಳ ಜೊತೆಗೆ ಗಂಡನಾದ ಆಡೋರ್ನೆ ಎಂಬವನಲ್ಲಿ ಪತ್ನಿಯ ಅನಾದರವೂ ಇತ್ತು. ಕ್ಯಾಥರೀನಳು ಮದುವೆಯಾದ ಮೊದಲನೆಯ ಐದು ವರ್ಷಗಳು ಚಿಂತೆಯಿಂದ, ಎರಡನೆಯ ಐದು ವರ್ಷಗಳನ್ನು ವಿವಿಧವಿನೋದಗಳಿಂದ ಕಾಲಹಾಕಿದಳು. ಅವಳಿಗೆ ಹೇಗೂ ತೃಪ್ತಿ ದೊರೆಯಲಿಲ್ಲ. ಅವಳು ಬೇಸತ್ತು ಒಂದು ದಿನ ಸಾಯಂಕಾಲ- ಸೇಂಟ್ ಬೆನಿಡಿಕ್ಸ್ ಎಂಬ ಮಹಾತ್ಮರ ಹಬ್ಬದ ದಿನ- ಹೀಗೆಂದು ಬೇಡಿಕೊಂಡಳು, 'ಮಹಾತ್ಮನೆ, ನಾನು ಮೂರು ತಿಂಗಳು ಹಾಸಿಗೆಹಿಡಿಯುವಂತೆ ದೇವರಲ್ಲಿ ಪ್ರಾರ್ಥಿಸು!''

ಇದಾದ ಎರಡು ದಿನಗಳ ಮೇಲೆ ಅವಳು ರೋಮನ ಕ್ಯಾಥೋಲಿಕರ ಪದ್ಧತಿಯಂತೆ ಒಬ್ಬ ಪಾದ್ರಿಯ ಬಳಿಗೆ ಪಾಪವಿಮೋಚನೆಗೆ[1] ಹೋದಳು. ಮೊಳಕಾಲೂರು ಕುಳಿತುಕೊಂಡು ಇನ್ನೇನು ಮಾತನಾಡಬೇಕು, ಅಷ್ಟರಲ್ಲಿ

1. ಗುರುಭಾವನೆಯಿರುವ ಹಿರಿಯರ ಬಳಿಯಲ್ಲಿ ತನ್ನ ಪಾಪಗಳನ್ನು ಒಂದೂ ಬಿಡದೆ ಪಶ್ಚಾತ್ತಾಪದಿಂದ ಹೇಳಿಕೊಂಡರೆ ಈಶ್ವರನು ಮನ್ನಿಸಿ ಸನ್ಮಾರ್ಗಕ್ಕೆ ಒಯ್ಯುವನೆಂದು ಕ್ಯಾಥೊಲಿಕರ ನಂಬಿಕೆ.

ಭಗವಂತನ ಕೃಪಾಕಟಾಕ್ಷವು ಆಕೆಯ ಮೇಲೆ ಬಿದ್ದಿದೆ! ಅವಳು ತನಗುಂಟಾದ ಶಾಂತಿಯಲ್ಲಿ ಮೈಮರೆತು ''ಸ್ವಾಮಿ, ಈಗ ನಾನು ಮಾತನಾಡಲಾರೆ; ಇನ್ನೊಂದು ವೇಳೆ ಪಾಪನಿವೇದನೆಗೆ ಬರುತ್ತೇನೆ'' ಎಂದು ಬಂದುಬಿಟ್ಟಳು. ಅಲ್ಲಿಂದ ಮುಂದಕ್ಕೆ ಅವಳ ಜೀವನವೇ ಬದಲಾಯಿಸಿಬಿಟ್ಟಿತು. ಅಲ್ಲಿಂದ ಮುಂದಕ್ಕೆ ನಾಲ್ಕುವರ್ಷಗಳವರೆಗೆ ಆಕೆಯು ಉಗ್ರವಾದ ಪಶ್ಚಾತ್ತಾಪದ ತಪಶ್ಚರ್ಯೆಯನ್ನು ಮಾಡಿ ಸಾಧನವನ್ನು ಪೂರ್ಣ ಮಾಡಿಕೊಂಡಳು.

ಪತಿಯಾದ ಆಡೋರ್ನೆಯು ತನ್ನ ಭವ್ಯವಾದ ಭವನವನ್ನು ಬಿಟ್ಟು ವ್ಯಾಮಟೋನ್ ಆಸ್ಪತ್ರೆಯ ಬಳಿಯಲ್ಲಿದ್ದ ಒಂದು ಸಣ್ಣ ಮನೆಯನ್ನು ಸೇರಿಕೊಂಡನು. ಅವನ ದುಂದುವೆಚ್ಚದಿಂದ ಇನ್ನು ಮೇಲೆ ದಂಪತಿಗಳು ಮೊದಲಿನ ಅಂತಸ್ತಿನಲ್ಲಿ ಸಂಸಾರವನ್ನು ಸಾಗಿಸುವದು ಸಾಧ್ಯವೇ ಇರಲಿಲ್ಲ; ಆದರೆ ಸುದೈವದಿಂದ ಕ್ಯಾಥರೀನಳ ಮನಸ್ಸು ಪಕ್ವವಾಗಿದ್ದದ್ದರಿಂದ ಆ ಅಂತಸ್ತಿನ ಜೀವನವು ಅವಳಿಗೆ ಬೇಕಾಗಿಯೂ ಇರಲಿಲ್ಲ.

ಈಗ ಆಕೆಯು ಪೂರ್ಣವಾಗಿ ಏಕಾಂತವಾಸವನ್ನೂ ಧ್ಯಾನವನ್ನೂ ಅವಲಂಬಿಸಿದಳು; ಜೊತೆಯಲ್ಲಿ ರೋಗಿಗಳ ಉಪಚಾರವೇ ಮುಂತಾದ ಜನತಾಸೇವೆಯನ್ನು ಕೈಕೊಂಡಳು. ದಂಪತಿಗಳು ತಾವಿದ್ದ ಸಣ್ಣಮನೆಯನ್ನೂ ಬಿಟ್ಟುಕೊಡಬೇಕಾಗಿ ಬಂತು; ಅದಕ್ಕೂ ಸಿದ್ಧಳಾಗಿದ್ದ ಕ್ಯಾಥರೀನಳು ಎರಡೇ ಎರಡು ಕೊಟ್ಟಡಿಗಳನ್ನು ಬಾಡಿಗೆಗೆ ತೆಗೆದುಕೊಂಡು ವಾಸಕ್ಕೆ ನಿಂತಳು ಅವಳ ಪರಿಶುದ್ಧವಾದ ನಿರಹಂಕಾರದ ನಡತೆಯ ಪರಿಣಾಮವಾಗಿ ಗಂಡನ ನಡವಳಿಕೆ ಮಾರ್ಪಡುತ್ತಾಬಂತು; ಅವನು ಫ್ರಾನ್ಸಿಸ್ಸಿನ ತೃತೀಯಸಂಘಕ್ಕೇ (Tertiaries) ಸೇರಿದನು. ಕ್ಯಾಥರೀನಳು ಆಸ್ಪತ್ರೆಯ ಅಂಗಳದಲ್ಲಿದ್ದ ಒಂದು ಸಣ್ಣಮನೆಯನ್ನು ಸೇರಿಕೊಂಡು ತನ್ನ ಕರ್ತವ್ಯತೆಯಲ್ಲಿ ಎಂದಿನಂತೆ ಮಗ್ನಳಾದಳು.

ಈಗ ಆಕೆಯ ಆರೋಗ್ಯವು ದಿನದಿನಕ್ಕೆ ಕೆಡುತ್ತಾಬಂದು ಕ್ರಿ.ಶ.1500ರಲ್ಲಿ ಅವಳಿಗೊಂದು ವಿಲಕ್ಷಣವಾದ ರೋಗವು ಪ್ರಾಪ್ತವಾಯಿತು. ಅವಳೀಗೆ ಸ್ವಲ್ಪ ಹೊತ್ತು ಮೈಯೆಲ್ಲ ಕೆಂಡದ ಹಾಗೆ ಕಾಯುವ ಬಿಸಿಯನ್ನು ತೋರುವದು, ಆಮೇಲೆ ಅತ್ಯಂತ ತಣ್ಣಗಿದಂತೆ ಕಾಣುವದು – ಇಂಥ ವಿಚಿತ್ರವಾದ ಅನುಭವ ವುಂಟಾಗುವದಕ್ಕಾರಂಭವಾಯಿತು. ಒಂದು ಸಲ ಶಬ್ದಸ್ಪರ್ಶಾದಿಗಳ ಬಲು

ಸೂಕ್ಷ್ಮವಾದ ವೇದನೆಯಾಗುವದು, ಮತ್ತೊಂದು ಸಲಕ್ಕೆ ಯಾವ ವೇದನೆಯೂ ಇಲ್ಲದಿರುವದು– ಹೀಗಾಗುವದಕ್ಕೆ ಮೊದಲಾಯಿತು. ಕೆಲವು ವೇಳೆಗಳಲ್ಲಿ ಇನ್ನೇನು ಶರೀರವನ್ನು ಬಿಡುತ್ತಾಳೆ, ಎನ್ನುವಂತಿರುತ್ತಿತ್ತು. ಮತ್ತೆ ಕೆಲವುವೇಳೆಗಳಲ್ಲಿ ಅವಳಿಗೆ ಪೂರ್ಣಾರೋಗ್ಯವಿದ್ದಂತೆಯೇ ತೋರುತ್ತಿತ್ತು.

ವೈದ್ಯರು ಕೂಡ ಇಂಥ ರೋಗವೆಂದು ನಿಶ್ಚಯಿಸಲಾರದ ಈ ವ್ಯಾಧಿಯಿಂದ ಅವಳ ಏಕಾಂತವಾಸವು ಮತ್ತಷ್ಟು ಹೆಚ್ಚಾಯಿತ್ತು ಹೊರಗಿನ ಸೇವಾಕಾರ್ಯವು ಕಡಿಮೆಯಾಯಿತು. ಈ ಕಾಲದಲ್ಲಿ ಅವಳ ಸ್ನೇಹಿತರು ಕೆಲವರು ಮುಖ್ಯವಾಗಿ ಡಾನ್ ಕಿಟ್ಟಾನಿಯೋ (Doon Cattaneo) ಎಂಬ ಆಕೆಯ ಗುರುವೊಬ್ಬನು, ಎಟ್ಟೋರೆ ವರ್ನಾಸಾ (Ettore Vernazza) ಎಂಬ ಜಿನೋಲ್ ನಗರದ ದೊಡ್ಡ ಮನುಷ್ಯನೊಬ್ಬನು – ಈ ಕಾಲದಲ್ಲಿ ಅವಳೊಡನೆಯೇ ಇರುತ್ತಿದ್ದರು. ಕ್ಯಾಥರೀನಳು ಸ್ವತಃ ಯಾವ ಗ್ರಂಥವನ್ನೂ ಬರೆದಿಲ್ಲ; ಅವಳು ಈ ಕಾಲದಲ್ಲಿ ಆಡಿದ ಮಾತುಗಳನ್ನೂ ಇವರಿಬ್ಬರು ಬರೆದಿಟ್ಟಿರುತ್ತಾರೆ. ವರ್ನಾಸಾನ ಮಗಳು ಬರೆದ 'ಭಗವದ್ಭಕ್ತಿಯ ಪ್ರಶ್ನೋತ್ತರೀ' (Il Dialogo del Divine Amore) ಎಂಬ ಗ್ರಂಥದಲ್ಲಿ ಕ್ಯಾಥರೀನಳ ಉಪದೇಶವು ಏನೆಂಬುದು ಗೊತ್ತಾಗುತ್ತದೆ.

ಕ್ಯಾಥರೀನಳು ತನ್ನ ಸಾಧನವನ್ನು ಮುಗಿಸಿದ ಬಳಿಕ 23 ವರ್ಷಗಳ ಕಾಲ ಜೀವಿಸಿದ್ದಳು. ಜನೋಪಕಾರದ ಕೆಲಸದಲ್ಲಿಯೇ ನಿರತಳಾಗಿದ್ದರೂ ಅವಳು ಅದಕ್ಕೇನೂ ಅಷ್ಟು ಬೆಲೆಯನ್ನು ಕಟ್ಟಿರಲಿಲ್ಲ. ಚಿತ್ತವನ್ನು ಸಂಪೂರ್ಣವಾಗಿ ಪರಿಶುದ್ಧಗೊಳಿಸಿ ಭಕ್ತಿಯಿಂದ ಪರಮೇಶ್ವರಸಾಯುಜ್ಯವನ್ನು ಪಡೆಯುವದೇ ಪರಮಪುರುಷಾರ್ಥವೆಂಬುದು ಆಕೆಯ ಅಭಿಪ್ರಾಯವಾಗಿತ್ತು. ಈ ಸಾಯುಜ್ಯವನ್ನು ಅವಳು ಜೀವಂತಳಾಗಿಯೇ ಪಡೆದುಕೊಂಡು ಕ್ರಿ.ಶ.1510ರಲ್ಲಿ ಪರಮೇಶ್ವರನ ಸನ್ನಿಧಿಗೆ ತೆರಳಿದಳು. ಸತ್ತಮೇಲೆ ಆಕೆಯ ಶರೀರವು ಕೊಳೆಯಲೇ ಇಲ್ಲವಂತೆ; ಅದನ್ನು ಹೂಳಿಟ್ಟ ಸ್ಥಳದಿಂದ 120 ವರ್ಷಗಳಮೇಲೆ ತೆಗೆದು ಬೇರೊಂದು ಸ್ಥಳಕ್ಕೆ ಒಯ್ಯುವಾಗಲೂ ಅದು ಆಗತ್ತಾನೆ ಸತ್ತವರ ಶರೀರದಂತೆ ಕಾಣಿಸುತ್ತಿತಂತೆ! ಅಲ್ಲಿಂದ ಮುಂದಕ್ಕೆ ಅದು ಒಣಗುತ್ತಾಬಂತು; ಈಗಲೂ ಸ್ಯಾಂಟಾ ಕ್ಯಾಥರೀನ ಚರ್ಚಿನಲ್ಲಿ ಅದನ್ನುಒಂದು ಕನ್ನಡಿಯ ಗೂಡಿನಲ್ಲಿಟ್ಟಿರುತ್ತಾರೆಂದೂ ಅದು ಕೊಳೆಯದೆ ಇನ್ನೂ ಹಾಗೆಯೇ ಇರುವ ಅದ್ಭುತವನ್ನು ಕಂಡು ಸಾಮಾನ್ಯಜನರು ಅದನ್ನು ಬಹಳವಾಗಿ ಗೌರವಿಸುತ್ತಾರೆಂದೂ ಹೇಳುತ್ತಾರೆ.

ಈ ಮಹಾತ್ಮಳ ಜೀವನಚರಿತ್ರೆಯನ್ನೂ ಆಕೆಯು ನರಕದ ಶುದ್ಧಿಸ್ಥಾನದ (Purgotory) ವಿಚಾರವಾಗಿ ಹೇಳಿರುವದನ್ನೂ ಭಗವದ್ಭಕ್ತಿಯ ಪ್ರಶ್ನೋತ್ತರಿಯನ್ನೂ ಕ್ರಿ.ಶ.1551ರಲ್ಲಿ ಬೆಳಕಿಗೆ ಹಿಡಿದರು. ಚರಿತ್ರೆಯಲ್ಲಿ ಯಾವ ವಿಶೇಷ ಘಟನೆಗಳಿಲ್ಲದಿದ್ದರೂ ಆಕೆಯ ಉಪದೇಶಗಳು ಮನನಾರ್ಹವಾಗಿವೆ. ಆದ್ದರಿಂದ ಇಲ್ಲಿ ಒಂದೆರಡನ್ನು ಉದಾಹರಿಸುತ್ತೇವೆ.

1. ನಾನು ಕಣ್ಣುಗಳಿಲ್ಲದೆಯೇ ನೋಡುತ್ತೇನೆ, ಬುದ್ಧಿಯಿಲ್ಲದೆಯೇ ತಿಳಿಯುತ್ತೇನೆ, ವೇದನೆಂದ್ರಿಯವಿಲ್ಲದೆಯೇ ಅನುಭವಿಸುತ್ತೇನೆ, ರಸನೇಂದ್ರಿಯ ವಿಲ್ಲದೆಯೇ ಸವಿಯುತ್ತೇನೆ, ನನಗೆ ಆಕಾರವಿಲ್ಲ, ಅಳತೆಯಿಲ್ಲ, ನಾನು ಅದ್ಭುತವಾದ ವ್ಯಾಪಾರವೊಂದನ್ನೂ ಅದ್ಭುತ ಶಕ್ತಿಯೊಂದನ್ನೂ ನೋಡದೆ ನೋಡುತ್ತಿರುತ್ತೇನೆ; ಇದರಿಂದ ನಾನು ಮೊದಲು ಬಳಸುತ್ತಿದ್ದ ಪರಿಪೂರ್ಣತೆ ಸ್ವಚ್ಛತೆ ಪರಿಶುದ್ಧಿ-ಮುಂತಾದ ಮಾತುಗಳೆಲ್ಲವೂ ಈಗ ನನಗೆ ಪೂರ ಸುಳ್ಳುಮಾತುಗಳೆಂದೇ ಕಾಣುತ್ತಿದೆ; ಸತ್ಯದ ಸತ್ಯಸಂಧತೆಯ ವಿಚಾರವಾಗಿ ಗಳಹುತ್ತಿದ್ದವೆಲ್ಲವೂ ಹರಟೆಗಳೆಂದೇ ಕಾಣುತ್ತಿವೆ. ಹಿಂದಕ್ಕೆ ನನಗೆ ಸೂರ್ಯಮಂಡಲವು ಪ್ರಕಾಶಮಯವಾಗಿ ಕಾಣಿಸುತ್ತಿತ್ತು; ಈಗ ಅದು ಅಂಧಕಾರವಾಗಿ ತೋರುತ್ತಿದೆ. ಹಿಂದೆ ಮಧುರವಾಗಿ ಕಂಡದ್ದು ಈಗ ಕಹಿಯಾಗಿ ಕಾಣಿಸುತ್ತಿದೆ. ಏಕೆಂದರೆ ಯಾವ ಸೌಂದರ್ಯವೇ ಆಗಲಿ, ಯಾವ ಮಾಧುರ್ಯವೇ ಆಗಲಿ ಜೀವತ್ವದ ಸ್ವಷ್ಟತ್ವದ ಮಿಶ್ರಣದಿಂದ ಕಲಂಕಿತವಾಗಿರುತ್ತದೆ. ಆದ್ದರಿಂದ ಜೀವನು ಶುದ್ಧನಾಗಿ ಪರಿಶುದ್ಧವಾಗಿ ದೇವನಾದ ಬಳಿಕ ನಿಜವೆಂದರೇನು, ಶುದ್ಧಿಯಂದರೇನೆಂಬುದು ಅವನಿಗೆ ಗೋಚರವಾಗುತ್ತದೆ. ಆದರೆ ಈ ದರ್ಶನವು ನಿಜವಾಗಿ ಇದು ದರ್ಶನವೂ ಅಲ್ಲ – ವಾಕ್ಕಿಗೂ ಮನಸ್ಸಿಗೂ ಅಗೋಚರವಾಗಿರುತ್ತದೆ. ಇನ್ನು ಹೆಚ್ಚು ಹೇಳಲಾರೆ. ನನ್ನ ದೇವರು ಪೂರ್ಣವಾಗಿ ನನ್ನವನು ಪ್ರತಿಯೊಂದೂ ನನ್ನದೇ ಏಕೆಂದರೆ ಯಾವಯಾವನು ಆ ಭಗವಂತನೋ ಅದೆಲ್ಲವೂ ನನ್ನದಾಗಿಯೇ ತೋರುತ್ತಿದೆ. ಇಂಥ ಮಾತುಗಳನ್ನು ಇಂಥ ವಿಷಯಗಳನ್ನು ಈಗ ನಾನು ಭೂಮಿಯಲ್ಲಾಗಲಿ ಸ್ವರ್ಗದಲ್ಲಾಗಲಿ ಹೇಳಲಾರದೆ ಇದೇನೆ. ಆದ್ದರಿಂದ ನಾನು ಈಶ್ವರರಲ್ಲಿಯೇ ಮುಳುಗಿ ಮೌನಿಯಾಗಿಬಿಟ್ಟಿರುತ್ತೇನೆ.

2. ನನಗೆ ಇದು ಎಂದೆಂದಿಗೂ ಗೊತ್ತಿರುವ ವಿಷಯವಾಗಿರುತ್ತದೆ. ಇದು ದಿನದಿನಕ್ಕೂ ಇನ್ನೂ ಸ್ಫುಟವಾಗುತ್ತಲೇ ಬರುತ್ತಿದೆ; ಸಕಲಪುರುಷಾರ್ಥವೂ ಒಂದೇ ಒಂದು ಸ್ಥಾನದಲ್ಲಿರುತ್ತದೆ; ಅದೇ ಭಗವಂತನೆಂಬ ಸ್ಥಾನವು ಅದಕ್ಕಿಂತ

ಕೆಳಗೆ ಕಾಣುವ ಪುರುಷಾರ್ಥವೆಂಬುದೆಲ್ಲವೂ ಅದರ ಸಂಬಂಧದಿಂದ ಪುರುಷಾರ್ಥವೆನಿಸಿಕೊಂಡಿರುತ್ತದೆ. ಆದರೆ ಪರಿಶುದ್ಧವಾದ ಏಕಾಂತಭಕ್ತಿಗೆ, ಯಾವಯಾವದು ಮತ್ತೊಂದರ ಸಂಬಂಧದಿಂದ ಪುರುಷಾರ್ಥವೆನಿಸೀತೋ ಅದು ಯಾವದೊಂದನ್ನೂ ಈಶ್ವರನಿಂದ ಪಡೆದುಕೊಳ್ಳಬೇಕೆಂದೆನಿಸುವದಿಲ್ಲ. ಆ ಭಕ್ತಿಗೆ ಈಶ್ವರನೇ ಬೇಕು, ಏಕೆಂದರೆ ಆತನೊಬ್ಬನೇ ಪೂರ್ಣವಾಗಿಯೂ ಪರಿಶುದ್ಧನಾಗಿರುತ್ತಾನೆ, ಅಸಮ್ಮಿಶ್ರಿತನಾಗಿ, ಮಹತ್ತೆನಿಸಿಕೊಂಡಿರುತ್ತಾನೆ. ಭಕ್ತಿಗೆ ಆತನಲ್ಲಿ ಒಂದಿಷ್ಟು ಕಡಿಮೆಯಾಗಿ ಸಿಕ್ಕಿದರೂ ಅದಕ್ಕೆ ತೃಪ್ತಿಯಾಗಲಾರದು; ಇಷ್ಟೇ ಅಲ್ಲ, ಅದೊಂದು ಬಗೆಯ ನರಕವೇ ಆಗಿ ಕಾಣುವದು ಆದ್ದರಿಂದ ನಾನು ಹೇಳುವದಿಷ್ಟೇ; ನನಗೆ ಸ್ಪಷ್ಟವಾದ ಪ್ರೇಮವು ಬೇಡ; ಭೋಗಿಸುವದಕ್ಕಾಗುವ, ಹಿಡಿದುಕೊಳ್ಳುವದಕ್ಕಾಗುವ ಸವಿಯುವದಕ್ಕಾಗುವ ಪ್ರೇಮವು ಬೇಡ ಮನಸ್ಸಿನ ಮೂಲಕವೂ ನೆನಪಿನ ಮೂಲಕವೂ ಸಂಕಲ್ಪಶಕ್ತಿಯ ಮೂಲಕವೂ ಹಾದುಬೇಕಾಗಿ ರುವ ಯಾವ ಪ್ರೇಮವೂ ನನಗೆ ಬೇಡ. ಪರಿಶುದ್ಧವಾದ ಪ್ರೇಮವೂ ಇವುಗಳ ಮೂಲಕವೇ ಬರುವುವಾದರೂ ಅವುಗಳನ್ನು ಮೀರಿರುತ್ತದೆ.

3. ಈ ಲೋಕದಲ್ಲಿ ಅಸತ್ಯವಾದ ವಸ್ತುಗಳಲ್ಲಿಯೇ ಹೆಚ್ಚಾಗಿ ಮನಸ್ಸಿಟ್ಟು ಅವುಗಳನ್ನು ಮೆಚ್ಚುತ್ತಿದ್ದು ಯಾವದು ಸತ್ಯವಾಗಿಯೂ ಇರುವದೋ ಅದನ್ನು ಗುರುತಿಸದೆ ಅಥವಾ ಅದರ ಸೊಗಸನ್ನರಿಯಲಾರದೆ ಇದ್ದರೆ ಮಾನವನು ನಿಜವಾಗಿ ತನ್ನನ್ನೇ ತಾನು ಹಂಚಿಸಿಕೊಂಡಂತೆ ಎಂಬುದು ನನಗೆ ಸ್ಪಷ್ಟವಾಗಿ ಕಾಣಿಸುತ್ತಿದೆ.

★★★★★

**ಮತಗಳು ಮತ್ತು ತತ್ತ್ವಸಿದ್ಧಾಂತಗಳು – 550 ಪುಟಗಳು, 1ನೇ ಮುದ್ರಣ, ಬೆಲೆ ರೂ.280/–** ಲೋಕದಲ್ಲಿ ಅನೇಕ ಮತಗಳೂ ತತ್ತ್ವಸಿದ್ಧಾಂತಗಳೂ ಪ್ರಚಾರದಲ್ಲಿವೆ. ಅವುಗಳು ಶಾಂಕರವೇದಾಂತ ಜಿಜ್ಞಾಸುಗಳಿಗೆ ಎಷ್ಟು ಪೂರಕವಾಗಿವೆ ಎಂಬುದನ್ನು ವಿಮರ್ಶಿಸಿರುವ ಲೇಖನಗಳ ಸಂಗ್ರಹ.

**ಸಾಧುಸಂತರು ಮತ್ತು ಮಹಾತ್ಮರು – 332 ಪುಟಗಳು, 1ನೇ ಮುದ್ರಣ, ಬೆಲೆ ರೂ.180/–** ನಮ್ಮ ದೇಶದಲ್ಲಿ ಅನೇಕ ಸಾಧು–ಸಂತರೂ ಮಹಾತ್ಮರುಗಳೂ ಆಗಿ ಹೋಗಿದ್ದಾರೆ. ಅವರುಗಳನ್ನು ಕುರಿತ ಪರಿಚಯಾತ್ಮಕ ಲೇಖನಗಳ ಸಂಗ್ರಹ.

**ಶಂಕರಸಪ್ತಾಹದ ಉಪನ್ಯಾಸಗಳು – 959 ಪುಟಗಳು, 1ನೇ ಮುದ್ರಣ, ಬೆಲೆ ರೂ.500/–** ಶ್ರೀಶಂಕರಾಚಾರ್ಯರ ಜಯಂತಿ ಎಂದರೆ ಅವರ ಗ್ರಂಥಗಳ ಚಿಂತನೆಯೇ, ಅವರು ಬೋಧಿಸಿದ ತತ್ತ್ವಗಳ ಮನನವೇ ಎಂದು ಮನಗಂಡು ಶ್ರೀಶ್ರೀಗಳವರು ಶಂಕರಸಪ್ತಾಹವನ್ನು ಶಂಕರಜಯಂತಿಯ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದರು. ಬೆಳಿಗ್ಗೆ ಭಾಷ್ಯಪಾಠ, ಮಧ್ಯಾಹ್ನ ಪುರಾಣಪ್ರವಚನ, ಸಂಜೆ ಉಪನ್ಯಾಸಗಳು ಎಂದು ಕಾರ್ಯಕ್ರಮಗಳು ಇರುತ್ತಿದ್ದವು. ಆ ಉಪನ್ಯಾಸಗಳನ್ನು ಬರೆದಿಟ್ಟು ಲೇಖನಗಳಾಗಿಸಿ ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಪ್ರಕಟಿಸಿದ್ದರ ಸಂಗ್ರಹ.

**ವೇದಾಂತಲೇಖನಮಾಲೆ (ಶ್ರೀ ವಿಟ್ಠಲಶಾಸ್ತ್ರಿಗಳು) – 415 ಪುಟಗಳು, 1ನೇ ಮುದ್ರಣ, ಬೆಲೆ ರೂ.200/–** ಗ್ರಂಥವು ತನ್ನ ಹೊಸತನದಿಂದಾಗಿ, ಅಪೂರ್ವ ಶಾಸ್ತ್ರಾಲೋಚನೆಯಲ್ಲಿ ಜಿಜ್ಞಾಸುಗಳನ್ನು ವಿಹಾರಮಾಡಿಸುವ ದೆಸೆಯಿಂದ ವೇದಾಂತರಂಗದಲ್ಲೊಂದು ಮೈಲಿಗಲ್ಲಾಗಿದೆ. ಶಂಕರ–ಅಶಾಂಕರ ವೇದಾಂತಗ್ರಂಥಗಳ ಲೇಖನಗಳಿಂದ ಕೂಡಿದೆ.

**ಭಾಗವತಾಮೃತಸಾರ – 380 ಪುಟಗಳು, 1ನೇ ಮುದ್ರಣ, ಬೆಲೆ ರೂ.160/–** ಶ್ರೀಶ್ರೀಗಳವರು ಶ್ರೀಮದ್ಭಾಗವತದಲ್ಲಿರುವ ಅಧ್ಯಾತ್ಮದ ಸಾಧನ–ಸಿದ್ಧಾಂತಗಳನ್ನು ಬೋಧಿಸುವ ಶ್ಲೋಕಗಳನ್ನು ಆಯ್ಕೆಮಾಡಿಕೊಂಡು ಆ ಶ್ಲೋಕಗಳಿಗೆ ಅನುವಾದವನ್ನು ಕೊಟ್ಟಿದ್ದಾರೆ.

**ವೇದಾಂತಲೇಖನಗಳು (ಶ್ರೀ ನಂಜಪ್ಪಭಾಗವತರು) – 511 ಪುಟಗಳು, 1ನೇ ಮುದ್ರಣ, ಬೆಲೆ ರೂ.250/–** ಗ್ರಂಥವು ತನ್ನ ಹೊಸತನದಿಂದಾಗಿ, ಅಪೂರ್ವಕಲ್ಪನಾಲೋಕದಲ್ಲಿ ಜಿಜ್ಞಾಸು ಗಳನ್ನು ವಿಹಾರಮಾಡಿಸಿರುವ ದೆಸೆಯಿಂದ ವೇದಾಂತರಂಗದಲ್ಲೊಂದು ಮೈಲಿಗಲ್ಲಾಗಿದೆ. ಇಲ್ಲಿ ವೇದಾಂತವಿಚಾರವನ್ನು ಸಾಧನವಿಚಾರಗಳನ್ನು ಕಥೆ, ರೂಪಕ, ಸಂಭಾಷಣೆಯ ಮೂಲಕ ನಿರೂಪಿಸಿದೆ. ಈ ಲೇಖನಗಳು ವೇದಾಂತಜಿಜ್ಞಾಸುಗಳಿಗೆ ಮಾರ್ಗದರ್ಶಿ ಯಾಗಿವೆ.

ಭಾತರವು ಅನಾದಿಕಾಲದಿಂದಲೂ ಸಾಧುಸಂತ ಮಹಾತ್ಮರ ನಾಡು ಎಂಬುದು ಜನಜನಿತವಾಗಿದೆ. ಯಾರಿಂದ ಸಮತಾನಂದವು ದೊರೆಯುತ್ತದೆಯೋ ಅವರೇ ಸಾಧುಗಳು – ಇವರನ್ನು ನಿತ್ಯವೂ ಸೇವಿಸಬೇಕು. ಸಾಧುಗಳೆಂದರೆ ಗಡ್ಡಬಿಟ್ಟವರು, ಯೋಗದಂಡಹಿಡಿದವರು, ಭಿಕ್ಷೆಬೇಡುವವರು ಎಂಬ ಸಂಕುಚಿತಾರ್ಥವನ್ನು ಮಾಡಿಕೊಂಡಿದ್ದೇವೆ. ಆದರೆ ಸಾಧು ಎಂದರೆ ಅಷ್ಟೇ ಅಲ್ಲ. ಯಾರು ತಮ್ಮ ಸೌಖ್ಯದ ಯೋಚನೆಗಳನ್ನೆಲ್ಲ ಕೈಬಿಟ್ಟು ಎಲ್ಲರಲ್ಲಿಯೂ ಸಮಬುದ್ಧಿಯಿಂದ ಲೋಕೋಪಕಾರವನ್ನೇ ನೋಡಿಕೊಳ್ಳುವರೋ ಅವರು ನಿಜವಾದ ಅರ್ಥದಲ್ಲಿ ಸಾಧುಗಳಾಗುತ್ತಾರೆ. ಅಂಥ ಸಾಧುಗಳ ಪ್ರಭಾವಕ್ಕೆ ಒಳಗಾಗಿರುವದೇ ನಿಜವಾಗಿ ಸಮಾಜವು. ಸಮತಾನಂದವು ಶಾಸ್ತ್ರ, ಸಾಧುಗಳು–ಇವರಿಬ್ಬರಿಂದಲೇ ಸಿಕ್ಕುವದು. ಶಾಸ್ತ್ರದಲ್ಲಿ ಏನು ಹೇಳಿದೆ ಎಂಬುದನ್ನು ತಿಳಿದು ನಿಶ್ಚಯಿಸಿಕೊಳ್ಳುವದು ಎಲ್ಲರಿಗೂ ಆಗುವಂತಿರುವದಿಲ್ಲ. ಆದರೆ ಸಾಧುಗಳ ಸಂಗದಿಂದ ನಮಗೆ ಸಮತೆಯ ಆನಂದದ ಅನುಭವವು ಅನಾಯಾಸವಾಗಿ ಸಿಕ್ಕುತ್ತದೆ.

ಇಂಥ ಸಾಧುಗಳಿರುವ ಭವನವಾಗಬೇಕು ನಮ್ಮ ಸಮಾಜ ಎಂಬ ದೃಷ್ಟಿಯಿಂದ ಶ್ರೀಶ್ರೀಗಳವರು ಅಧ್ಯಾತ್ಮಪ್ರಕಾಶ ಮಾಸಪತ್ರಿಕೆಯಲ್ಲಿ ಅಧ್ಯಾತ್ಮವಿಚಾರಕ್ಕೂ ಸಾಧನಾನುಷ್ಠಾನಕ್ಕೂ ಮಾದರಿಯಾಗಿ ಇಟ್ಟುಕೊಳ್ಳಬಹುದಾದ ಸಾಧುಗಳ ಚರಿತ್ರೆಗಳ ಕುರಿತಾದ ಲೇಖನಗಳನ್ನು ಪ್ರಕಟಿಸುತ್ತಾ ಬಂದರು. ಮತ್ತೊಬ್ಬರ ಮತವನ್ನು ದೂಷಿಸದೆ ಬರೆಯುವ ಎಲ್ಲಾ ಆಧ್ಯಾತ್ಮಿಕ ವಿಚಾರದ ಲೇಖನಗಳಿಗೂ ಈ ಪತ್ರಿಕೆಯಲ್ಲಿ ಅವಕಾಶವುಂಟೆಂದು ಪ್ರಕಟಿಸಿದ್ದರು. ಅಂತೆಯೇ ಅನೇಕ ಮಹಾಪುರುಷರ, ಮತಪ್ರವರ್ತಕರ ಜೀವನಚರಿತ್ರೆಯನ್ನು ಆ ಮತಗಳನ್ನು ಅನುಸರಿಸುವ, ಅವನ್ನು ಕುರಿತು ಅಧ್ಯಯನಮಾಡಿರುವ ವಿದ್ವಾಂಸರುಗಳಿಂದಲೇ ಬರೆಯಿಸಿ ಪ್ರಕಟಿಸಿರುತ್ತಾರೆ. ಇಲ್ಲಿ ಭಾರತೀಯ ಸಾಧು–ಸಂತರ ಚರಿತ್ರೆಯಲ್ಲದೆ ಪಾಶ್ಚಾತ್ಯ ಸಂತರ ಚರಿತ್ರೆಯೂ ಸೇರಿದೆ. ಕೆಲವು ಬೇರೆಬೇರೆಯ ಪತ್ರಿಕೆಗಳಿಂದ ಆರಿಸಿ ಬರೆದ ಲೇಖನಗಳಾಗಿವೆ.

ಮಹಾತ್ಮರುಗಳ ಜೀವನ, ಉಪದೇಶಗಳ ಅಧ್ಯಯನದಿಂದ ನಮ್ಮ ಆಧ್ಯಾತ್ಮಿಕ ವಿಚಾರವು ಉಜ್ವಲಗೊಂಡು, ಆ ಮಹಾತ್ಮರುಗಳಂತೆ ನಾವೂ ಪರಮಾತ್ಮನಿಗೆ ಹತ್ತಿರವಾಗಿ ಕೃತಾರ್ಥತೆಯನ್ನು ಪಡೆಯಲು ಸುಲಭಮಾರ್ಗವಾಗುತ್ತದೆ ಎಂಬುದರಲ್ಲಿ ಸಂದೇಹವಿಲ್ಲ.

2021 ₹ 180/-